ಕರ್ನಾಟಕದ ಖಾಟಿಕ್ ಸಮುದಾಯ

(ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ತಾರಾಮೂರ್ತಿ

ಮಾರ್ಗದರ್ಶಕರು
ಮಂಜುನಾಥ. ಬೇವಿನಕಟ್ಟಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೦೭-೦೮

ಕರ್ನಾಟಕದ ಖಾಟಿಕ್ ಸಮುದಾಯ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಅಧ್ಯಯನದ ಅಂಗವಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ

ನಿರ್ದೇಶಕರು
ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩ ೨೭೬.

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭-೦೮

ಪರಿವಿಡಿ

ಅಧ್ಯಾಯ ೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೧

೧.೧ ಪ್ರಸ್ತಾವನೆ

೧.೨ ಖಾಟಿಕರನ್ನು ಕುರಿತು ಈವರೆಗೆ ನಡೆದ ಅಧ್ಯಯನ ಸಮೀಕ್ಷೆ

೧.೩ ಅಧ್ಯಾಯನಕ್ಕಾಗಿ ಕೈಗೊಂಡ ವಿಧಾನಗಳು

೧.೪ ಅಧ್ಯಯನದ ರೂಪುರೇಷೆಗಳು

ಅಧ್ಯಾಯ ೨. ಖಾಟಿಕ್‌ರ ಮೂಲ ೨೧

೨.೧ ಖಾಟಿಕ್‌ರ ಮೂಲ

೨.೨ ಖಾಟಿಕ್‌ರು ವಾಸಿಸುವ ಭೌಗೋಳಿಕ ಪರಿಸರ

೨.೩ ಖಾಟಿಕ್‌ರ ಜನಸಂಖ್ಯೆ

ಅಧ್ಯಾಯ ೩. ಖಾಟಿಕ್ ಸಮುದಾಯದ ಸಾಮಾಜಿಕ ಜೀವನ ೪೩

೩.೧ ಕೌಟುಂಬಿಕ ಪದ್ಧತಿ

೩.೨ ಒಳಪಂಗಡ ವ್ಯವಸ್ಥೆ

೩.೩ ಬೆಡಗುಗಳು

೩.೪ ರಕ್ತಸಂಬಂಧ

೩.೫ ಮನೆಗಳ ರಚನೆ

೩.೬ ಆಹಾರ ಪದ್ಧತಿ

೩.೭ ಉಡುಗೆ ತೊಡುಗೆ

೩.೮ ವೈದ್ಯಪದ್ಧತಿ

೩.೯ ನ್ಯಾಯ ಪದ್ಧತಿ

೩.೧೦ ಜಾತಿ ಬಹಿಷ್ಕಾರ

೩.೧೧ ನಂಬಿಕೆ ನಿಷೇಧಗಳು

೩.೧೨ ಸಂಘ ಸಂಸ್ಥೆಗಳು

ಅಧ್ಯಾಯ ೪. ಖಾಟಿಕ್ ಸಮುದಾಯದ ಆಚರಣೆಗಳು ೭೪

೪.೧ ಜೀವನಾವರ್ತನದ ಆಚರಣೆಗಳು

೪.೨ ವಾರ್ಷಿಕಾವರ್ತನದ ಆಚರಣೆಗಳು

ಅಧ್ಯಾಯ ೫. ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಜೀವನ ೧೨೬

೫.೧ ಆರ್ಥಿಕ ಜೀವನ

೫.೨ ಶೈಕ್ಷಣಿಕ ಜೀವನ

೫.೩ ರಾಜಕೀಯ ಜೀವನ

ಅಧ್ಯಾಯ ೬. ಭಾಷೆ ಮತ್ತು ಜನಪದ ಸಾಹಿತ್ಯ ೧೫೩

೬.೧ ಜನಪದ ಸಾಹಿತ್ಯ

೬.೨ ಭಾಷೆ

ಅಧ್ಯಾಯ ೭. ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು ೨೦೨

ಅಧ್ಯಾಯ ೮. ಸಮಾರೋಪ ೨೧೬

ಅನುಬಂಧಗಳು

* ಆಧಾರ ಗ್ರಂಥಗಳು ೨೨೩

* ಪರಾಮರ್ಶನ ಗ್ರಂಥಗಳು ೨೨೫

* ಅಧ್ಯಯನಕ್ಕೆ ಮಾಹಿತಿ ಒದಗಿಸಿದ ವಕ್ತೃಗಳು ೨೩೭

* ಛಾಯಾಚಿತ್ರಗಳು ೨೪೧

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಮಾನವ ಸಮಾಜ ವ್ಯವಸ್ಥೆಗಳ ಸಮಗ್ರ ಅಧ್ಯಯನದ ದೃಷ್ಟಿಯಿಂದ ಒಟ್ಟು ಮಾನವ ಸಂಸ್ಕೃತಿಯನ್ನು ಅದರ ಸಮಗ್ರ ಹಿನ್ನೆಲೆಯಲ್ಲಿ ಅರಿಯುವ ಕಾರಣದಿಂದ ಒಂದೊಂದು ಸಮಾಜವನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಅಗತ್ಯ ಈಗ ಬಹಳವಿದೆ. ಸಮಾನ ಗುಣ ಸ್ವಭಾವವುಳ್ಳ ಹಲವಾರು ಸಮಾಜಗಳು ಕೂಡಿ ಬಾಳುವೆ ಮಾಡುವ ನಮ್ಮ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೊಂದು ಸಮಾಜವು ತನಗೇ ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವುದು ವಿಶೇಷ.

ಯಾವುದೇ ಒಂದು ಸಂಸ್ಕೃತಿ ಒಂದು ಗೊತ್ತಾದ ಸಮುದಾಯದ ಜೀವನ ಕ್ರಮವೇ ಆಗಿರುತ್ತದೆ. ಒಂದು ವ್ಯವಸ್ಥಿತ ರೀತಿಯಲ್ಲಿ ಆ ಜನತೆಯ ಬದುಕು ಹೊಂದಾಣಿಕೆ, ಹೊಣೆಗಾರಿಕೆ ಮತ್ತು ಆಯ್ಕೆಯನ್ನನುಸರಿಸಿ ನಡೆಯುತ್ತದೆ. ಒಂದು ಸಮೂಹದಲ್ಲಿ ಬಳಕೆಯಲ್ಲಿರುವ ಸಾಧನ ಸಲಕರಣೆಗಳು, ಮನೆ-ಮಠ, ಉಡುಗೆ-ತೊಡುಗೆ ಆ ಜನತೆಯ ರೂಪ ಬಣ್ಣ ಮುಂತಾದವುಗಳ ಸಾಮ್ಯತೆಯ ಆಧಾರದಿಂದಷ್ಟೇ ಅಲ್ಲದೆ, ಆಯಾ ಸಮುದಾಯದ ಅಮೂರ್ತವಾದ ಮಾನಸಿಕ ವ್ಯಾಪಾರಗಳೂ ಅವರನ್ನು ಒಂದು ಕೂಡಿಸುವ ಸಾಧನಗಳಾಗುತ್ತವೆ. ಅವು ಪರಸ್ಪರ ಕ್ರಿಯಾನ್ವಿತಗಳಾಗಿದ್ದು ಆಯಾ ಸಮುದಾಯದಲ್ಲಿ ಮುಂದುವರೆಯುತ್ತವೆ. ಆದ್ದರಿಂದ ಒಂದು ಸಮುದಾಯದ ಸಂಸ್ಕೃತಿ ಎನ್ನುವಾಗ ಅದರ ಸಮಸ್ತವೂ ಅದರಲ್ಲಿ ಅಂತರ್ಗತವಾಗುತ್ತದೆ.

ಇಂತಹ ಒಂದು ಸಮುದಾಯದ ಸಂಸ್ಕೃತಿ ಅಧ್ಯಯನ ಎಂದ ತಕ್ಷಣ ಆ ಸಮುದಾಯದ ಸಾಂಸ್ಕೃತಿಕ ವಿವರಗಳನ್ನು ಕಲೆಹಾಕುವುದು ಅಧ್ಯಯನದ ಮೂಲ ಉದ್ದೇಶವಾಗಿರದೆ ಅದರ ಆಚೆಗೂ ಒಂದು ಸಮುದಾಯದ ಸಂಸ್ಕೃತಿಯನ್ನು ಅಧ್ಯಯನ ಮಾಡಿದಾಗ ಅದು ಏನೋ ಹೊಸ ಹೊಳಹು ನೀಡುತ್ತದೆ. ಅಂದರೆ ಅದರ ಇತಿಹಾಸ ಆ ಸಮುದಾಯ ನಡೆದು ಬಂದ ದಾರಿ ಈ ಸಮಾಜದಲ್ಲಿ ಪಟ್ಟ ಬವಣೆ ನೋವು ನಲಿವು ಎಲ್ಲವನ್ನು ಅದು ಒಮ್ಮೆ ಆಚರಣೆ ಸಂಪ್ರದಾಯಗಳ ಮೂಲಕ ತಿಳಿಸಿದರೆ ಮತ್ತೊಮ್ಮೆ ನೇರ ಹೋರಾಟಕ್ಕಿಳಿದ ಹಾಡುಗಳೋ ಪರಸ್ಪರ ಸಂಧಾನ ನಡೆದ ಕಥೆಗಳೋ

ಹೀಗೆ ಹತ್ತು ಹಲವು ವಿಧದಲ್ಲಿ ಸಮುದಾಯ ತನ್ನ ಆಂತರಿಕ ಭಾವನೆಯನ್ನು ಹೊರಹಾಕುತ್ತಿರುತ್ತದೆ. ಆದರೆ ಇದನ್ನು ಅರ್ಥಮಾಡಿಕೊಳ್ಳಬೇಕೆಂದರೆ ಆ ಸಮುದಾಯದ ಜೊತೆಯಲ್ಲಿ ಬೆರೆತಾಗ ಅದನ್ನು ಕುರಿತು ದೀರ್ಘವಾಗಿ ಸಂಶೋಧನೆ ನಡೆಸಿದಾಗ ಮಾತ್ರ ಒಂದು ಸಮುದಾಯದ ಸಂಸ್ಕೃತಿಯನ್ನು ಅದರ ನೆಲೆ, ಬೆಲೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಸಂಸ್ಕೃತಿಯ ಚರ್ಚೆಯನ್ನು ಮಾಡದೆ ಮುಂದೆ ಒಂದು ಸಮುದಾಯದ ಬಗ್ಗೆ ಸಂಶೋಧನೆ ಚಿಂತನೆ ಮಾಡುವುದು ಕಷ್ಟ. 'ಸಂಸ್ಕೃತಿ' ಅಧ್ಯಯನವು ಸಾಮಾಜಿಕವಾಗಿ ಅನಿವಾರ್ಯವಾದಂತಹ ಕ್ರಮವಾಗಿರುವುದರಿಂದ ಭಾರತದಂತಹ ನೆಲದಲ್ಲಿ ಸಂಸ್ಕೃತಿ ಎನ್ನುವುದು ಕೇವಲ ಧಾರ್ಮಿಕಾಚರಣೆಗಳಿಗೆ ಮಾತ್ರ ಸಂಬಂಧಿಸಿದ ವಿಷಯವಾಗಿಲ್ಲ. ಅದು ತನ್ನ ಒಳರಚನೆಯಲ್ಲಿ ಸಾಮಾಜಿಕ ರಾಜಕೀಯ ಆಶಯಗಳನ್ನು ಅಡಗಿಸಿಟ್ಟುಕೊಂಡ ಪರಿಣಾಮವಾಗಿ ಇಲ್ಲಿನ ಸಾವಿರಾರು ಜಾತಿ ಜನಾಂಗಗಳ ಒಟ್ಟಾರೆ ಜೀವನ ವಿಧಾನವನ್ನು ಒಳಗೊಂಡಿದೆ. ಇದರ ಜೊತೆ ಜೊತೆಗೆ ಸಂಭವಿಸುವ ರಾಜ್ಯಾಧಿಕಾರಗಳ ನಿರ್ವಹಣೆಯಲ್ಲಿ ಕೂಡ ಇಂಥ ಒತ್ತಾಸೆಯಿರುತ್ತದೆನಿಸುತ್ತದೆ. ಈ ಸಮಾಜದ ಧಾರ್ಮಿಕ ಮೇಲುಸ್ತರದ ರಾಜಕೀಯ ಅದರ ಬೌದ್ಧಿಕ ಕಸರತ್ತಿನ ಬೆಲೆ ಹಾಗೂ ಕೆಳಸ್ತರದ ನಿತ್ಯಯಾತನೆಯ ರೋಧನ ಇಂದಿಗೂ ನಡೆಯುತ್ತಿರುವ ಜಾಣ ಕಿವುಡು ನಮ್ಮ ಸಮಾಜದ ಒಳಮುಖವನ್ನು ತೆರೆದಿಡುತ್ತದೆ. ಇಂಥ ಸಂದರ್ಭದಲ್ಲಿ ಖಾಟಿಕ್ ಸಮುದಾಯದ ಕೇವಲ ಸಂಸ್ಕೃತಿಯನ್ನು ಅಧ್ಯಯನ ಮಾಡುವುದಷ್ಟೇ ಈ ಅಧ್ಯಯನದ ಗುರಿಯಲ್ಲ ಜೊತೆಗೆ ಒಂದು ಸಮುದಾಯದ ಕಳೆದು ಹೋದ ಇತಿಹಾಸವನ್ನು ಶೋಧಿಸುವ ಯತ್ನ. ಸಮಕಾಲೀನ ಸತ್ಯಗಳೊಂದಿಗೆ ಮುಖಾಮುಖಿಯಾಗಿಸುವ ಕಾರ್ಯ ಇಲ್ಲಿ ಮಾಡಲಾಗುವುದು.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಖಾಟಿಕ್ ಸಮುದಾಯದ ಒಟ್ಟು ಸಾಂಸ್ಕೃತಿಕ ವಿವರಗಳನ್ನು ಸಂಗ್ರಹಿಸುತ್ತಲೇ ಚಾರಿತ್ರಿಕ ಸಂದರ್ಭದಲ್ಲಿ ಅವುಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಖಾಟಿಕ್ ಸಮುದಾಯದ ಮೂಲ ಸಾಮಾಜಿಕ ಜೀವನ ಮತ್ತು ಧಾರ್ಮಿಕ ಆಚರಣೆಗಳು ಆರ್ಥಿಕ ಸ್ಥಿತಿಗತಿಗಳು ಕಸುಬು ಮತ್ತು ಹಿನ್ನೆಲೆ ರಾಜಕೀಯ ಜೀವನ ಇಂದಿನ ಜಾಗತೀಕರಣದ ಹೊತ್ತಲ್ಲಿ ಈ ಸಮುದಾಯದ ಸ್ಥಿತಿಗತಿ ಹಾಗೆಯೇ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತ ಈ ಅಧ್ಯಯನ ಖಾಟಿಕರ ಒಟ್ಟು ಜೀವನ ವಿಧಾನವನ್ನು ಸಮಕಾಲೀನ ಸಾಮಾಜಿಕ ಸಂದರ್ಭದೊಂದಿಗೆ ಮುಖಾಮುಖಿಯಾಗಿಸುವ ಉದ್ದೇಶವನ್ನು ಹೊಂದಿದೆ. ಈ ಬಗೆಯ ಅಧ್ಯಯನಕ್ಕೆ ಶಿಸ್ತು ತಂದು ಕೊಡುವ ಖಾಟಿಕ್ ಸಮುದಾಯವನ್ನು ಕುರಿತಾದ ಈವರೆಗಿನ ಬರಹಗಳು ಮತ್ತು ಅಥೆಂಟಿಸಿಟಿಯನ್ನು ಒದಗಿಸುವ ಸಮುದಾಯದ ಹಿರಿಯರು ಮತ್ತವರ ಅನುಭವಗಳನ್ನು ಈ ಅಧ್ಯಯನದ ಮೂಲ ಆಕರಗಳೆಂದೇ ಸ್ವೀಕರಿಸಲಾಗಿದೆ.

ಇಂಡಿಯಾದ ಸಾಮಾಜಿಕ ಇತಿಹಾಸ ಮುಖ್ಯವಾಗಿ ಸಂಸ್ಕೃತಿಯನ್ನು ಒಂದು ಬಗೆಯ ಪ್ರಧಾನ

ಹಾಗೂ ಜನಪ್ರಿಯ ನೆಲೆಯಲ್ಲಿ ವಿಶ್ಲೇಷಿಸಿಕೊಳ್ಳುತ್ತಾ ಬಂದಿದೆ. ಮನುಷ್ಯ ಜೀವನದ ಒಂದೊಂದು ವಿಕಾಸದ ಹಂತದಲ್ಲೂ ಆ ಕಾಲದ ಪ್ರಭಾವಶಾಲಿ ಮತ್ತು ಬಲಶಾಲಿ ಸ್ತರವನ್ನೇ ಸಂಸ್ಕೃತಿ ಎಂದು ಬಿಂಬಿಸಲಾಗಿದೆ. ಬಲಶಾಲಿ ಮನಸ್ಸು ಗುಂಪು ಕಟ್ಟಿಕೊಂಡು ಆರ್ಥಿಕ ಉತ್ಪಾದನಾ ವಿಧಾನಗಳನ್ನು ತನ್ನಲ್ಲಿ ಕೇಂದ್ರೀಕರಿಸುತ್ತಾ ಅದೇ ವ್ಯವಸ್ಥೆ ಎಂದು ಭಯ ಭಿತ್ತಿ ನಂಬಿಸಲಾಗಿದೆ. ಈ ಸಂಸ್ಕೃತಿ ಪರಂಪರೆಗಳ ಅಬ್ಬರದಲ್ಲಿ ಮೌನವಾಗಿದ್ದ ಸಮುದಾಯಗಳು ನಿರ್ಲಕ್ಷ್ಯಕ್ಕೊಳಗಾಗುತ್ತಾ ಬಂದಿವೆ.

ಆದರೆ ಇಂದು ಈ ಮೌನ ಸಮುದಾಯಗಳು ಮಾತನಾಡುತ್ತಿರುವುದು ಸುಸಂಗತಿ. ಏಕೆಂದರೆ ಭಾರತದಲ್ಲಿ ಏಕರೂಪ ಸಂಸ್ಕೃತಿ ಎಂದು ನಂಬಿಸಿದ ಇತಿಹಾಸವನ್ನು ಗಮನಿಸಿದಾಗ ಅದು ಎಷ್ಟು ಸುಳ್ಳೆಂಬುದನ್ನು ನಮ್ಮ ಸುತ್ತಮುತ್ತಲು ಸ್ವಲ್ಪ ಗಮನಿಸಿದರೆ ಸಾಕು ವೈವಿಧ್ಯಮಯ ಸಂಸ್ಕೃತಿಗಳ ಸಾಲುಗಳೇ ಕಾಣಸಿಗುತ್ತವೆ. ಈ ಸಂಸ್ಕೃತಿ ಅಧ್ಯಯನಗಳನ್ನು ಕುರಿತು ಮಹತ್ವದ ಕಾರ್ಯ ಕೈಗೊಂಡ ಉಪಸಂಸ್ಕೃತಿ ಅಧ್ಯಯನ ಮಾಲೆಯ ಸಂಪಾದಕರಾದ ಡಾ. ಬರಗೂರು ರಾಮಚಂದ್ರಪ್ಪನವರನ್ನು ನೆನೆಯಲೇಬೇಕು. ಏಕೆಂದರೆ ಇದಕ್ಕಿಂತ ಮುಂಚೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂದರೆ ೩೨ ಸಮುದಾಯಗಳ ಸಂಸ್ಕೃತಿಯನ್ನು ಪರಿಚಯಿಸಿದ ಕಾರ್ಯ ನಡೆದಿರಲಿಲ್ಲ. ಹೀಗೆ ಸಮುದಾಯಗಳ ಅದು ಕಟ್ಟಕಡೆಯ ಅಂಚಿನ ಸಮುದಾಯಗಳೊಂದಿಗೆ ಮಾತನಾಡುವ ಅವಕಾಶ ಕಲ್ಪಿಸಲು ಸಾಧ್ಯವಾಯಿತು. ನಂತರದಲ್ಲಿ ಸಮುದಾಯಗಳ ಅಧ್ಯಯನ ಕೇವಲ ಸಂಸ್ಕೃತಿ ಪರಿಚಯಿಸುವಿಕೆಯಲ್ಲಿ ಅದರೊಂದಿಗೆ ಪ್ರಸ್ತುತ ದಿನಮಾನದೊಂದಿಗೆ ಆ ಸಮುದಾಯವನ್ನು ಅದರ ಪರಿಸ್ಥಿತಿಯನ್ನು ಒರೆಗೆ ಹಚ್ಚುವ ಕಾರ್ಯವು ನಡೆಯುತ್ತಿದೆ. ಇಷ್ಟೇ ಅಲ್ಲ ಜಾಗತೀಕರಣದ ಮಾಯೆಯಲ್ಲಿ ಈ ಚಿಕ್ಕ ಸಮುದಾಯಗಳ ಸ್ಥಿತ್ಯಂತರದ ಬಗ್ಗೆಯು ಶೋಧ ನಡೆಯುತ್ತಿದೆ.

ಹೀಗೆ ಒಂದು ಸಮುದಾಯದ ಅಧ್ಯಯನ ಎಂದಾಕ್ಷಣ ಆ ಸಮುದಾಯದ ಸಮಸ್ತ ಅಧ್ಯಯನವನ್ನು ಮಾಡಬೇಕಾಗಿದೆ. ಇನ್ನೊಂದು ವಿಷಯವೆಂದರೆ ಜಾಗತೀಕರಣಕ್ಕೆ ಈ ಸಮುದಾಯಗಳಲ್ಲಿ ಉತ್ತರವಿದೆಯೆಂಬಂತೆ ಮಾತು ಕೇಳಿ ಬರುತ್ತಿದೆ. ಇದೆಷ್ಟು ಸತ್ಯ ಎಂಬುದನ್ನು ಸಂಶೋಧನೆ ನಡೆಸಿದಾಗಲೇ ತಿಳಿಯುತ್ತದೆ ಎಂದು ಹೇಳಬಹುದು.

ಉತ್ತರ ಭಾರತದಿಂದ ವಲಸೆ ಬಂದ ಖಾಟಿಕ್ ಸಮುದಾಯ ಹಿಂದೂ ಧರ್ಮಕ್ಕೆ ಸೇರಿದುದಾಗಿದೆ. ಭಾರತದ ಉದ್ದಗಲಕ್ಕೂ ಬೇರೆ ಬೇರೆ ಹೆಸರಿನಲ್ಲಿ ಇರುವ ಖಾಟಿಕರು ಆಯಾ ಪ್ರಾದೇಶಿಕ ಭಾಷೆಗಳನ್ನಾಡುವವರಾಗಿದ್ದು ಹಿಂದಿ ಅವರ ಮಾತೃಭಾಷೆಯಾಗಿದೆ. ಕುರಿಮಾಂಸ ಮಾರುವ ಕುಲಕಸುಬನ್ನು ಹೊಂದಿರುವ ಇವರು ಕಷ್ಟ ಜೀವಿಗಳು. ಸಮೃದ್ಧ ಸಂಸ್ಕೃತಿಯನ್ನು ಹೊಂದಿರುವ ಇವರ ಸಾಂಸ್ಕೃತಿಕ ಇತಿಹಾಸ ಗಮನಾರ್ಹವಾದುದು. ಇಂದು ಜಾಗತೀಕರಣ, ಸಂಸ್ಕೃತೀಕರಣದ ಪ್ರಭಾವದಿಂದಾಗಿ ತಮ್ಮ ಸಾಂಸ್ಕೃತಿಕ ಚಹರೆಯನ್ನುಳಿಸಿಕೊಳ್ಳಲು ಪ್ರತಿದಿನ ಹೊಸ ಸಂದರ್ಭಕ್ಕೆ ಹೊಂದಿಕೊಳ್ಳಲು ಹೆಣಗಾಡುತ್ತಿರುವ ಈ ಸಮುದಾಯದ ಇಂದಿನ ಪರಿಸ್ಥಿತಿಯೇನು ಎಂಬುದನ್ನರಿಯುವುದರ ಜೊತೆಗೆ ಇವರ ಇತಿಹಾಸ ಕಟ್ಟುವ ಕಾರ್ಯವನ್ನು ಮಾಡಲು ಪ್ರಯತ್ನಿಸಲಾಗುವುದು.

ಭಾರತದ ಇತಿಹಾಸದಲ್ಲಿ ಕಂಡುಬರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ ಜಾತಿ ಎನ್ನುವುದು ಹುಟ್ಟಿನಿಂದಲೇ ನಿರ್ಧರಿತವಾಗಿರುವಂತದ್ದನ್ನು ಕಾಣಬಹುದು. ಒಂದು ಸಮುದಾಯ ನಿರ್ವಹಿಸುವ ಕೆಲಸದ ಮೇಲೆಯೂ ಜಾತಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಮರದ ಕೆಲಸ ಮಾಡವವನು ಬಡಿಗ, ಚರ್ಮದ ಕೆಲಸ ಮಾಡವವ ಚಮ್ಮಾರ ಹೀಗೆ ಕುರಿಮಾಂಸ ಮಾರುವಿಕೆಯ ವೃತ್ತಿಯ ಆಧಾರದ ಮೇಲೆ ಖಾಟಿಕ್‌ರನ್ನು ಕಟುಗ ಕ್ಷತ್ರಿಯ, ಅರೆಕಟುಗ, ಮರಾಠ, ಕಸಾಯಿ, ಕಲಾಲ್, ಸೂರ್ಯವಂಶಿ ಕ್ಷತ್ರಿಯ ಹೀಗೆ ನಾನಾ ಹೆಸರುಗಳಿಂದ ಕರೆಯಲಾಗಿದೆ. ಈ ಸಮಾಜದ ಮೇಲುಸ್ತರ ಕೆಳಜಾತಿಗಳನ್ನು ಜಾತಿ ಬಿಡದಂತೆ ನೀಯತ್ತಿನಿಂದ ಶ್ರದ್ಧಾಪೂರ್ವಕವಾಗಿ ಇರುವಂತೆ ಕುತಂತ್ರ ಮಾಡಿ, ಜಾತಿವ್ಯವಸ್ಥೆಯನ್ನು ಉಳಿಸಿಕೊಂಡು ಬರುವಂತೆ ತಂತ್ರವನ್ನು ರೂಪಿಸಿದೆ. ಶ್ರಮವನ್ನು ಕನಿಷ್ಠ ಮೌಲ್ಯದ ಸರಕಾಗಿ ಮಾರ್ಪಡಿಸಿ ಅಕ್ಷರವನ್ನು ತಮ್ಮ ಆಯುಧವನ್ನಾಗಿ ಬಳಸಿ ಪುರಾಣ, ವೇದ, ದೇವತೆ, ಶ್ಲೋಕ, ಮಂತ್ರ, ಆಚರಣೆಗಳೆಂಬ ಬೆದರು ಬೊಂಬೆಗಳನ್ನು ನಿಲ್ಲಿಸಿ ಈ ಸಮುದಾಯಗಳನ್ನು ಸ್ಮೃತಿಗೆ ತಳ್ಳುವಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದು. ಇಂಥದ್ದೇ ಒಂದು ಅಂಚಿನ ಸಮುದಾಯದ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಈ ಸಮುದಾಯಕ್ಕೆ ಒಂದು ಇತಿಹಾಸವಿಲ್ಲ. ಅಂದರೆ ಸ್ಮೃತಿಯನ್ನು ಕಳೆದುಕೊಂಡಂತಹ ಅಥವಾ ಕೊಂಡಿ ಕಳಚಿದ ಒಂದು ಸರಪಳಿಯನ್ನು ಜೋಡಿಸುವಂತ ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ. ಜೊತೆಗೆ ಇಂದಿನ ಜಗತ್ತಿನೊಂದಿಗೆ ಈ ಸಮುದಾಯವನ್ನು ಮುಖಾಮುಖಿಯಾಗಿಸುವ ಕಾರ್ಯ ಮಾಡಲಾಗಿದೆ.

೧.೨. ಖಾಟಿಕರನ್ನು ಕುರಿತು ಈ ವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಖಾಟಿಕ್‌ರನ್ನು ಕುರಿತು ನಡೆದ ಅಧ್ಯಯನಗಳನ್ನು ಗಮನಿಸಿದರೆ ಈ ಸಮುದಾಯಕ್ಕೆ ಸಂಬಂಧಿಸಿದಂತೆ ತುಂಬಾ ಕಡಿಮೆ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಖಾಟಿಕ್‌ರನ್ನು ಕುರಿತ ವಿವರವಾದ ಮಾಹಿತಿಗಳನ್ನು ನೀಡುವ ಗೆಜೆಟಿಯರ್‌ಗಳು ಮತ್ತು ಒಂದೆರಡು ಕೃತಿಗಳಲ್ಲಿರುವ ಮುಖ್ಯ ಅಂಶಗಳನ್ನು ಈ ಕೆಳಕಂಡಂತೆ ಕ್ರೋಢೀಕರಿಸಲಾಗಿದೆ.

R.E. Enthoven ಅವರು ತಮ್ಮ 'The Tribes and Castes of Bombay' ಕೃತಿಯಲ್ಲಿ ಈ ಕೆಳಗಿನಂತೆ ವಿವರಗಳನ್ನು ನೀಡಿದ್ದಾರೆ.

KASAIS OR KHATIKS : Kasais or Khatiks 8,860 (1901) including 4,500 Males and 4,360 Females are found scatered in small numbers in every part of the presidency performing the work of butchers. In Ahmednagar district they belong to the Dhangar Caste and eat but do not marry kunbis and malis. In the Kanara district they claim to be descendants

of the sun and to belong to the Kashyap and Koundanya family stocks and persons of the same stock donot inter marry they appear to have been recruited from Dhangars Marathas and Kunbis who took to killing sheep and goats when the Musalman incrusion in to the Deccan created a demand for such food they perfoms birth marriage and death cermonies similar to those of the Kunbis.

Polygamy is allowed and practised but widow remarrage is for bidden. Among the Kasais of the Kanara district.

They worship all Brahmainc gods and keep all Hindu fasts ald feasts. Their family gods are Devi of Tuljapur in the Nizames country and Khandoba of Jeluri in poona. They keep the images of their gods in the house and after them sandal paste flowers and food on Mondays and on full moon and new moon days. Their priests are local Brahmans who conduct their Marriages. They have no religious teacher of their own and cannot tell to what sect they belong. The family goddes of the Kasais of the Kanara district is Yallamma whose shrine is at Kulburga in the Nizams country and their family priests are Havik Brahamans to whom they pray great respect they go on pilgrimage to Dharmastala in South kanara and to Chandra Gutti in Mysore.

Formerly the business of Kasais was confined to selling sheep and goats the slaughtering work being done by Musalmans now they act as butchers as well as meat sellers while a few are husbandmen and labourers. Their women besides mending the house grind corn and help their husbands in selling mutton and the children take the animals to pasture outside of the town. They eat fish and the flesh of goats and sheep and drink liquor.

K.S. Singh ಅವರು ತಮ್ಮ 'Indias Communitiss' ಎಂಬ ಕೃತಿಯಲ್ಲಿ ಈ ಕೆಳಗಿನಂತೆ ಮಾಹಿತಿಯನ್ನು ಕಾಣಬಹುದು.

KALAL : In Karnataka the Kalal prefers both Hinduism and Islam. They are also known as Kasai, Khatik, Aray or Arya Katagaru, Katagaru, maratha Kasai, Hindu Kasai and Katig. The term katuga means butcher. There are three sub groups namely Lad Kasai, Sultani Kasai and Madrasi Kasai among the Kalal in the state. Some of their surnames are Bhadankar, Kotekar, Bhimkar, Chambukar, Koppekar, Bhokadhar, Hanumanthkar, Dongarkar, Manker, Bidikikar, Palantwade and Nijamakar Hindi is their mother tongue. They are also well versed in Kannada. A good number of them also speak marathi. The Sultan Kasai and Lad Kasai followed muslim customs in the past and due to this reason they were considered lower in social status by the Madrasi Kasai. Marriage with ones mother's, brother's daughter, father sisters daughter or elder sisters daughter is permitted. Sororate is allowed but divorse is not permitted. Traditionally remarrigae of a widow is not allowed but a widower is permeted to remarry property is divided equally among the sons and a share is kept aside if the parents are alive. The eldest son succeds to the father's authority. The naming ceremony of a new born baby is performed on the fifth, fifteenth or fortieth day. Their marriage rituals include chonchika rasam. Vilya lagna patrika devata karya Janabeetaka nisheelancka, cholika rasam hara chilaku rasam, tying of the thali and kanyadan. the dead are mostly burid but cremation has also been reported.

Traditionally the Kalal are butcher and sellers of meat. Though some families are now also involved in selling liqour informal leaders of the community seltle marital conflictes and other petty dispures. The Sultan Kasai and Lad Kasai Subgroups who used to follow Muslim customes and a Brahman priest is invied to conduct their marriage rituals only after adopating Hinduism. They are aslo go to muslim shrines Durga, Mahaboob subani Urs, etc., but not to mosque. The Kalal traditionally accept cooked food and water from the Brahman, Lingayat and other

communities and exchange cooked food (excluding beef) and water heeth the muslim. Their children generally study upto the secondary level they avail them selves on modern medical faclities and family welfare programmes. They make full use of the civic amenities and subsidized public distribution facilities extended by the government.

Edgar Thurston and K. Rangachari ಅವರು ತಮ್ಮ 'Caste and Tribes of India' ಎಂಬ ಕೃತಿಯಲ್ಲಿ ಈ ಕೆಳಗಿನಂತೆ ಖಾಟಿಕ್‌ರನ್ನು ಕುರಿತು ಮಾಹಿತಿಯನ್ನು ಕಾಣಬಹುದು.

KATIKE : The Katike or Kahikilu are butchers in the Telugu country, concerning whom it is noted, in the kurnool manual that some are called sultani butchers or Hindus forcibly circumcised by the late nabob of kurnool. They obscrve both musalman and Hindu custons A correspondent in the kurnool district informs me that the butchers of kurnool belong to three classes. One seelling beef and the others mutton of these the first are muhammadan's and are called Gayi Khasayi as they deal in beef. The other two are called respectively sultanis and surasus i.e., the circumcised and uncircumcised. Both claim to be the deseendants of two brothers and have the following tradition concerning their origin Tipusultan is said not to have relished the idea of taking mutton at the hands of Hindus as they would not perform Bismillah at the time of slaughtering the sheep. He accordingly ordered both the brothers to appear before him.

Being the manager of the family the elder went and was forcibly circumised. on hearing the news the younger brother absconded. The descendants of the former are muhamandans and of the Hindus. As he was made a Muhammadan by force. The elder brother and has descendants did not adopt all the Muhammadan maners and customs. Till recently they didnot even allow their beards to grow. At the present day they go to mosques. Dress like muhammadans. Shave their heads and grow beards but do not inter marry neeth the true muhammadans they

descendants of the younger brother still can them selves Ari Katikelu or Maratha butchers, profess the Hindu religion and follow Hindu manners and customs. Though they do not eat with muhammadans or sultanis, their Hindu brethren sheen them because of their profession and their intimacy with sultanis. I am informed that at Nandyal in the Kurnool district some maratha butchers. Who obscrve purely Hindu customs are called by Muhammadan names the Tahasildar of the sirvel taluk in the same district states that prior to the reign of the father of Ghulam Rasul Khari, the dethroned Nawab of Kurnool, the butcher's profession was solely in the hands of the maraths. Some of who were as stated in the manual forcibly circumcised and become a separate butcher caste. Called sultani.

There are two sections among these sultani butchers, viz., Bakra (Mutton) and Gai Kasai (Beef butcher) seimilar stories of forcible conversion to the muhammadan religion are prevalent in the Bellary district. Where the Kasayis are mostly converted Hindus. Who dress in the Hindu style but possess muhammadan names with Hindu terminations e.g., Hussainappa.

In connection with butchers. I may quot the following extract from a petition to the Government of Madras on the subjet of a strike among the madras buthers in 1907 "We, the residents of Madras, beg respect fully to bring to your exceellency's notice the inconventence and hardship we are suffering owing to the strike of the butchers in the strike of the butchers in the city. The total failure of the supply of mutton. Which is an important iteam in the diat of non Brahmin Hindus, much amnadans indian christions paress eurasians and Europeans. Causes a deprivation not merely of some thing to which people have become accustomed but of an article of food by which the health of many is sustained and the want of which is calculated to impaior their health and expose them to eliseases against which they have hitherto successfully contonded."

Syed Siraz-Ul-Hasan ಅವರು ತಮ್ಮ 'The caste and Tribes of HEH The Nizam's Dominions' ಎಂಬ ಕೃತಿಯಲ್ಲಿ ಖಾಟಿಕ್‌ರ ಕುರಿತು ಈ ಕೆಳಗಿನಂತೆ ಮಾಹಿತಿಯನ್ನು ಕಾಣಬಹುದು.

KALAL : A liquor-selling and distilling caste, found in all parts of the Dominions. the Kalals say that they were originally Vaishyas and were degraded on account of their having adopted the profession of liquor-sellers and distillers. The caste is divided into two sub castes: Lad Kalal and Pardeshi Kalal.

Lad Kalal : The Lad Kalals are chiefly found in the Gulbargah district. They probably came from the southern part of Gujarath, whcih bore the name of Lat(Lad) in ancient times. They have three sub-division Surya Lad, Chhatri Lad and Kodi Lad, the members of which neither interdine not intermarry. The Surya Ladss are so called because their men and women, as they allege, do not dine until they have first offered puja to Surya, or the sun. The Chhatri Lads are probably a degraded offshoot of the Chhatri (Khatri) caste, while the origin of the name Kodi Lad is uncertain. It may be a variant of 'Kodu', a Kind of Millet (Paspalum scrobiculatum), which is said to have the property of intoxicating when made into bread. The section names of the Lad kalals are of a peculiar type, as noticed below:

Tonpe	Katwate
Sabane (soap)	Gaṅgane
Kol	Hagal Diwate
Khadke (rock)	Sadanande (very merry)
Vanjare	Pinjare
Kamade	Sandve
Tapase	Dingre (hill)
Palangatode	Paske
Jamalpure	Ganagane

Marriage between persons belonging to the same section is forbidden. Two sisters may be married to the same man. Provided the younger is married first. A second wife may be taken if the first is barren, or suffers from an incurable disease. Infant marriage is practised by the caste. A girl attaining pubeıty before marriage is excommunicated. Girls are not offered to temples or trees. The marriage ceremony is of the orthodox type and resembles that in use among the other castes of the Karnatic. A widow is allowed to marry again and is under no restriction as regards her choice of second husband. Divorce is recognised and divorced wives may marry again by the same rite as widow. The Kalals are orthodox Hindus, worshipping Mahadeo every Mondy. The goddess Bhavani of Tuljapur is worshipped every Friday, with offerings of flowers, betel leaves and sweatmeats. The dead are either burned in a lying posture, or buried in a sitting posture, according to the means of the family of the deceased. In the case of cremation, the ashes are collected on the third day after death and thrown into a river or stream. Brahmans are exployed on religious and ceremonial occasions. The social status of the caste is inferior to that of the Maratha Kunbis and superior to that of the Bhoi, Nhavi and Dhobi. The members of the caste eat fowl and fish and the flesh of deer, hare and seep and drink spirituous and fermented liquors. Distilling and selling liquor is the original occupation of the caste, but many of its members make their living by shop-keeping and money-lending. Some have taken to agriculture, in the capacity of occupancy raiats, while a few are landless day-labourers.

Pardeshi Kalal : The Pardshi Kalals are supposed to have come from Northern India, although little is known regarding the date of their immigration. They have six sub-castes:

Sinhor	Chanskha
Purbhayya	Letaryya
Gurer	Jaiswar

Among whom there is neither interdining nor intermarriage. Each of these is futher broken up into a number of section, such as, Modi, Pirwatiya, Ghodchadha, Chaitha Tatari and so on. In point of marriage, the Pardshi Kalals exclude the section of both father and mother or in other words, forbid a man to marry a womar, who belongs to the same section as he himself or his mother. This system is supplemented by prohibited degrees, calculated to six generation on the male side. All Pardeshi Kalals who can afford to do so, marry their daughters as infants, but the daughters of poor families frequently remain unmarried up to the age of eighteen or nineteen. A man may marry two sisters, and the number of wives he may have is subject to no limit, except his ability to maintain them. The marrige ceremony does not appear to differ materially from the standard type common among the other castes of Upper India of the same social standing. The marrige shed (mandap) consists of five posts, one at each corner and one in the centre, and to the latter are tied braches of the mango and umber trees, while at its foot is placed an earthen jar of water, topped with a burning lamp, and with mango leaves inside. Seven circuits taken by the bridal pair round this sacred post are deemed to tbe the binding and essential portion of the ceremony. A widow is allowed to marry again and divorce is recognised, The religion of the Pardeshi Kalals presents no featurers of special interest. Kanojia Brahmans are employed for religious and cermonial purposes. The dead are usually burned, but bodies of persons dying unmarried are buried. No Precise definition can be given regarding the social position of the caste. The members of the caste say that they eat kachi only from the Kanojia Brahmans, while they take water from the hands of the Bhois. Only the Dhobis, Bhois and lowest unclean castes will eat food cooked by a Pardeshi Kalal. A Pardeshi kalal eats fish and the flesh of deer, hare, goats and sheep, but abstains from fowl and pork. He drinks both fermented and spirituous liquors. The balk of the caste

follow their traditional occupation of distilling and selling liquors. Some have taken to other pursuits, such as shopkeeping money-lending and agriculture.

KHATIK : Khatik, Sultankar, Alitkar - The tanner caste, supposed to have come from Nagar in Marwar more than two hundred years ago. According to the traditions current among the people, they are descended from Dharmaraja, the eldest of the Pandav brothers. The members of the caste are tall, strong, with an alert expression, and speak Hindustani with a mixture of Marwari. They have no endogamous divisions. They say they have got eighty four exogamous sections, but only a few of these are known, as shown below:

Samare	Asiwal
parewal	Chawal
Navare	Khichi
Chandel	Khas
Bhurasha	Sakunya
Padelwal	Butele
Nagore	Chavade
Tepan	Chavan
Pilwal	Pohade
Sambre	

A man is forbidden to marry a woman belonging to his own section. No other section is a bar to marriage, provided that he does not marry any of his first cousins. This rule of exogamy is further supplemented by prohibited degrees, calculated to three generation in the descending line.

Marriage : Both adult and infant marriage are recognised by the caste, but the latter is deemed the more respectable. The marriage ceremony is of the orthodox type. On the wedding day, the bridegroom goes to the bride's house where, on arrival, he is conducted to a seat

under a wedding anopy or mandap. There the Bride joins him and is seated on his left hand. A sacred fire is kindled before them by the priest and the bride's maternal uncle puts her left hand into the bridegroom's right hand. After the clothers of the bridal pari have been knotted together by the officiating Brahman, they walk seven times round the milk post (mani khamb). This is followed by Kanyadan, or the giving away of the bride by her parents and the bridegroom's acceptance of her. The seven circuits, taken by the bridal pair round the milk post and the sacred fire, are deemed to be the binding portion of the ceremony. Polygamy is permitted and there is no positive rule fixing any limit to the number of wives a man may have, Most Khatiks, however, are too poor to keep more than one wife, and a man only takes a second wife when the first is barren. A widow may marry again, but she is not required to marry her late husband's younger brother. Divorce is permitted with the sanction of the Panchayat and divorced wives may marry again by the from in the use at the remarriage of widows.

Religion : By religion, the Khatiks are orthodox Hindus and employ Maratha Brahmans for religious and ceremonial purposes. their chef deities are Bhairoba of Bagar, in Marwar, and Amba Bhavani of Tuljapur, who are worshipped at their weddings. A goat is sacrificed in the name of Bhavani on the Dassera, or the tenth of the light half of Aswin (September). If smallpox breaks out in the family, they appease the goddess Sitala with offerings of goats and fowls. the dead are usually burnt, but recourse is had to burial if the deceased is an unmarried person. When the body is burned, the ashes are collected on the third day after death and thrown into a river. Sradha is performed on the tenth day when pindas, or balls of rice, are offered for the benefit of the soul of the deceased. On the eleventh day, the chief mourner shaves and becomes purified. The funeral ceremony is closed by a feast to the members of the caste.

Occupation : The Characteristic occupation of the caste is the tanning of leather. They by hides from the neighbouring villages and sell them, after dressing, to Chammars and Bohoras. In tanning, they use the red lac dye, math (a kind of bean), salt, and the bark of the tarvar (Cassia auriculata). Socially, the Khatiks rank very low. They will eat fish and fowl and the flesh of hare, deer and goat, but abstain from beef and pork. They indulge freely in spirituous and fermented liquors.

ಸೂರ್ಯನಾಥ ಯು. ಕಾಮತ್ ಅವರು ಸಂಗ್ರಹಿಸಿರುವ ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ ಗೆಜೆಟಿಯರ್, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೧ ಹಾಗೂ ಶ್ರೀ ಹೆಚ್.ಡಿ. ಪ್ರಶಾಂತ ಅವರು ಸಂಗ್ರಹಿಸಿರುವ 'ಜನ ಸಮುದಾಯ ಸಂಪುಟ' ಕರ್ನಾಟಕ ರಾಜ್ಯಕೋಶ- ೪ರಲ್ಲಿ ಈ ಕೆಳಗಿನಂತೆ ಮಾಹಿತಿಯನ್ನು ಕಾಣಬಹುದು.

ಅರೆಕಟಿಕ್ (ಆರ್ಯಕಟಿಕ್) : ಅರೆಕಟಿಕರು ಮುಖ್ಯವಾಗಿ ರಾಜ್ಯದ ಕಲ್ಬುರ್ಗಿ ಮತ್ತು ಬೆಳಗಾವಿ ಪ್ರದೇಶಗಳಲ್ಲೂ ಬಳ್ಳಾರಿ ಜಿಲ್ಲೆಯಲ್ಲೂ ಕಂಡುಬರುತ್ತಾರೆ. ಈ ಜನರು ಉತ್ತರ ಭಾರತದಿಂದ ಬಂದವರೆಂದು ಹೇಳಲಾಗುತ್ತದೆ. ಇವರು ತಮ್ಮನ್ನು ಹಿಂದೂ ಕಲಾಲ್, ಆರ್ಯ ಕಲಾಲ್, ಖಾಟಿಕ್, ಶೇರೆಗಾರ, ಆರ್ಯ ಕ್ಷತ್ರಿಯ, ಕಲಾಲ್ ಅರೆಕಸಾಯಿ, ಅರೆಮರಾಠಿ, ಕಟುಗ ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಮಾಂಸ ಮಾರುವುದು ಅವರ ಸಾಂಪ್ರದಾಯಿಕ ಕಸುಬು ಅವರು ಶರಾಬನ್ನು ತಯಾರಿಸಿ ಮಾರುತ್ತಾರೆ. ಸೂರ್ಯನು ತಮ್ಮ ಮೂಲ ಪುರುಷನೆಂದು ಹೇಳಿಕೊಂಡು ಸೂರ್ಯನನ್ನು ಆರಾಧಿಸುತ್ತಾರೆ. ಅವರಲ್ಲಿ ವಿಭೂತಿದಾರಿಗಳು (ಶೈವರು) ಕೂಡ ಇದ್ದಾರೆ. ಯಲ್ಲಮ್ಮ, ಭವಾನಿ, ನರಸಿಂಹ ಮತ್ತು ಮಹಾದೇವರಿಗೂ ಕೂಡ ಬಹಳ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅವರ ಮಾತೃಭಾಷೆ ಹಿಂದೂಸ್ಥಾನಿ ಕೆಲವರು ಕನ್ನಡ ಮತ್ತು ಹಿಂದಿ ಮಿಶ್ರಿತವಾದ ಮರಾಠಿ ಮಾತನಾಡುತ್ತಾರೆ. ಅವರಲ್ಲಿ ಕೆಲವರು ಮೃತರನ್ನು ಹೂಳಿದರೆ ಮತ್ತೆ ಕೆಲವರು ಅಗ್ನಿ ಸಂಸ್ಕಾರ ಮಾಡುತ್ತಾರೆ.

ಕಲಾಲ್ ಸಮುದಾಯವು ಹಿಂದು ಹಾಗೂ ಮುಸ್ಲಿಂ ಧರ್ಮಗಳೆರಡಕ್ಕೂ ಸೇರಿದೆ. ಇವರನ್ನು ಕಸಾಯಿ, ಕಟುಕ, ಆರ್ಯ ಅಥವಾ ಆರ್ಯಕಟುಕರು, ಮರಾಠ ಕಸಾಯಿ, ಹಿಂದೂ ಕಸಾಯಿ ಹಾಗೂ ಕಟಗ ಎಂದೂ ಕರೆಯುತ್ತಾರೆ. ಇವರಲ್ಲಿ ಮೂರು ಉಪಪಂಗಡಗಳಿವೆ. ಅವೆಂದರೆ ಲಾಡ್‌ಕಸಾಯಿ, ಸುಲ್ತಾನಿ ಕಸಾಯಿ ಹಾಗೂ ಮದರಾಸಿ ಕಸಾಯಿ, ಕಲಾಲ್‌ರಲ್ಲಿ ಬಳಕೆಯಾಗುವ ಮನೆತನದ ಹೆಸರುಗಳೆಂದರೆ ಭಡನಕರ, ಕೋಟೆಕಾರ, ಭೀಕರ್, ಚಂಬುಕರ, ಕೊಪ್ಪೆಕಾರ, ಭಾಕದರ, ಹನುಮಂತಕರ, ದೊಕಣಕರ್, ಮನಕರ, ಬಿಡಿಕಿಕರ, ಫಲಂತವಾಡ ಹಾಗೂ ನಿಜಾಮಕರ್ ಇವರು ಹಿಂದಿ, ಮರಾಠಿ ಹಾಗೂ ಕನ್ನಡ ಮಾತನಾಡುತ್ತಾರೆ.

ಸುಲ್ತಾನಿ ಕಸಾಯಿ ಹಾಗೂ ಲಡಕಸಾಯಿ ಉಪಪಂಗಡಗಳು ಮುಸ್ಲಿಂ ಪಂಗಡಗಳಾಗಿದ್ದು, ಮುಸ್ಲಿಂ ಧಾರ್ಮಿಕ ವಿಧಿಗಳನ್ನು ಪಾಲಿಸುತ್ತಾರೆ. ಇವರನ್ನು ಮದರಾಸಿ ಕಸಾಯಿಗಳಿಗಿಂತ ಕೆಳಸ್ತರದವ ರೆಂದು ಪರಿಗಣಿಸಿದ್ದಾರೆ.

ಮದುವೆ : ತಂದೆಯ ಸಹೋದರನ ಮಗಳು ಅಥವಾ ತಾಯಿಯ ಸಹೋದರಿಯ ಮಗಳೊಂದಿಗೆ ನಡೆಯುತ್ತದೆ. ಸಾಂಪ್ರದಾಯಿಕ ನಿಯಮಗಳ ಪ್ರಕಾರ ವಿಧವೆಯರಿಗೆ ವಿವಾಹವಿಲ್ಲ. ಆದರೆ ವಿಧುರರ ಮರು ವಿವಾಹವಾಗಲು ಅವಕಾಶವಿದೆ. ಆಸ್ತಿಯನ್ನು ಗಂಡು ಮಕ್ಕಳಲ್ಲಿ ಸಮನಾಗಿ ಹಂಚಲಾದರೂ ಒಂದು ಭಾಗವನ್ನು ಪೋಷಕರಿಗಾಗಿ ಉಳಿಸಿಕೊಳ್ಳಲಾಗುತ್ತದೆ. ಹಿರಿಯ ಮಗ ತಂದೆಯ ನಂತರ ಮನೆಯ ವಾರಸುದಾರನಾಗುತ್ತಾನೆ. ಮಗುವಿಗೆ ನಾಮಕರಣವನ್ನು ಐದನೇ, ಹದಿನೈದನೇ ಅಥವಾ ನಲವತ್ತನೇ ದಿನದಂದು ಮಾಡುತ್ತಾರೆ. ಮದುವೆಯ ಆಚರಣೆಗಳಲ್ಲಿ ಚೊಂಚಿಕ ರಸ್ಮ, ವೀಳ್ಯಶಾಸ್ತ್ರ, ದೇವತಾಕಾರ್ಯ, ಜನಭಟಿಕ, ನಿಶುಲನೆಕ, ಚೋಲಿಕರಸ್ಮ, ಹರಚಿಲಕುರಸ್ಮ, ತಾಳಿ ಕಟ್ಟುವುದು ಹಾಗೂ ಕನ್ಯಾದಾನ ಸೇರಿದೆ. ಶವವನ್ನು ಸಾಮಾನ್ಯವಾಗಿ ಹೂಳಿದರೆ ಕೆಲವೊಂದು ಕಡೆ ಸುಡುವುದರ ಉದಾಹರಣೆಗಳಿವೆ.

ಸಾಂಪ್ರದಾಯಿಕವಾಗಿ ಕಲಾಲ್‌ರು, ಕಟುಕರು ಹಾಗೂ ಮಾಂಸಾ ಮಾರುವವರು ಕೋಮಿನ ಮುಖಂಡರು ಚಿಕ್ಕಪುಟ್ಟ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ಸುಲ್ತಾನಿ ಕಸಾಯಿ ಹಾಗೂ ಲಡಕಸಾಯಿ ಗುಂಪುಗಳು ಮೊದಲು ಇಸ್ಲಾಂ ಧರ್ಮ ಪಾಲಿಸುತ್ತಿದ್ದರೆ, ಕೆಲವರು ಹಿಂದೂ ಧರ್ಮವನ್ನು ಪಾಲಿಸು ತ್ತಿದ್ದಾರೆ. ಇವರು ದೇವಸ್ಥಾನ ಹಾಗೂ ಮಸೀದಿಗಳಲ್ಲೂ ಪ್ರಾರ್ಥನೆ ಸಲ್ಲಿಸುತ್ತಾರೆ. ಇವರ ಮಕ್ಕಳು ಸಾಮಾನ್ಯವಾಗಿ ಮಾದ್ಯಮಿಕ ಶಿಕ್ಷಣದ ತನಕ ಓದುತ್ತಾರೆ. ಸರ್ಕಾರದ ನಾಗರಿಕ ಸೇವೆ ಹಾಗೂ ನಾಗರೀಕ ಸೌಲಭ್ಯಗಳನ್ನು ಪಡೆಯಬೇಕಾಗಿದೆ.

ಸೂರ್ಯನಾಥ ಯು. ಕಾಮತ್ ಅವರ ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ ಗೆಜೆಟಿಯರ್‌ನಲ್ಲಿ ಈ ಮಾಹಿತಿಯನ್ನು ಕಾಣಬಹುದು.

ಕಾಟಿಕ್ : ಇವರನ್ನು ಕಟಕರು,ಕಲಾಲ್, ಕಟುಬ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಕರ್ನಾಕಟಕದ ಎರಡನೇ ಹಿಂದುಳಿದ ವರ್ಗಗಳ ಪ್ರಕಾರ ೧೯೮೪ರಲ್ಲಿ ಜಿಲ್ಲೆಯಲ್ಲಿ ಇವರ ಜನಸಂಖ್ಯಾ ಪ್ರಮಾಣ ೧೦,೯೭೧ ಎಂದು ಅಂದಾಜು ಮಾಡಲಾಗಿದೆ. ಮಾಂಸ ಮಾರುವುದು ಹಾಗೂ ಸೇಂದಿ, ಸಾರಾಯಿ ಅಂಗಡಿಗಳಲ್ಲಿ ಕೆಲಸ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಇವರು ಸೂರ್ಯನು ತಮ್ಮ ಮೂಲ ಪುರುಷನೆಂದು ಹೇಳಿಕೊಂಡು ಸೂರ್ಯನನ್ನು ಆರಾಧಿಸುತ್ತಾರೆ. ಇವರಲ್ಲಿ ಅನೇಕ ಬೆಡಗುಗಳಿವೆ. ಒಂದೇ ಬೆಡಗಿನಲ್ಲಿ ವಿವಾಹ ಮಾಡುವ ಸಂಪ್ರದಾಯವಿರುವುದಿಲ್ಲ. ಇವರಲ್ಲಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇಧನೆಗಳ ಸಂಪ್ರದಾಯವಿಲ್ಲ. ಇವರು ಮಾಂಸಾಹಾರಿಗಳು. ಹಿಂದಿ ಇವರ ಮಾತೃಭಾಷೆ ಇದಲ್ಲದೆ ಲಿಪಿ ಇಲ್ಲದ ವ್ಯವಹಾರ ಭಾಷೆಯೂ ಇವರಲ್ಲಿ ಪ್ರಚಲಿತವಿದೆ.

ದಸರಾ, ದೀಪಾವಳಿ, ಹೋಳಿ ಇವರು ಆಚರಿಸುವ ಕೆಲವು ಪ್ರಮುಖ ಹಬ್ಬಗಳಾಗಿವೆ. ಇವರು ಯಲ್ಲಮ್ಮ, ಭವಾನಿ, ನರಸಿಂಹ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ಹುಟ್ಟು ಸಾವುಗಳ ಸಂದರ್ಭದಲ್ಲಿ ಸೂತಕವನ್ನು ಆಚರಿಸುತ್ತಾರೆ. ಮೃತನು ವಿವಾಹಿತನಾಗಿದ್ದರೆ ಅಗ್ನಿ ಸಂಸ್ಕಾರ, ಅವಿವಾಹಿತನಾದರೆ ಹೂಳುವುದು ಇವರ ಸಂಪ್ರದಾಯ.

ಇವುಗಳಲ್ಲದೆ ಕನ್ನಡದಲ್ಲಿ ಚೂಡಾಮಣಿ ರಾವ್ ಕಲಾಲ್ ಅವರು 'ಕರ್ನಾಟಕ ಕಲಾಲ್ (ಸೂರ್ಯವಂಶ ಕ್ಷತ್ರಿಯ)ರು' ಎಂಬ ಕೃತಿ ಹಾಗೂ ರಾಜನಾಥ ಸೋನಕರ್ ಶಾಸ್ತ್ರೀಯವರು ಹಿಂದಿಯಲ್ಲಿ 'ಖಾಟಿಕ್ ಜಾತಿ ಕಿ ಉತ್ಪತ್ತಿ ಔರ್ ವಿಕಾಸ್' ಎಂಬ ಕೃತಿಗಳನ್ನು ಬರೆದಿದ್ದಾರೆ. ಈ ಎರಡು ಕೃತಿಗಳು ಅವರ ಮೂಲ ಆಚರಣೆ, ವಲಸೆಯ ವಿಚಾರ, ದೈವ, ಸ್ಥಿತಿಗತಿಗಳನ್ನು ಕುರಿತು ಚಿತ್ರಣ ನೀಡುತ್ತವೆ. ಕೆ. ಜೊರಾಪುರ ಅವರು ಕರ್ನಾಟಕದಲ್ಲಿ ಕ್ಷತ್ರಿಯ ಪಂಗಡಗಳು ಭಾಗ-೧ ಹಾಗೂ ಮಾಮಚಂದ್ ರಿವಾರಿಯ ಅವರು ಹಿಂದಿಯಲ್ಲಿ ಬರೆದಿರುವ 'ಖಟಿಕ್ ಸಮಾಜ ಕಾ ಇತಿಹಾಸ' ಎಂಬ ಪುಸ್ತಕದಲ್ಲಿ ಖಾಟಿಕರನ್ನು ಕುರಿತು ವಿವರವಾದ ಮಾಹಿತಿ ನೀಡುತ್ತದೆ. ಜೊರಾಪುರ ಅವರು ಕ್ಷತ್ರಿಯ ಪಂಗಡಗಳಲ್ಲಿ ಖಾಟಿಕರ ಸ್ಥಾನಮಾನವನ್ನು ಕುರಿತು ತಿಳಿಸುತ್ತಾರೆ.

೧.೩. ಅಧ್ಯಯನಕ್ಕಾಗಿ ಕೈಗೊಂಡ ವಿಧಾನಗಳು

ಖಾಟಿಕ್ ಸಮುದಾಯದ ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯದ ಮುಖಾಂತರ ಒಂದು ಸಮುದಾಯದ ಒಟ್ಟಾರೆ ಸಾಂಸ್ಕೃತಿಕ ಗ್ರಹಿಕೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಅನಕ್ಷರಸ್ಥರಾಗಿರುವ ಈ ಸಮುದಾಯದಿಂದ ಮೌಖಿಕ ವಿವರಗಳನ್ನು ಪಡೆದು ಅವುಗಳ ವಿಶ್ಲೇಷಣೆಯನ್ನು ಮಾಡುತ್ತ ಯಾವುದು ಸರಿ ಯಾವುದು ತಪ್ಪು ಎಂದು ಜ್ಞಾನದ ಒರೆಗಲ್ಲಿಗೆ ಹಚ್ಚುತ್ತ ಸಂಶಯ ಕಲ್ಪನೆಗಳಲ್ಲಿ ವಾಸ್ತವಿಕತೆಯನ್ನು ಹುಡುಕುತ್ತ ಸಾಗುವ ಕ್ಷೇತ್ರಕಾರ್ಯ ನಿಜಕ್ಕೂ ಕೆಲವೊಮ್ಮೆ ಖುಷಿ ಮತ್ತೆ ಕೆಲವೊಮ್ಮೆ ನಿರಾಶೆಯಿಂದ ಕೂಡಿದ್ದು ಜೀವನದ ಅನುಭವಗಳನ್ನು ನೀಡಿದೆ.

ಸಮುದಾಯದ ಹಿರಿಯರ ಅನುಭವ ಮಾಹಿತಿ, ಯುವ ಉತ್ಸಾಹಿ ಯುವಕ ಯುವತಿಯರ ನಡುವಿನ ಚರ್ಚೆ, ಸಂವಾದಗಳೊಂದಿಗೆ ಸಾಗಿದ ಈ ಕ್ಷೇತ್ರಕಾರ್ಯವು ನಿಜಕ್ಕೂ ಸಮುದಾಯ ಅಧ್ಯಯನಗಳಲ್ಲಿ ತುಂಬಾ ಸಹಾಯಕಾರಿಯಾಗಿ ಪರಿಣಮಿಸುತ್ತದೆ. ಒಂದು ಸಮುದಾಯವನ್ನು ಅಧ್ಯಯನ ಮಾಡುವಾಗ ಅಲ್ಲಿ ಹಿರಿಯರ ಅನುಭವ ಮಾಹಿತಿ, ವಯಸ್ಕ ವಕ್ತೃಗಳ ವಿವರಣೆ, ಯುವಜನತೆಯ ಚರ್ಚೆ ಸಂವಾದ ಎಲ್ಲವೂ ಮುಖ್ಯವಾಗುತ್ತದೆ ಮನುಷ್ಯನ ವಿವಿಧ ಘಟ್ಟಗಳೊಂದಿಗೆ ನಡೆಸುವ ಈ ಕ್ಷೇತ್ರಕಾರ್ಯ ತುಂಬಾ ಮಹತ್ವಪೂರ್ಣವಾಗಿರುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮುಖ್ಯವಾಗಿ ಎರಡು ರೀತಿಯ ವಿಧಾನಗಳನ್ನು ಅನುಸರಿಸಲಾಗಿದೆ.

೧.೩.೧. ಖಾಟಿಕರ ಜನಸಂಖ್ಯೆ ಹೆಚ್ಚಾಗಿ ವಾಸಿಸುವ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಭೇಟಿ ಕೊಡುವುದು ಒಂದನೆಯ ವಿಧಾನ. ಉದಾಹರಣೆಗೆ ಬಳ್ಳಾರಿ, ಗಂಗಾವತಿ, ಕೊಪ್ಪಳ, ಹರಪನಹಳ್ಳಿ, ಶಿವಮೊಗ್ಗ, ದಾವಣಗೇರಿ, ಹರಿಹರ, ಧಾರವಾಡ, ಗದಗ, ಹುಬ್ಬಳ್ಳಿ, ಗುಲ್ಬರ್ಗಾ, ರಾಯಚೂರು, ಮಾನ್ವಿ, ಹುಲುಗಿ, ಹೊಸಪೇಟೆ, ಕಮಲಾಪುರ, ಚಿತ್ರದುರ್ಗ, ಚಳ್ಳಕೆರೆ ಹೀಗೆ ಈ ಪ್ರದೇಶಗಳಲ್ಲಿರುವ ಖಾಟಿಕ್ ಸಮುದಾಯದವರೊಂದಿಗೆ ಅವರ ಇತಿಹಾಸ, ಮೂಲಕ್ಕೆ ಸಂಬಂಧಿಸಿದ ಪ್ರಶ್ನಾವಳಿ, ಕಸುಬು, ಆಚರಣೆ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿ ಇಂದು ಅವರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು ಇತರ ಸಮುದಾಯದವರೊಂದಿಗಿನ ಸಂಬಂಧಗಳು ಹೀಗೆ ಹಲವು ವಿಷಯಗಳನ್ನು ಕುರಿತು ಚರ್ಚೆ, ಸಂವಾದ, ಪ್ರಶ್ನಾವಳಿಗಳ ಮೂಲಕ ಮಾಹಿತಿಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ವಾರ್ಷಿಕಾವರ್ತನದ ಮತ್ತು ಜೀವನಾವರ್ತನದ ಆಚರಣೆಯ ಸಂದರ್ಭದಲ್ಲಿ ಉದ್ಯೋಗದ ಮಾಹಿತಿಯನ್ನು ಸಂಗ್ರಹಿಸುವಾಗ ಖಾಟಿಕರ ಜೊತೆಗೆ ಇದ್ದು ಅವರೊಂದಿಗೆ ಆಚರಣೆಗಳಲ್ಲಿ ಭಾಗವಹಿಸಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾರ್ಕೆಟ್‌ಗಳಲ್ಲಿ ಅವರ ಮಹಿಳೆಯರು, ಮಕ್ಕಳು, ಹಿರಿಯರೊಂದಿಗೆ ಭಾಗವಹಿಸಿ ಕ್ಷೇತ್ರಕಾರ್ಯ ಮಾಡಿ ಅವಶ್ಯವಿದ್ದಲ್ಲಿ ಧ್ವನೀಕರಣ ಮಾಡಿಕೊಂಡು, ಛಾಯಾಚಿತ್ರಗಳನ್ನು ತೆಗೆದು, ಟಿಪ್ಪಣಿ ಬರೆದುಕೊಳ್ಳುವ ಮೂಲಕ ಈ ಸಮುದಾಯವನ್ನು ಅಧ್ಯಯನ ಮಾಡಲಾಗಿದೆ.

೧.೩.೨. ಎರಡನೆಯದಾಗಿ ಖಾಟಿಕರ ಸಮುದಾಯದಲ್ಲಿನ ಸಾಹಿತ್ಯಿಕ ವಿವರಗಳ ಮೂಲಕ ಅವರ ಸಂವೇದನೆಗಳ ಮೂಲವನ್ನು ಗ್ರಹಿಸುವುದು. ಸಮುದಾಯ ಅಧ್ಯಯನದಲ್ಲಿ ಈ ವಿಧಾನವು ಹೆಚ್ಚು ಪರಿಣಾಮಕಾರಿಯಾದುದು. ಖಾಟಿಕ್ ಸಮುದಾಯದಲ್ಲಿರುವ ಕಥೆ, ಲಾವಣಿ, ಗಾದೆ, ಒಗಟು ಮೊದಲಾದ ಪ್ರಕಾರಗಳೊಂದಿಗೆ ಅವರ ಆಚರಣೆಯ ಸೂಕ್ಷ್ಮ ನೆಲೆಗಳನ್ನು ಗ್ರಹಿಸುತ್ತ ಈ ಸಮುದಾಯದ ವಲಸೆಯ ವಿಚಾರ, ದೈವದ ಕುರಿತ ಗ್ರಹಿಕೆ, ಸಾಮಾಜಿಕ ಚಿತ್ರಣ, ಆಧುನಿಕತೆಯೊಂದಿಗೆ ಮುಖಾಮುಖಿ ಯಾಗುವ ಸಂದರ್ಭ ಇವನ್ನು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಉದಾಹರಣೆ ಈ ಸಮುದಾಯದ ಮದುವೆಯ ಆಚರಣೆಯಲ್ಲಿ ಹಿರಿಯರಿಗೆ ಮತ್ತು ದೇವರಿಗೆ ಎಣ್ಣೆ ಏರಿಸುವ ಹಾಡುಗಳ ಸಂದರ್ಭದಲ್ಲಿ ಮುಖ್ಯವಾಗಿ ಗಮನ ಸೆಳೆಯುವ ಹಾಡು ಇವರ ವಲಸೆಯ ಸಂದರ್ಭದಲ್ಲಿ, ದೇವರು ಬಂದಿಲ್ಲ ಹಾಗಾಗಿ ಆ (ಮನೆ ದೇವರು) ದೇವರಿಗೆ ನಾವು ಇಲ್ಲಿ ಏರಿಸುವ ಎಣ್ಣೆ ಏರಲಿ ಆ ದೇವರಿಗೆ ನಮ್ಮ ಪ್ರಾರ್ಥನೆ ಮುಟ್ಟಲಿ ಎಂಬ ಸೂಕ್ಷ್ಮ ಛಾಯೆ ಈ ಹಾಡಿನಲ್ಲಿ ಕಂಡುಬರುತ್ತದೆ. ಹಿಂದಿಯಲ್ಲಿ,

"ಸುನ್ನೇಕಿ ತಿರ್ ಲೇಕೋ ಸುರಯ ತೇಲ್ ಚಡಾವೋ
ತೇಲಮ ಚಡಾನೆ ಹುಲಿಗೆಮ್ಮ ಬಾಯಿ ಕೋ ಬುಲಾವೋ

ಹುಲಿಗೆಮ್ಮ ಬಾಯಿ ನೆ ನಹಿ ಆಯೆ ತೋ

ಭೇಜೋ ಹಾತ್ ಕಾ ತೀರೋ"

ಕನ್ನಡಾನುವಾದ "ಬಂಗಾರದ ಕಡ್ಡಿ ತೊಗೊಂಡು ಸುವಾಸನೆಯ ಎಣ್ಣೆ ಏರಿಸಿರೆ

ಎಣ್ಣೆ ಏರಿಸಲಿಕ್ಕೆ ಹುಲಿಗೆಮ್ಮ ದೇವಿಗೆ ಕರೆಯಿರೆ

ಹುಲಿಗೆಮ್ಮ ದೇವಿ ಬರಲಿಕ್ಕಾಗದಿದ್ದರೆ

ನಾವಿಲ್ಲಿ ಏರಿಸುವ ಎಣ್ಣೆ ಅವಳಿಗೆ ಏರಲಿ"

ಹೀಗೆ ಹಿಂದೆ ಇವರು ತಾವು ಪೂಜಿಸುವ ದೇವತೆಗಳಿಗೆ ಎಣ್ಣೆ ಏರಿಸುತ್ತಿದ್ದು ಕಾಲಾನಂತರ ಕರ್ನಾಟಕದಲ್ಲಿ ಇಲ್ಲಿಯ ದೈವಗಳು ಆ ದೇವತೆಗಳ ಸ್ಥಾನ ಪಡೆದಿರುವ ಸಾಧ್ಯತೆಯಿದೆ. ಹಾಗೆಯೆ ಈ ಸಮುದಾಯದಲ್ಲಿ ಸಾವಿನ ಸಂದರ್ಭದಲ್ಲಿ, ಸತ್ತಂತ ವ್ಯಕ್ತಿಯ ಬೆಳ್ಳಿಯ ರೂಪಗಳನ್ನು ಏತಕ್ಕಾಗಿ ಮಾಡುತ್ತೀರಿ ಎಂದು ಪ್ರಶ್ನಿಸಿದಾಗ ವಕ್ತೃವೊಬ್ಬರು ನಾವು ಉತ್ತರದಿಂದ ದಕ್ಷಿಣಕ್ಕೆ ಬಂದಾಗ ಇಲ್ಲಿ ಹಿರಿಯರು ತೀರಕೊಂಡಂತ ಸಂದರ್ಭದಲ್ಲಿ ಮಹಿಳೆ ತೀರಿಕೊಂಡರೆ ಅವಳ ಕಾಲಿನ ಕಡಗ, ಪುರುಷನಾದರೆ ಅವರ ಕೈಯ ಕಡಗವನ್ನು ತೆಗೆದುಕೊಂಡು ಹೋಗಿ ಅವರಿಗೆ ತೋರಿಸಲಿಕ್ಕೆ ಚಿಹ್ನೆಯಾಗಿ ಬಳಸುತ್ತಿದ್ದರು. ಅದೇ ರೀತಿ ಅದರ ರೂಪವೇ ಈ ಬೆಳ್ಳಿಯ ಮೂರ್ತಿಗಳು ಎಂದು ಹೇಳಿದರು. ಹೀಗೆ ಒಂದು ಸಂಸ್ಕೃತಿಯ ಅಂಶಗಳೊಂದಿಗೆ ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಇಲ್ಲಿ ಖಾಟಿಕ್ ಸಮುದಾಯವನ್ನು ಅಧ್ಯಯನ ಮಾಡಲಾಗಿದೆ.

೧.೪. ಅಧ್ಯಯನದ ರೂಪುರೇಷೆಗಳು

"ಕರ್ನಾಟಕದ ಖಾಟಿಕ್ ಸಮುದಾಯ" ಎಂಬ ಶೀರ್ಷಿಕೆಯಡಿ ಕೈಗೆತ್ತಿಕೊಂಡಿರುವ ಈ ಅಧ್ಯಯನದ ರೂಪು ರೇಷೆಗಳನ್ನು ಕುರಿತು ಹೇಳುವುದು ಇಲ್ಲಿನ ಉದ್ದೇಶವಾಗಿದೆ. ಮೊದಲನೆಯದಾಗಿ ಖಾಟಿಕರನ್ನು ಕುರಿತು ಅಧ್ಯಯನ ತುಂಬಾ ಕಡಿಮೆ ಪ್ರಮಾಣದಲ್ಲಿ ನಡೆದಿರುವುದರಿಂದ ಈ ಸಮುದಾಯವನ್ನು ಅಧ್ಯಯನ ಮಾಡುವ ಜರೂರತ್ತಿದೆ. ಏಕೆಂದರೆ ನಮ್ಮ ಸಮಾಜದಲ್ಲಿ ನಮ್ಮ ಸುತ್ತಲೇ ನಾವು ದಿನನಿತ್ಯ ಬೈಯ್ಗುಳದಲ್ಲಿ ಆಗಲಿ ಇಲ್ಲ ಸಿನಿಮಾ, ನಾಟಕ ಆಗಲಿ ಇಲ್ಲವೇ ಯಾರೇ ಸ್ವಲ್ಪ ಕೆಟ್ಟ ಕೆಲಸ ಮಾಡಿದರು ಎಂಥ ಕಟುಕರಯ್ಯ ಎಂಬ ಉದ್ಗಾರ ಕೇಳುತ್ತೇವೆ. ಆದರೆ ಅದನ್ನು ಕುರಿತು ನಂತರ ಚಿಂತಿಸುವುದೇ ಇಲ್ಲ, ಬೈಗುಳವಾಗಿ ಬಯ್ಯುವಂತ ಪದದ ಒಂದು ಸಮುದಾಯವೇ ನಮ್ಮ ಸುತ್ತ ವಾಸಿಸುತ್ತಿದೆ ಎಂಬ ಪರಿಕಲ್ಪನೆಯೂ ಇರುವುದಿಲ್ಲ. ಇನ್ನು ಇವರು ತಮ್ಮ ಜಾತಿಯನ್ನು ಸಮಾಜದಲ್ಲಿ ಹೇಳಿಕೊಳ್ಳುವುದಾದರು ಹೇಗೆ. ಆದ್ದರಿಂದ ಸಮಾಜದಲ್ಲಿ ಈ ಖಾಟಿಕ್ ಸಮುದಾಯದ ಸ್ಥಾನಮಾನ ಇತರ ಸಮುದಾಯಗಳೊಂದಿಗಿನ ಸಂಬಂಧವನ್ನು ಅಧ್ಯಯನ ಮಾಡುವುದು ಮುಖ್ಯವಾದುದಾಗಿದೆ.

ಉತ್ತರದಲ್ಲಿ ಮೊಘಲರ ಆಳ್ವಿಕೆಯ ಸಂದರ್ಭದಲ್ಲಿ ದಕ್ಷಿಣಕ್ಕೆ ವಲಸೆ ಬಂದು ವಿಜಯನಗರ ಅರಸರ ಪಾಳೆಗಾರರಲ್ಲಿ ಯೋಧರಾಗಿ ದುಡಿದು ರಾಜ್ಯ ಆಳ್ವಿಕೆಯ ನಂತರ ಮದ್ಯ, ಮಾಂಸ ಮಾರಾಟ ಮಾಡುವಿಕೆಯಲ್ಲಿ ತೊಡಗಿಕೊಂಡ ದ್ರಾವಿಡ ಮೂಲದ ಖಾಟಿಕ್ ಸಮುದಾಯ ಇಂದು ಸಮಾಜದಲ್ಲಿ ತನ್ನ ವೃತ್ತಿಯಿಂದಾಗಿ ಹಲವು ನಾಮಗಳನ್ನು ಹೇಳಿಕೊಳ್ಳುತ್ತ, ತಾವು ಖಾಟಿಕರು ಎಂದು ಹೇಳುವುದನ್ನು ಮರೆತು ಇತಿಹಾಸದ ಕೊಂಡಿ ಕಳಚಿ ಸಮಾಜ ಇವರಿಗೆ ನೀಡಿರುವ ಹೆಸರನ್ನು ಹೇಳಲು ಇಷ್ಟಪಡದೆ ತಾವು ಸೂರ್ಯವಂಶ ಕ್ಷತ್ರಿಯರು ಎಂದು ಹೇಳುತ್ತಾ ಸಾಗಿ ಇಂದು ಸಂಸ್ಕೃತೀಕರಣ, ಜಾಗತೀಕರಣಗಳ ಮಾಯೆಯಲ್ಲಿ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳುತ್ತ ಮತ್ತೆ ಕೆಲವೊಮ್ಮೆ ಕೆಲವು ವಿಷಯಗಳಲ್ಲಿ ಬದಲಾವಣೆಗಳತ್ತ ಮುಖ ಮಾಡಿ ನಡೆಯುತ್ತಿರುವುದನ್ನು ಕಾಣಹುದು.

ಕರ್ನಾಟಕದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಖಾಟಿಕರು ಚದುರಿಕೊಂಡಿರುವುದರಿಂದ ವಿಶೇಷವಾಗಿ ಅವರು ಹೆಚ್ಚಾಗಿ ಕಂಡುಬರುವಂತ ಜಿಲ್ಲೆಗಳನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಕೆಲವು ಊರು ಗಳನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡು ಅಧ್ಯಯನಮಾಡಲಾಗಿದೆ. ಈ ಸಮುದಾಯದ ಜನಸಂಖ್ಯೆಯು ೮೦ ಸಾವಿರದಿಂದ ಒಂದು ಲಕ್ಷದವರೆಗೆ ಕಂಡುಬರುತ್ತೆ. ಆದರೆ ಇವರಲ್ಲಿ ಸಂಘಟನೆಯ ಕೊರತೆ ಇದೆ. ರಾಜಕೀಯವಾಗಿ ಇವರನ್ನು ಗುರುತಿಸಿದರೆ ಅತ್ಯಂತ ಕಡಿಮೆ ಜನರು. ಅಲ್ಲಲ್ಲಿ ಚದುರಿಕೊಂಡು ಜೀವನ ನಿರ್ವಹಣೆಯಲ್ಲಿ ತೊಡಗಿಕೊಂಡಿರುವುದರಿಂದ ಇವರಿಗೆ ರಾಜಕೀಯ ಪ್ರಜ್ಞೆ ಇಲ್ಲ ಎಂದೇ ಹೇಳಬಹುದು. ನಿರ್ಣಾಯಕ ಮತದಾರರಾಗಿಯೂ ಇವರನ್ನು ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಇವರ ಕಡಿಮೆ ಜನಸಂಖ್ಯೆಯಿಂದಾಗಿ ಇವರಿಗೆ ಯಾವ ಸವಲತ್ತುಗಳು ಸಿಗದೆ, ನಾಳಿನ ಯಾವ ಚಿಂತೆಯೂ ಕಾಡದೆ ಇವತ್ತು ನೋಡಿದರೆ ಆಯಿತು ಎಂದು ತೃಪ್ತಿಪಟ್ಟುಕೊಳ್ಳುವ ಪಾಡು ಇವರದು. ಇಂಥ ಸಮುದಾಯದ ಆರ್ಥಿಕ ಸ್ಥಿತಿಯು ಅಲುಗಾಡುತ್ತಿದೆ. ಕಾರಣ ಕೆಲವು ಭಾಗಗಳಲ್ಲಿ ಕುರುಬರು, ಮುಸ್ಲಿಂರು ಇವರಿಗೆ ಉದ್ಯೋಗದಲ್ಲಿ ಸ್ಪರ್ಧಿಸುವುದರಿಂದ. ಮೊದಲೇ ಈ ಉದ್ಯೋಗದಲ್ಲಿ ಸಿಗುವ ಅಲ್ಪಲಾಭ, ಪೈಪೋಟಿ, ಸರ್ಕಾರದ ಮಟನ್ ಮಾರ್ಕೆಟ್‌ಗಳನ್ನು ಕೊಳ್ಳುವಲ್ಲಿ ಸ್ಪರ್ಧೆ ಇವೆಲ್ಲ ಇವರನ್ನು ಕಂಗಾಲಾಗಿಸಿ ಇವರ ಆರ್ಥಿಕ ಬುನಾದಿ ಅಲುಗಾಡುವಂತೆ ಮಾಡಿದೆ. ಹಾಗೆಯೇ ಸಮಾಜದಲ್ಲಿ ಈ ಉದ್ಯೋಗವನ್ನು ಕೀಳಾಗಿ ನೋಡುವುದರಿಂದ ಇವರು ಬೇರೆ ಉದ್ಯೋಗಗಳತ್ತ ವಾಲುವುದು ಕಂಡುಬರುತ್ತದೆ. ಇವರು ತಮ್ಮ ಜಾತಿಯಿಂದ ಬೇರೆ ಜಾತಿಗಳತ್ತ ಆಕರ್ಷಿತರಾಗಿ ಬೇರೆ ಜಾತಿಯಲ್ಲಿ ಸೇರುವಲ್ಲಿಯೂ ಚಿಂತಿಸುವುದು ಕಂಡುಬರುತ್ತೆ. ಆದರೆ ನಮ್ಮ ವರ್ಣವ್ಯವಸ್ಥೆಯ ಬಿಗಿ ಬಂಧನ ಅಷ್ಟು ಸುಲಭವಾಗಿ ಅಲುಗಾಡುವುದಿಲ್ಲ ಎಂಬುದನ್ನು ಇವರು ಅರಿತಿದ್ದಾರೆ. ಆದರೂ ತಮ್ಮ ಸಮುದಾಯಕ್ಕಿಂತ ಸ್ವಲ್ಪ ಮೇಲಿರುವ ಸಮುದಾಯದ ಸಂಸ್ಕೃತಿಯನ್ನು ಅನುಸರಿಸುವ ಅನುಕರಣೆ ಇವರಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಸತ್ಯನಾರಾಯಣ ಪೂಜೆ ಮಾಡಿಸುವುದು, ಷಷ್ಠಿ, ಸಂಕಷ್ಟ ಚತುರ್ಥಿ ಆಚರಿಸುವುದು. ಸಮಾಜ ಇವರನ್ನು ಕುರಿತು ನೋಡುವ ದೃಷ್ಟಿಕೋನದಿಂದ ಮಾನಸಿಕವಾಗಿ

ಇವರಿಗೆ ತುಂಬಾ ಬೇಸರವನ್ನುಂಟು ಮಾಡಿ ಕೊಂಡಿದ್ದಾರೆ. ಹಾಗೆಯೇ ಇವರು ಬೇರೆ ಜಾತಿಯಲ್ಲಿ ಸೇರಲು ಆಸಕ್ತಿ ತೋರಿಸುವವರೆ ವಿನಃ ಇತರ ಯಾವ ಸಮುದಾಯವು ಇವರ ಜಾತಿಯಲ್ಲಿ ಸೇರಲು ಆಸಕ್ತಿ ವಹಿಸದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬರುತ್ತದೆ.

ಇತ್ತೀಚೆಗೆ ನಡೆಯುತ್ತಿರುವ ಬಹುರೂಪಿ ಸಂಸ್ಕೃತಿಗಳ ಶೋಧನೆಯು ಏಕರೂಪಿ ಸಂಸ್ಕೃತಿಯ ಸೃಷ್ಟಿಯನ್ನು ಹುಸಿಗೊಳಿಸುವ ಅದನ್ನು ಒಡೆದು ಹಾಕುವಲ್ಲಿ ಇಂಥ ಸಮುದಾಯ ಅಧ್ಯಯನಗಳು ಇಂದಿನ ಜರೂರತ್ತಾಗಿದೆ ಎಂದು ಹೇಳಬಹುದು.

ಆಧಾರಗಳು

೧. ಸೂರ್ಯನಾಥ್ ಯು. ಕಾಮತ್., **ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ,** ಗೆಜೆಟಿಯರ್ ಭಾಗ-೧, ೧೯೮೪

೨. ಸೂರ್ಯನಾಥ್ ಯು. ಕಾಮತ್., **ಭಾರತದ ಗೆಜೆಟಿಯರ್ ಧಾರವಾಡ ಜಿಲ್ಲೆ ಪರಿಷ್ಕೃತ ಆವೃತ್ತಿ,** ಕರ್ನಾಟಕ ರಾಜ್ಯ ಸರ್ಕಾರ, ೧೯೯೫

೩. ಪ್ರಶಾಂತ್ ಎಚ್.ಡಿ., ***ಜನಸಮುದಾಯ ಸಂಪುಟ*** ಕರ್ನಾಟಕ ರಾಜ್ಯಕೋಶ-೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

4. Enthoven R.E., The Tribes and Castes of Bombay, Vol-2, Asian Education Services, New Delhi, 1922.

5. Edgar Thurstan and K. Rangachari., Caste and Tribes of Southern India, Vol-II, Asian Educational Services, New Delhi, 1987.

6. Syed Siraj-Ul-Hasan., The Caste and Tribes of HEH The Nizam's Dominions, Asian Education Services, New Delhi, 1989.

7. Singh K.S., India's Communities, Vol-V, H to M, Oxford University Press, 1998.

ಅಧ್ಯಾಯ - ೨

ಖಾಟಿಕರ ಮೂಲ

೨.೧. ಖಾಟಿಕ್‌ರ ಮೂಲ

ಕಟುಗ ಎನ್ನುವುದು ಮೂಲತಃ ಕನ್ನಡ ಶಬ್ದ. ಒಂದು ಸಮುದಾಯವು ಸಾಂಪ್ರದಾಯಿಕವಾಗಿ ನಿರ್ವಹಿಸಿಕೊಂಡು ಬಂದ ವೃತ್ತಿಯ ಹಿನ್ನಲೆಯಲ್ಲಿ ರೂಪುಗೊಂಡಿರುವಂತದ್ದು. ಕನ್ನಡದ 'ಕಡಿ' ಎಂಬ ಕ್ರಿಯಾಪದದಿಂದ 'ಕಟುಗ' ಎಂಬ ಹೆಸರು ಬಂದಿರುವುದನ್ನು ಕಾಣಬಹುದು. ಕಡಿ ಎಂಬುದಕ್ಕೆ ಕತ್ತರಿಸು, ಸೀಳು, ತುಂಡರಿಸು, ತರಿದುಹಾಕು ಎಂಬ ಅರ್ಥಗಳಿವೆ.

'ಖಾಟಿಕ' ಎಂಬ ಪದವು ಕಟಿಕ > ಕಟಿಗ > ಕಟುಕ > ಕಟುಗ > ಕಡುಕ ಎಂಬ ನಾನಾ ಪದಗಳೊಂದಿಗೆ ಕಡಿಯುವವನು, ಕತ್ತರಿಸುವವನು, ಕಸಾಯಿಗಾರ ಎಂಬ ಅರ್ಥವನ್ನು ಹೊಂದಿದೆ. ಅಂದರೆ ಕಟುಗ ಎಂಬ ಪದವು ಮಾಂಸವನ್ನು ಕಡಿದು ಮಾರುವವನು ಎಂದು ಸೂಚಿಸುತ್ತದೆ(ವೆಂಕಟ ಸುಬ್ಬಯ್ಯ;೧೯೭೬:೧೪೦೮).

ಕರ್ನಾಟಕದಲ್ಲಿ ಕಟುಗರು, ಕಲಾಲ್‌ರು, ಕಸಾಯಿ, ಸೂರ್ಯವಂಶಿ ಕ್ಷತ್ರಿಯ, ಮರಾಠಿ ಕಸಾಯಿ, ಹಿಂದೂ ಕಲಾಲ್, ಕಲಾಲ್, ಖಾಟಿಕ್, ಕಾಟಿಕ್, ಕಟಿಕ್ ಮರಾಠಿ, ಶೆರೆಗಾರ ಎಂಬ ಹಲವು ನಾಮಗಳಿಂದ ಗುರುತಿಸಿಕೊಂಡರೆ ಆಂಧ್ರದಲ್ಲಿ ಕಟುಗೊಲವಾಳು, ಕಸಾಪುವಾಳ್ಳು ಎಂದು ಗುರುತಿಸಲ್ಪಡುತ್ತಾರೆ. ಕಟುಗೊಲವಾಳು, ಮೊರಟವಾಳು ಎಂದರೂ ಮಾಂಸವನ್ನು ಕಡಿದು ಮಾರುವವನು ಎಂಬ ಅರ್ಥವಿದೆ. ಅಂದರೆ ಮುಖ್ಯವಾಗಿ ವೃತ್ತಿಯ ಆಧಾರದ ಮೇಲೆ ಖಾಟಿಕರನ್ನು ಆಯಾ ರಾಜ್ಯಗಳಲ್ಲಿ ಅಲ್ಲಿಯ ಭಾಷೆಯಲ್ಲಿ ಗುರುತಿಸಿರುವುದನ್ನು ಕಾಣಬಹುದು.

ಸಂಸ್ಕೃತದ ಕರ್ತಿಕ್ ಎಂಬ ಪದದಿಂದ ಕಟಿಕ ಎಂಬ ಪದ ಬಂದಿದೆ. 'ಕರ್ತಿಕ್' ಎಂದರೆ ಚಾಕು ಅಥವಾ ಚೂರಿ ಎಂಬ ಅರ್ಥವಿದೆ. ಚೂರಿಯನ್ನು ಬಳಸಿ ಉದ್ಯೋಗವನ್ನು ಮಾಡುವುದರಿಂದ ಈ ಕಟಿಕ ಪದದ ಉತ್ಪತ್ತಿಯಾಗಿದೆ ಎಂದು ಹೇಳಬಹುದು. ನಮ್ಮ ಸಮಾಜದಲ್ಲಿ ಹಲವು ಜಾತಿಗಳ ಹೆಸರು ಅವರು ಮಾಡುವ ಉದ್ಯೋಗದಿಂದ ಬಳಕೆಯಾಗಿ ಬಂದಿದೆ. ಹಾಗೆಯೇ ಉತ್ತರದಿಂದ ಮೊಗಲರ ಆಳ್ವಿಕೆಯ ಸಂದರ್ಭದಲ್ಲಿ ಮತಾಂತರ ಪ್ರಕ್ರಿಯೆಗೆ ಒಳಗಾಗದೆ ದಕ್ಷಿಣಕ್ಕೆ ಹಿಂದೂ ರಾಜರ

ಆಶ್ರಯ ಬೇಡಿ ಬಂದ ಈ ಖಾಟಿಕ್ ಸಮುದಾಯವನ್ನು ದಕ್ಷಿಣದಲ್ಲಿ ಇವರು ಮಾಡುವ ಉದ್ಯೋಗದ ಆಧಾರದ ಮೇಲೆ ಕಟುಕರೆಂದು ಗುರುತಿಸತೊಡಗಿದರು. ಆಗ ಇವರು ತಾವು ಹಿಂದೂ ರಜಪೂತ ಅರಸರ ಪಾಳೆಯಗಾರರಲ್ಲಿ ಸೈನಿಕರಾಗಿರುವ ಯೋಧರು ಸೂರ್ಯವಂಶ ಕ್ಷತ್ರಿಯರು ಎಂದು ಹೇಳಿಕೊಂಡರು. ಆದರೆ ಇವರ ವೃತ್ತಿಯ ಆಧಾರದ ಮೇಲೆಯೇ ಇವರನ್ನು ಸಮಾಜ ಗುರುತಿಸಿಕೊಂಡು ಬಂದಿತು. ಇವರು ಕುರಿಮಾಂಸ ಮಾರುವ ವೃತ್ತಿಯಲ್ಲೇ ಮುಂದುವರಿದಿರುವುದರಿಂದ ಇವರನ್ನು 'ಕಟುಗ', 'ಕಟುಕ'ರೆಂದು ಕರೆಯಲಾಯಿತು. ನಂತರದಲ್ಲಿ ಈ ಸಮುದಾಯ ಮದ್ಯ ಮಾರಾಟ ಮಾಡುವ ಉದ್ಯೋಗದಲ್ಲಿ ಹೆಚ್ಚು ಆಸಕ್ತಿವಹಿಸಿದ್ದರಿಂದ ಇವರು ತಮ್ಮನ್ನು 'ಕಲಾಲ್'ರೆಂದು ಗುರುತಿಸಿಕೊಂಡರು. ಮಧ್ಯದಂಗಡಿಗಳಲ್ಲಿ ಮಧ್ಯ ಮಾರಾಟ ಮಾಡುವುದರೊಂದಿಗೆ ಮಧ್ಯಸೇವನೆ ಮಾಡುವವರಿಗೆ ಮಾಂಸದೂಟವನ್ನು ಮಾರುವಂತರಾದರು. ಈ ಮಾಂಸದೂಟದಲ್ಲಿ ಇವರು ರೊಟ್ಟಿ, ಅನ್ನ, ಕುರಿಯಿಂದ ದೊರೆಯುವ ಮಾಂಸ, ಬೋಟಿ, ತಲೆ-ಕಾಲುಗಳ ಸಾರು ಮುಂತಾದವುಗಳನ್ನು ಪ್ರಮುಖವಾಗಿ ಮಾರಾಟ ಮಾಡುವಂತಹ ಪ್ರವೃತ್ತಿಯಲ್ಲಿ ತೊಡಗಿದರು. ಇದರಿಂದ ಇವರಿಗೆ 'ಚಾಕಣಾ ಕಲಾಲ್'ರು ಎಂದು ಗುರುತಿಸಲ್ಪಟ್ಟಿದೆ. ಹೀಗೆ ಒಂದು ಸಮುದಾಯವು ಹಲವು ಪ್ರವೃತ್ತಿಗಳ ಆಧರಿಸಿ ತನ್ನ ಮೂಲ ಜಾತಿಯನ್ನು ಕಳೆದುಕೊಂಡಿದೆ. ಇಂದು ಸಮಾಜದಲ್ಲಿ ತನ್ನ ಜಾತಿಯ ಹೆಸರನ್ನು ಹೇಳಿಕೊಳ್ಳಲು ಆಗದೆ, ಬಿಡಲು ಆಗದೆ ಪರದಾಡುವ ಅವಮಾನ ಪಡುವ ಸ್ಥಿತಿಗೆ ತಂದಿರುವ ನಮ್ಮ ಜಾತಿ-ರಾಜಕಾರಣಗಳ ಇತಿಹಾಸವನ್ನು ಪುನರ್ ಪರಿಶೀಲಿಸಬೇಕಾಗಿದೆ.

ಮುಖ್ಯವಾಗಿ ಇವರ ವೃತ್ತಿಯ ಆಧಾರದ ಮೇಲೆ ಇವರ ಜಾತಿಯನ್ನು ಸಮಾಜವು 'ಕಟುಗ'ರೆಂದು ಗುರುತಿಸುತ್ತಿದೆ. ಇವರು ಮೂಲತಃ ಯೋಧರಾಗಿದ್ದು ನಾವು ಸೂರ್ಯವಂಶ ಕ್ಷತ್ರಿಯರು ಎಂದು ತಮ್ಮನ್ನು ತಾವು ಹೇಳಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಸಮಾಜ ಕೀಳು ಎಂದು ಕೊಂಡಿರುವ ವೃತ್ತಿಯಲ್ಲಿ ತೊಡಗಿರುವ ಇವರು ಒಂದು ಕೆಳಸಮುದಾಯವಾಗಿದ್ದು ತನ್ನ ನಿಜನಾಮಧೇಯವನ್ನು ಹೇಳಿಕೊಳ್ಳಲಾಗದೆ ತನ್ನನ್ನು ಸಮಾಜ ಗೌರವಿಸದೆ ಹೀಯಾಳಿಸುತ್ತಿದೆ ಎಂಬುದನ್ನರಿತು ಹೀಗೆ ಹಲವಾರು ಹೆಸರುಗಳಿಂದ ತಮ್ಮನ್ನು ಗುರುತಿಸಿಕೊಳ್ಳುವುದು ಕಂಡಬರುತ್ತದೆ.

ಖಾಟಿಕ್ ಸಮುದಾಯದವರು ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವುದರಿಂದ ಆ ವೃತ್ತಿಯ ಹಿನ್ನೆಲೆಯಲ್ಲಿ ಇವರ ಹೆಸರು ಸಹ ಬದಲಾಗುವುದನ್ನು ನಾವು ಗಮನಿಸಬೇಕಾಗಿದೆ. ಉದಾಹರಣೆಯಾಗಿ ಮಧ್ಯ ಮಾರಾಟ ಮಾಡುವವರನ್ನು 'ಕಲಾಲ್ ಖಾಟಿಕ್'ರೆಂದು, ಚಾಕಣಾ (ಕುರಿಯ ತಲೆ-ಕಾಲುಗಳ ಮಾಂಸದಿಂದ ಮಾಡಿದ ಪದಾರ್ಥ) ಮಾರುವವರನ್ನು 'ಚಾಕಣಾ ಕಲಾಲ್'ರೆಂದು ಗುರುತಿಸಿಕೊಳ್ಳುವುದು ಕಾಣಬಹುದು.

"ಕಲಾಲ್ ಎಂದು ಗುರುತಿಸುವ ಕ್ರಿಯೆ ೧೮೦ ವರ್ಷಗಳ ಹಿಂದಿನದು. ಸರಾಯಿ, ಶೇಂದಿ ತಯಾರಿಸಿ ವ್ಯಾಪಾರ ಮಾಡುವವರಿಗೆ ಕಲಾರ, ಕಲಾಲ್ ಎಂದು ಕರೆಯುವರು. ಈ 'ಕಲಾರ' ಶಬ್ದವು

ಸಂಸ್ಕೃತ ಭಾಷೆಯ 'ಕಲ್ಯಪಾಲ' ಶಬ್ದದಿಂದ ಬಂದದ್ದು. ಇದೆ ಮುಂದೆ ಕಲಾಲ್ ಆಯಿತು. ಹೀಗೆಯೇ ಮುಂದೆ 'ಸೂರ್ಯವಂಶ ಕ್ಷತ್ರಿಯ ಕಲಾಲ್' ಆದರು ಎಂದು ತಿಳಿದುಬರುತ್ತದೆ"(ಚಿಂತಾಮಣಿ ಕೆ. ಜೋರಾಪುರ;೨೦೦೫:೧೨೫).

ಖಾಟಿಕ್ ಪದದ ಮೂಲವನ್ನು ಗುರುತಿಸುವಲ್ಲಿ ಖಾಟಿಕ್ ಜಾತಿಯು ಮೊದಲು ಕಠ. ಕಠಿಕ, ಕಾಠಿಕ, ಶಿಕಾರಿ, ಆಖೇಟಕ ನಂತರ ಖಾಟಿಕ್ ಎಂದು ಸ್ಪಷ್ಟವಾಗಿ ಉಚ್ಚರಿಸಲ್ಪಡುತ್ತಿದೆ ಎಂದು ಶಾಸ್ತ್ರಿ ಅವರು ತಿಳಿಸುತ್ತಾರೆ. ೧೯೮೧ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಸಮುದಾಯದ ಒಂದು ಸಮಾರಂಭದಲ್ಲಿ ಶಾಸ್ತ್ರಿ ಅವರು ಕರ್ನಾಟಕದಲ್ಲಿ ಖಾಟಿಕ್ ಪದವನ್ನು ಪರಿಚಯಿಸಿದರು ಎಂದು ತಿಳಿದು ಬರುತ್ತದೆ. ಮುಖ್ಯವಾಗಿ ಇವರು ಮಾಡುವ ಉದ್ಯೋಗದ ಆಧಾರದ ಮೇಲೆ ಕರ್ನಾಟಕದಲ್ಲಿ ಇವರನ್ನು ಹಲವು ಹೆಸರುಗಳಿಂದ ಕರೆಯುವುದನ್ನು ಕಾಣಬಹುದು.

'ಖಾಟಿಕ್' ಎಂಬ ಶಬ್ದದ ಉತ್ಪತ್ತಿಯನ್ನು ಕುರಿತು ಗಮನಿಸಿದಾಗ ಶ್ರೀ ಶ್ಯಾಮಲಾಲ್ ಭತ್‌ಕಾರಿಯ ಅವರು ಖಟಿಕ ಪದದ ಸೃಷ್ಟಿಯನ್ನು ಕುರಿತು 'ಖಟ್' ಎಂದರೆ ಖಡ್ಗ 'ಈಕ್' ಎಂದರೆ ತುಂಡರಿಸು ಅಥವಾ ಬೇರೆ ಮಾಡುವುದಾಗಿ ಅಂದರೆ ಖಡ್ಗ ಇಲ್ಲವೆ ಕತ್ತಿಯಿಂದ ಕುರಿಯ ರುಂಡವನ್ನು ಮುಂಡ(ದೇಹ)ದಿಂದ ಬೇರೆ ಮಾಡುವ ಕಾಯಕದಿಂದ ಈ 'ಖಟಿಕ' ಪದದ ನಿಷ್ಪತ್ತಿಯಾಗಿದೆ. ಈ ಕಾಯಕ ಮಾಡುವವರಿಗೆ 'ಖಟಿಕ್' ಎಂದು ಕರೆಯುತ್ತಾರೆ ಎಂಬುದನ್ನು ಸೋನಕರ್ ಶಾಸ್ತ್ರಿಯವರು ಈ ಪದ ನಿಷ್ಪತತಿಯನ್ನು ಕುರಿತು 'ಖಟಿಕ್' ಎನ್ನುವುದು ಒಂದು ಸ್ವತಂತ್ರ ಶಬ್ದವಾಗಿದ್ದು ನಮ್ಮ ಪೂರ್ವಿಕರು ತೈಮೋರಲಂಗನ ದಾಳಿಗೆ ಸಿಕ್ಕ ಸಂದರ್ಭದಲ್ಲಿ ನಾವು ಕಠ, ಕಠಿಕ್ ಜಾತಿಯವರಲ್ಲ, 'ಖಟಿಕ್' ಎಂದು ಉಚ್ಚಾರಣೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಹೇಳಿ ಶತ್ರುಗಳಿಂದ ಪಾರಾದರು. ಈ ಸಂದರ್ಭದಲ್ಲಿ 'ಖಟಿಕ್' ಪದದ ನಿಷ್ಪತ್ತಿಯಾಯಿತು ಎಂದು ತಿಳಿಸುತ್ತಾರೆ. ಮೇಲಿನ ಎರಡು ಅಂಶಗಳನ್ನು ಗಮನಿಸಿದಾಗ ಮುಖ್ಯವಾಗಿ ವೃತ್ತಿಯ ಆಧಾರದ ಮೇಲೆ ಇವರಿಗೆ ಖಾಟಿಕ್ ಎಂದು ಹೆಸರು ಬಂದಿರುವುದನ್ನು ಕಾಣಬಹುದು(ಸೋನಕರ್ ಶಾಸ್ತ್ರಿ;೨೦೦೫:೮೦-೧೬೭).

೨. ಖಾಟಿಕರು

ಮುಖ್ಯವಾಗಿ ಈ ಪ್ರಬಂಧದಲ್ಲಿ ನಾನು ಅಧ್ಯಯನ ಮಾಡುತ್ತಿರುವ ಸಮುದಾಯವು ಖಾಟಿಕ್ ಎಂಬುವುದು ಇವರ ಮೂಲ ಸಮುದಾಯವಾಗಿ ಬಂದಿರುವುದಾಗಿದೆ. ಇದಕ್ಕೆ ಕಾರಣ ಹಿಂದಿನಿಂದಲೂ ಈ ಸಮುದಾಯದವರ ವೃತ್ತಿ ಹಾಗೂ ಪ್ರವೃತ್ತಿಯಿಂದ ತಮ್ಮ ಸಮುದಾಯವನ್ನು ನೇರವಾಗಿ ಗುರುತಿಸಿಕೊಳ್ಳಲಾಗದೆ ಸಮಾಜದ ಅವಮಾನಕ್ಕೊಳಗಾಗುತ್ತೇವೆ ಎಂಬ ಭಯದಿಂದ ಬೇರೆ ಬೇರೆ ಹೆಸರುಗಳಲ್ಲಿ ತಮ್ಮ ವೃತ್ತಿಯಾಧಾರಿತಗಳ ಮೇಲೆ ಕುಲಕಸುಬುಗಳನ್ನೇ ಸಮುದಾಯವನ್ನಾಗಿ ಗುರುತಿಸಿ ಕೊಂಡಿದ್ದಾರೆ. ಎಲ್.ಜಿ. ಹಾವನೂರು ಅವರ ವರದಿಯ ವೇಳೆಯಲ್ಲಾಗಲಿ, ಬೇರೆ ಸಮುದಾಯ

ದವರೊಂದಿಗೆ ಬೆರೆಯುವ, ಮಾತನಾಡುವ ಸಂದರ್ಭದಲ್ಲೂ ಇವರು ತಮ್ಮನ್ನು 'ಕಟುಗರು' ಎಂದು ಗುರುತಿಸಿಕೊಳ್ಳಲು ಇಷ್ಟಪಡದೆ ತಾವು ಸೂರ್ಯವಂಶ ಕ್ಷತ್ರಿಯರು, ಮರಾಠಿಗರು, ಅರೆಮರಾಠಿಗರು ಹಾಗೂ ಕಲಾಲ್‌ರೆಂದು ಗುರುತಿಸಿಕೊಳ್ಳುತ್ತಾರೆ. ಒಂದು ಸಮುದಾಯ ಸಾಮಾಜಿಕ ಸ್ಥಾನಮಾನ ಪಡೆಯಲು ಹವಣಿಸುವ ಸಂಸ್ಕೃತೀಕರಣಕ್ಕೆ ಒಳಗಾಗುವ ಪ್ರಕ್ರಿಯೆಯಲ್ಲಿ ಇದು ಸಾಮಾನ್ಯ ಎನ್ನಬಹುದು. ಆದರೆ ನಮ್ಮ ಅನನ್ಯತೆಯ ಪ್ರಶ್ನೆ ಬಂದಾಗ ನಮ್ಮತನವನ್ನು ನಾವು ಕಾಪಾಡಿಕೊಳ್ಳುವ ಸಂದರ್ಭದಲ್ಲಿ ನಾವು ಯಾರು? ಹೇಗಿದ್ದೇವೆ? ಈ ಸಮಾಜದಲ್ಲಿ ನಮ್ಮ ಸ್ಥಾನಮಾನವೇನು? ಎಂಬುದನ್ನು ತಿಳಿದು ಅದನ್ನು ಸರಿಪಡಿಸಿಕೊಳ್ಳಲು ಇಲ್ಲವೇ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಶ್ರಮವಹಿಸಬೇಕೆ ಹೊರತು, ಹೆಸರನ್ನು ಮುಚ್ಚಿಟ್ಟು ಕೊಳ್ಳುವುದರಿಂದ ಯಾರಿಗೂ ಲಾಭವಾಗುವುದಿಲ್ಲ. ಅಸ್ಪೃಶ್ಯರಂತೆ ಊರ ಹೊರಗೆ ಹೊಲಗೇರಿಗಳಲ್ಲಿ ವಾಸಿಸುವ ಇವರು ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದಾರೆ. ಇಂದಿಗೂ ಸಮಾಜದಲ್ಲಿ ತಮ್ಮ ಜಾತಿಯ ಹೆಸರನ್ನು ಹೇಳಲೂ ಆಗದೆ ಬಚ್ಚಿಟ್ಟುಕೊಳ್ಳಲೂ ಆಗದೆ ನಡು ನೀರಿನಲ್ಲಿ ನಿಂತಿರುವ ಈ ಸಮುದಾಯದ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕಾಗಿರುವುದು ಇಂದಿನ ಜರೂರತ್ತಾಗಿದೆ. ಏಕೆಂದರೆ ಜಾಗತೀಕರಣ ಕಂಪ್ಯೂಟರೀಕರಣಕ್ಕೆ ಬದಲಾಗುತ್ತಿರುವ ಸಮಾಜದಲ್ಲಿ ಒಂದು ಸಮುದಾಯವು ಮುಖ್ಯವಾಹಿನಿಯಿಂದ ವಂಚಿತವಾಗಿ ಯಾವ ರೀತಿ ಉಸಿರಾಡುತ್ತಿದೆ. ನಮ್ಮ ಹಿಂದೂ ಧರ್ಮದ ಚೌಕಟ್ಟಿನಲ್ಲಿ ವರ್ಣವ್ಯವಸ್ಥೆ ಅಸ್ಪೃಶ್ಯತೆ ಯಾವ ರೀತಿ ಬೆನ್ನುಬಿಡದೆ ಕಾಡುತ್ತಿದೆ. ಧರ್ಮ, ರಾಜಕಾರಣ ಮುಂತಾದ ವಿಷಯಗಳನ್ನು ಕುರಿತು ಒಂದು ಚಿಕ್ಕ ಸಮುದಾಯದ ಪ್ರತಿಕ್ರಿಯೆ ಏನು? ಎಂಬುದನ್ನು ಮೊದಲು ಅರಿಯಬೇಕಾಗಿರುವುದರಿಂದ ಈ ಸಮುದಾಯದ ಅಧ್ಯಯನವು ಮಹತ್ವವನ್ನು ಪಡೆಯುತ್ತದೆ.

"ಖಾಟಿಕರು ಉತ್ತರದಿಂದ ದಕ್ಷಿಣದ ಕಡೆಗೆ ವಲಸೆ ಬಂದವರು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಮಹಮ್ಮದೀಯರ ಮತಾಂತರದ ಪ್ರಕ್ರಿಯೆ. ಮತಾಂತರಕ್ಕೆ ಒಳಪಡದೆ ತಪ್ಪಿಸಿಕೊಂಡು ದಕ್ಷಿಣದಲ್ಲಿ ಹಿಂದೂ ಅರಸರು ಆಳ್ವಿಕೆ ನಡೆಸುತ್ತಿದ್ದರು, ಇದರಿಂದ ಅವರು ಆಶ್ರಯ ಕೋರಿ ಈ ಕಡೆ ವಲಸೆ ಬಂದಿರುವುದಾಗಿ" ಈ ಸಮುದಾಯದ ವಕ್ತೃಗಳು ಹೇಳುತ್ತಾರೆ. ಮತ್ತೆ ಕೆಲವರು ನಾವು ಉತ್ತರದಲ್ಲಿ ರಾಜ್ಯಗಳನ್ನಾಳಿಕೊಂಡು ಸುಖವಾಗಿ ಇದ್ದೆವು. ಆದರೆ ಮಹಮ್ಮದೀಯರ ಅರಸರು ಒಂದೊಂದು ರಾಜ್ಯಗಳನ್ನು ಕಬಳಿಸಿಕೊಂಡು ನಂತರ ನಮ್ಮ ಹಿಂದೂ ಅರಸರ ಪ್ರಾಬಲ್ಯವು ಕ್ಷೀಣಿಸತೊಡಗಿತು. ಆಗ ಮುಸ್ಲಿಂ ರಾಜರು ನಮ್ಮ ಹೆಣ್ಣು ಮಕ್ಕಳನ್ನು ನಮ್ಮನ್ನು ತುಂಬಾ ಹಿಂಸಿಸ ತೊಡಗಿದರು. ಆ ಕಾರಣಕ್ಕೆ ನಾವು ಉತ್ತರದಿಂದ ದಕ್ಷಿಣಕ್ಕೆ ಬರುವಂತಾಯಿತು ಎಂದು ಹೇಳುತ್ತಾರೆ. ಮುಖ್ಯವಾಗಿ ಇಲ್ಲಿ ಧರ್ಮ ಮತ್ತು ಮಹಿಳೆಯರ ಮಾನ ರಕ್ಷಣೆಗಾಗಿ ವಲಸೆ ಬಂದಿರುವುದು ಕಂಡು ಬರುತ್ತದೆ.

"ಇನ್ನು ನಮ್ಮ ವಂಶಜರು ಉತ್ತರ ಭಾರತದಿಂದ ದಕ್ಷಿಣಕ್ಕೆ ವಲಸೆ ಬರಲು ಅತ್ಯಂತ ಪ್ರಬಲ

ಕಾರಣ ಹೀಗಿದೆ, ಹಿಂದೂಸ್ಥಾನದ ಚರಿತ್ರೆಯಲ್ಲಿ ಮೊಘಲರು ಅತ್ಯಂತ ಬಲಾಢ್ಯರಾಗಿದ್ದರು. ೧೫೨೬ರಲ್ಲಿ ಬಾಬರನು ನಮ್ಮ ದೇಶದ ಮೇಲೆ ದಂಡೆತ್ತಿ ಬಂದಾಗ ದಿಲ್ಲಿಯನ್ನು ಲೂದಿ ಮನೆತನದ ಇಬ್ರಾಹಿಮ್ ಲೂದಿ ಆಳುತ್ತಿದ್ದನು. ಪಂಜಾಬದ ದೌಲತ್‌ಖಾನ್ ಮತ್ತು ನಮ್ಮ ಮೇವಾಡದ ರಾಣಾಸಿಂಗನ ಜೊತೆ ಸೇರಿ ಬಾಬರನನ್ನು ೧೫೨೬ರಲ್ಲಿ ಇಬ್ರಾಹಿಮ್ ಲೂದಿಯನ್ನು ಪಾಣಿಪತ್ ಮೊದಲನೇ ಕದನದಲ್ಲಿ ಸೋಲಿಸಿ ದಿಲ್ಲಿಯನ್ನು ವಶಪಡಿಸಿಕೊಂಡು ಮೊಘಲ ಸಾಮ್ರಾಜ್ಯದ ಸ್ಥಾಪನೆಗೈದನು. ಇವನು ೧೫೩೦ರಲ್ಲಿ ತೀರಿಹೋದ. ನಂತರ ಮತ್ತೆ ನಮ್ಮ ಸಾಮ್ರಾಜ್ಯಗಳು ಅಲ್ಲಲ್ಲಿ ತಲೆ ಎತ್ತಿದವು. ಇವನ ಮಗನಾದ ಹುಮಾಯೂನ್ ಸೌಮ್ಯ ಸ್ವಾಭಾವದವನಾಗಿದ್ದನು. ಇವನ ತರುವಾಯ ೧೫೫೬ರಲ್ಲಿ ಅಕ್ಬರನ ಆಳ್ವಿಕೆಯು ಪ್ರಾರಂಭವಾಯಿತು.

ರಜಪೂತ ಅರಸರಲ್ಲಿ ನಮ್ಮ ದೊರೆಗಳಾದ ಮೇವಾಡದವರು ಯಾವತ್ತು ಮುಸ್ಲಿಂಮರಿಗೆ ತಲೆಬಾಗಿದವರಲ್ಲ. ಉದಯಸಿಂಗ್ ರಾಜನು ಮತ್ತೆ ಚಿತ್ತೂರ ಕೋಟೆಯ ಮೇಲೆ ಯುದ್ಧಕ್ಕೆ ಬಂದ ಅಕ್ಬರ ಸೈನ್ಯದೊಂದಿಗೆ ಹೋರಾಡಿ ಸೋತು ಹೋದನು. ಆದರೆ ಹಿಂದೂಗಳ ಅಭಿಮಾನಿ ಮಹಾಪ್ರತಾಪಶಾಲಿ ದೇಶದ ಇತಿಹಾಸದಲ್ಲಿ ಅಚ್ಚಳಿಯದೇ ಉಳಿದ ಮಹಾಚೇತನ. ಕಷ್ಟಗಳನ್ನು ಎದೆಗುಂದದೆ ಎದುರಿಸಿ ಹುಲ್ಲುಬೀಜದ ರೊಟ್ಟಿ ತಿಂದು ಚೇತೋಹಾರಿಯಾಗಿ, ಮೊಘಲರಿಗೆ ಸಿಂಹಸ್ವಪ್ನವಾಗಿ ಹೋರಾಡಿದ ಧೀಮಂತ ನಾಯಕ ಮಹಾರಾಣಾ ಪ್ರತಾಪ ಸಿಂಹನು ೧೫೭೬ರಲ್ಲಿ ಹಲ್ದಿ ಘಾಟಿ ಯುದ್ಧದಲ್ಲಿ ಮೇವಾರವನ್ನು ಮತ್ತೆ ಪಡೆದುಕೊಂಡನು. ಇವನ ಮಗನಾದ ಅಮರಸಿಂಗ್‌ನು ಕೂಡ ಅಪ್ಪಟ ವೀರ ರಾಜನಾಗಿದ್ದನು. ಮಹಾರಾಣಾ ಪ್ರತಾಪಸಿಂಗನ ಚರಿತ್ರೆ ಇಡೀ ದೇಶಕ್ಕೆ ಚಿರಸ್ಮರಣೀಯವಾಗಿದೆ. ಅವನ ಮುಖಂಡತ್ವದಲ್ಲಿ ಅವನ ದಕ್ಷ ಆಡಳಿತದಲ್ಲಿ ವೀರ ಸೇನಾನಿಗಳಾಗಿ ಸೇನಾಪತಿಗಳಾಗಿ ಚಿಕ್ಕಪುಟ್ಟ ಹುದ್ದೆಗಳಲ್ಲಿ ವಿರಾಜಮಾನರಾಗಿ ಕ್ಷಾತ್ರತೇಜದಿಂದ ಮೆರೆಯುತ್ತಿದ್ದ ಯೋಧರೇ ಇಂದಿನ ಸೂರ್ಯವಂಶ ಕ್ಷತ್ರಿಯ ಕಲಾಲ್‌ರು. ಮೇವಾರದ ಕೊನೆಯ ಅರಸ ಅಮರಸಿಂಗನು ೧೬೧೫ರಲ್ಲಿ ಮೊಘಲರಿಗೆ ಸೋತ ನಂತರ ಹಿಂದೂ ಅರಸರಲ್ಲಿ ಭೀತಿಯುಂಟಾಯಿತು. ಅಕ್ಬರನಿಗೆ ಹೆದರಿ ತಾವೇ ತಾವಾಗಿ ತಮ್ಮ ರಾಜ್ಯಗಳನ್ನು ಅವನಿಗೆ ಒಪ್ಪಿಸಲಾಯಿತು. ಬಿಕನಿರ್‌ನ ರಾಜ ಕಲ್ಯಾಣ ಮಹಲ್ ತನ್ನ ಮಗಳನ್ನು ಅಕ್ಬರನಿಗೆ ಕೊಟ್ಟು ಮದುವೆ ಮಾಡಿದನು. ಹೀಗೆ ಹಿಂದುತ್ವವನ್ನು ಕಳೆದು ಕೊಂಡು ವೀರ ಕ್ಷತ್ರಿಯರೆನ್ನುವುದನ್ನು ಮರೆತು ಧರ್ಮಕ್ಕೆ ಅಪಚಾರ ಕಾರ್ಯ ನಡೆದಾಗ ಅನೇಕ ರಜಪೂತ ರಾಜರಲ್ಲಿ, ಕ್ಷತ್ರಿಯ ಸೈನಿಕರಲ್ಲಿ ಧೈರ್ಯ ಇಲ್ಲವಾಯಿತು. ಅನೇಕ ರಾಜರು ಛಿದ್ರ ಛಿದ್ರವಾಗಿ ದಕ್ಷಿಣ ರಾಜ್ಯಗಳ ಕಡೆಗೆ ಪಲಾಯನಗೈದರು. ಕ್ರಮೇಣ ಕ್ಷತ್ರಿಯರ ಆಳ್ವಿಕೆ ಇಳಿಮುಖ ವಾಯಿತು. ಮುಂದೆ ಬಂದ ಮೊಘಲರು ಧರ್ಮಾಂಧರಾಗಿ ಈ ಕ್ಷತ್ರಿಯರ ಮೇಲೆ ದೌರ್ಜನ್ಯಗಳನ್ನು ನಡೆಸಿದರು. ಸ್ತ್ರೀಯರ ಮಾನಭಂಗ ಮಾಡುವುದು, ಹಿಂದೂ ದೇವಾಲಯಗಳನ್ನು ನಿರ್ದಾಕ್ಷಿಣ್ಯವಾಗಿ ನಾಶಪಡಿಸುವುದು, ದಂಡಿಸುವುದು, ಅನೇಕ ಸ್ತ್ರೀಯರನ್ನು ಭೋಗಿಸಿ ತಮ್ಮ ಮತಕ್ಕೆ ಸೇರಿಸಿಕೊಳ್ಳುವುದಕ್ಕೆ

ಪ್ರಾರಂಭಿಸಿದರು. "ಧರ್ಮೋ ರಕ್ಷತಿ ರಕ್ಷಿತಃ" ಎನ್ನುವ ಹಾಗೆ ಧರ್ಮದ ರಕ್ಷಣೆಗಾಗಿ ತರುಣಿಯರ ಮಾನ ರಕ್ಷಣೆಗಾಗಿ ಈ ಸೂರ್ಯವಂಶದ ಯೋಧರು ದಕ್ಷಿಣ ರಾಜ್ಯಗಳಿಗೆ ವಲಸೆ ಬಂದರು. ೧೬ನೇ ಶತಮಾನದಿಂದ ಹಿಡಿದು ೧೮ನೇ ಶತಮಾನದ ವೇಳೆಗೆ ಅನೇಕ ಕ್ಷತ್ರಿಯರು ತಂಡೋಪತಂಡವಾಗಿ ಉತ್ತರ ಭಾರತದಿಂದ ದಕ್ಷಿಣ ರಾಜ್ಯಗಳಿಗೆ ವಲಸೆ ಬಂದರು. ಅದರಲ್ಲಿ ಕೆಲವರು ಮಹಾರಾಷ್ಟ್ರದಲ್ಲಿ, ಕರ್ನಾಟಕದಲ್ಲಿ, ಆಂಧ್ರಪ್ರದೇಶದಲ್ಲಿಯ ರಾಜ್ಯಗಳಲ್ಲಿ ಯೋಧರಾದರು. ಮೈಸೂರನ್ನಾಳುತ್ತಿದ ಟಿಪ್ಪು ಸುಲ್ತಾನರಲ್ಲಿ ಹೈದರಾಬಾದ್ ನಿಜಾಮ್‌ನಲ್ಲಿ ಇದ್ದವರು ನಿಜಾಮಕರ ಆದರು. ಟಿಪ್ಪು ಸುಲ್ತಾನ ನಲ್ಲಿದ್ದವರು ಒತ್ತಾಯದಿಂದ ಮುಸ್ಲಿಂ ಧರ್ಮವನ್ನು ಸ್ವೀಕರಿಸಿ ಅವರಂತೆ ವಿಧಿ-ವಿಧಾನಗಳನ್ನು ಮಾಡ ತೊಡಗಿದ್ದರಿಂದ ಸುಲ್ತಾನ ಕಲಾಲ್‌ರಾದರು. ಹಿಂದೂಸ್ಥಾನವನ್ನು ಸಮಗ್ರವಾಗಿ ಆಳುತ್ತಿದ್ದ ಬ್ರಿಟೀಷರು ೧೮೫೭ರ ಸಿಪಾಯಿ ದಂಗೆಯಿಂಧ ಪಾರಾದ ನಂತರ ಇಂಗ್ಲೆಂಡ್ ರಾಣಿ ವಿಕ್ಟೋರಿಯ ಮಹಾರಾಣಿಯ ಆಳ್ವಿಕೆ ಶುರುವಾಯಿತು. ಅಂದಿನಿಂದ ಸರ್ಕಾರವು ಭಾರತದ ಯಾವುದೇ ಜಾತಿಯಲ್ಲಿಯಾಗಲಿ ಧರ್ಮದಲ್ಲಿ ಆಗಲಿ ಕೈ ಹಾಕುವುದಿಲ್ಲವೆಂದು ವಚನ ನೀಡಿ ಅದರಂತೆ ನಡೆದುಕೊಳ್ಳ ತೊಡಗಿದರು. ಇದರಿಂದ ದೇಶದಲ್ಲಿ ಚಿಕ್ಕ-ಪುಟ್ಟ ರಾಜ್ಯಗಳೊಂದಿಗೆ ದೊಡ್ಡದಾದ ಮೊಘಲ ಸಾಮ್ರಾಜ್ಯವು ಮಣ್ಣುಗೂಡಿತು. ಅಖಂಡ ಹಿಂದೂಸ್ಥಾನವು ಬ್ರಿಟಿಷರ ಏಕಚಕ್ರಾದಿಪತ್ಯದಲ್ಲಿ ಅನೇಕ ಸುಧಾರಣೆಗಳೊಂದಿಗೆ ರಾಜ್ಯವಾಳ ತೊಡಗಿತು. ಹೀಗೆ ನಿರಾಶ್ರಿತರಾಗಿ ದಕ್ಷಿಣಕ್ಕೆ ವಲಸೆ ಬಂದ ಸೂರ್ಯವಂಶ ಕ್ಷತ್ರಿಯರು ನಿರ್ದಿಷ್ಟವಾದ ಉದ್ಯೋಗಗಳಿಲ್ಲದೇ ಭೂರಹಿತರುಗಳಾಗಿ ಅಲೆಮಾರಿಗಳಾದರು. ಹಲವಾರು ಜನರು ನಿರ್ಗತಿಕರಾದರು. ಮೊದಲು ಯೋಧರಾಗಿದ್ದಾಗ ಮಧ್ಯ ಸೇವನೆ ಮಾಡುವುದು, ಮಾಂಸ ತಿನ್ನುವ ಈ ಜನರು ಹತಾಶರಾಗಿ ಕಾಡು-ಮೇಡುಗಳಲ್ಲಿ ತಿರುಗಿ ಬೇಟೆಯನ್ನು ಮಾಡಿ ಬೇಟೆಯಲ್ಲಿ ಸಿಕ್ಕ ಪ್ರಾಣಿ ಮಾಂಸವನ್ನು ತಾವು ತಿಂದು ಉಳಿದಿದ್ದನ್ನು ಬೇರೆಯವರಿಗೆ ಮಾರುವ ಪರಿಪಾಠವನ್ನು ಶುರುಮಾಡಿದರು. ಅದೇ ರೀತಿ ತಮಗಾಗಿ ಸರಾಯಿಯನ್ನು ತಯಾರಿಸಿ ತಾವು ಕುಡಿದು ಉಳಿದದ್ದನ್ನು ಮಾರಾಟ ಮಾಡಲು ಹತ್ತಿದ್ದರು ಈ ರೀತಿಯಾಗಿ ಸರಾಯಿ ಹಾಗೂ ಶೇಂದಿ ವ್ಯಾಪಾರಗಳು ಶುರುವಾಯಿತು"(ಚಿಂತಮಣಿ ಕೆ. ಜೊರಾಪುರ;೨೦೦೫:೧೬೫).

ಮೇಲಿನ ವಿವರಗಳನ್ನು ಗಮನಿಸಿದಾಗ ಈ ಸಮುದಾಯವು ರಾಜಪೂತರ ದೊರೆಗಳನ್ನು ನಮ್ಮವರು ಎಂದು ಗುರುತಿಸುವಿಕೆಯು, ಹಿಂದೂ ರಾಜಪೂತ ದೊರೆಗಳ ಹತ್ತಿರ ಯೋಧರಾಗಿ ದುಡಿಯುವ ಸಮುದಾಯವಾಗಿರುವ ಸಾಧ್ಯತೆ ಇದೆ. ಏಕೆಂದರೆ ಇವರು ಹೇಳಿಕೊಳ್ಳುವುದು ನಾವು ಮೊದಲಿನಿಂದಲೂ ಅಂದರೆ ರಾಣಿ ಚಾಂದ್‌ಬೀಬಿಯ ಕಾಲದಿಂದಲೂ ಸೈನಿಕರಾಗಿ ಕಾರ್ಯನಿರ್ವಹಿಸಿದ್ದೇವೆ ಎಂದು ಹೇಳುತ್ತಾರೆ. ಹಾಗೆಯೇ ನಮ್ಮ ಪಾಳೆಯ ಪಟ್ಟುಗಳು ಇದ್ದವು. ನಾವು ಉತ್ತರದಲ್ಲಿ ಸಣ್ಣ-ಪುಟ್ಟ ರಾಜ್ಯಗಳನ್ನಾಳುತ್ತಿದ್ದೆವು ಎಂದು ತಿಳಿಸುತ್ತಾರೆ. ಹಾಗೆಯೇ ತಮ್ಮ ಸಮುದಾಯದವರು ಯಾರಾದರು ಪರಸ್ಪರ ಭೇಟಿಯಾದಾಗ 'ರಾಮ್ ರಾಮ್ ಮಹಾರಾಜ್' ಎಂದು ಹೇಳುವ ವಾಡಿಕೆ ಇಂದಿಗೂ ಇದೆ ಎಂದು ಸ್ಪಷ್ಟನೆ ಕೊಡುತ್ತಾರೆ. ಇದರಿಂದ ಇದನ್ನು ನಂಬುವಂತಿಲ್ಲ ಆದರೆ ಅಲ್ಲಗಳೆಯೂವಂತೆಯೂ

ಮಾಂಸ ಮಾರಾಟ ಮಾಡುತ್ತ ಬಂದಿದ್ದರೂ ಮುಸ್ಲಿಮರಿಂದ ತಾವು ಬೇರೆಯೇ ಎನ್ನುವುದನ್ನು ಸ್ಪಷ್ಟ ಪಡಿಸಲು ತಮ್ಮನ್ನು ಲಾಡಖಾಟಿಕ್ ಎಂದು ಹೇಳಿಕೊಳ್ಳುತ್ತಲಿದ್ದಾರೆ. ಹಿಂದೂ ಖಾಟಿಕ್ ಎಂಬ ಶಬ್ದ ಪ್ರಯೋಗ ಆ ಕ್ರಾಂತಿಯ ಕಾಲದಲ್ಲಿ ಅಸುರಕ್ಷಿತವಾಗಿತ್ತೆಂಬುದನ್ನು ನಾವು ಗಮನಿಸಬೇಕು"(ಚಿಂತಮಣಿ ಕೆ. ಜೊರಾಪುರ;೨೦೦೫:೧೬೫).

ಮೇಲಿನ ವಿವರಗಳನ್ನು ಗಮನಿಸಿದಾಗ ಸೈನಿಕರಾಗಿರುವಂತಹ ಒಂದು ಸಮುದಾಯವು ರಾಜಸತ್ತೆಯು ಹೋದ ನಂತರ ಅಥವಾ ಯುದ್ಧದ ಅವಶ್ಯಕತೆ ಇಲ್ಲದಿರುವಾಗ ಮಾಂಸ ಮಾರಾಟವನ್ನು ಉಪ ಜೀವನಕ್ಕಾಗಿ ಆಯ್ದುಕೊಂಡಿರುವ ಸಾಧ್ಯತೆ ಇದೆ. ಇದೇ ಉದ್ಯೋಗವನ್ನು ಇವರು ಮುಂದುವರಿಸಿಕೊಂಡು ಬಂದಾಗ ಖಾಟಿಕರು ಎಂದು ಸಮಾಜ ಇವರನ್ನು ಗುರುತಿಸಿರಬೇಕು. ಇದೇ ಹೆಸರು ಈ ಸಮುದಾಯಕ್ಕೆ ಶಾಶ್ವತವಾದ ಒಂದು ಗುರುತು ಹೆಸರು ತಂದು ಕೊಟ್ಟಿರುವ ಸಾಧ್ಯತೆ ಇದೆ. ಹಾಗೆಯೇ ಉತ್ತರದಿಂದ ದಕ್ಷಿಣಕ್ಕೆ ಬಂದಾಗ ಬೇರೆ ಯಾವ ಉದ್ಯೋಗ ಮಾಡಲು ತಿಳಿಯದ ಇವರು ಇದೇ ಉದ್ಯೋಗ ಮುಂದುವರಿಸಿಕೊಂಡು ಹೋಗಿರುವುದರಿಂದ ಖಾಟಿಕರು ಕಟುಗರು ಎಂಬ ಹೆಸರು ಬಂದಿರಬಹುದು.

ಅಂದರೆ ಮಾಂಸ ಮಾರಾಟ ಮಾಡುವ ಉದ್ಯೋಗವನ್ನು ಇವರು ಮುಸ್ಲಿಮರ ಕಾಲದಿಂದಲೂ ಮಾಡುತ್ತ ಬಂದಿರುವ ಜೊತೆಯಲ್ಲೇ ಯೋಧರಾಗಿಯೂ ಕಾರ್ಯನಿರ್ವಹಿಸುತ್ತಿದ್ದ ಮಾಹಿತಿಯನ್ನು ಗಮನಿಸಿದರೆ, ಉತ್ತರದಿಂದ ದಕ್ಷಿಣಕ್ಕೆ ಬಂದಾಗ ಇವರು ಸಹಜವಾಗಿ ಈ ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗಿರುವ ಸಾಧ್ಯತೆ ಇದೆ. ಏಕೆಂದರೆ ರಾಜ್ಯಡಳಿತದ ಸಂದರ್ಭದಲ್ಲಿ ಯಾವಾಗಲೂ ಯುದ್ಧ ಮಾಡುವ ಸಂದರ್ಭವಿರುವುದಿಲ್ಲ. ಶತ್ರುಗಳು ಯುದ್ಧಕ್ಕೆ ಬಂದ ಸಮಯದಲ್ಲಿ ಯುದ್ಧದಲ್ಲಿ ಯೋಧರಾಗಿ ತಲ್ಲೀನರಾಗಿರುತ್ತಾರೆ. ಯುದ್ಧವಿಲ್ಲದ ಸಮಯದಲ್ಲಿ ಸಹಜವಾಗಿ ಮಾಂಸ ಮಾರಾಟ ಮಾಡುವಿಕೆಯನ್ನು ಉದ್ಯೋಗವನ್ನಾಗಿ ಈ ಸಮುದಾಯವು ಆರಿಸಿಕೊಂಡಿರುವ ಸಾಧ್ಯತೆಯಿದೆ. ಹಾಗಾಗಿ ಇವರು ತಮ್ಮ ಧರ್ಮ ಮತ್ತು ಮಹಿಳೆಯರ ಮಾನ ರಕ್ಷಣೆಗಾಗಿ ದಕ್ಷಿಣಕ್ಕೆ ಬಂದಾಗ ಕಾಡು-ಮೇಡುಗಳಲ್ಲಿ ಅಲೆದು ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ತಮ್ಮ ಹಸಿವನ್ನು ನೀಗಿಸಿಕೊಂಡ ನಂತರ, ಉಳಿದ ಮಾಂಸವನ್ನು ಮಾರುವಿಕೆಯಲ್ಲಿ ತೊಡಗಿಸಿಕೊಂಡರು. ಇದೇ ಉದ್ಯೋಗವನ್ನು ಮುಂದುವರಿಸಿ ಬಂದಿರುವ ಸಾಧ್ಯತೆ ಇದೆ. ಈ ಸಮುದಾಯದ ವಕ್ತೃಗಳು ಸಹ ಇದೇ ರೀತಿಯಾಗಿ ಮಾಹಿತಿಯನ್ನು ನೀಡುತ್ತಾರೆ. "ನಾವು ಉತ್ತರದಲ್ಲಿ ಯೋಧರಾಗಿದ್ದೆವು ನಂತರ ನಮ್ಮ ಹಿಂದೂ ಅರಸರ ಪ್ರಾಬಲ್ಯ ಕ್ಷೀಣಿಸತೊಡಗಿದಾಗ, ದಕ್ಷಿಣದಲ್ಲಿ ಹಿಂದೂ ಅರಸರ ಆಶ್ರಯವನ್ನು ಕೋರಿ ನಮಗೆ ರಕ್ಷಣೆಯನ್ನು ನೀಡುತ್ತಾರೆಂಬ ಭರವಸೆಯಲ್ಲಿ ಈ ಕಡೆ ವಲಸೆಯಾಗಿ ಬಂದೆವು. ಉತ್ತರದಿಂದ ದಕ್ಷಿಣಕ್ಕೆ ಅಲೆಮಾರಿಗಳಾಗಿ ಬರುವಾಗ ದಾರಿಯ ಉದ್ದಕ್ಕೂ ಹಸಿವನ್ನು ನೀಗಿಸಿಕೊಳ್ಳುವ ಸಲುವಾಗಿ ನಾವು ಯೋಧರಾಗಿರುವುದರಿಂದ ಕೈಯಲ್ಲಿ ಹಾಗೂ ಭುಜದಲ್ಲಿ ಬಿಲ್ಲು ಹಾಗೂ ಬಾಣಗಳು ಸದಾ ನಮ್ಮ ಜೊತೆಯಲ್ಲಿರುವುದಾಗಿ ಕಾಡಿನಲ್ಲಿರುವ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡಿ ಮಾಂಸವನ್ನು

ತಿನ್ನುತ್ತ ಹಾಗೂ ನಮ್ಮವರಿಗೆ ಮದ್ಯ ತಯಾರಿಕೆಯು ಸಹ ತಿಳಿದಿತ್ತು, ಇದರಿಂದ ಕಾಡಿನಲ್ಲಿ ಸಂಚರಿಸುತ್ತ ಪ್ರಾಣಿ-ಪಕ್ಷಿಗಳ ಮಾಂಸ ಹಾಗೂ ಮದ್ಯ ಸೇವನೆಯಿಂದ ಸಾಗುತ್ತ ಬರುವಾಗ ಅಲೆಮಾರಿತನ ದಿಂದ ಕೆಲವು ಕುಟುಂಬಗಳು ಮಾರ್ಗಮಧ್ಯದಲ್ಲಿ ನೆಲೆಯೂರಲು ಮುಂದಾದವು. ಬೇಟೆಯಾಡಿದ ಪ್ರಾಣಿ-ಪಕ್ಷಿಗಳ ಮಾಂಸ ಹಾಗೂ ಮದ್ಯವನ್ನು ತಮ್ಮ ಆಹಾರವನ್ನಾಗಿ ಬಳಸಿಕೊಂಡು ಹೆಚ್ಚುವರಿಯಾಗಿ ಉಳಿದಂತಹ ಮಾಂಸ ಹಾಗೂ ಮದ್ಯವನ್ನು ತಾವು ಬೀಡುಬಿಟ್ಟಿರುವ ಪ್ರದೇಶದ ಜನರಿಗೆ ಮಾರಾಟ ಮಾಡುವ ಮೂಲಕ ಇವರ ಜೀವನಕ್ಕಾಗಿ ಬೇಕಾಗುವ ಇತರೆ ಆಹಾರ ಪದಾರ್ಥಗಳನ್ನು ತೆಗೆದು ಕೊಳ್ಳುತ್ತಿದ್ದರು. ಹೀಗೆಯೇ ಇವರು ಅಲೆಮಾರಿತನದ ದಾರಿಯನ್ನು ಕ್ರಮಿಸಿದರು. ನಂತರದಲ್ಲಿ ಊರಿನ ಹೊರ ಭಾಗಗಳಲ್ಲಿ ತಮ್ಮ ವ್ಯಾಪಾರವನ್ನು ಪ್ರಾರಂಭಿಸಿದರು. ಇದರಿಂದ ಚಾಕಣಾ ಮಾರುವ ಹಾಗೂ ಮಾಂಸ ಮಾರುವ ಕ್ರಿಯೆಯು ಪ್ರಾರಂಭವಾಯಿತು" ಎಂದು ಬೆಂಗಳೂರಿನ ಮಾಹಿತಿದಾರರಾದ ಕೃಷ್ಣೋಜೀರಾವ್ ಖಾಟಿಕ್ ಹೇಳುತ್ತಾರೆ.

ಹೀಗೆ ಮಾಂಸವನ್ನು ಕಡಿದು ಮಾರುವ ವೃತ್ತಿಯ ಹಿನ್ನಲೆಯಲ್ಲಿ ಕಟುಕ, ಕಟುಗ ಮುಂದೆ ಖಾಟಿಕ್, ಕಾಟಿಕ್ ಎಂದು ಬಂದಿರಬಹುದಾಗಿದೆ. ವಾರಣಾಸಿಯ ಸಂಸದರು ಮತ್ತು ಅಖಿಲ ಭಾರತ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಧ್ಯಕ್ಷರಾಗಿದ್ದಂತ ಡಾ. ಬಿಜಯ್ ಸೋನಕರ್ ಶಾಸ್ತ್ರೀಯವರು ಬಾಗಲಕೋಟೆಯಲ್ಲಿ ನಡೆದ ಖಾಟಕ್ ಸಮುದಾಯದ ಸಮ್ಮೇಳನದಲ್ಲಿ ತಿಳಿಸಿರುವ ಪ್ರಕಾರ ಖಾಟ್ ಮತ್ತು ಜಾಟ್ ಎಂಬ ಬಲಿಷ್ಠ ಜನಾಂಗವು ಮುಂದುವರೆದು ಖಾಟ್ ಎಂಬ ಜನಾಂಗವೇ ಖಾಟಿಕ್ ಆಯಿತು ಎಂದು ತಿಳಿಸುತ್ತಾರೆ.

ಮಾಮಾಚಂದ್ ರಿವಾಡಿಯಾ ಅವರು ತಮ್ಮ "ಖಾಟಿಕ್ ಸಮಾಜ ಕ ಇತಿಹಾಸ" ಎಂಬ ಪುಸ್ತಕದಲ್ಲಿ ಕೆಲವು ವದಂತಿಗಳ ಮೂಲಕ 'ಖಾಟಿಕ್' ಎಂಬ ಪದ ಹೇಗೆ ಬಂತೆಂಬುದನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ. "ಸೂರ್ಯವಂಶಿ ಮಹಾರಾಜನಾದ ಖಟವಂಗನ ವಂಶಜರೇ ಖಾಟಿಕರು. ಮುಖ್ಯವಾಗಿ ಮೊಘಲರ ಕಾಲದಲ್ಲಿ ತಮ್ಮ ಮಕ್ಕಳ ಮತ್ತು ಮಹಿಳೆಯರ ಪ್ರಾಣ ರಕ್ಷಣೆ ಮಾಡುವ ಸಲುವಾಗಿ ಕುರಿ-ಮೇಕೆಗಳನ್ನು ಸಾಕುವುದು ಮತ್ತು ಅದರ ಮಾಂಸವನ್ನು ಮಾರಾಟ ಮಾಡುವುದಾಗಿ ಪ್ರಾರಂಭಿಸಿದರು. ಇದರಿಂದಾಗಿ ಜನ ಇವರನ್ನು ಕಟುಗರೆಂದು ಕರೆಯಲು ಪ್ರಾರಂಭಿಸಿದರು. ಇದಕ್ಕಿಂತ ಮುಂಚೆ ಇವರು ತರಕಾರಿ ಮತ್ತು ಹಣ್ಣು ಹಂಪಲಗಳನ್ನು ಮಾರಾಟ ಮಾಡುತ್ತಿದ್ದರು. ೩೬೦ ಗೋತ್ರಗಳನ್ನು ಹೊಂದಿರುವ ಇವರನ್ನು ಕ್ಷತ್ರಿಯ ಕುಲದ ದಶರಥ ರಾಮನ ವಂಶಜರು ಎಂದು ಕರೆದುಕೊಳ್ಳುತ್ತಾರೆ".

ವದಂತಿಗಳು : ಉತ್ತರ ಭಾರತದಲ್ಲಿ ಪ್ರಚಲಿತವಿರುವ ವದಂತಿಗಳ ಪ್ರಕಾರ

೧ ಅಲೆಗ್ಸಾಂಡರ್ (ಸಿಕಂದರ್) ಎಂಬ ರಾಜ ಹಿಂದೂಸ್ಥಾನದ ಮೇಲೆ ದಾಳಿ ಮಾಡಿದಾಗ ಇಲ್ಲಿಯ ಈ ಜನರು ಊರಿನ ಹೊರಗೆ ಗುಡಿಸಲು ಹಾಕಿಕೊಂಡು ವಾಸಿಸತೊಡಗಿದರು. ನಗರವನ್ನು

ಕೊಳ್ಳೆ ಹೊಡೆದು ನಂತರ ಈ ಗುಡಿಸಲಿನತ್ತ ಸಿಕಂದರನ ಸೈನಿಕರು ಬಂದರು. ಆಗ ಗುಡಿಸಲುಗಳ ಹೊರಗಡೆ ಹಂದಿಗಳನ್ನು ಕಟ್ಟಿರುವನ್ನು ನೋಡಿ ಅವರ ಕಣ್ಣಲ್ಲಿ ಕಟುಕಿದಂತಾಯಿತು. ಈ ಕಟುಕಿ ಎಂಬ ಪದದಿಂದ ಖಟಿಕ್ ಶಬ್ದ ಉತ್ಪತ್ತಿಯಾಯಿತು.

- ಉತ್ತರ ಪ್ರದೇಶದಲ್ಲಿ ಪ್ರಚಲಿತವಿರುವ ವದಂತಿ ಪ್ರಕಾರ ಮೊಘಲರ ಆಳ್ವಿಕೆಯಲ್ಲಿ ಒಬ್ಬ ಹಿಂದೂ ಮಂತ್ರಿ ಇದ್ದನು. ಮಂತ್ರಿಗೊಬ್ಬಳು ಸುಂದರಿಯಾದ ಮಗಳಿದ್ದಳು. ಬಾದಶಾಹನ ಮಗ ಈಕೆಯನ್ನು ಮೋಹಿಸಿದ ನಂತರ ಮದುವೆಯಾಗಬೇಕೆಂದು ಇಚ್ಛಿಸಿದ. ಇದರಿಂದ ಹಿಂದೂ ಮಂತ್ರಿ ಚಿಂತಾಕ್ರಾಂತನಾದ. ಇದನ್ನು ತಿಳಿದ ಮಗಳು ತಂದೆಯನ್ನು ಚಿಂತಿಸಬೇಡಿ ಬಾದಶಾಹನಿಗೆ ನನ್ನ ಮಗಳು ಮದುವೆಗೆ ಸಿದ್ಧ ಎಂದು ಸಂದೇಶ ಕಳಿಸಲು ಕೇಳಿಕೊಂಡಳು. ಮದುವೆ ನಮ್ಮ ಜಾತಿ ಮತ್ತು ಗೋತ್ರದ ಪ್ರಕಾರವೇ ನಡೆಯುವುದೆಂದು ತಿಳಿಸಿದರು. ಇದನ್ನು ಬಾದಶಹನು ಒಪ್ಪಿಕೊಂಡ. ಬಾದಶಾಹನ ಮೆರವಣಿಗೆ ರಾಜಪೂತ ಪರಂಪರೆಯಂತೆ ಹಿಂದೂ ಮಂತ್ರಿಯ ಮನೆಯನ್ನು ಪ್ರವೇಶಿಸಿತು. ಎಲ್ಲರನ್ನು ಆದರದಿಂದ ಸ್ವಾಗತಿಸಿದ ಮಂತ್ರಿ ಒಂದು ಹಂದಿಯ ಮರಿಯನ್ನು ಮದುಮಗನ ಮುಂದೆ ಜೋರಾಗಿ ನೆಲಕ್ಕೆ ಎತ್ತಿ ಹೊಡೆದನು. ಹಂದಿಮರಿ ಒದ್ದಾಡುತ್ತ ರಕ್ತಕಾರಿ ಪ್ರಾಣಬಿಟ್ಟಿತು. ಈ ಹಂದಿ ಮರಿಯ ಮಾಂಸವನ್ನು ಪ್ರಸಾದವೆಂದು ಎಲ್ಲ ಬೀಗರಿಗೆ ಕಳಿಸಿದಾಗ ಅವರು ಅದನ್ನು ಸ್ವೀಕರಿಸಲಿಲ್ಲ. ಏಕೆಂದರೆ ಹಂದಿ ಮುಸಲ್ಮಾನರಿಗೆ ಅಪವಿತ್ರವಾದುದು. ಇದರಿಂದ ಅವರ ಮನಸ್ಸು ಹುಳಿಯಾಯಿತು. ಈ ದೃಶ್ಯ ಅವರ ಮನ ಕಲುಕಿತ್ತು. ಆದ್ದರಿಂದ ಮದುವೆ ಮುಂದುವರೆಯದೆ ಮೆರವಣಿಗೆ ಮರಳಿ ಹೋಯಿತು. ಅವರು ಕಣ್ಣು ಕಟುಕಿದಂತ ಈ ದೃಶ್ಯ 'ಕಟುಕ' ಖಾಟಿಕ್‌ವೆಂದು ಮುಂದೆ ಪ್ರಚಲಿತವಾಯಿತು.

- ಪೂರ್ವೋತ್ತರ ಮತ್ತು ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಕಥೆ ಎಂದರೆ ಇಬ್ಬರು ಕ್ಷತ್ರಿಯರಾದಂತ ಸಹೋದರರು ಕೂಡಿಕೊಂಡು ಬೇಟೆಯಾಡಲು ಕಾಡಿಗೆ ತೆರಳಿದರು. ಅರಣ್ಯದಲ್ಲಿ ಒಂದು ಹುಲಿಯನ್ನು ಬಾಣದಿಂದ ಹೊಡೆದರು. ಕೆರಳಿದ ಹುಲಿ ಇವರ ಮೇಲೆ ಎರಗಿತು. ಅವರಲೊಬ್ಬನನ್ನು ಹಿಡಿದುಕೊಂಡಿತು, ಮತ್ತೊಬ್ಬ ತನ್ನ ಅಣ್ಣನನ್ನು ಹುಲಿಯಿಂದ ತಪ್ಪಿಸಲು ಪ್ರಯತ್ನಿಸದೆ, ಒಂದು ಮುರಿದ ಮರದ ಮಂಚದ ಕೆಳಗೆ ಅವಿತುಕೊಂಡನು. ಇದನ್ನು ತಿಳಿದ ಮನೆಯವರು ಅವನಿಗೆ ಛೀಕಾರ ಹಾಕಿದರು. ಮರದ ಮಂಚದ ಕೆಳಗೆ ಅವಿತುಕೊಂಡಿರುವುದರಿಂದ ಅವನನ್ನು ಹಾಗೂ ಅವನ ವಂಶದವರನ್ನು 'ಖಟಿಕ್' ಎಂದು ಕರೆಯಲಾಯಿತು(ಮಂಚಕ್ಕೆ 'ಖಾಟ್' ಎಂದು ಹಿಂದಿಯಲ್ಲಿ ಕರೆಯುವರು).

- ಸೂರ್ಯವಂಶಿ ರಾಜನಾದ ರಾಮನ ವಂಶದ ಒಬ್ಬನಿಂದ ಗುರು ವಶಿಷ್ಠರೊಮ್ಮೆ ದಾನ ಬೇಡುತ್ತಾರೆ. ಅವನು ಎಲ್ಲವನ್ನು ವಸಿಷ್ಠರಿಗೆ ದಾನ ಮಾಡುತ್ತಾನೆ. ಆದರು ವಷಿಷ್ಠರಿಗೆ

ಇದರಿಂದ ತೃಪ್ತಿಯಾಗದೇ ಮತ್ತೇನಾದರು ಉಳಿದಿದೆಯೇ ಎಂದು ಪ್ರಶ್ನಿಸುತ್ತಾರೆ. ಆಗ ಅವನು ಎಲ್ಲವನ್ನು ನಿಮಗೆ ದಾನವಾಗಿ ನೀಡಿದ್ದೇನೆ ಗುರುಗಳೆ. ಆದರೆ ಒಂದು ಮಂಚ ಮಾತ್ರ ಉಳಿದಿದೆ ಎನ್ನುತ್ತಾನೆ. ಇದರಿಂದ ಕೋಪಗೊಂಡ ಗುರುಗಳಾದ ವಶಿಷ್ಠರು ಎಲೆ ಪಾಪಿ ಮಂಚವನ್ನು ಉಳಿಸಿಕೊಂಡೆಯಲ್ಲ ಆದ್ದರಿಂದ ನಿನ್ನ ಮುಂದಿನ ವಂಶವೆಲ್ಲಾ ಮಂಚದ ಹೆಸರಿನಿಂದಲೇ ಗುರುತಿಸಿಕೊಳ್ಳುವಂತಾಗಲಿ ಎಂದು ಶಾಪ ನೀಡುತ್ತಾನೆ (ಮಂಚಕ್ಕೆ `ಖಾಟ್' ಎಂಬ ಹೆಸರಿನಿಂದ ಕರೆಯುತ್ತಾರೆ. ಇದರಿಂದ ಖಾಟಿಕ್ ಪದ ಬಂದಿದೆ. ದಕ್ಷಿಣ ಭಾರತದವರು ತಮ್ಮನ್ನು ಖಾಟಿಕ್ ಎಂದು ಕರೆದುಕೊಳ್ಳುತ್ತಾರೆ).

೨ ಮಹಾಭಾರತದ ಕಾಲದಲ್ಲೊಮ್ಮೆ ಒಂದು ಘಟನೆ ನಡೆಯಿತು. ಒಬ್ಬ ರಾಜನ ಮನೆಯಲ್ಲಿ ಕಥೆಯನ್ನು ಹೇಳಲಾಗುತ್ತಿತ್ತು ನಂತರ ಪ್ರಸಾದವನ್ನು ಹಂಚುತ್ತಿದ್ದರು. ಯಾರೋ ಪ್ರಸಾದ ರೂಪದಲ್ಲಿ ಕುರಿಮಾಂಸವನ್ನು ಬೇಡಿದರು. ಆಗ ಕುರಿಕಡಿಯುವವನೊಬ್ಬನನ್ನು ಕರೆದು ಒಂದು ಕುರಿಯನ್ನು ಕಡಿಸಿದರು. ಆಗ ಆ ಕುರಿಕಡಿಯುವವನನ್ನು 'ಖಾಟಿಕ್' ಎಂದು ಕರೆಯಲಾಯಿತು.

ಮೂಲದ ಬಗ್ಗೆ ಸಿಗುವ ಕಥೆ : "ಸೂರ್ಯದೇವರ ಬೆಳಕು ಭೂಮಿಯನ್ನು ತಲುಪುತ್ತಿಲ್ಲ ಕಪ್ಪುಗುಡ್ಡದ ಮೇಲಿರುವ ಕುರಿಯು ಬೆಳಕು ಬರಲು ಅಡ್ಡಿಯಾಗುತ್ತಿದೆ. ಹಾಗಾಗಿ ಆ ಕಪ್ಪುಗುಡ್ಡದ ಮೇಲಿರುವ ಕುರಿಯನ್ನು ಸಂಹರಿಸಬೇಕೆಂದು ದೇವತೆಗಳು ವಿಠೋಬನನ್ನು ನೇಮಿಸಿ ಕಳಿಸಿದರು. ದೇವತೆಗಳ ಆದೇಶದ ಮೇರೆಗೆ ಕಪ್ಪು ಗುಡ್ಡದ ಮೇಲೆ ಮೇಯುತ್ತಿರುವ ಕುರಿಯನ್ನು ವಿಠೋಬ ಕಡಿದನು. ಹೀಗೆ ಕುರಿಯನ್ನು ಒಂದೇ ಏಟಿಗೆ ಕಡಿದಾಗ ಅಲ್ಲಿ ಸಾಲಿಗ್ರಾಮವು ದೊರೆಯಿತು. ಮುಂದೆ ಈ ವಿಠೋಬನನ್ನು ಅನುಸರಿಸಿ ಖಾಟಿಕರು ಈ ಕಾಯಕವನ್ನೇ ಮುಂದುವರೆಸಿದರು. ನಂತರ ಸಾಲಿಗ್ರಾಮವನ್ನು ತೂಕದ ಕಲ್ಲಾಗಿ ಬಳಸಲಾಯಿತು.

ಈ ಕಥೆಯಲ್ಲಿ ರಾಕ್ಷಸನನ್ನು ಸಂಹರಿಸಲು ವಿಠೋಬನನ್ನು ದೇವತೆಗಳು ನೇಮಿಸಿರುವುದು ರಾಕ್ಷಸನನ್ನು ಕುರಿಗೆ ಹೋಲಿಸಿರುವುದು ಕಂಡು ಬರುತ್ತದೆ. ಹಾಗೆಯೇ ಖಾಟಿಕರು ಉಪಯೋಗಿಸುವ ತೂಕದ ಕಲ್ಲು ಸಾಲಿಗ್ರಾಮದಿಂದ ಬಂದಿರುವುದಾಗಿ ತಿಳಿದು ಬರುತ್ತದೆ"(ಸಿರಾಜ್-ಉಲ್-ಹಸನ;೧೯೨೦:೨೨೩).

ಖಾಟಿಕ್ ಜನಾಂಗದ ಮೂಲವನ್ನು ಶೋಧಿಸುವಾಗ ಸಿಗುವ ಇನ್ನೊಂದು ಆಧಾರವೆಂದರೆ ಅವರ ಮೂಲ ಪುರುಷ ಧರ್ಮವ್ಯಾಧನ ಕಥೆ ಅದು ಈ ಕೆಳಗಿನಂತಿದೆ.

ಒಂದು ಊರಿನಲ್ಲಿ ಕೌಶಿಕನೆಂಬ ಬ್ರಾಹ್ಮಣನಿದ್ದನು. ಅವನು ವೇದಶಾಸ್ತ್ರಗಳನ್ನು ಅಭ್ಯಾಸ ಮಾಡಿದವನಾದರೂ ಸಹ ವಿದ್ಯೆಯಲ್ಲಿ ಅದ್ವಿತೀಯ ಸಾಧನೆ ಮಾಡಬೇಕೆಂಬ ಛಲದಿಂದ ತನ್ನ ವಯಸ್ಸಾದ ತಾಯಿ-ತಂದೆಯನ್ನು ಬಿಟ್ಟು ಬಂದು ತಪಸ್ಸನ್ನು ಆಚರಿಸುತ್ತಿದ್ದನು.

ಒಮ್ಮೆ ಕೌಶಿಕನು ವೇದ ಪಾರಾಯಣ ಮಾಡುತ್ತಿರುವಾಗ ಮೇಲೆ ಮರದಲ್ಲಿ ಕುಳಿತ ಬಲಾಕ ಪಕ್ಷಿಯು ಚಿಲಿಪಿಲಿಗುಟ್ಟಿತು. ಅನಂತರ ತಪಸ್ಸಿಗೆ ಕುಳಿತ ಕೌಶಿಕರ ಮೇಲೆ ಮಲ ವಿಸರ್ಜನೆ ಮಾಡಿತು. ಅದರಿಂದ ಕುಪಿತನಾದ ಕೌಶಿಕರು ಅದನ್ನು ತಮ್ಮ ಕೆಂಗಣ್ಣಿನಿಂದ ನೋಡಿದಾಗ ಅದು ಅಲ್ಲಿಯೇ ಸುಟ್ಟು ಭಸ್ಮವಾಯಿತು. ಅನಂತರ ಕೌಶಿಕರ ಸಿಟ್ಟು ಕಡಿಮೆಯಾದಾಗ ಅವರಿಗೆ ಸಹ ಪಶ್ಚಾತಾಪವಾಯಿತು. ಆದರೆ ತಮ್ಮ ಈ ಸಾಧನೆಯ ತಪಸ್ಸಿನ ಶಕ್ತಿಯ ಪ್ರಯೋಗದಿಂದ ಆದ ಪಕ್ಷಿಯ ಸುಡುವಿಕೆಯಿಂದ ಅವರಿಗೆ ಸಂತೋಷವಾಯಿತು. ಹೀಗೆ ಅಂದು ಮಧ್ಯಾಹ್ನದ ಸಮಯದಲ್ಲಿ ಕೌಶಿಕನು ಭಿಕ್ಷಾಟನೆಗಾಗಿ ಭಿಕ್ಷೆಯನ್ನು ಬೇಡಲು ಒಂದು ಮನೆಯ ಮುಂದೆ ಬಂದು ಭವತಿ ಭಿಕ್ಷಾಂದೇಹಿ ಎಂದು ಕೂಗಿದನು. ಆಗ ತಾನೆ ಬಂದ ಆ ಮನೆಯ ಯಜಮಾನ ಪತ್ನಿಯು ಗಂಡನ ಸೇವೆಯಲ್ಲಿದ್ದಳು. ಇದರಿಂದ ಭಿಕ್ಷೆಯನ್ನು ತಂದು ನೀಡಲು ಸ್ವಲ್ಪ ತಡವಾಯಿತು. ಇದರಿಂದ ಕುಪಿತರಾಗಿ ಕೌಶಿಕರು ಮನೆಗೆ ಬಂದ ಅತಿಥಿಗೆ ಅವಮಾನವಾಯಿತು ಎಂದು ಅಸಮಾಧಾನದಿಂದ ಆಕೆಯನ್ನು ಸಹ ತಮ್ಮ ಉಗ್ರ ಕೆಂಗಣ್ಣಿನಿಂದ ನೋಡಿದನು. ಆಗ ಆ ಪತಿವ್ರತೆಯು "ಅಯ್ಯಾ ಸ್ವಾಮಿ ತಾವು ಹೀಗೆ ತಮ್ಮ ಕೆಂಗಣ್ಣಿನಿಂದ ನೋಡಿದರೆ ಸುಟ್ಟು ಭಸ್ಮವಾಗಲು ನಾನು ಬಲಾಕ ಪಕ್ಷಿಯಲ್ಲ" ಎಂದು ಹೇಳಿದಳು. ಕೌಶಿಕರಿಗೆ ತಮ್ಮ ದುರಹಂಕಾರದ ಅರಿವು ಮೂಡಿತು. ಆದರೆ ನಾನು ಸುಟ್ಟ ಪಕ್ಷಿಯ ವಿಷಯ ಈ ಸಾತ್ವಿಕ ಮಹಿಳೆಗೆ ಹೇಗೆ ತಿಳಿಯಿತೆಂದು ಆಶ್ಚರ್ಯವಾಯಿತು.

ಮನದಲ್ಲಿ ಗೊಂದಲವಾದಾಗ ಅವಳನ್ನೇ ಕೇಳಿದರಾಯಿತು ಎಂದು ಆ ಕ್ಷಣ ಅವಳನ್ನೇ "ನಾನು ಬಲಾಕ ಪಕ್ಷಿಯನ್ನು ನನ್ನ ಕೆಂಗಣ್ಣಿನಿಂದ ಕೊಂದ ವಿಷಯವನ್ನು ನಿನಗೆ ಹೇಗೆ ತಿಳಿಯಿತು" ಎಂದು ಕೇಳಿದನು. ಆಗ ಅವಳು ನಾನು ಪತಿವ್ರತೆಯಾಗಿ ನನ್ನ ಧರ್ಮವನ್ನು ಮಾಡಿದ್ದರಿಂದಲೇ ಇದನ್ನು ತಿಳಿಯಲು ಸಾಧ್ಯವಾಯಿತು. ಆದರೆ ನೀನು ವ್ಯರ್ಥವಾಗಿ ಇಂತಹ ಅಮೋಘ ಶಕ್ತಿಯನ್ನು ಹಾಳು ಮಾಡುತ್ತಾ ಸಮಯವನ್ನು ಹಾಳು ಮಾಡುತ್ತಲಿರುವೆ. ನಿನಗೆ ಯೋಗ್ಯವಾದ ಧರ್ಮದ ಬಗ್ಗೆ ತಿಳಿಯಬೇಕಾದರೆ ನೀನು ಈಗಲೇ ಮಿಥಿಲಾ ನಗರದಲ್ಲಿರುವ ಧರ್ಮವ್ಯಾಧನನ್ನು ನೋಡು ಎಂದಳು. ಕೌಶಿಕನು ತನಗೆ ಬುದ್ಧಿ ಹೇಳಿದ ಸ್ತ್ರೀಯ ಮಾತಿನಂತೆಯೇ ಏನನ್ನು ಉತ್ತರಿಸದೇ ಅವಳ ಮಾತಿನ ಮರ್ಮವನ್ನು ತಿಳಿಯಲು ಮಿಥಿಲಾ ಪಟ್ಟಣಕ್ಕೆ ಬಂದನು. ಅಲ್ಲಿ ಪ್ರಸಿದ್ಧನಾದ ಧರ್ಮವ್ಯಾದನು ಮಾಂಸದ ಅಂಗಡಿಯಲ್ಲಿ ಕಟುಕನಾಗಿದ್ದನು. ಕೌಶಿಕರನ್ನು ಕಂಡ ಧರ್ಮವ್ಯಾಧನು ತಮಗೆ ಪತಿವ್ರತೆಯಾದ ಆ ಸ್ತ್ರೀಯು ನನ್ನ ಬಳಿಗೆ ಕಳಿಸಿದಳಲ್ಲವೇ ಎಂದು ಕೇಳಿದನು. ಕೌಶಿಕರಿಗೆ ಆಶ್ಚರ್ಯವಾಯಿತು. ನನಗೆ ಅವಳು ಹೇಳಿ ಕಳಿಸಿದ ವಿಷಯ ಇವನಿಗೆ ಹೇಗೆ ತಿಳಿಯಿತು ಎಂದು ಚಿಂತಿಸುತ್ತ, ಇವರನ್ನೇ ನಾನು ಕೇಳಿದರಾಯ್ತು ಎಂದು ಕೊಂಡನು. ತನಗೆ ನನ್ನ ತಪ್ಪಿನ ಅರಿವಾಯಿತು. ಆದರೆ ನಾನು ಮಾಡಬೇಕಾದ ಮುಂದಿನ ಕಾರ್ಯವನ್ನು ತಿಳಿಸಿರಿ ಎಂದನು. ಆಗ ಧರ್ಮವ್ಯಾಧನು "ನೀವು ಬಹಳಷ್ಟು ವಿದ್ಯೆ ಕಲಿತವರು ನೀವು ತಿಳಿಯಲಾರದ್ದಿಲ್ಲ ಆದರೆ ಈಗ ನೀವು ತಿಳಿಯುವ ಧರ್ಮ ರಹಸ್ಯವು ಈ ರೀತಿಯಲ್ಲಿದೆ" ಕೇಳಿರಿ ಎಂದು ವಿವರವಾಗಿ ತಿಳಿಸಿದನು.

ನನಗೆ ತಿಳಿದಿರುವಂತಹ ಧರ್ಮವೆಂದರೆ "ಸತ್ಯವನ್ನೇ ಹೇಳುವುದು, ಸ್ವಧರ್ಮದಲ್ಲಿರುವುದು, ಸಹನೆ, ದಯೆ ವರ್ತನೆಯಲ್ಲಿಟ್ಟುಕೊಳ್ಳುವುದು, ದ್ವೇಷ, ಆತ್ಮಪ್ರಶಂಸೆ ಮಾಡದಿರುವುದು. ಕುಗ್ಗದಿರುವುದು ಇತರರಿಗೆ ಹಿತಕಾರಿ ಕಾರ್ಯವನ್ನು ಮಾಡುವುದು, ಜಪತಪಗಳನ್ನು ಮಾಡುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಹಾಗೂ ಜನ್ಮಕ್ಕೆ ಕಾರಣರಾದ ತಂದೆ ತಾಯಿಯರನ್ನು ಮತ್ತು ವಿದ್ಯೆ ಕಲಿಸಿದ ಗುರುಗಳಿಗೆ ವಿಧೇಯರಾಗಿದ್ದು ಅವರ ಸೇವೆ ಮಾಡುವುದು. ಇವೇ ನನ್ನ ಧರ್ಮರಹಸ್ಯ ಎಂದು ಧರ್ಮವ್ಯಾಧನು ಧರ್ಮದ ಸೂಕ್ಷ್ಮವನ್ನು ತಿಳಿಸಿದನು.

ನಾನು ಕುಲದಿಂದ ಬಂದ ಈ ವೃತ್ತಿಯಾದ ಮಾಂಸ ಮಾರುವುದನ್ನೇ ನನ್ನ ಕಾಯಕವೆಂದು ನಡೆಸಿಕೊಂಡು ಬಂದಿರುವೆ. ವ್ಯಾಪಾರದಲ್ಲಿ ಸುಳ್ಳು, ಮೋಸ, ವಂಚನೆ ಮಾಡುವುದಿಲ್ಲ. ಈ ಕಾರ್ಯವನ್ನು ಮುಗಿಸಿ ವೃದ್ಧರಾದ ನನ್ನ ತಂದೆತಾಯಿಯರ ಸೇವೆ ಮಾಡುತ್ತೇನೆ. ಅವರ ಆಶೀರ್ವಾದ ಸದಾ ನನ್ನ ಮೇಲಿರುವುದು ಹಾಗೆಯೇ ನಾನು ಇಲ್ಲಿಯವರೆಗೆ ಸುಳ್ಳು ನುಡಿದಿಲ್ಲ. ನೀವೇ ಬಂದು ನೋಡಬಹುದು ಎಂದು ಮನೆಗೆ ಕರೆದೊಯ್ದನು.

ಕೌಶಿಕರು ಸಹ ಆ ಹಿರಿಯರಿಗೆ ವಂದಿಸಿ, ಧರ್ಮವ್ಯಾಧನಿಗೆ ಧರ್ಮವನ್ನು ತಿಳಿಸಿದಕ್ಕಾಗಿ ವಂದಿಸಿ ತಮ್ಮ ಮನೆಯ ಕಡೆ ನಡೆದರು. ವಿದ್ಯಾವಂತನಾಗಬೇಕೆಂಬಾಸೆಯಿಂದ ಅಶಕ್ತರಾದ ತಂದೆ ತಾಯಿಯರನ್ನು ಬಿಟ್ಟು ಬಂದಿದ್ದ ಕೌಶಿಕನು ತನ್ನ ಮನೆಯನ್ನು ಸೇರಿ ಹಿರಿಯರ ಸೇವೆ ಮಾಡಿಕೊಂಡು ಉತ್ತಮ ಮನುಷ್ಯನಾಗುವತ್ತ ಸಾಗಿದರು. ಹೀಗೆ ಧರ್ಮರಹಸ್ಯವನ್ನು ತಿಳಿಸುವವರು ಎಲ್ಲ ವರ್ಣದಲ್ಲಿಯೂ ಇದ್ದಾರೆ ಎಂದು ಮಾರ್ಕಂಡೇಯ ಮುನಿಗಳು ಪಾಂಡವರಿಗೆ ತಿಳಿಸಿದರು. (ಶ್ರೀ ಜಿ.ವಿ. ಶಾಸ್ತ್ರೀ, ೧೦೫)

'ವ್ಯಾಧ' ಎಂದರೆ ಬೇಡ ಎಂದರ್ಥವಿರುವುದು. ಇದನ್ನು ನೋಡಿದಾಗ ಮೂಲದಲ್ಲಿ ಇವರು ಬೇಡರಾಗಿದ್ದು, ಬೇಟೆಗಾರಿಕೆಯನ್ನು ಬಿಟ್ಟು ಮಾಂಸವನ್ನು ಕಡಿದು ಮಾರಾಟ ಮಾಡುವ ಉದ್ಯೋಗ ಮಾಡುವುದರಿಂದ ಕಟುಕರೆಂದು ಕರೆದಿರಬಹುದು. ಧರ್ಮದಿಂದ ಬಾಳ್ವೆ ನಡೆಸುವ ವೃತ್ತಿಯಲ್ಲೇ ಪರಮಾತ್ಮನನ್ನು ಕಾಣುವ 'ಕಾಯಕವೇ ಕೈಲಾಸ' ಎಂಬ ತತ್ವ ಇಲ್ಲಿ ಎದ್ದು ಕಾಣುತ್ತದೆ. ಮಹಾಭಾರತದ ಕಾಲದಿಂದಲೂ 'ಕಟುಕ ವೃತ್ತಿ' ಇರುವುದು ಕಂಡುಬರುತ್ತದೆ. ಆಗಲೇ ವ್ಯಾಪಾರದ ಹಂತದಲ್ಲಿ ಈ ಸಮುದಾಯವರಿದ್ದರೆಂಬ ಸೂಚನೆ ಈ ಕಥೆಯಲ್ಲಿ ಕಂಡುಬರುತ್ತದೆ.

"ಕಠೋಪನಿಷತ್ತಿನಿಂದಲೂ ಸಹ ಖಾಟಿಕ್ ಜಾತಿಯ ಉತ್ಪತ್ತಿಯಾಯಿತೆಂದು ಹೇಳಲಾಗುತ್ತದೆ. ಕಟಿಕ ವಂಶದವರಿಂದಲೇ ಕಠೋಪನಿಷತ್ತು ರಚಿಸಲಾಗಿದೆ ಎಂಬ ಊಹೆಯೂ ಇದೆ. ತೈಮೋರಲಿಂಗನ ಕಾಲದಲ್ಲಿ ಕಾಟಿಕ ಹೆಸರಿನಿಂದ ಗುರುತಿಸಲ್ಪಡುವ ಜನ ತುಂಬಾ ಬಲಿಶಾಲಿಯಾಗಿದ್ದರು. ಇವರು ಕೆಲ ರಾಜ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಇವರ ರಾಜ್ಯಗಳ ಹೆಸರು ಕಾರೋರಾ ಎಂದಿತ್ತು. ೧೩೯೭ರಲ್ಲಿ ತೈಮೋರನೊಂದಿಗೆ ನಡೆದ ಯುದ್ಧದಲ್ಲಿ ಇವರು ಪರಾಭವ ಹೊಂದಿದರು. ತೈಮೋರನು ತನ್ನ ಕೃತಿಯಾದ "ಮಲ್ಪು ಜಾತ್ ಎ ತೈಮೋರಿ"ಯಲ್ಲಿ ಬರೆದಂತೆ ಪೃಥ್ವಿಯಲ್ಲಿ ಒಬ್ಬ ಕಾಟಿಕನನ್ನು

ಜೀವಂತ ಬಿಡುವುದಿಲ್ಲ. ಏಕೆಂದರೆ ಇವರು ಭಯಂಕರ ಆಕ್ರಮಣಶೀಲ ಜಾತಿಯಾಗಿದೆ. ಇದು ಯಾವ ಹೊತ್ತಿನಲ್ಲಾದರು, ನನ್ನನ್ನು ನಷ್ಟಕ್ಕೀಡು ಮಾಡುವಂತದ್ದಾಗಿದೆ. ತೈಮೋರಲಂಗನ ಅತ್ಯಾಚಾರಗಳಿಂದ ರಕ್ಷಣೆ ಪಡೆಯಲು ಇವರು ಅರಣ್ಯಗಳಲ್ಲಿ ವಾಸಿಸತೊಡಗಿದರು. ಅಲ್ಲಿಯೇ ಅವರು ತಮ್ಮ ಜಾತಿಯನ್ನು ಬದಲಾಯಿಸಿಕೊಂಡರು. ಕಾಟಿಕ್ ಎಂದಿರುವುದು ಮುಂದೆ ಖಾಟಿಕ್ ಎಂದು ಗುರುತಿಸಲು ಪ್ರಾರಂಭವಾಯಿತು.

ವೃತ್ತಿಯ ಕಾರಣದಿಂದಾಗಿ ಅನೇಕ ಜಾತಿಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಸ್ಥಳ, ಕಾಲ, ಪರಿಸ್ಥಿತಿಗಳು, ಧಾರ್ಮಿಕ ಸಂಹಿತೆ ಕಾರಣಗಳಿಂದಲೂ ಜಾತಿಗಳ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ. ವೃತ್ತಿಯ ಕಾರಣದಿಂದಾಗಿಯೇ ಇವರನ್ನು ಖಾಟಿಕ್ ಎಂದು ಜನ ಕರೆಯಲು ಪ್ರಾರಂಭಿಸಿದರು"(ಸೋನಕರ್ ಶಾಸ್ತ್ರಿ;೨೦೦೫:೧೬೪).

ವಿದ್ವಾಂಸರುಗಳ ಪ್ರಕಾರ

೧. ಛೋಟೆಲಾಲ್ ಶರ್ಮರವರ 'ಜಾತಿ ಅನ್ವೇಷಣ' ಹಿಂದಿ ಪುಸ್ತಕದಲ್ಲಿ ಬರೆದಿರುವಂತೆ ಖಾಟಿಕ್ ಜಾತಿಯನ್ನು 'ಹಿಂದೂ ಕಸಾಯಿ' ಎಂದೂ ಕರೆಯುಬಹುದು. ಏಕೆಂದರೆ ಪಶುಗಳನ್ನು ವಧಿಸಿ ಅದರ ಮಾಂಸವನ್ನು ಮಾರುತ್ತಾರೆ. ಖಟಿಕ್ ಶಬ್ದದ ಅರ್ಥ ಪದಕೋಶದಲ್ಲಿಯೂ ಇದೇ ಆಗಿರುತ್ತದೆ.

೨. ಪ್ರಸಿದ್ಧ ಇತಿಹಾಸಕಾರನಾದ ಹಟ್‌ಶನ್ ಅವರ ಪ್ರಕಾರ ಖಟಿಕರು ರಾಜ್ಯ ಆಳ್ವಿಕೆ ಕೂಲಿ ತರಕಾರಿ ಹಣ್ಣು ಮಾಂಸ ಮಾರುವ ಕೆಲಸಗಳನ್ನು ಮಾಡುತ್ತಾರೆ. ಇವರು ೯-೧೦ರ ಶಾಖೆಗಳಲ್ಲಿ ಹಂಚಿ ಹೋಗಿದ್ದಾರೆ.

೩. ಇತಿಹಾಸಕಾರ ಮಿಕಾನೆಗಿ ಅವರ ಪ್ರಕಾರ ಉತ್ತರ ಪ್ರದೇಶದ ಬಿಹಾರದಲ್ಲಿ ಖಾಟಿಕ್ ಜಾತಿ ಪಾರ್ಸಿಯರ ಒಂದು ಉಪಶಾಖೆಯಾಗಿದೆ. ಈಗ ವೃತ್ತಿ ಬದಲಾಗಿರುವುದರಿಂದ ಬೇರೊಂದು ಹೆಸರಲ್ಲಿ ಗುರುತಿಸಲಾಗುತ್ತಿದೆ.

೪. ಡಾ. ಗಣಪತ್ ಲಾಲ್ ಸಂಕಲಾ ಗುಜರಾತ್ ಖಾಟಿಕ್ ಸಮಾಜದ ಪ್ರಧಾನರು. ಇವರ ಪ್ರಕಾರ 'ಕಠ' ಎಂದು ಈ ಜಾತಿಯನ್ನು ಕರೆಯಲಾಗುತ್ತಿತ್ತು. ನಂತರ ಕಾಠಿಕ ಎಂದಾಯಿತು. ಕಾಠಿಕ್ ಕಠಿಕ ಎಂದಾಯಿತು. ಈಗ ಖಾಟಿಕ್ ಎಂದು ಮುಕ್ತವಾಗಿ ಕರೆಯುವರು ಮೊಘಲರ ಅತ್ಯಾಚಾರಗಳಿಂದ ರಕ್ಷಣೆ ಪಡೆಯುವ ಸಲುವಾಗಿ ೧೫೬೭ರಲ್ಲಿ ಈ ಜಾತಿಯನ್ನು ಖಾಟಿಕ ಎಂದು ಕರೆಯಲಾಯಿತು. ಗಣಪತ್ ಲಾಲ್‌ರವರು ಸಮಾಜ ಪ್ರಚಾರ ಕಾರ್ಯಕ್ಕೆಗೊಂಡಿದ್ದಾಗ ಗುಜರಾತದಲ್ಲಿ ಕಠಿಯಾವಾಡ ಎಂಬ ಪ್ರದೇಶದಲ್ಲಿ ಸೂರ್ಯವಂಶಿ ರಾಜರು ಆಳ್ವಿಕೆ ಮಾಡುತ್ತಿದ್ದರು. ಈ ವಂಶದವರನ್ನು ಈಗ ಖಾಟಿಕ ಜಾತಿಯವರೆಂದು ಕರೆಯುವರು ಎಂದು ಹೇಳಿದರು.

೫. ವಾರಣಾಸಿ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ರಾಜರಾಮ್‌ಶಾಸ್ತ್ರೀ ಅವರ ಪ್ರಕಾರ ಖಾಟಿಕ್ ಜಾತಿ ಸಮಸ್ತ ಭಾರತ ವರ್ಷದಲ್ಲಿ ಧೈರ್ಯ, ಎದೆಗಾರಿಕೆಯುಳ್ಳ ಕೋಮು ಎಂದು ಗುರುತಿಸಲ್ಪಡುತ್ತದೆ. ಈ ಜಾತಿಯ ಜನರು ರಾಜ್ಯ ಆಳ್ವಿಕೆ, ಹಣ್ಣು, ತರಕಾರಿ ಮತ್ತು ಮಾಂಸ ಮಾರುವ ಕೆಲಸವನ್ನು ಮಾಡುತ್ತಾರೆ. ತುಂಬಾ ಸ್ವಾಭಿಮಾನಿಯುಳ್ಳ ಜನರಾಗಿರುವ ಇವರು ರಾಜ್ಯಾಧಿಕಾರಗಳಾಗಿ, ಸರ್ಕಾರಿ ಅಧಿಕಾರಿಗಳಾಗಿ ಇತ್ತೀಚೆಗೆ ವ್ಯಾಪಾರಿಗಳಾಗಿ ಗಮನ ಸೆಳೆಯುತ್ತಿದ್ದಾರೆ.

ಖಾಟಿಕ ಜನಾಂಗವು ಏತಕ್ಕಾಗಿ ಈ ವೃತ್ತಿಯನ್ನು ಮಾಡುತ್ತಾರೆ ಎಂಬುವುದಕ್ಕಾಗಿ ಪುರಾಣದ ಒಂದು ಆಧಾರಿತ ಕಥೆಯನ್ನು ಹೇಳಲಾಗುತ್ತದೆ. ಅದು ಈ ಕೆಳಗಿನಂತೆ,

"ಸೂರ್ಯವಂಶಕ್ಕೆ ಸಂಬಂಧಿಸಿದ ಗಂಗಾಜ್ಜಿ ಎಂಬ ರಾಜನು ಮೇರು ಪರ್ವತದ ಉತ್ತರ ದಿಕ್ಕಿನಲ್ಲಿರುವ ರತ್ನವಾಟಿಕ ಎಂಬ ಪ್ರದೇಶದಲ್ಲಿ ರಾಜ್ಯವಾಳುತ್ತಿದ್ದನು. ಇವನು ಖಟಿಕನಾಗಿದ್ದು ಶಿವನ ಪರಮಭಕ್ತನಾಗಿದ್ದನು. ಒಮ್ಮೆ ಶಿವಾರಾಧನೆಯಲ್ಲಿ ತಲ್ಲೀನನಾಗಿರುವಾಗ ಶಿವನ ಭಕ್ತ ನಂದೀಶ್ವರನು ತನಗೆ ಶಿವನ ಪೂಜೆಯಲ್ಲಿ ಅಡಚಣೆಯುಂಟು ಮಾಡುತ್ತಿದ್ದಾನೆಂಬ ಅನುಮಾನ ಉಂಟಾಗಿ ಅಹಂಕಾರ ಭಾವದಿಂದ ಹಿಂದೆ ಮುಂದೆ ಯೋಚಿಸದೆ ನಂದೀಶ್ವರನನ್ನು ಹೀಯಾಳಿಸಿ ನಿಂದಿಸುತ್ತಾನೆ. ಇದರಿಂದ ಕುಪಿತನಾದ ನಂದೀಶ್ವರನು ನಿನ್ನ ಪೀಳಿಗೆಯು ಮಾಂಸ ಮಾರಿ ಜೀವನ ನಡೆಸಲಿ ನಿನ್ನ ರಾಜ್ಯಭಾರ ಹಾಳಾಗಲಿ ಎಂದು ಶಾಪ ನೀಡಿದನು. ಈ ಕಾರಣಕ್ಕೆ ಈ ಜನರು ತುಂಬಾ ಬಡವರಾಗಿದ್ದು ಈಗಲೂ ಇದೇ ಉದ್ಯೋಗದಲ್ಲಿ ಮುಂದುವರೆದಿರುವುದನ್ನು ಕಾಣಬಹುದು" ಎಂದು ಕರ್ನಾಟಕ ಖಾಟಿಕ್ ಸಮಾಜದ ಅಧ್ಯಕ್ಷರಾದ ಕೆ. ಶ್ಯಾಮರಾವ್ ಅವರು ಮಾಹಿತಿಯನ್ನು ನೀಡುವರು.

ಈ ಮೇಲಿನ ಕಥೆಯು ಖಾಟಿಕ ಜನರ ಉದ್ಯೋಗಕ್ಕೆ ನಂದೀಶ್ವರನ ಶಾಪವೇ ಕಾರಣ ಎಂಬುದನ್ನು ಹೇಳುತ್ತ ಅಥವಾ ತಿಳಿಸುತ್ತ ಒಂದಾನೊಂದು ಕಾಲದಲ್ಲಿ ಇವರು ರಾಜ್ಯಾಡಳಿತ ನಡೆಸುತ್ತಿದ್ದ ಒಂದು ಸಮುದಾಯವಾಗಿತ್ತು ಎಂಬ ಅಂಶವನ್ನು ತಿಳಿಸುತ್ತದೆ. ಇದನ್ನು ಗಮನಿಸಿದಾಗ ಒಂದು ಸಮುದಾಯವು ಹೀಗೆ ಪುರಾಣದ ಮುಖಾಂತರ ತನ್ನ ಸಮುದಾಯದ ಉದ್ಯೋಗಕ್ಕೆ ಸಂಬಂಧವನ್ನು ಕಟ್ಟಿಕೊಳ್ಳುತ್ತ ಬಂದಿರುವುದು ತಿಳಿಯುತ್ತದೆ.

ಉತ್ತರದಿಂದ ದಕ್ಷಿಣಕ್ಕೆ ಬಂದಾಗ ಕೆಲವರು ಹಿಂದೂಧರ್ಮದಲ್ಲಿ ಮುಂದುವರಿದರೆ ಕೆಲವರು ಮುಸ್ಲಿಂ ಧರ್ಮದಲ್ಲಿ ಮತಾಂತರಗೊಂಡು ಸುಲ್ತಾನ ಕಸಾಯಿಗಳಾಗಿ ಮಾರ್ಪಾಡುಗೊಂಡಿರುವುದನ್ನು ಕಾಣಬಹುದು. ಅಂದರೆ ಇಲ್ಲಿ ಮುಸ್ಲಿಂರಾಗಿ ಮತಾಂತರ ಹೊಂದಿರುವುದಕ್ಕೆ ಕಾರಣಗಳು ಒಂದು ಒತ್ತಾಯದ ಮತಾಂತರ ಹಾಗೂ ಆ ಧರ್ಮದಲ್ಲಿರುವ ಸಮಾನತೆ ಮತ್ತಿತರ ಕಾರಣಗಳಾಗಿರಬಹುದು ಎಂದು ಊಹಿಸಬಹುದು. ಇತರರು ಹಿಂದೂ ಧರ್ಮವನ್ನು ಪಾಲಿಸತೊಡಗಿದರು. ಮೂಲತಃ ಇವರು ಉತ್ತರ ಭಾರತದಲ್ಲಿ ಸೈನಿಕರಾಗಿ ಕಾರ್ಯನಿರ್ವಹಿಸುವಂತ ಸಂದರ್ಭದಲ್ಲಿ ದಕ್ಷಿಣಕ್ಕೆ ಬಂದಾಗ

ರಾಜಾಶ್ರಯವನ್ನು ಕಳೆದುಕೊಂಡು ಶತೃಗಳ ಅತ್ಯಾಚಾರಗಳಿಂದ ತಪ್ಪಿಸಿಕೊಂಡು ಅಲೆಮಾರಿಜೀವನದ ಬದುಕು ಸಾಗಿಸುತ್ತ ಬರುವಾಗ ಮುಂದೆ ಮಾಂಸ ಮಾರುವಿಕೆಯ ವೃತ್ತಿಯನ್ನು ಜೀವನಕ್ಕಾಗಿ ಅಳವಡಿಸಿ ಕೊಂಡಿರುವ ಸಾಧ್ಯತೆಯಿದೆ. ಜೊತೆಗೆ ಮಧ್ಯ ಮಾರಾಟ ಮಾಡುವಿಕೆಯು ಮಾಂಸಕ್ಕೆ ಪೂರಕವಾಗಿ ಮಾರಾಟ ಮಾಡಲು ಮುಂದಾಗಿರುವುದಾಗಿಯೂ ಇಂದಿಗೂ ಇವರು ಇವೆರಡು ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿರುವುದನ್ನು ಕಾಣಬಹುದು.

ದಕ್ಷಿಣದಲ್ಲಿ ಹಿಂದೂ ರಾಜರ ಆಶ್ರಯವನ್ನು ಬಯಸಿ ಬಂದ ಖಾಟಿಕರು ಪಡೆದ ಸ್ಥಾನಮಾನ ಹಿಂದೂ ಧರ್ಮದ ವರ್ಣವ್ಯವಸ್ಥೆಯನ್ನು ಬಿಟ್ಟಿಲ್ಲ. ಅಂದರೆ ಇಲ್ಲಿಯ ಹಿಂದೂ ಧರ್ಮ ರಕ್ಷಕರು ತಮಗೆ ಬೇಕಾದಾಗ ಸಾಮಾನ್ಯರನ್ನು ಹಿಂದೂ ಎಂಬ ಹೆಸರಿನಡಿ ಸೇರಿಸಿ ನಂತರ ಅಷ್ಟೇ ಜಾಣತನದಿಂದ ವರ್ಣವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದು ಇವೆಲ್ಲವೂ ಈ ಧರ್ಮರಾಜಕಾರಣದ ಪಳೆಯುಳಿಕೆಗಳು. ಇದು ಯಾರಿಗೂ ಹೊಳೆದಿರಲಾರದು. ಮುಗ್ಧ ಶ್ರಮ ಜೀವಿಗಳಾದ ಇವರು ಸತ್ತು ಸ್ವರ್ಗಸೇರುವ ಉತ್ಸಾಹದಲ್ಲಿ ವೀರ ಮರಣದ ಕಲ್ಪನೆಯಲ್ಲಿ ಮೋಕ್ಷದ ಮಾಯೆಯಲ್ಲಿ ಮುಳುಗಲು ಹಿಂದೂ ಧರ್ಮದಡಿ ತಾವು ಸೇರಿದ್ದೇವೆ ಎನ್ನುವುದು ಸಾಕಾಗಿತ್ತು ಎನಿಸುತ್ತದೆ. ಹೀಗೆ ವಲಸೆ ಬಂದು ಇಲ್ಲಿಯೇ ಇದ್ದು ಶ್ರಮಜೀವಿ ಮೂಲ ಸಮುದಾಯಗಳು ಪಡೆದುಕೊಂಡದ್ದು ಏನು ಕಳೆದುಕೊಂಡದ್ದು ಏನು ಎಂದು ಯೋಚಿಸಿದರೆ ಒಂದು ಸಮುದಾಯ ತನ್ನ ಹೆಸರನ್ನು ಹೇಳಿಕೊಳ್ಳಲು ನಾಚುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ ಈ ಸಮಾಜದ ವ್ಯವಸ್ಥೆಯ ರೂವಾರಿಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಉತ್ತರದಲ್ಲಿ ಮಹಮ್ಮದೀಯ ಅರಸರ ಕಿರುಕುಳ ತಡೆಯಲಾರದೆ ದಕ್ಷಿಣಕ್ಕೆ ಬಂದ ಒಂದು ಸಮುದಾಯ ಇಲ್ಲಿ ಪಡೆದದ್ದು ಏನೆಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾದದ್ದು. ಏಕೆಂದರೆ ಮಹಮ್ಮದೀಯರು ಕಿರುಕುಳ ನೀಡಿರಬಹುದು ಆದರೆ ಹಿಂದೂಗಳು ನೀಡಿರುವ ಸ್ಥಾನಮಾನಗಳನ್ನು ಅರಿಯಬೇಕಾದದ್ದು ಅವಶ್ಯಕ. ಯುದ್ಧ ಸಾಮ್ರಾಜ್ಯ ಅರಸರ ಕಥೆಗಳು ಮುಗಿದು ಶತಮಾನಗಳ ನಂತರವೂ ಒಂದು ಸಮುದಾಯ ತನ್ನ ಜಾತಿಯನ್ನು ಮರೆಮಾಚಿಕೊಂಡು ಬದುಕುವ ವಿಪರ್ಯಾಸ ಎಲ್ಲೂ ಕಂಡುಬರುವುದಿಲ್ಲ. ಇದೇ ಹಿಂದೂ ವರ್ಣವ್ಯವಸ್ಥೆ ನೀಡಿರುವ ಕೊಡುಗೆ. ಏಕೆಂದರೆ ಮನೆ ಯಲ್ಲಿ ಇಂದಿಗೂ ಮಾಂಸದ ಅಡಿಗೆಯನ್ನು ಮಾಡಿದಾಗ ಮನೆಯಲ್ಲಿ ಹೊಲಸು ಆಹಾರ ಮಾಡಿದ್ದೇವೆ ಎಂದು ಹೇಳುತ್ತಿರುವಾಗ ಇನ್ನೂ ಹೊಲಸು ಎಂದು ಹೇಳುವ ಮಾಂಸವನ್ನು ಮಾರುವವರ ಬಗ್ಗೆ ಎಂಥ ಅಭಿಪ್ರಾಯ ಜನರಲ್ಲಿರಬಹುದು ಎಂಬುದು ಯೋಚಿಸುವಂತದ್ದು.

ಭಾರತದಲ್ಲಿ ಜಾತಿವ್ಯವಸ್ಥೆ ಬೆಳೆದು ಬಂದಿರುವುದೇ ವೃತ್ತಿಯ ಆಧಾರದ ಮೇಲೆ. ಆದರೆ ವೃತ್ತಿಯನ್ನು ಹೀಯಾಳಿಸುವ ಪರಂಪರೆಯೂ ಇದರ ಜೊತೆಯಲ್ಲೇ ಬೆಳೆದು ಬಂದಿರುವುದನ್ನು ನಮ್ಮ ಸಮಾಜದಲ್ಲಿ ಗಮನಿಸಬಹುದು. ಉದಾಹರಣೆಗೆ 'ಕೆಲಸ ಇಲ್ಲದ ಬಡಿಗ ತನ್ನ ಮಗನ ಮುಕಳಿ ಕೆತ್ತಿದನಂತೆ", "ಕೆಲಸ ಇಲ್ಲದ ಕುಂಬಾರ ತನ್ನ ಮಗಳ ಕುಂಡಿ ತಟ್ಟಿದನಂತೆ". ಈ ಮೇಲಿನ

ಮಾತನ್ನು ಸಮಯವನ್ನು ಕಳೆಯಲು ಅಥವಾ ವ್ಯರ್ಥ ಕೆಲಸ ಮಾಡುವವರನ್ನು ಕುರಿತು ಹೇಳುವುದಾದರೆ ಒಂದು ಸಮುದಾಯವನ್ನು ಬೈಯುವುದಕ್ಕಾಗಿಯೇ ಮೀಸಲಾಗಿಟ್ಟಿರುವುದನ್ನು ಗಮನಿಸಬಹುದು. "ಕಟುಗರ ಮುಂದೆ ಬಸವನ ಪುರಾಣ ಹೇಳಿದಂತೆ" ಎಂಬ ಗಾದೆಯು ಕಟುಗರು ತಮ್ಮ ವೃತ್ತಿಯನ್ನು ಬಿಡರು ಅವರಿಗೆ ಎಷ್ಟೇ ಅಹಿಂಸೆಯ ಬಗ್ಗೆ ಭೋದಿಸಿದರು ತಾವು ಹಿಂಸೆಯನ್ನು ಬಿಡುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಏತಕ್ಕಾಗಿ ಒಂದು ಸಮುದಾಯವನ್ನು ಅಷ್ಟೊ ನಿಕೃಷ್ಟವಾಗಿ ಉಳಿದ ಸಮಾಜಗಳು ಕಾಣುತ್ತವೆ ಎಂಬುದಕ್ಕೆ ಅವರು ಮಾಡುವ ಜೀವನ ವೃತ್ತಿಯೇ ಕಾರಣ ಎಂದು ಹೇಳಬಹುದು. ಆದರೆ ಜೀವನೋಪಾಯಕ್ಕಾಗಿ ಮಾಡುವ ದುಡಿಮೆ ತಪ್ಪಲ್ಲ, ಮಾಂಸಹಾರಿ ಪ್ರಿಯರಿಗೆ ಮಾಂಸವನ್ನು ಉಣ್ಣುವ ಆಶೆ. ಆದರೆ ಮಾರಾಟ ಮಾಡುವುದು ತಪ್ಪು ಎಂದು ಹೇಳುವುದು 'ಆಚಾರ ಹೇಳಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ' ಎಂಬ ಗಾದೆಯನ್ನು ನೆನಪಿಸುತ್ತದೆ. ನಾವು ಓದಿರುವಂತೆ ರಾಮನು ಕಾಡಿನಲ್ಲಿ ವಾಸವಾಗಿದ್ದು ಮಧ್ಯ ಮಾಂಸವನ್ನು ಸೇವಿಸುತ್ತಿದ್ದ. ಬ್ರಾಹ್ಮಣರು ಗೋವನ್ನು ಪೂಜ್ಯವೆಂದು ಪ್ರಸಾದವಾಗಿ ಸೇವಿಸುತ್ತಿದ್ದುದರ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಆದರೆ ಮಾಂಸ ಮಾರಾಟ ಮಾಡುವವರು ಮಾತ್ರ ಕ್ರೂರಿಗಳು ಹೃದಯವಿಲ್ಲದವರು ಎಂಬ ಪಟ್ಟಕಟ್ಟಿರುವ ಈ ಸಮಾಜಕ್ಕೆ ಮಾಂಸ ಉಪಯೋಗಿಸುವವರು ಸಂಬಂಧವಿಲ್ಲದವರಾಗಿರುವುದು ಎಷ್ಟು ಸರಿ ಎಂಬುದನ್ನು ಗಮನಿಸಬೇಕಾಗುತ್ತದೆ.

ಎಲ್ಲ ತಳಸಮುದಾಯಗಳಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಹಾವೇದಿಕೆ ನೀಡಿದ ವಚನ ಚಳುವಳಿಯ ವಚನಕಾರರು ತಮ್ಮ ವಚನಗಳಲ್ಲಿ ಕಟುಕರ ಮನೆಯ ಕುರಿಯ ಹಾಗೆ ಎಂದು ಬಣ್ಣಿಸಿರುವುದು ಕಂಡುಬರುತ್ತದೆ. ಇದೇ ಸಮಯದಲ್ಲಿ ಕಟುಗರ ಮುಂದೆ ಬಸವನ ಪುರಾಣ ಹೇಳಿದಂತೆ ಎಂಬ ಗಾದೆಯು ಉದ್ಭವಿಸಿರುವುದನ್ನು ಕಾಣಬಹುದು. ಒಂದು ಪ್ರಾಣಿಯನ್ನು ಹಿಂಸಿಸ ಬಾರದು ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ ತಿನ್ನುವುದನ್ನು ಬಿಡದ ಈ ಸಮಾಜಕ್ಕೆ ಆರೋಪ ವಿಲ್ಲ. ಆದರೆ ಅದನ್ನು ಮಾರುವ ಸಮುದಾಯದ ಮೇಲೆ ಈ ರೀತಿ ಹೇರುವುದನ್ನು ಒಪ್ಪಿಕೊಳ್ಳುವುದು ಹೇಗೆ?

ಭಾರತದಲ್ಲಿ ಖಾಟಿಕ್ ಜಾತಿಯ ಅಸ್ಥಿತ್ವ ತುಂಬಾ ಪುರಾತನವಾದದ್ದು. ಜಾತಿ ಉತ್ಪತ್ತಿಯ ವ್ಯವಸಾಯಿಕ ಸಿದ್ಧಾಂತ ಈ ಮಾತನ್ನು ಪುಷ್ಠಿ ನೀಡುತ್ತದೆ. ಪ್ರಾರಂಭದಲ್ಲಿ ಮನುಷ್ಯ ಬೇಟೆಯನ್ನು ಆಧರಿಸಿ ಜೀವನ ನಡೆಸುತ್ತಿದ್ದ. ಕಾಲ ಕ್ರಮೇಣ ಸಮಾಜದಲ್ಲಿ ಈ ಶಿಕಾರಿ ಜೀವನ ಕೆಲವು ಜನರ ಉದ್ಯೋಗವಾಗಿ ಪರಿವರ್ತಿತವಾಯಿತು. ಸಮಾಜ ಜೀವನವು ರೂಪುಗೊಳ್ಳತೊಡಗಿದ ಸಂದರ್ಭದಲ್ಲಿ ಅಲೆಮಾರಿ ಜೀವನವನ್ನು ತ್ಯಜಿಸಿದ ಮನುಷ್ಯ ಬೇಟೆಯಾಡುವುದು, ಪ್ರಾಣಿಗಳನ್ನು ಕೊಂದು ಅದರ ಮಾಂಸ ಮಾರುವುದು ತನ್ನ ಉಪ ವೃತ್ತಿಯನ್ನಾಗಿಸಿಕೊಂಡ ಸಮಾಜವು ವಿಕಸಿತವಾಗುವಂತೆ ಈ ವೃತ್ತಿಯಲ್ಲೂ ಬದಲಾವಣೆಯಾಯಿತು. ಮನುಷ್ಯರು ಕಾಡಿನಿಂದ ಪ್ರಾಣಿಗಳನ್ನು ಹಿಡಿಯುವ, ಬೇಟೆ ಯಾಡುವ ಬದಲಿಗೆ ಅವುಗಳನ್ನು ಸಾಕುವ ಪ್ರಕ್ರಿಯೆ ಪ್ರಾರಂಭವಾಯಿತು. ಹೀಗೆ ಈ ರೀತಿಯಾಗಿ ಪಶುಪಾಲನೆಯು ಪ್ರಾರಂಭವಾಯಿತು.

ಇದೇ ರೀತಿ ವ್ಯವಸಾಯವು ಪ್ರಾರಂಭವಾಯಿತು. ಮೊದಲು ಮನುಷ್ಯ ಕಾಡು-ಮೇಡು ಅಲೆದು ಹಣ್ಣು-ಹಂಪಲುಗಳನ್ನು ಹುಡುಕಿಕೊಂಡು ತರುತ್ತಿದ್ದ. ನಂತರ ತಾನೇ ಇವುಗಳನ್ನು ಬೆಳೆಸುವ ತೋಟಗಳನ್ನು ನಿರ್ಮಿಸತೊಡಗಿದನು. ಹೀಗೆ ವ್ಯವಸಾಯವು ಬೆಳೆಯತೊಡಗಿತು. ಮನುಷ್ಯ ಅಲೆಮಾರಿ ಜೀವನವನ್ನು ತ್ಯಜಿಸಿ ಸಮಾಜ ಬೆಳವಣಿಗೆಯತ್ತ ಮುಖ ಮಾಡಿದನು.

"ಜಾತಿಗಳ ಉತ್ಪತ್ತಿಯ ಸಿದ್ಧಾಂತವನ್ನು ವೃತ್ತಿಯ ಆಧಾರದ ಮೇಲೆ ನಿಶ್ಚಯಿಸಿದರೆ ಮಾಂಸ ಮತ್ತು ಹಣ್ಣು-ಹಂಪಲು ಮಾರುವ ವರ್ಗ ಖಾಟಿಕರಾಗಿದ್ದಾರೆ. ಇವರ ಇತಿಹಾಸವನ್ನು ಗುರುತಿಸುವಾಗ ಇವರು ಅಲೆಗ್ಸಾಂಡರ್‌ನ ದಾಳಿ, ಮಹಮ್ಮದ್ ಗಜನಿ, ತೈಮೋರಲಿಂಗ ಹೀಗೆ ಹಲವು ವಿದೇಶಿಯರ ದಾಳಿಗಳನ್ನು ಎದುರಿಸಿದ ವೀರ ಯೋಧರು ಇಲ್ಲಿಯ ಮೂಲನಿವಾಸಿಗಳು" ಎಂದು ಸೋನ್‌ಕರ ಶಾಸ್ತ್ರೀಯವರ 'ಕಾಟಿಕ್ ಜಾತಿಯ ಉಗಮ ಮತ್ತು ಇತಿಹಾಸ' ಎಂಬ ಪುಸ್ತಕದಿಂದ ತಿಳಿದುಬರುತ್ತದೆ.

ಹೀಗೆ ಮೂಲತಃ ಬೇಟೆಯಾಡುತ್ತಿದ್ದ ಒಂದು ಸಮುದಾಯ ನಂತರ ಮಾಂಸ ಮಾರುವಿಕೆಯನ್ನೇ ಒಂದು ಉಪವೃತ್ತಿಯನ್ನಾಗಿ ಮಾಡಿಕೊಂಡು ಯೋಧರಾಗಿದ್ದೂ ಸೈನ್ಯದಲ್ಲಿ ಕಾರ್ಯನಿರ್ವಹಿಸುವ ಕಾರ್ಯವನ್ನು ಮಾಡುತ್ತಿದ್ದು ತಿಳಿದುಬರುತ್ತದೆ. ಮೊಘಲರ ಆಳ್ವಿಕೆಯ ಸಂದರ್ಭದಲ್ಲಿ ಖಾಟಿಕರು ಉತ್ತರದಿಂದ ದಕ್ಷಿಣದ ಕಡೆಗೆ ವಲಸೆ ಬಂದರು. ಇಲ್ಲಿ ವಿಜಯನಗರ ಅರಸರಲ್ಲಿ ಪಾಳೆಗಾರರಲ್ಲಿ ಯೋಧರಾಗಿ ಕೆಲಸ ನಿರ್ವಹಿಸುತ್ತ ನಂತರ ಅರಸರ ಆಳ್ವಿಕೆಯು ಮುಗಿದ ನಂತರ ಮಾಂಸ ಮತ್ತು ಮದ್ಯ ಮಾರಾಟ ಮಾಡುವಿಕೆಯಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಬಹುದು. ಹೀಗೆ ಇಂದಿಗೂ ಇದೇ ಉದ್ಯೋಗದಲ್ಲಿ ಮುಂದುವರೆದಿರುವುದನ್ನು ಕಾಣಬಹುದು.

ಈ ರೀತಿಯಾಗಿ ಒಂದು ಸಮುದಾಯ ಈ ಸಮಾಜದಲ್ಲಿ ಸಾಂಸ್ಕೃತಿಕ ರೂಪಕ್ಕೆ ಒಳಗಾಗಿ ಸಮಾಜ ನೀಡುವ ಹೆಸರನ್ನು ತಿರಸ್ಕರಿಸಿ ತನ್ನ ಜಾತಿಯು ಹೇಗೆ ಉನ್ನತವಾಗಿದೆ ಎಂದು ಸ್ಥಾಪಿಸಲು ಹವಣಿಸುತ್ತಿದೆ ಎಂದು ಈ ಖಾಟಿಕ ಸಮುದಾಯವನ್ನು ಗಮನಿಸಿದರೆ ತಿಳಿಯುತ್ತದೆ. ಕ್ಷತ್ರಿಯ ಎಂಬ ಪದವು ಹೆಸರಿನಷ್ಟೆ ವಿಶಾಲ ಅರ್ಥ ಹೊಂದಿರುವ ಪದ ಮತ್ತೊಂದಿಲ್ಲ ಎಂದೆನಿಸುತ್ತದೆ. ಕಾರಣ ಮೊದಲು ರಾಜರ ಆಳ್ವಿಕೆಯಲ್ಲಿ ಇತರ ಸಮುದಾಯಗಳಿಗೆ ಇವರು ರಕ್ಷಣೆ ನೀಡುವವರು ಹಾಗೂ ಕಾಪಾಡುವವರು. ವೀರಾವೇಶದಿಂದ ಹೋರಾಡಿ ರಾಜಲಕ್ಷ್ಮಿಯನ್ನು ತಂದು ಕೊಡುವ ಕ್ಷತ್ರಿಯರೆಂದು ಪರಿಗಣಿಸುವ ರೀತಿಯಲ್ಲಿ ಇವರನ್ನು ತಮ್ಮ ಆತ್ಮ ರಕ್ಷಣೆಗಾಗಿ ಬಳಸಿಕೊಳ್ಳುತ್ತಿದ್ದರು. ನಂತರ ಈ ಮಾತು ಹೋರಾಡುವ ಪ್ರತಿಯೊಬ್ಬ ಸೈನಿಕನ ತಲೆಯಲ್ಲಿ ನೀವು ಕ್ಷತ್ರಿಯರು ವೀರಾಧಿವೀರರು ಎಂದು ಇವರಿಗೆ ಹುರಿದುಂಬಿಸಿ ಯುದ್ಧದಲ್ಲಿ ಕಾದಾಡಿ ಸತ್ತರೆ ಸ್ವರ್ಗ ಎಂದು ಭೋದಿಸುತ್ತ ರಾಜತಂತ್ರವನ್ನು ರೂಪಿಸಿಕೊಂಡು ಯುದ್ಧಗಳಲ್ಲಿ ತಮ್ಮ ಪರವಾಗಿ ಜೀವಕ್ಕೆ ಬೆದರದೆ ಶತೃಗಳನ್ನು ಹಿಮ್ಮೆಟ್ಟಿಸುವ ಕಾರ್ಯವನ್ನು ಹಾಗೂ ಸಾವು-ನೋವುಗಳನ್ನು ಎದುರಿಸುವವರಾಗಿದ್ದರು. ಈ ರೀತಿಯಿಂದ ಇವರಿಗೆ ಹೊಗಳಿಕೆಯ ಮಾತುಗಳಿಂದ ತಮ್ಮ ರಾಜ್ಯದ ಭದ್ರತೆ ಹಾಗೂ ರಕ್ಷಣೆ ನಿರ್ವಹಿಸಿಕೊಂಡಿರುವ

ಇಂತಹ ಇತಿಹಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ. ಇಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ. ವೃತ್ತಿ ಮಾಡುವುದು ನಿಜ. ಆದರೆ ನಮ್ಮ ಜಾತಿಯನ್ನು ನಾವು ಎಲ್ಲಿಯವರೆಗೆ ಅಭಿಮಾನದಿಂದ ಹೇಳಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಸಮಾಜವೇ ನಿರ್ಮಿಸಿರುವ ಜಾತಿ ವ್ಯವಸ್ಥೆಗೆ ಪೆಟ್ಟು ನೀಡುವುದು ಸಾಧ್ಯವಾಗುವುದಿಲ್ಲ ಎಂಬುದು ಸತ್ಯ.

೨.೨. ಖಾಟಿಕರು ವಾಸಿಸುವ ಭೌಗೋಳಿಕ ಪರಿಸರ

ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದ ಮೇಲೆ ಖಾಟಿಕರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ, ತಮಿಳುನಾಡು ಹೀಗೆ ಹಲವು ರಾಜ್ಯಗಳಲ್ಲಿ ಹಂಚಿ ಹೋದರು. ಕರ್ನಾಟಕದಲ್ಲಿ ಇವರು ಮುಖ್ಯವಾಗಿ ಕಂಡಬರುವ ಪ್ರದೇಶಗಳೆಂದರೆ ಜಿಲ್ಲೆಗಳಾದ ಬೆಂಗಳೂರು, ಮೈಸೂರು, ಬಿಜಾಪುರ, ಬಳ್ಳಾರಿ, ದಾವಣಗೆರೆ, ಹಾವೇರಿ, ಚಿತ್ರದುರ್ಗ, ಶಿವಮೊಗ್ಗ, ಚಳ್ಳಕೆರೆ, ಕೊಪ್ಪಳ, ಗಂಗಾವತಿ, ಗುಲ್ಬರ್ಗಾ, ರಾಯಚೂರು, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಹಾಗೂ ತಾಲೂಕುಗಳಾದ ಹರಿಹರ, ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಮುಂಡರಗಿ, ಹೂವಿನ ಹಡಗಲಿ, ಇಳಕಲ, ರಾಣೆಬೆನ್ನೂರು, ಶಿರಾಳಕೊಪ್ಪ ಹೀಗೆ ಪಟ್ಟಣ ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಯೂರಿರುವುದು ಕಂಡುಬರುತ್ತದೆ. ಹಳ್ಳಿಗಳಲ್ಲಿ ಕಡಿಮೆ ಪ್ರಮಾಣದಲ್ಲಿ ವಾಸವಾಗಿರುವುದು ಕಾಣಸಿಗುತ್ತದೆ. ಇವರ ವಾಸವು ವೃತ್ತಿಯನ್ನು ಹೆಚ್ಚಾಗಿ ಅವಲಂಬಿಸಿದೆ. ಕಾರಣ ಮಾಂಸ ಮಾರಾಟ ವೃತ್ತಿಯನ್ನು ಕೈಗೊಂಡಂತಹ ಈ ಸಮುದಾಯವು ವ್ಯಾಪಾರದ ಹಿತದೃಷ್ಟಿಯಿಂದ ಹಾಗೂ ಜನನಿಬಿಡದ ಪಟ್ಟಣ-ಪ್ರದೇಶಗಳಲ್ಲಿ ತಮ್ಮ ವೃತ್ತಿಗೆ ಅನುಕೂಲವಾಗಿರುವ ಸ್ಥಳಗಳನ್ನೇ ಆಯ್ಕೆ ಮಾಡಿಕೊಳ್ಳುವುದರ ಮೂಲಕ ಅಲ್ಲಿಯೇ ವಾಸಿಸುವವ ರಾಗಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಒಂದು ಊರಿನಲ್ಲಿ ಇವರ ವಾಸಸ್ಥಾನಗಳನ್ನು ಅಥವಾ ವ್ಯಾಪಾರದ ಕೇಂದ್ರಗಳನ್ನು ಗಮನಿಸಿದಾಗ ಊರಿನ ಮಧ್ಯದಲ್ಲಿ ಮತ್ತು ಅದರ ಸುತ್ತಲೂ ಪ್ರಭಾವಿ ಜಾತಿಗಳು ವಾಸಿಸುವುದನ್ನು ಕಾಣುತ್ತೇವೆ. ನಂತರ ತಳಸಮುದಾಯಗಳ ವಾಸಸ್ಥಾನಗಳು ಕಂಡುಬರುತ್ತವೆ. ಈ ಖಾಟಿಕರ ವಾಸಸ್ಥಳವನ್ನು ಗಮನಿಸಿದಾಗ ಇವರ ಕೇರಿಗಳು ಮುಸ್ಲಿಂ ಮತ್ತು ದಲಿತರ ಕೇರಿಗಳ ಮಧ್ಯೆ ಇರುವುದು ಕಂಡುಬರುತ್ತದೆ. ಏಕೆಂದರೆ ಮಾಂಸವನ್ನು ತಿನ್ನುವ ಸಮುದಾಯಗಳ ಪಕ್ಕದ ಕೇರಿಗಳಲ್ಲಿ ಇವರು ತಮ್ಮ ಮನೆ ಮತ್ತು ಅಂಗಡಿಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಜೀವನ ನಿರ್ವಹಣೆಗೆ ಅವಶ್ಯವಾಗಿರುವ ವೃತ್ತಿಯ ಹಿನ್ನೆಲೆಯಲ್ಲಿ ಇವರು ಈ ಪರಿಸರದಲ್ಲಿ ವಾಸಿಸುವುದು ಅವಶ್ಯಕವಾಗಿರುತ್ತದೆ. ಹಾಗೆಯೇ ಇಂದು ಪಟ್ಟಣ ಪ್ರದೇಶಗಳಲ್ಲಿ ಮುಖ್ಯವಾಗಿ ಹೆಚ್ಚು ಜನರು ಓಡಾಡುವಂತಹ ಸ್ಥಳಗಳಲ್ಲಿ ಇವರು ಕೊಠಡಿಗಳನ್ನು ಬಾಡಿಗೆಗೆ ಪಡೆದು ಅಂಗಡಿಗಳನ್ನು ನಡೆಸುತ್ತಾರೆ. ಇಲ್ಲಿಯೂ ವೃತ್ತಿಯೆ ಮುಖ್ಯವಾಗಿರುತ್ತದೆ. ಕಾರಣ ಜನನಿಬಿಡದ ಕೇಂದ್ರವಾಗಿರುವ ಪ್ರದೇಶವಾಗಿದ್ದು ಕೊಂಡು ಹೆಚ್ಚು ಜನ ಮಾಂಸ ಕೊಂಡುಕೊಳ್ಳುತ್ತಾರೆಂಬ ಉದ್ದೇಶದಿಂದ ಈ ಸ್ಥಳಗಳನ್ನು ಆಯ್ದು ಕೊಳ್ಳುತ್ತಾರೆ. ಹಾಗೆಯೇ ಹುಲ್ಲುಗಾವಲು ಪ್ರದೇಶಗಳಲ್ಲಿ ಕುರಿಗಳು ಹೆಚ್ಚು ಸಿಗುವುದರಿಂದ ಇಂತಹ ಹತ್ತಿರದ ಪಟ್ಟಣ ಪ್ರದೇಶಗಳಲ್ಲಿ ಇವರನ್ನು ಕಾಣಬಹುದು.

೨.೩. ಜನಸಂಖ್ಯೆ

ಭಾರತದ ಜಾತಿ ವ್ಯವಸ್ಥೆಯಲ್ಲಿ ಎಲ್ಲ ಸಮುದಾಯಗಳು ಒಂದಲ್ಲ ಒಂದು ಜಾತಿಯಲ್ಲಿ ಗುರುತಿಸಿ ಕೊಳ್ಳುತ್ತವೆ. ಕೆಲವರು ತಮ್ಮ ಜಾತಿಯನ್ನು ಅಭಿಮಾನದಿಂದ ಹೇಳಿಕೊಂಡರೆ ಮತ್ತೆ ಕೆಲವರು ಪಿಸುಮಾತಿನಲ್ಲೆ ಹೇಳಿ ಮುಗಿಸುವರು. ಆದರೆ ತಮ್ಮ ಜಾತಿಯ ಹೆಸರನ್ನು ಹೇಳಿಕೊಳ್ಳಲು ಇಷ್ಟಪಡದ ಒಂದು ಸಮುದಾಯದ ಜನಸಂಖ್ಯೆಯನ್ನು ಕಂಡು ಹಿಡಿಯುವುದು ಸುಲಭದ ಮಾತಲ್ಲ. ಏಕೆಂದರೆ ಎಲ್ಲಿ ತನ್ನ ಜಾತಿ ಗೊತ್ತಾದ ತಕ್ಷಣ ತನ್ನನ್ನು ಅಪಮಾನ ಮಾಡುವರೋ ಎಂಬ ಕೀಳಿರಿಮೆಯಿಂದ ಕೂಡಿರುವ ಇವರು ತಾವು ಕ್ಷತ್ರಿಯರು, ಅರೆ ಮರಾಠಿ, ಸೂರ್ಯವಂಶ ಕ್ಷತ್ರಿಯರು ಎಂದು ಮುಂತಾದ ಹಲವು ಹೆಸರುಗಳಿಂದ ಜಾತಿಯನ್ನು ಹೇಳಿಕೊಳ್ಳುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಒಂದು ಸಮುದಾಯದ ಜನಸಂಖ್ಯೆಯನ್ನು ಕಂಡುಹಿಡಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕೆಲವರು ಖಾಟಿಕರ ಜನಸಂಖ್ಯೆಯನ್ನು ಕುರಿತು ಹೇಳುವಾಗ ಇವರು ಕರ್ನಾಟಕದಲ್ಲಿ ೮೦ ಸಾವಿರದಿಂದ ಒಂದು ಲಕ್ಷದ ವರೆಗೆ ಇರುವುದಾಗಿ ಅಂದಾಜಿಸಲಾಗಿದೆ. ಮುಖ್ಯವಾಗಿ ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ರಾಣೆಬೆನ್ನೂರು, ಹರಿಹರ, ರಾಯಚೂರು, ಬಳ್ಳಾರಿ, ಗಂಗಾವತಿ, ಹೊಸಪೇಟೆ, ಚಿತ್ರದುರ್ಗ, ಕೊಪ್ಪಳ ಹೀಗೆ ಮುಖ್ಯವಾಗಿ ಇವರು ಪಟ್ಟಣ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುವುದನ್ನು ಕಾಣಬಹುದು. ಈ ಸಮುದಾಯದವರು ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ ರಾಯಚೂರು, ಬಳ್ಳಾರಿ, ಹೊಸಪೇಟೆ, ಕೊಪ್ಪಳ ಹಾಗೂ ಗಂಗಾವತಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಆದರೂ ಯಾವುದೇ ಒಂದು ಗ್ರಾಮಪಂಚಾಯಿತಿ, ನಗರಸಭೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪರಿಷತ್ತಿನ ಕ್ಷೇತ್ರದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುವಷ್ಟು ಜನಸಂಖ್ಯೆಯ ಪ್ರಮಾಣ ಇಲ್ಲದಿರುವುದು ಕಂಡುಬರುತ್ತದೆ. ಹಾಗಾಗಿ ಮೇಲೆ ಹೇಳಿದಂತೆ ೮೦ ರಿಂದ ಒಂದು ಲಕ್ಷ ಜನಸಂಖ್ಯೆಯು ಕರ್ನಾಟಕದಲ್ಲಿರುವ ಇತರೆ ಸಮುದಾಯಗಳ ಜನಸಂಖ್ಯೆಗೆ ಹೋಲಿಸಿದಲ್ಲಿ ಈ ಸಮುದಾಯವು 'Microscopic Minority'ಯಾಗಿ ಕಂಡುಬರುತ್ತದೆ. ಹೆಚ್ಚಿನ ಜನಸಂಖ್ಯೆ ಹೊಂದಿರುವ ಇತರೆ ಸಮುದಾಯಗಳಿಗೆ ರಾಜಕಾರಣಿಗಳು ಸಹಾಯ ಮಾಡದಿರುವ ಇಂದಿನ ಸಂದರ್ಭದಲ್ಲಿ ಇಂತಹ ಒಂದು ಸಮುದಾಯವು ಇದೆ ಎಂದು ಸಹ ಅವರಿಗೆ ಗೊತ್ತಿರುವುದೋ ಇಲ್ಲವೋ ಎನ್ನುವುದನ್ನು ಹೇಳುವುದು ಕಷ್ಟ. ಹೀಗಿರುವಾಗ ಈ ಸಮುದಾಯಕ್ಕೆ ಸರ್ಕಾರದಿಂದ ಸಿಗುವ ಸವಲತ್ತುಗಳಾಗಲಿ, ಉಚಿತ ಶಿಕ್ಷಣವಾಗಲಿ ದಕ್ಕದೆ ಹೋಗಿವೆ. ವಯಸ್ಕರ ಶಿಕ್ಷಣದಂತಹ ಯೋಜನೆಗಳಿಗೆ ಇಂತಹದೊಂದು ಸಮುದಾಯ ಇದೆ ಎಂದು ಅರಿವಿಗೆ ಬಂದಿಲ್ಲ ಎನಿಸುತ್ತದೆ.

ಈ ಅಧ್ಯಾಯದ ಪ್ರಮುಖ ಅಂಶಗಳು

- ಖಾಟಿಕರು ಮೂಲತಃ ಬೇಟೆಯಾಡುತ್ತ ಮುಂದುವರಿದು ಮಾಂಸ ಮಾರಾಟದ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವಂತಹ ಸಮುದಾಯ.
- ಇವರು ಹಲವು ವಿದೇಶಿ ದಾಳಿಗಳನ್ನು ಎದುರಿಸಿದಂತಹ ವೀರ ಯೋಧರಾಗಿರುವ ಇಲ್ಲಿಯ ಮೂಲ ನಿವಾಸಿಗಳು.
- ಇವರು ಮುಸ್ಲಿಂ ದೊರೆಗಳಲ್ಲಿ, ರಜಪೂತರಲ್ಲಿ ಯೋಧರಾಗಿ, ಸೈನ್ಯ ತುಕುಡಿಗಳಿಗೆ ಮಾಂಸ ಪೂರೈಸುವ ವೃತ್ತಿಯಲ್ಲಿ ಇದ್ದಿರಬಹುದೆಂದು ತಿಳಿದು ಬಂದು ಮುಂದೆಯು ಮಾಂಸ ಮಾರಾಟ ವೃತ್ತಿಯನ್ನೇ ಮುಂದುವರಿಸಿಕೊಂಡು ಬಂದಿರುವುದಾಗಿ ತಿಳಿದುಬರುತ್ತದೆ.
- ಉತ್ತರದಲ್ಲಿ ಮೊಘಲರ ಅರಸರ ಮಾಂಡಲಿಕರಾದ ರಜಪೂತ ಅರಸರಲ್ಲಿ ಇವರು ಸೈನಿಕರಾಗಿದ್ದರೆಂದು ತಿಳಿದುಬರುತ್ತದೆ. ಯೋಧರಾಗಿ ಹಾಗೂ ಮಾಂಸ ಮಾರಾಟದ ವೃತ್ತಿಯಲ್ಲಿ ತೊಡಗಿದಂತಹ ಈ ಸಮುದಾಯ ಮೊಗಲರ ಆಳ್ವಿಕೆಯ ಸಂದರ್ಭದಲ್ಲಿ ಮಂತಾತರಕ್ಕೆ ಹಾಗೂ ಮಕ್ಕಳ ಮತ್ತು ಮಹಿಳೆಯರ ಮಾನ ರಕ್ಷಣೆಗಾಗಿ ಉತ್ತರದಿಂದ ದಕ್ಷಿಣಕ್ಕೆ ಬಂದಿರುವುದಾಗಿ ತಿಳಿದುಬರುತ್ತದೆ.
- ತೈಮೋರಲಂಗನ ದಾಳಿಯ ಸಂದರ್ಭದಲ್ಲಿ ಕಠ ಕಠಿಕ ಕಾಠಿಕ್ ಎಂದಿರುವ ಈ ಸಮುದಾಯ ತೈಮೋರಲಂಗನ ದಾಳಿಗೆ ಸಿಕ್ಕಾಗ ನಾವು ಕಠ ಅಥವಾ ಕಾಠಿಕರಲ್ಲ, 'ಖಟಿಕ'ರು ಎಂದು ಗುರುತಿಸಿ ಕೊಂಡದ್ದಾಗಿ ಸೋನಕರ್ ಶಾಸ್ತ್ರೀಯವರ 'ಖಟಿಕ್ ಜಾತ್ ಕಿ ಉತ್ಪತ್ತಿ ಔರ್ ವಿಕಾಸ' ಎಂಬ ಪುಸ್ತಕದಿಂದ ತಿಳಿದುಬರುತ್ತದೆ.
- ದಕ್ಷಿಣಕ್ಕೆ ಬಂದಂತಹ ಸಂದರ್ಭದಲ್ಲಿ ವಿಜಯನಗರ ಅರಸರ ಪಾಳೆಗಾರರಲ್ಲಿ ಸೈನಿಕ ವೃತ್ತಿಯಲ್ಲಿ ಮುಂದುವರೆದು ನಂತರ ರಾಜ್ಯ ಆಳ್ವಿಕೆಗಳು ಮುಗಿದನಂತರ ಮಾಂಸ ಹಾಗೂ ಮದ್ಯ ಮಾರಾಟದ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಚೂಡಾಮಣಿ ಕಲಾಲ್ ಅವರ 'ಕರ್ನಾಟಕ ಕಲಾಲ್(ಸೂರ್ಯವಂಶ ಕ್ಷತ್ರಿಯ)ರು' ಎಂಬ ಪುಸ್ತಕದಿಂದ ತಿಳಿದುಬರುತ್ತದೆ.
- ಪ್ರಸ್ತುತ ಸಂದರ್ಭದಲ್ಲಿ ಮುಖ್ಯವಾಗಿ ಕುರಿ ಮಾಂಸ ಮಾರಾಟ ಮಾಡುವ ವೃತ್ತಿಯಲ್ಲಿ ಮುಂದುವರೆದು ಮತ್ತೆ ಕೆಲವರು ಇತರೆ ಉದ್ಯೋಗಗಳಲ್ಲೂ ತೊಡಗಿಕೊಂಡಿರುವುದು ಕಂಡುಬರುತ್ತದೆ.
- ಮುಖ್ಯವಾಗಿ ಇವರ ಉದ್ಯೋಗವನ್ನೇ ಅವಲಂಬಿಸಿ ಇವರನ್ನು ಸಮಾಜವು ಕರ್ನಾಟಕದಲ್ಲಿ ಕಟುಗ, ಕಟುಕ, ಕಾಟಿಕ್, ಖಾಟಿಕ್, ಕಲಾಲ್‌ರೆಂದು ಗುರುತಿಸುತ್ತಾರೆ.

ಆಧಾರಗಳು

೧. ಚಿಂತಾಮಣಿ ಕೆ. ಜೋರಾಪುರ., *ಕರ್ನಾಟಕದಲ್ಲಿ ಕ್ಷತ್ರಿಯ ಪಂಗಡಗಳು*, ೨೦೦೫,ಪ್ರಹ್ಲಾದ ಪ್ರಕಾಶನ, ಬೆಳಗಾವಿ.

೨. ಚೂಡಾಮಣಿ ಕಲಾಲ್., *ಕರ್ನಾಟಕ ಕಲಾಲ್(ಸೂರ್ಯವಂಶ ಕ್ಷತ್ರಿಯ)ರು*, ೧೯೪೬, ಶೆಷಾಚಲ ಗ್ರಂಥಮಾಲೆ, ಧಾರವಾಡ.

೩. ಶಾಸ್ತ್ರೀ ಜಿ.ವಿ., *ಸಂಪೂರ್ಣ ಮಹಾಭಾರತ*, ಪಾರುಪ್ರಕಾಶನ, ಗದಗ

೪. ಮಾಮಚಂದ ರಿವಾಡಿಯಾ *ಖಟಿಕ್ ಸಮಾಜ ಕ ಇತಿಹಾಸ*, ೨೦೦೦, ರಿವಾಡಿಯಾ ಸಾಹಿತ್ಯ ಪ್ರಕಾಶನ, ಹೊಸದೆಹಲಿ.

೫. ರಾಜನಾಥ ಸೋನಕರ್ ಶಾಸ್ತ್ರೀ, *ಖಟಿಕ್ ಜಾತಿ ಕಿ ಉತ್ಪತ್ತಿ ಔರ್ ವಿಕಾಸ್*, ೨೦೦೫, ಕುಶಾಲ್ ಪಬ್ಲಿಕೇಷನ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ವಾರಣಾಸಿ.

೬. Syed Siraj-Ul-Hassan., "The Castes and Tribes of H.E.H the Nizam's Dominions", Asian Educational services, New Delhi, 1989

ಅಧ್ಯಾಯ - ೩

ಖಾಟಿಕ್ ಸಮುದಾಯದ ಸಾಮಾಜಿಕ ಜೀವನ

ಮನುಷ್ಯ ಸಂಘ ಜೀವಿ. ಅವನು ಸಮಾಜದಲ್ಲಿ ಬದುಕುವಾಗ ಸಮಾಜದ ರೀತಿ-ನೀತಿಗಳೊಂದಿಗೆ ಬದುಕುತ್ತಾನೆ. ತನ್ನ ಕುಟುಂಬದಲ್ಲೂ ಒಂದು ನಿಯಂತ್ರಣ ವ್ಯವಸ್ಥೆ ಅಂದರೆ ತನ್ನದೇ ಆದ ವಿಧಿ-ನಿಷೇಧಗಳು, ರೀತಿ-ನೀತಿಗಳು, ಅಚಾರ-ವಿಚಾರ, ಕಾನೂನು-ಕಟ್ಟಳೆಗಳನ್ನು ಹೊಂದಿರುವುದನ್ನು ಕಾಣಬಹುದು. ಖಾಟಿಕ್ ಸಮುದಾಯದಲ್ಲಿಯೂ ನಾವು ಇದನ್ನು ಕಾಣಬಹುದು. ಹೀಗೆ ವ್ಯವಸ್ಥೆಯೊಳಗೆ ತನ್ನ ಸುಭದ್ರತೆಯನ್ನು ಕಾಯ್ದುಕೊಳ್ಳುವುದು ಸಹ ಒಂದು ಸಮುದಾಯಕ್ಕೆ ಮುಖ್ಯವೂ ಆಗಿರುತ್ತದೆ. ಹಾಗಾಗಿ ಅವನು ಸಮಾಜದೊಂದಿಗೆ ಸಂಬಂಧವನ್ನು ಹೊಂದಿ ತನ್ನದೇ ಆದ ಒಂದು ಪ್ರತ್ಯೇಕ ನೀತಿ-ನಿಯಮಗಳನ್ನು ಮೈಗೂಡಿಸಿಕೊಂಡು ಬದುಕುತ್ತಾನೆ.

ಒಂದು ಸಮಾಜದ ಅತೀ ಸಂಕೀರ್ಣ ಘಟಕ ಎಂದರೆ ಕುಟುಂಬ ಎಂದು ಹೇಳಬಹುದು. ಒಂದು ಸಮುದಾಯದ ಕುಟುಂಬವನ್ನು ಅಧ್ಯಯನಿಸುವ ಮುಖಾಂತರ ಆ ಸಮುದಾಯವನ್ನು ನಂತರ ಆ ಸಮುದಾಯ ಸಮಾಜದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿಯಲು ಸಹಕಾರಿಯಾಗುತ್ತದೆ ಎಂದು ಹೇಳಬಹುದು. ಅದ್ದರಿಂದ ಈ ಅಧ್ಯಾಯದಲ್ಲಿ ಖಾಟಿಕ್ ಸಮುದಾಯದ ಹಲವಾರು ಕುಟುಂಬಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಧ್ಯಯನ ಮಾಡಲಾಗಿದೆ. ಆ ಮುಖಾಂತರ ಸಮುದಾಯದ ಸಾಮಾಜಿಕ ಜೀವನವನ್ನು ಚಿತ್ರಿಸುವ ಕಾರ್ಯ ಮಾಡಲಾಗಿದೆ.

೩.೧. ಕೌಟುಂಬಿಕ ಪದ್ಧತಿ

ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಕುಟುಂಬವೇ, ಉಳಿದೆಲ್ಲ ಸಂಸ್ಥೆಗಳಿಗಿಂತ ಇದು ಹೆಚ್ಚು ಶಾಶ್ವತವೂ, ಪ್ರಭಾವಿಯೂ ಆಗಿರುತ್ತದೆ. ಮಾನವನ ವ್ಯಕ್ತಿತ್ವ ಬೆಳೆಸುವ ಮೊದಲ ಸಂಸ್ಥೆ ಎಂದರೆ ಕುಟುಂಬವೆನ್ನಬಹುದು. ಕುಟುಂಬ ಒಂದು ಸಾಮುದಾಯಿಕ ಚೌಕಟ್ಟಿನಲ್ಲಿ ರೂಪತಾಳುತ್ತದೆ. ಕುಟುಂಬ ಚಿಕ್ಕದಾದ ಸಾಮಾಜಿಕ ಘಟಕವಾಗಿದ್ದು, ತಂದೆ-ತಾಯಿ ಮತ್ತು ಮಕ್ಕಳಿಂದ ಕೇಂದ್ರೀಕೃತವಾಗಿರುತ್ತದೆ. ಮಗುವಿನ ಜನನಕ್ಕೆ ಇದು ಪ್ರಥಮ

ಸಾಮಾಜಿಕ ಪರಿಸರವಾಗುತ್ತದೆ. ಅನೇಕ ಸಮಾಜಶಾಸ್ತ್ರಜ್ಞರು 'ಕುಟುಂಬ'ವನ್ನು ಕುರಿತು ವಿವಿಧ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಸಮ್ನರ್ ಮತ್ತು ಕೆಲ್ಲರ್ ಪ್ರಕಾರ 'ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಟ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ' ಎಂದಿದ್ದಾರೆ. ಇಲಿಯಟ್ ಮತ್ತು ಮೆರಿಲ್‌ರವರು 'ಕುಟುಂಬವು ಜೈವಿಕ ಘಟಕವಾಗಿದ್ದು ಗಂಡ-ಹೆಂಡತಿ ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ' ಎಂದಿದ್ದಾರೆ. ಎಂ.ಎಫ್.ನಿಮ್‌ಕಾಫ್‌ರವರು 'ಮಕ್ಕಳಿರುವ ಅಥವಾ ಇಲ್ಲದ ಗಂಡ-ಹೆಂಡತಿಯರ ಶಾಶ್ವತ ಸಂಘವೆಂದೂ ಅಥವಾ ಪುರುಷ ಅಥವಾ ಸ್ತ್ರೀಯು ಮಾತ್ರ ಮಕ್ಕಳೊಂದಿಗೆ ಇರುವ ಘಟಕವೆಂದು' ಹೇಳಿದ್ದಾರೆ. ಅದೇ ರೀತಿ ಬರ್ಗೆಸ್ ಮತ್ತು ಲಾಕರ್ ಅವರು 'ಕುಟುಂಬದಲ್ಲಿ ಒಂದು ಸಮೂಹದ ಜನರು ವಿವಾಹ, ರಕ್ತಸಂಬಂಧ ದತ್ತು ಸ್ವೀಕಾರದಿಂದ ಒಂದೆಡೆ ವಾಸವಾಗಿದ್ದು, ಆಂತರಿಕ ಕ್ರಿಯೆ ಮತ್ತು ಸಂಪರ್ಕ ವಿಧಾನಗಳಲ್ಲಿ ಗಂಡ-ಹೆಂಡತಿ, ತಂದೆ-ತಾಯಿ, ಮಗ-ಮಗಳು, ಸೋದರ-ಸೋದರಿ ಸಂಬಂಧದಿಂದ ಏಕರೂಪದ ಸಂಸ್ಕೃತಿಯನ್ನು ಪಡೆದಿರುತ್ತಾರೆ' ಎಂದು ಹೇಳಿದ್ದಾರೆ. ಇದರಿಂದ ಕುಟುಂಬವು ಸಮಾಜದ ಮೂಲಭೂತ ಘಟಕ ವಾಗಿರುತ್ತದೆ. ಇದು ಜೈವಿಕ ಘಟಕವಾಗಿದ್ದು ಸಾಂಸಾರಿಕ ರೂಪದಲ್ಲಿ ಗಂಡ-ಹೆಂಡತಿಯರಲ್ಲಿ ಲೈಂಗಿಕ ಬಾಂಧವ್ಯವನ್ನು ರೂಪಿಸುವ ಗುಣಲಕ್ಷಣಗಳನ್ನು ಹೊಂದಿ ಸಮಾಜದ ಎಲ್ಲಾ ಪ್ರಕಾರಗಳಲ್ಲೂ 'ಸಂಸ್ಥೆ'ಯಾಗಿ ಕಾರ್ಯನಿರ್ವಹಿಸುತ್ತದೆ.

ಖಾಟಿಕ್ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿ ಇರುವುದನ್ನು ಕಾಣಬಹುದಾಗಿದೆ. ಪಿತೃಪ್ರಧಾನ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ಕಂಡು ಬರುತ್ತವೆ. ಕುಟುಂಬದ ಪ್ರತಿಯೊಂದು ಆಗು-ಹೋಗುಗಳನ್ನು ಹೆಚ್ಚಾಗಿ ಪುರುಷರೇ ನೋಡಿಕೊಳ್ಳುತ್ತಾರೆ. ಆದಿಮ ಸಂಸ್ಕೃತಿಯಲ್ಲಿ ಮನುಷ್ಯ ಗುಂಪು ಜೀವನ ನಡೆಸುತ್ತಿದ್ದ ಎಂಬುದನ್ನು ನಾವು ತಿಳಿದಿದ್ದೇವೆ. ಈ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚು. ಇಂದಿನ ಈ ಜಾಗತೀಕರಣದ ಸಮಯದಲ್ಲಿಯೂ ಸಹ ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಕಾಣಸಿಗುವುದು. ಅಲ್ಲಲ್ಲಿ ವಿಭಕ್ತ ಕುಟುಂಬಗಳಿದ್ದರೂ ಅಲ್ಪ ಪ್ರಮಾಣದಲ್ಲಿವೆ. ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ೧೦-೧೫ ರವರೆಗೆ ಜನಸಂಖ್ಯೆಯಿರುತ್ತದೆ. ಇಂತಹ ಅವಿಭಕ್ತ ಕುಟುಂಬಗಳ ಬಗ್ಗೆ ಗಮನಿಸಿದಾಗ ಇವರ ವೃತ್ತಿಯೇ ಇದರ ಮೂಲ ಕಾರಣವಾಗಿರುವುದಾಗಿ ತೋರುತ್ತದೆ. ಈ ಸಮುದಾಯದಲ್ಲಿ ಪಿತೃಪ್ರಧಾನವಾದ ಕುಟುಂಬ ವ್ಯವಸ್ಥೆಯು ಇರುವುದಾಗಿದೆ. ಆದರೂ ಇವರಲ್ಲಿ ಮಾತೃತ್ವ ಪ್ರಧಾನಕ್ಕೆ ಹೆಚ್ಚಿನ ಗೌರವವನ್ನು ನೀಡಲಾಗುತ್ತದೆ. ಹಿರಿಯ ಸೊಸೆಗೆ ಕುಟುಂಬದಲ್ಲಿ ಬಹಳ ಗೌರವವಿದೆ. ಯಾವುದೇ ಶುಭ ಕಾರ್ಯಗಳಲ್ಲಿ ಹಿರಿಯ ಮಗ ಮತ್ತು ಸೊಸೆಗೆ ಮೊದಲ ಆದ್ಯತೆ ಕೊಡುತ್ತಾರೆ. ತಂದೆಯ ನಂತರ ಆಸ್ತಿಯು ಮಗನಿಗೆ ಸೇರುತ್ತದೆ. ಗಂಡು ಮಕ್ಕಳಿಲ್ಲದಿರುವ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯನ್ನು ನೀಡಲಾಗುತ್ತದೆ. ಇತ್ತೀಚಿನ ದಿನ

ಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿಯಿಂದ ವಿಭಕ್ತ ಕುಟುಂಬಗಳಿಗೆ ಹಂಚಿಹೋಗುತ್ತಿರುವ ಕುಟುಂಬಗಳು ಸಹ ಕಾಣಸಿಗುತ್ತವೆ. ಆದರೂ ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ ಎಂದು ಹೇಳಬಹುದು.

೩.೨. ಒಳಪಂಗಡ ವ್ಯವಸ್ಥೆ

ಖಾಟಿಕ್ ಸಮುದಾಯದಲ್ಲಿ ಮುಖ್ಯವಾಗಿ ಒಳಪಂಗಡ ವ್ಯವಸ್ಥೆಯಲ್ಲಿ ದೊಡ್ಡಗಂಗಾಳ ಮತ್ತು ಸಣ್ಣಗಂಗಾಳ ಎಂಬ ಎರಡು ಒಳಪಂಗಡ ವ್ಯವಸ್ಥೆಯು ಕಂಡುಬರುತ್ತದೆ. ಈ ರೀತಿಯಾಗಿ ಒಂದು ಸಮುದಾಯದಲ್ಲಿ ಈ ಭೇದ ಭಾವ ಅಥವಾ ಭಿನ್ನಬಿಪ್ರಾಯಗಳನ್ನು ಏತಕ್ಕಾಗಿ ವಿಂಗಡಿಸಿದ್ದೀರಿ ಎಂದು ಪ್ರಶ್ನಿಸಿದಾಗ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ಕೊಪ್ಪಳ ಜಿಲ್ಲೆ ಹುಲಿಗಿ ಗ್ರಾಮದಲ್ಲಿ ನಡೆದ ಖಾಟಿಕ ಸಮುದಾಯದ ಸೂರ್ಯವಂಶ ಕ್ಷತ್ರಿಯ ಸಮಾಜ ಸಮ್ಮೇಳನದಲ್ಲಿ ಶ್ರೀ ಸೂರ್ಯನಾರಾಯಣ ಮೂರ್ತಿ ಪ್ರತಿಷ್ಠಾಪನೆ ಹಾಗೂ ದೇವಸ್ಥಾನದ ಕಾರ್ಯಕ್ರಮದಲ್ಲಿ ನೆರೆದಿದ್ದ ಶ್ರೀ ಎಂ.ಬಿ. ಕಲಾಲ್, ಶ್ರೀ ಜೀವನ್ ಮಾನಕರ್, ಶ್ರೀ ಶಿವಾಜಿರಾವ್ ಹಾಗೂ ಹಲವು ಹಿರಿಯರು ಹೇಳಿರುವ ಪ್ರಕರಣ ಈ ರೀತಿಯಾಗಿದೆ.

ಹಿಂದಿಯ ಭಾಷೆಯಲ್ಲಿ ದೊಡ್ಡಗಂಗಾಳವನ್ನು 'ಬಡೀಥಾಲಿ', ಸಣ್ಣಗಂಗಾಳವನ್ನು 'ನನ್ನೀಥಾಲಿ' ಎಂದು ಕರೆಯುತ್ತಾರೆ. ಈ ಸಮುದಾಯದಲ್ಲಿ ಮೊದಲನೆಯ ಹೆಂಡತಿ ಹಾಗೂ ಮೊದಲ ಹೆಂಡತಿಯ ಮಕ್ಕಳು 'ದೊಡ್ಡಗಂಗಾಳ'ಕ್ಕೆ ಸೇರಿದವರಾಗಿರುತ್ತಾರೆ. ಇವರಲ್ಲಿ ಎರಡನೆಯ ಹೆಣ್ಣಿನ ಸಂಬಂಧಗಳನ್ನು ಇಟ್ಟುಕೊಂಡಿರುವ ಹಾಗೂ ಎರಡನೆಯ ಹೆಂಡತಿಗೆ ಆದಂತಹ ಮಕ್ಕಳು 'ಸಣ್ಣಗಂಗಾಳ'ಕ್ಕೆ ಸೇರುತ್ತಾರೆ. ಈ ರೀತಿಯಾಗಿ ಪದ ಬಳಕೆಯಿಂದ ಅವರನ್ನು ಗುರುತಿಸುತ್ತಾರೆ ಹಾಗೂ ಕರೆಯುತ್ತಾರೆ. ಹೀಗೆ ಸಣ್ಣಗಂಗಾಳದವರ ಜನಸಂಖ್ಯೆಯು ದೊಡ್ಡಗಂಗಾಳದ ಸಂಖ್ಯೆಗೆ ಸರಿಸಮಾನವಾಗಿ ಬೆಳೆದು ಬರುತ್ತಿರುವುದಾಗಿ ತಿಳಿಸಿದರು. ಹಾಗೆಯೇ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ಊರುಗಳಾದ ಚಿತ್ರದುರ್ಗ, ಧಾರವಾಡ, ಹುಬ್ಬಳ್ಳಿ, ದಾವಣಗೆರೆ, ಬಳ್ಳಾರಿ, ಕೊಪ್ಪಳ, ಹೊಸಪೇಟೆ ಮುಂತಾದ ಪ್ರದೇಶಗಳಲ್ಲಿ ಸಂದರ್ಶನದ ಸಮಯದಲ್ಲಿ ಈ ಮೇಲಿನಂತೆ ಮಾಹಿತಿಯನ್ನು ತಿಳಿಸಿದರು. ಈ ಸಮುದಾಯದ ಪ್ರತಿಯೊಬ್ಬರು ಎರಡನೆ ಸಂಬಂಧವನ್ನಿಟ್ಟುಕೊಳ್ಳುವವರೆಂದು ಅರ್ಥವಲ್ಲ. ಇವರಲ್ಲಿ ಬಹಳಷ್ಟು ಏಕಪತ್ನಿಯರನ್ನು ಮಾತ್ರ ಹೊಂದಿದ್ದಾರೆ. ಈ ಸಮುದಾಯದಲ್ಲಿ ಹಿಂದಿನ ತಲೆಮಾರಿನವರು ಉಪಪತ್ನಿಯರನ್ನು ಹೊಂದಿರುತ್ತಿದ್ದರು ಅವರ ಮಕ್ಕಳೆ ಇಂದಿನ ಸಣ್ಣಗಂಗಾಳದವರು ಎಂದು ಹೇಳುತ್ತಾರೆ. ದೊಡ್ಡಗಂಗಾಳ ಮತ್ತು ಸಣ್ಣಗಂಗಾಳ ಈ ಎರಡೂ ಉಪಪಂಗಡಗಳಲ್ಲಿ ಹಿಂದೆ ಊಟ-ಉಪಚಾರಗಳು, ಗಂಡು ಹೆಣ್ಣು ಕೊಡುತೆಗೆದುಕೊಳ್ಳುವಿಕೆ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿ ಈ ಎರಡು ಪಂಗಡಗಳಲ್ಲಿ ಕೊಡುತೆಗೆದುಕೊಳ್ಳುವಿಕೆ, ಉಟೋಪಚಾರಗಳು ನಡೆಯುವುದು ಕಾಣಬರುತ್ತದೆ. ನಾಗರೀಕತೆಯಲ್ಲಿ ಮುಖ್ಯವಾಹಿನಿಗೆ ಬರಲು ಸಂಘಗಳನ್ನು ರಚಿಸಿಕೊಳ್ಳುತ್ತಿರುವ ಈ ಸಮುದಾಯ

ಇಂದು ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಈ ಪಂಗಡ ವ್ಯವಸ್ಥೆಯ ಬಗ್ಗೆ ತಾರತಮ್ಯವನ್ನು ತೊರೆದು ಒಂದೇ ಸಮುದಾಯದವರಾಗಿರುವುದಾಗಿ ಇಂತಹ ಒಳ ಪಂಗಡಗಳಿಂದ ನಮ್ಮ ಜನಸಂಖ್ಯೆ ಪ್ರಮಾಣ ಕುಸಿದು ಸಮುದಾಯದ ಬೆಳವಣಿಗೆ ಹಾಗೂ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಕಷ್ಟವಾಗುತ್ತಿದೆ ಎಂಬುದನ್ನು ಅರಿತಿದ್ದಾರೆ. ಇಂದಿನ ಯುಗದಲ್ಲಿ ಜನಸಂಖ್ಯೆ ಎಂಬುದು ಹೇಗೆ ಒಂದು ಅಧಿಕಾರ, ಸ್ಥಾನಮಾನ ಮುಂತಾದವನ್ನು ಪಡೆಯಲು ಅವಶ್ಯಕ ಎಂಬುದನ್ನು ಈ ಸಮುದಾಯ ದವರು ಅರಿತಿದ್ದಾರೆ. ಇದರಿಂದ ಸಮುದಾಯದ ಹಿತಾಸಕ್ತಿಗಳಿಗೆ ಹಾಗೂ ಸಮಾಜದಲ್ಲಿ ಸಿಗುವ ಸ್ಥಾನಮಾನಗಳನ್ನು ಕಾಪಾಡಿಕೊಳ್ಳಲು ಒಂದಾಗಿದ್ದಾರೆ.

೩.೩. ಬೆಡಗುಗಳು

ಬೆಡಗುಗಳು ಸಾಮಾಜಿಕ ಕುಟುಂಬದಲ್ಲಿ ಸಂಕೀರ್ಣವಾದುದು. ನಾಗರೀಕ ಮತ್ತು ಸಂಸ್ಕೃತಿಯ ವಿಕಾಸದ ಚಾರಿತ್ರಿಕ ಹೆಜ್ಜೆಗುರುತುಗಳೇ ಬೆಡುಗಗಳು. ಪ್ರಾಚೀನ ಕಾಲದಿಂದಲೂ ಮಾನವ ಆಚಾರ-ವಿಚಾರ, ನಂಬಿಕೆ-ನಿಷೇಧ, ವಿಧಿ-ವಿಧಾನಗಳನ್ನು ಅನುಕರಿಸುತ್ತ ಬಂದಿದ್ದಾನೆ. ಪ್ರತಿಯೊಂದು ಮನೆತನದ ಚರಿತ್ರೆಯನ್ನು ಬೆಡಗುಗಳ ಮೂಲಕ ತಿಳಿದುಕೊಳ್ಳಬಹುದು. ಬುಡಕಟ್ಟು ಸಮುದಾಯಗಳು ತಮ್ಮ ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕೆಂದರೆ ಬೆಡಗು, ಗೋತ್ರಗಳು ಮುಖ್ಯವಾಗಿರುತ್ತವೆ. ಖಾಟಿಕ್ ಸಮುದಾಯದಲ್ಲಿ ಬೆಡಗನ್ನು ಬಳಿ, ಕುಲ, ಗೋತ್ರ, ವಂಶ ಎಂದು ಕರೆಯುತ್ತಾರೆ. ಇವರಲ್ಲಿ ಒಂದೇ ಬಳಿಗೆ ಸೇರಿದವರು ಸೋದರರಾಗುತ್ತಾರೆ(ಕಲ್ಯಾಣಕಾರ್ ಮತ್ತು ಕಲ್ಯಾಣಕರ್ = ಸಹೋದರ/ಸಹೋದರಿ ಅಥವಾ ಅಣ್ಣಂದಿರು). ಬೆಡಗು ಮತ್ತು ಗೋತ್ರಗಳ ಆಧಾರದ ಮೇಲಿಂದ ತಮ್ಮ ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತಾರೆ. ಕೆಲವೊಂದು ಬೆಡಗುಗಳ ಆಧಾರದ ಮೇಲೆ ಆ ಮನೆತನದ ವೃತ್ತಿ, ದೇವರು, ಸಂಸ್ಕೃತಿ, ಮೂಲ ಪುರುಷ, ಇತಿಹಾಸ, ಆಚಾರ-ವಿಚಾರ, ವಿಧಿ-ನಿಷೇಧಗಳನ್ನು ತಿಳಿದುಕೊಳ್ಳಬಹುದು. ಉದಾ: ಖಾಟಿಕರಲ್ಲಿ 'ಕಲ್ಯಾಣಕರ್' ಬೆಡಗಿನವರು 'ಫಲಂಗಕರ್' ಬೆಡಗಿನಲ್ಲಿ ವಿವಾಹ ಸಂಬಂಧ ಬೆಳೆಸಬಹುದಾಗಿದೆ.

ಹಬ್ಬ, ಜಾತ್ರೆ, ಮದುವೆ, ಮಂಗಳ ಕಾರ್ಯಗಳಲ್ಲಿ ತಮ್ಮ ಕುಲಸ್ಥರು ಪರಸ್ಪರ ಭೇಟಿಯಾದಾಗ ಮೊದಲು ಆತನ ಕುಲ ಮತ್ತು ಮನೆದೇವರನ್ನು ಕೇಳಿ ತಿಳಿದುಕೊಳ್ಳುವ ಪದ್ಧತಿ ಖಾಟಿಕರಲ್ಲಿ ಕಂಡುಬರುತ್ತದೆ. ಈ ಬೆಡಗಿನ ಆಧಾರದ ಮೇಲೆಯೇ ಇವರು ಅಣ್ಣ ತಮ್ಮಗಳೋ ಅಥವಾ ನೆಂಟರೋ ಎಂದು ಗುರುತಿಸಬಹುದು. ಬೆಡಗುಗಳ ವಿಷಯವಾಗಿ ಒಂದು ನಿರ್ಧಿಷ್ಟ ವ್ಯಾಪ್ತಿಯಾಗಲಿ ಅಥವಾ ಅಂಕಿ-ಸಂಖ್ಯೆಗಳ ಸ್ಪಷ್ಟತೆಯಾಗಲಿ ಈ ಸಮುದಾಯದಲ್ಲಿ ಕಂಡು ಬರುವುದಿಲ್ಲ.

ಪ್ರಸ್ತುತ ಭಾರತೀಯ ಸಮಾಜದಲ್ಲಿ ಸುಮಾರು ೨,೯೩೪ ಜಾತಿ ಹಾಗೂ ಉಪ-ಜಾತಿಗಳಿರುವಾಗ,

ಕೇವಲ ಒಂದು ಪಂಗಡದಲ್ಲಿ ನೂರಾರು ಬೆಡಗು ಅಥವಾ ಕುಲಗಳು ಇರುವುದಾದರೂ ಹೇಗೆ ಸಾಧ್ಯ? ಕುಟುಂಬ ಮತ್ತು ಜನಸಂಖ್ಯೆ ಸಮಾಜದಲ್ಲಿ ಹೆಚ್ಚಾಗಬಹುದು. ಆದರೆ 'ಜಾತಿ' ಮತ್ತು 'ಬೆಡಗು'ಗಳು ಮಾತ್ರ ಎಂದಿಗೂ ಹೆಚ್ಚಾಗುವುದಿಲ್ಲ. ಒಂದೇ ಬೆಡಗನ್ನು ಅಪಭ್ರಂಶವಾಗಿ ಉಚ್ಚಾರಣೆ ಮಾಡುವುದರಿಂದ ಈ ಸಮಸ್ಯೆಗಳು ಉದ್ಭವಿಸುತ್ತವೆ. ಕಾಲ ಮತ್ತು ಪರಿಸರಕ್ಕೆ ತಕ್ಕಂತೆ ಸಮಾಜ ಮತ್ತು ಸಂಸ್ಕೃತಿ ಪರಿವರ್ತನೆಯಾದರೂ 'ಬೆಡಗುಗಳು' ಮಾತ್ರ ಸಾಮಾಜಿಕ ಸ್ಥಿರತೆಯನ್ನು ಪಡೆದು ಕೊಂಡಿವೆ. ಆದರೆ ಖಾಟಿಕ್ ಸಮುದಾಯದಲ್ಲಿ ದೊಡ್ಡಗಂಗಾಳ ಮತ್ತು ಸಣ್ಣಗಂಗಾಳ ಎಂಬ ಉಪ ಪಂಗಡಗಳ ವ್ಯತ್ಯಾಸಗಳಿಂದ ಈ ಬೆಡಗುಗಳ ಸಂಖ್ಯೆ ಹೆಚ್ಚಾಗಿರಬಹುದು.

ಕೆಲವೊಂದು ಪ್ರದೇಶಗಳಲ್ಲಿ ಬೆಡಗು ಮತ್ತು ಗೋತ್ರ ಒಂದೇ ಎಂಬ ಅರ್ಥ ಬರುವಂತೆ ಬಳಸುವುದುಂಟು. ಆದರೆ ಖಾಟಿಕ ಸಮುದಾಯದಲ್ಲಿ ಗೋತ್ರ ಮತ್ತು ಬೆಡಗು ಬೇರೆ ಬೇರೆ ಅರ್ಥ ಕೊಡುತ್ತವೆ. ವಿವಾಹ ಮಂಗಳ ಕಾರ್ಯಗಳಲ್ಲಿ 'ಬೆಡಗು' ಅಥವಾ 'ಕುಲ'ಗಳನ್ನು ಕೇಳುತ್ತಾರೆಯೇ ವಿನಃ 'ಗೋತ್ರ'ವನ್ನಲ್ಲಾ. ಒಂದು ಗೋತ್ರಕ್ಕೆ ನೂರಾರು ಬೆಡಗುಗಳು ಸೇರಿರುತ್ತವೆ.

ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ವಾಸಿಸುತ್ತಿರುವ ಖಾಟಿಕ್ ಸಮುದಾಯ ದಲ್ಲಿ ಕಾಣಬರುವ ಬೆಡಗುಗಳನ್ನು ಸಂಗ್ರಹಮಾಡಲಾಗಿದೆ. ಪ್ರಾದೇಶಿಕ ದೂರದ ಕಾರಣಗಳಿಂದ ಮೇಲುನೋಟಕ್ಕೆ ಸಂಸ್ಕೃತಿಯ ವಿಚಾರಗಳಲ್ಲಿ ಕೆಲವು ಭಿನ್ನತೆಗಳು ಕಂಡುಬಂದರೂ, ಮೂಲತಃ ಇವರೆಲ್ಲರ ಮೂಲ ನೆಲೆ ಒಂದೇ ಆಗಿದೆ. ಈ ಸಮುದಾಯದ ಬೆಡಗುಗಳನ್ನು ಗಮನಿಸುವುದಾದರೆ ಇವರಲ್ಲಿ ಸುಮಾರು ಬೆಡಗುಗಳು ಕಂಡುಬರುತ್ತವೆ. ಸ್ಪಷ್ಟನೆಗಾಗಿ ಕೆಲವು ಬೆಡಗುಗಳನ್ನು ಇಲ್ಲಿ ಗಮನಿಸಬಹುದು.

೧. ಬುಜರಕರ್	೨. ಪಲಂಗತೊಡ್‌ಕರ್
೩. ಬಿಡಕಿಕಾರಿ	೪. ಕಲ್ಯಾಣಕರ್
೫. ಕನ್ಯಾಕರ್	೬. ಮಿರಜಕರ್
೭. ಮೋಟೆಕರ್	೮. ಗೋವಿಂದಕರ್
೯. ಘಾಟಿಕಾರಿ	೧೦. ಕೊತ್ತಂಬರಿಕಿಕಾಡಿ
೧೧. ಹನುಮಂತಕಾರಿ	೧೨. ಆನಂದಕಾರಿ
೧೩. ನಿಜಾಮ್‌ಕರಿ	೧೪. ಕಾಂಬ್ಳೇಕರ್
೧೫. ಬೋಕಡಕಾರಿ	೧೬. ಸೇನಾಪತಿ (ಕಾಂಬಳ್ಳೆಕರ್)
೧೭. ಘುಂಟೇಕರ್	೧೮. ಷಡಂಕಾರ್

೧೯. ದೇವಕರ್	೨೦. ಮಳೆಕರ್
೨೧. ಜಾನ್ವೇಕರ್	೨೨. ಮೋರೆಕರ್
೨೩. ಚಣದುಕರ್	೨೪. ದಲಾಲ್‌ಕರ್
೨೫. ಗಂಟೇಕರ್	೨೬. ಅಂಕುಶಖಾನಿ
೨೭. ಕೋಟೆಕರ್	೨೮. ಗಂಡಗಾಳೆಕರ್
೨೯. ಕಾಂಬ್ಳೆಕರ್	೩೦. ಮಿರಜಕರ್
೩೧. ತಿಡಿಮಿಡಿಕರ್	೩೨. ಜುಗನಿಕರ್
೩೩. ನಿಜಾಮಕರ್	೩೪. ಗಂಡೆಗಾಳೆಕರ್
೩೫. ಜೋರಾಪುರ	೩೬. ಫತ್ತೇಪುರಿ
೩೭. ಶಿಗ್ಲಿಕರ್	೩೮. ರಾಯಬಾಗಕರ್
೩೯. ಸಾಳವೇಕರ್	೪೦. ಖಜೂರಕರ್
೪೧. ಫಾಸಲಕರ್	೪೨. ಕುವಾರಕರ್
೪೩. ಕಂಟೀಕರ್	೪೪. ಪನಾಳಕರ್
೪೫. ಪ್ರಭುಕರ್	೪೬. ಶಡಮ್‌ಕರ್
೪೭. ಶಹಪೂರಕರ್	೪೮. ಮೆತ್ರೇಕರ್
೪೯. ಪಾರಶ್‌ಗಡಕರ್	೫೦. ಚಾಪೇಕರ್

ಹೀಗೆ ಹಲವು ಬೆಡಗುಗಳನ್ನು ಕಾಣಬಹುದಾಗಿದೆ.

'ಚಾಕಣಾ ಕಲಾಲ್', 'ಲಾಂಡೆ ಕಾಲಾಲ್', 'ಸುಕ್ಕೆಬೀಡೆ', 'ಕಚ್ಚೇಬೀಡೆ', 'ನನ್ನಿಥಾಲಿ', 'ಬಡೀಥಾಲಿ' ಎಂಬ ಪಂಗಡಗಳು ಈ ಸಮುದಾಯದಲ್ಲಿವೆ. ಇವರೆಲ್ಲಾ ಖಾಟಿಕರೆ ಆಗಿದ್ದು ವೃತ್ತಿಗಳ ಪರಿಸರದಿಂದ ಭಿನ್ನರಾಗಿ ಕಂಡಬರುತ್ತಾರೆ ಎಂದು ಹೇಳಬಹುದು. 'ಚಾಕಣಾ ಕಲಾಲ್'ರೆಂದರೆ ಇವರು ಸಾರಾಯಿ, ಶೇಂದಿ ಅಂಗಡಿಗಳಲ್ಲಿ ಚಾಕಣಾ(ಮಾಂಸದೂಟವನ್ನು) ಮಾರುವ ವೃತ್ತಿಯನ್ನು ಹೊಂದಿದ್ದಾರೆ. ಅದ್ದರಿಂದ ಇವರಿಗೆ ಈ ಹೆಸರಿನಿಂದ ಗುರುತಿಸುತ್ತಾರೆ. ಇವರು ಹೆಚ್ಚಾಗಿ ಬಳ್ಳಾರಿ, ಕೊಪ್ಪಳ, ಗಂಗಾವತಿ ಕಡೆಗಳಲ್ಲಿ ಕಂಡುಬರುತ್ತಾರೆ.

ಲಾಂಡೆ ಕಲಾಲ್ : ಇವರೂ ಖಾಟಿಕರೇ. ಆದರೆ ಮುಸ್ಲಿಂ ಆಡಳಿತದ ಕಾಲದಲ್ಲಿ ಸುಲ್ತಿಯನ್ನು ಮಾಡಿಕೊಂಡು ಮುಸ್ಲಿಂರಾಗಿ ಪರಿವರ್ತನೆಯನ್ನು ಹೊಂದಿರುವುದಾಗಿ ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ತಿಳಿದುಬರುತ್ತದೆ. ಹೀಗಾಗಿ ಇವರನ್ನು 'ಲಾಂಡೆ', 'ಲಾಡ ಕಲಾಲ್' ಎಂದು ಕರೆಯುತ್ತಾರೆ. ನನ್ನೀಥಾಲಿ ಯವರನ್ನು 'ಸುಕ್ಕೇಬೀಡೆ' ಮತ್ತು ಬಡೀಥಾಲಿಯರನ್ನು 'ಕಚ್ಚೇಬೀಡೆ' ಎಂದು ಗುರುತಿಸಿಕೊಳ್ಳುತ್ತಾರೆ.

೩.೪. ರಕ್ತ ಸಂಬಂಧ

ತಂದೆಯ ಮೂಲಕವೇ ರಕ್ತ ಸಂಬಂಧವನ್ನು ಗುರುತಿಸಿಕೊಳ್ಳುತ್ತಾರೆ. ತಂದೆಯ ನಂತರ ಗಂಡು ಸಂತತಿಯ ಮೂಲಕ ಕುಟುಂಬ, ವಂಶ, ಕುಲ, ಗೋತ್ರ, ಮನೆದೇವರು, ವಂಶಾವಳಿ, ಏಕರಕ್ತ ಸಂಬಂಧ, ವಿವಾಹ ಮೊದಲಾದ ಸಾಮಾಜಿಕ ಅಂಶಗಳು ರಕ್ತ ಸಂಬಂಧದ ಆಧಾರದ ಮೇಲೆಯೆ ರಚಿತವಾಗಿರುತ್ತವೆ. ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಚಿಕ್ಕಪ್ಪ-ದೊಡ್ಡಪ್ಪ, ಅತ್ತೆ-ಮಾವ ಮುಂತಾದವರ ಸುತ್ತ ಕುಟುಂಬ ಮತ್ತು ರಕ್ತ ಸಂಬಂಧ ಕೇಂದ್ರೀಕೃತವಾಗಿರುತ್ತದೆ. ನಾವೆಲ್ಲರೂ ಒಂದೇ ರಕ್ತ ಸಂಬಂಧಿಗಳು, ಒಡನಾಡಿಗಳು, ಕುಟುಂಬದವರು, ವಂಶದವರು, ನೆಂಟರು, ಅಣ್ಣ ತಮ್ಮಗಳು ಎಂಬ ಅಭಿಮಾನ ಈ ಸಮುದಾಯದಲ್ಲಿ ಪ್ರಧಾನವಾಗಿರುತ್ತದೆ.

ಒಂದು ಸಮುದಾಯದ ಸದಸ್ಯರೆಲ್ಲರೂ ರಕ್ತ ಸಂಬಂಧಿಗಳೇ ಆಗಿರುವುದರಿಂದ ಅವರಲ್ಲಿ ಪ್ರೀತಿ, ವಿಶ್ವಾಸಗಳಿಂದ ಕೂಡಿದ ಸಹಕಾರ ಮತ್ತು ಸಂಬಂಧಗಳು ಬೆಳೆದಿರುತ್ತವೆ. ಪ್ರಸ್ತುತ ಅವಿಭಕ್ತ ಕುಟುಂಬಗಳಲ್ಲಿ ಒಗ್ಗಟ್ಟು ಮತ್ತು ಐಕ್ಯತೆ ಮೂಡಲು ರಕ್ತ ಸಂಬಂಧವೇ ಮುಖ್ಯ ಕಾರಣವಾಗಿದೆ. ವೈವಾಹಿಕ ಸಂಬಂಧಗಳನ್ನು ಬೆಳೆಸುವಾಗ ಒಳಪಂಗಡ ವಿವಾಹ ಅಥವಾ ಒಳಬಾಂಧವ್ಯ ವಿವಾಹ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಅಂತರ್ಜಾತಿಯ ವಿವಾಹಕ್ಕೆ ಇವರಲ್ಲಿ ಅವಕಾಶವಿಲ್ಲ. ಏಕಪತ್ನಿತ್ವ ಮತ್ತು ಬಹುಪತ್ನಿತ್ವ ವಿವಾಹ ಪದ್ಧತಿ ಆಚರಣೆಯಲ್ಲಿದ್ದರೂ ಏಕಪತ್ನಿತ್ವಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ತಂದೆಯಷ್ಟೇ ಗೌರವ ಸೋದರಮಾವನಿಗೆ, ತಾಯಿಯಷ್ಟೇ ಗೌರವ ಸೋದರತ್ತೆಗೆ ಕೊಡುವ ಸಂಪ್ರದಾಯ ಈ ಸಮುದಾಯದಲ್ಲಿ ಬೆಳೆದುಕೊಂಡು ಬಂದಿದೆ. ಒಳಪಂಗಡಗಳಿಂದ ಕುಲ ಗೋತ್ರಗಳು ಬೇರೆಯಾದರೂ ಮೂಲತಃ ಒಂದೇ ಕುಟುಂಬದ ರಕ್ತ ಸಂಬಂಧಿಗಳಂತೆ ಬಾಳಿ ಬದುಕುವ ಸಂಸ್ಕೃತಿ ಖಾಟಿಕ ಸಮುದಾಯದವರಲ್ಲಿ ನಾವು ಕಾಣಬಹುದು.

೩.೫. ಮನೆಗಳ ರಚನೆ

ಒಂದು ಸಮುದಾಯವನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಸಮಾಜದಲ್ಲಿ ಆ ಸಮುದಾಯದ ಸ್ಥಾನಗಳನ್ನು, ಆ ಊರಿನ ಯಾವ ಭಾಗದಲ್ಲಿ ಹೇಗೆ ವಾಸಿಸುತ್ತಿದೆ ಎಂಬುದನ್ನು ಗಮನಿಸಿದರೆ ಅಲ್ಲಿ ಹೊಂದಿರುವ ಸ್ಥಾನಮಾನಗಳ ಪರದಿ ಆ ಸಮುದಾಯವನ್ನು ಗುರುತಿಸುವಲ್ಲಿ ಸಹಕರಿಯಾಗುತ್ತದೆ. ಒಂದೊಂದು ಸಮುದಾಯವು ಊರಿನಲ್ಲಿ ತನ್ನದೇ ಆದ ಸ್ಥಳವನ್ನು ಹಾಗೂ ರೂಪರೇಷಗಳನ್ನು ಪಡೆದಿರುತ್ತದೆ ಎಂದರೆ ತಪ್ಪಾಗಲಾರದು. ಊರಿನಲ್ಲಿ ಶ್ರೇಷ್ಠವಾಗಿರುವ ನಮ್ಮ ಜಾತಿವ್ಯವಸ್ಥೆಯ ಮುಖಾಂತರ ಬ್ರಾಹ್ಮಣರು, ವೈಶ್ಯರು, ಕ್ಷತ್ರಿಯರು, ಶೂದ್ರರು ಎಲ್ಲಿರಬೇಕು ಹಾಗೂ ತಳಸಮುದಾಯಗಳು ಎಲ್ಲಿರಬೇಕು ಎಂಬುದು ಪೂರ್ವನಿರ್ಧರಿತವಾಗಿ ಪರಂಪರಾಗತವಾಗಿ ವರ್ಷಾನುಗಟ್ಟಲೆ ಹಿಂದೆಯೆ ನಿರ್ಧರಿಸಲ್ಪಟ್ಟಿರುವಂತೆ ನಮ್ಮ ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ.

ಸಾಮಾನ್ಯವಾಗಿ ಖಾಟಿಕರ ಮನೆಗಳು ಹರಿಜನರ ಕೇರಿ ಮತ್ತು ಮುಸಲ್ಮಾನರ ಕೇರಿಗಳ ಮಧ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವರ ಕೇರಿಗಳನ್ನು ಕಟುಗರ ಕೇರಿ, ಕಟುಗ ಮೊಹಲ್ಲ ಎಂದು ಕರೆಯುವುದನ್ನು ಕಾಣುತ್ತೇವೆ. ಆದರೆ ನಾಗರೀಕತೆಯು ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಇವರ ಮನೆಗಳು, ವ್ಯಾಪಾರ ಅಂಗಡಿಗಳು ಹೆಚ್ಚು ಊರಿನ ಜನನಿಬಿಡದ ಪ್ರದೇಶಗಳಲ್ಲಿ ಹಾಗೂ ಊರಿನ ಮಧ್ಯ ಭಾಗದಲ್ಲಿ ಜನರ ಒಡನಾಟದ ಸ್ಥಳಗಳಲ್ಲಿ ಇವರು ತಮ್ಮ ವ್ಯಾಪಾರದ ಹಿತಚಿಂತನೆ ಯಿಂದ ವಾಸಿಸುವಂತರಾಗಿರುವುದಾಗಿ ಕಂಡುಬರುತ್ತದೆ. ಆದರೆ ಇಂತಹ ಸ್ಥಳಗಳಲ್ಲಿ ಇವರ ವ್ಯಾಪಾರ ಕೇಂದ್ರಗಳನ್ನು ತೆರೆಯಲು ಬಹಳಷ್ಟು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ವ್ಯಾಪಾರ ಮಳಿಗೆಗಳನ್ನು ಬಾಡಿಗೆಗೆ ಪಡೆಯವುದು ಕಷ್ಟದ ಕೆಲಸವಾಗಿರುತ್ತದೆ. ಕಾರಣ ಅಕ್ಕಪಕ್ಕದ ಅಂಗಡಿಗಳು ಹಾಗೂ ಈ ಮಾರಾಟದಿಂದ ಮಾಂಸಾಹಾರ ಸೇವಿಸದ ಕುಟುಂಬಗಳು, ಮೇಲ್ವರ್ಗದ ಕುಟುಂಬಗಳು ಇವುಗಳ ಪಕ್ಕ ದಲ್ಲಿರುವ ಇತರೆ ಅಂಗಡಿಗಳನ್ನು ಹೊಂದಿರುವ ವ್ಯಾಪಾರದ ಮಳಿಗೆಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಏಕೆಂದರೆ ಮಾಂಸದ ದುರ್ನಾತ ಹಾಗೂ ನೊಣಗಳು, ರಕ್ತದ ವಾಸನೆ, ಮಾಂಸ ಕಡಿಯುವ ದೃಶ್ಯ ಮೊದಲಾದವುಗಳಿಂದ ಮೇಲ್ವರ್ಗದ ಜನರ ಪ್ರವೇಶಕ್ಕೆ ಬಹಳಷ್ಟು ಅಡಚಣೆಗಳಾಗುವುದರಿಂದ ಹಾಗೂ ಇನ್ನಿತರ ವ್ಯಾಪಾರ ಕೇಂದ್ರಗಳಿಗೆ ಆಗುವ ತೊಂದರೆಗಳಿಂದ ಮಟನ್ ಅಂಗಡಿಯ ಪಕ್ಕದಲ್ಲಿ ತಮ್ಮ ಅಂಗಡಿ (ಕಿರಾಣಿ, ಬಟ್ಟೆ, ಹೋಟೆಲ) ಇದೆ ಎಂಬುದು ಹೇಳಿಕೊಳ್ಳಲು ಇತರೆ ವ್ಯಾಪರಸ್ಥರು ಇಷ್ಟ ಪಡುವುದಿಲ್ಲ. ಆದ್ದರಿಂದ ಇವರು ಮಾಂಸಾಹಾರವನ್ನು ಹೆಚ್ಚಾಗಿ ಉಪಯೋಗಿಸುವ ಸಮುದಾಯಗಳು ಹಾಗೂ ತಳಸಮುದಾಯಗಳು ವಾಸಿಸುವಲ್ಲಿ ಹೆಚ್ಚಾಗಿ ವ್ಯಾಪಾರವನ್ನು ಮಾಡುತ್ತಿರುವುದು ಕಂಡುಬರುತ್ತದೆ.

ಈ ಸಮುದಾಯದಲ್ಲಿ ಹೆಚ್ಚಾಗಿ ಮಧ್ಯಮವರ್ಗದ ಕುಟುಂಬಗಳು ಬಹಳಷ್ಟು ಕಂಡುಬರುತ್ತವೆ. ಇವರಲ್ಲಿ ಶ್ರೀಮಂತಿಕೆಯನ್ನು ಹೊಂದಿರುವ ಕುಟುಂಬಗಳು ಬೆರಳೆಣಿಕೆಯಷ್ಟು ಇವೆ. ಇವರು ಹೆಚ್ಚಾಗಿ ವ್ಯಾಪಾರದ ಹಿತದೃಷ್ಟಿಯಿಂದ ಮನೆಯಲ್ಲಿ ಮಾಂಸ ಮಾರಾಟ ಮಾಡುವ ಸಲುವಾಗಿ ಅಂಗಡಿಗಳನ್ನು ಮನೆಯ ಮುಂದಿನ ಪಡಸಾಲೆಯಲ್ಲಿ ಒಂದು ಭಾಗವಾಗಿ ಅಥವಾ ಮನೆಯ ಮುಂದಿನ ಅಂಗಳದಲ್ಲಿ ನಿರ್ಮಿಸಿಕೊಳ್ಳುತ್ತಾರೆ. ಇವರಲ್ಲಿ ಆರ್.ಸಿ.ಸಿ. ಮನೆಗಳಿಗಿಂತ ಹೆಚ್ಚಾಗಿ ಧಾಬಾ/ಮಾಳಿಗೆ, ಹಂಚಿನ ಮನೆ, ಗುಡಿಸಲು ಹಾಗೂ ಟಿನ್ ಮನೆಗಳನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಎರಡರಿಂದ ಮೂರು ಕೋಣೆಗಳನ್ನು ಹೊಂದಿರುವ ಮನೆಯು ಒಂದು ಪಡಸಾಲೆ, ಒಂದು ಅಡುಗೆಯ ಕೋಣೆ, ಅಡುಗೆಯ ಕೋಣೆಯಲ್ಲಿ ಅಗ್ನೆಯ ದಿಕ್ಕಿನಲ್ಲಿ ಅಡಿಗೆ ಮಾಡುವುದಾಗಿ ಹಾಗೂ ಅಡುಗೆಯ ಮನೆಯಲ್ಲಿಯೇ ಒಂದು ಕಡೆ ದೇವರನ್ನು ಪೂಜಿಸಲಿಕ್ಕೆ ಅನುಕೂಲವಾಗುವ ಹಾಗೆ ಸಣ್ಣ ಕಪಾಟು ಅಥವಾ ಒಂದು ಮೂಲೆಯನ್ನು ದೇವರಿಗಾಗಿ ಜಗುಲಿಯನ್ನು ನಿರ್ಮಿಸುತ್ತಾರೆ. ಮನೆಯ ಹಿತ್ತಲಿನಲ್ಲಿ ಸ್ನಾನಗೃಹವನ್ನು ಹೊಂದಿರುತ್ತಾರೆ. ಶೌಚಾಲಯವು ಮನೆಯ ಮುಂದಿನ ಹೊರ ಭಾಗದಲ್ಲಿರುವುದು

ಕಂಡುಬರುತ್ತದೆ. ಪಟ್ಟಣ ಪ್ರದೇಶಗಳಲ್ಲಿ ವ್ಯಾಪಾರದಿಂದಾಗಿ ಬಾಡಿಗೆ ಮನೆಗಳನ್ನು ಹೊಂದಿರುವ ಹಲವು ಕುಟುಂಬಗಳು ವಾಸವಾಗಿರುವುದು ಕಂಡುಬರುತ್ತವೆ.

೩.೬. ಆಹಾರ ಪದ್ಧತಿ

ಪ್ರತಿಯೊಂದು ಸಮುದಾಯವು ತನ್ನದೇ ಆದ ವಿಶಿಷ್ಟ ಆಹಾರ ಪದ್ಧತಿಯನ್ನು ಒಳಗೊಂಡಿರುವುದನ್ನು ಕಾಣಬಹುದು. ಆಹಾರದ ವರ್ಗೀಕರಣದ ಪ್ರಯುಕ್ತ ಜಾತಿಗಳು ಗುರುತಿಸಲ್ಪಟ್ಟಿರಬೇಕು. ಆಹಾರವು ಒಂದು ಜಾತಿಯೊಳಗೆ ಜೀವಂತವಾಗಿದ್ದುಕೊಂಡು, ಆರ್ಥಿಕ ಸ್ಥಿತಿಗತಿಯನ್ನು ಪರಿಚಯಿಸುವ ಪ್ರಮುಖ ಭೂಮಿಕೆಯಾಗಿದೆ. ಆಹಾರಕ್ಕಾಗಿ ಮನುಷ್ಯ ನಿತ್ಯ ದುಡಿಯುತ್ತಾನೆ. ಕೆಲಸಮಾಡುತ್ತಾನೆ, ಭಿಕ್ಷೆಬೇಡುತ್ತಾನೆ. ಈ ಹೊಟ್ಟೆಗೋಸ್ಕರ ಏನೆಲ್ಲಾ ಹೋರಾಟದ ಮೂಲಕ ತನ್ನ ಆಹಾರವನ್ನು ದೊರಕಿಸಿಕೊಂಡು ಬದುಕನ್ನು ಸಾಗಿಸುತ್ತಾ ಬಂದಿದ್ದಾನೆ. ಮನುಷ್ಯನಿಗೆ ಆಹಾರವಿಲ್ಲದಿದ್ದರೆ ಬದುಕೇ ಇಲ್ಲ, ಉಸಿರೇ ಇಲ್ಲ, ನಡಿಗೆಯೂ ಇಲ್ಲ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲದೆ, ಪ್ರಕೃತಿಯಲ್ಲಿ ಹುಟ್ಟಿರುವ ಪ್ರತಿಯೊಂದು ಜೀವಿಗೂ ಅತ್ಯವಶ್ಯಕವಾಗಿ ಬೇಕಾಗಿದೆ. ಆಹಾರದ ವರ್ಗೀಕರಣದಿಂದ ಭಿನ್ನ ಸಮುದಾಯಗಳೂ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಾರೆ. ಊರಿನ ಪ್ರಮುಖ ಬೀದಿಯಲ್ಲಿ ಮೇಲ್ವರ್ಗ ಅದರ ಹಿಂದೆ ಮಧ್ಯಮ ವರ್ಗ ಕೊನೆಯಲ್ಲಿ ಕೆಳವರ್ಗ ವಾಸಿಸುವುದನ್ನು ನೋಡಬಹುದು.

ಖಾಟಿಕ ಸಮುದಾಯದವರು ಮಾಂಸಹಾರಿಗಳೂ ಹೌದು. ಸಸ್ಯಹಾರಿಗಳೂ ಹೌದು. ಮೂಲತಃ ಮಾಂಸಾಹಾರಿಗಳಾದರೂ ಸಸ್ಯಾಹಾರಕ್ಕೂ ಅಷ್ಟೇ ಮಹತ್ವ ಕೊಟ್ಟಿದ್ದಾರೆ. ಇದಕ್ಕೆ ಯಾವುದೇ ಸಾಮಾಜಿಕ ಕಾರಣವಿರದೆ ವ್ಯಕ್ತಿಗತ ಅಂಶಗಳು ಕಾರಣವಾಗಿರುತ್ತವೆ. ಸಾಮಾನ್ಯವಾಗಿ ಈ ಸಮುದಾಯದ ಜನ ಎರಡೂ ಬಗೆಯ ಆಹಾರವನ್ನು ಸೇವಿಸುವುದುಂಟು. ಖಾಟಿಕ ಸಮುದಾಯವು ಆಹಾರಕ್ಕಾಗಿ ತಮ್ಮ ಮೂಲ ವೃತ್ತಿಯನ್ನು ಅವಲಂಬಿಸಿರುವುದನ್ನು ಕಾಣಬಹುದು. ಅಡಿಗೆಗೆ ಕೂಡ ಮಣ್ಣಿನ ಮಡಿಕೆ, ಕುಡಿಕೆ, ಮುಚ್ಚಳ, ಗಡಿಗೆ ಮತ್ತು ಆಧುನಿಕ ಗೃಹೋಪಯೋಗಿ ಸಲಕರಣೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇವರು ತಯಾರಿಸುವ ಆಹಾರದಲ್ಲಿ ದ್ವಿದಳ ಧಾನ್ಯಗಳು, ತರಕಾರಿ, ಹಾಲು, ಮೊಸರು, ತುಪ್ಪ ಮತ್ತು ಮಾಂಸವನ್ನು ಉಪಯೋಗಿಸುತ್ತಾರೆ. ಕುಂಬಾರರು ತಯಾರಿಸಿದ ಮಣ್ಣಿನ ಒಲೆಗಳನ್ನು ತಂದು, ಕಟ್ಟಿಗೆಗಳಿಂದ ಬೆಂಕಿ ಹಚ್ಚಿ ಆಹಾರ ಬೇಯಿಸುತ್ತಾರೆ. ಪ್ರಸ್ತುತ ಈ ಸಮುದಾಯದ 'ಆಹಾರ ಪದ್ಧತಿ'ಯನ್ನು 'ಸಸ್ಯ ಆಹಾರ' ಮತ್ತು 'ಮಾಂಸ ಆಹಾರ' ಎಂದು ಎರಡು ರೀತಿ ವರ್ಗೀಕರಿಸಬಹುದು

ಸಸ್ಯ ಆಹಾರ

ಜಾತ್ರೆ, ಉತ್ಸವ, ಹಬ್ಬ-ಹರಿದಿನ, ವಿವಾಹ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಖಾಟಿಕ್ ಸಮುದಾಯವು ಸಸ್ಯಾಹಾರಕ್ಕೆ ಬಹಳ ಮಹತ್ವ ಕೊಡುತ್ತಾರೆ. ಅಕ್ಕಿ, ಜೋಳ, ಗೋದಿ, ತೊಗರಿ,

ಅಲಸಂದೆ, ಹೆಸರು, ಹುರುಳಿ, ಅವರೆ ಮೊದಲಾದ ಆಹಾರ ಧಾನ್ಯಗಳನ್ನು; ಮೆಣಸಿನಕಾಯಿ, ಬದನೆಕಾಯಿ, ಹೀರೇಕಾಯಿ, ಬೆಂಡೆಕಾಯಿ, ಈರುಳ್ಳಿ ಮೊದಲಾದ ತರಕಾರಿಗಳನ್ನು ಬಳಸುತ್ತಾರೆ. ನುಗ್ಗೆಸೊಪ್ಪು ಮೊದಲಾದ ಸೊಪ್ಪುಗಳನ್ನು ಬಳಸುತ್ತಾರೆ. ಹಾಲು, ಮೊಸರು, ತುಪ್ಪ ಮತ್ತು ಮಜ್ಜಿಗೆಯನ್ನು ಊಟದಲ್ಲಿ ಹೆಚ್ಚು ಉಪಯೋಗಿಸುತ್ತಾರೆ. ಅವರು ಆಚರಿಸುವ ಹಬ್ಬ, ಜಾತ್ರೆ ಮತ್ತು ಉತ್ಸವಗಳಲ್ಲಿ ದೇವರಿಗೆ "ಎಡೆ" ಹಾಕುವ ಅನ್ನ, ಹೋಳಿಗೆ, ಕರ್ಚಿಗಾಯಿ, ಬೆಲ್ಲ, ಬಾಳೆಹಣ್ಣು, ಹಾಲು, ತುಪ್ಪ, ಹೋಳಗಿ, ಪಾಯಸ, ಬೆಲ್ಲದ ಹುಗ್ಗಿ, ಸಾರು ಮೊದಲಾದ ಆಹಾರ ಪದಾರ್ಥಗಳನ್ನು ಉಪಯೋಗಿಸುತ್ತಾರೆ.

ಮಾಂಸ ಆಹಾರ

ಖಾಟಿಕ್ ಸಮುದಾಯದವರು ಮೂಲತಃ ಮಾಂಸಾಹಾರಿಗಳು. ಅವರ ಮೇಲೆ ನಡೆಯುತ್ತಿದ್ದ ಮುಸ್ಲಿಂರ ದಬ್ಬಾಳಿಕೆ ಹಾಗೂ ದೌರ್ಜನ್ಯಪೂರಿತವಾಗಿ ಧರ್ಮಮಂತಾತರವನ್ನು ನಿರಾಕರಿಸಿ ಗುಡ್ಡಗಾಡುಗಳಲ್ಲಿ ಅಲೆಮಾರಿಗಳಾಗಿ ತಲೆಮರೆಸಿಕೊಂಡು ತಿರಗುವ ಈ ಸಮುದಾಯ ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದರಂತೆ. ವೃತ್ತಿಯಲ್ಲಿ ಸೈನಿಕರಾಗಿ ದುಡಿದರು. ನಂತರ ರಾಜಾಶ್ರಯವು ಇಲ್ಲವಾದಾಗ ವಿವಿಧ ವೃತ್ತಿಗಳನ್ನು ತಮ್ಮದಾಗಿಸಿಕೊಂಡರು. ಆದರೆ ಹೆಚ್ಚಾಗಿ ಉಪಜೀವನಕ್ಕಾಗಿ ಬೇಟೆಯಾಡುವ ಪದ್ಧತಿ ಅವರಲ್ಲಿದ್ದರಿಂದ ಕುರಿ, ಮೇಕೆ, ಮೊಲ, ಜಿಂಕೆ, ಮೀನು ಮೊದಲಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಆದರೆ ಗೋಮಾಂಸ ಮಾತ್ರ ತಿನ್ನುವುದಿಲ್ಲ. ಗೋಹತ್ಯೆ ಮಹಾಪಾಪವೆಂದು ಭಾವಿಸುತ್ತಾರೆ. ಕೆಲವೊಂದು ಹಬ್ಬ ಮತ್ತು ಹುಟ್ಟು, ಸತ್ತ ವ್ಯಕ್ತಿಯ ದಿನಕರ್ಮಗಳಲ್ಲಿ, ಹುಲಿಗೆಮ್ಮನ, ಮಹಾನವಮಿ ಹಬ್ಬಗಳಲ್ಲಿ ಮಾಂಸದ ಅಡಿಗೆ ಮಾಡುತ್ತಾರೆ. ಖಾಟಿಕ ಸಮುದಾಯವು ಕೆಲವೊಂದು ದೇವರುಗಳಿಗೆ ಹರಕೆ ಮಾಡಿಕೊಂಡು ಮಾಂಸದ ಅಡಿಗೆ ಮಾಡಿ 'ಎಡೆ' ಹಾಕುತ್ತಾರೆ. ಖಾಟಿಕ್ ಸಮುದಾಯದ ಆಹಾರ ಪದ್ಧತಿಯಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳಿವೆ. ಇದಕ್ಕೆ ಮುಖ್ಯ ಕಾರಣವೆಂದರೆ ಆಯಾ ಪ್ರದೇಶಗಳಲ್ಲಿ ಬೆಳೆಯುವ ಮತ್ತು ದೊರೆಯುವ ಆಹಾರ ಸಾಮಾಗ್ರಿಯಾಗಿದೆ. ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಕುಳಿತು ಊಟ ಮಾಡುವ ಪದ್ಧತಿಯು ಇವರಲ್ಲಿದೆ. ಇವರು ಬೆಳಿಗ್ಗೆ ತಮ್ಮ ಕುಲಕಸುಬಗಳಲ್ಲಿ ತೊಡಗುವ ಸಮಯದಲ್ಲಿ ಬಹುತೇಕ ಚಹಾ ಕಾಫಿಯಂತಹ ಪದಾರ್ಥಗಳನ್ನು ಸೇವಿಸುತ್ತಾರೆ. ಹೀಗಾಗಿ ಇತರೆ ಸಾಮಾನ್ಯ ವರ್ಗದವರು ತಯಾರಿಸುವ ಆಹಾರದಂತೆ ತಮ್ಮ ನಿತ್ಯದ ಆಹಾರಗಳನ್ನು ತಯಾರಿಸಿಕೊಳ್ಳುತ್ತಾರೆ. ಇದರಿಂದ ಖಾಟಿಕ್ ಸಮುದಾಯದ ಆಹಾರ ಪದ್ಧತಿಯಲ್ಲಿ ಹೊಸತನವನ್ನು ಗುರುತಿಸಲಾಗುವುದಿಲ್ಲ.

ಮುಖ್ಯವಾಗಿ ಮಾಂಸ ಮಾರಾಟ ಮಾಡುವುದು ಇವರ ಮುಖ್ಯ ಕಸುಬು ಆಗಿದೆ. ಹಾಗಾಗಿ ಮನೆಯಲ್ಲಿ ನಿತ್ಯ ಮಾಂಸದೂಟವನ್ನು ಇವರು ಮಾಡುವುದಿಲ್ಲ. ಒಂದು ವೇಳೆ ಮಾಂಸವು ಉಳಿದರೆ

ಇವರು ಐಸ್ ಹಾಗೂ ಫ್ರಿಜ್‌ಗಳಲ್ಲಿಟ್ಟು ಮಾರನೆಯ ದಿನ ಅದನ್ನು ಮಾರಾಟ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಉಳಿದ ಮಾಂಸವನ್ನು ಮನೆಗೆ ಆಹಾರವಾಗಿ ಉಪಯೋಗಿಸಿಕೊಳ್ಳುತ್ತಾರೆ. ಹೆಚ್ಚಾಗಿ ಇವರು ಮಾಂಸವನ್ನು ಮಾರಾಟ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದವರಾಗಿರುತ್ತಾರೆ. ಇದರಿಂದ ಈ ಸಮುದಾಯವು ತನ್ನಲ್ಲಿರುವ ಆರ್ಥಿಕತೆಯ ಮುಗ್ಗಟ್ಟನ್ನು ಎದುರಿಸುತ್ತಿರುವುದು ಕಂಡುಬರುತ್ತದೆ.

೩.೭. ಉಡುಗೆ - ತೊಡುಗೆ

ಯಾವುದೇ ಒಂದು ಬುಡಕಟ್ಟು ವರ್ಗ ಅಥವಾ ಸಮುದಾಯವು ತನ್ನದೇ ಆದ ಅಡುಭಾಷೆ, ಸಂಸ್ಕೃತಿ ಆಚರಣೆಗಳನ್ನು ಕಾಪಾಡಿಕೊಂಡಿರುವಂತೆಯೇ ತಮ್ಮ ಉಡುಗೆ ತೊಡುಗೆಗಳಲ್ಲೂ ವಿಶೇಷತೆಯನ್ನು ಕಾಯ್ದುಕೊಂಡಿರುತ್ತವೆ. ಸರಳ ಮತ್ತು ಸೌಂದರ್ಯ ಜೀವನಕ್ಕೆ ಹೆಸರಾದ ಖಾಟಿಕ್ ಸಮುದಾಯವು ದ್ರಾವಿಡ ಜನಾಂಗದ ಗುಣಲಕ್ಷಣಗಳನ್ನು ಹೊಂದಿದ್ದಾರೆ. ಭಾರತದಲ್ಲಿ ಹಲವು ಬಗೆಯ ಬುಡಕಟ್ಟು ಸಮುದಾಯಗಳಿದ್ದು, ಅವು ತನ್ನದೇ ಆದ ವೇಷ-ಭೂಷಣಗಳನ್ನು ಹೊಂದಿವೆ. ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಸಂಸ್ಕಾರಗಳಿಂದ ಉಡುಗೆ ತೊಡುಗೆಗಳಿಂದ ಗುರುತಿಸಿಕೊಂಡಿದ್ದಾರೆ. ಪ್ರಾದೇಶಿಕವಾಗಿ ಖಾಟಿಕ್ ಸಮುದಾಯದಲ್ಲಿ ಭಿನ್ನತೆಗಳಿದ್ದು ಇತರ ಸಂಸ್ಕೃತಿಯ ಪ್ರಭಾವದಿಂದ ಕೆಲವೊಂದು ಮಾರ್ಪಾಡುಗಳಾಗಿರುವುದು ಗೋಚರವಾಗುತ್ತದೆ. ಒಂದು ಸಮುದಾಯದ ವೇಷ-ಭೂಷಣಗಳು ಆ ಸಮುದಾಯದ ಸಂಸ್ಕೃತಿಯನ್ನು ತಿಳಿಸುವಂತೆ; ಖಾಟಿಕ್ ಸಮುದಾಯದ ವೇಷ-ಭೂಷಣಗಳು ಆ ಸಮುದಾಯದ ವಿಶಿಷ್ಟ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುತ್ತವೆ. ಉಡುಗೆಗಳು ಸಮಯ ಸಂದರ್ಭಕ್ಕೆ ತಕ್ಕಂತೆ ವಾತವರಣಗಳಿಗೆ ಹೊಂದಿಕೊಂಡಂತೆ ಹಾಗೂ ಘನತೆ, ಗೌರವ, ಪದವಿಗಳನ್ನು ಸೂಚಿಸುವ ನಿದರ್ಶನವಾಗಿರುತ್ತವೆ. ಗ್ರಾಮದಲ್ಲಿ ಅವರು ಧರಿಸುವ ಬಟ್ಟೆಗಳಿಂದ ಅವರ ಜಾತಿಗಳನ್ನು ಗುರುತಿಸುವ ಪರಿಪಾಠವಿದೆ. ಅಥವಾ ಅವರು ಆರ್ಥಿಕ ಶೋಚನೀಯ ಸ್ಥಿತಿಯಲ್ಲಿರು ವುದೆಂದು ಮನಗಾಣಬಹುದಾಗಿದೆ.

ಉಡುಗೆ ಮಾನವನ ಮಾರ್ಯಾದೆ ಕಾಪಾಡಿದರೆ ತೊಡುಗೆ ಮಾನವನ ಸೌಂದರ್ಯ ವರ್ಧಿಸಲು ಸಹಕರಿಸುತ್ತದೆ. ಮಾನವ ತನ್ನ ಅಂಗಾಂಗಗಳ ಮುಚ್ಚುವಿಕೆಯ ಮೂಲಕ ಮರ್ಯಾದೆಯನ್ನು ಕಾಪಾಡಿ ಕೊಳ್ಳುತ್ತಾನೆ. ಇಂತಹ ಮಾನ ಮುಚ್ಚುವ ಉಡುಗೆ ಬಗೆಗೆ ಪ್ರತಿಯೊಂದು ಸಮುದಾಯವು ತನ್ನದೇ ವೈಶಿಷ್ಟ್ಯತೆಯನ್ನು ರೂಢಿಸಿಕೊಂಡು ಬಂದಿವೆ. ಇದು ಪದವಿ ಅಥವಾ ಜನಸಮುದಾಯಗಳನ್ನಷ್ಟೆ ಸೂಚಿಸುವುದಲ್ಲದೆ, ಆ ಉಡುಗೆಯು ಸಮುದಾಯದ ಘನತೆ, ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದುಕುಗಳನ್ನು ಪ್ರತಿಬಿಂಬಿಸುತ್ತದೆ. ಖಾಟಿಕ್ ಸಮುದಾಯ ಅಂತಹ ಉಡುಪಿನಲ್ಲಿರುವ ಕೆಲವು ಕಟ್ಟುಪಾಡುಗಳನ್ನು ಕಾಣಬಹುದಾಗಿದೆ. ಈ ನಿಯಮದಾನುಸಾರ ಪುರುಷರಾಗಲಿ, ಸ್ತ್ರೀಯರಾಗಲಿ

ಮೈಮುಚ್ಚುವಂತಹ ಉಡುಪನ್ನು ಧರಿಸಬೇಕೆಂದಿದೆ. ಸ್ತ್ರೀಯರು ತಲೆ ತುಂಬಾ ಸೆರಗು ಮತ್ತು ದೇಹ ಪೂರ್ತಿ ಮುಚ್ಚಿಕೊಳ್ಳುವ ಉಡುಗೆಯನ್ನು ತೊಡಬೇಕೆಂಬ ನಿಯಮವಿದೆ. ಪುರುಷರು ಪೈಜಾಮು, ಜುಬ್ಬಾ ಹಾಗೂ ತಲೆಗೆ ಮುಂಡಾಸು ಅಥವಾ ಗಾಂಧಿ ಟೊಪ್ಪಿಗೆಯನ್ನು ಮತ್ತು ಕಿವಿಯಲ್ಲಿ ಓಲೆಯನ್ನು ಧರಿಸುವರಾಗಿರಬೇಕು. ಈ ಸಮುದಾಯದಲ್ಲಿ ಪುರುಷ ಮತ್ತು ಸ್ತ್ರೀಯರು ಬೆಳ್ಳಿ ಬಂಗಾರದಾಭರಣ ಧರಿಸಬಹುದು. ಸ್ತ್ರೀಯರು ದೇಹ ಸೌಂದರ್ಯಕ್ಕಾಗಿ ಹಾಗೂ ಅಲಂಕಾರಕ್ಕಾಗಿ ಆಭರಣ ಧರಿಸಬಹುದು. ಸ್ತ್ರೀಯರು ತೊಡುವ ತೊಡುಗೆಗಳು ಇಂತಿಷ್ಟೆ ಎಂದು ಹೇಳಲಿಕ್ಕಾಗದು. ಅವುಗಳಲ್ಲಿ ಮೂಗಬಟ್ಟು, ಬೆಂಡೋಲೆ, ಬುಗುಡಿ, ಝುಮಕಿ, ಮುತ್ತಿನ ಸರ, ತಾಳಿ, ಸೊಂಟಪಟ್ಟಿ, ಗಾಜಿನ ಬಳೆಗಳು ಇತ್ಯಾದಿಗಳನ್ನು ಸೌಭಾಗ್ಯದ ಲಕ್ಷಣಗಳೆಂದು ನಂಬುತ್ತಾರೆ. ಹೀಗಾಗಿ ಖಾಟಿಕ್ ಸಮುದಾಯದಲ್ಲಿ ಉಡುಗೆ-ತೊಡುಗೆಗಳಿಗೆ ಹೆಚ್ಚಿನ ಗಮನಕೊಡುತ್ತಾ ಬಂದಿರುವುದನ್ನು ನೋಡಬಹುದು. ಆದರೆ ಅವುಗಳನ್ನು ತೊಡುವುದು ಕೇವಲ ಹಬ್ಬ ಜಾತ್ರೆಗಳಲ್ಲಿ ವಿಶೇಷ ಎಂಬುದು ಗಮನಿಸಬೇಕಾದ ಅಂಶ. ಖಾಟಿಕ್ ಸಮುದಾಯವು ಅನ್ಯ ಸಂಸ್ಕೃತಿಯ ಪ್ರಭಾವದಿಂದ ಕೆಲವೊಂದು ಆಭರಣಗಳನ್ನು ವಿಶಿಷ್ಟ ಸಂದರ್ಭಗಳಿಗಾಗಿ ಧರಿಸುತ್ತಾರೆ. ಹಬ್ಬಗಳಲ್ಲಿ, ಮದುವೆಗಳಲ್ಲಿ, ಸಭೆ-ಸಮಾರಂಭಗಳಲ್ಲಿ, ವೃತ್ತಿಗಳಿಗೆ ಹೋಗುವ ಸಂದರ್ಭದಲ್ಲಿ ಧರಿಸುವ ಉಡುಗೆಗಳು ಬೇರೆ ರೀತಿಯಲ್ಲಿ ಬೇರೆ ಇರುತ್ತವೆ.

ಆಭರಣಗಳು : ಸರಾಸರಿ ಎತ್ತರ, ಎಣ್ಣೆಗೆಂಪು ಬಣ್ಣದಿಂದ ಕೂಡಿರುವ ಗಂಡಸರು ಕೈಯ ಬೆರಳಲ್ಲಿ ಬೆಳ್ಳಿ, ಬಂಗಾರದ ಉಂಗುರಗಳು, ಕಿವಿಗೆ ಬಂಗಾರದ ಹತ್ತಕಡಕು, ಮುರ ಹಾಕುತ್ತಾರೆ. ನೂಲಿನ ಉಡದಾರ ಕಟ್ಟುವುದು, ಹಣೆಯ ಮೇಲೆ ವಿಭೂತಿ ಕುಂಕುಮ ಇಡುವುದು ಗಂಡಸರಲ್ಲಿ ಕಂಡು ಬರುತ್ತದೆ.

ಹೆಂಗಸರು ಕೂಡ ಸೌಂದರ್ಯದ ಸಂಕೇತವಾಗಿ ವಿಧ ವಿಧವಾದ ಕೇಶಾಲಂಕಾರ ಮಾಡಿಕೊಳ್ಳುತ್ತಾರೆ. ಹಣೆಯ ಮೇಲೆ ಅರಿಷಿಣ, ಕುಂಕುಮ ಇಟ್ಟುಕೊಂಡು ಹೂವು ಮುಡಿಯುತ್ತಾರೆ. ಬಂಗಾರದ ಓಲೆ, ಬುಗಡಿಕಡ್ಡಿ, ತೋಳಬಂದಿ, ಗೆಜ್ಜೆಪಟ್ಟಿ, ಗಟ್ಟಿಕಾಲುತೋಡ, ಮೂಗುಬಟ್ಟು, ಅರ್ಧಚಂದ್ರನತ್ತು, ಕಾಸಿನಸರ, ಪದಕ, ಮಾಟಿ, ಬೆಳ್ಳಿ ಕಡಗ, ಜುಮುಕಿ, ಬೆರಳಿನ ಉಂಗುರ, ಚೈನು, ಕೊರಳಿಗೆ ಹವಳ ಕರಿಮಣಿ ಸೇರಿಸಿದ ಮಾಂಗಲ್ಯ ಸರ, ಹಸಿರು ಗಾಜಿನ ಬಳೆ ಮೊದಲಾದ ಆಭರಣಗಳನ್ನು ಹೆಂಗಸರು ಧರಿಸುತ್ತಾರೆ. ಅವಿವಾಹಿತೆ ಮತ್ತು ವಿವಾಹಿತೆ ಹೆಣ್ಣು ಕುಂಕುಮ ಧರಿಸಿ ಹೂವು ಮುಡಿಯುತ್ತಾಳೆ. ಆದರೆ ವಿಧವೆಯಾದ ಹೆಣ್ಣಿಗೆ ಇವೆಲ್ಲ ನಿಷಿದ್ಧವಾಗಿರುತ್ತವೆ.

ಈ ಸಮುದಾಯದಲ್ಲಿ ತಲೆಯ ಮೇಲಿನ ಪೇಟಕ್ಕೆ ಬಹಳ ಮಹತ್ವ ಕೊಡುತ್ತಾರೆ. ಹೆಂಗಸರು ಕೂಡ ತಲೆಯ ಮೇಲೆ ಸೆರಗು ಹಾಕಿಕೊಳ್ಳುವುದು ಗೌರವದ ಸಂಕೇತವಾಗಿದೆ. ಯಾವುದೇ ಧಾರ್ಮಿಕ ಕಾರ್ಯ ಅಥವಾ ಶುಭಕಾರ್ಯಗಳಲ್ಲಿ ಪೇಟ ಸುತ್ತುವುದು, ತಲೆಯ ಮೇಲೆ ಸೆರಗು ಹಾಕಿಕೊಳ್ಳುವುದು

ಈ ಸಮುದಾಯದಲ್ಲಿ ಕಡ್ಡಾಯವಾಗಿದೆ. ಮುತ್ತೈದೆಯರಿಗೆ ಮತ್ತು ಗರತಿ ಹೆಣ್ಣುಮಕ್ಕಳಿಗೆ ಈ ಸಮುದಾಯ ಬಹಳ ಗೌರವ ಕೊಡುತ್ತಾರೆ.

೩.೮. ವೈದ್ಯ ಪದ್ಧತಿ

ಮಾನವ ಇತರೆ ಪ್ರಾಣಿಗಳಿಗಿಂತ ತುಂಬಾ ಮುಂದುವರೆದವನಾಗಿದ್ದಾನೆ. ಅವನ ಯೋಚನಾ ಕ್ರಮ ಇತರ ಪ್ರಾಣಿಗಳಿಗಿಂತ ಸಾವಿರ ಪಾಲು ಹೆಚ್ಚಿನದು. ಇವನ ನಿರಂತರ ಹುಡುಕಾಟ ಜೀವನದ ಕುರಿತು ಇವನಿಗಿರುವ ಕಾಳಜಿ ಇವನನ್ನು ನಿರಂತರವಾದ ಹೊಸ ಹೊಸ ಆವಿಷ್ಕಾರಗಳಿಗೆ ತೊಡಗುವಂತೆ ಮಾಡಿದೆ. ಮನುಷ್ಯ ಅತೀ ಪ್ರಾಚೀನ ಕಾಲದಿಂದಲೂ ಮಾಂಸಹಾರಿಯಾಗಿದ್ದು, ನಂತರ ಸಸ್ಯಾಹಾರಕ್ಕೆ ತಿರುಗಿ ಮಾಂಸ ಮತ್ತು ಸಸ್ಯವನ್ನು ಏಕೀಭಾವವಾಗಿ ಉಪಯೋಗಿಸುವಂತೆ ತೊಡಗಿದರು. ಆಹಾರವನ್ನು ಬೇಯಿಸಿಕೊಂಡು ತಿನ್ನುವ ಪರಿಪಾಠಕ್ಕೆ ಇಳಿದುದು ಹೊಸ ಆಹಾರ ಕ್ರಮವನ್ನು ಕಂಡುಕೊಂಡದ್ದು ಇದೆಲ್ಲ ನಿರಂತರ ಸಂಶೋಧನೆಯ ಫಲವಾಗಿದೆ.

"ಖಾಟಿಕರು ಉತ್ತರದಿಂದ ದಕ್ಷಿಣಕ್ಕೆ ಬರುವಾಗ ದಾರಿಯುದ್ದಕ್ಕೂ ದೊರೆತ ಅನೇಕ ಗಿಡಮೂಲಿಕೆಗಳನ್ನು ಪ್ರಯೋಗಿಸಿ ಅದರಲ್ಲಿರುವ ಔಷಧಿಗಳ ಗುಣಗಳನ್ನು ತಿಳಿದವರಾಗಿದ್ದರು. ಮೊಘಲ ಸೈನಿಕರು ಇವರನ್ನು ಕಂಡುಹಿಡಿಯಬಾರದು ಎಂದು ಇವರಲ್ಲಿ ಅನೇಕರು ವೈದ್ಯರ ವೇಷಗಳನ್ನು ಹಾಕಿಕೊಂಡು ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಾ ಸಸ್ಯಗಳಲ್ಲಿ ರೋಗ ನಿವಾರಕ ಗುಣ ಇರುವುದೆಂದು ಔಷಧಿ ರೂಪದಲ್ಲಿ ಬಳಸಿಕೊಳ್ಳುತ್ತಾ, ಅವರಿಂದ ಮರೆಮಾಚಿಕೊಂಡು ಬಂದಿರುವುದಾಗಿ ತಿಳಿದುಬರುತ್ತದೆ. ಹಾಗೆಯೇ ಇಂದಿಗೂ ಇವರಲ್ಲಿ ಮನೆ ಮದ್ದು ತುಂಬಾ ಚಾಲ್ತಿಯಲ್ಲಿರುವುದು ಕಂಡುಬರುತ್ತದೆ" (ಚುಡಾಮಣಿ ಕಲಾಲ್;೧೯೮೬:೧೨).

"ಪ್ರಪಂಚದ ಇಂದಿನ ವೈದ್ಯ ಪದ್ಧತಿಗಳಿಗೆ ತಾಯಿ ಬೇರಾದುದು ಜನಪದ ವೈದ್ಯ. ಈ ಜನಪದ ವೈದ್ಯವು ಆಯಾ ಪರಿಸರ, ಗುಂಪು, ಬುಡಕಟ್ಟು, ಸಮುದಾಯಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿಯೇ ಬಳಕೆಗೊಳ್ಳುತ್ತವೆ. ಈ ಎಲ್ಲಾ ಸಮುದಾಯ ಗುಂಪುಗಳ ವೈದ್ಯ ಪದ್ಧತಿಯ ಮೂಲ ಉದ್ದೇಶ ಮಾತ್ರ ಅದರೊಳಗಿನ ರೋಗ ರುಜ್ಜಿನಗಳನ್ನು ಹೊಡೆದೋಡಿಸುವುದಾಗಿದೆ. ಜನಪದ ವೈದ್ಯದಲ್ಲಿ ಮೂರು ಗುಂಪುಗಳನ್ನು ಸ್ಥೂಲವಾಗಿ ಗುರುತಿಸಬಹುದು. ಸಸ್ಯ ಜನಪದ ವೈದ್ಯ, ಖನಿಜ ಜನಪದ ವೈದ್ಯ ಮತ್ತು ಮಂತ್ರಗಾರಿಕೆ. ಜನಪದ ವೈದ್ಯದಲ್ಲಿ ಮನುಷ್ಯ ಮತ್ತು ಪ್ರಾಣಿ ಜನಪದ ವೈದ್ಯವೆಂದೂ ವಿಂಗಡಿಸಬಹುದು. ರ್‍ಯಾಡ್‌ಕ್ಲಿಪ್ ಬ್ರೌನ್, ಡರ್ಕ್ಲಿಮ್, ರೂತ್‌ಬೆನೆಡಿಕ್ಟ್, ಲೆವಿಸ್ಟ್ರಾಸ್‌ನ ಅಭಿಪ್ರಾಯಗಳ ಆಧಾರದ ಮೇಲೆ ಆರ್.ಎಸ್. ಬಾಗ್ಸ್‌ರವರು ಜನಪದ ವೈದ್ಯಕೀಯ ಕ್ಷೇತ್ರದಲ್ಲಿ ಅಧ್ಯಯನಗಳು ಸಾಧ್ಯವೆಂಬುದನ್ನು ಅವರು ನೀಡಿರುವ ಜಾನಪದ ಕ್ಷೇತ್ರದ ವೈಜ್ಞಾನಿಕ ವರ್ಗೀಕರಣವೇ ಸಾಕ್ಷಿ" (ಆರ್.ಬಿ.ಕುಮಾರ್;೨೦೦೦:೫೬).

ವೈದ್ಯ ವಿಧಾನ

ಖಾಟಿಕ ಸಮುದಾಯದಲ್ಲಿ ವೈದ್ಯ ವಿಧಾನದ ಬಗ್ಗೆ ಹೇಳುವಾಗ ಯಾವ ರೋಗಕ್ಕೆ ಯಾವ ಮದ್ದು, ಅದನ್ನು ಬಳಸುವ ಬಗೆ ಹೇಗೆ ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ. ನಿದರ್ಶನಕ್ಕೆ ಕೆಲವು ಔಷಧೋಪಚಾರದ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ. ನಿರ್ದಿಷ್ಟ ರೋಗಗಳಿಗೆ, ನಿರ್ದಿಷ್ಟ ಮದ್ದುಗಳನ್ನು ಕಂಡುಕೊಳ್ಳಲಾಗಿದೆ.

ಮಕ್ಕಳಿಗೆ ಹೊಟ್ಟೆನೋವು : ಮಕ್ಕಳಿಗೆ ಹೊಟ್ಟೆನೋವು ಬಂದಾಗ ಕೊಬ್ಬರಿ ಎಣ್ಣೆ ಕಾಯಿಸಿ ಹೊಟ್ಟೆಯ ಹೊಕ್ಕಳ ಸುತ್ತ ಹಾಗೂ ಕಾಲಿನ ಪಾದಗಳ ಹಿಂಬದಿಗಳಲ್ಲಿ ಮೃದುವಾಗಿ ನೇವುತ್ತಾರೆ ಇದರಿಂದ ಮಕ್ಕಳ ಹೊಟ್ಟೆನೋವು ವಾಸಿಯಾಗುತ್ತದೆ.

ಕಣ್ಣಬೇನೆ : ಮಕ್ಕಳ್ಳಿಗೆ ಕಣ್ಣು ನೋವು ಬಂದಾಗ ತಾಯಿಯ ಮೊಲೆ ಹಾಲು ಕಣ್ಣಿನೊಳಗೆ ಹಿಂಡುವರು. ಕಣ್ಣಿನಲ್ಲಿ ಕಸ ಬಿದ್ದು ನೋಯುತ್ತಿದ್ದರೆ ಕಸ ಬಿದ್ದ ಕಣ್ಣನ್ನು ನೀರು ತುಂಬಿದ ತಟ್ಟೆಯಲ್ಲಿ ಕಣ್ಣನ್ನು ಮಿಟಕಿಸಲು ಹೇಳುವರು.

ತಲೆನೋವು : ತಲೆನೋವು ಬಂದರೆ ಬೆಳ್ಳೊಳ್ಳಿ ಅರೆದು ಹಣೆಯ ಬಲಗಡೆಯ ಭಾಗ ಹಾಗೂ ಎಡಗಡೆಯ ಭಾಗಕ್ಕೂ ಹಚ್ಚಿಕೊಳ್ಳಬೇಕು ಈ ರೀತಿಯಾಗಿ ದಿನದಲ್ಲಿ ಮೂರು ಬಾರಿ ಹಚ್ಚಿಕೊಂಡರೆ ತಲೆನೋವು ವಾಸಿಯಾಗುತ್ತದೆ.

ಕಿವಿಸೋರುವುದು : ಮಕ್ಕಳಿಗೆ ಕಿವಿ ಸೋರುವುದು ಕಂಡು ಬಂದರೆ, ಮುಖ್ಯಸ್ಥನು ಬಿಸಿನೀರನ್ನು ಬಾಯಿಯಲ್ಲಿ ಹಾಕಿಕೊಂಡು ಸೋರುವ ಕಿವಿಗೆ ಉಗುಳುವರು. ಸ್ವಲ್ಪ ಸಮಯದ ನಂತರ ಬೆಳ್ಳುಳ್ಳಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಕಾಯಿಸಿ, ಕಿವಿಗೆ ಹಾಕುತ್ತಾರೆ.

ಮಂದಭೇದಿ : ತಾಯಿ ಬಳಸುವ ಆಹಾರದಿಂದ ಮಗುವಿಗೆ ಹಾಲು ಕುಡಿಸಿದ್ದರಿಂದ ಬರುತ್ತದೆಂದು ಹೇಳುತ್ತಾರೆ. ಮಗುವಿನ ಮೈ ಬಿಸಿಯಾಗಿದ್ದು ಜ್ವರ ಬಂದಂತೆ ಕಾಣುತ್ತದೆ. ಮಂದಭೇದಿಯಾದ ಮಗು ಬಹಳ ಬಳಲಿದಂತೆ ಕಾಣುತ್ತದೆ. ಅಂತಹ ಸಂದರ್ಭದಲ್ಲಿ ಮೂರು ಲೋಟದಷ್ಟು ನೀರಿನಲ್ಲಿ ಒಂದು ನಿಂಬೆಹಣ್ಣಿನ ರಸ, ಒಂದು ಚಮಚ ಉಪ್ಪುಹಾಕಿ, ಬೆಂಕಿಯಮೇಲೆ ಕಾಯಿಸುತ್ತಾರೆ. ಇದರಿಂದ ಬಂದ ಕಷಾಯ(ಔಷಧಿ)ವನ್ನು ಮುಂಜಾನೆ ಸಮಯದಲ್ಲಿ ತಾಯಿಯ ಎದೆ ಹಾಲಿನ ಜೊತೆ ಕುಡಿಸಿದರೆ ಮಂದಭೇದಿ ವಾಸಿಯಾಗುತ್ತದೆಂದು ಹೇಳುತ್ತಾರೆ.

ಮಹಿಳೆಯರಿಗೆ ಎದೆನೋವು ಬಂದರೆ : ಗರ್ಭಿಣಿಯರಿಗೆ ಎದೆ ನೋವು ಬರುವುದಕ್ಕೆ ಕಾರಣ ವೇನೆಂದರೆ ಮಕ್ಕಳು ಹಾಲು ಕುಡಿಯುವಾಗ ಮಗುವಿನ ತಲೆಯ ಭಾಗವು ಮೊಲೆಗೆ ಬಡಿದಾಗ ಈ ರೀತಿಯ ಎದೆನೋವು ಬಹಳ ಬಾಧೆ ಕೊಡುತ್ತದೆಯಂತೆ. ಆಗ ಇವರು ಸುಟ್ಟ ಇಟ್ಟಿಗೆಯ ಮೂರು

ಚೂರುಗಳನ್ನು ತೆಗೆದುಕೊಂಡು ಆ ತಾಯಿಯ ಮೊಲೆಯ ಭಾಗದಿಂದ ನಿವಾಳಿಸಿ ಅದನ್ನು ಒಂದು ಪಾತ್ರೆಯಲ್ಲಿಟ್ಟು ಅವುಗಳ ಮೇಲೆ ನೀರನ್ನು ಹಾಕಲಾಗುತ್ತದೆ ಇದರಿಂದ ಇಟ್ಟಿಗೆಯ ಚೂರುಗಳು ಕರಗಿದಂತೆ ಈ ತಾಯಿಯ ಮೊಲೆಗಳ ನೋವು ಹಾಗೂ ಬಿಗಿತನದಿಂದ ನೋವು ಕಡಿಮೆಯಾಗುತ್ತದೆ.

ಹಾಗೆಯೇ ಮೊಲೆಗೆ ಹುಣ್ಣು ಕೂಡ ಆಗಿದ್ದರೆ ಅದು ಒಡೆದು ಹೋಗುವವರೆಗೆ ಬಹಳ ತೊಂದರೆ ಕೊಡುವುದು. ಆಗ ಬೇವಿನ ಮರದ ಎಲೆಗಳನ್ನು ನೀರಿನಲ್ಲಿ ತೇದು ಹಚ್ಚಿದರೆ ಹುಣ್ಣು ಒಡೆದು ಹೋಗಿ, ಗಾಯವು ವಾಸಿಯಾಗಿ ಸರಿಯಾಗಿ ಹಾಲು ಬರುತ್ತದೆಯಂತೆ.

ಹೊಟ್ಟೆ ಉಬ್ಬರಿಸಿ ಕೊಳ್ಳುವುದು : ಹೆಚ್ಚಾಗಿ ಮಾಂಸದೂಟದ ಸೇವನೆಯಿಂದ ಒಮ್ಮೊಮ್ಮೆ ಹೊಟ್ಟೆ ಉಬ್ಬರಿಸಿಕೊಳ್ಳುವುದು ಅಥವಾ ಪಿತ್ತದಿಂದ ಹೊಟ್ಟೆ ಉಬ್ಬರಿಸುವುದು. ಇವರು ಇದನ್ನು 'ಡೇಗಾ' ಎಂತಲೂ ಕರೆಯುತ್ತಾರೆ. ಇದಕ್ಕಾಗಿ ಇವರು ಊಟವಾದ ಬಳಿಕ ಒಂದು ಲೋಟ ನೀರಿನಲ್ಲಿ ನಿಂಬೆಹಣ್ಣು ಹಿಂಡಿಕೊಂಡು ಅದಕ್ಕೆ ಸ್ವಲ್ಪ ಉಪ್ಪು ಬೆರಸಿ ಸೇವಿಸಿದರೆ ಹೊಟ್ಟೆ ಉಬ್ಬರಿಸಿಕೊಳ್ಳುವುದು ಗುಣವಾಗುತ್ತದೆಯಂತೆ.

ಹಲ್ಲುನೋವು : ಖಾಟಿಕ್‌ರಲ್ಲಿ ಬಹುತೇಕ ಜನರು ಮುಂಜಾನೆಯ ಸಮಯದಲ್ಲಿ ಬೇವಿನ ಕಡ್ಡಿಗಳಿಂದ ಹಲ್ಲುಜ್ಜುತ್ತಾರೆ. ಒಮ್ಮೆ ಕರಿ ಇದ್ದಿಲು ಉಜ್ಜುವುದುಂಟು. ಇವರಿಗೆ ಹಲ್ಲುನೋವು ಬಂದಾಗ ಲವಂಗ ಚೆನ್ನಾಗಿ ಪುಡಿಮಾಡಿ, ಹಲ್ಲು ನೋಯುವ ಸ್ಥಳದಲ್ಲಿ ಇಟ್ಟುಕೊಳ್ಳುತ್ತಾರೆ. ಈ ಕ್ರಿಯೆ ದಿನದಲ್ಲಿ ಮೂರು ಸಾರಿ ಮಾಡಿದರೆ ಹಲ್ಲುನೋವು ಇರುವುದಿಲ್ಲವೆಂದು ಹೇಳುತ್ತಾರೆ.

ಮೂರ್ಛೆ ಹಾಗೂ ಜ್ವರ : ರೋಗಿಯು ವಿಪರೀತವಾಗಿ ಜ್ವರ ಬಂದು ಬಳಲುತ್ತಿದ್ದರೆ ಅಥವಾ ಪ್ರಜ್ಞಾಹೀನನಾಗಿ ಮೂರ್ಛೆ ಹೋದಾಗ ಅಂಚಿ ಕಡ್ಡಿಯಿಂದ ಅಥವಾ ಬಳೆಯ ಚೂರಿನಿಂದ ರೋಗಿಯ ಮುಖ್ಯ ನರಗಳನ್ನು ಗುರುತಿಸಿ ಅಂದರೆ ತಲೆಯ ಹಿಂಬದಿಯ ಕತ್ತಿನ ಭಾಗ, ತಲೆಯ ನೆತ್ತಿಯ ಭಾಗ, ಎದೆಯ ಭಾಗ, ಕಾಲಿನ ಹೆಬ್ಬರಳು ಭಾಗ, ಕೈ ಹೆಬ್ಬರಳು ಭಾಗದಲ್ಲಿರುವಂತಹ ಪ್ರಮುಖ ನರಗಳನ್ನು ಗುರುತಿಸಿ ಅಂಚಿಕಡ್ಡಿ ಅಥವಾ ಬಳೆಯ ಚೂರನ್ನು ಕಾಯಿಸಿ ಆ ಭಾಗದಲ್ಲಿ ಸುಡುತ್ತಾರೆ. ಇದರಿಂದ ರೋಗಿಯು ಪ್ರಜ್ಞಾಹೀನ ಸ್ಥಿತಿಯಿಂದ ಹಾಗೂ ಜ್ವರದ ಅಮಲಿನಿಂದ ಜಡ್ಡನ್ನು ಕಳೆದುಕೊಳ್ಳುತ್ತಾನೆಂದು ಹೇಳುತ್ತಾರೆ.

ಬಾಣಂತಿಯರಿಗೆ ವಿಶೇಷವಾಗಿ ವೈದ್ಯೋಪಚಾರ ಪದ್ಧತಿ ಅನುಸರಿಸುವ ವಿಧಾನಗಳು

* ಬಾಣಂತಿಯರಿಗೆ ಮಲಗಿಸಲು ಕತಾಳೆ ನಾರಿನ ಹಗ್ಗದಿಂದ ಬಿಗಿದ ಹೊರಸನ್ನೇ ಉಪಯೋಗಿಸುತ್ತಾರೆ. ಕಾರಣ ಬಾಣಂತಿಗೆ ಬೆಂಕಿ ಕಾಯಿಸಲು ಹೆಚ್ಚು ಉತ್ತಮವಾಗಿದ್ದು, ಹೆಚ್ಚಾಗಿ ವಿಶ್ರಾಂತಿ ತೆಗೆದು ಕೊಳ್ಳಲಿಕ್ಕೆ ದೇಹಕ್ಕೆ ಸ್ಪಂದನೆ ನೀಡುತ್ತದೆಂದು ಹೇಳುತ್ತಾರೆ.

ಚೂರುಗಳನ್ನು ತೆಗೆದುಕೊಂಡು ಆ ತಾಯಿಯ ಮೊಲೆಯ ಭಾಗದಿಂದ ನಿವಾಳಿಸಿ ಅದನ್ನು ಒಂದು ಪಾತ್ರೆಯಲ್ಲಿಟ್ಟು ಅವುಗಳ ಮೇಲೆ ನೀರನ್ನು ಹಾಕಲಾಗುತ್ತದೆ ಇದರಿಂದ ಇಟ್ಟಿಗೆಯ ಚೂರುಗಳು ಕರಗಿದಂತೆ ಈ ತಾಯಿಯ ಮೊಲೆಗಳ ನೋವು ಹಾಗೂ ಬಿಗಿತನದಿಂದ ನೋವು ಕಡಿಮೆಯಾಗುತ್ತದೆ.

ಹಾಗೆಯೇ ಮೊಲೆಗೆ ಹುಣ್ಣು ಕೂಡ ಆಗಿದ್ದರೆ ಅದು ಒಡೆದು ಹೋಗುವವರೆಗೆ ಬಹಳ ತೊಂದರೆ ಕೊಡುವುದು. ಆಗ ಬೇವಿನ ಮರದ ಎಲೆಗಳನ್ನು ನೀರಿನಲ್ಲಿ ತೇದು ಹಚ್ಚಿದರೆ ಹುಣ್ಣು ಒಡೆದು ಹೋಗಿ, ಗಾಯವು ವಾಸಿಯಾಗಿ ಸರಿಯಾಗಿ ಹಾಲು ಬರುತ್ತದೆಯಂತೆ.

ಹೊಟ್ಟೆ ಉಬ್ಬರಿಸಿ ಕೊಳ್ಳುವುದು : ಹೆಚ್ಚಾಗಿ ಮಾಂಸದೂಟದ ಸೇವನೆಯಿಂದ ಒಮ್ಮೊಮ್ಮೆ ಹೊಟ್ಟೆ ಉಬ್ಬರಿಸಿಕೊಳ್ಳುವುದು ಅಥವಾ ಪಿತ್ತದಿಂದ ಹೊಟ್ಟೆ ಉಬ್ಬರಿಸುವುದು. ಇವರು ಇದನ್ನು 'ಡೇಗಾ' ಎಂತಲೂ ಕರೆಯುತ್ತಾರೆ. ಇದಕ್ಕಾಗಿ ಇವರು ಊಟವಾದ ಬಳಿಕ ಒಂದು ಲೋಟ ನೀರಿನಲ್ಲಿ ನಿಂಬೆಹಣ್ಣು ಹಿಂಡಿಕೊಂಡು ಅದಕ್ಕೆ ಸ್ವಲ್ಪ ಉಪ್ಪು ಬೆರಸಿ ಸೇವಿಸಿದರೆ ಹೊಟ್ಟೆ ಉಬ್ಬರಿಸಿಕೊಳ್ಳುವುದು ಗುಣವಾಗುತ್ತದೆಯಂತೆ.

ಹಲ್ಲುನೋವು : ಖಾಟಿಕ್‌ರಲ್ಲಿ ಬಹುತೇಕ ಜನರು ಮುಂಜಾನೆಯ ಸಮಯದಲ್ಲಿ ಬೇವಿನ ಕಡ್ಡಿಗಳಿಂದ ಹಲ್ಲುಜ್ಜುತ್ತಾರೆ. ಒಮ್ಮೆ ಕರಿ ಇದ್ದಿಲು ಉಜ್ಜುವುದುಂಟು. ಇವರಿಗೆ ಹಲ್ಲುನೋವು ಬಂದಾಗ ಲವಂಗ ಚೆನ್ನಾಗಿ ಪುಡಿಮಾಡಿ, ಹಲ್ಲು ನೋಯುವ ಸ್ಥಳದಲ್ಲಿ ಇಟ್ಟುಕೊಳ್ಳುತ್ತಾರೆ. ಈ ಕ್ರಿಯೆ ದಿನದಲ್ಲಿ ಮೂರು ಸಾರಿ ಮಾಡಿದರೆ ಹಲ್ಲುನೋವು ಇರುವುದಿಲ್ಲವೆಂದು ಹೇಳುತ್ತಾರೆ.

ಮೂರ್ಚೆ ಹಾಗೂ ಜ್ವರ : ರೋಗಿಯು ವಿಪರೀತವಾಗಿ ಜ್ವರ ಬಂದು ಬಳಲುತ್ತಿದ್ದರೆ ಅಥವಾ ಪ್ರಜ್ಞಾಹೀನನಾಗಿ ಮೂರ್ಚೆ ಹೋದಾಗ ಅಂಚಿ ಕಡ್ಡಿಯಿಂದ ಅಥವಾ ಬಳೆಯ ಚೂರಿನಿಂದ ರೋಗಿಯ ಮುಖ್ಯ ನರಗಳನ್ನು ಗುರುತಿಸಿ ಅಂದರೆ ತಲೆಯ ಹಿಂಬದಿಯ ಕತ್ತಿನ ಭಾಗ, ತಲೆಯ ನೆತ್ತಿಯ ಭಾಗ, ಎದೆಯ ಭಾಗ, ಕಾಲಿನ ಹೆಬ್ಬರಳು ಭಾಗ, ಕೈ ಹೆಬ್ಬರಳು ಭಾಗದಲ್ಲಿರುವಂತಹ ಪ್ರಮುಖ ನರಗಳನ್ನು ಗುರುತಿಸಿ ಅಂಚಿಕಡ್ಡಿ ಅಥವಾ ಬಳೆಯ ಚೂರನ್ನು ಕಾಯಿಸಿ ಆ ಭಾಗದಲ್ಲಿ ಸುಡುತ್ತಾರೆ. ಇದರಿಂದ ರೋಗಿಯು ಪ್ರಜ್ಞಾಹೀನ ಸ್ಥಿತಿಯಿಂದ ಹಾಗೂ ಜ್ವರದ ಅಮಲಿನಿಂದ ಜಡ್ಡನ್ನು ಕಳೆದುಕೊಳ್ಳುತ್ತಾನೆಂದು ಹೇಳುತ್ತಾರೆ.

ಬಾಣಂತಿಯರಿಗೆ ವಿಶೇಷವಾಗಿ ವೈದ್ಯೋಪಚಾರ ಪದ್ಧತಿ ಅನುಸರಿಸುವ ವಿಧಾನಗಳು

* ಬಾಣಂತಿಯರಿಗೆ ಮಲಗಿಸಲು ಕತಾಳೆ ನಾರಿನ ಹಗ್ಗದಿಂದ ಬಿಗಿದ ಹೊರಸನ್ನೇ ಉಪಯೋಗಿಸುತ್ತಾರೆ. ಕಾರಣ ಬಾಣಂತಿಗೆ ಬೆಂಕಿ ಕಾಯಿಸಲು ಹೆಚ್ಚು ಉತ್ತಮವಾಗಿದ್ದು, ಹೆಚ್ಚಾಗಿ ವಿಶ್ರಾಂತಿ ತೆಗೆದು ಕೊಳ್ಳಲಿಕ್ಕೆ ದೇಹಕ್ಕೆ ಸ್ಪಂದನೆ ನೀಡುತ್ತದೆಂದು ಹೇಳುತ್ತಾರೆ.

* ಅರಿಷಿಣ, ಮೋಡಿ, ಇಪ್ಪಿ, ಒಳ್ಳೆಣ್ಣೆ, ಉಪ್ಪು, ಬೆಳ್ಳುಳ್ಳಿಯನ್ನು ಮಿಶ್ರಮಾಡಿ ತೇಯ್ದು ಒಂದು ಹೊಸ ಮಡಿಕೆಯಲ್ಲಿ ಹಾಕಿ ಬೆಂಕಿಯ ಮೇಲೆ ಬಿಸಿಮಾಡಿ ಪ್ರತಿದಿನ ಬಾಣಂತಿಗೆ ಮೈತುಂಬಾ ಲೇಪಿಸಿ ಬಿಸಿ ನೀರಿನಿಂದ ಸ್ನಾನವನ್ನು ಮಾಡಿಸುತ್ತಾರೆ. ಇದರಿಂದ ಯಾವುದೇ ರೀತಿ ಬಾಣಂತಿಗೆ ಸೋಂಕು ಉಂಟಾಗುವುದಿಲ್ಲವೆಂದು ಹೇಳುತ್ತಾರೆ.

* ಕೊಬ್ಬರಿ, ಅಂಟು, ಬೆಲ್ಲ, ಉತ್ತುತ್ತಿ, ತುಪ್ಪ, ಇಪ್ಪಿ, ಜಾಜಿಕಾಯಿ, ಜಾಪತ್ರೆ ಇವೆಲ್ಲವನ್ನೂ ತುಪ್ಪದಲ್ಲಿ ಹುರಿದು 'ಬಾಣಂತಿ ಖಾರ' ಎಂದು ತಯಾರಿಸಿ ಹೆರಿಗೆಯಾದ ಸ್ತ್ರೀಗೆ ಇದನ್ನು ನೀಡುತ್ತಾರೆ. ಇದರಿಂದ ಬಾಣಂತಿಗೆ ಸೊಂಟದ ನೋವು ಬರುವುದಿಲ್ಲವೆಂದು ಹೇಳುತ್ತಾರೆ.

* ತಾಯಿ ಎದೆಹಾಲು ಹೆಚ್ಚಾಗಲಿಕ್ಕೆ ಬಿಸಿ ಅನ್ನದಲ್ಲಿ ತುಪ್ಪ ಹಾಗೂ ಬೆಳ್ಳುಳ್ಳಿ ಹಾಕಿ ಊಟಮಾಡಲು ನೀಡುತ್ತಾರೆ. ಹಾಗೂ ಮೆಂತೆಸೊಪ್ಪು ಬೇಯಿಸಿ ನೀಡುವುದರಿಂದ ಎದೆಹಾಲು ಹೆಚ್ಚಾಗುತ್ತದೆಂದು ಹೇಳುತ್ತಾರೆ.

* ಕುರಿಯ ತಲೆ-ಕಾಲುಗಳನ್ನು ಹೆಚ್ಚಾಗಿ ಸೇವಿಸಿದಲ್ಲಿ ಕೈ-ಕಾಲುಗಳಲ್ಲಿ ಶಕ್ತಿ ಮತ್ತು ಮಗುವಿನ ಕತ್ತು ಬಹಳ ಬೇಗನೆ ನಿಲ್ಲುತ್ತದೆ. ಹಾಗೆಯೇ ಕುರಿಯ ಹೊಟ್ಟೆಯೊಳಗಿನ ಕರಳುಗಳನ್ನು ಮೆಂತೆಸೊಪ್ಪಿನ ಜೊತೆ ಬೇಯಿಸಿ ತಿಂದರೆ ಹೆಚ್ಚಾಗಿ ಎದೆಹಾಲು ಉತ್ಪತ್ತಿಯಾಗುತ್ತದೆಂದು ಹೇಳುತ್ತಾರೆ.

ಖಾಟಿಕ್‌ರು ಬಳಸುವ ಗೃಹೋಪಯೋಗಿ ಔಷಧಿ

ಕ್ರ.ಸಂ.	ಔಷಧಿ ಹೆಸರು	ರೋಗದ ಹೆಸರು
೦೧.	ಬೆಳ್ಳುಳ್ಳಿ	ಕಿವಿಸೋರುವುದು
೦೨.	ಹುರಿಕಡ್ಲೆ, ತುಳಸಿದಳಗಳು	ಕೆಮ್ಮು
೦೩.	ನಿಂಬೆ ಹಣ್ಣಿನ ರಸ	ಮಂದಬೇಧಿ
೦೪.	ಬೆಳ್ಳುಳ್ಳಿ	ತಲೆನೋವು
೦೫.	ನಿಂಬೆ ಹಣ್ಣು, ಉಪ್ಪು	ಹೊಟ್ಟೆ ಉಬ್ಬರ
೦೬.	ಕೊಬ್ಬರಿ ಎಣ್ಣೆ	ಹೊಟ್ಟೆನೋವು
೦೭.	ಲವಂಗ	ಹಲ್ಲುನೋವು
೦೮.	ತಾಯಿಯ ಮೊಲೆ ಹಾಲು	ಕಣ್ಣುನೋವು
೦೯.	ಕಡ್ಲೆಹಿಟ್ಟು, ಅರಿಷಿಣ	ಮುಖದ ಮೊಡವೆಗಳು

ಮನುಷ್ಯ ತನಗೆ ಗೊತ್ತಿದ್ದೊ ಗೊತ್ತಿಲ್ಲದೆಯೋ ಹತ್ತು ಹಲವು ಔಷಧಿಗಳನ್ನು ಕಂಡುಕೊಂಡಿದ್ದಾನೆ. ಮನುಷ್ಯನಿಗೆ ಆಹಾರದಷ್ಟೇ ಆರೋಗ್ಯವು ಬಹುಮುಖ್ಯ ಎನ್ನುವುದನ್ನು ಇದು ಸೂಚಿಸುತ್ತದೆ. ಇವರು ಉಪಯೋಗಿಸುವ ಔಷಧಿಗಳಾಗಲಿ, ರೋಗವನ್ನು ನಿಯಂತ್ರಿಸಲು ನಡೆಸುವ ತಾಂತ್ರಿಕ ಸ್ವರೂಪ ಗಳಾಗಲಿ ವೈಜ್ಞಾನಿಕತೆಯಿಂದ ಕೂಡಿದೆ ಎಂದು ತಿಳಿಸುವುದು ಕಷ್ಟವಾದರೂ ಇವು ನಿರುಪಯುಕ್ತ ಔಷಧಿಗಳೆಂದು ವಾದಿಸುವುದು ಕಷ್ಟ. ತಲೆಮಾರುಗಳಿಂದ ಇದರೊಳಗೆ ಬಳಕೆಗೊಳ್ಳುತ್ತಿರುವ ನಾಡ ಔಷಧಿಗಳು ರೋಗಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿದವುಗಳಾಗಿರುವುದರಿಂದ ಇದರೊಳಗೆ ಇನ್ನು ಜೀವಂತವಾಗಿ ಉಳಿದು ಬಂದಿರಬೇಕು. ಇವರು ಉಪಯೋಗಿಸುವ ಗೃಹೋಪಯೋಗಿ ಬಳಕೆಯ ಔಷಧಿಗಳನ್ನು ವೈಜ್ಞಾನಿಕ ಶೋಧನೆಯೊಳಗೆ ಒರೆಹಚ್ಚಿ ನೋಡಿ ಸಾರ್ವಜನಿಕರ ಉಪಯೋಗಕ್ಕೆ ದೊರೆಯುವಂತೆ ಮಾಡಿದಲ್ಲಿ ಎಷ್ಟೋ ಹೊಸ ರೋಗಗಳಿಗೆ ಹೊಸ ಹೊಸ ಔಷಧಿಗಳು ದೊರೆಯ ಬಹುದೇನೋ. ಆಧುನಿಕತೆಯ ವ್ಯಾಮೋಹದಿಂದ ಮರೆಯುವ ಇಂದಿನ ಪೀಳಿಗೆಗೆ ಇಂತಹ ಬುಡಕಟ್ಟು ಸಮುದಾಯಗಳು ಬಳಸುವ ಔಷಧಿಗಳು ಅವೈಜ್ಞಾನಿಕವಾಗಿದೆಯೆಂದು ಕಂಡುಬಂದರೂ ಅವರ ಆಲೋಚನಾ ಕ್ರಮ ಪೂರ್ಣವಾಗಿ ಸರಿಯಾದುದಲ್ಲ ಎಂದು ಹೇಳುವುದು ಸಮಂಜಸವಲ್ಲ.

೩.೯. ನ್ಯಾಯ ಪದ್ಧತಿ

ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನಗಳಲ್ಲಿ ನ್ಯಾಯ ಪಂಚಾಯಿತಿ ಮುಖ್ಯವಾದದ್ದು. ಪ್ರಾಚೀನ ಸಾಮಾಜಿಕ ಜೀವನದಲ್ಲಿ ನ್ಯಾಯ ಪಂಚಾಯಿತಿ ತೀರ್ಮಾನ ಸಮುದಾಯಗಳನ್ನೇ ಅವಲಂಬಿ ಸಿದ್ದವು. ಏಕೆಂದರೆ ಅವುಗಳ ಗಾತ್ರ ಚಿಕ್ಕದು. ಜನಸಂಖ್ಯೆ ಕಡಿಮೆ, ಜೀವನದ ವಿವಿಧ ಕ್ಷೇತ್ರಗಳು ಸರಳ ಸ್ವರೂಪದವುಗಳಾಗಿದ್ದವು. ಜನರು ಸಾಮಾಜಿಕ ಜೀವನದ ಸಂಬಂಧಗಳನ್ನು ಹೊಂದಿದ್ದರು. ಭಾರತದ ಜಾತಿಗಳನ್ನು, ಬುಡಕಟ್ಟು ಸಮುದಾಯಗಳನ್ನು ಗಮನಿಸಿದಾಗ ಇವು ತಮ್ಮದೇ ಆದ ನ್ಯಾಯ ಪದ್ಧತಿಯ ಕ್ರಮವನ್ನು ಅನುಸರಿಸುವುದನ್ನು ಕಂಡುಬರುತ್ತದೆ. ಎಲ್ಲಾ ಜಾತಿ, ಸಮುದಾಯಗಳು, ಬುಡಕಟ್ಟುಗಳ ನ್ಯಾಯ ಪದ್ಧತಿಯ ಮೂಲ ಉದ್ದೇಶ ಒಂದೇ ಆಗಿದ್ದರೂ ಸಮುದಾಯಗಳಲ್ಲಿನ ಪದ್ಧತಿಯಲ್ಲಿರುವ ರಚನಾ ಕ್ರಮಗಳು ಮಾತ್ರ ಭಿನ್ನತೆಯಿಂದ ಕೂಡಿರುವುದನ್ನು ಕಾಣಬಹುದಾಗಿದೆ. ನ್ಯಾಯದ ಧ್ಯೇಯೋದ್ದೇಶಗಳನ್ನು ಸಾಧಿಸಲು ಮತ್ತು ಜನಜೀವನದಲ್ಲಿ ಸುವ್ಯವಸ್ಥೆಯನ್ನುಂಟು ಮಾಡಲು ನ್ಯಾಯ ಪಂಚಾಯತಿ ರಚಿಸಿಕೊಳ್ಳಲಾಗುವುದು. ಅಂತೆಯೇ ನ್ಯಾಯ ಪಂಚಾಯತಿ ಯೋಜಿತ ರೀತಿಯಲ್ಲಿ ರೂಪುಗೊಂಡು ಚಾಲನೆಯಲ್ಲಿರುವ ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನವಾಗಿದೆ.

"ಒಂದು ಜನ ಸಮುದಾಯದ ನಂಬಿಕೆ, ಆಚರಣೆ, ಆದರ್ಶ, ಮೌಲ್ಯಗಳು, ನ್ಯಾಯ ನಿರ್ಣಯಗಳ, ಪದ್ಧತಿಗಳನ್ನು ರೂಪಿಸುತ್ತದೆ" (ಆರ್.ಬಿ. ಕುಮಾರ್;೨೦೦೦:೪೯). ಈ ನ್ಯಾಯ ಪದ್ಧತಿ ಕ್ರಮವು ಬುಡಕಟ್ಟುಗಳಲ್ಲಿ ತುಂಬಾ ಗೌರವ ಮತ್ತು ನಿಷ್ಠೆಯಿಂದ ನಡೆಯಲ್ಪಡುತ್ತದೆ. ಇದು

ಸರ್ಕಾರ ರಚಿಸಿದ ನ್ಯಾಯಾಲಯಗಳಿಗಿಂತ ಹೆಚ್ಚಿನ ಮಹತ್ವವನ್ನು ಆ ಸಮುದಾಯಗಳು ಹೊಂದಿರುತ್ತವೆ. ಇತರ ಸಮುದಾಯಗಳಂತೆ ಖಾಟಿಕ್ ಸಮುದಾಯದಲ್ಲೂ ನ್ಯಾಯ ಪದ್ಧತಿಯ ವ್ಯವಸ್ಥೆಯು ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ.

'ಪ್ರಾಣಕ್ಕಿಂತ ಮಾನವೇ ಹೆಚ್ಚು'- ಎಂಬ ಸಿದ್ಧಾಂತಕ್ಕೆ ಅಂಟಿಕೊಂಡ 'ನ್ಯಾಯ ಪದ್ಧತಿ' ಅತ್ಯಂತ ಮಹತ್ವ ಸ್ಥಾನ ಪಡೆದುಕೊಂಡಿದೆ. ಖಾಟಿಕ್ ಸಮುದಾಯದಲ್ಲಿ ನ್ಯಾಯ ಮಾಡುವವರ ಹಿರಿಯರ ಗುಂಪನ್ನು 'ದೈವ' ಅಥವಾ 'ಜಮಾತ್' ಎಂದು ಕರೆಯಲಾಗುತ್ತದೆ. ಆಪಾದಿತ ವ್ಯಕ್ತಿ ಮಾಡಿದ ಅಪರಾದಕ್ಕನುಗುಣವಾಗಿ ತೀರ್ಪು ನಿರ್ಧರಿತವಾಗುತ್ತದೆ. ಮನೆಗಳಲ್ಲಿ ನಡೆಯುವ ಚಿಕ್ಕ-ಪುಟ್ಟ ಫಿರ್ಯಾದಿಗಳಿಂದ ಹಿಡಿದು ಆಸ್ತಿ-ವಿವಾದ, ಜಗಳಗಳು, ಮನಸ್ತಾಪಗಳನ್ನು ಹೀಗೆ ಹಲವು ಸಮಸ್ಯೆಗಳನ್ನು ನ್ಯಾಯ ನಿರ್ಣಯಗಳ ಮುಖಾಂತರ ಪಂಚಾಯಿತಿಯನ್ನು ಸೇರಿಸಿ ಬಂದಿರುವ ವ್ಯಾಜ್ಯಗಳನ್ನು ಪರಿಹರಿಸುತ್ತಾರೆ. ಹಿರಿಯರು ಸಾಧ್ಯವಾದಷ್ಟು ಎರಡೂ ಕಡೆಯ ಕಕ್ಷಿದಾರರಿಗೆ ಒಪ್ಪಂದ ಮಾಡಿಸುವ ಪ್ರಯತ್ನ ಮಾಡುತ್ತಾರೆ. ನ್ಯಾಯ ಸಮ್ಮತವಾಗಿ ವಿವಾದವನ್ನು ಬಗೆಹರಿಸಲಾಗುತ್ತದೆ. ಇದಕ್ಕೂ ನ್ಯಾಯ ಬಗೆ ಹರಿಯದಿದ್ದರೆ ಪೋಲೀಸ್ ಠಾಣೆ ಮತ್ತು ನ್ಯಾಯಾಲಯಕ್ಕೆ ಮೊರೆ ಹೋಗಿ ತಮ್ಮ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ. ಆಯಾ ಊರಿನಲ್ಲಿರುವ ಸಮುದಾಯದ ಹಿರಿಯರೆ ಸಾಮಾನ್ಯವಾಗಿ ವ್ಯಾಜ್ಯಗಳನ್ನು ಬಗೆಹರಿಸುತ್ತಾರೆ. ಕೆಲವೊಮ್ಮೆ ತಮ್ಮ ಪಕ್ಕದೂರಿನಲ್ಲಿರುವ ಹಿರಿಯರನ್ನು ಸಹ ಕರೆಸುವುದುಂಟು. ಈ ಸಮುದಾಯದಲ್ಲಿ ಗಂಡು ಮಕ್ಕಳು ಬೇರೆ ಜಾತಿಯ ಹುಡುಗಿಯನ್ನು ಮದುವೆಯಾದರೆ, ಮನೆಯಲ್ಲಿ ಸೇರಿಸಿಕೊಳ್ಳುವುದು ಕಂಡುಬರುತ್ತೆ. ಇಂತಹ ಸಮಯದಲ್ಲಿ ಸಮುದಾಯದ ಹಿರಿಯರೆ ಕುಳಿತು ನ್ಯಾಯ ಮಾಡುತ್ತಾರೆ. ಆದರೆ ಹೆಣ್ಣು ಬೇರೆ ಜಾತಿಯ ಹುಡುಗ ನೊಂದಿಗೆ ಓಡಿ ಹೋದರೆ ಅವರನ್ನು ಮನೆಯಲ್ಲಿ ಸೇರಿಸಿಕೊಳ್ಳುವುದಿಲ್ಲ. ಅವಳ ಕುಟುಂಬ ಮಾತ್ರ ಅವಳೊಂದಿಗೆ ಇಷ್ಟವಿದ್ದರೆ ಸಂಪರ್ಕ ಇಟ್ಟುಕೊಳ್ಳಬಹುದು, ಇಲ್ಲದಿದ್ದರೆ ಇಲ್ಲ. ಅದು ಅವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಈ ಸಮುದಾಯದವರು ಬೇರೆ ಜಾತಿಗೆ ಸೇರಿದರೆ ಅವರನ್ನು ತಮ್ಮ ಜಾತಿಯಲ್ಲಿ ಸೇರಿಸಿಕೊಳ್ಳುವುದಿಲ್ಲ. ಆದರೆ ಆ ಕುಟುಂಬದ ಇತರ ಸದಸ್ಯರು ಬೇಕಾದರೆ ಈ ಸಮುದಾಯದಲ್ಲಿ ಸೇರಲು ಇಷ್ಟಪಟ್ಟರೆ ಅವರನ್ನು ಒಂದಿಷ್ಟು ದಂಡದ ರೂಪದಲ್ಲಿ ಹಣ ಜಮಾತ್‌ಗೆ ನೀಡುವಂತೆ ತಿಳಿಸಿ ಅವರಿಗೆ ಸಮಾಜದಲ್ಲಿ ಸೇರಿಸಿಕೊಳ್ಳುತ್ತಾರೆ. ಈ ತೀರ್ಪು ದಂಡ, ಶಿಕ್ಷೆ, ಬಹಿಷ್ಕಾರ ಎಂಬ ಮೂರು ರೀತಿಯಿಂದ ಕೂಡಿರುತ್ತದೆ. ವಿಚಾರ ಮಾಡಿ ವ್ಯಕ್ತಿಯ ಸಮಸ್ಯೆಗಳನ್ನು ಪರಿಗಣಿಸಿ ತೀರ್ಪು ಕೊಡುತ್ತಾರೆ. ಜೊತೆಗೆ ಅವರೇ ಪರಿಹಾರ ಕ್ರಮಗಳನ್ನು ಕೂಡ ಸೂಚಿಸುತ್ತಾರೆ. ಚಿಕ್ಕ-ಪುಟ್ಟ ವ್ಯಾಜ್ಯಗಳ ತೀರ್ಪುಗಳಲ್ಲಿ ಕೇವಲ ಎಲೆ, ಅಡಿಕೆ ಅಥವಾ ದಂಡ ಕಟ್ಟಿಸಿಕೊಂಡು ಮುಗಿಸುತ್ತಾರೆ. ಸಮುದಾಯದ ಹೆಣ್ಣು ಅಥವಾ ವಿಧವೆ ಇತರೆ ಜಾತಿಯ ಪುರುಷನೊಂದಿಗೆ ಲೈಂಗಿಕ ಸಂಪರ್ಕವಿಟ್ಟು ಕೊಂಡಿದ್ದರೆ ಅಥವಾ ಅವನ

ಜೊತೆ ಓಡಿಹೋಗಿದ್ದರೆ, ಅಂಥವಳನ್ನು "ಕುಲಗೆಟ್ಟ ಹೆಣ್ಣು" ಎಂದು ತೀರ್ಪುಕೊಟ್ಟು, ಸಮುದಾಯದಿಂದ ಹೊರ ಹಾಕಲಾಗುತ್ತದೆ. ನಾಗರೀಕತೆಯ ಪ್ರಭಾವದಿಂದಾಗಿ ಇತ್ತೀಚಿನ ದಿನಗಳಲ್ಲಿ ವ್ಯಾಜ್ಯಗಳು ದೈವ ಪಂಚಾಯತಿಯಲ್ಲಿ ಬಾರದೆ ಪೋಲೀಸ್ ಠಾಣೆ, ಕೋರ್ಟು, ಕಛೇರಿಗಳ ಮೆಟ್ಟಿಲುಗಳು ಏರುತ್ತಿವೆ.

೩.೧೦. ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿಕೊಳ್ಳುವ ಕ್ರಮ

ಬುಡಕಟ್ಟು ವ್ಯವಸ್ಥೆಯಲ್ಲಿ ತಮ್ಮ ಪಂಗಡ ಇಲ್ಲವೆ ಸಮುದಾಯದ ಶುದ್ಧತ್ವಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ. ಇದೇ ರೀತಿ ಹಲವು ಸಮುದಾಯಗಳು ತಮ್ಮ ಪಂಗಡದ ಶುದ್ಧತೆಯನ್ನು ಕಾಪಾಡಿಕೊಳ್ಳಲು ಹಲವು ರೀತಿ ಕಟ್ಟುಪಾಡುಗಳನ್ನು ಹಾಕಿಕೊಂಡಿರುವುದನ್ನು ಕಾಣಬಹುದು. ಹೀಗೆ ಖಾಟಿಕ್ ಸಮುದಾಯವು ಇದಕ್ಕೆ ಹೊರತಾಗಿಲ್ಲ. ಈ ಸಮುದಾಯದಲ್ಲಿ ಜಾತಿ ಬಹಿಷ್ಕಾರಕ್ಕೆ ಕಾರಣಗಳು ಈ ರೀತಿ ಇವೆ.

ಈ ಸಮುದಾಯದ ಹೆಣ್ಣು ಪುರುಷರಾಗಲಿ ಅನ್ಯ ಜಾತಿಯ ಸ್ತ್ರೀ ಪುರುಷರೊಂದಿಗೆ ಅನೈತಿಕ ಸಂಬಂಧವನ್ನಿಟ್ಟುಕೊಂಡಲ್ಲಿ ಅಂತವರನ್ನು ಜಾತಿಯಿಂದ ಬಹಿಷ್ಕಾರಿಸಲಾಗುತ್ತದೆ.

ಖಾಟಿಕ್ ಸಮುದಾಯದ ಯಾವುದೇ ಹೆಣ್ಣು ಇಲ್ಲವೆ ಗಂಡು ಇನ್ನೊಂದು ಜಾತಿಯ ವ್ಯಕ್ತಿಯೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಲೆಸಿದಲ್ಲಿ ಅಂತಹ ವ್ಯಕ್ತಿಯನ್ನು ಸಮುದಾಯದಿಂದ ಬಹಿಷ್ಕಾರಿಸಲಾಗುತ್ತದೆ. ಗಂಡು ಅನ್ಯ ಜಾತಿಯ ಹೆಣ್ಣನ್ನು ಮದುವೆಯಾದರೆ ದೈವದವರು ಸೇರಿ ಏನಾದರೂ ತಪ್ಪೊಪ್ಪಿಗೆ ದಂಡವನ್ನು ಕಟ್ಟಿ ಮತ್ತೆ ಜಾತಿಯೊಳಗೆ ಸೇರಿಸಿಕೊಳ್ಳುವುದು ಇತ್ತೀಚಿಗೆ ಕಂಡುಬರುತ್ತಿದೆ. ಆದರೆ ಹೆಣ್ಣು ಮಕ್ಕಳು ಅನ್ಯ ಸಮುದಾಯದ ಗಂಡನ್ನು ಮದುವೆಯಾದರೆ ಅವರನ್ನು ಸಮುದಾಯದೊಳಗೆ ಸೇರಿಸಿಕೊಳ್ಳುವುದಿಲ್ಲ. ಆದರೆ ಅವರ ಕುಟುಂಬ ಮಾತ್ರ ಅವಳೊಂದಿಗೆ ಸಂಬಂಧ ಇಟ್ಟುಕೊಳ್ಳಬಹುದು. ಕೆಲವೊಮ್ಮೆ ಇಟ್ಟುಕೊಳ್ಳದೆ ಇರಬಹುದು. ಅದು ಅವರವರ ಕುಟುಂಬಕ್ಕೆ ಸೇರಿದುದಾಗಿರುತ್ತದೆ. ಹೆಚ್ಚಾಗಿ ಅಂಥವರೊಂದಿಗೆ ಅವಳ ಕುಟುಂಬವು ಸಂಬಂಧ ಇಟ್ಟುಕೊಳ್ಳಲು ಇಷ್ಟಪಡದಿರುವುದು ಕಂಡುಬರುತ್ತೆ. ಇಂತಹ ಕುಟುಂಬದೊಂದಿಗೆ ಸಮುದಾಯದವರು ಸಹ ಹೆಚ್ಚು ಸಂಬಂಧಗಳನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ.

ಖಾಟಿಕ್ ಸಮುದಾಯದಲ್ಲಿ ಯಾವುದೇ ವ್ಯಕ್ತಿಯೊಬ್ಬ ಸಮಾಜದಲ್ಲಿ ಅಂದರೆ ಸಮುದಾಯದಲ್ಲಿ ಕಾರ್ಯಕ್ರಮಗಳೇನಾದರು ಇದ್ದರೆ ಅವಾಗ ಸಮುದಾಯದ ಹಿರಿಯರನ್ನು ಅಥವಾ ಸಮಾಜದವರನ್ನು ಅವಾಚ್ಯ ಶಬ್ದಗಳಿಂದ ಬೈದರೆ ಅವನಿಗೆ ಮೊದಲು ತಿಳಿ ಹೇಳಲಾಗುತ್ತದೆ. ಅವನು ನಿರಂತರ ಬೈಯುವುದು ಸಮಾಜಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಹೆಚ್ಚಾದರೆ ಅವನನ್ನು ಸಮುದಾಯದಿಂದ ಬಹಿಷ್ಕರಿಸಲಾಗುತ್ತದೆ. ಹಾಗೆಯೇ ಸಮಾಜದಲ್ಲಿ ನಡೆಯುವ ಯಾವುದೇ ಶುಭ ಅಥವಾ ಅಶುಭ

ಕಾರ್ಯಕ್ರಮಗಳಿಗೆ ನಿರಂತರ ಗೈರು ಹಾಜರಾದರೆ ಅವರನ್ನು ಸಹ ಸಮುದಾಯದವರು ಯಾರೂ ಮಾತನಾಡುವುದಿಲ್ಲ, ಸಮಾಜದಿಂದ ಬಹಿಷ್ಕರಿಸಲಾಗುತ್ತದೆ.

ಮುಖ್ಯವಾದ ಇನ್ನೊಂದು ವಿಷಯವೆಂದರೆ ಖಾಟಿಕ್ ಸಮುದಾಯದ ವ್ಯಕ್ತಿ ಅನ್ಯ ಧರ್ಮವನ್ನು ಸ್ವೀಕರಿಸಿದರೆ ಅಂತವರನ್ನು ಸಹ ಸಮುದಾಯದಿಂದ ಅವನಿಗೆ ಅವನ ಕುಟುಂಬಕ್ಕೆ ಬಹಿಷ್ಕಾರ ಹಾಕಲಾಗುತ್ತದೆ. ಅನ್ಯ ಧರ್ಮ ಸ್ವೀಕರಿಸಿದ ವ್ಯಕ್ತಿಯನ್ನು ಬಿಟ್ಟು ಅವನ ಕುಟುಂಬವೇನಾದರು ಈ ಸಮುದಾಯದಲ್ಲಿ ಮತ್ತೆ ಸೇರಬೇಕಾದ ಇಚ್ಛೆಯನ್ನು ಪ್ರಕಟಿಸಿದರೆ ಅವರನ್ನು ಒಂದಿಷ್ಟು ದಂಡದ ರೂಪದಲ್ಲಿ ಹಣವನ್ನು ಕಟ್ಟಿಸಿಕೊಂಡು ಮತ್ತೆ ಸಮುದಾಯದಲ್ಲಿ ಸೇರಿಸಿಕೊಳ್ಳುತ್ತಾರೆ. ಅನ್ಯ ಧರ್ಮ ಸ್ವೀಕರಿಸಿದ ವ್ಯಕ್ತಿಯ ಕುಟುಂಬದೊಂದಿಗೆ ಸಮುದಾಯದ ಬೇರೆ ಯಾರು ಸಂಬಂಧವಿಟ್ಟುಕೊಳ್ಳಬಾರದು, ಹಾಗೇನಾದರು ಅವರೊಂದಿಗೆ ಸಂಬಂಧವಿಟ್ಟುಕೊಂಡಿರುವುದು ಕಂಡುಬಂದರೆ ಅವರನ್ನು ಸಹ ಸಮುದಾಯ ದಿಂದ ಬಹಿಷ್ಕಾರಿಸಲಾಗುತ್ತದೆ. ಅನ್ಯ ಧರ್ಮ ಸ್ವೀಕರಿಸಿದ ವ್ಯಕ್ತಿ ಪುನಃ ಸಮುದಾಯದೊಳಗೆ ಸೇರಲು ಇಚ್ಛಿಸಿದರೆ ಅವರನ್ನು ಸೇರಿಸಿಕೊಳ್ಳುವುದು ತುಂಬಾ ಕಷ್ಟ ಹಾಗೂ ವಿರಳ ಎಂದು ಹೇಳಬಹುದು. ಅನ್ಯ ಧರ್ಮಕ್ಕೆ ಸೇರಿದ ವ್ಯಕ್ತಿಯನ್ನು ಹೊರತುಪಡಿಸಿ ಉಳಿದ ಸದಸ್ಯರು ದೈವದವರಲ್ಲಿ ವಿನಂತಿಸಿ ಕೊಂಡು ಸಮುದಾಯದೊಳಗೆ ಸೇರುವ ಅವಕಾಶವಿದೆ. ಆದರೆ ಇದು ದೈವದವರ ಮೇಲೆ ನಿರ್ಧರಿತವಾಗುವ ವಿಷಯ.

೩.೧೧ ನಂಬಿಕೆ - ವಿಧಿ ನಿಷೇಧಗಳು

"ಮನುಷ್ಯನಿಗೆ ಸಹಜವೂ ಸ್ವಾಭಾವಿಕವೂ ಹಿಂದಿನವರಿಂದ ಬಳುವಳಿಯಾಗಿ ಬಂದುದು ನಂಬಿಕೆ, ಆಚರಣೆ, ವಿಧಿ-ವಿಧಾನಗಳಿಗೆ ಪ್ರಾಕ್ತನ ಅಥವಾ ಜಾನಪದ ಮನಸ್ಸು ಬದ್ಧವಾಗಿರುತ್ತದೆ"(ಆರ್.ಬಿ. ಕುಮಾರ್;೨೦೦೦:೮೧). ಈ ರೀತಿಯಲ್ಲಿ ಬದ್ಧವಾದ ಮನಸ್ಸುಗಳು ತಮ್ಮದೇ ಆದ ನಂಬಿಕೆ, ವಿಧಿ-ವಿಧಾನಗಳನ್ನು ಅನುಸರಿಸುತ್ತವೆ. ಇಲ್ಲಿ ನಂಬಿಕೆಗಳು ಸಾಮಾನ್ಯವಾಗಿ ಸಾಮೂಹಿಕ ಮತ್ತು ವೈಯಕ್ತಿಕ ಎಂದು ಗುರುತಿಸಬಹುದು. ಒಂದು ಪ್ರದೇಶದಲ್ಲಿ ಬದುಕುವ ಇಡೀ ಜನತೆ ಸಾರ್ವತ್ರಿಕವಾಗಿ ನಂಬುವ ಕೆಲವು ನಂಬಿಕೆಗಳು ಹೇಗಿವೆಯೋ ಹಾಗೇ ವಿಧಿ-ನಿಷೇಧಗಳುಂಟು. ಈ ವಿಧಿ-ನಿಷೇಧಗಳು ಎನ್ನುವ ಕಲ್ಪನೆಯನ್ನು ಇಂದು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತಿದೆ. ಈ ಸಮುದಾಯದಲ್ಲಿ ನಂಬಿಕೆ, ವಿಧಿ-ನಿಷೇಧಗಳು ಸಂವಿಧಾನವೆಂಬಂತೆ ನಿಯಮಗಳಾಗಿರುತ್ತವೆ. ಈ ನಿಯಮಗಳಿಗೆ ಬದ್ಧರಾಗಿಯೇ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವಿಸುತ್ತಾರೆ. ಇವು ಒಂದು ಪರಂಪರೆಯಂತೆ ಬಳುವಳಿಯಾಗಿ ಬೆಳೆದು ಬಂದಿರುತ್ತವೆ. ಪರಿಸರಕ್ಕೆ ಅನುಗುಣವಾಗಿ, ಕಾಲಕ್ಕೆ ತಕ್ಕಂತೆ ನಂಬಿಕೆ-ನಿಷೇಧಗಳು ಅನ್ವಯಿಸಲಾರವಾದರೂ, ಕೆಲವೊಂದನ್ನು ಕಡ್ಡಾಯ ನಿಯಮಗಳಾಗಿ ಪಾಲಿಸುತ್ತಾರೆ. ಕೆಲವು ನಂಬಿಕೆಗಳು ಇವರಲ್ಲಿ ಸಾಂಪ್ರದಾಯಿಕವಾಗಿ ಉಳಿಸಿಕೊಂಡಿರುವುದನ್ನು ಕಾಣಬಹುದು.

ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ದೈವಗಳು ನುಡಿಯುವ ಭವಿಷ್ಯ ವಾಚಕಗಳ ನಿರ್ಣಯ ಮತ್ತು ನಿರ್ದೇಶನದಂತೆ ನಡೆಯುವುದನ್ನು ಕಾಣಬಹುದಾಗಿದೆ. ಖಾಟಿಕರು ಸಹ ಇದಕ್ಕೆ ಹೊರತಾಗಿಲ್ಲ. ಇವರು ಸಹ ಹಲವು ಭವಿಷ್ಯ ವಾಚಕಗಳನ್ನು ನಂಬಿ ತಮ್ಮ ಕೆಲಸ ಕಾರ್ಯಗಳನ್ನು ರೂಪಿಸಿ ಕೊಳ್ಳುವುದುಂಟು.

ಇವರು ಬ್ರಾಹ್ಮಣ ಪುರೋಹಿತರು ಹೇಳುವ ಪಂಚಾಂಗ ಭವಿಷ್ಯವನ್ನು ನಂಬುತ್ತಾರೆ. ಅವರು ಹೇಳುವ ಪ್ರಕಾರ ಪೂಜೆ, ಪುನಸ್ಕಾರಗಳನ್ನು ಮಾಡುತ್ತಾರೆ. ಇವರಿಗೆ ಭವಿಷ್ಯದಲ್ಲಿ ನಂಬಿಕೆಯಿದೆ. ಹಾಗಾಗಿ ಹೇಳಿಕೆಗಳನ್ನು ಕೇಳುವುದು, ಬುಡುಬುಡುಕಿಯವರನ್ನು, ಹಸ್ತ ನೋಡಿ ಭವಿಷ್ಯ ಹೇಳುವವರನ್ನು ಇವರು ನಂಬುತ್ತಾರೆ. ಹಾಗೆ ನಡೆಯುತ್ತಾರೆ. ಹಾಗೆಯೇ ಶಕುನಗಳನ್ನು ಸಹ ನಂಬುತ್ತಾರೆ. ಒಂಟಿ ಸೀನು ಅವಲಕ್ಷಣ, ಜೋಡಿ ಸೀನು ಶುಭಕರವಾದದು, ತುಂಬಿದ ನೀರಿನ ಬಿಂದಿಗೆ ಎದುರಿಗೆ ತಂದರೆ ಹೋಗುವ ಕೆಲಸ ಆಗುತ್ತೆ. ಕಾಗೆ ಕೂಗಿದರೆ ನೆಂಟರು ಬರುತ್ತಾರೆ, ಹಲ್ಲಿ ಲೊಚಗುಟ್ಟಿದರೆ ಸತ್ಯವಾಗುತ್ತೆ ಹೀಗೆ ಹಲವು ಶಕುನಗಳನ್ನು ಇವರು ನಂಬುತ್ತಾರೆ.

ಮೈಲಾರಲಿಂಗನ ಜಾತ್ರೆಯಲ್ಲಿ ಹೇಳುವ ಕಾರಣಿಕವನ್ನು ಇವರು ನಂಬುತ್ತಾರೆ. ಹೆಚ್ಚಾಗಿ ಸ್ತ್ರೀ ದೈವಗಳಾದ ಹುಲಿಗೆಮ್ಮ, ರೇಣುಕಾ, ಯಲ್ಲಮ್ಮ, ಗಾಳೆಮ್ಮ ಈ ದೇವತೆಗಳ ಜೋಗತಿಯರು ಹೇಳುವ ಭವಿಷ್ಯ, ಹೇಳಿಕೆಗಳನ್ನು ತುಂಬಾ ನಂಬುತ್ತಾರೆ. ಅವರ ನಿರ್ದೇಶನದಂತೆ ನಡೆಯುತ್ತಾರೆ. ಇವರು ತಮ್ಮ ಮನೆಯ ವೈಯಕ್ತಿಕ ಸಮಸ್ಯೆಗಳಿಗೆಲ್ಲಾ ಮೊರೆ ಹೋಗುವುದು ಹುಲಿಗೆಮ್ಮ, ಗಾಳೆಮ್ಮ ಒಟ್ಟಾಗಿ ಸ್ತ್ರೀ ದೇವತೆಗಳನ್ನು ತಮ್ಮ ವೈಯಕ್ತಿಕ ಇಲ್ಲವೆ ಸಾಮೂಹಿಕ ಸಮಸ್ಯೆಗಳಿಗೆ ದೇವತೆಯಲ್ಲಿ ಹೂವಿನ ಪ್ರಸಾದ ಕೇಳುತ್ತಾರೆ. ದೇವತೆ ಬಲ ಭಾಗದಿಂದ ಹೂವನ್ನು ಕೊಟ್ಟರೆ ಕೆಲಸ ಯಶಸ್ವಿ ಯಾಗುತ್ತದೆ ಎಂದು ನಂಬುತ್ತಾರೆ. ಅಕಸ್ಮಾತ್ ಎಡ ಭಾಗದಿಂದ ಹೂವಿನ ಪ್ರಸಾದ ದೊರೆತಲ್ಲಿ ಕೆಲಸವಾಗುವುದಿಲ್ಲ .ಎಂದು ತಿಳಿಯುತ್ತಾರೆ. ತಾವು ಮಾಡಬೇಕೆಂದ ಕಾರ್ಯಗಳ ಯೋಚನೆ, ಯೋಜನೆ ಮತ್ತು ಅಂದಿನ ಕೆಲಸ ಅಲ್ಲಿಗೇ ಕೈ ಬಿಡಲಾಗುವುದು.

ಖಾಟಿಕ್ ಸಮುದಾಯವು ಹೆಚ್ಚಾಗಿ ದೈವಗಳು ನುಡಿಯುವ ಹಲವು ಭವಿಷ್ಯವಾಚಕಗಳನ್ನು ನಂಬಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ಣಯಿಸುತ್ತಾರೆ. ಇವರು ದೇವರ ಹೇಳಿಕೆ ಹಾಗೂ ಪಂಚಾಂಗದ ಭವಿಷ್ಯವನ್ನು ಬಲವಾಗಿ ನಂಬುತ್ತಾರೆ. ಹಾಗೆಯೇ ಅದು ತೋರಿಸಿದ ಪರಿಹಾರದ ರೀತಿಯಲ್ಲಿ ಪೂಜೆ ಪುನಸ್ಕಾರಗಳನ್ನು ಸಲ್ಲಿಸುತ್ತಾರೆ. ದೇವರ ಹೇಳಿಕೆಗಳಾದ ಮೈಲಾರಲಿಂಗನ ಕಾರಣಿಕೋತ್ಸವದಲ್ಲಿ ನುಡಿಯುವ 'ಕಾರಣಿಕ' ಹಾಗೂ ಹುಲಿಗೆಮ್ಮ, ರೇಣುಕಾ ಯಲ್ಲಮ್ಮ ಮೈಯಲ್ಲಿ ಬರುವ ಜೋಗತಿಯರ 'ಹೇಳಿಕೆ'ಗಳು, ಕುಲದೇವತೆಗಳಲ್ಲಿ ಮತ್ತು ಆಂಜನೇಯ ದೈವಗಳಲ್ಲಿ 'ಹೂವು' ಕೇಳುವುದು. ಹೀಗೆಯೇ ಹಸ್ತಮುದ್ರಿಕೆ ಹಾಗೂ ಬ್ರಾಹ್ಮಣರಲ್ಲಿ ಪಂಚಾಂಗ ಕೇಳಿಸಿ

ವರ್ತಮಾನದಲ್ಲಿ ನಡೆಯುವ ಕಷ್ಟ-ಕಾರ್ಪಣ್ಯಗಳಿಗೆ ಪರಿಹಾರಗಳನ್ನು ಪಡೆಯುತ್ತಾರೆ. ಅಂತೆಯೇ ಇವರು ಶಕುನಗಳನ್ನು ಸಹ ನಂಬಿಕೆಯಿಂದಲೇ ಪರಿಗಣಿಸುತ್ತಾರೆ. ಉದಾ: ಒಂಟಿ ಸೀನು ಹಾಕಿದಾಗ ಅವಲಕ್ಷಣದ ಸಂಕೇತ; ಜೋಡಿ ಸೀನು ಹಾಕಿದರೆ ಶುಭಶಕುನ ಎಂಬಂತೆ ನಂಬುತ್ತಾರೆ. ಹೀಗೆ ಹಲ್ಲಿ ವಟಗುಟ್ಟುವಿಕೆ, ಕಾಗೆ ಕೂಗುವಿಕೆ, ನಾಯಿ ಬೋಗಳುವಿಕೆಯ ಕುರಿತು ಹಲವು ಬಗೆಯ ಶಕುನಗಳಲ್ಲಿ ನಂಬಿಕೆಯನ್ನಿಡುವರು. ಸಾಮಾಜಿಕ ಜೀವನದ ಆಚರಣೆ ಮೇಲೆ ಯಾವ ಕೆಲಸ ಮಾಡಬೇಕು, ಮಾಡಬಾರದೂ ಎಂಬ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ.

- ದೇವರಲ್ಲಿ ಹೂವು ಕೇಳಿದಾಗ ಬಲಗಡೆಯಿಂದ ಕೊಟ್ಟರೆ ಕೆಲಸ ಯಶಸ್ವಿಯಾಗುತ್ತದೆ.
- ದೈವವು ಹೂವು ಪ್ರಸಾದವಾಗಿ ಎಡಗಡೆ ಭಾಗದಿಂದ ನೀಡಿದರೆ ಅಶುಭವು.
- ಶುಕ್ರವಾರ ಮನೆಯ ಸೊಸೆಯು ತವರಿಗೆ ಹೋಗಬಾರದು.
- ಮಂಗಳವಾರ ಮಗಳು ತವರಿನಿಂದ ಗಂಡನ ಮನೆಗೆ ಹೋಗಬಾರದು.
- ರಾತ್ರಿ ಹೊತ್ತು ಕಸ ಹೊಡೆಯಬಾರದು, ಮನೆಯಿಂದ ಕಸವನ್ನು ರಾತ್ರಿಯಲ್ಲಿ ಹೊರಹಾಕುವಂತಿಲ್ಲ.
- ಮಾತನಾಡುವಾಗ ಹಲ್ಲಿ ಲೊಚಗುಟ್ಟಿದರೆ ಮಾತಾಡುವ ಮಾತು ಸತ್ಯವಾಗುತ್ತದೆ.
- ಮನೆಯ ಮಾಳಿಗೆ ಮೇಲೆ ಅಥವಾ ಮನೆಯ ಮುಂದುಗಡೆ ಕಾಗೆ ಕೂಗಿದರೆ ಅತಿಥಿಗಳು ಬರುತ್ತಾರೆ.
- ಹೆಣ್ಣು ಮಕ್ಕಳು ಋತುಮತಿಯಾದರೆ ಮನೆಯ ಪ್ರತ್ಯೇಕ ಕೋಣೆ ಅಥವಾ ಮೂಲೆಯಲ್ಲಿರಬೇಕು.
- ಶುಭ ಕಾರ್ಯಕ್ರಮಗಳಲ್ಲಿ ಮುತ್ತೈದೆಯರು ಮುಂದಾಗಿ ಕಾರ್ಯನಿರ್ವಹಿಸಬೇಕು.
- ಐದು ಜನ ಮುತ್ತೈದೆಯರು ಮದುವೆ ಕಾರ್ಯಕ್ರಮಗಳಲ್ಲಿ ಸುರುಗಿ ನೀರು ಹಾಕಬೇಕು.
- ಮದುಮಗ ಕೈಯಲ್ಲಿ ಚಾಕು ಮತ್ತು ನಿಂಬೆಹಣ್ಣು ಹಿಡಿದುಕೊಂಡಿರಬೇಕು.
- ಮದುಮಗ ಕುಲದೈವಕ್ಕೆ ಹಾಗೂ ಕುಲ ದೇವರುಗಳಿಗೆ ನಮಸ್ಕಾರ ಮಾಡಬೇಕು.
- ಗರ್ಭಿಣಿ ಮಹಿಳೆ ಹೊರಗಡೆ ಹೋಗುವ ಸಂದರ್ಭದಲ್ಲಿ ಕರಿ ಕಂಬಳಿ ಹಾಕಿಕೊಳ್ಳಬೇಕು.
- ಋತುಮತಿ ಹಾಗೂ ಬಾಣಂತಿಯು ಮಲಗುವ ತಲೆಯ ಹಿಂಬದಿಯಲ್ಲಿ ಕುಡುಗೋಲು, ಚಪ್ಪಲಿ ಅಥವಾ ಕಸಬರಿಕೆ ಇಟ್ಟರೆ ದುಷ್ಟಶಕ್ತಿಗಳು ಅವರ ಹತ್ತಿರ ಸುಳಿಯುವುದಿಲ್ಲ.
- ಬಿಸಿ ನೀರಿನಿಂದ ಸ್ನಾನ ಮಾಡುವುದು ಗರ್ಭಿಣಿ ಮಹಿಳೆಗೆ ಆರೋಗ್ಯಕ್ಕೆ ಉತ್ತಮ.
- ಹುಟ್ಟಿದ ಮಗುವಿಗೆ ಎಣ್ಣೆ ಸ್ನಾನ ಮಾಡಿಸಬೇಕು.
- ಜವಳ ತೆಗೆಯದ ಮಗುವನ್ನು ಇತರರ ಮನೆಗೆ ಕರೆದುಕೊಂಡು ಹೋದರೆ ಮಗು ತುಂಬಾ ಹಠ ಮಾಡುತ್ತದೆ.

- ಶವದ ಬಳಿ ತುಳಸಿಗಿಡ ನೆಟ್ಟರೆ ದೈವ ಸಂಭೂತನಾಗುತ್ತಾನೆ.
- ಮೃತ ಹೊಂದಿರುವ ವ್ಯಕ್ತಿಯಲ್ಲಿ ಉಡುದಾರ ತೆಗೆಯಬೇಕು.
- ಸತ್ತಿರುವ ವ್ಯಕ್ತಿಯನ್ನು ಸುಡುವುದಾಗಿರುತ್ತದೆ.
- ಹೆಣ್ಣು ಮಗಳು ತುಂಬಿದ ನೀರಿನ ಬಿಂದಿಗೆ ಹೊತ್ತುಕೊಂಡು ಎದುರಿಗೆ ಬಂದರೆ, ಅಂದಿನ ವ್ಯಾಪಾರ ಹೆಚ್ಚಾಗುತ್ತದೆ.
- ನರಿ ಮುಖ ನೋಡಿದರೆ ವ್ಯಾಪಾರಕ್ಕೆಂದು ತೆಗೆದುಕೊಳ್ಳುವ ಕುರಿಗಳು ತುಂಬಾ ಲಾಭದಾಯಕ ವಾಗಿರುತ್ತವೆ.
- ಪ್ರತಿ ದಿನ ಕುಲದೇವತೆಗಳಿಗೆ ನೆನಪಿಸಿಕೊಂಡರೆ ವ್ಯಾಪಾರವು ಉತ್ತಮವಾಗುತ್ತದೆ.
- ಅಮವಾಸ್ಯೆ ದಿನದಂದು ತಮ್ಮ ವ್ಯಾಪಾರದ ಸಾಮಾಗ್ರಿಗಳಿಗೆ ಹಾಗೂ ಅಂಗಡಿಗೆ ಪೂಜೆ ಮಾಡುವುದಾಗಿರುತ್ತದೆ.
- ಹೂವಿನ ಬುಟ್ಟಿ ಎದುರಾದರೆ ಹೋಗುವ ಕೆಲಸ ನಿರ್ವಿಘ್ನವಾಗಿ ನಡೆಯುತ್ತದೆ.
- ಕ್ಷೌರಿಕ ವ್ಯಕ್ತಿ ಎದುರಿಗೆ ಬಂದರೆ ಅಂದಿನ ವ್ಯಾಪಾರ ಉತ್ತಮವಾಗಿರುತ್ತದೆ.
- ಹರಕೆ ಹೊತ್ತಾಗ ದೇವಿಗೆ ಪ್ರಾಣಿ ಬಲಿಯನ್ನು ಕೊಡುವುದು.
- ದೇವಿಯನ್ನು ನೆನಪಿಸಿಕೊಂಡರೆ ದುಷ್ಟಶಕ್ತಿಗಳು ನಮ್ಮ ಹತ್ತಿರ ಸುಳಿಯುವುದಿಲ್ಲ.
- ದೇವಸ್ಥಾನಗಳಿಗೆ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗಬಾರದು.
- ಬೇವಿನ ಕಟ್ಟಿಗೆ ಉರಿಸಿದರೆ ಕಷ್ಟಗಳು ಬರುತ್ತವೆ.
- ಮಳೆ ಗುಡುಗು ಬಂದರೆ ಚೊಚ್ಚಲ ಮಕ್ಕಳು ಹೊರಗಡೆ ಹೋಗುವಂತಿಲ್ಲ.
- ವ್ಯಾಪಾರಕ್ಕೆ ಹೋಗುವ ಸಂದರ್ಭದಲ್ಲಿ ಬೆಕ್ಕು ಎದುರಾದರೆ ವ್ಯಾಪಾರಕ್ಕೆ ಹೋಗುವಂತಿಲ್ಲ. ಸ್ವಲ್ಪ ಸಮಯದ ನಂತರ ಹೋಗಬೇಕು.
- ಕಟ್ಟಿಗೆ ಹೊರೆ ಎದುರಿಗೆ ಬಂದರೆ ಶುಭಕಾರ್ಯಗಳಿಗೆ ಹೋಗುವಂತಿಲ್ಲ.
- ಋತುಮತಿಯಾದ ಹುಡುಗಿ ಹೆಚ್ಚಾಗಿ ಓಡಾಡುವಂತಿಲ್ಲ.
- ಋತುಮತಿಯಾದ ಹುಡುಗಿ ಮನೆ ಕೆಲಸಗಳನ್ನು ಮಾಡುವಂತಿಲ್ಲ.
- ಋತುಮತಿಯಾದ ಹುಡುಗಿ ಪರ ಪುರುಷರನ್ನು ನೋಡುವಂತಿಲ್ಲ.
- ಬಾಣಂತಿಯು ಹಳ್ಳ ಹರಿಯುವ ಮತ್ತು ನೀರು ಹರಿಯುವ ಸ್ಥಳಕ್ಕೆ ಹೋಗುವಂತಿಲ್ಲ.
- ಗರ್ಭವತಿಯರಾಗಿದ್ದ ಸಮಯದಲ್ಲಿ ಪೇರಲಕಾಯಿ, ಪಪ್ಪಾಯಿ ಹಣ್ಣು ಹಾಗೂ ಎಳ್ಳಿನ ಪದಾರ್ಥಗಳನ್ನು ತಿನ್ನುವಂತಿಲ್ಲ.
- ಬಾಣಂತಿಯು ಜನನ ಸಂದರ್ಭದಲ್ಲಿ ಗಂಡನ ಮನೆಯಲ್ಲಿ ಇರುವಂತಿಲ್ಲ.

- ಹುಟ್ಟಿದ ಮಗುವನ್ನು ಇನ್ನೊಬ್ಬರ ಕೈಯಲ್ಲಿ ಕೊಡಬಾರದು.
- ತಾಯಿಂದರು ಬಂಜೆ ಹೆಣ್ಣಿನ ಎದುರಿಗೆ ತನ್ನ ಮಗುವಿಗೆ ಹಾಲು ಕುಡಿಸಬಾರದಂತೆ.
- ತಾಳಿ ಕಟ್ಟುವ ಸಂದರ್ಭದಲ್ಲಿ ಮದುಮಗಳು ನಗಬಾರದು.
- ಶುಭ ಕಾರ್ಯಕ್ರಮದಲ್ಲಿ ನಾಯಿಗಳು ಬೊಗಳಬಾರದು. ಆದ್ದರಿಂದ ಅವುಗಳನ್ನು ದೂರ ಓಡಿಸುತ್ತಾರೆ.
- ವ್ಯಾಪಾರಕ್ಕೆ ಹೋಗುವ ಸಂದರ್ಭದಲ್ಲಿ ಬೇರೆ ಸಮುದಾಯದವರನ್ನು ಕರೆದುಕೊಂಡು ಹೋಗು ವಂತಿಲ್ಲ.
- ಶವ ಸಂಸ್ಕಾರದಲ್ಲಿ ಹೋದವರು, ನೇರವಾಗಿ ಮನೆಗಳಿಗೆ ಪ್ರವೇಶಿಸುವಂತಿಲ್ಲ.
- ಸಾವು ಸಂಭವಿಸಿದ ಮನೆಯ ಕುಟುಂಬದ ಸದಸ್ಯರುಗಳು ತಮ್ಮ ಸೂತಕ ಕಳೆಯುವವರೆಗೆ ಇತರೆ ಜಾತಿ ಮನೆಗಳಿಗೆ ಪ್ರವೇಶ ಮಾಡುವಂತಿಲ್ಲ.
- ಸತ್ತಿರುವ ಮೃತ ದೇಹವನ್ನು ಮೂರು-ನಾಲ್ಕು ದಿವಸಗಳವರೆಗೂ ಇಟ್ಟು ಕೊಳ್ಳುವಂತಿಲ್ಲ.
- ವಿಧವೆಯಾದವರು ಎದುರಿಗೆ ಬಂದರೆ ಅಂದು ಮಾಡುವ ಮುಖ್ಯ ಕೆಲಸಗಳನ್ನು ಮಾಡುವಂತಿಲ್ಲ.
- ಬೇವಿನ ಮರ ಕಡಿಯಬಾರದಂತೆ.
- ಸತ್ತ ಕುರಿ-ಮೇಕೆಗಳನ್ನು ಮುಟ್ಟುವಂತಿಲ್ಲ ಹಾಗೂ ವ್ಯಾಪಾರವನ್ನು ಸಹ ಮಾಡಬಾರದು.
- ಇತರೆ ಸಮುದಾಯದವರು ಬಲಿ ನೀಡಿ ಶಿರಚ್ಛೇಧ ಮಾಡಿದ ಕುರಿ-ಮೇಕೆಗಳನ್ನು ಮುಟ್ಟುವಂತಿಲ್ಲ.

೩.೧೨. ಸಂಘ ಸಂಸ್ಥೆಗಳು

ಒಂದು ಸಮುದಾಯದ ಅಭಿವೃದ್ಧಿಯಲ್ಲಿ ಆ ಸಮುದಾಯದ ಸಂಘ-ಸಂಸ್ಥೆಗಳು ತುಂಬಾ ಪ್ರಮುಖ ಕಾರ್ಯವಹಿಸುತ್ತವೆ. ಖಾಟಿಕ್ ಸಮುದಾಯದಲ್ಲಿ ಸಂಘಟನೆಯನ್ನು ಕುರಿತು ಹೇಳುವಾಗ ಹಿಂದೆ ಸಂಘಟನೆಯ ಕೊರತೆ ಇತ್ತು. ಕಾರಣ ಎಲ್ಲರೂ ಉದ್ಯೋಗದಲ್ಲಿ ತೊಡಗಿಕೊಂಡು ವ್ಯಾಪಾರ ಮುಗಿಸಿ ಜನ ಸೇರುವಲ್ಲಿ ಸಮಯ ಸಿಗುತ್ತಿರಲಿಲ್ಲ. ಹಾಗಾಗಿ ರಾತ್ರಿಯ ವೇಳೆ ೯-೧೦ ಗಂಟೆಗೆ ನಾವು ಸೇರಿ ಸಮುದಾಯದಲ್ಲಿ ಜನರ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿದ್ದೆವು ಎಂದು ಮಾಹಿತಿದಾರರಾದ ಹುಬ್ಬಳ್ಳಿಯ ದೌಲತ್‌ರಾಮ್ ಎಂಬುವರು ತಿಳಿಸುತ್ತಾರೆ. ಆದರೆ ಇಂದು ಈ ಸಮುದಾಯವು ಎಚ್ಚೆತ್ತುಕೊಳ್ಳುತ್ತಿದೆ. ಸಂಘಟನೆಯೇ ಸಮುದಾಯದ ಶಕ್ತಿ ನಾವು ಮುಂದುವರೆಯಲು ಅಭಿವೃದ್ಧಿ ಹೊಂದಲು ಸಮಾಜದಲ್ಲಿ ಸರ್ಕಾರದ ಸೌಲಭ್ಯ ಪಡೆಯಲು ಸಂಘಟನೆಯ ಜನಸಂಖ್ಯೆ ಮುಖ್ಯ ಎಂಬ ಅರಿವು ಮೂಡಿದೆ. ಹಾಗಾಗಿ ಪ್ರತಿಯೊಂದು ಊರಿನಲ್ಲಿ ಸಂಘಟನೆಯ ಕಾರ್ಯ ಭರದಿಂದ ಸಾಗಿರುವುದು ಕಂಡುಬರುತ್ತದೆ.

ಹುಬ್ಬಳ್ಳಿಯಲ್ಲಿ ದಿನಾಂಕ ೨೧ ಏಪ್ರಿಲ್ ೧೯೮೧ ರಂದು ಮೊದಲ ಬಾರಿಗೆ 'ಅಖಿಲ ಕರ್ನಾಟಕ ಖಾಟಿಕ್ ಸೇವಾ ಸಂಘ' ಎಂಬ ಮಹಾಸಮ್ಮೇಳನ ನಡೆಯಿತು. ಇಲ್ಲಿಂದಲೇ ಸಂಘಟನೆ ಎಂಬುದು ಪ್ರಾರಂಭವಾಯಿತು ಎಂದು ತಿಳಿದರು ಇಲ್ಲಿಯವರೆಗೆ ಇವರಲ್ಲಿ ಇನ್ನೂ ಸಂಘಟನೆಯ ಕೊರತೆ ಎದ್ದು ಕಾಣುತ್ತಿದೆ ಹಾಗಾಗಿ ಇತ್ತೀಚೆಗೆ ಖಾಟಿಕ್ ಸಮುದಾಯದ ಯುವಕರು ಉತ್ಸಾಹಿತರಾಗಿ ಖಾಟಿಕ್ ಯುವಕ ಸಂಘಗಳನ್ನು ಕಟ್ಟುತ್ತಿರುವುದು ಕಂಡುಬರುತ್ತದೆ. ಹೊಸಪೇಟೆ, ಹುಬ್ಬಳ್ಳಿ, ಚಿತ್ರದುರ್ಗ ಹೀಗೆ ಹಲವು ಕಡೆ ಖಾಟಿಕ್ ಸಂಘಗಳನ್ನು ರಚಿಸಿ ಮಕ್ಕಳಿಗೆ ವಿದ್ಯಾವಂತರಾಗಿ ಮುಂದು ವರೆಯಲು ಬೇಕಾದ ಸವಲತ್ತನ್ನು ಕಲ್ಪಿಸಿ ಕೊಡುವ ಪ್ರಯತ್ನ, ರಾಜಕೀಯವಾಗಿ ಮುಂದುವರೆಯುವ ಯೋಚನೆ, ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹ ನೀಡುವ ಮುಖಾಂತರ ಸಮುದಾಯದ ಇತರೆ ಮಕ್ಕಳಲ್ಲಿ ಶಿಕ್ಷಣದ ಅರಿವು ಮೂಡಿಸುವುದು ಹೀಗೆ ಹತ್ತು ಹಲವು ಕಾರ್ಯ ಕ್ರಮಗಳನ್ನಿಟ್ಟುಕೊಂಡು ಸಮಾಜದ ಜೊತೆ ನಡೆಯುವ ಪ್ರಯತ್ನವನ್ನು ಕಾಣಬಹುದಾಗಿದೆ.

ಒಟ್ಟಾರೆ ಕರ್ನಾಟಕದಾದ್ಯಂತ ಸಂಘದ ಚಟುವಟಿಕೆಗಳು ಅಲ್ಲಲ್ಲಿ ಕಂಡುಬರುತ್ತಿರುವುದು ಒಂದು ಶ್ಲಾಘನೀಯವಾದ ಅಂಶವಾಗಿದೆ. ಈ ಸಂಘಟನೆಯ ಮುಖ್ಯ ಉದ್ದೇಶ ಉತ್ತರ ಭಾರತ ದಲ್ಲಿರುವಂತೆ ಈ ಸಮುದಾಯವನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಲು ಹೋರಾಟವನ್ನು ಕಳೆದ ೨೫ ವರ್ಷಗಳಿಂದಲೂ ಮಾಡುತ್ತಲೇ ಬಂದಿದೆ. ಅದಕ್ಕೆ ಸಂಬಂದಪಟ್ಟಂತೆ ಜಿಲ್ಲಾಧಿಕಾರಿಗಳಿಗೆ, ತಹಸೀಲ್ದಾರುಗಳಿಗೆ, ಸಮಾಜ ಕಲ್ಯಾಣಾಧಿಕಾರಿಗಳಿಗೆ, ಪ್ರಜಾಪ್ರತಿನಿಧಿಗಳಿಗೆ ಮತ್ತು ಮುಖ್ಯಮಂತ್ರಿ ಗಳವರೆಗೆ ಮನವಿ ಪತ್ರಗಳನ್ನು ಸಲ್ಲಿಸುತ್ತಲೆ ಬಂದಿದೆ. ಈ ಮನವಿ ಪತ್ರದಲ್ಲಿ ಖಾಟಿಕ್ ಸಮುದಾಯದ ಕಸುಬು, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಪರಿಸ್ಥಿತಿ, ಸಮುದಾಯ ಅನುಭವಿಸುತ್ತಿರುವ ಅಸ್ಪೃಶ್ಯತೆ ಮುಂತಾದ ಮಾಹಿತಿಗಳನ್ನೊಳಗೊಂಡ ಮನವಿ ಪತ್ರಗಳನ್ನು ಕೊಡುತ್ತಲೆ ಬಂದಿವೆ.

ಮನವಿ ಪತ್ರದ ಸಂಪೂರ್ಣ ವಿವರವನ್ನು ಇಲ್ಲಿ ಮಾಹಿತಿಗಾಗಿ ನೀಡಲಾಗಿದೆ.

ವಿಷಯ : ಕಾಟಿಕ್ ಜಾತಿಯನ್ನು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಬಗ್ಗೆ ಒಂದು ಮನವಿ ಪತ್ರ.

ಅತ್ಯಂತ, ಅತೀ ಅತ್ಯಂತ ಹಿಂದುಳಿದ ಕಾಟಿಕ್ ಜನಾಂಗದ ಜನರು ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತದಲ್ಲಿ, ಅದೂ ಈ ಕಂಪ್ಯೂಟರ್ ಯುಗದಲ್ಲಿ, ಮಾನವ ಕುಲದಲ್ಲಿ, ಆರ್ಥಿಕವಾಗಿ, ಶೈಕ್ಷಣಿಕ ವಾಗಿ ಮತ್ತು ಸಾಮಾಜಿಕವಾಗಿ ಹೀನಾಯವಾಗಿ ಹಿಂದುಳಿದು, ಇಂದಿಗೂ ನಿಜವಾದ ಅಸ್ಪೃಶ್ಯತೆಯನ್ನು ಹೇಗೆ ಎದುರಿಸುತ್ತಿದ್ದಾರೆ ಎಂಬ ಬಗ್ಗೆ ನೈಜ ಚಿತ್ರಣ ಈ ಮೂಲಕ ನೀಡುತ್ತಿದ್ದೇವೆ.

ಭಾರತ ಸರ್ಕಾರವು ಕಳೆದ ಸುಮಾರು ೩ ವರ್ಷಗಳ ಹಿಂದೆಯೇ ಅನುಸೂಚಿತ ಜಾತಿಯ ಜನರೂ ಸಹ ಎಲ್ಲಾ ರಂಗಗಳಲ್ಲಿ ಪ್ರಗತಿ ಕಾಣಲಿ ಎಂಬ ಸಮಾನತಾ ದೃಷ್ಟಿಯಿಂದ ಜಾರಿಗೊಳಿಸಲ್ಪಟ್ಟ

ಕಾಯಿದೆಗಳು ಜಾರಿಗೆ ಬಂದು ಆ ಲಾಗಾಯ್ತು ಸಮಸ್ತ ಅನುಸೂಚಿತ ಜಾತಿಗಳ ಜನರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಲ್ಲಿ ಸೇರ್ಪಡೆಗೊಂಡು ಇಂದಿಗೂ ಅನೇಕಾನೇಕ ಸೌಲಭ್ಯಗಳನ್ನು ಸವಿಯುತ್ತಿದ್ದಾರೆ. ಆದರೆ ಭಾರತ ಸರ್ಕಾರವು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳನ್ನು ಪರಿಶಿಷ್ಟರಲ್ಲಿ ಸೇರಿಸುತ್ತಿದ್ದ ಆ ಸಮಯದಲ್ಲಿ "ಕಾಟಿಕ್" ಜಾತಿ ಮಾತ್ರ ಕರ್ನಾಟಕದಲ್ಲಿ ಭಾರತ ಸರ್ಕಾರದ ಕಣ್ಣಿಗೆ ಕಾಣಿಸದೇ ಇದ್ದುದೇ ಕರ್ನಾಟಕದಲ್ಲಿನ ಕಾಟಿಕ್‌ರ ಕಣ್ಣೀರಿನ ಕಥೆಯಾಗಲು ಕಾರಣವಾಗಿದೆ.

ಕುರಿ ಮಾಂಸದಿಂದ ತಯಾರಿಸಿದ ವಿವಿಧ ಹಾಗೂ ರುಚಿಕಟ್ಟಾದ ಭಕ್ಷ್ಯಭೋಜನಗಳನ್ನು ತಿನ್ನಲು ಬಲುರುಚಿ, ಬಲು ಸ್ವಾದ!! ಈ ಕುರಿ ಮಾಂಸ ಮಾರಾಟ ಮಡುವ ಜನಾಂಗದವರೇ ಕಾಟಿಕರು, ಕಟುಗರು, ಕಲಾಲ್‌ರು, ಕಸಾಯಿಗಳು, ಶೆರೆಗಾರರು, ಕ್ಷತ್ರಿಯರು, ಸೂರ್ಯವಂಶಿಗಳು, ಸೂರ್ಯವಂಶ ಕ್ಷತ್ರಿಯರು, ಸೂರ್ಯವಂಶ ಕ್ಷತ್ರಿಯ ಕಾಟಿಕರು, ಸೂರ್ಯವಂಶ ಕ್ಷತ್ರಿಯ ಕಲಾಲ್‌ರು ಎಂಬ ಇತ್ಯಾದಿ ನಾಮೆಗಳಿಂದ ಕರೆಯಿಸಿಕೊಳ್ಳುವವರು. ಈ ಎಲ್ಲಾ ಹೆಸರುಗಳೂ ಒಂದೇ ಜಾತಿಯ ಜನರಿಗೆ ಅಂಕಿತವಾಗಿದ್ದು, ಒಂದೇ ಜನಾಂಗಕ್ಕೆ ಸೇರಿದವರಾಗಿರುತ್ತಾರೆಯೇ ವಿನಃ ಬೇರೆ ಯಾವ ಜಾತಿಗೂ, ಜನಾಂಗಕ್ಕೂ ಅನ್ವಯಿಸುವುದಿಲ್ಲ.

ಕಾಟಿಕ್ ಅಥವಾ ಕಟುಗರು ಹಿಂದೂ ಧರ್ಮದವರಾಗಿದ್ದು ಎಲ್ಲಾ ಹಿಂದೂ ದೇವತೆಗಳ ಆರಾಧಕರಾಗಿರುತ್ತಾರೆ. ಈ ಜನಾಂಗವು ಆದಿಯಿಂದಲೂ ಹಿಂದಿ ಭಾಷೆಯನ್ನು ತಮ್ಮ ಭಾಷೆಯನ್ನಾಗಿ ರೂಢಿಸಿಕೊಂಡಿದ್ದಾರೆ. ಕಾಟಿಕ್ ಕಟುಗ ಜನಾಂಗದವರು ಅಲ್ಪ ಸಂಖ್ಯಾತರಲ್ಲಿ ಅತೀ ಅಲ್ಪ ಸಂಖ್ಯಾತರಿರುತ್ತಾರೆ. ಈ ಜನಾಂಗದ ಜನರು ಹಳ್ಳಿ ಹಾಗೂ ಪಟ್ಟಣಗಳೆರಡರಲ್ಲೂ ವಾಸಿಸುತ್ತಿದ್ದು ಇಡೀ ರಾಜ್ಯದಲ್ಲಿ ಜನಸಂಖ್ಯೆ ಸುಮಾರು ೧,೦೦,೦೦೦ ಮಾತ್ರ ಇರಬಹುದೆಂದು ಅಂದಾಜಿಸಲಾಗಿದೆ.

"ಕಟುಗರು" ಎಂದಾಕ್ಷಣ ಯಾರೂ ಭಯಪಡುವ ಅಗತ್ಯವಿಲ್ಲ. ಈ ಜಾತಿಯ ಜನರು ಯಾವ ವಿಧದಲ್ಲೂ ಭಯಂಕರವಾಗಿಲ್ಲ. ಹಾಗೂ ಭಯೋತ್ಪಾದಕರಂತೂ ಅಲ್ಲವೇ ಅಲ್ಲ! ವೃತ್ತಿಯಲ್ಲಿ ಮಾತ್ರ ಕಟುಗರು, ಆದರೆ ಇವರು ಬಲು ಸಾಧ್ವಿಗಳು ಹಾಗೂ ಮುಗ್ಧರು.

ಕಾಟಿಕ್ ಜನಾಂಗದ ಕುಲ ಕಸುಬು ಉಪಕಸುಬು

ಕಾಟಿಕ್ ಜನಾಂಗದವರ ಕುಲ ಕಸುಬು ಕುರಿ, ಮೇಕೆ, ಆಡು, ಮಾಂಸ ಮಾರಾಟ ಮಾಡುವುದಾಗಿದೆ. ಈ ಉದ್ಯೋಗವು ಈ ಜನರಿಗೆ ಆದಿಯಿಂದಲೂ ನಡೆಸಿಕೊಂಡು ಬಂದಂತಹದ್ದಾಗಿದೆ. ಜನಾಂಗದ ಬಹುಪಾಲು ಜನರು ಈ ಒಂದೇ ಉದ್ಯೋಗಕ್ಕೆ ಅಂಟಿಕೊಂಡಿದ್ದು "ಲಾಭವಾಗಲಿ, ನಷ್ಟವಾಗಲಿ, ದಿವಾಳಿಯಾದರೂ ಅಡ್ಡಿಯಿಲ್ಲ. ನಮ್ಮ ಕುಲಕಸುಬನ್ನು ಬಿಟ್ಟು ಕೊಡೆವು, ಬಿಟ್ಟಿರಲಾರೆವು" ಎಂಬುದು ಈ ಜನಾಂಗದ ಕಂಠೋಕ್ತಿ. ನಮ್ಮ ಕಸುಬಿಗೆ ಯಾವುದೆ ವಿದ್ಯಾಭ್ಯಾಸದ, ಶಿಕ್ಷಣದ ಅಗತ್ಯವಿಲ್ಲ ಎಂದು ಹೇಳುವ ಈ ಜನರು, ಇಂತಹ ಕಂಪ್ಯೂಟರ್ ದಿನಗಳಲ್ಲಿಯೂ ನಮಗೆ ವಿದ್ಯಾಭ್ಯಾಸದ ಅಗತ್ಯವಿಲ್ಲ, ನಮ್ಮ ಮಕ್ಕಳಿಗೂ ಬೇಕಿಲ್ಲ ಎಂಬುವಷ್ಟರ ಮಟ್ಟಿಗೆ ಹಿಂದುಳಿದಿದ್ದಾರೆ.

ಇನ್ನು ಈ ಜಾತಿಯ ಜನರ ಕುಲ ಕಸುಬಿನ ಬಗ್ಗೆ ಹಾಗೂ ಇವರುಗಳು ಜೀವನದ ನಿತ್ಯ ಹೋರಾಟದ ಬಗ್ಗೆ ಹೇಳುವುದಾದರೆ- ಒಬ್ಬ ವ್ಯಾಪಾರಿ ತನ್ನ ಮಟನ್ ಅಂಗಡಿ ಪ್ರಾರಂಭಿಸಲು ಆ ದಿನದ ಬಂಡವಾಳ ಅವನಿಗೆ ಕನಿಷ್ಟ ೨,೦೦೦ ರೂಪಾಯಿ ಒಂದು ಕುರಿಗೆ ಮಾತ್ರ. ಈ ಒಂದು ಕುರುಯನ್ನು ಕೊಳ್ಳಲು ಹೋಗಬೇಕಾದ ಸ್ಥಳಗಳೆಂದರೆ ಕುರಿಸಂತೆ, ಸರಿಯಾದ ದರಕ್ಕೆ ಕುರಿ ವ್ಯಾಪಾರವಾಗಲಿಲ್ಲವೆಂದಾಗ ಪುನಃ ಪಕ್ಕದ ಊರಿನ ಸಂತೆ, ಅಲ್ಲಿಯೂ ವ್ಯವಹಾರ ಕುದುರಲಿಲ್ಲವೆಂದರೇ ಸಮೀಪದ ಅಥವಾ ಕುರಿ ಸಿಗಬಹುದಾದ ದೂರದ ಹಳ್ಳಿಗೂ ಸೈಕಲ್ ಮೇಲೆ ಅಥವಾ ಬಸ್ ನಲ್ಲಿ ಪ್ರಯಾಣ. ಇಷ್ಟೆಲ್ಲಾ ಪೇಚಾಡುವ ಈ ಮಾಂಸ ಮಾರುವ ವ್ಯಾಪಾರಿಗೆ ಆ ದಿನ ಎಲ್ಲಿಯೂ ಕುರಿ ಸಿಗಲಿಲ್ಲವೆಂದಾಗ ಆ ಸಂಜೆಗೆ ಹೆಂಡತಿ ಮಕ್ಕಳೊಡನೆ ಉಪವಾಸದ ಸಂಗ. ಪುನಃ ಮಾರನೇ ದಿನ ಇದೇ ಪಯಣ. ಹೊಟ್ಟೆಕಿಚ್ಚಿಗಾದರೂ ದುಬಾರಿ ಬೆಲೆ ತೆತ್ತು ಕುರಿ ಕೊಂಡು ತಂದು ಅಂಗಡಿ ವ್ಯಾಪಾರ ಪ್ರಾರಂಭಿಸಿದಲ್ಲಿ ಆ ದಿನ ಲಾಭವೋ ನಷ್ಟವೋ ಆ ವ್ಯಾಪಾರಿಗೇ ಗೊತ್ತು.

ಮುಸಲ್ಮಾನರ (ಖಾಜಿಸಾಬ್) ಸಹಾಯದಿಂದ ಕುರಿಗೆ ಚೂರಿ ಹಾಕಿಸಿ ಸ್ಲಾಟರ್ ಹೌಸನಲ್ಲಿ ಆ ಕುರಿಯ ಚರ್ಮ ತೆಗೆದು, ಹೊಟ್ಟೆಯೊಳಗಿನ ಕಲ್ಮಶವನ್ನೆಲ್ಲಾ ತೆಗೆದು ಸ್ವಚ್ಛಪಡಿಸಿಕೊಂಡು ಅಂಗಡಿಯಲ್ಲಿ ತಂದು ತೂಗು ಹಾಕಿ ವ್ಯಾಪಾರ ಪ್ರಾರಂಭಿಸಿದನೆಂದರೆ ಆ ದಿನ ಪೂರ್ತಿ ಆ ಮಾಂಸ ಖಾಲಿಯಾಗುವವರೆಗೂ ಆ ಜಾಗ ಬಿಟ್ಟು ಕದಲುವ ಹಾಗಿಲ್ಲ. ಇದರಂತೆಯೇ ಇನ್ನೂ ಅನೇಕ ಜನ ಇವನ ಜೊತೆ ಗಿರಾಕಿಗಳಿಗಾಗಿ ಹಾತೊರೆಯುವಿಕೆ ನೋಡಲು ಒಮ್ಮೆಮ್ಮೆ ಮೋಜು, ಒಮ್ಮೊಮ್ಮೆ ಸಂಕಟ, ಕುರಿ ಮಾಂಸದ ಮಾರಾಟದ ವೇಳೆಯಲ್ಲಿ ರಕ್ತಸಿಕ್ತ ಬಟ್ಟೆ, ಅವರ ವೇಷ ನೋಡಿ ಗಿರಾಕಿಗಳೂ ಸಹ ಒಮ್ಮೊಮ್ಮೆ ಅಸಹ್ಯಪಡುವರೇನೋ ಗೊತ್ತಿಲ್ಲ. ಆದರೆ ಗಿರಾಕಿಗಳು ಕೊಂಡೊಯ್ಯುವ ಕುರಿ ಮಾಂಸ ಮಾತ್ರ ಬಲುರುಚಿ. ಈ ಮಾರ್ಕೆಟ್ ಆವರಣ, ಸ್ಲಾಟರ್ ಹೌಸ್‌ನ ಅಸ್ವಚ್ಛತೆ ಇದಾವುದೂ ಈ ಜನರಿಗೆ ಸಂಕಟಪಡಿಸುವುದಿಲ್ಲ. ಆದರೆ ಅವರ ಕಸುಬು/ಉದ್ಯೋಗ ಹೊಟ್ಟೆಪಾಡು ಮಾತ್ರ ಸಂಕಟಭರಿತವಾಗಿದ್ದು, ಈ ಅಲ್ಪ ಲಾಭದ ವ್ಯಾಪಾರಕ್ಕೆ ವ್ಯಾಪಾರಿಯು ತಾನೊಬ್ಬನೇ ಸಾಲದೆಂಬುದಕ್ಕೆ ಶಾಲೆಗೆ ಹೋಗುವ ತನ್ನ ಚಿಕ್ಕ ಚಿಕ್ಕ ಮಕ್ಕಳನ್ನೂ ಸಹ ಶಾಲೆ ಬಿಡಿಸಿ ತನ್ನೊಟ್ಟಿಗೆ ಮಾರ್ಕೆಟ್ ಹಾಗೂ ಕುರಿ ಸಂತೆಗೆ ಎಳೆದೊಯ್ಯುವುದಂತೂ ತೀರಾ ಸಂಕಟಮಯ. ಒಮ್ಮೆ ಈ ಪುಟ್ಟ ಬಾಲಕರು ಶಾಲೆ ಬಿಟ್ಟು ಚಿಕ್ಕಾಸಿಗಾಗಿ ಅಪ್ಪನೊಂದಿಗೆ ಮಾರ್ಕೆಟ್ ಸೇರಿದರೆಂದರೆ ಮುಗಿಯಿತು. ಇವರ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಇಟ್ಟಂತೆ. ಈ ಪುಟ್ಟ ಬಾಲಕರೂ ಸಹ ತನ್ನ ಅಪ್ಪನೊಂದಿಗೆ ಅದೇ ವೇಷ, ಅದೇ ವ್ಯವಹಾರ ಅದೇ ಪುಡಿಗಾಸಿಗಾಗಿ ಪೂರಾ ತಮ್ಮ ಜೀವನವನ್ನೇ ಬಲಿ ಕೊಡುತ್ತಾರೆ.

ಇನ್ನು ಈ ಜಾತಿಯ ಜನರ ಉಪ ಕಸುಬಿನ ಬಗ್ಗೆ ಹೇಳುವುದಾದರೆ, ಇದೇ ಜಾತಿಗೆ ಸೇರಿದ ಕೆಲ ಜನರು ಸೇಂದಿ ಸರಾಯಿ ಮಾರಾಟ ಮಾಡುವವರೂ ಸಹ ಇದ್ದಾರೆ. ಆದರೆ ಇವರ ಸಂಖ್ಯೆ ಬಹಳ ಕಡಿಮೆ. ಆದ್ದರಿಂದಲೇ ಇವರನ್ನು ಶೆರೆಗಾರರು ಎಂದು ಸಹ ಕರೆಯುವುದುಂಟು. ಅಲ್ಲದೆ ಇದೇ ಜಾತಿಗೆ ಸೇರಿದ ಕೆಲ ಗಂಡಸು ಹೆಂಗಸರು, ಸೇಂದಿ ಸರಾಯಿ ಅಂಗಡಿಗಳಲ್ಲಿ ಕುರಿ

ಮಾಂಸದಿಂದ ತಯಾರಿಸಿದ ನೆಂಚಿಕೆ ಪದಾರ್ಥಗಳೂ ಹಾಗೂ ಮೊಟ್ಟೆ ಸಹ ಮಾರಾಟ ಮಾಡುವುದು ಸಹ ಇವರ ಉಪಕಸುಬು ಎಂದು ಹೇಳಬಹುದು.

ಆರ್ಥಿಕ ಪರಿಸ್ಥಿತಿಯಲ್ಲಿ ಕಾಟಿಕ್ ಜನಾಂಗದವರು

೧೦೦ಕ್ಕೆ ೯೦ ರಷ್ಟು ಪಾಲಿನ ಮಟನ್ ವ್ಯಾಪಾರಿಗಳು ತಮ್ಮ ಅತ್ಯಲ್ಪ ಬಂಡವಾಳ ಕೇವಲ ೨೦೦೦ ರೂ.ಗಳೊಡನೆ ಪ್ರಾರಂಭಿಸಲು ದಿನನಿತ್ಯದ ವ್ಯಾಪಾರಲ್ಲಿ ಅವರು ಗಳಿಸಬಹುದಾದ ಲಾಭಾಂಶ ೩-೫ ಮಕ್ಕಳು ಹೊಂದಿರುವ ಒಂದು ಸಂಸಾರ ನಡೆಸಿಕೊಂಡು ಹೋಗುವುದಕ್ಕೆ ಸಾಕುಬೇಕೆನಿಸುತ್ತದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಎಂದೆಂದೂ ಅನುಭವಿಸಿಕೊಂಡು ಬರುತ್ತಲಿರುವ ಈ ಜಾತಿಯ ಜನರು ವಾಸಕ್ಕಾಗಿ ಮನೆಯೊಂದನ್ನು ಕೊಳ್ಳುವುದು ಅಥವಾ ಕಟ್ಟಿಸುವುದಂತೂ ನಿಜಕ್ಕೂ ಕನಸಿನ ಮಾತೇ ಸರಿ. ಎಷ್ಟಿದ್ದರೂ ಕಡಿಮೆ ಬಾಡಿಗೆ ಇರುವ ಮನೆಗಳಲ್ಲಿ ಅಥವಾ ಯಾರದೋ ಜಾಗದಲ್ಲಿ ನಿರ್ಮಿಸಿಕೊಂಡಂತಹ ಗುಡಿಸಲುಗಳಲ್ಲಿ ವಾಸವಾಗಿದ್ದುಕೊಂಡು ಹೋಗುವ ಈ ಜನರಿಗೆ ವಾಸಕ್ಕೂ ಸಹ ಸರಿಯಾದ ಗತಿ ಇಲ್ಲವೆಂಬುದು ಬಹು ಶೋಚನೀಯ.

ಇನ್ನು, ಜಮೀನು, ತೋಟ, ಗದ್ದೆ ಹೊಂದಿದವರಂತೂ ಶೇ. ೩ರಷ್ಟು ಜನರೂ ಇಲ್ಲವೆಂದೇ ಹೇಳಬಹುದು. ತಮ್ಮ ವ್ಯಾಪಾರದ ಅವಶ್ಯಕತೆಗೆ ಖಾಸಗಿ ಜನರಲ್ಲಿ ಕೇಳಿದಷ್ಟು ಬಡ್ಡಿ ಕೊಟ್ಟು ಸಾಲ ಮಾಡಿ ವ್ಯವಹರಿಸುತ್ತಾರೆಯೇ ವಿನಃ ಬ್ಯಾಂಕಿನ ಸೌಲಭ್ಯ ಉಪಯೋಗಿಸಿಕೊಳ್ಳುವಷ್ಟು ಸಹ ಈ ಜನರಿಗೆ ಅರಿವಿಲ್ಲವೆಂದರೆ ತಪ್ಪಾಗಲಾರದು. ಕಾರಣ ಇದು ಅವರ ಅನಕ್ಷರತೆ ಹಾಗೂ ಸಮಾಜದಲ್ಲಿ ಬೆರೆಯದಿರುವುದೇ ಈ ಹಿಂದುಳಿದಿರುವಿಕೆಗೆ ಕಾರಣ ಎನ್ನಬಹುದಾಗಿದೆ. ಸಾಲ ಸಿಗದಿದ್ದ ವೇಳೆಯಲ್ಲಿ ತುರ್ತು ವ್ಯವಹಾರದ ನಿಮಿತ್ತವಾಗಿ ಹೆಂಡತಿಯ ಕಿವಿಯೋಲೆ, ಮಕ್ಕಳ ಕಿವಿ ಮುರುವು ಸಹ ಬಿಡದೇ ಒತ್ತೆಯಿಟ್ಟು ಅಥವಾ ಮಾರಾಟ ಮಾಡಿ ಅಂಗಡಿ ನಡೆಸುವ ಈ ಜನ, ಇವರ ದಡ್ಡತನವೋ ಅಥವಾ ಹೆಡ್ಡತನವೋ ಹೇಳಲು ಬಾರದಂತಾಗಿದೆ. ಈ ಜಾತಿಯ ಜನರು ಆರ್ಥಿಕವಾಗಿ ಇಷ್ಟು ಹಿಂದುಳಿದಿದ್ದಾರೆಂದರೆ ಬೇರೆ ಯಾವ ಹಿಂದುಳಿದ ಜನಾಂಗವು ಇಷ್ಟು ಹಿಂದುಳಿದಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ.

ಶೈಕ್ಷಣಿಕ ರಂಗದಲ್ಲಿ ಕಾಟಿಕ್ ಜನಾಂಗದ ಜನರು

"ಓದು ಎಂದರೆ ಮೈಗೆ ಮುಳ್ಳು" ಈ ನಾಣ್ಣುಡಿಯು ಕಾಟಿಕ್ ಜನರಿಗೆ ತುಂಬಾ ಒಪ್ಪುತ್ತದೆ. ಮಠನ್ ವ್ಯಾಪಾರ ಮಾಡುವ ವ್ಯಾಪಾರಿಗೆ ವಿದ್ಯೆ ಬೇಕಿಲ್ಲವೆಂದರೆ ತನ್ನನ್ನೇ ಹಿಂಬಾಲಿಸುವ ತನ್ನ ಮಕ್ಕಳಿಗೂ ಸಹ ವಿದ್ಯ ಬೇಕಿಲ್ಲವೆಂಬುದು ಈ ಜನರ ಭಾವನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕೆಲವೇ ಭಾಗಗಳಲ್ಲಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಈ ಜನರ ಪೈಕಿ ಪದವೀಧರರುಗಳು ಕೇವಲ ಕೆಲವೇ ಜನರು ಮಾತ್ರ. ಹೆಣ್ಣು ಮಕ್ಕಳಲ್ಲಿ ಪಧವಿಧರರೆಂದರೆ ಬೆರಳೆಣಿಸುವಷ್ಟು ಮಾತ್ರ ಮಿಡ್ಲ್ ಸ್ಕೂಲ್‌ಗೆ ಅವರು ಡಿಗ್ರಿ ಪಡೆದಂತೆ. ಇನ್ನು ಪದವೀಧರರಾಗಿ ಸರ್ಕಾರಿ ಸೇವೆಯಲ್ಲಿರುವವರು ಅತ್ಯಲ್ಪ ಮಾತ್ರ. ಇದಕ್ಕೆ ಅವರ ವೈಯಕ್ತಿಕ ಕಾರಣಗಳಿಗಿಂತಲೂ ಈ ಜಾತಿಯ ಮಕ್ಕಳಿಗೆ ಯುವಕರಿಗೆ ವಿದ್ಯಾವಂತರಿಗೆ ಸಿಗುತ್ತಿರುವ ಸರ್ಕಾರಿ ಸೌಲಭ್ಯಗಳೂ ಎಷ್ಟು ಇಲ್ಲವೆಂಬುದೇ ಇಲ್ಲಿ ಗಣನೀಯವಾದ

ಅಂಶವೆಂದು ನೇರವಾಗಿ ಹೇಳಬಹುದು. ಈ ಜಾತಿಯ ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶುಲ್ಕ ರಿಯಾಯಿತಿ, ಉಚಿತ ವಿದ್ಯಾರ್ಥಿನಿಲಯ ಹಾಗೂ ವಿದ್ಯಾರ್ಥಿ ವೇತನಗಳಾವುವು ಲಭ್ಯವಿರದ ಕಾರಣ ಇವರ ಶಿಕ್ಷಣಕ್ಕೆ ಪ್ರೋತ್ಸಾಹವಿಲ್ಲದಂತಾಗಿ ಈ ಜಾತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ರಂಗದಲ್ಲಿ ಮುಂದುವರೆಯಲು ಆಸಕ್ತಿ ಇಲ್ಲದಿರುವುದು ಸಹ ಸರ್ಕಾರವು ಗಮನಿಸಬಹುದಾದಂತಹ ಪ್ರಮುಖ ಅಂಶವಾಗಿವೆ.

ಸಾಮಾಜಿಕ ರಂಗದಲ್ಲಿ ಕಾಟಿಕ್ ಜನಾಂಗದವರ ಪಾತ್ರ

ಇತರೆ ಹಲವಾರು ಹಿಂದುಳಿದ ಹಾಗು ಮುಂದುವರೆದ ಜಾತಿಗಳ ಜನರು ಸಾಮೂಹಿಕ ರಂಗದಲ್ಲಿ ಮುನ್ನುಗ್ಗುತ್ತಿರುವಂತೆ ಕಾಟಿಕ್ ಕಟುಗ ಜಾತಿಯ ಜನಾಂಗದ ಜನರು ಯಾರೊಬ್ಬರೂ ಸಾಮಾಜಿಕ ರಂಗದಲ್ಲಿ ಮುನ್ನುಗ್ಗುತ್ತಿಲ್ಲವೆಂದು ಸುಲಭವಾಗಿ ಹೇಳಬಹುದು. ಈ ಜಾತಿಯ ಜನರು ಇತರರಂತೆ ತಮ್ಮದೇ ಆದ ಒಂದು ದೇವಾಲಯ, ಮಠ, ಮಂದಿರ, ಕಲ್ಯಾಣಮಂಟಪ, ಶಿಕ್ಷಣ ಸಂಸ್ಥೆ, ಸಹಕಾರ ಸಂಘಗಳು, ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗಳು ಮತ್ಯಾವುದೇ ರೀತಿಯ ಸಾಮಾಜಿಕ ಚಟುವಟಿಕೆಗಳಾಗಲೀ ಸಾಧನೆಗಳಾಗಲಿ ಮಾಡಿರುವುದಿಲ್ಲ. ಕಾರಣ ಮುಖ್ಯವಾಗಿ ಇವರ ಬೆನ್ನಿಗೆ ಬಿದ್ದಿರುವ ಬಡತನ, ಅನಕ್ಷರತೆ ಹಾಗೂ ಕಠಿಣತರವಾದ ಕುಲಕಸುಬು, ವಿಶೇಷವಾಗಿ ಸಾಮಾಜಿಕ ರಂಗದಲ್ಲಿ ಮುನ್ನುಗ್ಗಲು ಅವಶ್ಯವೆನಿಸುವ ಸಾಮಾನ್ಯ ಜ್ಞಾನ, ತಿಳುವಳಿಕೆ ಇಲ್ಲದಿರುವುದು.

ರಾಜಕೀಯ ರಂಗದಲ್ಲಿ ಕಾಟಿಕ್ ಜನಾಂಗ

ಈ ಜಾತಿಯ ಜನರ ಪೈಕಿ ನಗರದ, ಪಟ್ಟಣದ ಮುನಿಸಿಪಲ್ ಚುನಾವಣೆಗಳಲ್ಲಿ ಸ್ಪರ್ಧಿಸಿ, ಜಯಗಳಿಸಿ ಕೌನ್ಸಿಲರ್‌ಗಳಾಗಿರುವ ದಾಖಲೆಗಳು ಒಂದೋ ಎರಡೋ ಮಾತ್ರ. ಇನ್ನು ಎಂ.ಎಲ್.ಎ. ಅತವಾ ಎಂ.ಪಿ.ಗಳು ಇಲ್ಲವೇ ಇಲ್ಲ. ಈ ಜಾತಿಯ ಜನರು ಯಾರೂ ರಾಜಕೀಯ ಪಕ್ಷಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಕಾರ್ಯಕರ್ತರಾಗಿ ದುಡಿಯುತ್ತಿರುವವರು ಕೆಲವೇ ಕೆಲವು ಜನ ಮಾತ್ರ. ಯಾವೊಬ್ಬ ಪುರುಷನೂ ಮಹಿಳೆಯೂ ಯಾವ ಸಂಘಸಂಸ್ಥೆಗಳಲ್ಲಿಯೂ ಸ್ಥಾನಮಾನಗಳಿಸಲು ಪ್ರಯತ್ನಿಸಿಲ್ಲ.

ಸಾಮಾಜಿಕ ರಂಗದಲ್ಲಿ ಕಾಟಿಕ್ ಮಹಿಳೆಯರ ಪಾತ್ರ ಶೂನ್ಯ

ಈ ಜಾತಿಯ ಜನರ ಮಹಿಳೆಯರು ಇತರೆ ಎಲ್ಲಾ ಹಿಂದುಳಿದ ಜನಾಂಗಗಳ ಮಹಿಳೆಯರಿಗಿಂತ ಕಟ್ಟ ಕಡೆಯ ಸಾಲಿನಲ್ಲಿರುವಂತಹವರು. ಕೇವಲ ಜಾತಿಪದ್ಧತಿ ಹಾಗೂ ಧರ್ಮದ ಅನುಕರಣೆ ಮಾಡುವುದರ ಹೊರತಾಗಿ ಬೇರಾವುದೇ ರೀತಿಯಲ್ಲೂ ಮುಂದುವರೆದಿಲ್ಲ. ಸಣ್ಣ ಪ್ರಮಾಣದ ಕೈಗಾರಿಕೆ, ಗೃಹ ಕೈಗಾರಿಕೆ ಅಥವಾ ಮಹಿಳೆಯರಿಗಾಗಿಯೇ ಮೀಸಲಿರುವ ಕೈಗಾರಿಕಾ ತರಬೇತಿಗಳು ಇತ್ಯಾದಿ ಯಾವುದೇ ವಿಭಾಗದಲ್ಲಿಯೂ ಈ ಜಾತಿಯ ಹೆಣ್ಣು ಮಕ್ಕಳು ಕಂಡುಬರುವುದಿಲ್ಲ. ಈ ಸ್ಥಿತಿಯಲ್ಲಿರುವ ಕಾಟಿಕ್ ಜನಾಂಗದ ಮಹಿಳೆಯರು ತಮ್ಮ ಅಭಿವೃದ್ಧಿಯನ್ನು ಕಂಡುಕೊಳ್ಳುವುದು ಯಾವಾಗ, ಹೇಗೆ ಎಂಬ ಪ್ರಶ್ನೆ ಮನದಲ್ಲಿ ಮೂಡದೇ ಇರಲಾರದು.

ನಿಜವಾದ ಅಸ್ಪೃಶ್ಯತೆಯನ್ನು ಎದುರಿಸುತ್ತಿರುವ ಕಾಟಿಕ್ ಜನಾಂಗದ ಜನರು

ಪ್ರಶ್ನೆ : ನೀವು ಯಾವ ಜಾತಿ?

ಉತ್ತರ : ನಾವು ಕ್ಷತ್ರಿಯರು (ಮರ್ಯಾದೆಗೆ ಅಂಜಿ ನುಣುಚಿಕೊಳ್ಳಲು)

ಪ್ರಶ್ನೆ : ಯಾವ ಕ್ಷತ್ರಿಯರು?

ಉತ್ತರ : ಸೂರ್ಯವಂಶ ಕ್ಷತ್ರಿಯರು (ಮತ್ತೂ ನುಣುಚಿಕೊಳ್ಳಲು)

ಪ್ರಶ್ನೆ : ಅದೆಂಥ ಕ್ಷತ್ರಿಯರು? ನಿಮ್ಮ ಕುಲ ಕಸುಬೇನು? ನಿಮ್ಮ ಭಾಷೆಯಾವುದು?

ಉತ್ತರ : ನಾವು ಕಾಟಿಕ್ ಜಾತಿಯವರು, ಮಠನ್ ವ್ಯಾಪಾರ ನಮ್ಮ ಕುಲಕಸುಬು (ದಾರಿಕಾಣದೆ).

ಪ್ರತಿಕ್ರಿಯೆ : ಓಹೋ! ನೀವು ಕಟುಕರಾ, ಸರಿ ಸರಿ (ವ್ಯಂಗ್ಯವಾಗಿ)

ಈ ರೀತಿಯ ಪ್ರಶ್ನೆಗಳು ಕಾಟಿಕ್ ಜಾತಿಯ ಜನರಿಗೆ, ಶಾಲಾ, ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಕೆಲಸ ಕೇಳಲು ಹೋದ ಅಭ್ಯರ್ತಿಗಳಿಗೆ, ಸರ್ಕಾರಿ ಅಥವಾ ಖಾಸಗಿ ನೌಕರಿಗಳಲ್ಲಿನ ಸಂದರ್ಶನಗಳಲ್ಲಿ ಇದು ಸಾಮಾನ್ಯ. ಈ ರೀತಿಯ ವಿಚಿತ್ರ ಹಾಗೂ ಮನ ನೋಯುವಂತಹ ಪ್ರಶ್ನೆಗಳಿಂದ ಈ ಕಾಟಿಕ್ ಜಾತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು, ನೌಕರಿ ಆಪೇಕ್ಷಿಸುವ ಅಭ್ಯರ್ಥಿಗಳು ಮನಸ್ಸನ್ನು ಸಂಕುಚಿತಪಡಿಸಿಕೊಳ್ಳುತ್ತಾರೆ.

ಇದೇ ರೀತಿಯ ಪ್ರಶ್ನೆಗಳು ಸಾಮಾಜಿಕ ರಂಗಗಳಲ್ಲಿಯೂ ಸಹ ಮುಂದುವರೆದ ಹಾಗೂ ಅನ್ಯ ಜಾತಿಯ ಜರಿಂದ ಎದುರಿಸುವ ಪ್ರಶ್ನೆಗಲಿಂದ ನಿಜವಾಗಿಯೂ ಕಾಟಿಕ್ ಜನ ಅಸ್ಪೃಶ್ಯರು ಎಂದೆನ್ನುವಲ್ಲಿ ಸಂದೇಹವಿಲ್ಲ. ದೇವಾಲಯಗಳಲ್ಲಿ, ಮಠ ಮಂದಿರಗಳಲ್ಲಿ ಈ ಜಾತಿಯ ಜನರಿಗೆ 'ಕಟುಗರು' ಎಂಬ ಪ್ರವೇಶವಿಲ್ಲದೇ ಎಷ್ಟೋ ಜನರಿಗೆ ವಕ್ರ, ವ್ಯಂಗ್ಯ ದೃಷ್ಟಿಯಿಂದ ಕಾಣುವ ಪ್ರಸಂಗಗಳು ಸಾಕಷ್ಟಿವೆ. ಈ ಜಾತಿಯ ಜನರ ಎದುರೇ ನೇರವಾಗಿ ಕಿವಿಗೆ ಕೇಳುವಂತೆ "ಕಟುಗರು ನಾಗಪ್ಪ, ಕಟುಗರ ರಾಮಪ್ಪ, ಕಟುಗರ ಮಲ್ಲಪ್ಪ" ಎಂಬ ರೀತಿಯಲ್ಲಿ ಹೆಸರನ್ನು ಉಚ್ಚರಿಸುವ ಮುಂದೆ 'ಕಟುಗರ' ಎಂಬ ಶಬ್ದವನ್ನು ಇಟ್ಟು ಹೆಸರಿಸುವುದರಿಂದ, ಹಾಗೆ ಕೂಗುವುದರಿಂದ ಈ ಜಾತಿಯ ಜನರಿಗೆ ತುಂಬಾ ಅಸಹ್ಯವೆನಿಸುತ್ತದೆ. ಆದರೆ, ಇದೇ ರೀತಿಯಾಗಿ ಹಾಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿರುವ ಆದಿ ಕರ್ನಾಟಕ, ಆದಿ ದ್ರಾವಿಡ, ಜನರಿಗೆ ತಮ್ಮ ಮೂಲ ಜಾತಿಯ ಹೆಸರನ್ನು ಮನುಷ್ಯರ ಹೆಸರುಗಳ ಮುಂದೆ ಇಟ್ಟು ಮಾದಿಗರ ಮೈಲಪ್ಪ, ಕೊರಚರ ಮಾರಪ್ಪ ಇತ್ಯಾದಿ ಎಂದು ಹೆಸರಿಸಿದಾಗ, ಕೂಗಿದಾಗ, ಹಾಗೆ ಕರೆದಾಗ ಆ ಜಾತಿಯ ಜನರು ಯಾವ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ಹಾಗೂ ಆದರಿಂದಾಗುವ ಜಾತಿ ನಿಂದನಾ (ಅಟ್ರಾಸಿಟಿ) ಕೇಸುಗಳ ಪರಿಣಾಮಗಳೇನು ಎಂಬುದು ಈ ಜನರಿಗೆ ಈಗಾಗಲೇ ವೇದ್ಯವಾಗಿದೆ.

ಕಾಟಿಕ್ ಜಾತಿಯ ಜನರಿಗೆ ಮುಂದಿಟ್ಟು ಕರೆಯುವುದರಿಂದ ಅವರಿಗಾಗುವ ಮಾನಸಿಕ ವೇದನೆ, ಸಂಕಟ ಹಾಗೂ ಅವಮಾನ ಹೇಗೆ ಸಹಿಸಿಕೊಳ್ಳಲು ಸಾಧ್ಯ ಎಂಬುದನ್ನು ಇಲ್ಲಿ ಗಮನಿಸುವುದು ಅವಶ್ಯ. ಈ ರೀತಿಯಿಂದಾಗುವ ಅವಮಾನದ ವೇದನೆಯನ್ನು ಸಹಿಸಲಾರದೆ, ಈ ಜನ ಯಾರ

ಮುಂದೆ ತಮ್ಮ ದೂರನ್ನು ಸಲ್ಲಿಸಲಬೇಕು, ಇವರ ದೂರೂ ಯಾವ ಕೋರ್ಟ ಅಥವಾ ಪೋಲೀಸ್ ಠಾಣೆಯೂ ಸ್ವೀಕರಿಸುವುದಿಲ್ಲ... ಕಾರಣ ಇವರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲೂ ಇಲ್ಲ. ಅಂದ ಮೇಲೆ ಇವರ ಅಸ್ಪೃಶ್ಯತೆ ಶೋಷಣೆ ನಿಜವಾದುದಲ್ಲವೇ ಈ ರೀತಿಯ ಅವಮಾನ ಹಾಗೂ ಮಾನಸಿಕ ವೇದನೆ ಶೋಷಣೆ ನಿಲ್ಲುವುದೆಂತು ಈ ಜಾತಿಯ ಜನರಿಗೆ ಕೋರ್ಟು, ಪೋಲೀಸ್ ಠಾಣೇಗಳು ಸಹಾಯ ಮಾಡುವವೇ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ....

ಸಾಮಾಜಿಕ ರಂಗದಲ್ಲಿ ಶೈಕ್ಷಣಿಕ ರಂಗದಲ್ಲಿ ಕಾಟಿಕ್ ಕಟುಗ ಜನಾಂಗದ ಜನರು ಅನುಭವಿಸುತ್ತಿರುವ ಶೋಷಣೆ, ಅಪಮಾನ, ಮಾನಸಿಕ ವೇದನೆ ಖಂಡಿತವಾಗಿಯೂ ಇಲ್ಲದಂತಾಗಬೇಕು. ಸಂಪೂರ್ಣ ನಿಲ್ಲಬೇಕು. ಈ ಜಾತಿಯ ಜನರಿಗೆ ಇತರೆ ಅಸ್ಪೃಶ್ಯ ಜಾತಿಯವರಿಗೆ ಕಿಂಚಿತ್ತಾದರೂ ಮುಂದುವರಿದು ಪ್ರಗತಿ ಪಥದಲ್ಲಿ ಸಾಗಬೇಕು. ಹೀಗಾಗಬೇಕಾದರೆ 'ಕಾಟಿಕ್' ಜನಾಂಗವನ್ನು ಘನವೆತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಬೇಕೆಂಬುದೇ ಮೊದಲ ಕೋರಿಕೆ. ಈ ರೀತಿಯಾದಲ್ಲಿ ಮಾತ್ರ ಈ ಜನಾಂಗವೂ ಸಹ ಇನ್ನಾದರೂ ಸುಧಾರಿಸಲು ಸಾಧ್ಯ.

ಕಾಟಿಕ್ ಜನಾಂಗದ ಜನರು ಸಾಮಾಜಿಕ ಸ್ಥಾನಮಾನಗಳಿಂದ ಹೇಗೆ/ಏಕೆ ವಂಚಿತರಾಗಿದ್ದಾರೆ ಎಂದು ಸರ್ಕಾರದ ಗಮನಕ್ಕೆ ತರುತ್ತಾ, ಇನ್ನಾದರೂ "ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಕಾಟಿಕ್ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರ್ಪಡೆಮಾಡುವಂತೆ" ಶಿಫಾರಸ್ಸು ಮಾಡಬೇಕಾಗಿ ವಿನಂತಿಸಿಕೊಂಡು ಸಲ್ಲಿಸಿರುವ ಈ ಮನವಿ ಪತ್ರ.

ಆಧಾರಗಳು

೧. ಚೂಡಾಮಣಿರಾವ್ ಕಲಾಲ್., *ಕರ್ನಾಟಕದ ಕಲಾಲ್(ಸೂರ್ಯವಂಶಿ ಕ್ಷತ್ರಿಯ)ರು*, ಬಿ.ಎಫ್.ಕಾಳೆ ಶೇಷಾಚಲ ಗ್ರಂಥಮಾಲೆ, ಮುದಿಹಾಳ, ಧಾರವಾಡ, ೧೮೮೬

೨. ಆರ್.ಬಿ. ಕುಮಾರ್., ಕರ್ನಾಟಕದ ಮುದ್ದೆ ಕಂಬಾರರು (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೩. ಕರ್ನಾಟಕ ಸರ್ಕಾರಕ್ಕೆ ದಾವಣಗೆರೆ ಕಾಟಿಕ್ ಸಮುದಾಯದವರು ತಮ್ಮ ಕುಂದು ಕೊರತೆ ಹಾಗೂ ತಮ್ಮ ಸಮುದಾಯವನ್ನು ಉತ್ತರಭಾರತದಲ್ಲಿ ಮೀಸಲಾತಿಯಲ್ಲಿ ತಮ್ಮ ಸಮುದಾಯವನ್ನು ಪರಿಗಣಿಸಿರುವಂತೆ ಇಲ್ಲಿಯೂ ಪರಿಗಣಿಸಲು ಸಲ್ಲಿಸಿದ ಮನವಿ ಪತ್ರ.

ಅಧ್ಯಾಯ - ೪

ಖಾಟಿಕ್ ಸಮುದಾಯದ ಆಚರಣೆಗಳು

ಮನುಷ್ಯ ಎಂದು ಈ ಪ್ರಕೃತಿಯ ವೈಚಿತ್ರಗಳನ್ನು ಕಂಡು ಬೆರಗಾಗಿ ಬೆದರಿ ತನಗಿಂತ ಯಾವುದೋ ಒಂದು ಅಗೋಚರವಾದ ಶಕ್ತಿಯನ್ನು ಗುರುತಿಸಿ ಈ ಪ್ರಕೃತಿಯಲ್ಲಿನ ಪ್ರತಿಯೊಂದು ಗಿಡ, ಮರ, ಪ್ರಾಣಿ, ಪಕ್ಷಿ, ಸೂರ್ಯ, ಚಂದ್ರ, ನದಿ, ಬೆಟ್ಟ, ಗುಡ್ಡ, ಪರ್ವತ ಹೀಗೆ ಈ ಪ್ರಕೃತಿಯನ್ನು ಆರಾಧಿಸಲು ಪ್ರಾರಂಭಿಸಿದನೋ ಅಂದೇ ಆಚರಣೆಗಳು ಹುಟ್ಟಿಕೊಂಡವು ಎಂದು ಹೇಳಬಹುದು. ಮನುಷ್ಯ ತನ್ನ ಕಲ್ಪನೆಯ ಪ್ರಕೃತಿಯಲ್ಲಿಯ ಪ್ರತಿಯೊಂದಕ್ಕೂ ಜೀವ ತುಂಬುತ್ತ ಈ ಪ್ರಕೃತಿಯನ್ನು ಆರಾಧಿಸುತ್ತ ಅದರ ಸುತ್ತ ಪುರಾಣ, ಕಥೆ, ಅವತಾರ ರೂಪಗಳನ್ನೆಲ್ಲ ಕಟ್ಟಿಕೊಂಡು ದೇವರನ್ನು ಸೃಷ್ಟಿಸಿದ. ನಂತರ ಆ ದೇವರನ್ನು ಹಲವು ಹೆಸರುಗಳಲ್ಲಿ ಪೂಜಿಸಿದ ನಂತರ ದೇವರನ್ನು ಸಂತೃಪ್ತಿಗೊಳಿಸಲು ಹಲವು ಆಚರಣೆಗಳು, ನಂಬಿಕೆ, ಬೇಡಿಕೆ ಹೀಗೆ ಹತ್ತು ಹಲವನ್ನು ಸೃಷ್ಟಿಸಿದ. ಮನುಷ್ಯನ ಇಂದಿನ ಆಚರಣೆಗಳಲ್ಲಿ ಮೂಲ ಆರಾಧನೆಯ ಈ ಸೃಷ್ಟಿ ಶಕ್ತಿಯ ಛಾಯಾಗಳು ಎದ್ದು ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಖಾಟಿಕರ ಬದುಕಿನಲ್ಲಿ ಆಚರಣೆಗಳ ವಿವರ ಅವುಗಳ ಪ್ರಾಮುಖ್ಯತೆ ಹಿನ್ನಲೆ ಮುಂತಾದ ವಿಶ್ಲೇಷಣೆಯನ್ನು ಕೈಗೊಳ್ಳಬಹುದು. ಈ ಅಧ್ಯಾಯದಲ್ಲಿ ಖಾಟಿಕರ್ ಬದುಕಿನಲ್ಲಿ ವಿಶಿಷ್ಟವಾಗಿ ಆಚರಿಸುವ ಜೀವನಾವರ್ತನದ ಹಾಗೂ ವಾರ್ಷಿಕಾವರ್ತನದ ಆಚರಣೆಗಳನ್ನು ಅಧ್ಯಯನ ಮಾಡಲಾಗಿದೆ.

೪.೧. ಜೀವನಾವರ್ತನದ ಆಚರಣೆಗಳು

ಮನುಷ್ಯ ಎಂದು ಪ್ರಕೃತಿಯನ್ನು ಆರಾಧಿಸಲು ಪ್ರಾರಂಭಿಸಿದನೋ ಅಂದಿನಿಂದಲೇ ಆಚರಣೆಗಳು ಹುಟ್ಟಿ ಕೊಂಡಿರುವುದನ್ನು ಕಾಣಬಹುದು. ವ್ಯಕ್ತಿಯ ಜೀವನದಲ್ಲಿ ಮುಖ್ಯವಾಗಿ ಹುಟ್ಟಿನಿಂದ ಸಾವಿನವರೆಗೂ ಹಲವು ಆಚರಣೆಗಳನ್ನು ಆಚರಿಸುವುದನ್ನು ಕಾಣುತ್ತೇವೆ. ಇವುಗಳನ್ನು ಮನುಷ್ಯ ತನ್ನ ಸಂತೋಷಕ್ಕೆ ಮಾಡಿಕೊಂಡಿರುವುದನ್ನು ತನ್ನ ಬದುಕನ್ನು ಪ್ರೀತಿಸುತ್ತ ಅವುಗಳನ್ನೊಂದು ಸುಂದರ ನೆನಪುಗಳನ್ನಾಗಿಸಿಕೊಳ್ಳಲು ಈ ಆಚರಣೆಗಳು ಪೂರಕವಾಗಿ ಕೆಲಸ ಮಾಡುತ್ತವೆ ಎಂದು

ಹೇಳಬಹುದು. ಅಂದರೆ ವ್ಯಕ್ತಿ ತನ್ನ ಹುಟ್ಟಿನ ಸಂತೋಷವನ್ನು ಆಚರಿಸಲು, ಮಗು ಈ ಭೂಮಿಗೆ ಬಂದಾಗ ಸಂಭ್ರವಿಸುವುದಕ್ಕೆ, ಹಲವು ಸಮುದಾಯಗಳು ಹುಟ್ಟಿದ ಮಗುವಿಗೆ ನಾಮಕರಣ ಮಾಡುವುದು, ವಿಧಿ ದೇವತೆಯನ್ನು ಪೂಜಿಸಿ ಒಳ್ಳೆಯ ಹಣೆ ಬರಹ ನೀಡುವಂತ ಹಲವು ಆಚರಣೆಗಳನ್ನು ನಾವು ಕಾಣುತ್ತೇವೆ. ಹೀಗೆ ವ್ಯಕ್ತಿ ಸಂಭ್ರಮಿಸಲು ಈ ಆಚರಣೆಗಳು ತುಂಬಾ ಸಹಾಯಕವಾಗಿವೆ ಎಂದು ಹೇಳಬಹುದು. ಕೇವಲ ಹುಟ್ಟಿಗೆ ಮಾತ್ರವಲ್ಲ ಸಾವಿನ ಸಂದರ್ಭದಲ್ಲೂ ಆಚರಣೆಗಳು ಇದ್ದು ಇವು ತನ್ನದೇ ಆದ ಮಹತ್ವವನ್ನು ಹೊಂದಿವೆ. ಖಾಟಿಕ್ ಸಮುದಾಯದಲ್ಲಿ ಸಾವಿನ ಆಚರಣೆಯು ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ. ವ್ಯಕ್ತಿ ಸತ್ತ ನಂತರದಲ್ಲೂ ಈ ಸಮುದಾಯದಲ್ಲಿ ತನ್ನ ಗುರುತನ್ನು ಒಂದು ಬೆಳ್ಳಿಯ ರೂಪದಲ್ಲಿ ಚಿತ್ರವಾಗಿ ಉಳಿದುಕೊಳ್ಳುವ ಆಚರಣೆ ಕಂಡುಬರುತ್ತದೆ. ಹೀಗೆ ಮನುಷ್ಯನ ಜೀವನದಲ್ಲಿ ಆಚರಣೆಗಳು ತುಂಬಾ ಮಹತ್ವವಾದ ಪಾತ್ರವನ್ನು ವಹಿಸುತ್ತವೆ.

೪.೧.೧. ಸೀಮಂತ

ಹೆಣ್ಣು ಗರ್ಭಧರಿಸಿದಾಗ ಮಾಡುವಂತಹ ಆಚರಣೆಯೇ ಸೀಮಂತ ಕಾರ್ಯವಾಗಿದೆ. ಇದರ ಮುಂಚಿತವಾಗಿ ಗರ್ಭಧರಿಸಿದ ಮೂರು ತಿಂಗಳಲ್ಲಿ ಗಂಡಿನ ಮನೆಯವರು ಹೆಣ್ಣಿನ ತವರು ಮನೆಗೆ ಸುದ್ದಿ ತಿಳಿಸುತ್ತಾರೆ. ಆಗ ತವರು ಮನೆಯವರು ಮಗಳು ಗರ್ಭಧರಿಸಿದ ಸುದ್ದಿಯನ್ನು ತಿಳಿದು ಹರ್ಷಿತರಾಗಿ ಮಗಳಿಗೆ ಎರಡು ಕುಬುಸದ ಕಣ, ಹೂವು, ಹಣ್ಣುಹಂಪಲು, ಸಿಹಿ ತಿಂಡಿಗಳನ್ನು ಹೊತ್ತು ತಂದು ಮಗಳಿಗೆ ಉಡಿ ತುಂಬಿಸುವ ಕಾರ್ಯವನ್ನು ಮಾಡುತ್ತಾರೆ. ಇದನ್ನು ಕಳ್ಳಕುಬುಸ ಎಂದು ಹೇಳುತ್ತಾರೆ. ನಂತರ ಐದನೇ ತಿಂಗಳಲ್ಲಿ ಮಗಳಿಗೆ ತವರು ಮನೆಯವರು ಬಯಕೆ ಊಟವೆಂದು ಗರ್ಭಿಣಿ ಬಯಸುವ ಅವಳ ಬೇಡಿಕೆಯ ಎಲ್ಲಾ ತಿಂಡಿ ತಿನಿಸು ಹಾಗೂ ಊಟಗಳನ್ನು ಕಟ್ಟಿಕೊಂಡು ಬರುತ್ತಾರೆ. ಇದನ್ನು ಬಯಕೆಯ ಊಟ ಎಂದು ಕರೆಯುತ್ತಾರೆ. ಇದಾದ ಎಂಟನೇ ತಿಂಗಳಿನಲ್ಲಿ ಮನೆಯವರು ಮಗಳ ಹೆರಿಗೆಗಾಗಿ ಕರೆದುಕೊಂಡು ಹೋಗುವ ತಿಂಗಳಾಗಿರುತ್ತದೆ. ಹೀಗೆ ಕರೆದುಕೊಂಡು ಹೋಗುವ ಮುಂಚಿತವಾಗಿ ಮಗಳಿಗೆ ಗಂಡನಮನೆಯಲ್ಲಿ ಸೀಮಂತ ಕಾರ್ಯ ಮಾಡುವ ರೀತಿ ಇದೆ. ಈ ಕಾರ್ಯಕ್ರಮದಲ್ಲಿ ಮಗಳಿಗೆ ಹೊಸ ಬಟ್ಟೆಗಳು ಹಾಗೂ ಹೊಸ ಬಳೆಗಳನ್ನು ತೊಡಿಸಿ ಊರಿನ ಕುಲಬಾಂಧವರಿಗೆಲ್ಲಾ ಕರೆದು ಮನೆಯಲ್ಲಿ ಮಗಳು ಮತ್ತು ಅಳಿಯನಿಗೆ ಕೂಡಿಸಿ ಮಗಳಿಗೆ ಅಳಿಯನಿಗೆ ಹೊಸ ಬಟ್ಟೆಗಳನ್ನು ನೀಡಿ. ಅಜ್ಜಅಜ್ಜಿ ಆಗುವ ಸಂತೋಷದಲ್ಲಿ ಅಳಿಯನಿಗೆಂದೆ ಬಂಗಾರದ ಒಡವೆಯನ್ನು ಉಡುಗೊರೆಯಾಗಿ ನೀಡುತ್ತಾರೆ. ನಂತರ ಹೂವು ಮೂಡಿಸಿ ಆರತಿ ಬೆಳಗುತ್ತಾರೆ. ತವರು ಮನೆಯವರ ಖರ್ಚಿನಲ್ಲಿ ಬೀಗರಿಗೆಲ್ಲ ಅಡಿಗೆಯನ್ನು ಮಾಡಿಸಿ ಊಟವನ್ನು ನೀಡಬೇಕಾದ ಸಂಪ್ರದಾಯವಿದೆ. ನಂತರ ಮಗಳನ್ನು ಹೆರಿಗೆಗಾಗಿ ಕರೆದೊಯ್ಯುತ್ತಾರೆ. ಈ ಸಂಪ್ರದಾಯದಲ್ಲಿ ತವರು ಮನೆಯವರು ಕರೆದುಕೊಂಡು ಹೋಗುತ್ತಾರೆ.

ಈ ಸಂಪ್ರದಾಯದಲ್ಲಿ ತವರು ಮನೆಯವರು ಮಗಳ ಮೊದಲ ಹೆರಿಗೆ ಮತ್ತು ಎರಡನೆ ಹೆರಿಗೆಯನ್ನು ತವರು ಮನೆಯವರೇ ಮಾಡುವ ಪರಿಪಾಠವಿದೆ. ಮೊದಲ ಹೆರಿಗೆಗೆ 'ಚೊಚ್ಚಲ' ಹೆರಿಗೆ ಎಂದು ಎರಡನೆಯ ಹೆರಿಗೆ 'ಮಚ್ಚಲು' ಹೆರಿಗೆ ಎಂದು ಹೆಸರಿದೆ.

೪.೧.೨. ಜನನ

ಹೆಣ್ತನದ ಪರಿಪೂರ್ಣತೆ ಬಸಿರಿಯಾದಾಗ ಸಾಧ್ಯವಾಗುತ್ತದೆಯೆಂಬ ನಂಬಿಕೆ ಇವರಲ್ಲಿದೆ. ಹೆಣ್ಣು ಮೊದಲು ಗರ್ಭಧರಿಸಿದ್ದನ್ನು 'ಚೊಚ್ಚಲ ಬಸಿರು' ಎಂದು ಕರೆಯುವರು. ವಂಶದ ಕುಡಿಯನ್ನು ಒಡಲಲ್ಲಿ ತುಂಬಿಕೊಂಡಳೆಂದು ಸಂಭ್ರಮಿಸುತ್ತಾರೆ. ಕೊಟ್ಟ ಮನೆಯ ಗೌರವ ಹೆಚ್ಚಿಸಿ, ತವರಿನ ಗೌರವವನ್ನು ಹೆಚ್ಚಿಸಿದಳೆಂದು ಹೆತ್ತವರು ಸಂತೋಷದಿಂದ ಹಿಗ್ಗುತ್ತಾರೆ. ಬಸಿರಾದ ಹೆಣ್ಣಿನ ಬಯಕೆಗಳು ಹತ್ತು ಹಲವು. ಆಕೆ ಬಯಸುವ ಬಯಕೆಗಳು, ಅವಳು ಬೇಡಿದ ತಿಂಡಿ-ತಿನಿಸುಗಳನ್ನು ತಾಯಿಯು ಮಾಡಿ ಕೊಡುತ್ತಾಳೆ. ಬಸಿರು ಹೆಣ್ಣು ಹೂವು ಮುಡಿಯುವುದು, ಮನೆಯ ಒಳಗಡೆ ಕನ್ನಡಿಯಲ್ಲಿ ಅಲಂಕರಿಸಿಕೊಳ್ಳುವುದು, ಚಿಕ್ಕ ಮಕ್ಕಳನ್ನು ಎತ್ತಿ ಮುದ್ದಾಡುವುದು, ಕೆಲವೊಮ್ಮೆ 'ಕರೀದ್ದಿಲು' ಮತ್ತು 'ಕೆಮ್ಮಣ್ಣು' ತಿನ್ನಲು ಬಯಸುವುದುಂಟು.

ಗರ್ಭಿಣಿ ಮಹಿಳೆಗೆ ಹೆರಿಗೆ ನೋವು ಬಂದಾಗ ಮನೆಯಲ್ಲಿ ಬಂಧು ಬಾಂದವರು ಸೇರಿಕೊಂಡು ತಮ್ಮ ದೇವರುಗಳಾದ ಎಲ್ಲಮ್ಮ, ಹುಲಿಗೆಮ್ಮ, ಉಚ್ಚಂಗೆಮ್ಮ, ಮೈಲಾರಲಿಂಗ, ದೊಡ್ಡ ಬಸವೇಶ್ವರ ಇತ್ಯಾದಿ ಕುಲದೇವತೆಗಳಿಗೆ ತಮ್ಮ ನೋವನ್ನು ಪ್ರಾರ್ಥಿಸಿಕೊಳ್ಳುತ್ತಾರೆ. "ಅವ್ವ ತಾಯಿ ನನ್ನ ಮಗಳಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ದೇವರೆ ನಿಮ್ಮ ಮಗಳು ಅಂತ ತಿಳಿದುಕೊಂಡು, ಎರಡು ಜೀವ ಉಳಿಸವ್ವ-ನಮ್ಮವ್ವ, ಉಳಿಸಪ್ಪ-ನಮ್ಮಪ್ಪ ನಿನಗೆ ಹರಕೆ ಮಾಡಿ ಕೊಳ್ಳುತ್ತೇವೆ" ಎಂದು ಬೇಡಿಕೊಳ್ಳುತ್ತಾರೆ.

ಹೆರಿಗೆ ಸಂದರ್ಭದಲ್ಲಿ ಸೂಲಗಿತ್ತಿಯನ್ನು ಸಹಾಯ ಮಾಡಲು ಮನೆಗೆ ಕರೆತರುವರು. ಅನುಭವಸ್ಥೆ ಸೂಲಗಿತ್ತಿ ಗರ್ಭಿಣಿ ಮಹಿಳೆಗೆ ಹೆರಿಗೆ ಮಾಡಿಸುತ್ತಾಳೆ. ಸೂಲಗಿತ್ತಿ ತಾಯಿಗರ್ಭದಿಂದ ಮಗು ಹೊರಬಂದಾಗ ಅದರ ಹೊಕ್ಕಳ ಬಳ್ಳಿಯನ್ನು ಕುಡುಗೋಲಿನಿಂದ ಕೊಯ್ದು, ಮಗುವನ್ನು ಬೇರ್ಪಡಿಸುತ್ತಾಳೆ. ನಂತರ ಮಗುವನ್ನು ಹಳೇ ಚಾಪೆ ಮೇಲೆ ಹಾಕುವರು. ಇದಕ್ಕಾಗಿ ಮೊದಲೇ ತರಿಸಿಟ್ಟಿದ್ದ ಮಣ್ಣಿನ ಹೊಸ ಗಡಿಗೆಯಲ್ಲಿ ಹೊಕ್ಕಳ ಬಳ್ಳಿ ಮಾಂಸವನ್ನು ತುಂಬಿ, ಮೇಲೊಂದು ಮುಚ್ಚಳವನ್ನು ಮುಚ್ಚುತ್ತಾರೆ. ಆ ಹೊಸ ಗಡಿಗೆಯನ್ನು ಪೂಜೆ ಮಾಡಿ, ಮನೆಯ ಮುಂದಿರುವ ಅಂಗಳದಲ್ಲಿ ಯಾರೂ ಓಡಾಡದ ಸ್ಥಳದಲ್ಲಿ 'ಗುಂಡಿ' ತೋಡಿ ಅದನ್ನು ಹೂಳಿಟ್ಟು ಅದರ ಮೇಲೆ ಮಣ್ಣು ಮುಚ್ಚುತ್ತಾರೆ. ಈ ಕಾರ್ಯ ಮುಗಿದ ಮೇಲೆ ತಾಯಿಗೆ ಬಿಸಿ ನೀರಿನ ಸ್ನಾನ ಮಾಡಿಸಿ, ಶೀತವಾಗದಂತೆ ತಲೆಗೆ ಕಿವಿ ಮುಚ್ಚಿಕೊಳ್ಳುವಂತೆ ಹಳೇ ಬಟ್ಟೆಗಳನ್ನು ಕಟ್ಟುತ್ತಾರೆ.

ಛಟ್ಟಿಮಾ (ವಿಧಿ ದೇವತೆ) ಪೂಜೆ: ಮಗು ಜನಿಸಿದ ೫ ದಿನಗಳಲ್ಲಿ ಅಥವಾ ೯, ಹನ್ನೊಂದರ ಬೆಸ ಸಂಖ್ಯೆಗಳ ದಿನದಂದು ಛಟ್ಟಿಮಾ (ಈರಲ) ದೇವರೆಂದು ಆಚರಿಸುತ್ತಾರೆ. ಇದರಲ್ಲಿ ಸೂಲಗಿತ್ತಿಯ ಪಾತ್ರವು ಪ್ರಮುಖವಾಗಿರುತ್ತದೆ. ಈ ಕಾರ್ಯಕ್ರಮ ಬೆಳಗಿನ ಜಾವ ಮಾಡುವುದರಿಂದ ಕುಲಬಾಂಧವರಿಗೆ ಅವರ ಮನೆಗಳಿಗೆ ಹೋಗಿ ಬಾಣಂತಿ ಮತ್ತು ಮಗುವಿಗೆ ನೀರೆರೆಸಿ ಛಟ್ಟಿಮಾ ಪೂಜೆ ಮಾಡುತ್ತೇವೆಂದು ಪೂಜೆಗೆ ಬರಲಿಕ್ಕೆ ಆಮಂತ್ರಿಸಿ ಬರುತ್ತಾರೆ. ಈ ರೀತಿಯಾಗಿ ಆಮಂತ್ರಿಸಿ ಕೊಂಡ ಕುಲಬಾಂಧವರು ನೀರು ತುಂಬಿದ ಕೊಡವನ್ನು ಹೊತ್ತು ತರುವರು, ಜೊತೆಯಲ್ಲಿ ಅರಿಶಿಣ ಪುಡಿಯ ಮುದ್ದೆಯನ್ನು ತರುವರು. ನಂತರ ಸೂಲಗಿತ್ತಿಯು ಮನೆಯಲ್ಲಿ ಹೊಸ ಮಡಕೆಯನ್ನು ತರಿಸಿ ಅದರಲ್ಲಿ ಬೇವಿನ ಎಲೆ, ಅರಿಶಿಣದ ಪುಡಿ, ಒಳ್ಳೆಣ್ಣೆ, ಮೋಡಿ, ಇಪ್ಪಿ, ಬೆಳ್ಳುಳ್ಳಿ, ಉಪ್ಪು ಇವೆಲ್ಲವನ್ನು ರುಬ್ಬಿಕೊಂಡು ಮಡಕೆಯಲ್ಲಿ ಹಾಕಿ ಅದನ್ನು ಬೆಂಕಿಯ ಮೇಲಿಟ್ಟು ಕುದಿಸುತ್ತಾರೆ. ಸಂಪೂರ್ಣವಾಗಿ ಎಲ್ಲ ಮಿಶ್ರಣಮಾಡಿ ಬಾಣಂತಿಯನ್ನು ಮಣೆಯ ಮೇಲೆ ಕುಳ್ಳಿರಿಸಿ ಅವಳ ಮುಖ, ಕೈಕಾಲು, ಮೈಗೆಲ್ಲಾ ಲೇಪಿಸುತ್ತಾರೆ. ಕುಂಕುಮ ಹಚ್ಚಿ, ಆರತಿ ಬೆಳಗಿ, ಕೈಯಲ್ಲಿ ಬೇವಿನ ಎಲೆ, ಚಿಕ್ಕ ಚಾಕುವನ್ನು ನೀಡುತ್ತಾರೆ. ನಂತರ ಬಚ್ಚಲು ಮನೆಯಲ್ಲಿ ಬಿಸಿ ನೀರಿನಿಂದ ಐದು ಜನ ಮುತ್ತೈದೆಯರು ಬಾಣಂತಿಗೆ ಸ್ನಾನವನ್ನು ಮಾಡಿಸುತ್ತಾರೆ.

ಬಂದಂತಹ ಮುತ್ತೈದೆಯರಿಗೂ ಬೇವಿನ ಎಲೆ ಮಿಶ್ರಣವನ್ನು ಮೈಗೆ ಲೇಪಿಸಿ ಅವರಿಗೂ ಸ್ನಾನ ಮಾಡಿಸಿ ಅವರ ಮನೆಯ ಬಟ್ಟೆಗಳನ್ನು ಧರಿಸಲು ನೀಡುತ್ತಾರೆ. ನಂತರ ಮನೆಯಲ್ಲಿ ಒಂದು ತಂಬಿಗೆಯಲ್ಲಿ ನೀರನ್ನು ತುಂಬಿ ತಂಬಿಗೆಯ ಸುತ್ತಲು ಹೂವನ್ನು ಕಟ್ಟಿ ಅರಿಶಿಣ ಕುಂಕುಮ ಹಚ್ಚಿ ಅದರ ಸುತ್ತಲು ಒಂಬತ್ತು ಅಥವಾ ಹನ್ನೊಂದು ತಾಂಬುಲವನ್ನು ಇಡುತ್ತಾರೆ. ಈ ತಾಂಬುಲದಲ್ಲಿ ಎಲೆ ಅಡಿಕೆಯೊಂದಿಗೆ ಸಕ್ಕರೆ ಹಚ್ಚಿ ಕೊಬ್ಬರಿ, ಅಜ್ವಾನ್ ಮಿಶ್ರಣ ಮಾಡಿ ಇಟ್ಟಿರುತ್ತಾರೆ. ಇದನ್ನು ಧೂಪದೀಪಗಳಿಂದ ಪೂಜೆ ಮಾಡುವರು ನಂತರ ಸ್ನಾನ ಮಾಡಿ ಬಂದ ಮಹಿಳೆಯರು ಇದಕ್ಕೆ ಕೈ ಮುಗಿದು ಮುಂದಿರುವ ತಾಂಬೂಲವನ್ನು ಒಂದೊಂದಾಗಿ ಎತ್ತಿಕೊಳ್ಳುತ್ತಾರೆ. ನಂತರ ಅವರು ತೆಗೆದುಕೊಂಡಿರುವ ತಾಂಬೂಲಗಳನ್ನು ಪರಸ್ಪರ ಅವರಲ್ಲಿಯೇ ಬದಲಾಯಿಸಿ ಕೊಳ್ಳುತ್ತಾರೆ. ಹೀಗೆ ಬದಲಾಯಿಸಿ ಕೊಳ್ಳಲು ಕಾರಣ ಅವರು ತೆಗೆದುಕೊಂಡಿರುವ ತಾಂಬೂಲವು ಅವರ ಮಕ್ಕಳಂತೆ ಎಂದು ಭಾವಿಸುವರು. ಹೀಗಾಗಿ ಅವರು ಎತ್ತಿಕೊಂಡಿರುವ ತಾಂಬೂಲವನ್ನು ಅವರೇ ತಿನ್ನುವಂತಿಲ್ಲ. ಆದ್ದರಿಂದ ಬದಲಾಯಿಸಿಕೊಂಡು ಆ ತಾಂಬೂಲವನ್ನು ಉಪಯೋಗಿಸಿಕೊಳ್ಳುವುದು ರೂಡಿಯಲ್ಲಿದೆ. ಇದಾದ ಮೇಲೆ ಬಂದಂತಹ ಮುತ್ತೈದೆಯರಿಗೆ ಆ ಮನೆಯವರು ಭತ್ತದ ಕಾಳಾಗಲಿ, ಜೋಳವಾಗಲಿ ಅಥವಾ ಗೋದಿಯಾಗಲಿ ಉಡಿಯನ್ನು ತುಂಬುತ್ತಾರೆ. ನಂತರ ಸೂಲಗಿತ್ತಿಗೆ ಸ್ನಾನ ಮಾಡಿಸಿ ಅವಳಿಗೆ ತಮ್ಮದೇ ಆದ ರೇಷ್ಮೆ ಸೀರೆಯನ್ನು

ತೊಡಲು ನೀಡುತ್ತಾರೆ. ಅವಳಿಗೂ ಸಹ ಉಡಿಯನ್ನು ತುಂಬಿ ಹಣದ ರೂಪದಲ್ಲಿ ದಕ್ಷಿಣೆಯನ್ನು ನೀಡುತ್ತಾರೆ. ಈ ಕಾರ್ಯಕ್ರಮವು ಬೆಳಗಿನದ್ದಾಗಿರುತ್ತದೆ.

ರಾತ್ರಿಯ ವೇಳೆ 'ಛಟ್ಟಿಮಾ ಪೂಜೆ' ಎಂದು ವಿಧಿದೇವತೆಯನ್ನು ಪೂಜಿಸುವ ಸಂಪ್ರದಾಯವಿದೆ. ಇದರಲ್ಲಿ ಬೆಳಗಿನಂತೆಯೇ ತುಂಬಿದ ಚರಿಗೆಯನ್ನು ಇರಿಸಿ ಜೊತೆಗೆ ಕಲ್ಲಿನ ಗುಂಡನ್ನು ಇಟ್ಟು ಅದರ ಮುಂದೆ ಪತ್ರೊಳ್ಳಿಯ ಎಲೆಯನ್ನು ಹಾಕಿ ಸುತ್ತಲು ಗೋಧಿ ಹಿಟ್ಟಿನಿಂದ ತಯಾರಿಸಿದ ಚಪಾತಿಗಳನ್ನು ಹಾಕಿ ಮಧ್ಯದಲ್ಲಿ ಅನ್ನ, ಮಾಂಸದ ಸಾರು ಹಾಗೂ ತುಂಡುಗಳನ್ನು ಎಡೆಯಾಗಿ ಹಾಕುವರು. ಗುಂಡು ಕಲ್ಲಿಗೆ ಅರಿಶಿಣ, ಕುಂಕುಮ ಹಚ್ಚಿ ಹೊಸ ಸೀರೆ ಕುಪ್ಪಸವಿಟ್ಟು ಅದಕ್ಕೆ ವಿಧಿದೇವತೆಯ ಮುದ್ರೆ ಇರುವ ಬೆಳ್ಳಿ ಅಥವಾ ಬಂಗಾರದ ಬಿಲ್ಲೆಯನ್ನು ಕರಿದಾರದಲ್ಲಿ ಪೋಣಿಸಿ ಹಾಗೂ ಕರಿದಾರದ ಉಂಡೆಯನ್ನು ಮತ್ತು ಮದ್ಯದ ಬಾಟಲಿಯನ್ನು ಸಹ ಪೂಜೆಗೆ ಇಡುವರು. ಕುರಿಯ ಹೊಟ್ಟೆಯಲ್ಲಿರುವ ಕಳ್ಳು, ಲಿವರ್‌ನ ಒಂದು ಭಾಗವನ್ನು ಅಡಿಗೆ ಮಾಡಿ ನೈವೇದ್ಯಕ್ಕೆ ಹಿಡಿಯುವರು. ಅಂದು ಮನೆಯಲ್ಲಿ ಸೇರಿರುವ ಕುಲಬಾಂಧವರು ಹಾಗೂ ಸುತ್ತಮುತ್ತಲಿನ ಮುತ್ತೈದೆಯರು ಸೇರಿ ಗಂಗೆಪೂಜೆಗೆಂದು ಬಾವಿ, ಕೊಳವೆ ಹತ್ತಿರ ಹೋಗಿ ಗಂಗೆಯನ್ನು ಪೂಜಿಸಿ ಅಲ್ಲಿಂದ ಬರುವಾಗ ಒಂದು ಬಿಂದಿಗೆಯಲ್ಲಿ ನೀರನ್ನು ಹೊತ್ತು ತರುತ್ತಾರೆ. ಮನೆಯ ಹತ್ತಿರ ಬಂದಾಗ ಬಾಣಂತಿಯು ಮನೆಯ ಹೊಸ್ತಿಲಲ್ಲಿ, ಅದಕ್ಕೆ ಕೈ ಮುಗಿದು ಗಂಗೆಯನ್ನು ಮನೆಯಲ್ಲಿ ತರುತ್ತಾಳೆ.

ನಂತರ ಬಾಣಂತಿಗೆ ಮತ್ತು ಮಗುವಿಗೆ ಹೊಸ ಬಟ್ಟೆಗಳನ್ನು ತೊಡಿಸಿ ದೇವರ ಎದುರಿಗೆ ಅಂದರೆ ಬಿಲ್ಲೆ ಹಾಕಿ ಶೃಂಗರಿಸಿದ ಗುಂಡುಕಲ್ಲಿನ ಎದುರಿಗೆ ತಾಯಿ ಮಗುವಿಗೆ ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿರುತ್ತಾಳೆ. ಆಗ ವಿಧಿದೇವತೆಯನ್ನು ಅರಿಷಿಣ, ಕುಂಕುಮ ಹಚ್ಚಿ, ಲೋಬಾನ ಹಾಕಿ ಕಾಯಿ ಒಡೆದು, ಮಧ್ಯವನ್ನು ಸ್ವಲ್ಪ ಭೂಮಿಗೆ ಚೆಲ್ಲಿ ಅದನ್ನು ಬೆಂಕಿ ಹಚ್ಚುವರು. ಹೀಗೆ ಮಾಡುವುದರಿಂದ ಮಧ್ಯವು ದೇವರಿಗೆ ಸಮರ್ಪಿತವಾಯಿತು ಎಂಬ ನಂಬಿಕೆ ಇದೆ. ವೈಜ್ಞಾನಿಕವಾಗಿ ನೋಡುವುದಾದರೆ ಮಧ್ಯವು ಸ್ಟ್ರಾಂಗ್ ಆಗಿ ಇದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದೂ ಆಗಿದೆ. ಮಧ್ಯಕ್ಕೆ ಬೇಗೆ ಬೆಂಕಿ ಹತ್ತುಕೊಂಡರೆ ಮಧ್ಯವು ಚೆನ್ನಾಗಿದೆ ಎಂದು ಬೆಂಕಿ ಹತ್ತಿಕೊಳ್ಳದಿದ್ದರೆ ಕಲಬೆರಕೆಯಾಗಿ ಸ್ಟ್ರಾಂಗ್ ಇಲ್ಲ ಎಂದು ತಿಳಿಯುತ್ತಾರೆ. ಆಗ ವಿಧಿದೇವತೆಯನ್ನು ಶಾಸ್ತ್ರೋಕ್ತವಾಗಿ ಪೂಜಿಸಿ ಮಗುವಿಗೆ ದೃಷ್ಟಿಯಾಗದಿರಲೆಂದು ದೇವತೆಗೆ ಏರಿಸಿರುವ ಕರಿ ದಾರದ ಉಂಡೆಯನ್ನು ತೆಗೆದುಕೊಂಡು ಕೈ ಕಾಲುಗಳಿಗೆ ಕರಿದಾರವನ್ನು ಕಟ್ಟುತ್ತಾರೆ. ಜೊತೆಗೆ ಮೊಟ್ಟ ಮೊದಲಿಗೆ ಮಗುವಿಗೆ ಉಡಿದಾರವನ್ನು ಕಟ್ಟಲಾಗುತ್ತದೆ. ಛಟ್ಟಿಮಾ ಬಿಲ್ಲೆಯನ್ನು ಕುತ್ತಿಗೆಯಲ್ಲಿ ಕಟ್ಟುವರು. ನಂತರ ಒಂದು ಚಾಕುವನ್ನು ತೆಗೆದುಕೊಂಡು ದೀಪಕ್ಕೆ ಕಾಯಿಸಿ ಅದರ ಮೇಲೆ ಬೆಳ್ಳುಳ್ಳಿಯನ್ನು ಜಜ್ಜಿ

ಸವರುತ್ತಾರೆ. ಇದರಿಂದ ಬಂದ ಕಾಡಿಗೆಯನ್ನು ಮಗುವಿನ ಹಣೆಗೆ ಮೊದಲ ಕಾಡಿಗೆಯಾಗಿ ಹಚ್ಚುತ್ತಾರೆ. ನಂತರ ಕೆನ್ನೆಗೆ, ಕೈ ಕಾಲುಗಳಿಗೆ ದೃಷ್ಟಿತಾಗದಿರಲೆಂದು ಕಾಡಿಗೆ ಹಚ್ಚುವರು. ವಿಧಿದೇವತೆಗೆ ಜೋಳದ ಹಿಟ್ಟಿನಿಂದ ಮಾಡಿದ ಉಂಡೆ, ಅಲಸಂದಿಕಾಳು ಸಹ ಇಟ್ಟಿರುತ್ತಾರೆ. ಜೊತೆಗೆ ಒಂದು ಪುಸ್ತಕ, ಪೆನ್ನು ಸಹ ಇಡುವರು. ಇದಕ್ಕೊಂದು ಕಾರಣವೂ ಇದೆ. ಏನೆಂದರೆ ವಿಧಿದೇವತೆ ರಾತ್ರಿ ಬಂದು ಮಗುವಿನ ಹಣೆಬರಹ ಬರೆಯುತ್ತಾಳೆ. ಹಾಗೆಯೇ ಮಗುವಿಗೆ ವಿದ್ಯೆಯನ್ನು ದಯಪಾಲಿಸಲಿ ಎಂಬ ಆಶಯವು ಇದರೊಂದಿಗೆ ಇರುತ್ತದೆ. ಮಗುವಿಗೆ ಹೊಸ ಬಟ್ಟೆಯನ್ನು ತೊಡಿಸಿ ಕಾಡಿಗೆ ಹಚ್ಚಿದ ಮೇಲೆ ತಾಯಿಗೂ ಅರಿಷಿಣ ಕುಂಕುಮ ಹಚ್ಚಿ ತಲೆಗೆ ಹೂವು ಮೂಡಿಸಿ ವಿಧಿದೇವತೆಯನ್ನು ಕುರಿತು ಮಗುವಿನ ಹಣೆಬರಹ ಚೆನ್ನಾಗಿ ಬರೆಯಲಿ ಎಂದು ಪ್ರಾರ್ಥಿಸುವಂತೆ ಹಿರಿಯರು ತಿಳಿಸುವರು ಅದರಂತೆ ತಾಯಿ ಭಕ್ತಿಯಿಂದ ದೇವತೆಯಲ್ಲಿ ಬೇಡಿಕೊಳ್ಳುತ್ತಾಳೆ.

ಈ ಎಲ್ಲಾ ಪೂಜೆಯ ನಂತರ ಆ ದಿನ ಸಂಜೆ ಸಮಯದಲ್ಲಿ ಮನೆಯ ಅಂಗಳದಲ್ಲಿ ಮಾಂಸ ಪೂಜೆಯನ್ನು ಮಾಡುತ್ತಾರೆ. ಗುಂಡಿಯಲ್ಲಿ ಇಟ್ಟಿರುವ ಹೊಕ್ಕಳಬಳ್ಳಿ ಮಾಂಸದ ಗಡಿಗೆಗೆ ಪೂಜೆ ಮಾಡಿ, ಅನ್ನ ಬೆಲ್ಲದ ಎಡೆಹಾಕಿ ಎಡೆಯನ್ನು ಅಲ್ಲಿಯೇ ಇಟ್ಟು ಬರುತ್ತಾರೆ. ಗರ್ಭಿಣಿಯು ತಲೆ ತುಂಬಾ ಕಂಬಳಿ ಹೊದ್ದುಕೊಂಡು, ಕೈಯಲ್ಲಿ ಹೊಕ್ಕಳ ಬಳ್ಳಿ ಕೊಯ್ದ ಕುಡುಗೋಲನ್ನು ಗಡಿಗೆ ಪಕ್ಕದಲ್ಲಿ ಇಟ್ಟು ಪೂಜೆ ಮಾಡುತ್ತಾಳೆ. ನಂತರ ಮಗುವನ್ನು ಆಕಾಶದೆಡೆಗೆ ತೋರಿಸಿ ದ್ರುವ ನಕ್ಷತ್ರವನ್ನು ತೋರಿಸುವ ಪದ್ಧತಿ ಇದೆ. ಕಾರಣ ನಾವು ಆ ದಿಕ್ಕಿನಿಂದ ಬಂದವರು ಎಂದು ಹೇಳುವ ಪ್ರತೀತಿ ಸಹ ಇದೆ. ಈ ರೀತಿಯಾಗಿ ಈ ಛಟ್ಟಿಮಾ ಪೂಜೆಯನ್ನು ಆಚರಿಸುತ್ತಾರೆ.

ಜನಿಸಿದ ಮಗುವಿಗೆ ಮೂರು ದಿವಸಗಳ ಕಾಲ ತಾಯಿಯ ಮೊಲೆ ಹಾಲನ್ನು ಕುಡಿಸುತ್ತಾರೆ. ಗಿಣ್ಣಾಲು ಕುಡಿದರೆ ಮಗು ಶಕ್ತಿಯುತವಾಗಿ ಇರುತ್ತದೆಂದು ನಂಬಿಕೆ ಇದೆ. ಮಗು ಹುಟ್ಟಿದ ಮೂರು ದಿನಗಳ ತನಕ ಜೇನುತುಪ್ಪವನ್ನು ಬೆರಳಿನಿಂದ ಅದ್ದಿ ಚೀಪಿಸುತ್ತಾರೆ. ಕೊಬ್ಬರಿ ಎಣ್ಣೆ ಮೈಗೆಲ್ಲ ಲೇಪಿಸಿ ಮೊದಲ ನೀರೆರೆಯುತ್ತಾರೆ. ನಂತರ ಮೈಗೆಲ್ಲಾ ಉಜ್ಜಿ ಎಣ್ಣೆ ಸ್ನಾನ ಮಾಡಿಸುತ್ತಾರೆ. ಸೂಲಗಿತ್ತಿ ಹೆಂಗಸು ಮಣೆಯ ಮೇಲೆ ಕುಳಿತು ಕಾಲುಗಳನ್ನು ನೀಡಿ ಮಗುವನ್ನು ಅಂಗಾತ ಮಲಗಿಸಿಕೊಂಡು ಮಗುವಿನ ಇಡೀ ದೇಹವನ್ನು ಚೆನ್ನಾಗಿ ಎಣ್ಣೆಯಿಂದ ನೀವಿದಾಗ ಮಗು ಕಿರುಚಿದರೂ ಈ ಕ್ರಿಯೆಯನ್ನು ನಿಲ್ಲಿಸುವುದಿಲ್ಲ. ಮಗುವಿಗೆ ಹೀಗೆ ಮಾಡುವುದರಿಂದ ಅದರ ಅಂಗಗಳು ಬಲಿಷ್ಠ ಗೊಳ್ಳುತ್ತವೆ ಎಂಬ ನಂಬಿಕೆಯಿದೆ. ಅನಂತರ ಸ್ನಾನ ಮಾಡಿಸಿ, ಮನೆಯ ಒಳಗಡೆ ಹಳೇ ಸೀರೆಯಿಂದ ಮಾಡಿರುವ ಜೋಳಿಗೆಯಲ್ಲಿ ಮಗುವನ್ನು ಮಲಗಿಸಿ, ತೂಗುತ್ತಾಳೆ. ಗರ್ಭಿಣಿಗೆ ಕಾಯಿಸಿದ ನೀರನ್ನು ದಿನಾಲು ನೀರೆರೆಯುತ್ತಾರೆ. ಬಾಣಂತಿಗೆ ಕೊಡುವ

ಆಹಾರ ಪದಾರ್ಥಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳು ಇರುವುದಾಗಿದೆ. ಇದೇ ರೀತಿಯ ಆಹಾರವನ್ನು ಊಟ ಮಾಡಬೇಕೆಂಬ ನಿಯಮವಿದೆ. ಕಾರಣ ಹೆಚ್ಚಾಗಿ ಖಾರವಾದ ಪದಾರ್ಥಗಳನ್ನು ಬಾಣಂತಿಯು ತಿಂದರೆ ಮಗುವಿಗೆ ಭೇದಿಯಾಗುತ್ತದೆಂದು ಆಹಾರದಲ್ಲಿ ಕಟ್ಟುನಿಟ್ಟಿನ ಕ್ರಮಗಳು ಇರುವುದು. ಬಿಸಿ ಅನ್ನ ಮತ್ತು ತಲೆ ಮಾಂಸದ ಸಾರು ಹೆಚ್ಚಾಗಿ ಕೊಡುತ್ತಾರೆ. ಪ್ರತಿದಿನ ಕೊಬ್ಬರಿ, ಬೆಲ್ಲ, ಅಂಟು, ಮತ್ತು ತುಪ್ಪ ಮಿಶ್ರಣದೊಂದಿಗೆ ಪುಡಿ ಮಾಡಿ ದಿನಾಲೂ ಮುಂಜಾನೆ ಸಮಯದಲ್ಲಿ ತಿನ್ನಿಸುತ್ತಾರೆ. ಇದನ್ನು 'ಖಾರ'ವೆಂದು ಹೇಳುತ್ತಾರೆ.

೪.೧.೩. ನಾಮಕರಣ ಪದ್ಧತಿ

ಖಾಟಿಕ್ ಸಮುದಾಯದವರು ಮಗುವಿಗೆ ತೊಟ್ಟಿಲಲ್ಲಿ ಹಾಕುವುದಕ್ಕೆ ಹೆಸರಿಡುವುದು ಅಥವಾ ನಾಮಕರಣ ಎಂದು ಕರೆಯುತ್ತಾರೆ. ಮಗುವಿಗೆ ಮೂರು ಅಥವಾ ಐದನೆ ತಿಂಗಳದಲ್ಲಿ ನಾಮಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ತಾಯಿ ಮತ್ತು ಮಗುವಿಗೆ ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ದೇವರ ಎದುರಿಗೆ ಅಥವಾ ಮನೆಯ ಪಡಸಾಲೆಯಲ್ಲಿ ಹೆಸರಿಡುವ ಕಾರ್ಯಕ್ರಮ ಇರುತ್ತದೆ. ಇವರು ಹೆಚ್ಚಾಗಿ ಕುಲದೇವತೆಗೆ ಅನುಗುಣವಾಗಿ ಹೆಸರು ಕರೆಯುತ್ತಾರೆ. ನಿದರ್ಶನಕ್ಕಾಗಿ ಕೆಲವು ಹೆಸರುಗಳನ್ನು ಗಮನಿಸಬಹುದು.

ಕುಲದೇವತೆಗಳ ಹೆಸರು	ಮಗುವಿನ ಹೆಸರು
ಯಲ್ಲಮ್ಮ	ಯಲ್ಲಮ್ಮ, ಯಲ್ಲಪ್ಪ, ರೇಣುಕಾ
ದುರುಗಮ್ಮ	ದುರಗಮ್ಮ, ದುರುಗಪ್ಪ
ಗಾಳೆಮ್ಮ	ಗಾಳೆಪ್ಪ, ಗಾಳೆಮ್ಮ
ಸೂರ್ಯನಾರಾಯಣ	ಸೂರ್ಯನಾಥ, ಸೂರ್ಯಪ್ರಕಾಶ, ನಾರಾಯಣ
ಮೈಲಾರಲಿಂಗ	ಮಲ್ಲಪ್ಪ, ಮಾಲಗಂಗಾ, ಮಾಲತೇಶ್, ಮಲ್ಲಮ್ಮ
ನರಸಿಂಹಸ್ವಾಮಿ	ನರಸಿಂಹ, ನರಸಿಂಗ, ನರಸಮ್ಮ
ಈರಣ್ಣ	ಈರಣ್ಣ, ಈರಮ್ಮ, ಈರಪ್ಪ
ಬಸವೇಶ್ವರ	ಬಸವರಾಜ, ಬಸವಣ್ಣ, ಬಸಪ್ಪ, ಬಸಮ್ಮ
ಕಾಳಿ	ಕಾಳಪ್ಪ, ಕಾಳಮ್ಮ
ಹುಲಿಗೆಮ್ಮ	ಹುಲಿಗೆಮ್ಮ, ಹುಲಿರಾಜ್, ಹುಲಿಯಪ್ಪ
ದಾವಲ್‌ಮಾಲಿಕ್	ಮಾಲಿಕ್, ದಾವಲಾತ್ತರಾಮ್

ಹೀಗೆ ಇತ್ಯಾದಿ ಹೆಸರುಗಳನ್ನಿಡುತ್ತಾರೆ. ಅವರವರ ಮನೆ ದೇವರುಗಳ ಹೆಸರುಗಳಿಡುವುದು ರೂಢಿ. ಹಾಗೆಯೇ ಅವರ ಸತ್ತ ಹಿರಿಯರ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಇಂದು ಆಧುನಿಕತೆಯ ಪ್ರಭಾವದಿಂದ ಅವರ ಹೆಸರುಗಳು ವಿದ್ಯಾಶ್ರೀ, ಪುಷ್ಪ, ಅಂಬುಜಾ, ರತ್ನ, ಇಂಧುಮತಿ, ರೇಖಾ, ಮಂಜುಳಾ, ಸೀಮಾ, ದೀಪ, ರೋಹಿತ್, ಯುವರಾಜ್, ಚಂದ್ರಕಾಂತ, ನಾಗರಾಜ್, ಅಭಿ ಇತ್ಯಾದಿ ರೀತಿಯಲ್ಲಿ ಹೆಸರುಗಳನ್ನಿಡುತ್ತಾರೆ.

ನಾಮಕರಣದ ದಿನವೇ ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ಮನೆಯ ಒಳಗಡೆ ಪೂರ್ವ ದಿಕ್ಕಿಗೆ ತೊಟ್ಟಿಲು ಕಟ್ಟಿರುತ್ತಾರೆ. ಅದಕ್ಕೆ ಹೂವು, ರೇಷ್ಮೆಯ ಸೀರೆಗಳಿಂದ ಸಿಂಗರಿಸಿ, ಬಗೆ ಬಗೆಯ ಹೂಗಳನ್ನು ಹರಡಿ ಅಲಂಕರಿಸುತ್ತಾರೆ. ಅಂದು ಬಾಣಂತಿಯನ್ನು ಕರೆದುಕೊಂಡು ಗಂಗೆಪೂಜೆ ಮಾಡಲು ಬಾವಿ ಅಥವಾ ಕೊಳವೆಬಾವಿಗಳಿಗೆ ಹೋಗುತ್ತಾರೆ. ಅಲ್ಲಿ ಸಂಪ್ರದಾಯದಂತೆ ಗಂಗೆಯನ್ನು ಪೂಜಿಸಿ ತುಂಬಿದ ಕೊಡವನ್ನು ಬಾಣಂತಿಯ ತಲೆಯ ಮೇಲೆ ಹೊತ್ತಿಸಿಕೊಂಡು ಬರುತ್ತಾರೆ. ಬಂದಾಗ ಮನೆಯ ಬಾಗಿಲಲ್ಲಿ ಅವಳನ್ನು ಪೂಜಿಸಿ ಗಂಗೆ ಮಾತೆಯನ್ನು ಒಳಗೆ ಕರೆದುಕೊಳ್ಳುತ್ತಾರೆ. ನಂತರ ತಂದಿರುವ ನೀರಿನ ಕೊಡವನ್ನು ನಾಮಕರಣಕ್ಕೆ ಅಲಂಕರಿಸಿದ ತೊಟ್ಟಿಲು ಕೆಳಗಡೆ ಇರಿಸುತ್ತಾರೆ. ಹುಟ್ಟಿದ ಮಗುವಿಗೆ ಅವರ ಅಜ್ಜ ಅಜ್ಜಿ ಹೊಸ ಬಟ್ಟೆಗಳನ್ನು ತೊಡಿಸುತ್ತಾರೆ. ನಂತರ ತೊಟ್ಟಿಲ ಪಕ್ಕದಲ್ಲಿ ಬಾಣಂತಿಯನ್ನು ಕೂಡಿಸುತ್ತಾರೆ. ಎದುರುಗಡೆ ಮುತ್ತೈದೆಯರು ಕುಲದೇವರನ್ನು ಹಾಗೂ ತಂದಿರುವ ಗಂಗೆಯ ನೀರಿಗೆ ಪೂಜೆಮಾಡಿ, ತೊಟ್ಟಿಲಿಗೆ ಪೂಜೆ ಮಾಡುತ್ತಾರೆ.

ಹುಟ್ಟಿದ ಮಗುವಿನ ಸೋದರಮಾವ ಅಥವಾ ಸೋದರತ್ತೆಯರು ಹೆಸರಿಡುವ ಪದ್ಧತಿಯುಂಟು. ಈ ಪದ್ಧತಿಯಲ್ಲಿ ತೊಟ್ಟಿಲಿನ ಆಪಕ್ಕ ಈಪಕ್ಕ `ಮುಖಾಮುಖಿಯಾಗಿ ನಿಂತು ಮಗುವನ್ನು ಮುತ್ತೈದೆಯರು ತೊಟ್ಟಿಲ ಮೇಲಿನಿಂದ ಆ ಕಡೆಯಿಂದ ಈ ಕಡೆಗೆ ಮನೆದೇವರ ಹೆಸರುಗಳನ್ನು ಹೇಳಿ ಕೊಡುವುದುಂಟು. ಹೀಗೆ ಐದು ಬಾರಿ ಮಾಡಿ ಕೊನೆಯಲ್ಲಿ ಮಗುವನ್ನು ತೊಟ್ಟಿಲಲ್ಲಿ ಹಾಕುತ್ತಾರೆ. ತರುವಾಯ ಹೆಸರಿಡುವ ಕಾರ್ಯಕ್ರಮ ನಡೆಯುತ್ತದೆ.

ಇದಾದ ಮೂರ್‍ನಾಲ್ಕು ದಿನಗಳ ಮೇಲೆ ಬಾಣಂತಿ ಮತ್ತು ಮಗುವನ್ನು ಗಂಡನ ಮನೆಗೆ ಕಳಿಸಿಕೊಡವರು. ಸೋದರ ಮಾವನು ತಾಯಿ ಮತ್ತು ಮಗುವನ್ನು ಬಿಟ್ಟು ಬರುವ ಪದ್ಧತಿ ಇವರಲ್ಲಿದೆ. ಈ ಸಂದರ್ಭದಲ್ಲಿ ಸೋದರ ಮಾವನು ಮಗುವಿಗೆ ಹೊಸ ತೊಟ್ಟಿಲು, ಹೊಸ ಬಟ್ಟೆಗಳು, ಒಡವೆಗಳಾದ ಬೆಳ್ಳಿಯ ಉಡುದಾರ, ಕಾಲ್ಗಡಗ, ಗೆಜ್ಜೆ, ಕೈ ಚೈನುಗಳು ಹಾಗೂ ಬಂಗಾರದ ಕಿವಿಯೋಲೆಗಳನ್ನು ಹಾಗೂ ಆಟಿಕೆ ಸಾಮಾನುಗಳನ್ನು ತೆಗೆದುಕೊಂಡು ಅವರ ಗಂಡನ ಮನೆಗೆ ಬಿಟ್ಟು ಬರುವ ಸಂಪ್ರದಾಯವನ್ನು ಕಾಣಬಹುದು.

೪.೧.೪. ಜವಳ

ಈ ಕಾರ್ಯವು ಗಂಡನ ಮನೆಯಲ್ಲಿ ನೆರವೇರುತ್ತದೆ. ಗಂಡನ ಮನೆಯವರು ಹೆಣ್ಣಿನ ತವರು ಮನೆಯವರಿಗೆ ಜವಳ ಇಳಿಸುವ ಕಾರ್ಯಕ್ರಮ ಇದೆ ಎಂದು ಹೇಳಿ ಕಳಿಸುತ್ತಾರೆ. ಪ್ರಸ್ತುತವಾಗಿ ಅನೇಕ ಜವಳ ಕಾರ್ಯಕ್ರಮವು ಅವರ ಮನೆದೇವರ ಸನ್ನಿಧಾನದಲ್ಲಿ ನಡೆಯುವುದು ವಾಡಿಕೆಯಾಗಿರುತ್ತದೆ. ಇಲ್ಲಿ ತವರು ಮನೆಯವರು ಪ್ರಮುಖ ಪಾತ್ರವಹಿಸುತ್ತಾರೆ. ಅವರು ಬರುವಾಗ ಮಗಳಿಗೆ ಮತ್ತು ಅಳಿಯನಿಗೆ ಹಾಗೂ ಮಗುವಿಗೆ ಹೊಸ ಬಟ್ಟೆಗಳನ್ನು ತರುವುದು ವಾಡಿಕೆ. ದೇವರ ಸಾನಿಧ್ಯದಲ್ಲಿ ಹೋಗಿ ಮಗುವನ್ನು ಸ್ನಾನ ಮಾಡಿಸಿ ತಾಯಿಯ ಮಡಿಲಲ್ಲಿ ಕೂಡಿಸಿ ಮಗುವಿನ ಸೋದರ ಮಾವ ಅಥವಾ ಸೋದರತ್ತೆಯಾಗಲಿ ಮಗುವಿನ ಜವಳವನ್ನು ಇಳಿಸ ಬೇಕಾಗುತ್ತದೆ. ಇಲ್ಲಿ ಜವಳವನ್ನು ಇಳಿಸಲು ಬಳಸುವ ವಸ್ತು ಎರಡು ವೀಳ್ಯದೆಲೆಗಳನ್ನು ಕತ್ತರಿ ಆಕಾರದಲ್ಲಿ ಜೋಡಿಸಿ ಅದನ್ನು ಆ ಮಗುವಿನ ತಲೆಯ ಮೇಲೆ ಕತ್ತರಿಯಂತೆ ಆಡಿಸುತ್ತಾರೆ. ಇದು ಮಗುವಿನ ಜವಳ ತೆಗೆಯುವ ಸಂಪ್ರದಾಯವಾದ ಕಾರ್ಯಕ್ರಮವಾಗಿರುತ್ತದೆ. ನಂತರ ಹಡಪದನನ್ನು ಕರೆಯಿಸಿ ಮಗುವಿನ ತಲೆಕೂದಲನ್ನು ತೆಗೆಯಿಸಿ ನುಣುಪಾಗಿಸುತ್ತಾರೆ. ಇವರಿಗೆ ಅಕ್ಕಿ ಬೆಲ್ಲ, ಬೆಳೆ, ಗೋಧಿಹಿಟ್ಟು, ಎಲೆ ಅಡಿಕೆ, ದಕ್ಷಿಣೆಯ ರೂಪದಲ್ಲಿ ಹಣವನ್ನಿರಿಸಿ ನೀಡುತ್ತಾರೆ. ಮಗುವಿನ ಕೂದಲು ತೆಗೆದ ಸೋದರ ಮಾವನಿಗೆ ಅಥವಾ ಸೋದರತ್ತೆಗೆ ಗಂಡನ ಮನೆಯವರು ಹೊಸಬಟ್ಟೆಯನ್ನು ಸ್ಥಿತಿಗೆ ಅನುಸಾರವಾಗಿ ಬಂಗಾರದ ಉಡುಗೊರೆಯನ್ನು ನೀಡುತ್ತಾರೆ. ಬಂದಂತಹ ಅನೇಕ ಕುಲ ಬಂಧುಬಾಂದವರು ಮಗುವಿಗೆ ಉಡುಗೊರೆಯನ್ನು ಕೊಡುತ್ತಾರೆ. ನಂತರ ಎಲ್ಲ ಕುಲಬಾಂಧವರಿಗೂ ಸಿಹಿ ಅಡುಗೆಯನ್ನು ಮಾಡಿಸಿ ಊಟವನ್ನು ಹಾಕುತ್ತಾರೆ.

೪.೧.೫. ಪ್ರೌಢಸಂಸ್ಕಾರ

ಬಾಲೆ ಕನ್ಯೆಯಾಗುವ ಪ್ರಕ್ರಿಯೆಯನ್ನು ಬುಡಕಟ್ಟು ಸಮುದಾಯಗಳು ಅತೀ ಸಂಭ್ರಮದಿಂದ ಎದುರುಗೊಳ್ಳುತ್ತವೆ. ಪ್ರತಿಯೊಂದು ಸಮುದಾಯಗಳಲ್ಲೂ ವಿಭಿನ್ನ ರೀತಿಯಲ್ಲಿ ಪ್ರೌಢಸಂಸ್ಕಾರವನ್ನು ಆಚರಿಸುವುದನ್ನು ಕಾಣಬಹುದು. ಬಾಲೆ ಕನ್ಯೆಯಾಗುವ ಕ್ರಿಯೆ ಮನುಷ್ಯ ಬದುಕಿನ ಮಹತ್ವದ ಕ್ರಿಯೆಯಾಗಿರುತ್ತದೆ. ಖಾಟಿಕ್ ಸಮುದಾಯದಲ್ಲಿ ಹುಡುಗಿಯು ಮುಟ್ಟಾದ ಮೊದಲನೆಯ ದಿನವೇ ಬ್ರಾಹ್ಮಣರ ಹತ್ತಿರ ಹೋಗಿ ಪಂಚಾಂಗವನ್ನು ತೆಗೆಯಿಸಿ ನೋಡುತ್ತಾರೆ. ಯಾರ ಹೆಸರಿನಲ್ಲಿ ಹುಡುಗಿಗೆ ನೀರು ಹಾಕಬೇಕು, ಎಷ್ಟು ದಿವಸಕ್ಕೆ ಎಬ್ಬಿಸಬೇಕೆಂದು ಕೇಳಿಸುತ್ತಾರೆ. ಹುಡುಗಿಯ ಸೋದರತ್ತೆ ಇಲ್ಲವೆ ಚಿಕ್ಕಮ್ಮನವರು ಪ್ರತಿದಿನ ನೀರು ಹಾಕಿ ಅರಿಶಿಣ ಹಚ್ಚಿ ಸ್ನಾನ ಮಾಡಿಸುತ್ತಾರೆ. ಪ್ರತಿದಿನ ಸಂಜೆ ಹೂವು ಮೂಡಿಸುತ್ತಾರೆ. ಹುಡುಗಿಯನ್ನು ಮನೆಯಲ್ಲೆ ಒಂದು ಕೊಣೆಯಲ್ಲಿ ಅಥವಾ ಮೂಲೆಯಲ್ಲಿ ಕೂಡಿಸಿ ಅವಳನ್ನು ಕೂಡಿಸಿದ ಸ್ಥಳದ ಗೋಡೆಗೆ ಅರಿಶಿಣದಿಂದ ಚಟ್ಟು

ಬಡಿಸುತ್ತಾರೆ. ಹುಡುಗಿಯ ಪಕ್ಕದಲ್ಲಿ ಒಂದು ಕಟ್ಟಿಗೆಯ ಗೊಂಬೆಯನ್ನಿಟ್ಟು ಅದಕ್ಕೂ ಬಟ್ಟೆ ಹಾಕಿ ಹೂವು ಮುಡಿಸುತ್ತಾರೆ. ಇದನ್ನು ನೋಡಿದಾಗ ಬಾಲ್ಯ ಕಳೆದು ಯೌವನಕ್ಕೆ ಕಾಲಿಡುತ್ತಿರುವ ಸೂಚನೆ ತೋರಿಸುತ್ತದೆ. ಹನ್ನೊಂದು, ಹದಿನಾರು ಇಲ್ಲವೆ ಇಪ್ಪತ್ತೊಂದು ದಿನಕ್ಕೆ ಎಬ್ಬಿಸುವ ಕಾರ್ಯಕ್ರಮ ಮಾಡುತ್ತಾರೆ.

ಹೀಗೆ ಮನೆಯಲ್ಲಿ ಒಂಬತ್ತು ದಿನ, ಹದಿನಾರು ದಿನ ಮನೆಯಲ್ಲಿ ಹುಡುಗಿಗೆ ಹಲವಾರು ತರಹದ ವೇಷಭೂಷಣಗಳಿಂದ ಅಲಂಕರಿಸುತ್ತಾರೆ. ಉದಾಹರಣೆಗೆ ಲಕ್ಷ್ಮೀ, ಪಾರ್ವತಿ, ಶಕುಂತಲಾ, ಕಿತ್ತೂರಿನ ರಾಣಿ ಚೆನ್ನಮ್ಮ ಹೀಗೆ ಹತ್ತು ಹಲವು ವೇಷಗಳನ್ನು ಹಾಕಿ ಸಂಜೆಯಲ್ಲಿ ನೆರೆ ಹೊರೆಯರನ್ನು ಕರೆದು ಹುಡಿಗಿಗೆ ಆರತಿ ಮಾಡಿ ಹೂ ಮುಡಿಸಿ ಕಳಸ ಬೆಳಗುತ್ತಾರೆ. ಒಂಬತ್ತನೆಯ ದಿನ ಇಲ್ಲವೆ ಹದಿನಾರನೆಯ ದಿನ ಹುಡುಗಿಯನ್ನು ಎಬ್ಬಿಸುವ ಕಾರ್ಯಕ್ರಮ ಮಾಡುತ್ತಾರೆ. ಎಬ್ಬಿಸುವ ದಿನದಂದು ಬೆಳಿಗ್ಗೆ ಬಾವಿ ಅಥವಾ ಕೊಳವೆಬಾವಿಗಳಿಗೆ ಹೋಗಿ ಮೈನೆರೆದ ಹುಡುಗಿಯ ಕೈಯಿಂದ ಗಂಗೆಯ ಪೂಜೆಯನ್ನು ಮಾಡಿಸುತ್ತಾರೆ. ನಂತರ ಮನೆಗೆ ಬರುತ್ತಾರೆ. ಆಗ ಸೋದರತ್ತೆ ಮತ್ತು ಮುತ್ತೈದೆಯರು ಹುಡುಗಿಯನ್ನು ಹಾಲು, ಮೊಸರು, ತುಪ್ಪ, ಅರಿಶಿಣ ಹಚ್ಚಿ ಸ್ನಾನವನ್ನು ಮಾಡಿಸುವರು. ಅಜ್ಜ ಅಜ್ಜಿಯವರು ತಂದ ಹೊಸ ಸೀರೆಯನ್ನು ಉಡಿಸಿ ಸ್ನಾನದ ಕೋಣೆಯಿಂದ ಕಣ್ಣು ಮುಚ್ಚಿಸಿಕೊಂಡು ದೇವರ ಮನೆಗೆ ಕರೆತರುತ್ತಾರೆ. ದೇವರ ಮನೆಗೆ ಬಂದಾಗ ಮೊದಲು ಸುಮಂಗಲೆಯ ಮುಖವನ್ನು ತೋರಿಸಲಾಗುತ್ತದೆ. ನಂತರ ಮನೆ ದೇವರಿಗೆ ಪೂಜೆ ಮಾಡಿಸಲಾಗುತ್ತದೆ. ಈ ದಿನ ಬೆಳಿಗ್ಗೆಯಿಂದ ಪೂಜೆ ಮುಗಿಯುವವರೆಗೆ ಅವಳಿಗೆ ಉಪವಾಸ ವಿಡಲಾಗುತ್ತದೆ. ದೇವರ ಪೂಜಿಸಿದ ನಂತರ ಹುಡಿಗಿಯೊಂದಿಗೆ ಐದು ಮುತ್ತೈದೆಯರು ಸೇರಿ ಪಾಯಸ(ಸಿಹಿ)ದೊಂದಿಗೆ ಊಟವನ್ನು ಮಾಡುತ್ತಾರೆ.

ಅಂದು ಸಂಜೆ ಎಬ್ಬಿಸುವ ಕಾರ್ಯಕ್ರಮದಲ್ಲಿ ಮನೆಯ ಮುಂದೆ ಮಂಟಪವನ್ನು ಅಥವಾ ಶಾಮಿಯಾನವನ್ನು ಹಾಕಿಸಿ ಹೂವುಗಳಿಂದ ಶೃಂಗರಿಸಿ ಮೈನೆರೆದ ಹುಡುಗಿಯನ್ನು ಕೂಡಿಸಲು ವೇದಿಕೆಯನ್ನು ಸಿದ್ಧಪಡಿಸುತ್ತಾರೆ. ಹುಡುಗಿಯನ್ನು ಚೆನ್ನಾಗಿ ಅಲಂಕರಿಸಿ ಕೂರಿಸಲಾಗುತ್ತದೆ. ಬಂಧುಗಳು, ಸೋದರತ್ತೆಯವರು, ಸೋದರಮಾವನವರು ಅವಳಿಗೆ ಉಡುಗೊರೆಯ ರೂಪದಲ್ಲಿ ಹೊಸ ಬಟ್ಟೆಗಳು, ಒಡವೆಗಳು, ಬಳೆಗಳು ಹಾಗೂ ಅನೇಕ ಬಗೆಯ ಸಿಹಿ ತಿನಿಸುಗಳಾದ ಲಡ್ಡು, ಕಡುಬು, ಬಾದುಷಾ, ಮೈಸೂರುಪಾಕ್, ಜಿಲೇಬಿ, ಹೂವಿನ ಮಾಲೆ, ದಂಡೆ, ಎಲೆ ಅಡಿಕೆ, ಹೊತ್ತು ವಾದ್ಯಗಳೊಂದಿಗೆ ತರುವರು.

ಹುಡುಗಿಗೆ ಅರಿಶಿಣ, ಕುಂಕುಮ ಹಚ್ಚಿ ತಲೆಗೆ ಹೂವಿನ ದಂಡೆಯನ್ನು ಕಟ್ಟಿ ಕೊರಳಿಗೆ ಹೂವಿನ ಮಾಲೆಯನ್ನು ಮತ್ತು ಕೈಗಳಿಗೆ ಹಸಿರು ಬಳೆಗಳನ್ನು ತೊಡಿಸುವರು. ನಂತರ ತಂದಿರುವ

ಹೊಸ ಸೀರೆಯನ್ನುಡಿಸಿ ಉಡುಗೊರೆಯನ್ನು ಕೊಟ್ಟು ಆರತಿ ಎತ್ತುವರು. ಹೀಗೆಯೇ ಬಂದಂತ ಬಂಧುಬಾಂಧವರೆಲ್ಲರು ಹುಡುಗಿಯ ಸ್ನೇಹಿತೆಯರು ಅಕ್ಕಪಕ್ಕದ ನೆರೆಹೊರೆಯವರು ಆರತಿ ಎತ್ತಿ ತಂದಿರುವ ಉಡುಗೊರೆಯನ್ನು ಕೊಟ್ಟು ಊಟ ಮಾಡಿಕೊಂಡು ಸಂತೋಷದಿಂದ ಮನೆಗಳಿಗೆ ತೆರಳುವರು.

ಕಾರ್ಯಕ್ರಮ ಮುಗಿದ ನಂತರ ಎಲ್ಲರೂ ಊಟ ಮಾಡುವರು. ಕೆಲವರು ಮಾಂಸದಡುಗೆಯನ್ನು ಮಾಡಿಸಿದರೆ ಮತ್ತೆ ಕೆಲವರು ಸಿಹಿ ಭಕ್ಷ್ಯಭೋಜನವನ್ನು ಮಾಡಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಮನೆಯ ಅಕ್ಕಪಕ್ಕದ ನೆರೆಹೊರೆಯವರು ಇತರೆ ಸಮುದಾಯದವರು ಬರುವುದರಿಂದ ಸಸ್ಯಹಾರದ ಅಡುಗೆಯನ್ನು ಹೆಚ್ಚಾಗಿ ಮಾಡಿಸುತ್ತಾರೆ.

ಈ ಎಲ್ಲಾ ಕಾರ್ಯಕ್ರಮ ಮುಗಿದ ನಂತರ ಹುಡುಗಿಯನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಗಣೇಶ, ಶಿವನ ದೇವಸ್ಥಾನಕ್ಕೆ ಕರೆದುಕೊಂಡು ಹೋಗುವರು. ಹುಡುಗಿ ಮೈನೆರೆದ ದಿನ ಪಂಚಾಂಗ ಕೇಳಿಸಿದಾಗ ಯಾವುದಾದರೂ ದೋಷ ಕಂಡು ಬಂದರೆ ನವಧಾನ್ಯಗಳನ್ನು ಕಣದ ಬಟ್ಟೆಯನ್ನು ಇಲ್ಲವೆ ಯಾವುದಾದರೂ ಬ್ರಾಹ್ಮಣರು ಹೇಳಿದ ಬಣ್ಣದ ಬಟ್ಟೆಯಲ್ಲಿ ದಾನವಾಗಿ ಬ್ರಾಹ್ಮಣರಿಗೆ ದೋಷ ಪರಿಹಾರವಾಗಿ ನೀಡುತ್ತಾರೆ. ಇದರಿಂದ ಹುಡುಗಿಯ ಕನ್ಯಾ ದೋಷ ಪರಿಹಾರವಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಋತುಮತಿಯಾದವಳಿಗೆ ಇಲ್ಲಿ ಕೆಲವು ನಿಯಮ ನಿಷೇಧಗಳು ಕಂಡು ಬರುತ್ತವೆ. ಅವುಗಳೆಂದರೆ ಮೈನೆರೆದ ಹುಡುಗಿಯು ಮುಟ್ಟಾದ ಮೂರು ಇಲ್ಲವೆ ಐದು ದಿನಗಳವರೆಗೆ ಸಿಹಿಯಾದ ಅಡುಗೆಯನ್ನೆ ಊಟಮಾಡಬೇಕು. ಯಾವುದೆ ರೀತಿಯ ಖಾರವಾದ ಪದಾರ್ಥಗಳನ್ನು ತಿನ್ನುವಂತಿಲ್ಲ. ದೇವರ ಮನೆಗೆ ಕೊನೆಯ ನೀರು ಹಾಕಿಕೊಳ್ಳುವ ತನಕ ಹೋಗುವಂತಿಲ್ಲ. ಹೊರಗಿನವರ ಯಾರ ಕಣ್ಣಿಗೂ ಕಾಣದಂತೆ ಮನೆಯಲ್ಲಿಯೇ ಕುಳಿತುಕೊಳ್ಳಬೇಕು. ಇತರೆ ಸಮುದಾಯದವರು ಸಹ ಈ ಮೈನೆರೆದ ಮನೆಯನ್ನು ಮೈಲಿಗೆಯೆಂದು ಭಾವಿಸಿ ಇವರ ಮನೆಯವರನ್ನು ಯಾರಿಗೂ ತಮ್ಮ ಮನೆಗಳಲ್ಲಿ ಪ್ರವೇಶ ನೀಡುವುದಿಲ್ಲ. ಹುಡುಗಿ ಮುಟ್ಟಾದ ಮನೆಯವರು ಐದು ದಿನದ ಬಳಿಕ ಮನೆಗೆ ಸುಣ್ಣ, ಬಣ್ಣ ಬಳಿದುಕೊಂಡು ಶುಚಿಗೊಳಿಸಿದ ನಂತರ ಇತರರು ಇವರನ್ನು ಮೈನೆರೆದ ಸೂತಕ ಹೋಯಿತೆಂದು ಪರಿಗಣಿಸುತ್ತಾರೆ.

೪.೧.೬. ವಿವಾಹ ಮತ್ತು ವಿಚ್ಛೇದನ

ಸಂಸ್ಕೃತಿಯೊಂದರ ಕನಿಷ್ಟತಮ ಘಟಕಗಳೆಂದರೆ ಗಂಡು ಮತ್ತು ಹೆಣ್ಣು. ಈ ಮೂಲಭೂತ ಸಾಂಸ್ಕೃತಿಕ ಘಟಕಗಳ ಪರಸ್ಪರ ವಿರುದ್ಧವಾದ ಮತ್ತು ಪೂರಕವಾದ ದೇಹ ರಚನೆ ಮತ್ತು ಸ್ವಭಾವಗಳನ್ನು ಹೊಂದಿದ್ದು, ಒಂದು ಬಗೆಯ ಸಮನ್ವಯತೆಯನ್ನು ಉದ್ದಕ್ಕೂ ಕಾಪಾಡಿಕೊಂಡು

ಬರುತ್ತವೆ. ಮದುವೆ ಮತ್ತು ಸಂತಾನದ ಮೂಲಕ ಈ ಘಟಕಗಳು ವಿಸ್ತರಣೆ ಹೊಂದುತ್ತವೆ. ಮದುವೆ ಎನ್ನುವುದು ಬರೀ ಲೈಂಗಿಕ ಕ್ರಿಯೆಗೆ ಮಾತ್ರ ಸೀಮಿತವಾದುದಲ್ಲ. ಅದು ತನ್ನ ಇಡೀ ಸಮುದಾಯ ವಂಶವನ್ನು ಭವಿಷ್ಯದ ಗಮನಕ್ಕೆ ಒಯ್ಯುವ ಮಹತ್ವದ ಬಾಂಧವ್ಯ ಆಗಿರುತ್ತದೆ. ಮನುಷ್ಯ ಈ ಪ್ರಕೃತಿಯಲ್ಲಿರುವ ಜೀವಸಂಕುಲ ಮರಗಿಡಗಳೇ ಆಗಲಿ ತಾವು ಅಳಿಯುವ ಮುನ್ನ ಈ ಪ್ರಕೃತಿಗೆ ತಮ್ಮ ಕೊಡುಗೆಯನ್ನು ಕೊಟ್ಟು ಋಣಮುಕ್ತವಾಗುತ್ತವೆ ಹೀಗೆ ಮನುಷ್ಯ ಸಹ ತನ್ನ ನಂತರ ಈ ಪ್ರಕೃತಿಯಲ್ಲಿ ತನ್ನ ಸಂತಾನವನ್ನು ಮರಳಿ ಇಲ್ಲಿ ಉಣಿಸಿ ಬೆಳೆಸಿ ತಾನು ಅಳಿದು ಮತ್ತೆ ಈ ಪ್ರಕೃತಿಯಲ್ಲಿ ತನ್ನ ಚಹರೆಯನ್ನು ತನ್ನ ವಂಶಾವಳಿಯ(ಸಂತಾನ) ಮೂಲಕ ಬಿಟ್ಟು ಹೋಗಿರುತ್ತಾನೆ. ಹೀಗೆ ಪ್ರತಿಯೊಂದು ಜೀವರಾಶಿಯು ಸಮತೋಲನವನ್ನು ಕಾಯ್ದುಕೊಳ್ಳುವ ಕ್ರಿಯೆ ಈ ಪ್ರಕೃತಿಯಲ್ಲಿ ಸಹಜವಾದದು. ಈ ರೀತಿಯಾಗಿ ಸೃಷ್ಟಿ ಕ್ರಿಯೆಯಲ್ಲಿ ವ್ಯಕ್ತಿಯ ಆಸೆ, ಆಕಾಂಕ್ಷೆ ಅಥವಾ ಲೈಂಗಿಕ ತೃಪ್ತಿ ಮಾತ್ರ ಅಡಕವಾಗಿರದೆ ಈ ಮದುವೆ ಎಂಬ ಪವಿತ್ರ ಬಂಧನದ ಮೂಲಕ ಸಮಾಜದಲ್ಲಿ ಗೌರವದೊಂದಿಗೆ ಬಾಳುವ ತನ್ನ ವಂಶಾಭಿವೃದ್ಧಿಯನ್ನು ಮಾಡುವಲ್ಲಿ ಮದುವೆ ಎಂಬ ಮೂರಕ್ಷರದ ಈ ಬಂಧನವು ತನ್ನದೇ ಆದ ಮಹತ್ವವನ್ನು ಪಡೆದಿದೆ. ಖಾಟಿಕ್ ಸಮುದಾಯದಲ್ಲಿ ಮದುವೆಯನ್ನು ತುಂಬಾ ವಿಶಿಷ್ಟವಾಗಿ ಆಚರಿಸಲಾಗುತ್ತವೆ.

ಮದುವೆಯ ಸಂದರ್ಭದಲ್ಲಿ ಕೆಲವು ಮುಖ್ಯವಾದ ವಿಧಿ ನಿಷೇಧಗಳಿವೆ. ಅವುಗಳೆಂದರೆ ಒಂದೇ ಬೆಡಗಿನಲ್ಲಿ ವಿವಾಹವಾಗುವುದಿಲ್ಲ. ಬೇಸ ಬೆಡಗಿನಲ್ಲಿ ವಿವಾಹಗಳನ್ನು ಮಾಡಬಹುದು. ಸಹೋದರ ಮತ್ತು ಸಹೋದರಿಯರೊಂದಿಗೆ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ದೊಡ್ಡಪ್ಪ, ದೊಡ್ಡಮ್ಮನ ಮಕ್ಕಳೊಂದಿಗೆ ವಿವಾಹವಾಗುವುದಿಲ್ಲ. ಸೋದರತ್ತೆ ಸೋದರಮಾವನವರ ಮಕ್ಕಳೊಂದಿಗೆ ವಿವಾಹವಾಗುವ ಅವಕಾಶವಿದೆ.

ಕೆಲವೊಮ್ಮೆ ಈ ಸಮುದಾಯದಲ್ಲಿ ಮನೆದೇವರುಗಳು ಒಂದೇ ಇರುವಂತಹ ಸಂದರ್ಭದಲ್ಲಿ ಮುದವೆಯಾಗುವುದಿಲ್ಲ. ಹಾಗೆಯೇ ಕೆಲವೊಂದು ಮನೆ ದೇವರ ಹೆಣ್ಣು ಮಕ್ಕಳನ್ನು ತರುವುದಿಲ್ಲ. ಉದಾಹರಣೆಗೆ ಮೈಲಾರಲಿಂಗ, ಈರಣ್ಣ, ಮಲ್ಲಯ್ಯ ಹೀಗೆ ಹತ್ತು ಹಲವು ವಿಧಿ-ನಿಷೇಧಗಳನ್ನು ಗಮನಿಸಿ ತಮಗೊಪ್ಪಿದ ಹೆಣ್ಣನ್ನು ತರುವರು. ವರದಕ್ಷಿಣೆ ಈ ಸಮುದಾಯದಲ್ಲಿ ರೂಢಿಯಲ್ಲಿರುವುದು. ಸಾವಿರಗಳಿಂದ ಲಕ್ಷಗಳವರೆಗೆ ವರೋಪಚಾರದ ಮಾತಿನಲ್ಲಿ ವರದಕ್ಷಿಣೆಯ ವ್ಯವಹಾರ ಪ್ರಾರಂಭವಾಗುತ್ತದೆ. ಚಿಕ್ಕ ವ್ಯಾಪಾರಗಳನ್ನು ಹೊಂದಿರುವವರು ತಮ್ಮ ಮಕ್ಕಳ ಮದುವೆಗೆ ವರದಕ್ಷಿಣೆಯನ್ನು ಜೊಡಿಸಲು ಸಾಲಕ್ಕೆ ಮೊರೆ ಹೋಗುತ್ತಾರೆ. ಉತ್ತಮ ವಯಸ್ಸಿನಲ್ಲಿ ಮಕ್ಕಳ ಮದುವೆಯನ್ನು ಮಾಡುವ ಪ್ರತಿಯೊಂದು ಕುಟುಂಬದ ಕನಸಾಗಿರುವುದರಿಂದ ಇವರು ಹೆಣ್ಣು ಮಗಳು ಮದುವೆಯಾದರೆ ಸಾಕು ಎಂದು ಸಾಲಕ್ಕೆ ಅಂಜುವುದಿಲ್ಲ. ಹೆಚ್ಚಿನ ಬಡ್ಡಿಗೆ ತಮ್ಮ

ಆಸ್ತಿಪಾಸ್ತಿಗಳಾದ ಮನೆ, ಭೂಮಿಗಳನ್ನು ಒತ್ತೆಯಿಟ್ಟು ಮದುವೆಯ ಕಾರ್ಯಕ್ರಮ, ಸಂಪ್ರದಾಯಗಳನ್ನು ವಿಜೃಂಭಣೆಯಿಂದ ನೆರವೇರಿಸುತ್ತಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವು ಬಡಕುಟುಂಬಗಳು ಈ ವರದಕ್ಷಿಣೆಯ ವಿಚಾರವಾಗಿ ತಮ್ಮ ಅಳಲನ್ನು ತೋಡಿಕೊಂಡರು. "ಕುರಿ, ಕೋಳಿ ಮಾಂಸ ಮಾರುವವರು, ಲಕ್ಷ ಕೇಳ್ತಾರಿ ಎಲ್ಲಿಂದ ತರೋದು. ನಮ್ಮ ಜಾತಿಯವರು ವರದಕ್ಷಿಣೆಯನ್ನು ತಗೋಳದು ಬಿಡಬೇಕು. ಆದಷ್ಟು ಕಡಿಮೆ ತೊಗೊಂಡರೆ ಬಾಳಾ ಚಲೋ ಆಗ್ತದೆ. ನಮ್ಮ ಹೆಣ್ಣು ಮಕ್ಕಳ ಮದುವೆಯಲ್ಲಿ ಕಡಿಮೆ ವರದಕ್ಷಿಣೆ ತೆಗೆದುಕೊಂಡರೆ ಮದುವೆಯನ್ನು ಚೆನ್ನಾಗಿ ಮಾಡಿಕೊಡಬಹುದು. ಸಾಲಸೋಲ ಮಾಡಿ ನಮ್ಮ ಮಟನ್ ವ್ಯಾಪಾರದಿಂದ ದುಡಿಯೋದು ಎಷ್ಟು ಅಂತ ಮಕ್ಕಳ ಮದುವೆಗೆ ಕೂಡಿಡೋದು. ನಾವು ನಮ್ಮ ಸಂಸಾರ ಸಾಗಿಸೋದು ತ್ರಾಸು ಆಗ್ತದೆ. ಅದಕ್ಕೆ ವರದಕ್ಷಿಣೆಯನ್ನು ತೆಗೆದು ಬಿಡಬೇಕು ಅಂತ ಬರೀರಿ" ಎಂದರು.

ಹೀಗೆ ವರದಕ್ಷಿಣೆ ಈ ಸಮುದಾಯದಲ್ಲಿ ಅತ್ಯಂತ ದೊಡ್ಡ ಪಿಡುಗಿನಂತೆ ಪಸರಿಸಿದೆ. ಇದು ವಾಸಿಯಾಗಲಿಕ್ಕೆ ಏನು ಮಾಡಬೇಕು? ವಿದ್ಯಾವಂತರು ತುಂಬಾ ಕಡಿಮೆ ಇರುವ ಈ ಸಮುದಾಯದಲ್ಲಿ, ವಿದ್ಯಾವಂತರಾಗಿ ಯಾವುದಾದರೂ ಚಿಕ್ಕ ನೌಕರಿಯಲ್ಲಿದ್ದರಂತು ಆಯ್ತು, ಆ ಹುಡುಗನಿಗೆ ಪೈಪೋಟಿಯಲ್ಲಿ ಹೆಣ್ಣು ಹೆತ್ತವರು ವರದಕ್ಷಿಣೆ ಹೆಚ್ಚಾದರು ಪರವಾಗಿಲ್ಲ ಸಾಲ, ಆಸ್ತಿ-ಪಾಸ್ತಿ ಮಾರಾಟ ಮಾಡಿಯಾದರು ನಮ್ಮ ಅಳಿಯನನ್ನಾಗಿ ಮಾಡಿಕೊಳ್ಳಬೇಕು ಎಂಬಂತಹ ಪೈಪೋಟಿಯನ್ನು ಸಹ ಈ ಸಮುದಾಯದಲ್ಲಿ ಕಾಣುತ್ತೇವೆ.

ಒಪ್ಪಿಗೆ ಮತ್ತು ಇಳೇವು : ಖಾಟಿಕ್ ಸಮುದಾಯದಲ್ಲಿ ಹಿಂದೆ ಹಿರಿಯರು ತಮ್ಮ ಇಷ್ಟದಂತೆ ಒಪ್ಪಿಗೆಯಾದ ಗಂಡನ್ನು ಅಥವಾ ಹೆಣ್ಣನ್ನು ತಮ್ಮ ಮಕ್ಕಳಿಗೆ ಒಪ್ಪಿಗೆ ಇದೆ ಎಂಬಂತೆ ತಾವೇ ತೀರ್ಮಾನಿಸಿ ನಿಶ್ಚಯ ಮಾಡುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಹೆಣ್ಣನ್ನು ಮತ್ತು ಗಂಡನ್ನು ಪರಸ್ಪರ ತೋರಿಸುತ್ತಾರೆ. ಇದಕ್ಕು ಮುಂಚೆ ಮನೆಯವರೆಲ್ಲ ಹುಡುಗಿಯನ್ನು ನೋಡಿಕೊಂಡು ಬರುತ್ತಾರೆ. ನಂತರ ಹುಡುಗನನ್ನು ಹುಡುಗಿಗೆ ತೋರಿಸಿಕೊಂಡು ಬರುತ್ತಾರೆ. ಹುಡುಗ ಹುಡುಗಿಯ ಜಾತಕ ಪಂಚಾಗವನ್ನು ನೋಡಿ ಕೂಡಿ ಬಂದರೆ ಮದುವೆಯ ಮಾತನ್ನು ಮುಂದುವರಿಸುತ್ತಾರೆ. ಒಂದು ಶುಭ ಮುಹೂರ್ತದಂದು ಹುಡುಗಿಗೆ ಹೂ ಮೂಡಿಸಿ ಬಳೆ ತೊಡಿಸಿ ಕಾಲುಚೈನ್ ಎರಡು ಕಣದ ಬಟ್ಟೆ ಕೊಟ್ಟು ಶೃಂಗಾರದ ವಸ್ತುಗಳಾದ ರಿಬ್ಬನ್, ಬಳೆ, ಪೌಡರ್, ಬಿಂದಿ ಮುಂತಾದವನ್ನು ನೀಡಿ ಈ ಹುಡುಗಿ ಈಗ ನಮ್ಮವಳು ಎಂದು ತಿಳಿಸಲಿಕ್ಕೆ ಆ ಹುಡುಗಿಯ ಬೆಡಗನ್ನು ಬಿಟ್ಟು, ತಮ್ಮ ಬೆಡಗಿನವಳು ಎಂದು ಘೋಷಿಸುತ್ತಾರೆ. ಅಂದರೆ ಕಣದ ಬಟ್ಟೆಯನ್ನು ಹುಡುಗಿಯ ಬಲ ತೋಳಿಗೆ ಸುತ್ತಿ ಅರಿಷಿಣದಿಂದ ಈ ರೀತಿ ಹೇಳುತ್ತ

ಉದಾಹರಣೆಗೆ "ಬಿಡಕಿಕಾರಿ ಕಿ ಬೆಟಿ ಬುಜರ್‌ಕರ್ ‌ಕಿ ಬಹು" ಎಂದು ಅರಿಶಿಣ ಊದುತ್ತಾರೆ. ಉಳಿದ ಹೆಂಗಳೆಯರು ಹೂ ಮುಡಿಸಿದ ಅರಿಶಿಣ ಊದಿದ ಹೆಣ್ಣು ಮಗಳ ಬೆನ್ನನ್ನು ತಟ್ಟುತ್ತಾರೆ. ಉಳಿದವರು ಮತ್ತೆ ಹುಡುಗಿಗೆ ಅರಿಶಿಣ ಊದುತ್ತ ಆರತಿಯನ್ನು ಎತ್ತುವರು. ಈ ಕ್ರಿಯೆ ಹೆಣ್ಣನ್ನು ತಮ್ಮವಳನ್ನಾಗಿ ತಮ್ಮ ಸೊತ್ತು ಎಂದು ಗೊತ್ತುಪಡಿಸಿ ಕೊಳ್ಳುವಿಕೆಯಾಗಿದೆ. ನಂತರ ಒಂದು ಶುಭದಿನವನ್ನು ಗೊತ್ತುಪಡಿಸಿ ಬ್ರಾಹ್ಮಣ ಪುರೋಹಿತನನ್ನು ಕರೆಯಿಸಿ ಲಗ್ನಪತ್ರಿಕೆಯನ್ನು ತಯಾರು ಮಾಡುವ ಕಾರ್ಯ ಮಾಡುತ್ತಾರೆ. ಮುಖ್ಯವಾಗಿ ಈ ಸಮುದಾಯದಲ್ಲಿ ಬ್ರಾಹ್ಮಣ ಪುರೋಹಿತರು ಮದುವೆಯನ್ನು ನೆರವೇರಿಸುತ್ತಾರೆ. ಮದುವೆಯ ಪ್ರಾರಂಭದಿಂದ ಮುಗಿಯುವವರೆಗೂ ಬ್ರಾಹ್ಮಣ ಪುರೋಹಿತನ ನಿರ್ದೇಶನದಂತೆ ಮದುವೆ ನಡೆಯುತ್ತದೆ. ಲಗ್ನಪತ್ರಿಕೆ ತಯಾರಿಸುವಾಗ ತುಂಬಾ ಅಚ್ಚುಕಟ್ಟಾಗಿ ಮನೆಯನ್ನು ಸಾರಿಸಿ ಶುಚಿಗೊಳಿಸಿ ಈ ಕಾರ್ಯ ಮಾಡುವರು. ಲಗ್ನಪತ್ರಿಕೆಯನ್ನು ತಯಾರು ಮಾಡುವುದಕ್ಕೆ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಹೋಗುತ್ತಾರೆ. ಆಗ ಅವರಿಗೆ ಊಟ ಉಪಚಾರ ಮಾಡಿಸಿ ಸಾಮಾನ್ಯವಾಗಿ ಸಾಯಂಕಾಲ ಲಗ್ನಪತ್ರಿಕೆ ಕಾರ್ಯವಿರುತ್ತದೆ. ಪುರೋಹಿತರನ್ನು ಮನೆಗೆ ಕರೆಯಿಸಿ ಹುಡುಗ ಹುಡುಗಿಯ ಜಾತಕ ಕೊಡುತ್ತಾರೆ. ಆಗ ಪುರೋಹಿತ ಹುಡುಗ ಹುಡುಗಿಯ ಜಾತಕವನ್ನು ನೋಡಿ ಒಂದು ಶುಭದಿನದಂದು ಮದುವೆಯನ್ನು ನಿಶ್ಚಯ ಮಾಡುತ್ತಾನೆ. ಆಗ ಒಂದು ಹಾಳೆಯಲ್ಲಿ ಲಗ್ನಪತ್ರಿಕೆಯನ್ನು ಬರೆಯುತ್ತಾನೆ. ಮದುವೆಯ ದಿನ, ಸಮಯ, ಹುಡುಗ ಹುಡುಗಿಯ ಹೆಸರು ತಂದೆ ತಾಯಿಯ ಹೆಸರು, ಗೋತ್ರ ಎಲ್ಲವನ್ನು ಲಗ್ನಪತ್ರಿಕೆಯಲ್ಲಿ ಬರೆದು ಕೊಡುತ್ತಾನೆ. ಅದರ ಪ್ರಕಾರ ಲಗ್ನಪತ್ರಿಕೆಯನ್ನು ಹುಡುಗ ಹುಡುಗಿಯರ ಸಂಬಂಧಿಕರು ಮುದ್ರಿಸಿ ತಮ್ಮ ಬಂಧು ಬಳಗಕ್ಕೆ ಹಂಚುವರು. ಪುರೋಹಿತನು ಬರೆದ ಲಗ್ನಪತ್ರಿಕೆಯನ್ನು ಮದುವೆಯ ಸಂದರ್ಭದಲ್ಲಿ ಹುಡುಗನಿಗೆ ಮತ್ತು ಹುಡುಗಿಗೆ ಎರಡು ಕೊಬ್ಬರಿ ಬಟ್ಟಲು, ೨ ಅರಿಶಿಣದ ಕೊಂಬು, ಎಲೆ ಅಡಿಕೆ ಇಟ್ಟು ಉಡಿ ತುಂಬುತ್ತಾರೆ. ಲಗ್ನಪತ್ರಿಕೆ ಬರೆದ ನಂತರ ಪುರೋಹಿತರನ್ನು ಎಲೆ ಅಡಿಕೆ ಇಂತಿಷ್ಟು ಹಣವನ್ನು ಕೊಟ್ಟು ಕಳಿಸುತ್ತಾರೆ. ನಂತರ ಬೀಗರಿಬ್ಬರು ಸಕ್ಕರೆ ವೀಳ್ಯವನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ತಾವು ಪರಸ್ಪರ ತಂದ ಕರ್ಜಿಕಾಯಿ (೧೦೧) ಬುತ್ತಿಯನ್ನು ಬದಲಾಯಿಸಿಕೊಳ್ಳುತ್ತಾರೆ. ಇದೇ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಬೀಗರಿಗೆ ಎಲೆ ಅಡಿಕೆ ಸಿಹಿ ಬುತ್ತಿಗಂಟು ವರದಕ್ಷಿಣೆಯನ್ನು ನೀಡಿ ಕರ್ಜಿಕಾಯಿ ಬುತ್ತಿಗಂಟನ್ನು ಪರಸ್ಪರ ಬೀಗರು ತಲೆಯ ಮೇಲೆ ಹೊತ್ತುಕೊಂಡು ಮೂಗಿಗೆ ತುಪ್ಪವನ್ನು ಹಚ್ಚುತ್ತಾರೆ. ನಂತರದಲ್ಲಿ ನೆರದವರೆಲ್ಲಾ ಊಟ ಮಾಡಿ ಬೀಗರು ತಮ್ಮ ಹುಡುಗನ ಸಂಬಂಧಿಕರು ಮರಳಿ ತಮ್ಮ ಊರಿಗೆ ತೆರಳುತ್ತಾರೆ. ಇಲ್ಲಿಗೆ ಲಗ್ನಪತ್ರಿಕೆಯ ಕಾರ್ಯವು ಮುಗಿಯುತ್ತದೆ. ಲಗ್ನಪತ್ರಿಕೆ ಬರೆದರೆ ಅರ್ಧ ಮದುವೆ ಮುಗಿದಂತೆ ಲಗ್ನಪತ್ರಿಕೆ ಬರೆದ ನಂತರ ಎಂತಹ ಸಂದರ್ಭದಲ್ಲೂ ಮದುವೆಯನ್ನು ಮುರಿಯುವ ಹಾಗಿಲ್ಲ ಎಂದು ಹಿರಿಯರು ಹೇಳುತ್ತಾರೆ.

ಈರಪ್ಪ : ಇದನ್ನು ಈರಪ್ಪ, ಮುನೀಶ್ವರ ದೇವರ ಪೂಜೆ, ಗಿಡದೇವರ ಪೂಜೆ, ಅರಿಶಿಣ ಹಚ್ಚುವ ಕಾರ್ಯ ಎಂತಲೂ ಕರೆಯುವರು. ಈರಪ್ಪ ಗಂಡು ದೇವರ ಆರಾಧನೆಯಾಗಿರುವುದರಿಂದ ಗಂಡು ದೇವರ ವಾರದೆಂದು ಬುಧವಾರ ಇಲ್ಲವೆ, ರವಿವಾರ ಈ ಕಾರ್ಯಕ್ರಮ ಮಾಡುತ್ತಾರೆ. ಮದುವೆಯಾಗುವ ಕನ್ನೆಯನ್ನು ಮದುಮಗಳನ್ನಾಗಿಸುವ ಕಾರ್ಯವೇ ಈರಪ್ಪ. ಇದನ್ನು ಅರಿಶಿಣ ಹಚ್ಚುವ ಕಾರ್ಯ ಎಂತಲೂ ಕರೆಯುವರು. ಈ ಕಾರ್ಯವನ್ನು ಕೆಲವರು ಮನೆಯಲ್ಲೆ ಮಾಡಿದರೆ ಇನ್ನು ಕೆಲವರು ಹೊರಗಡೆ ದೇವಸ್ಥಾನದಲ್ಲೋ ಅಥವಾ ತೋಟದಲ್ಲಿ ಮಾಡುವರು. ಕೆಲವರು ಸಿಹಿಯಿಂದ ಮಾಡಿದರೆ ಕೆಲವರು ಕುರಿಬಲಿ ನೀಡಿ ಮಾಡುವರು.

ಈ ಕಾರ್ಯ ಮಾಡುವ ಮೊದಲು ಮನೆಯಲ್ಲಿ ಅರಿಶಿಣ ಕುಟ್ಟುವ ಕಾರ್ಯ ಜರುಗುತ್ತದೆ. ಈ ಸಂದರ್ಭದಲ್ಲಿ ಐದು ಸುಮಂಗಲೆಯರು ಒಳ್ಳು ಮತ್ತು ಒನಕೆಯನ್ನು ಅರಿಶಿಣ, ಕುಂಕುಮ ಹಚ್ಚಿ, ಹೂ ಮತ್ತು ತಾಂಬುಲವನ್ನು ಇಟ್ಟು ಅರಿಶಿಣದ ಕೊಂಬುಗಳನ್ನು ಒಳ್ಳಿನಲ್ಲಿ ಹಾಕಿ ಕುಟ್ಟುವರು. ಮದುವೆಯಾಗುವ ಕನ್ನೆಯು ಅರಿಶಿಣ ಕುಟ್ಟುತ್ತಾಳೆ. ನಂತರ ಈ ಅರಿಶಿಣವನ್ನು ಮುಂದೆ ಈರಪ್ಪ ಮಾಡಲು, ಪಟ್ಟಾ ಮಾಡುವಾಗ ಮದುವೆಯ ಸಂದರ್ಭದಲ್ಲಿ ಹಚ್ಚಲು ಉಪಯೋಗಿಸುತ್ತಾರೆ. ಅರಿಶಿಣ ಕುಟ್ಟುವಾಗ ಈ ರೀತಿ ಸಂಪ್ರದಾಯದ ಹಾಡನ್ನು ಹಾಡುವರು.

"ಹಲ್‌ದಿ ಮ್ಯೆ ಕೂಟುಂಗಿ ಸೋಫಾಪೂರಾಕಲ್ಲ
ಸುವಾಗಿನ್ ಹಾತಾಸೆ ಪುರಾವುಂಗಿ ಎ ಹಳ್ಳ
ಹಲ್‌ದಿ ಮ್ಯೆ ಕೂಟುಂಗಿ ಸೋಫಾ ಪೂರಾ ಪೀಲಾ
ಮಾ ತೇರೆ ನಗೀನ್ ಕೇ ವಕತ್ ಕೋ
ತಗಡ್ ಚಡ್ಯಾ ಹ್ಯೆ ಮ್ಯೆಲಾ"

ಹಮೆ ಸಾತೋ ಭಾನಾ ಮಿಲ್‌ಕೋ
ಪಾಲ್‌ಕಿ ಮೆ ಪಾನ್ ಖಾನಾ
ಜವಾಯ್ ಕಿ ಗಾಡಿಮೆ
ಪಾಯಲ್ ಕಿ ಬಹು ಲಾನಾ"

"ಹಮೆ ಸಾತೋ ಭಾನಾ ಮಿಲ್‌ಕೋ
ದರಿಯಾ ದೇಖಾನೇ ಜಾನಾ
ಈ ಹಾಡಿನ ಕನ್ನಡದ ಭಾವಾರ್ಥ ಹೀಗಿದೆ.
"ಅರಿಶಿಣ ಕುಟ್ಟುವಾಗ ಪಡಸಾಲೆಯೆಲ್ಲಾ
ಅರಿಶಿಣವಾಗಿ ಹರಡಿದೆ
ಮುತ್ತೈದೆಯವರೆಲ್ಲಾ ಸೇರಿ ಹರಳನ್ನು ಪೋಣಿಸೋಣ..."

ಮನೆಯಲ್ಲಿ ಮಾಡುವರು. ಎರಡು ತರಹದ ಸಿಹಿ ಅಡುಗೆಯನ್ನು ಮಾಡಿ ಅರಿಶಿಣದಿಂದ ಗಂಡು ದೇವರ ಮೂರ್ತಿಯನ್ನು ಮಾಡಿ ಅದರ ಮುಂದೆ ಮಾಡಿರುವ ಸಿಹಿ ಅಡುಗೆ, ಅನ್ನ, ಸಾಂಬಾರು, ಪಲ್ಯಗಳನ್ನು ಎಡೆಯಿಟ್ಟು ಮದುಮಗಳನ್ನು ಕೂರಿಸಿ ದೇವರಿಗೆ ಪೂಜೆ ಸಲ್ಲಿಸಿ ಮುತ್ತೈದೆಯವರೆಲ್ಲರೂ, ದೇವರಿಗೆ ಅರಿಶಿಣ ತೋರಿಸಿ ಒಳ್ಳೆಯದಾಗಲೆಂದು ಮದುಮಗಳಿಗೆ ಹಚ್ಚುವರು. ನಂತರ ಉಳಿದ ಬಂಧುಬಳಗದವರು ಅರಿಶಿಣ ಹಚ್ಚುವ ಕಾರ್ಯವನ್ನು ಮಾಡುತ್ತಾರೆ. ನಂತರ ಮನೆಯಲ್ಲಿ ಮಾಡಿರುವ ಸಿಹಿಯನ್ನು ಊಟ ಮಾಡುವರು.

ಇನ್ನು ತೋಟದಲ್ಲಿ ಮಾಡುವವರು ಜಾಲಿ ಮರದ ಮುಂದೆ ಒಂದು ಹೊಸ ಬಿಳಿ ಬಟ್ಟೆ ಹಾಸಿ ಅದರ ಮೇಲೆ ಐದು ಚಿಕ್ಕ ಕಲ್ಲುಗಳನ್ನಿಟ್ಟು, ಅದಕ್ಕೆ ಸುಣ್ಣ ಹಚ್ಚಿ, ಅರಿಶಿಣ, ಕುಂಕುಮ ಹಚ್ಚಿ ಮರದ ಮುಂದೆ ಒಂದು ಚಿಕ್ಕ ಬಾಸಿಂಗವನ್ನು ಕಟ್ಟುವರು. ಹಾಗೆಯೆ ಹೂವಿನ ಎರಡು ಬೀಸಣಿಕೆಯನ್ನು ಅಕ್ಕಪಕ್ಕ ಇಡುವರು. ಎರಡು ಹೂವಿನ ತೊಟ್ಟಿಲು ಕಟ್ಟುವರು. ಒಂದು ಚಿಕ್ಕ ಜಾಲಿ ಮರದ ಕೊಂಬೆಯನ್ನು ದೇವರೆಂದು ಇಡುವರು (ಬೇರೆ ಮರಗಳಿರುವ ಸಂದರ್ಭದಲ್ಲಿ ಜಾಲಿಮರ ಇಲ್ಲದಾಗ ಜಾಲಿ ಮರದ ಕೊಂಬೆಯನ್ನಿಟ್ಟು ಪೂಜಿಸುವರು). ಈ ದೇವರ ಮುಂದೆ ಎರಡು ಕೊಬ್ಬರಿ ಬಟ್ಟಲುಗಳಲ್ಲಿ ಅಕ್ಕಿ, ೨ ಉತ್ತತ್ತಿ, ೨ ಅಡಿಕೆ, ೨ ಅರಿಶಿಣ ಕೊಂಬು, ಸ್ವಲ್ಪ ಬೆಲ್ಲದ ತುಂಡು ಇಡುತ್ತಾರೆ. ಹಾಗೆಯೇ ದೇವರಿಗೆ ಎಡೆಯೆಂದು ಕುರಿಯ ಮುಖವನ್ನು ಅದರ ಬಲ ಕಾಲನ್ನು ಕತ್ತರಿಸಿ ಬಾಯಲ್ಲಿಟ್ಟು ಆ ಕುರಿಯ ಮುಖದ ತಲೆಯ ಮೇಲೆ ಎರಡು ಸಜ್ಜಿ ಹೋಳಿಗೆ ಸಜ್ಜಿಯಿಂದ ಮಾಡಿದ ಪಣತಿಯನ್ನು ಇಡುತ್ತಾರೆ. ಮಧ್ಯವನ್ನು ಏರಿಸುತ್ತಾರೆ ಮತ್ತು ಕುರಿಯ ಬಲಭಾಗದ ಪಕ್ಕೆ ಮಾಂಸದ ತುಂಡನ್ನು ಏರಿಸುತ್ತಾರೆ. ಇಡುತ್ತಾರೆ. ಎಡೆಯಲ್ಲಿ ಅನ್ನ ಮಾಂಸದ ಸಾರು ತುಂಡು ಕಲೀಜದ ಪೂರ್ತಿ ಭಾಗವನ್ನು ಕುದಿಸಿ, ಸಜ್ಜಿ ಹೋಳಿಗೆಯನ್ನು ಇಡುವರು. ಕರಿಕಂಬಳಿ ಮೇಲೆ ಕುಳಿತ ಮದುಮಗಳು ಅರಿಶಿಣ ಕುಂಕುಮವನ್ನು ದೇವರಿಗೆ ಏರಿಸಿ ಊದಿನಕಡ್ಡಿ ಹಚ್ಚಿ ಕಾಯಿ ಒಡೆದು ಕರ್ಪೂರದ ಆರತಿ ಮಾಡುತ್ತಾಳೆ. ಇಲ್ಲವೆ ಯಾರಾದರು ಸುಮಂಗಲೆ ಈ ಕಾರ್ಯವನ್ನು ಮಾಡಿ ದೇವರಿಗೆ ಅರಿಶಿಣ ತೋರಿಸಿ ಒಳ್ಳೆಯದಾಗಲಿ ಎಂದು ಕನ್ಯೆಗೆ ಆ ಅರಿಶಿಣ ಹಚ್ಚಿ ಮದುಮಗಳನ್ನಾಗಿ ಮಾಡುತ್ತಾರೆ. ನಂತರ ಉಳಿದ ಬಂಧುಬಳಗ ಕನ್ಯೆಗೆ ಅರಿಶಿಣ ಹಚ್ಚುತ್ತಾರೆ. ಪರಸ್ಪರ ಎಲ್ಲರೂ ಅರಿಶಿಣದ ಆಟ ಆಡುತ್ತಾರೆ.

ದೇವರಿಗೆ ಪೂಜೆ ಮಾಡಿದ ತಕ್ಷಣ ದೇವರಿಗೆ ಏರಿಸಿದ ಅಲಸಂದಿ ಕಾಳು ಜೋಳದ ಹಿಟ್ಟಿನಿಂದ ಮಾಡಿದ ಉಂಡೆಯನ್ನು ಬಿಟ್ಟು, ಉಳಿದ `ಉಂಡೆ, ಅಲಸಂದಿ ಕಾಳನ್ನು ತೆಗೆದುಕೊಂಡು ಐದು ಹೋಳಿಗೆಯನ್ನಿಟ್ಟು ಎಲೆ ಅಡಿಕೆ ಇಟ್ಟು ಕನ್ಯೆಗೆ ಉಡಿ ತುಂಬುತ್ತಾರೆ. ನಂತರ ಉಳಿದ ಅಲಸಂದಿ ಕಾಳು ಮತ್ತು ಜೋಳದ ಹಿಟ್ಟಿನ ಉಂಡೆಯನ್ನು ಎಲ್ಲರಿಗೂ ಹಂಚುತ್ತಾರೆ. ಹಾಗೆಯೇ

ಐದು ಮುತ್ತೈದೆಯರಿಗೆ ಉಡಿ ತುಂಬುತ್ತಾರೆ. ನಂತರ ಆ ಮುತ್ತೈದೆಯರು ತಮ್ಮ ಉಡಿಗಳನ್ನು ಬದಲಾಯಿಸಿಕೊಳ್ಳುವರು.

ಎಲ್ಲ ಬಂಧುಗಳು ಊಟ ಮಾಡಿದ ನಂತರ ದೇವರ ಎಡೆ ಎಲ್ಲವನ್ನು ಅಗಸರು ಒಯ್ಯುತ್ತಾರೆ. ಎಲ್ಲ ಬಂಧುಗಳು ಹೋದ ನಂತರ ಅಗಸ ಬಂದು ಕುರಿಯ ಹೊಟ್ಟೆಯಲ್ಲಿನ ಕಸರು ಕಳ್ಳು ತೊಗೊಂಡು ಮದುಮಗಳಿಗೆ ಮಧ್ಯೆ ಕೂಡಿಸಿಕೊಂಡು ಎಲ್ಲ ಒಂದೇ ಮನೆಯವರು ಅಂದರೆ ಒಂದೇ ಬೆಡಗಿನವರು ಅಣ್ಣ ತಮ್ಮ ಬಂಧುಗಳೆಲ್ಲ ಸೇರಿ ಗುಂಪಾಗಿ ಕುಳಿತುಕೊಂಡಿರುತ್ತಾರೆ. ಅವರಿಗೆ ಕಂಬಳಿ ಹೊದಿಸಿ ಅಗಸ ಕಸರು ಕಳ್ಳು ತೊಗೊಂಡು ಕುಳಿತವರ ಸುತ್ತ ಹುಲುಗ್ಯಾ ಹುಲುಗ್ಯಾ ಎಂದು ಕೂಗುತ್ತ ಅದನ್ನು ತೆಗೆದು ಬಿಸಾಕುತ್ತಾನೆ. ನಂತರ ಎಲ್ಲರೂ ಎದ್ದು ಮುಖ ತೊಳೆದುಕೊಳ್ಳುವರು. ಇದು ಯಾರಿಗೂ ದೃಷ್ಟಿಯಾಗಬಾರದು ಎಂಬುದನ್ನು ಸೂಚಿಸುತ್ತಿರುವ ಸಂಕೇತವಾಗಿದೆ.

ಈರಬಾ, ಈರಪ್ಪ, ಮುನೀಶ್ವರ ದೇವರ ಪೂಜೆ ಎಂದು ಈ ಕಾರ್ಯಕ್ರಮಕ್ಕೆ ಹೇಳುವರು.

ಕೊನೆಯಲ್ಲಿ ದೇವರಿಗೆ ಏರಿಸಿದ ಒಂದು ಚಿಕ್ಕ ಚಾಕುವಿನಲ್ಲಿ ನಿಂಬೆಹಣ್ಣು ಚುಚ್ಚಿ ಮದುಮಗಳ ಮದುವೆಯಾಗುವವರೆಗೂ ತನ್ನ ಹತ್ತಿರ ಇಟ್ಟುಕೊಂಡಿರುತ್ತಾಳೆ. ಯಾಕೆಂದರೆ ಯಾವ ದುಷ್ಟಶಕ್ತಿಗಳು ಇವಳ ಹತ್ತಿರ ಸುಳಿಯಬಾರದು ಎಂಬುದು ಮತ್ತು ದೃಷ್ಟಿ ತಗಲಬಾರದು ಎಂಬುದಕ್ಕೆ ನಿಂಬೆಹಣ್ಣನ್ನು ಚಾಕುವಿನಲ್ಲಿ ಚುಚ್ಚಿ ಕೈಯಲ್ಲಿ ಕೊಟ್ಟಿರುತ್ತಾರೆ.

ಮಾನಕರ್ ಗೋತ್ರದವರು ಈರಪ್ಪ ದೇವರ ಜೊತೆ ರಾಣೆಭಟ್ಟಿಮಾ ಪೂಜೆಯನ್ನು ಮಾಡುತ್ತಾರೆ. ರಾಣೆಭಟ್ಟಿಮಾ ಎಂದರೆ ಗರ್ಭಧರಿಸಿದ ಮೇಕೆಯನ್ನು ಕೊಯ್ದು, ಸೀರೆ, ಕುಪ್ಪಸವನ್ನು ಏರಿಸಿ ಚಿಕ್ಕ ಕನ್ನಡಿ, ಬಾಚಣಿಕೆ(ಗೌರಮ್ಮನ ಸಾಮಾನು) ಗರ್ಭದಲ್ಲಿರುವ ಮರಿಯ ಮಾಂಸವನ್ನು ಎಡೆಮಾಡಿ ಭಟ್ಟಿಮಾಗೆ ಈರಪ್ಪಗೆ ಮಾಡುವ ಹಾಗೆ ಪೂಜೆ ಮಾಡುವರು. ಈರ ದೇವರ ನಂತರ ಪೀರ ದೇವರು ಎಂದು ಮುಸ್ಲಿಂ ದೇವರಗಳನ್ನು ಪೂಜಿಸಿ ನಂತರ ಮನೆಯನ್ನು ಸುಣ್ಣ, ಬಣ್ಣಗಳಿಂದ ಶುಭ್ರವಾಗಿಸಿ ಮದುವೆ ಮನೆಯನ್ನಾಗಿ ಶೃಂಗಾರಿಸುತ್ತಾರೆ. ಪೀರ ದೇವರ ನಂತರ ಮನೆಯಲ್ಲಿ ಮದುವೆ ಆಗುವವರೆಗೆ ಯಾವುದೇ ರೀತಿಯ ಮಾಂಸದಡುಗೆಯನ್ನು ಮಾಡುವಂತಿಲ್ಲ.

ಪೀರ : ಮಾಬುಸುಬಾನಿ, ಹೊನ್ನೂರ ಅಲಿ, ರಾಜಾಭಕ್ಷಾರ್, ಮರ್ದಾನೆ ಗಾಯಬ್, ದಾವಲ್‌ಮಾಲಿಕ್ ಹೀಗೆ ಹಲವಾರು ಮುಸ್ಲಿಂ ದೇವರಿಗೆ ಸಿಹಿ ಅನ್ನ ಹಾಗೂ ಪಲಾವ್, ಮಾಂಸದ ಸಾರು ಎಡೆಮಾಡಿ ಮುಲ್ಲಾ ಅಥವಾ ಫಕೀರ್‌ನಿಂದ ಓದಿಕೆ ಮಾಡಿಸಿ ಲೋಬಾನ ಹಾಕಿಸಿ ಮನೆಯವರೆಲ್ಲಾ ದೇವರಿಗೆ ನಮಸ್ಕರಿಸಿ ಕೈ ಮುಗಿಯುವರು. ಈ ರೀತಿ ಹಿಂದು ಮತ್ತು ಮುಸ್ಲಿಂ ಆಚರಣೆಗಳ ಸಮಾಗಮ ಹೊಂದಿರುವ ಈ ಸಮುದಾಯ ಇಂದಿನ ಕೋಮುಗಲಭೆಗಳು, ರಾಜಕೀಯ

ಪರಿಸ್ಥಿತಿಗಳಲ್ಲಿ ಒಂದು ಕ್ಷಣ ನಿಬ್ಬೆರಗಾಗುವಂತೆ ಮಾಡುತ್ತದೆ. ಈ ರೀತಿಯ ಈರ ಮತ್ತು ಪೀರಾ ಎಂದು ಹಿಂದು-ಮುಸ್ಲಿಂ ದೇವತೆಗಳ ಆಶೀರ್ವಾದ ಪಡೆದು ಮದುವೆಯ ಸಿದ್ಧತೆಗಳು ನಡೆಯುತ್ತವೆ.

ಸ್ವಚ್ಛಗೊಳಿಸಿದ ಮನೆಯಲ್ಲಿ ಮನೆದೇವರ ಪೂಜೆ, ಲಕ್ಷ್ಮಿ ಪೂಜೆ, ಪಡ್ಲಿಗಿ ತುಂಬುವುದು, ಕರಿ ಲಕ್ಷ್ಮಿ, ಕೆಂಪು ಲಕ್ಷ್ಮಿ, ಬಿಳಿ ಲಕ್ಷ್ಮಿ, ಯಲ್ಲಮ್ಮ, ಉಚ್ಚಂಗೆಮ್ಮ, ಹುಲಿಗೆಮ್ಮ, ಗಾಳೆಮ್ಮ, ಮೈಲಾರ ಗೊರವಪ್ಪನವರು, ದಾಸಯ್ಯರನ್ನು ಕರೆಯಿಸಿ ಪೂಜೆಸಲ್ಲಿಸುವುದು. ಹೀಗೆ ಅನೇಕ ಬಗೆಯ ಪೂಜೆಗಳು ಮದುವೆಯ ದಿನದವರೆಗೆ ದಿನನಿತ್ಯ ನಡೆಯುತ್ತಲೆ ಇರುತ್ತವೆ.

ಖಾಟಿಕ್ ಸಮುದಾಯದ ಒಳಪಂಗಡವಾದ ದೊಡ್ಡಗಂಗಾಳದ ಬುಜರಕರ್ ಬೆಡಗಿನಲ್ಲಿ ಕಂಡುಬರುವ ವಿಶಿಷ್ಟ ಆಚರಣೆಗಳು.

ಹುಲಿಗೆಮ್ಮನ ಪೂಜೆ (ಭಾಕಾ) : ಪ್ರತಿಯೊಬ್ಬರು ಮನೆದೇವರ ಜೊತೆ ಒಂದು ಹೆಣ್ಣು ದೇವತೆಯನ್ನು ಪೂಜಿಸುವುದು ಈ ಸಮುದಾಯದಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಹುಲಿಗೆಮ್ಮ, ಎಲ್ಲಮ್ಮ, ಸುನಾಮ ಜಕನಿ ದೇವತೆಗಳನ್ನು ಪೂಜಿಸುವುದು ಕಂಡುಬರುತ್ತದೆ.

ಒಂದು ತಂಬಿಗೆ ತುಂಬಾ ನೀರನ್ನು ತುಂಬಿ ಜೋಳದ ಮೇಲಿಟ್ಟು ತಂಬಿಗೆ ಮೇಲೆ ಒಂದು ತೆಂಗಿನ ಕಾಯಿ ಇಟ್ಟು ಅದರ ಮೇಲೆ ಸೀರೆ ಕುಪ್ಪಸ ಜೋಡಿಸಿ ದೇವರ ಮುಂದೆ ಅನ್ನ, ಬದನೆ ಕಾಯಿ ಪಲ್ಯೆ, ಸಾರು ಅಲಸಂದಿಕಾಳು, ಜೊಳದ ಹಿಟ್ಟಿನ ಉಂಡೆಯನ್ನಿಟ್ಟು ಪೂಜೆ ಮಾಡುವರು.

ಚೌಟಿಗೆ ಚವರಿಯವರು ದೀವಟಿಗೆಯವರು ಇವರನ್ನೆಲ್ಲ ಕರೆಯಿಸಿ ಇವರು ತಮ್ಮ ಕೈಯಲ್ಲಿ ಬೇವಿನ ತಪ್ಪಲವನ್ನು ಮನೆಗೆ ಬರುವಾಗ ತರುತ್ತಾರೆ. ಇವರು ಮನೆಗೆ ಬಂದಾಗ ಪಡ್ಲಿಗೆ ತುಂಬುತ್ತಾರೆ. ಪಡ್ಲಿಗೆಯಲ್ಲಿ ಬಾಳೆಎಲೆಯನ್ನು ಹಾಸಿ ಅದರಲ್ಲಿ ಅನ್ನ, ಸಾರು, ಬದನೆಕಾಯಿ ಪಲ್ಲೆ, ಬ್ಯಾಳಿ, ಹೋಳಿಗೆ, ಪಕ್ಕದಲ್ಲಿ ಎರಡು ಬದನೆಕಾಯಿ, ಎರಡು ಈರುಳ್ಳಿ, ಸ್ವಲ್ಪ ಕಬ್ಬಿನ ತುಂಡು, ಅಲಸಂದಿಕಾಳು, ಜೋಳದ ಹಿಟ್ಟಿನ ಉಂಡೆ ಇಟ್ಟು ಪಡ್ಲಿಗೆ ತುಂಬುತ್ತಾರೆ.

ಮದುಮಗಳು ಅವಳ ಮನೆಯವರೆಲ್ಲಾ ಮನೆ ಹೊರಗಡೆ ಬಂದು ಸಾಲಾಗಿ ನಿಲ್ಲುತ್ತಾರೆ. ಆಗ ಜೋಗಮ್ಮನವರು ಬೇವಿನೆಲೆಯಿಂದ ಮನೆಯ ಎಲ್ಲ ಸದಸ್ಯರಿಗೆ ಹಿಂದೆ ಮುಂದೆ ಐದು ಸಾರಿ ಭಾಕ್ ಇಳಿಸುತ್ತಾರೆ. ಮನೆಯವರೆಲ್ಲಾ ಪಡ್ಲಿಗೆಯಲ್ಲಿ ದಕ್ಷಿಣೆ ಹಾಕಿ ಮನೆಯ ಒಳಗೆ ಹೋಗುತ್ತಾರೆ. ಆಗ ಜೋಗಮ್ಮನವರಿಗೆಲ್ಲಾ ಊಟ ಮಾಡಿಸಿ ದೇವತೆಗೆ ಏರಿಸಿದ ಮದ್ಯವನ್ನು ಬಿಟ್ಟು ಬೇರೆ ಮದ್ಯವನ್ನು ಸಹ ಕುಡಿಸುತ್ತಾರೆ. ನಂತರ ಎಲೆ ಅಡಿಕೆ ದಕ್ಷಿಣೆ ಕೊಡುತ್ತಾರೆ. ಅವರು ಹೋಗುವಾಗ ಮನೆಯ ಹಿರಿಯರು ಒಂದು ತಂಬಿಗೆಯಲ್ಲಿ ನೀರನ್ನು ತೆಗೆದುಕೊಂಡು ಅವರಿಗೆ

ಚಿಮುಕಿಸುತ್ತಾರೆ. ಅವರು ಕೈಯಲ್ಲಿ ಜೋಳ ತೆಗೆದುಕೊಂಡು ಹಿಂತಿರುಗಿ ನೋಡದೆ ಮನೆಯಿಂದ ಹೊರಗೆ ಹೋಗುವಾಗ ಆ ಜೋಳವನ್ನು ಚೆಲ್ಲುತ್ತಾ ಹೋಗುತ್ತಾರೆ. ಹವಳ ಮುತ್ತು ಬಳಿದುಕೊಳ್ಳಿ ಎಂದು ಹೇಳುತ್ತಾರೆ. ಅವರಿಗೆ ಮರಳಿ ಮನೆಯವರು ಮಾತಾಡುವುದಿಲ್ಲ. ಮನೆಯವರು ಸೇರಿದ ನೆಂಟರು ಊಟ ಮಾಡುತ್ತಾರೆ. ಈ ಸಂದರ್ಭದಲ್ಲಿ ಜೋಗಮ್ಮನವರೆ ದೇವರ ಹಾಡುಗಳನ್ನು ಹಾಡುತ್ತಾರೆ.

ಲಕ್ಷ್ಮಿ ಪೂಜೆ : ಈ ಸಮುದಾಯದಲ್ಲಿ ಕೆಂಪು ಲಕ್ಷ್ಮಿ, ಬಿಳಿಲಕ್ಷ್ಮಿ, ಕರಿಲಕ್ಷ್ಮಿ ಎಂದು ಮೂರು ಲಕ್ಷ್ಮಿ ದೇವತೆಗಳನ್ನು ಒಂದು ದಿನ ರಾತ್ರಿಯಲ್ಲಿ ಪೂಜೆ ಮಾಡುತ್ತಾರೆ. ಸಾಮಾನ್ಯವಾಗಿ ದೊಡ್ಡ ಗಂಗಾಳದ ಬುಜರಿಕಾರಿಗಳು ಮೇಕೆ ಬಲಿಯನ್ನು ನೀಡಿ ಪೂಜೆ ಮಾಡಿದರೆ ಉಳಿದ ಬೆಡಗಿನವರು ಸಿಹಿಯಿಂದ ಲಕ್ಷ್ಮಿಪೂಜೆಯನ್ನು ಮಾಡುವರು. ಆದರೆ ಒಳಪಂಗಡದಲ್ಲಿ ಬರುವ ಬುಜರಿಕಾರ್ ಬೆಡಗಿನವರಲ್ಲಿ ಗಂಡು ಮಕ್ಕಳ ಮದುವೆಯಲ್ಲಿ ಮಾಡುವ ವಿಶಿಷ್ಟ ಲಕ್ಷ್ಮಿಪೂಜೆಯ ವಿವರವನ್ನು ತಿಳಿಸಲು ಬಯಸುತ್ತೇನೆ. ಹೆಣ್ಣು ಮಕ್ಕಳ ಮದುವೆಯಲ್ಲಿ ಸಿಹಿಯನ್ನು ಮಾಡಿ ಪೂಜೆ ಮಾಡಿ ಮುಗಿಸುತ್ತಾರೆ. ಆದರೆ ಗಂಡು ಮಕ್ಕಳ ಮದುವೆಯಲ್ಲಿ ಲಕ್ಷ್ಮಿಪೂಜೆಯು ತುಂಬಾ ಭಿನ್ನವಾಗಿದ್ದು ವಿಶಿಷ್ಟವಾಗಿರುತ್ತದೆ.

ಸಾಮಾನ್ಯವಾಗಿ ರಾತ್ರಿ ಒಂದು ಗಂಟೆಗೆ ಬಿಳಿಲಕ್ಷ್ಮಿ, ಕೆಂಪುಲಕ್ಷ್ಮಿಯ ಪೂಜೆಯನ್ನು ಮಾಡುತ್ತಾರೆ. ಕೆಂಪುಲಕ್ಷ್ಮಿಗೆ ಕೆಂಪು ಸೀರೆ, ಕೆಂಪು ಕುಪ್ಪಸ, ಬಿಳಿಲಕ್ಷ್ಮಿಗೆ ಬಿಳಿ ಸೀರೆ, ಬಿಳಿ ಕುಪ್ಪಸ, ಹಸಿರು ಬಳೆಗಳು, ಕರಿಮಣಿ, ಬಾಳೆಹಣ್ಣು ಎರಡು ಕೊಬ್ಬರಿ ಬಟ್ಟಲು, ನಾಲ್ಕು ಉತ್ತತ್ತಿ, ನಾಲ್ಕು ಅಡಿಕೆ ಎರಡು ನಿಂಬೆಹಣ್ಣು, ಎರಡು ಅರಿಶಿಣದ ಕೊಂಬು, ಈ ಎರಡು ಲಕ್ಷ್ಮಿಗಳಿಗೆ ಬೇರೆ ಬೇರೆಯಾಗಿ ಅನ್ನವನ್ನು ಮಾಡುತ್ತಾರೆ. ಹಾಗೆಯೇ ಬೇರೆ ಬೇರೆಯಾಗಿ ಸಜ್ಜುಕದ ಹೋಳಿಗೆಯನ್ನು ತಯಾರಿಸುತ್ತಾರೆ. ನಂತರ ಬೇರೆ ಬೇರೆಯಾಗಿ ಸೀರೆಯ ಅಂಚನ್ನು ಕೆಳಗೆ ಮಾಡಿ ಕುಪ್ಪಸವಿಟ್ಟು ದೇವರೆಂದು ಬೇರೆ ಬೇರೆ ಇಡುತ್ತಾರೆ. ಈ ದೇವರ ಮುಂದೆ ಒಂದೊಂದು ಚಿಕ್ಕ ಗುಂಡಿಯನ್ನು ತೊಡುತ್ತಾರೆ(ಇದಕ್ಕೆ ಅವಾಲ ಎನ್ನುವರು). ಈ ಗುಂಡಿಯ ಮುಂದೆ ದೇವರನ್ನು ಕೂಡಿಸಿ ಅದರ ಮುಂದೆ ಪತ್ರೋಳಿ ಎಲೆಯಲ್ಲಿ ಅನ್ನ ಸಜ್ಜುಕದ ಹೋಳಿಗೆ ಉಡಿ ಸಾಮಾನು ಪೂಜೆ ಸಾಮಾನು ಇಟ್ಟು ಸೀರೆಗಳಿಗೆ ದಂಡಿಗೆ ಹಾಕಿ, ಉಡಿ ಸಾಮಾನಿಟ್ಟು ಕರಿಮಣಿ, ಬಳೆ ಇಟ್ಟು ಕಾಯಿ ಒಡೆದು ಆರತಿ ಬೆಳಗುತ್ತಾರೆ. ಮದುಮಗಳು ಪೂಜೆ ಮಾಡುತ್ತಾಳೆ. ಸುಮಂಗಲೆಯರು ದೇವತೆಗಳಿಗೆ ಪೂಜೆ ಮಾಡುತ್ತಾರೆ. ನಂತರ ಮನೆಯವರೆಲ್ಲ ದೇವತೆಗಳಿಗೆ ನಮಸ್ಕರಿಸುತ್ತಾರೆ. ಪೂಜೆ ಆದ ನಂತರ ದೇವತೆಗೆ ಏರಿಸಿಟ್ಟ ಸಿಂಧೂರ ಅರಿಶಿಣ ಕುಂಕುಮ ಮಿಸ್ಸಿ ಸುಮಂಗಲೆಯರು ಹಚ್ಚಿಕೊಳ್ಳುತ್ತಾರೆ. ನಂತರ ಉಳಿದ ಅನ್ನ ಹೋಳಿಗೆ ದೇವತೆಗಳಿಗೆ ಏರಿಸಿದ ಕೊಬ್ಬರಿ ಬಟ್ಟಲು ಎಲೆ ಅಡಿಕೆ ಉತ್ತತ್ತಿ ದೇವತೆಗೆ ಒಡೆದ ಕಾಯಿ ಬೆಲ್ಲ

ಎಲ್ಲವನ್ನು ಮನೆಯವರು ಮತ್ತು ಒಂದೇ ಗೋತ್ರಕ್ಕೆ ಸೇರಿದವರು ತಿನ್ನುತ್ತಾರೆ. ಮನೆಯ ಹೆಣ್ಣು ಮಕ್ಕಳು ಮದುವೆಯಾಗಿ ಬೇರೆ ಗೋತ್ರಕ್ಕೆ ಸೇರುವುದರಿಂದ ಮದುವೆಯಾದವರಿಗೆ ಈ ಪೂಜೆಗೆ ಸೇರಿಸಿಕೊಳ್ಳುವುದಿಲ್ಲ. ಮದುವೆಯಾಗದಿರುವ ಹೆಣ್ಣು ಮಕ್ಕಳನ್ನು ಈ ಪೂಜೆಗೆ ಸೇರಿಸಿಕೊಳ್ಳುತ್ತಾರೆ.

ಬಿಳಿಲಕ್ಷ್ಮಿ, ಕೆಂಪುಲಕ್ಷ್ಮಿಗೆ ಏರಿಸಿದ್ದ ಸೀರೆ ಕುಪ್ಪಸವನ್ನು ತೆಗೆದುಕೊಂಡು ಉಳಿದ ಪೂಜೆ ಮಾಡಿದ ಸಾಮಾನು ಎಲ್ಲವನ್ನು ಗುಂಡಿಯಲ್ಲಿ ಹಾಕಿ ಬಿಡುತ್ತಾರೆ. ಈ ಗುಂಡಿಯಲ್ಲಿ ಮನೆಯವರು ಊಟ ಮಾಡಿ ಉಳಿದ ಪದಾರ್ಥಗಳನ್ನು, ಕೈತೊಳೆದ ನೀರು, ಪೂಜೆಗೆ ಎಡೆ ಮಾಡಲು ಬಳಸಿದ ವಸ್ತುಗಳನ್ನು, ತೊಳೆದು ಹಾಕಿದ ನೀರು ಎಲ್ಲವನ್ನು ಅಂದರೆ, ಕೊಬ್ಬರಿಯ ಚಿಪ್ಪನ್ನು ಬಿಡದೆ ಗುಂಡಿಯಲ್ಲಿ ಹಾಕಿ ಮುಚ್ಚಿ ಬಿಡುತ್ತಾರೆ. ಈ ಪೂಜೆಯನ್ನು ಮಾಡುವಾಗ ಹೊರಗಿನವರ ನೆರಳು ಸಹ ಮನೆಯೊಳಗೆ ಬರಬಾರದು ಎಂಬ ನಿಷೇಧವಿದೆ. ಅದಕ್ಕಾಗಿ ಮನೆಯ ಕಿಟಕಿ, ಬಾಗಿಲು ಎಲ್ಲವನ್ನು ಮುಚ್ಚಿ ಬಿಡುತ್ತಾರೆ. ಈ ದೇವತೆಗೆ ಏರಿಸಿದ ಬಟ್ಟೆಗಳನ್ನು ಮನೆಯ ಹಿರಿಯರು ಉಟ್ಟುಕೊಳ್ಳುವರು. ಈ ದೇವತೆಗಳನ್ನು ಪೂಜೆ ಮಾಡಿ ಮುಗಿಸಿದ ನಂತರ ಕರಿಲಕ್ಷ್ಮಿ ಪೂಜೆಯನ್ನು ಮಾಡುತ್ತಾರೆ.

ಕರಿಲಕ್ಷ್ಮಿ ಪೂಜೆ : ಕರಿಸೀರೆ, ಕುಪ್ಪಸ, ಹಸಿರುಬಳೆ, ಕರಿಮಣಿ, ಸಿಂಧೂರ, ಅರಿಶಿಣ, ಕುಂಕುಮ, ಅನ್ನ, ಸಜ್ಜುಕದ ಹೋಳಿಗೆ, ಬೆಲ್ಲದ ತುಂಡು, ಉಡಿ ಸಾಮಾನು, ಕೊಬ್ಬರಿ ಬಟ್ಟಲು, ಎಲೆ ಅಡಿಕೆ ಉತ್ತತ್ತಿ, ಅರಿಶಿಣ ಕೊಂಬು, ಸೀರೆಗೆ ಅರಿಶಿಣ ಕುಂಕುಮ, ಸಿಂಧೂರ ಏರಿಸಿ ಗರ್ಭಹೊಂದಿರುವ ಮೇಕೆಯನ್ನು ಈ ದೇವತೆಯ ಮುಂದೆ ಕೊಯ್ಯುತ್ತಾರೆ. ಮುಲ್ಲಾ ಬಂದು ಮೇಕೆಯನ್ನು ಕೊಯ್ಯುತ್ತಾನೆ. ಮೇಕೆಯ ಗರ್ಭದಲ್ಲಿರುವ ಮರಿಯನ್ನು ಕರಿಲಕ್ಷ್ಮಿಯ ಮುಂದೆ ಎಡೆಯಿಡುತ್ತಾರೆ. ಮೇಕೆಯ ಬಾಯಲ್ಲಿ ಬಲಗಾಲನ್ನು ಕತ್ತರಿಸಿ ಇಡುತ್ತಾರೆ. ಮೇಕೆಯ ತಲೆಯ ಮೇಲೆ ಎರಡು ಸಜ್ಜುಕದ ಹೋಳಿಗೆಯನ್ನಿಟ್ಟು ಸಜ್ಜುಕದ ಪ್ರಣತಿಯನ್ನಿಟ್ಟು ದೀಪವನ್ನು ಹಚ್ಚುತ್ತಾರೆ. ಇನ್ನೊಂದು ತಟ್ಟೆಯಲ್ಲಿ ಐದು ಪ್ರಣತಿಗಳನ್ನಿಟ್ಟು ದೇವತೆಗೆ ಬೆಳಗುತ್ತಾರೆ. ಅಲಸಂದಿ ಕಾಳು ಜೋಳದ ಹಿಟ್ಟಿನ ಉಂಡೆ ಕಲೀಜದ ಭಾಗ ಕುದಿಸಿ ದೇವತೆಗೆ ಅರ್ಪಿಸಿ ಅರಿಶಿಣ ಕುಂಕುಮ ಸಿಂಧೂರ ಬಲಿ ದೇವಿಗೆ ಏರಿಸಿ ಐದು ಸಜ್ಜುಕದ ಪ್ರಣತಿಯ ಆರತಿ ಬೆಳಗಿ ಕಾಯಿ ಒಡೆದು ಆರತಿ ಬೆಳಗುತ್ತಾರೆ. ಮದುಮಗಳು ಮನೆಯವರು ದೇವತೆಗೆ ಕೈಮುಗಿದು ಉಳಿದ ಮಾಂಸದಡಿಗೆಯನ್ನು ಹೋಳಿಗೆ ಅನ್ನ ಸಾರು ದೇವತೆಗೆ ಏರಿಸಿದ ಕೊಬ್ಬರಿ ಗಿಟ್ಟುಗ ಉತ್ತತ್ತಿ ಎಲೆ ಅಡಿಕೆ ಎಲ್ಲವನ್ನು ತಿಂದು ಉಳಿದ ಪದಾರ್ಥಗಳನ್ನು ಮೇಕೆಯ ಚರ್ಮ ಹೊಟ್ಟೆಯ ಸಾಮಾನು ಎಲ್ಲವನ್ನು ದೇವತೆಯ ಎದುರಿನಲ್ಲಿ ತೋಡಿರುವ ಗುಂಡಿಯಲ್ಲಿ ಹಾಕಿ ಮಣ್ಣು ಮುಚ್ಚುವರು. ಮನೆಯಲ್ಲಿ ಉಳಿದಿರುವ ಸಾರು ಅನ್ನ ಎಡೆಯಿಟ್ಟಿರುವ ಮೇಕೆಯ ಮರಿ ಊಟ ಮಾಡಿ ಕೈತೊಳೆದ ನೀರು ಎಲ್ಲವನ್ನು

ಗುಂಡಿಯಲ್ಲಿ ಹಾಕಿ ಶಾಂತಿ ಮಾಡುವರು. ಈ ಪೂಜೆ ಮುಗಿಯುವ ತನಕ ಬೆಳಗಿನ ಜಾವ ನಾಲ್ಕು ಗಂಟೆಯಾಗುತ್ತದೆ. ಅಲ್ಲಿಯ ತನಕ ಎಲ್ಲವನ್ನು ಸ್ವಚ್ಛಗೊಳಿಸಿ ಬಿಡುತ್ತಾರೆ. ಹೆಣ್ಣು ಮಕ್ಕಳ ಮದುವೆಯಲ್ಲಿ ದೇವತೆಗಳ ಎದುರಿಗೆ ಗುಂಡಿಯನ್ನು ತೋಡದೆ ಪೂಜೆ ಮಾಡಿದ ಸಾಮಾನುಗಳನ್ನು, ತಿಂದು ಉಳಿದ ಅನ್ನ, ಸಾರು ಪದಾರ್ಥಗಳನ್ನು ಸೂರ್ಯೋದಯದ ಮುನ್ನ ಬಾವಿಯಲ್ಲಿ ಹಾಕಿ ಬರುವರು. ಈ ಆಚರಣೆಯು ಕತ್ತಲೆಯಲ್ಲಿ ನಡೆಯುವುದು. ಮನೆಯ ಸುತ್ತಮುತ್ತಲಿನ ಯಾರಿಗೂ ತಿಳಿಯದಂತೆ ನಡೆಯುವ ಗೌಪ್ಯವಾದ ಆಚರಣೆ. ಬೇರೆ ಸಮುದಾಯದವರು ಇವರು ಮಾಂಸವನ್ನು ತಿನ್ನದೆ ಹಾಗೆ ಮಾಡಿದ ಸಂದರ್ಭದಲ್ಲಿ ಯಾರಿಗೂ ತಿಳಿಯದೆ ಮಾಂಸಾಹಾರ ಮಾಡುವ ಕ್ರಿಯೆ ಆಚರಣೆಯಾಗಿ ಉಳಿದು ಬಂದಿದ್ದಾಗಿರಬಹುದು.

ಹಂದ್ರಹಾಕುವುದು

ಮದುವೆಯು ನಾಲ್ಕೈದು ದಿನ ಸಮೀಪವಿರುವಾಗ ಮನೆಯ ಮುಂದಿನ ಅಂಗಳದಲ್ಲಿ ಹಂದ್ರ ಹಾಕುವ ಕಾರ್ಯಕ್ರಮ ನಡೆಯುತ್ತದೆ. ಹಂದ್ರಹಾಕಲು ತೆಂಗಿನಗರಿ, ಬಾಳೆಗಿಡ, ಹಾಲುಗಂಬ, ಮಾವಿನ ಎಲೆ, ಕರಂಚ ಮರದ ಎಲೆ ತಂದು ಹನುಮಪ್ಪನ ಗುಡಿಯ ಹತ್ತಿರ ಇಡುತ್ತಾರೆ. ಸೋದರ ಮಾವ ಮೊದಲೇ ಹನುಮಪ್ಪನ ಗುಡಿಗೆ ಪೂಜೆ ಸಾಮಾನು ತೆಗೆದುಕೊಂಡು ಐದು ಸುಮಂಗಲೆಯರು ಕಳಸದ ತಟ್ಟೆ ತೆಗೆದುಕೊಂಡು ಮನೆಯವರು ಸೇರಿ ದೇವಸ್ಥಾನಕ್ಕೆ ಹೋಗಿ ಹನುಮಪ್ಪನಿಗೆ ಕಾಯಿ ಒಡೆದು ಪೂಜೆ ಮಾಡಿ ಹಂದ್ರದ ಗಿಡ ಎಲೆಗಳಿಗೆ ನೀರು ಚಿಮುಕಿಸಿ ಪೂಜೆ ಮಾಡಿ ಮುತ್ತೈದೆ ಗಂಡು ಮಕ್ಕಳು ಬ್ಯಾಂಡನಿಂದ ಸೋದರಮಾವ ತೆಂಗಿನಗರಿ, ಹಾಲುಗಂಬ, ಅಂತರಕಾಯಿ ತಂದು, ಹಂದ್ರಕ್ಕೆ ನಾಲ್ಕು ಕಡೆ ಬಿದಿರಿನ ಬೊಂಬು ಇಟ್ಟು, ಮೇಲೆ ಬೊಂಬು ಹಾಕಿ ಅದರ ಮೇಲೆ ತಂದ ತೆಂಗಿನಗರಿ, ಕರಂಚಿಗಿಡದ ಎಲೆ ಹಾಕುತ್ತಾರೆ. ನಾಲ್ಕು ಬಿದಿರಿನ ಬೊಂಬುಗಳಿಗೆ ನಾಲ್ಕು ಬಾಳೆಗಿಡ ನೆಟ್ಟು, ಸೂರ್ಯೋದಯವಾಗುವ ದಿಕ್ಕಿನ ಕಡೆ ಬಲಭಾಗದ ಬಿದಿರಿನ ಹತ್ತಿರ ಹಾಲುಗಂಬ ಎಂದು ಇನ್ನೊಂದು ಬಿದಿರಿನ ಬೊಂಬನ್ನು ನೆಡುತ್ತಾರೆ. ನಂತರ ನೆಟ್ಟಿದ ನಾಲ್ಕು ಬಿದಿರಿನ ಬೊಂಬುಗಳಿಗೂ ಸುಣ್ಣ ಮತ್ತು ಕೆಮ್ಮಣ್ಣಿನಿಂದ ಶೃಂಗರಿಸಿ ಹೂವಿನಿಂದ ಅಲಂಕಾರ ಮಾಡುತ್ತಾರೆ. ನಂತರ ಹಂದ್ರದ ಮಧ್ಯ ಅಂತರಕಾಯಿಯನ್ನು ಕಟ್ಟುತ್ತಾರೆ. ಜೊತೆಯಲ್ಲಿ ಹಂದ್ರದಲ್ಲಿ ಬೆಳಕಿರಲೆಂದು ಒಂದು ಚಿಕ್ಕ ಬಲ್ಬನ್ನು ಹಾಕುವ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಹಾಲುಗಂಬದ ಕೆಳಗೆ ಒಂದು ಗಣೇಶನ ಫೋಟೋ ಇಟ್ಟು ಮುಂದೆ ಹಾಲು ಸಕ್ಕರೆ ತುಪ್ಪ ಪಾಯಸ ನೈವೇದ್ಯವಿಟ್ಟು ಮದುಮಗಳ ಕೈಯಿಂದ ಗಣೇಶನ ಪೂಜೆ ಮಾಡಿಸುತ್ತಾರೆ. ಮುಂದೆ ಮದುವೆ ಯಾವ ವಿಘ್ನವಿಲ್ಲದೆ ನಡೆಯಲಿ ಎಂದು ವಿಘ್ನೇಶ್ವರ ಪೂಜೆಯನ್ನು ಮದುಮಗಳು ಮಾಡುತ್ತಾಳೆ. ಈ ಸಂದರ್ಭದಲ್ಲಿ ಸುಮಂಗಲೆಯರಿಗೆ ಅರಿಶಿಣ ಕುಂಕುಮ ಕೊಡುತ್ತಾಳೆ. ಮನೆಯ

ಹಿರಿಯರು ಸಮಾಜದವರಿಗೆ ಅರಿಶಿಣ ಕುಂಕುಮ ತಾಂಬೂಲ ನೀಡಿ ದಕ್ಷಿಣೆ (೧೧ ರೂ.) ಕೊಟ್ಟು ಮುಂದಿನ ಕಾರ್ಯಗಳಿಗೆ ಮತ್ತೆ ಬರುವಂತೆ ತಿಳಿಸಿ ಊಟ ಮಾಡಿಸಿ ಸಮಾಜದವರಿಗೆ ಬಂಧುಗಳಿಗೆ ಬೀಳ್ಕೊಡುತ್ತಾರೆ. ದಕ್ಷಿಣೆಯನ್ನು ಅವರವರ ಶಕ್ತಿಗನುಸಾರವಾಗಿ ನೀಡುತ್ತಾರೆ.

ಅಂತರಕಾಯಿಯ ಜೊತೆ ಕೊಬ್ಬರಿ ಬಟ್ಟಲು, ಉತ್ತತ್ತಿ, ಅರಿಶಿಣಕೊಂಬು, ೫ ಕಂಬಗಳಿಗೂ ೨ ಸಜ್ಜುಕದ ಹೋಳಿಗೆ ಕಟ್ಟುತ್ತಾರೆ. ಬಲಭಾಗದ ಒಂದು ಕಡೆ ಎರಡು ಬಿದಿರು ಕಂಬದ ಜೊತೆ ಹಾಲುಗಂಬ ಇಟ್ಟು ಸುತ್ತಲು ನವಧಾನ್ಯಗಳನ್ನು ಹಾಕುತ್ತಾರೆ. ಈ ನವಧಾನ್ಯಗಳು ಬಿತ್ತುವುದು ಮನೆತನದ ಸಮೃದ್ಧಿಯಾಗುವ ಸೂಚನೆಯನ್ನು ಸೂಚಿಸುತ್ತದೆ. ಹುಡುಗಿ ಮದುವೆ ಇದ್ರೆ ಹಂದ್ರದಲ್ಲಿ ಸುಮಂಗಲೆಯರಿಗೂ ಹುಡುಗಿಯರಿಗೂ ಹಸಿರು ಬಳೆ ಹಾಕಿಸುತ್ತಾರೆ.

ಮಿತ್ : ಹಂದ್ರದ ಕಾರ್ಯ ಆದ ನಂತರ ರಾತ್ರಿ ನಡೆಯುವ ಒಂದು ಆಚರಣೆಯೇ ಮಿತ್. ಮಿತ್ ಎಂದರೆ ಅಗಸರಮ್ಮಗೆ ಕರೆದು ಹಳೆ ಮೊರದಲ್ಲಿ ಒಂದು ಕೇ.ಜಿ. ಜೋಳ ಹಾಕಿ ಜೋಳದ ಹಿಟ್ಟು ಗೋಧಿಹಿಟ್ಟು ಕಡ್ಲೆಬೆಳೆ ಹಿಟ್ಟು ಕಲಿಸಿ ದೀಪ ಮಾಡುತ್ತಾರೆ. ಈ ದೀಪವನ್ನು ಜೋಳದ ಮಧ್ಯದಲ್ಲಿ ಇಟ್ಟುಕೊಂಡು. ಎರಡೆಲೆ ಎರಡಡರೆ ದಕ್ಷಿಣೆ ೧೦೧ ರೂ. ಇಟ್ಟು ಕೊಡುತ್ತಾರೆ. ಆಗ ಮನೆಯವರು ಒಂದು ಚಂಗೇರಿಯಲ್ಲಿ ಮದುಮಗಳಿಗೆ ನೀಡುವ ಸೀರೆ ಕುಪ್ಪಸ ಗೋಧಿಹಿಟ್ಟು ಕಡ್ಲೆಬ್ಯಾಳಿ, ಹೋಳಿಗೆ ಸಾಮಾನು ಬೆಲ್ಲ ಇಟ್ಟುಕೊಂಡು ಮುಸುಕಿ ಹಾಕಿಕೊಂಡು ಒಂದು ಗುಂಪಾಗಿ ಹಂದ್ರದಲ್ಲಿ ಕುಳಿತುಕೊಳ್ಳುತ್ತಾರೆ. ಆಗ ಅಗಸರಮ್ಮ ಜೋಳವಿರುವ ದೀಪ ಹಚ್ಚಿರುವ ಮೊರವನ್ನು ತೆಗೆದುಕೊಂಡು ಕುಳಿತಿರುವ ಗುಂಪಿನ ಸುತ್ತ ಐದು ಬಾರಿ ಸುತ್ತಿ ಆ ಮೊರವನ್ನು ತೆಗೆದುಕೊಂಡು ಹೋಗುತ್ತಾಳೆ. ಮದುವೆ ಮನೆಯ ಬಟ್ಟೆ ಒಗೆದಿರುವ ಅಗಸರನ್ನು ಈ ರೀತಿ ದುಡ್ಡುಕೊಟ್ಟು ಕಳಿಸುತ್ತೇವೆ ಎಂದು ಹಿರಿಯರು ತಿಳಿಸುತ್ತಾರೆ. ಅಗಸರು ಹೋದಾಗ ಕುಳಿತವರು ಎದ್ದು ಮುಖ ತೊಳೆದುಕೊಂಡು ದೇವರಿಗೆ ಕೈ ಮುಗಿಯುತ್ತಾರೆ.

ಅಗಸ ಹೋದಾಗ ಮದುಮಗಳಿಗೆ ಮುತ್ತೈದೆಯಿರುವ ದಂಪತಿಗಳು, ತಂದೆ-ತಾಯಿ, ಮದುಮಗಳಿಗೆ ನದಿ ಅಥವಾ ಕಾಲುವೆಗೆ ಕರೆದುಕೊಂಡು ಹೋಗಿ ಕಡ್ಲೆಹಿಟ್ಟು, ಗೋಧಿಹಿಟ್ಟು, ಜೋಳದ ಹಿಟ್ಟು ಕಲಿಸಿ ಒಂದು ಗಂಡು ಗೊಂಬೆ ಒಂದು ಹೆಣ್ಣು ಗೊಂಬೆ ಮಾಡಿ ಅದಕ್ಕೆ ಬಟ್ಟೆ ಉಡಿಸಿ ಮದುಮಗಳ ಕಾಲುಗಳ ಮಧ್ಯ ಈ ಗೊಂಬೆಗಳನ್ನಿಟ್ಟು ಒಂಬತ್ತು ಲಿಂಬೆಹಣ್ಣು ಮದುಮಗಳ ತಲೆಯ ಮೇಲಿಂದ ಕೈಕಾಲುವರೆಗೆ ನಿವಾಳಿಸಿ ಕೊಯ್ದು ಸುಮಂಗಲೆ ದಂಪತಿಗಳು ಸ್ನಾನ ಮಾಡಿಸಿ (ಮದುಮಗಳು ಉಟ್ಟಿರುವ ಹಳೆಬಟ್ಟೆಯನ್ನು ನದಿಯಲ್ಲಿ ಬಿಟ್ಟು ಬಿಡುತ್ತಾರೆ) ಅರಿಶಿಣ ಕುಂಕುಮ ಹಚ್ಚಿ ನದಿ ದೇವತೆ ಗಂಗಮ್ಮಗೆ ಪೂಜೆ ಮಾಡಿಕೊಂಡು ಕಂಬಳಿ ಹೊದ್ದಿಸಿಕೊಂಡು ಮದುಮಗಳಿಗೆ ಹನುಮಪ್ಪನ ಗುಡಿಗೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿಕೊಂಡು ಮರಳಿ ಮನೆಗೆ

ಕರೆದುಕೊಂಡು ಬಂದು ದೇವರ ಕೋಣೆಯಲ್ಲಿ ಕಂಬಳಿ ಹಾಸಿ ಕೂಡಿಸುತ್ತಾರೆ. ಈ ರಾತ್ರಿ ಮದುಮಗಳು ಉಪವಾಸವಿರುತ್ತಾಳೆ. ಈ ಆಚರಣೆ ಕೆಲವು ಬೆಡಗಿನಲ್ಲಿ ಕಂಡು ಬಂದರೆ ಕೆಲವು ಬೆಡಗುಗಳಲ್ಲಿ ಕಂಡು ಬರುವುದಿಲ್ಲ. ಸಾಮಾನ್ಯವಾಗಿ ಬುಜರ್‌ಕರ್ ಮತ್ತು ಬಿಡಕಿಕರ್ ಬೆಡಗುಗಳಲ್ಲಿ ಈ ಆಚರಣೆ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ದೇವರೂಟ ಅಥವಾ ಪಟ್ಟಾಕಟ್ಟುವುದು

ಪಟ್ಟಾ ಕಟ್ಟುವುದೆಂದರೆ ಮದುಮಗಳಿಗೆ ಹಂದ್ರದಲ್ಲಿ ಸ್ನಾನಮಾಡಿಸಿ ದೇವರ ಮತ್ತು ಹಿರಿಯರ ಪೂಜೆ ಮಾಡಿಸುವ ಕಾರ್ಯ. ಕುಂಬಾರನ ಮನೆಗೆ ಹೋಗಿ ಹೊಸ ಮಡಿಕೆಗಳನ್ನು ತಂದು ಆ ಮಡಕೆಗಳಿಗೆ ಸುಣ್ಣ ಹಚ್ಚಿ ಕೆಂಪು ಹಸಿರು ಬಣ್ಣಗಳಿಂದ ಶೃಂಗರಿಸಿ ಮಡಕೆಯೊಳಗೆ ಅರಿಶಿಣ ಕುಂಕುಮ, ಸಿಂಧೂರ, ಮಿಸ್ಸಿ(ಕಪ್ಪಲು ಪುಡಿ), ಎಲೆ, ಅಡಿಕೆ, ಖರ್ಜೂರ, ಕಲ್ಲುಸಕ್ಕರೆ, ಕಡ್ಲಿಬೆಳೆ (ನೆನೆಸಿದ್ದು) ಹಾಕಿಡುತ್ತಾರೆ. ದೇವರ ಕೋಣೆಗೂ ಬಣ್ಣದಿಂದ ಎರಡು ಬಾಸಿಂಗಗಳನ್ನು, ಸೂರ್ಯಚಂದ್ರರನ್ನು ರಂಗೋಲಿ ಬಳ್ಳಿಗಳನ್ನು ಬಿಡಿಸಿ ಶೃಂಗರಿಸುತ್ತಾರೆ. ಹಾಗೆಯೇ ಮನೆದೇವರ ಹೆಸರನ್ನು ದೇವರ ಕೋಣೆಯ ಮೇಲೆ ಬಣ್ಣದಿಂದ ಬರೆಯುತ್ತಾರೆ. ದೇವರ ಕೋಣೆಯ ಎದುರಿಗೆ ಕಂಬಳಿ ಹಾಸಿ ಅದರ ಮೇಲೆ ಅಕ್ಕಿಯಿಂದ ಹಸೆಬರೆಯುತ್ತಾರೆ. ಆಗ ಈ ರೀತಿ ಹಾಡನ್ನು ಹಾಡುತ್ತಾರೆ.

"ಬಾರಿಕ್ ಚಾವಲ್ ತಬಾಕ್ ಮೆ ರಖಿಲಾಯಿ
ಬಾಲಾಜಿ ಸ್ವಾಮಿಕಾ ನಾಮ್ ಬೋಲ್ ಕೋ
ಪೈಲಾ ಚಾಕ್ ಪುರಾಯಿ"

"ಬಾರಿಕ್ ಚಾವಲ್ ಕಿ ಘುಂಗುರು ವಾಲಿ ಚಾಕ್
ಇಸಮೆ ನೂರ್ ಬರಸೇಗಾ
ಖಿಲೇ ಫೂಲ್ ಕಲ್ವಾರೆ"

"ಬಾರಿಕ್ ಚಾವಲ್ ಕಿ ಘುಂಗುರುವಾಲಿ ಚಾಕ್
ಮಾತು ಚಾಕಿ ಪೂ ಆ ಬೈಟ್
ಬಾಲೇ ಜೂಕಿ ಹೌಸು"

"ಕೊಂಗೈ ಚೋಟಿ ಕರ್ ಕೋ
ಟೀಲಾ ಲಗೈ ಚಾಂದ್ ತಾರಾ
ಮಾ ತೆರೆ ನನ್ಹೆ ಸುವಾಗ ಪೋ
ಸತ್ ಕೈ ಹೋಂಗಿ ಖಾಲಾ"

ಇದಕ್ಕೂ ಮುಂಚೆ ಮನೆಯವರು ಮುತ್ತೈದೆಯರು ನೆಂಟರು ಸೇರಿ ಬ್ಯಾಂಡ್ ತೊಗೊಂಡು ಗಂಗಮ್ಮನ ಪೂಜೆ ಮಾಡಿಕೊಂಡು ಬರಲು ಹೊರಡುತ್ತಾರೆ. ಗಂಗಮ್ಮನ ಪೂಜೆಗೆ ಹೋಗುವಾಗ

ಮಿಸ್ಸಿ, ಎಲೆ ಅಡಿಕೆ, ಖರ್ಜೂರ, ಕಲ್ಲುಸಕ್ಕರೆ, ಕಡ್ಲಿಬೆಳೆ ಹಾಕಿರುತ್ತಾರೆ. ಹೀಗೆ ಕಂಬಳಿಯ ಮೇಲೆ ಮದುಮಗಳ ಕೈಯಲ್ಲಿ ಖಡ್ಗವನ್ನು ಕೊಟ್ಟು ಉಕ್ಕಡವಾಗಿ, ಗಂಧದ ಚೆಕ್ಕೆ ಮೇಲೆ ಕೂಡಿಸಿ ಅವಳಿಗೆ ಹಣೆಗೆ ಕುಂಕುಮ ಹಚ್ಚಿ ಕಸಕಸಿಯಿಂದ ಮಲವಟವನ್ನು ತುಂಬುತ್ತಾರೆ. ಮದುಮಗ/ಮಗಳ ಬಾಯಿಯಲ್ಲಿ ಎಲೆ ಅಡಿಕೆಯೊಂದಿಗೆ ಕಲ್ಲುಸಕ್ಕರೆ ಒಂದೆರಡು ಕಾಳು ಕಡ್ಲಿಬೆಳೆ ಹಾಕಿ ಬಾಯಿಯ ಬಲಭಾಗದಲ್ಲಿ ಮಡಿಚಿ ಇಟ್ಟಿರುತ್ತಾರೆ. ನಂತರ ಮನೆಯ ದಂಪತಿಗಳು ಸುಗಂಧದ ಎಣ್ಣೆಯಲ್ಲಿ ಒಂದು ಜೋಳದ ದಂಟಿನ ತುದಿಗೆ ವೀಳ್ಯದೆಲೆಯನ್ನು ಮಡಿಚಿ ಕಟ್ಟಿ, ಅದನ್ನು ಎಣ್ಣೆಯಲ್ಲಿ ಅದ್ದು ದೇವರಿಗೆ ಏರಿಸುತ್ತಾರೆ. ಮನೆದೇವರಿಗೆ, ಹಿರಿಯ ರೂಪಗಳಿಗೆ ಎಣ್ಣೆ ಏರಿಸಿ ನಂತರ ಧೂಪ ಹಾಕಿ ಮಂಗಳಾರತಿ ಮಾಡಿ ಪೂಜೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಹಲವು ಎಣ್ಣೆ ಏರಿಸುವ ಹಾಡುಗಳನ್ನು ಹಾಡುತ್ತಾರೆ. ಪೂಜೆಯ ನಂತರ ಮದುಮಗಳ ಬಾಯಿಯಲ್ಲಿರುವ ಎಲೆಯ ಬೀಡವನ್ನು ಮದುವೆಯಾಗದ ಯುವಕ ಅಥವಾ ಯುವತಿಯರಿಗೆ ತಿನ್ನಿಸುತ್ತಾರೆ. ಹೀಗೆ ತಿನ್ನುವುದರಿಂದ ಅವರ ಮದುವೆ ಬೇಗನೆ ಆಗುತ್ತದೆ ಎಂಬ ನಂಬಿಕೆ ಇದೆ. ಪೂಜೆಯ ನಂತರ ಮತ್ತೊಮ್ಮೆ ಮದುಮಗಳಿಗೆ ಹೆಂಗೆಳೆಯರೆಲ್ಲಾ ಸೇರಿ ಹಂದ್ರದಲ್ಲಿ ಮತ್ತೆ ಸ್ನಾನ ಮಾಡಿಸಿ ಮೊದಲು ಮಾಡಿದಂತೆ ಮತ್ತೆ ಹೊಸ ಪಂಚೆ ಉಡಿಸಿ ಮನೆಯೊಳಗೆ ಮತ್ತೆ ಕಂಬಳಿಯ ಮೇಲೆ ಅಕ್ಕಿಯ ಹಸೆ ಬರೆದು ಮದುಮಗಳಿಗೆ ಕೂಡಿಸಿ ಮತ್ತೆ ದೇವರಿಗೆ ಹಿರಿಯರಿಗೆ ಎಣ್ಣೆ ಏರಿಸಿ ಪೂಜೆ ಮಾಡುತ್ತಾರೆ. ಪೂಜೆಯ ನಂತರ ದೇವರಿಗೆ ಕೈ ಮುಗಿದು ಮತ್ತೊಮ್ಮೆ ಹಂದ್ರದಲ್ಲಿ ದೃಷ್ಟಿ ನೀರೆಂದು ಮದುಮಗಳಿಗೆ ಸ್ನಾನ ಮಾಡಿಸಿಕೊಂಡು ಬಂದು ಕಂಬಳಿಯ ಮೆಲೆ ಕೂಡಿಸಿ ದೇವರಿಗೆ ಅವಳ ಕೈಯಿಂದ ಕಾಯಿ ಒಡೆದು ದೀಪ ಹಚ್ಚಿ ಧೂಪ ಹಾಕಿ ಪೂಜೆ ಮಾಡಿಸುತ್ತಾರೆ. ಇದೆಲ್ಲಾ ಆದನಂತರ ಬೆಳಿಗ್ಗೆಯಿಂದ ಮದುಮಗ ಅಥವಾ ಮದುಮಗಳು ಈ ದಿನ ಉಪವಾಸವಿರುತ್ತಾರೆ. ಹಾಗಾಗಿ ಪೂಜೆಯ ನಂತರ ಮುತ್ತೈದೆಯರು ಮದುಮಗಳೊಂದಿಗೆ ಸಿಹಿಯಿಂದ ಉಪವಾಸವನ್ನು ಮುರಿದು ಊಟ ಮಾಡುತ್ತಾರೆ. ನಂತರ ಬಂದಂತ ಬಂಧುಬಾಂಧವರು ಊಟ ಮಾಡುತ್ತಾರೆ. ಈ ಕಾರ್ಯಕ್ರಮಕ್ಕೆ ಸಜ್ಜುಕದ ಹೋಳಿಗೆ, ಅನ್ನ, ಬದನೆಕಾಯಿ ಸಾರು, ಸಾಂಬಾರು ಕೆಲವರು ಎರಡು ತರಹದ ಸ್ವೀಟ್ ಮಾಡಿಸುತ್ತಾರೆ.

ಊಟದ ನಂತರ ಸಾಯಂಕಾಲ ಸುಮಾರು ನಾಲ್ಕೈದು ಗಂಟೆಯ ವೇಳೆ ಮದುಮಗ/ ಮದುಮಗಳೊಂದಿಗೆ ಮನೆಯವರೆಲ್ಲ ಸೇರಿ ಹಂದ್ರದಲ್ಲಿ ಕುಳಿತು ಸ್ನಾನಮಾಡುತ್ತಾರೆ. ಆಗ ಇವರಿಗೆ ಅರಿಶಿಣ, ಸುಗಂಧದೆಣ್ಣೆ ಹಚ್ಚಿ ಹಣೆಗೆ ಕುಂಕುಮ ಹಚ್ಚಿ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ಧರಿಸಲು ಕೊಡುತ್ತಾರೆ. ಬಂಧುಗಳೆಲ್ಲ ನೀರಿನಾಟ ಆಡುತ್ತಾ ಎಲ್ಲರು ಸಂಭ್ರಮಿಸುತ್ತಾರೆ. ನಂತರ ಹೊಸ ಬಟ್ಟೆ ತೊಟ್ಟ ಮದುಮಗ/ಮದುಮಗಳಿಗೆ ಹಿರಿಯ ದಂಪತಿಗಳಿಗೆ ಕುಂಕುಮದಿಂದ ಅಕ್ಕಿಯಿಂದ

ಹಣೆಗೆ ಮಲವಟ್ ತುಂಬಿ ಉಳಿದವರಿಗೆ ಕುಂಕುಮ ಹಚ್ಚುತ್ತಾರೆ. ಮದುಮಗಳ ತಾಯಿಗೆ ತಲೆಗೆ ದಂಡಿಗೆ ಹಾಕಿ ಕೊರಳಿಗೆ ಹಾರ, ಕೈಗೆ ಹೂವನ್ನು ಸುತ್ತುತ್ತಾರೆ. ತಂದೆಗೂ ಹಾರ ಹಾಕಿ ಕೈಗಳಿಗೆ ಹೂವನ್ನು ಸುತ್ತುತ್ತಾರೆ. ಮದುಮಗಳಿಗೆ ಕೇವಲ ಹಾರ ಹಾಕಿ ತಲೆಗೆ ಹೂವನ್ನು ಮುಡಿಸುತ್ತಾರೆ. ಮದುಮಗಳ ತಾಯಿಗೆ ಸುರಗಿಯನ್ನು ಸುತ್ತಿದ ದಾರಕ್ಕೆ ಅರಿಶಿಣ ಕೊಂಬು ಕಟ್ಟಿ ಕೈಗೆ ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಅವರ ತವರು ಮನೆಯವರು ತಂದ ಸೀರೆಯನ್ನು ಧರಿಸುತ್ತಾಳೆ. ಉಳಿದವರಿಗೆ ಎಲೆಯ ಕಂಕಣ ಕಟ್ಟುತ್ತಾರೆ. ತವರು ಮನೆಯವರು ಮದುಮಗಳ/ಮದುಮಗನ ತಾಯಿಗೆ ಉಡಿ ತುಂಬುತ್ತಾರೆ. ಅಳಿಯನಿಗೆ ಹೊಸ ಬಟ್ಟೆ ಕೊಟ್ಟು ಮಗಳಿಗೆ ಅಳಿಯನಿಗೆ ಕಳಸ ಬೆಳಗಿ ಮದುಮಗಳಿಗೂ ಉಳಿದವರಿಗೂ ಕಳಸ ಬೆಳಗುತ್ತಾರೆ. ನಂತರ ಉಳಿದ ಬಂಧುಬಾಂಧವರು ಕಳಸ ಬೆಳಗಿ, ಉಡುಗೊರೆಗಳನ್ನು ಕೊಡುತ್ತಾರೆ. ಕೆಲವರು ಬಟ್ಟೆ ಬರೆಗಳನ್ನು ಕೊಡುತ್ತಾರೆ. ಹೀಗೆ ಈ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

ದೇವತಾಕಾರ್ಯ : ಈ ಕಾರ್ಯದಲ್ಲಿ ಸೋದರಮಾವನ ಪಾತ್ರ ಪ್ರಮುಖವಾಗಿರುತ್ತದೆ. ಸತಿಪತಿಗಳಿಗೆ ಅರಿಶಿಣವನ್ನು ಹಚ್ಚಿ ಕೈಯಲ್ಲಿ ಕೊಡಲಿಯನ್ನು ಕೊಟ್ಟು, ಪರಶುರಾಮ ಕ್ಷತ್ರಿಯನೆಂದು ಸಾಂಕೇತಿಸುವ ಆಚರಣೆಯಾಗಿದೆ. ಇವರಿಗೆ ಅರಿಶಿಣ ಹಚ್ಚಿ ಹಂದರದಲ್ಲಿ ಕರೆದುಕೊಂಡು ಹೋಗಿ ಒನಕೆಯ ಮೇಲೆ ಕೂಡಿಸಿ ನೀರು ಹಾಕುತ್ತಾರೆ. ಇದನ್ನು ಸೋದರ ಮಾವ ನೀರೆರೆಯುವುದು ಎನ್ನುತ್ತಾರೆ. ಸ್ನಾನದ ಬಳಿಕ ಅವರಿಗೆಲ್ಲ ಹೊಸ ಬಟ್ಟೆ ತೊಡಿಸಿ ಅವರಿಂದ ಹಂದರ ಪೂಜೆ ಮಾಡಿಸಿ ನಂತರ ಅವರು ಧರಿಸಿರುವ ಕೊಡಲಿಯನ್ನು ಹಂದರಕ್ಕೆ ಕಟ್ಟಿರುವ ಹಾಲುಗಂಬಕ್ಕೆ ಕೊಡಲಿಯನ್ನು ಕಟ್ಟಿ ಅಲ್ಲಿ ಅದರ ಕೆಳಗೆ ದವಸಧಾನ್ಯ ಹಾಕಿಸಿ ಪೂಜೆ ಮಾಡಿಸುತ್ತಾರೆ.

ಮೇಲಿನ ಎಲ್ಲ ಕಾರ್ಯಗಳು ಮುಗಿದ ನಂತರ ಬಂಧುಬಳಗಕ್ಕೆ, ಬಂದ ಅತಿಥಿಗಳಿಗೆ ದೇವರೂಟವನ್ನು ಅಂದರೆ ಸಿಹಿ ಭಕ್ಷ್ಯಬೋಜನಗಳನ್ನು ಮಡಿ ಉಣ ಬಡಿಸುತ್ತಾರೆ. ನಂತರ ರಾತ್ರಿಯ ವೇಳೆ ಮದುಮಗನಿಗೆ/ಮದುಮಗಳಿಗೆ ಮೆಹಂದಿ ಕಾರ್ಯಕ್ರಮ ನೆರವೇರಿಸುತ್ತಾರೆ. ಮದುಮಗಳ ಕೈಗಳಿಗೆ ಮೆಹಂದಿಯನ್ನು ಅನೇಕ ಚಿತ್ತಾರಗಳಾಗಿ ಚಿತ್ರಿಸಿ ಕಾಲುಗಳಿಗೆ ಸುತ್ತಲು ಚಿತ್ರಗಳನ್ನು ಹಾಕಿ ಶೃಂಗಾರ ಮಾಡುತ್ತಾರೆ. ಈ ಕಾರ್ಯ ಬೆಳಗಿನವರೆಗೂ ನಡೆಯುವುದುಂಟು. ಮೆಹಂದಿಯನ್ನು ಹಾಕುವಾಗ ಅನೇಕ ತರಹದ ಮೆಹಂದಿ ಹಾಡುಗಳನ್ನು ಹಾಗೂ ರಸಮಂಜರಿಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ. ಬೆಳಗಿನ ಜಾವ ಎಲ್ಲರೂ ಶುಭ್ರವಾಗಿ ಸ್ನಾನವನ್ನು ಮಾಡಿ ಹೊಸ ಬಟ್ಟೆಗಳನ್ನು ಧರಿಸಿ ಮದುಮಗನ ಮನೆಯಲ್ಲಿ ಮುತ್ತೈದೆಯರನ್ನು ಕರೆಯಿಸಿ ಹಂದರದಲ್ಲಿ ಮದುಮಗನ ಕೈಯಿಂದ ಮದುಮಗಳ ಮಾಂಗಲ್ಯವನ್ನು ಅಂದರೆ ಕರಿಮಣಿಗಳನ್ನು ಮದುಮಗನ ಕೈಯಿಂದಲೇ ಪೋಣಿಸುತ್ತಾರೆ. ಹೀಗೆ ಮದುವೆಯ ಮಾಂಗಲ್ಯವು ಸಿದ್ಧವಾಗುತ್ತದೆ.

ಬೀಗರನ್ನು ಎದುರುಗೊಳ್ಳುವ ಕಾರ್ಯಕ್ರಮ : ಸಾಧಾರಣವಾಗಿ ಇವರಲ್ಲಿ ಅನೇಕ ಮದುವೆಗಳು ಕನ್ಯಾಗೃಹದಲ್ಲೆ ನೆರವೇರುತ್ತವೆ. ಬಂದ ಬೀಗರನ್ನು ವಧುವಿನ ಕಡೆಯವರು ಅತಿ ಗೌರವಾದರಗಳಿಂದ ಬೀಗರಿಗೆ ಬರ ಮಾಡಿಕೊಳ್ಳುತ್ತಾರೆ. ಬರಮಾಡಿಕೊಂಡು ಅವರಿಗಾಗಿ ತಂಗಲು ಬಿಡದಿ ಮನೆ (ವರನ ಕಡೆಯವರು ಉಳಿದುಕೊಳ್ಳಲು ಮಾಡಿರುವ ವ್ಯವಸ್ಥೆ) ಎಂದು ಮಾಡಿಕೊಡುತ್ತಾರೆ. ನಂತರ ಅವರಿಗೆ ಉಪಹಾರದಿಂದ ಸತ್ಕರಿಸುತ್ತಾರೆ.

ಬರಾತ್ : ಬೀಗರು ಮದುಮಗ ವಧುವಿನ ಮನೆಗೆ ಬರುವುದು. ಮದುಮಗ ಬೀಗರೆಲ್ಲ ತಮ್ಮ ಊರಿನಿಂದ ಮದುವೆ ನಡೆಯುವ ವಧುವಿನ ಊರಿಗೆ ಬರುತ್ತಾರೆ. ಊರಿಗೆ ಬಂದು ಹನುಮಪ್ಪನ ಗುಡಿಯಲ್ಲಿ ಇಳಿದುಕೊಳ್ಳುತ್ತಾರೆ. ನಂತರ ವಧುವಿನ ಕಡೆಯವರು ಬ್ಯಾಂಡನಿಂದ ಕುದುರೆ ತೊಗೊಂಡು ಹಾಲು, ಸಕ್ಕರೆ, ಕೊಬ್ಬರಿ, ಹೂವಿನ ಹಾರ, ತುರಾಯಿ, ಕಂಚಿ ಕಳಸ ತೊಗೊಂಡು ಕುದುರೆ ಮೆಲೆ ಯಾರಾದರೂ ಸಣ್ಣ ಹುಡುಗನಿಗೆ ಮದುಮಗನಂತೆ ಶೃಂಗರಿಸಿ ಕೂಡಿಸಿಕೊಂಡು ಹೋಗುತ್ತಾರೆ. ಆಗ ಮದುಮಗ ಈ ಹುಡುಗನಿಗೆ ಎತ್ತಿಕೊಂಡು ದೇವಸ್ಥಾನದ ಒಳಗೆ ಹೋಗುತ್ತಾನೆ. ಹನುಮಪ್ಪನ ಗುಡಿಯಲ್ಲಿರುವ ಬೀಗರನ್ನು ಸ್ವಾಗತಿಸಿ ವಧುವಿನ ಕಡೆಯವರು ಮದುಮಗನ ಕೈಯಿಂದ ಹನುಮಪ್ಪನಿಗೆ ಕಾಯಿ ಒಡೆಸಿ ಕರ್ಪೂರ ಬೆಳಗಿಸಿ ಪೂಜೆ ಮಾಡಿಸುತ್ತಾರೆ. ಇಷ್ಟು ದಿನ ಬ್ರಹ್ಮಚಾರಿಯಾಗಿದ್ದೆ ಇನ್ನು ಮುಂದೆ ಸಂಸಾರಿಯಾಗುತ್ತಿದ್ದೇನೆ ಎಂದು ಕೈ ಮುಗಿಯುತ್ತಾನೆ. ಹಿಂದಿನ ಕಾಲದಲ್ಲಿ ಹನುಮಪ್ಪನ ಗುಡಿಯು ಊರ ಹೊರಗಿದ್ದು ಬಂದವರಿಗೆ ಛತ್ರವಾಗಿ ಆಶ್ರಯ ಪಡೆದುಕೊಳ್ಳಲು ನೆರವಾಗಿದ್ದ ಅಂಶ ತಿಳಿದು ಬರುತ್ತದೆ. ಈ ಪದ್ಧತಿ ಈಗಲೂ ಈ ಸಮುದಾಯದಲ್ಲಿ ಮುಂದುವರಿದಿರುವುದು ಕಂಡುಬರುತ್ತದೆ.

ಮದುಮಗ ಹನುಮಪ್ಪನಿಗೆ ಪೂಜೆ ಮಾಡಿದ ನಂತರ ಒಂದು ಹೊಸ ಜಮಖಾನೆ ಹಾಸಿ ಅದರ ಮೇಲೆ ಮದುಮಗನಿಗೆ ಕೂಡಿಸಿ ಭಾಮೈದನಾದವನು ಮದುಮಗನಿಗೆ ಕುಂಕುಮ ಹಚ್ಚಿ ತಲೆಗೆ ಸುಗಂಧಿತ ಎಣ್ಣೆ ಹಚ್ಚಿ ಕೆನ್ನೆಗಳಿಗೆ ಸ್ವಲ್ಪ ಹಚ್ಚಿ ಹೂವಿನ ಹಾರ ಹಾಕಿ ಕೈಯಲ್ಲಿ ತುರಾಯಿ ಕೊಟ್ಟು ಕೈಗೆ ಹೂವಿನ ಗಜರಿ ಕಟ್ಟುವರು. ಸಕ್ಕರೆ ಕೊಬ್ಬರಿ ತಿನ್ನಿಸಿ ಹಾಲು ಕುಡಿಸುತ್ತಾನೆ. ನಂತರ ಆರತಿ ಮಾಡುತ್ತಾನೆ. ಅವನ ಪಕ್ಕದಲ್ಲಿ ಕುಳಿತುಕೊಂಡ ಚಿಕ್ಕ ಹುಡಗನಿಗೂ ಹೂವಿನ ಹಾರ ಹಾಕಿ ಮದುಮಗ ಉಳಿಸಿದ ಸಕ್ಕರೆ ಕೊಬ್ಬರಿ ಹಾಲು ಕುಡಿಸುವರು. ನಂತರ ಎಲೆ ಅಡಿಕೆ ಅವರಿಗೆ ಇಷ್ಟವಿದ್ದಷ್ಟು ಹಣ ೧೧ ರೂ. ಆಗಲಿ ೧೦೧ ಆಗಲಿ ಕೊಟ್ಟು ಮದುಮಗನಿಗೆ ರಾಮ್ ರಾಮ್ ಎಂದು ವಂದಿಸುವನು. ಇವನಿಗೆ ಪ್ರತಿಯಾಗಿ ಮದುಮಗನು ರಾಮ್ ರಾಮ್ ಎಂದು ಪ್ರತಿವಂದಿಸುವನು. ನಂತರ ಭಾಮೈದ ಮಧುಮಗಳ ಅಣ್ಣ ಅಥವಾ ತಮ್ಮ ಮದುಮಗನಿಗೆ ಎತ್ತಿಕೊಂಡು ಬಂದು ಕುದುರೆ ಮೇಲೆ ಕೂಡಿಸುವನು. ಇದಕ್ಕೂ ಮುಂಚೆ ಅಲ್ಲಿದ್ದ ಎಲ್ಲರಿಗೂ

ಅರಿಶಿಣ ಕುಂಕುಮ ವೀಳ್ಯವನ್ನು ಕೊಡುವರು. ನಂತರ ಎಲ್ಲರೂ ಸೇರಿಕೊಂಡು ಮದುಮಗನೊಂದಿಗೆ ಮೆರವಣಿಗೆಯೊಂದಿಗೆ ಛತ್ರಕ್ಕೆ ಬರುವರು. ಹಿಂದೆ ವಧುವಿನ ಮನೆಯಲ್ಲಿಯೇ ಮದುವೆ ನಡೆಯುತ್ತಿದ್ದ ರಿಂದ ಮಧುವಿನ ಮನೆಯಲ್ಲಿಯೇ ಮದುವೆ ನಡೆಯುತ್ತಿದ್ದರಿಂದ ಮಧುಮಗ ಬೀಗರೆಲ್ಲ ಮನೆಗೆ ಬರುತ್ತಿದ್ದರು. ಈಗ ಛತ್ರಗಳಲ್ಲಿ ಹೆಚ್ಚಾಗಿ ಮದುವೆಗಳು ನಡೆಯುವುದರಿಂದ ಎಲ್ಲರೂ ಛತ್ರಕ್ಕೆ ಬರುತ್ತಾರೆ. ಛತ್ರಕ್ಕೆ ಬಂದ ಮದುಮಗನಿಗೆ ಮಾವನಾದವನು ಇಲ್ಲ ವಧುವಿನ ಅಣ್ಣ ಇಲ್ಲವೆ ಹಿರಿಯರಾದವರು. ಕುದುರೆಯಿಂದ ಇಳಿಸಿ ಓಕಳಿ ನೀರನ್ನು ಮುಖದ ಮೇಲಿಂದ ತೆಗೆದು ಕಾಯಿ ನಿವಾಳಿಸಿ ತೆಗೆದು ಒಡೆಯುವರು. ನಂತರ ಮುಖ ತೊಳೆಸಿ ಕುಂಕುಮ ಹಚ್ಚುವರು. ನಂತರ ಆರತಿ ಬೆಳಗಿ ಒಳಗೆ ಕರೆದುಕೊಂಡು ಬರುತ್ತಾರೆ. ಆಗ ಬೀಗರು ನೆಂಟರು ಎಲ್ಲರ ಮುಂದೆ ಕುರ್ಚಿಯಲ್ಲಿ ಮದುಮಗನಿಗೆ ಕೂಡಿಸವರು. ಆಗ ಮತ್ತೆ ವಧುವಿನ ಅಣ್ಣ ಮದುಮಗನಿಗೆ ಕುಂಕುಮ ಹಚ್ಚಿ ತಲೆಗೆ ಕೆನ್ನೆಗಳಿಗೆ ಸುಗಂಧಿತ ಎಣ್ಣೆ ಹಚ್ಚಿ ಹಾರಹಾಕಿ ತುರಾಯಿ ಕೈಯಲ್ಲಿಕೊಟ್ಟು ಮದುಮಗನಿಗೆ ಮೊದಲೆ ಮಾತಾಡಿದಂತೆ ಮದುವೆಯ ಬಟ್ಟೆ ಉಂಗುರ ಚೈನ ಕೊಡುವರು. ಕೈ ಚೈನು ಕೊಡುವನು. ಹಾಗೆಯೆ ಇನ್ನೊಂದು ಜೊತೆ ಬಟ್ಟೆ ಕೊಡುವನು. ಇದೆಲ್ಲವನ್ನು ಸಭಿಕರಿಗೆ ತೋರಿಸಿ ಕೊಟ್ಟು ಮದುಮಗನಿಗೆ ಎಲೆ ಅಡಿಕೆ ಬೀಡ ಕೊಟ್ಟು ಕೈಮುಗಿಯುವನು. ಎಲ್ಲವನ್ನು ತೆಗೆದುಕೊಂಡು ಮದುಮಗ ಇವರು ಕೊಟ್ಟ ಹೊಸ ಬಟ್ಟೆಯನ್ನುಟ್ಟು ಚೈನು, ಉಂಗುರ ಹಾಕಿ ಕೊಂಡು ಮತ್ತೆ ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ. ಆಗ ಮತ್ತೊಮ್ಮೆ ಆರತಿ ಎತ್ತುತ್ತಾರೆ. ವಧುವಿನ ಕಡೆಯವರು ವಿವಿಧ ಸಿಹಿ ತಿಂಡಿಗಳನ್ನು ಇಡುತ್ತಾರೆ. ಇದಕ್ಕೆ 'ಮಂಜ' ನೀಡುವುದು ಎನ್ನುತ್ತಾರೆ. ಆಗ ವಧುವಿನ ತಂಗಿ ಬಂದು ಮದುಮಗನಿಗೆ ಕುಂಕುಮ ಹಚ್ಚಿ, ವೀಳ್ಯದೆಲೆಯಲ್ಲಿ ಮೆಹಂದಿಯನ್ನು ತಂದು ಮದುಮಗನ ಕಿರಿ ಬೆರಳಿಗೆ ಹಿಡಿಯುತ್ತಾಳೆ. ಸ್ವಲ್ಪ ಹೊತ್ತಿನ ನಂತರ ಮೆಹಂದಿ ರಂಗೇರಿತು ಎಂದು ಮದುಮಗ ಎದ್ದು ಸೊಸೆಯನ್ನು ಕೂಡಿಸಿ ಕುಂಕುಮ ಹಚ್ಚಿ ಹೂ ಮುಡಿಸಿ ಹಾರ ಹಾಕಿ ಹೊಸ ಬಟ್ಟೆಯನ್ನು ಎಲೆ ಅಡಿಕೆಯಲ್ಲಿ ೧೦೧ ರೂ. ಇಲ್ಲ ೫೦೦ ರೂ. ಕೊಟ್ಟು ಕೈಮುಗಿಯುತ್ತಾನೆ. ಇದಕ್ಕೆ 'ಸಾಲಿಕಾ ರಸಮ್' ಎಂದು ಕರೆಯುತ್ತಾರೆ. ಈ ಕಾರ್ಯಕ್ರಮ ಮುಗಿದ ನಂತರ ಮದುಮಗಳ ಕಾರ್ಯ ಕ್ರಮಗಳು ಪ್ರಾರಂಭವಾಗುತ್ತವೆ. ಮದುಮಗಳಿಗೆ ಹೊಸ ಬಳೆಗಳನ್ನು ತೊಡಿಸುವ ಕಾರ್ಯ ಮೊದಲಿಗೆ ನಡೆಯುತ್ತದೆ. ಇದನ್ನು 'ಬಂಗಡ್ಯಾಕಾ ರಸಮ್' ಎಂದು ಕರೆಯುವರು. ಬಳೆಗಾರನನ್ನು ಕರೆದು ಮದುಮಗನ ತಾಯಿಯಾದವಳು ಇಲ್ಲವೆ ಯಾರಾದರು ಸುಮಂಗಲೆಯು ಬಳೆಗಳಿಗೆ ಅರಿಶಿಣ ಕುಂಕುಮ ಹಚ್ಚಿ ಹೂ ಹಾಕಿ ಊದಿನ ಕಡ್ಡಿ ಬೆಳಗಿ ಕೈ ಮುಗಿದು ವಧುವಿನಿಂದಲೂ ಊದಿನ ಕಡ್ಡಿ ಬೆಳಗಿಸಿ ಕೈ ಮುಗಿಸಿದ ನಂತರ ಬಳೆಗಾರ ವಧುವಿಗೆ ೧೯ ಬಳೆಗಳನ್ನು ತೊಡೆಸುತ್ತಾನೆ. ಆಗ ಅತ್ತೆಯಾದವಳು ವಧುವಿಗೆ ಅರಿಶಿಣ ಕುಂಕುಮ ಹಚ್ಚಿ ಸುಗಂಧಿತ ಎಣ್ಣೆ ತಲೆಗೆ ಹಚ್ಚಿ ಹೂ ಮುಡಿಸಿ ಹಾರ ಹಾಕಿ ಕೈಗೆ ಹೂವಿನ ಗಜರಿ ಕಟ್ಟಿ

ಸಿಂಧೂರ ಹಚ್ಚಿ ಮಿಠಾಯಿಯಿಂದ ಉಡಿ ತುಂಬುತ್ತಾಳೆ. ಆಗ ಸೀರೆ, ರವಿಕೆ, ಬಂಗಾರ, ಬೆಳ್ಳಿ, ಚೈನು, ಆಭರಣಗಳನ್ನು ಕೊಡುತ್ತಾರೆ. ಇದನ್ನು ತೆಗೆದುಕೊಂಡು ಹೋಗಿ ಸುಮಂಗಲೆಯರು ಇವರು ಕೊಟ್ಟ ಸೀರೆ ಉಡಿಸಿ ಆಭರಣಗಳನ್ನು ಹಾಕಿ ಮತ್ತೆ ಕರೆದುಕೊಂಡು ಬರುತ್ತಾರೆ. ಆಗ ಹೊಸ ಜಮುಖಾನದ ಮೇಲೆ ಐದು ಸುಮಂಗಲೆಯರು ಅಕ್ಕಿಯಿಂದ ಹಸೆ ಬರೆದು ವಧುವಿಗೆ ಕೂಡಿಸಿ ಒಂಬತ್ತು ಕೊಬ್ಬರಿ ಗಿಟಗಿ, ಒಂಬತ್ತು ಬೆಟ್ಟಡಿಕ್ಕೆ, ಒಂಬತ್ತು ಉತ್ತತ್ತಿ, ಒಂದು ಸೇರು ಪಾವು ಅಕ್ಕಿ, ಒಂದು ಹೊಸ ಕೆಂಪು ಇಲ್ಲವೆ ಹಸಿರು ರಿಬ್ಬನ್ ಚಿಕ್ಕ ಕನ್ನಡಿ ಬಾಚಣಿಕೆ ಕುಂಕುಮ ಅರಿಶಿಣದ ಭರಣಿ ಇವೆಲ್ಲವನ್ನು ಅತ್ತೆ ಉಡಿ ತುಂಬಿ ಹೊಸ ರಿಬ್ಬನ್ ಉಡಿಗೆ ಕಟ್ಟಿ ಹೂ ಮುಡಿಸುತ್ತಾಳೆ. ನಂತರ ಎಲ್ಲರೂ ವಧುವಿಗೆ ಕುಂಕುಮ ಹಚ್ಚಿ ಆರತಿ ಬೆಳಗುವರು. ಮದುಮಗನ ಕಡೆಯವರು ಕುಂಕುಮ ಹಚ್ಚಿ ಎಲೆ ಅಡಿಕೆ ದುಡ್ಡನ್ನು ವಧುವಿಗೆ ಕೊಟ್ಟು ಆರತಿ ಬೆಳಗುತ್ತಾರೆ. ಇದೇ ಕಾರ್ಯ ಕ್ರಮದಲ್ಲಿ ಮೊದಲು ಇಳೆವು ಮಾಡದವರು, ಎರಡು ರವಿಕೆ ಬಟ್ಟೆ ತಂದು ವಧುವಿನ ಬಲಗೈ ಮೇಲೆ ಹಾಕಿ ಅರಿಶಿಣದಿಂದ ಇಂದಿನಿಂದ ಈ ಬೆಡಗಿನ ಹೆಣ್ಣು ನಮ್ಮ ಬೆಡಗಿನವಳು ಎಂದು ಘೋಷಿಸುತ್ತಾರೆ. ಇದನ್ನು ನಂತರ ಇದೇ ರೀತಿಯಾಗಿ ಉಳಿದವರು. ಮುಖ್ಯವಾಗಿ ಮದುಮಗನ ಕಡೆಯವರು ಮಾಡುತ್ತಾರೆ. ನಂತರ ಎಲೆ ಅಡಿಕೆ ದುಡ್ಡು ವಧುವಿಗೆ ನೀಡಿ ಆರತಿ ಬೆಳಗುತ್ತಾರೆ. ವಧುವಿನ ಪಕ್ಕ ಒಂದು ಚಿಕ್ಕ ಹುಡುಗಿಯನ್ನು ಸಹ ಹೂ ಮುಡಿಸುತ್ತಾರೆ. ನಂತರ ಬೀಗರಿಗೆ ಊಟ ಉಪಚಾರ ಮಾಡಿಸಿ ಸತ್ಕರಿಸುತ್ತಾರೆ.

ಮಾಂಗಲ್ಯಧಾರಣೆ : ನಿಶ್ಚಿತಾರ್ಥದ ಮಾರನೆಯ ದಿನವೇ ಮಾಂಗಲ್ಯಧಾರಣೆಯ ಕಾರ್ಯ ಕ್ರಮವಿರುತ್ತದೆ. ಇದರಲ್ಲಿ ವರನು ಉಳಿದುಕೊಂಡಿರುವ ಬಿಡದಿ ಮನೆಯಿಂದ ವಧುವಿನ ಕುಟುಂಬದವರು, ಬಂಧುಬಳಗದವರು ಸೇರಿಕೊಂಡು ವಾದ್ಯಗೋಷ್ಠಿಯೊಂದಿಗೆ ಹೋಗಿ ವರನನ್ನು ವಧುವಿನ ಕಡೆಯವರು ಸ್ಥಿತಿವಂತರಾಗಿದ್ದರೆ ಕುದುರೆಯ ಮೇಲೆ ಇಲ್ಲವೆ ಕಾರಿನಲ್ಲಿ ವರನನ್ನು ಕರಿಕಂಬಳಿ ಹಾಸಿ ಕೂರಿಸಿ ಹಣೆಗೆ ತಿಲಕವಿದ್ದು ಕಸಿಕಸಿ ತುಂಬಿ ವರನಿಗೆ ಮದುವೆಯ ಎಲೆ ಬಾಸಿಂಗವನ್ನು ಹಣೆಗೆ ಕಟ್ಟುತ್ತಾರೆ. ಇತ್ತೀಚೆಗೆ ಮುತ್ತಿನ ಬಾಸಿಂಗ ಕಟ್ಟುವುದು ಕಂಡುಬರುತ್ತದೆ. ಅವರ ಕುಟುಂಬದವರು ಮತ್ತು ಬಂಧುಬಳಗ ಸೇರಿಕೊಂಡು ಆಂಜನೇಯ ದೇವಸ್ಥಾನಕ್ಕೆ ಹೋಗಿ ಕುಳಿತುಕೊಂಡಿರುತ್ತಾರೆ. ನಂತರ ವರನಿಗೆ ವರನ ಬಟ್ಟೆಗಳಾದ ಬಿಳಿ ಪಂಚೆ ಮತ್ತು ನಿಲುವಂಗಿಯನ್ನು ತೊಡಿಸುತ್ತಾರೆ. ನಂತರ ಒಂದು ಬಿಳಿ ವಸ್ತ್ರದಲ್ಲಿ ಕೊಬ್ಬರಿ ಬಟ್ಟಲು, ಉತ್ತುತ್ತಿ ಇರಿಸಿ ವರನ ಸೊಂಟಕ್ಕೆ ಕಟ್ಟುತ್ತಾರೆ. ಹಾರ ಹಾಕಿ ಕೈಯಲ್ಲಿ ಹೂವಿನ ತುರಾಯಿ ನೀಡಿ ಮುತ್ತೈದೆಯರಿಂದ ಕಳಸವನ್ನು ಮಾಡಿಸುತ್ತಾರೆ. ಈ ಎಲ್ಲ ಕಾರ್ಯಕ್ರಮವು ವಧುವಿನ ಸಹೋದರರು ಭಾವಿ ಭಾವನಿಗೆ ಮಾಡುತ್ತಾರೆ. ಅಲ್ಲಿಂದ ವಾದ್ಯಗೋಷ್ಠಿಯೊಂದಿಗೆ ವಧುವಿನ ಕಡೆಯವರು ಸ್ಥಿತಿವಂತರಾಗಿದ್ದರೆ

ಕುದುರೆಯ ಮೇಲೆ, ಇಲ್ಲವೆ ಕಾರಿನಲ್ಲಿ, ಇಲ್ಲವೆ ಕಾಲ್ನಡಿಗೆಯಲ್ಲಿ ಮೆರವಣಿಗೆಯಿಂದ ಮದುವೆಯ ಮಂಟಪಕ್ಕೆ ಕರೆತರುತ್ತಾರೆ. ನಂತರ ಪೌರೋಹಿತ್ಯ ಕಾರ್ಯಕ್ರಮಗಳೆಲ್ಲವು ಬ್ರಾಹ್ಮಣರ ಕೈಯಿಂದ ನಡೆಸುತ್ತಾರೆ. ಮಂಟಪದಲ್ಲಿ ವರನ ಕೈಯಿಂದ ಗೌರಿಗಣೇಶನ ಪೂಜೆಯನ್ನು ಮಾಡಿಸುತ್ತಾರೆ. ನಂತರ ಪುರೋಹಿತ ವರನನ್ನು ಬ್ರಹ್ಮಚರ್ಯೆಯಿಂದ ಗೃಹಸ್ಥನಾಗಲು ಅವನ ಕೈಯಿಂದ ತಾಳಿಗೆ ಪೂಜೆ ಮಾಡಿಸುತ್ತಾರೆ. ನಂತರ ಪುರೋಹಿತ ವಧುವಿನ ತಂದೆ ತಾಯಿ ವರನ ಕಾಲು ತೊಳೆಯುವ ಪೂಜೆಯನ್ನು ಮಾಡಿಸುತ್ತಾನೆ. ನಂತರ ವಧುವನ್ನು ಕರೆತರುವಂತೆ ಪುರೋಹಿತನು ಆಜ್ಞಾಪಿಸುತ್ತಾನೆ. ಇವರಲ್ಲಿ ವಧು ಮತ್ತು ವರನಿಗೆ ಅಡ್ಡವಾಗಿ ಪರದೆಯನ್ನು (ಅಂತರ ಪರದೆ) ಹಿಡಿದಿರುತ್ತಾರೆ. ವಧುವನ್ನು ಸೋದರ ಮಾವ ಹೆಗಲಮೇಲೆ ಹೊತ್ತುಕೊಂಡು ಹಸಮಣೆಗೆ ಕರೆತರುತ್ತಾನೆ. ಇದಕ್ಕೂ ಮುಂಚೆ ವರನಿಗೆ ಅಡ್ಡವಾಗಿ ಅಂತರ ಪರದೆಯನ್ನು ಹಿಡಿದಿರುತ್ತಾರೆ. ವರನ ಮುಖಾಮುಖಿಯಾಗಿ ವಧುವನ್ನು ಪರದೆಯ ಈ ಬದಿಯಲ್ಲಿ ನಿಲ್ಲಿಸುತ್ತಾರೆ. ನಂತರ ಪುರೋಹಿತನು ವಧುವಿನ ಎರಡೂ ಕೈಯನ್ನು ಬೊಗಸೆಯಲ್ಲಿ ಕೊಬ್ಬರಿ ಬಟ್ಟಲಲ್ಲಿ ಜೀರಿಗೆ ಮತ್ತು ಬೆಲ್ಲದ ತುಂಡನ್ನು ಇಟ್ಟು ವರನ ತಲೆಯ ಮೇಲೆ ಹಾಕಿಸುತ್ತಾನೆ. ಇದೇ ರೀತಿ ವರನು ವಧುವಿನ ತಲೆಯ ಮೇಲೆ ಹಾಕುತ್ತಾನೆ. ನಂತರ ಅಂತರ ಪರದೆಯನ್ನು ಸರಿಸುತ್ತಾರೆ. ಹಸೆಮಣೆಯ ಮೇಲೆ ವರನ ಎಡ ಬದಿಯಾಗಿ ವಧುವಿಗೆ ಕೂಡಿಸುತ್ತಾರೆ. ನಂತರ ವರನಿಗೆ ಕೈಯಲ್ಲಿ ಮಾಂಗಲ್ಯ ಕೊಟ್ಟು ಕಾಯಾ ವಾಚಾ ಮನಸಾ ಇವುಗಳ ಸಾಕ್ಷಿಯಿಂದ ಒಪ್ಪಿ ಈ ವಧುವನ್ನು ಪತ್ನಿಯಾಗಿ ಸ್ವೀಕರಿಸುತ್ತೇನೆಂದು ವರನಿಂದ ಹೇಳಿಸಿ ಮುಹೂರ್ತಕ್ಕೆ ಅನುಗುಣವಾಗಿ ಪುರೋಹಿತನು ವರನ ಕೈಯಿಂದ ವಧುವಿಗೆ ಮಾಂಗಲ್ಯವನ್ನು ಕಟ್ಟಿಸುತ್ತಾನೆ.

ಮಾಂಗಲ್ಯಧಾರಣೆಯಾದ ನಂತರ ಕಟ್ಟಿರುವ ಮಾಂಗಲ್ಯದ ಮೂರು ಗಂಟಿಗೆ ವರನ ಕಡೆಯಿಂದ ಪೂಜೆಯನ್ನು ಮಾಡಿಸುತ್ತಾನೆ. ತರುವಾಯ ಸಿಂಧೂರವನ್ನು ವರನ ಕೈಯಿಂದಲೇ ವಧುವಿನ ಬೈತಲೆ ಯಲ್ಲಿ ತುಂಬಿಸುತ್ತಾನೆ. ಹಾಗೆ ವಧುವಿನ ಕೈ ಬಳೆಗಳಿಗೆ ಪೂಜೆಯನ್ನು ಮಾಡಿಸುತ್ತಾನೆ. ಮತ್ತು ಕಾಲುಂಗುರವನ್ನು ಬೆರಳಿಗೆ ತೊಡಿಸುತ್ತಾರೆ. ನಂತರ ವಧುವಿಗೆ ಮುಡಿಯಲು ಹೂವನ್ನು ನೀಡುತ್ತಾನೆ. ಈ ಮೇಲಿನ ಎಲ್ಲಾ ಕಾರ್ಯಗಳು ವಧುವಿನ ಮುತ್ತೈದೆತನದ ಸಂಕೇತಗಳಾಗಿ ಪ್ರತಿಬಿಂಬಿಸುತ್ತವೆ. ನಂತರ ಬ್ರಹ್ಮಗಂಟನ್ನು ಹಾಕುತ್ತಾರೆ. ಸಪ್ತಪದಿಯಾಗಿ ಏಳು ಹೆಜ್ಜೆಗಳನ್ನು ವಧುವರರಿಂದ ಗೃಹಸ್ಥ ವನ್ನು ಸೇರುವಂತೆ ಕಾಲಿರಿಸುತ್ತಾರೆ. ಕನ್ಯಾದಾನವನ್ನು ವಧುವಿನ ತಂದೆ ತಾಯಿ ವರನ ಕೈಯಲ್ಲಿ ವಧುವಿನ ಕೈ ಇರಿಸಿ ಅವರ ಕೈಯಲ್ಲಿ ತುಂಬಿದ ತೆಂಗಿನ ಕಾಯಿ ಇರಿಸಿ ವಧುವಿನ ತಂದೆ ತಾಯಿಯವರು ಹಾಲು ಮತ್ತು ತುಪ್ಪವನ್ನು ತೆಂಗಿನ ಕಾಯಿ ಮೇಲೆ ಹಾಕಿ ತಮ್ಮ ಮಗಳನ್ನು ಧಾರೆ ಎರೆಯುತ್ತಾರೆ. ಹೀಗೆ ವಧುವಿನ ಕುಟುಂಬದವರು ಈ ಕಾರ್ಯಕ್ರಮವನ್ನು ಮಾಡುತ್ತಾರೆ.

ತರುವಾಯ ಅವರನ್ನು ಮದುವೆ ಮಂಟಪದಿಂದ ಹೊರಗೆ ಕರೆತಂದು ವಸಿಷ್ಠಾರುಂಧತಿ ಪೂಜೆಯನ್ನು ಮಾಡಿಸಿ ವರನು ವಧುವಿನ ತೋರುಬೆರಳು ಹಿಡಿದುಕೊಂಡು ಆಕಾಶದ ಕಡೆಗೆ ವಸಿಷ್ಠಾರುಂಧತಿ ನಕ್ಷತ್ರವನ್ನು ತೋರಿಸುತ್ತಾನೆ. ನಂತರ ಗುರು ಹಿರಿಯರನ್ನು ಹಾಗೂ ಕುಲದ ದೈವರನ್ನು ವಧುವರರು ನಮಸ್ಕರಿಸುತ್ತಾರೆ.

ವರ ವಧುವಿಗೂ ಕೂಡಿಸಿಕೊಂಡು ಪುರೋಹಿತರು ತಟ್ಟೆಯಲ್ಲಿ ಹಾಲನ್ನು ಹಾಕಿ ಮೂಗುತಿಯ ಹಾಕಿ ಅದನ್ನು ಯಾರು ಮೊದಲು ಹುಡುಕುವಿರೆಂದು ವರ ವಧುವಿಗೆ ಪ್ರೇರೆಪಿಸುತ್ತಾರೆ. ಯಾರು ಮೊದಲು ಮೂಗುತಿಯನ್ನು ಹುಡುಕುತ್ತಾರೋ ಅವರು ಗೆದ್ದಂತೆ. ಇದೇ ರೀತಿ ಮೂರು ಬಾರಿ ಮೂಗುತಿ ಹುಡುಕಿಸುವ ಆಟ ಆಡಿಸುತ್ತಾರೆ. ಅತಿ ಹೆಚ್ಚಾಗಿ ವರನಿಗೆ ಸಿಕ್ಕರೆ ವಧುವಿನ ಮೇಲೆ ಹೆಚ್ಚು ಪ್ರೀತಿ ಉಳ್ಳವನಾಗುತ್ತಾನೆಂತಲೂ, ವಧುವಿಗೆ ಸಿಕ್ಕರೆ ವರನ ಮೇಲೆ ಹೆಚ್ಚು ಪ್ರೀತಿ ಉಳ್ಳವಳೆಂದು ಭಾವಿಸುವ ಭಾವನೆಯಾಗಿರುತ್ತದೆ. ಇದೇ ರೀತಿಯಾಗಿ ಗೋಧಿ ಹಿಟ್ಟನ್ನು ಪುರೋಹಿತರು ವಧುವರರ ಕೈಗಳಿಗೆ ಲೇಪಿಸಿ ಹಾಲಿನಲ್ಲಿ ಒಬ್ಬರಿಗೊಳ್ಳರು ಕೈ ತೊಳೆಸುವಂತೆ ಹೇಳುತ್ತಾರೆ. ಇವೆಲ್ಲದರ ಸಾಂಕೇತಿಕ ವಧುವರರ ಮನಸ್ಸುಗಳು ಹತ್ತಿರ ಗೊಳ್ಳುವಂತೆ ಮಾಡುವುದಾಗಿದೆ.

ಆಗ ಮೂಗುತಿ ವಧುವಿಗೆ ಸಿಕ್ಕರೆ "ಕಂಡೆ ಕಡೆ ಮೂಗುತಿ ಕಂಡೆ ಮೂಗುತಿಯಿಂದ ಮುತ್ತಿ ನಂಥ ಗಂಡನ ಕಂಡೆ" ವರನಿಗೆ ಸಿಕ್ಕರೆ "ಕಂಡೆ ಕಂಡೆ ಮೂಗುತಿ ಕಂಡೆ ಮೂಗುತಿಯಿಂದ ಮುತ್ತಿ ನಂಥ ಹೆಂಡತಿಯನ್ನು ಕಂಡೆ" ಎಂದು ವಧುವರರು ಹೇಳಬೇಕು. ಇದಾದ ನಂತರ ಕುಲಬಾಂಧವರಿಗೆ ಹಾಗೂ ನೆಂಟರಿಗೆಲ್ಲ ಭೋಜನ ಸ್ವೀಕರಿಸಲು ವಧುವಿನ ಕಡೆಯವರು ಭಿನ್ನವಿಸಿಕೊಳ್ಳುತ್ತಾರೆ.

ಅರತಕ್ಷತೆ : ವಧುವರರಿಗೆ ಮದುವೆಯ ಬಟ್ಟೆಗಳನ್ನು ತೊಡಿಸಿ ಶೃಂಗರಿಸಿ ವೇದಿಕೆಯಲ್ಲಿ ಕೂಡಿಸಿ ಎಲ್ಲಾ ಬಂಧುಬಳಗದವರು ಅಂದರೆ ಆ ನವನೂತನ ದಂಪತಿಗಳನ್ನು ಹರಸಿ, ಆಶೀರ್ವಾದಿಸಿ, ಆರತಿಯನ್ನು ಮಾಡಿ ಅಕ್ಷತೆಯನ್ನು ಹಾಕಿ 'ನಿಮ್ಮ ಬಾಳು ಬಂಗಾರವಾಗಲೆಂದು' ಹೇಳುತ್ತಾರೆ. ಹಾಗೆಯೇ ಅವರು ತಂದಿರುವಂತಹ ಉಡುಗೊರೆಗಳನ್ನು ನೀಡುತ್ತಾರೆ. ಆರತಕ್ಷತೆಯ ಈ ಕಾರ್ಯಕ್ರಮ ವಧುವಿಗೆ ಮನೆ ತುಂಬಿಸಿಕೊಂಡು ಮೇಲೆ ವರನ ಮನೆಯಲ್ಲೆ ನಡೆಯುತ್ತದೆ.

ಊಟವಾದ ನಂತರ ಮಗಳನ್ನು ವರನ ಮನೆಯವರಿಗೆ ಒಪ್ಪಿಸಲು ಸಿದ್ಧರಾಗುತ್ತಾರೆ. ಈ ಕಾರ್ಯಕ್ರಮಕ್ಕೆ 'ಹೆಣ್ಣೊಪ್ಪಿಸುವ ಕಾರ್ಯ'ವೆಂದು ಹೇಳುತ್ತಾರೆ. ಇದರಲ್ಲಿ ವಧುವಿನ ತಂದೆ ತಾಯಿ ಅವರ ಕುಲದ ದೈವಕ್ಕೆ ತಮ್ಮ ಮಗಳನ್ನು ನಿಮ್ಮ ಮಗಳೆಂದು ಒಪ್ಪಿಸುತ್ತಾರೆ. ನಂತರ ಆ ದೈವದವರು ವರನನ್ನು ಕರೆದು ಗಂಡಿನ ಕಡೆಯವರಿಗೆ ನಮ್ಮ ಮಗಳನ್ನು ಈಗ ನಿಮ್ಮ ಮಗಳನ್ನಾಗಿ ಅವಳ ಸಣ್ಣಪುಟ್ಟ ತಪ್ಪುಗಳನ್ನು ಮನ್ನಿಸಿ ಅವಳನ್ನು ಪ್ರೀತಿಯಿಂದ ಕಾಣಬೇಕೆಂದು ವಧುವಿನ ಕೈಯನ್ನು ವರ ಮತ್ತು ಅವರ ಕುಟುಂಬದವರ ಕೈಗಿರಿಸಿ ಪ್ರಮಾಣ ತೆಗೆದುಕೊಳ್ಳುತ್ತಾರೆ. ಹಾಗೆಯೇ

ವರನ ಕುಲದ ದೈವಕ್ಕೂ ಒಪ್ಪಿಸಿ ನಮ್ಮ ದೈವದ ಹೆಣ್ಣು ನಿಮ್ಮ ಮಗಳೆಂದು ಭಾವಿಸಿ ಅವರ ಜೀವನವನ್ನು ಸುಗಮವಾಗಿ ಮತ್ತು ಲೋಪದೋಷಗಳನ್ನು ತಾವುಗಳು ಮನ್ನಿಸಿ ಸರಿಪಡಿಸಬೇಕೆಂದು ಭಿನ್ನವಿಸಿಕೊಳ್ಳುತ್ತಾರೆ. ಒಪ್ಪಿಸುವ ಕಾರ್ಯದ ನಂತರ ವಧುವನ್ನು ಕರೆದುಕೊಂಡು ವರನ ಕಡೆಯವರು ತಮ್ಮ ಊರಿಗೆ ಹಿಂತಿರುಗುತ್ತಾರೆ.

ಮನೆ ತುಂಬಿಸಿಕೊಳ್ಳುವುದು : ಇಲ್ಲಿ ಮದುವೆ ಮನೆಯಿಂದ ಕರೆತಂದ ಹೆಣ್ಣನ್ನು ಗಂಡನ ಮನೆಯವರು ಆ ಮನೆಯ ಸೊಸೆಯನ್ನಾಗಿ ಮನೆ ತುಂಬಿಸಿಕೊಳ್ಳುವ ಮುನ್ನ ಮನೆಯ ಮುಖ್ಯದ್ವಾರದ ಹೊಸ್ತಿಲಲ್ಲಿ ಮಧುಮಗಳ ಬಲಗಾಲನ್ನಿರಿಸಿ ಬೆರಳುಗಳ ಮಧ್ಯ ಮಳೆಯನ್ನಿರಿಸಿ ಮದುಮಗ ಹೊಡೆಯುತ್ತಾನೆ. ಆ ಮಹಿಳೆಯು ನೇರವಾಗಿ ಒಳ ಹೊಕ್ಕರೆ ಆ ಮನೆಯ ಸೊಸೆಯು ಚೆನ್ನಾಗಿ ಸಂಸಾರ ನಿರ್ವಹಿಸುತ್ತಾಳೆಂದು ಅದೇ ಮಳೆಯು ವಕ್ರವಾಗಿ ಹೋದರೆ ಸೊಸೆಯು ಸಂಸಾರವನ್ನು ಸರಿದೂಗಿಸುವಲ್ಲಿ ಸೋಲುತ್ತಾಳೆಂದು ಯಶಸ್ವಿಯಾಗುವುದಿಲ್ಲವೆಂದು ನಂಬುತ್ತಾರೆ. ಹೀಗೆ ಹಲವು ನಂಬಿಕೆಗಳಿವೆ. ಇದಾದ ಮೇಲೆ ಇದೇ ಹೊಸ್ತಿಲ ಮೇಲೆ ಅಕ್ಕಿ ತುಂಬಿದ ಸೇರನ್ನು ಇರಿಸಿ ಅದರ ಮೆಲೆ ಬೆಲ್ಲದಚ್ಚನ್ನು ಇರಿಸಿ ವಧುವನ್ನು ಮನೆಯ ಒಳಗೆ ಬಲಗಾಲದಿಂದ ಒಡೆಯಲು ಹೇಳುತ್ತಾರೆ. ಇದರ ಸಂಕೇತ ಅವಳು ಒದೆಯುವ ಅಕ್ಕಿ ಮತ್ತು ಬೆಲ್ಲವು ಆ ಮನೆಯ ಸಮೃದ್ಧಿಯನ್ನು ಹಾಗೂ ಮನೆತುಂಬ ನಗು ಮತ್ತು ಹರುಷ ತುಂಬಿರಲಿ ಎಂಬುದನ್ನು ಪ್ರತಿಬಿಂಬಿಸುತ್ತದೆ. ಇದನ್ನು ಸೊಸೆಯನ್ನು ಮನೆತುಂಬಿಸುವುದೆಂದು ಹೇಳುತ್ತಾರೆ. ನಂತರ ಸೊಸೆಯನ್ನು ಬಲಗಾಲನ್ನು ಒಳಗಿಟ್ಟು ಬಾ ಎಂದು ಹೇಳುತ್ತಾರೆ. ಇದಾದ ನಂತರ ವರನ ಸಹೋದರಿಯಾದವಳು ವಧುವರರಿಗೆ ಹೊಸ್ತಿಲ ಒಳಗೆ ತಡೆಗಟ್ಟಿ ಹರಿವಾಣದಲ್ಲಿ ಅವರಿಬ್ಬರ ಬಲಗಾಲನ್ನಿಡಿಸಿ ಕಾಲುತೊಳೆದು ಅಣ್ಣನಿಗೆ ಮಗಳಾದರೆ ನನ್ನ ಮಗನಿಗೆ ಸೊಸೆಯನ್ನಾಗಿ ನೀಡು ನಿನಗೆ ಮಗನಾದರೆ ನನ್ನ ಮಗಳನ್ನು ಸೊಸೆಯಾಗಿ ತೆಗೆದುಕೋ ಎಂದು ಭಾಷೆಯನ್ನು ನೀಡೆಂದು ಕೇಳುತ್ತಾಳೆ. ಆಗ ಅಣ್ಣನ್ನು ನನ್ನ ಹೆಂಡತಿಗೆ ಕೇಳಿ ಕೊಡುತ್ತೇನೆಂದು ಹೇಳುತ್ತಾನೆ. ಹೆಂಡತಿಗೆ ಕೇಳಿದ ನಂತರ ಹಿರಿಯವರಾಗಿ ನಿಮ್ಮ ತಂದೆ ತಾಯಿಯವರಿಗೆ ಕೇಳಿರೆಂದು ಹೇಳುತ್ತಾಳೆ. ತಂದೆ ತಾಯಿಗೆ ಕೇಳಿದಾಗ ಕೊಡು ಎಂದು ಅಪ್ಪಣೆಯನ್ನು ನೀಡುತ್ತಾರೆ. ಅಪ್ಪಣೆ ತೆಗೆದುಕೊಂಡು ಸಹೋದರರಿಗೆ ಮಾತನ್ನು ನೀಡುತ್ತಾನೆ. ಈ ಸಂತೋಷದಲ್ಲಿ ಪರಸ್ಪರ ಒಬ್ಬರನೊಬ್ಬರು ತಾಂಬೂಲಗಳನ್ನು ಬದಲಾಯಿಸಿಕೊಳ್ಳುತ್ತಾರೆ. ನಂತರ ಅವರನ್ನು ಒಳ ಕರೆ ತರುತ್ತಾರೆ. ಹೀಗೆ ಇನ್ನು ಅನೇಕ ತರಹದ ಹೂವಿನ ಚೆಂಡಾಟ, ಗೋಪಿ ಆಟ, ಬೆಟ್ಟಡಿಕೆ ಆಟ, ಎಲಿ ಆಟ, ಅಮ್ಮಾಪೂರಿ ಬಾವಾಪೂರಿ ಎಂದು ಹೋಳಿಗೆ ಆಟ ಹೀಗೆ ಹಲವು ಆಟಗಳನ್ನು ಆಡಿಸುತ್ತಾರೆ. ಇದೇ ರೀತಿ ಮದುವೆ ಸಂತೋಷ ಸಂಭ್ರಮಗಳು ಸಂತೋಷ ಉಂಟು ಮಾಡುತ್ತವೆ.

ಇದಾದ ನಂತರ ವರನ ಮನೆದೇವರಿಗೆ ಹೋಗಿ ಅಲ್ಲಿ ಅರಿಶಿಣ ಬಟ್ಟೆಗಳನ್ನು ತೊಟ್ಟು ಸ್ನಾನ ಮಾಡಿ ನಂತರ ಮದುವೆಯಲ್ಲಿ ಕಟ್ಟಿದ್ದ ಬಾಸಿಂಗ, ಮಾಲೆ ವಧುವಿನ ಹೂವಿನ ದಂಡಿಗಳನ್ನುಹರಿಯುವ ನದಿಯಲ್ಲಿ ವಿಸರ್ಜಿಸುತ್ತಾರೆ. ತರುವಾಯ ಮನೆದೇವರಿಗೆ ಹೂ ಹಣ್ಣುಗಳನ್ನು ಮಾಡಿಸಿ ದೇವರ ಕೃಪಾಶಿರ್ವಾದವನ್ನು ಪಡೆಯುತ್ತಾರೆ. ನಂತರ ಮನೆಯಲ್ಲಿ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ಮಾಡಿ ಸಂತಾನ ಪ್ರಾಪ್ತಿಗಾಗಿ ದೇವರಲ್ಲಿ ಮೊರೆಹೊಗುವುದು ಕಂಡುಬರುತ್ತದೆ. ಒಂದು ಒಳ್ಳೆ ದಿನವನ್ನು ನೋಡಿ ವಧುವರರಿಗೆ ಪ್ರಸ್ತ ಕಾರ್ಯವನ್ನು ಮಾಡುತ್ತಾರೆ.

ಸಾವು

ಸತ್ತಂತ ವ್ಯಕ್ತಿಯನ್ನು ಉತ್ತರಾಭಿಮುಖವಾಗಿ ಇಲ್ಲವೆ ಪೂರ್ವಾಭಿಮುಖವಾಗಿ ಕಾಲನ್ನು ಮಾಡಿ ಮಲಗಿಸುತ್ತಾರೆ. ಅಂದರೆ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿ ತಲೆಯನ್ನು ಮಾಡುತ್ತಾರೆ. ಇದರಲ್ಲಿ ಸತ್ತಂತ ವ್ಯಕ್ತಿಯನ್ನು ಮಲಗಿಸುವ ಪದ್ಧತಿ ರೂಢಿಯಲ್ಲಿದೆ. ಸತ್ತ ವ್ಯಕ್ತಿಯ ಎರಡೂ ಕೈಗಳನ್ನು ಎದೆಯ ಮೇಲೆ ಜೋಡಿಸಲಾಗುತ್ತದೆ. ತಲೆಯ ಹಿಂಭಾಗಕ್ಕೆ ದೀಪವನ್ನು ಹಚ್ಚಿ ಇಡಲಾಗುತ್ತದೆ. ಶವಕ್ಕೆ ಕುಂಕಮ ಹಚ್ಚಿ, ಹಾರ ಹಾಕಿ ಹೂಗಳನ್ನು ಹಾಕಿ ಧೂಪದೀಪಗಳಿಂದ ಕಾಯಿ ಒಡೆದು ಪೂಜಿಸುವ ಪದ್ಧತಿ ಇದೆ. ಇದರ ಸಂಕೇತ ಸತ್ತವ್ಯಕ್ತಿ ದೇವರ ಸಮಾನ ಎಂಬ ನಂಬಿಕೆ. ಸತ್ತಂತ ಸುದ್ದಿಯನ್ನು ಶೀಘ್ರುವಾಗಿ ಎಲ್ಲ ಬಂಧು ಬಳಗಕ್ಕೆ ತಿಳಿಸುವುದಕ್ಕೆ ಹಾಗೂ ಅಂತಿಮ ಸಂಸ್ಕಾರ ಮಾಡುತ್ತೇವೆಂದು ದೂರದ ಸಂಬಂಧಿಗಳಿಗೂ ಹೇಳಿ ಕಳಿಸುವ ಪದ್ಧತಿಯಿದೆ. ಎಲ್ಲ ಕುಲಬಂಧಾವರು ಹಾಗೂ ದೂರದ ಸಂಬಂಧಿಗಳು ಬರುವಾಗ ಮೃತನ ದೇಹಕ್ಕೆ ಹೂವಿನ ಹಾರ, ತೆಂಗಿನ ಕಾಯಿ, ಕರ್ಪೂರ, ಊದುಬತ್ತಿ ತರುವುದುಂಟು. ಬಂದ ಬಂಧುಗಳು ಮೃತರ ಕುಟುಂಬಕ್ಕೆ ಸಾಂತ್ವನ ಹಾಗೂ ಮೃತನ ಅಗಲಿಕೆಯನ್ನು ಸಹಿಸಿಕೊಳ್ಳುವಂತಹ ಶಕ್ತಿ ದೈರ್ಯ ಆ ಪರಮಾತ್ಮನು ನೀಡಲೆಂದು ಪ್ರಾರ್ಥಿಸಿ ನೊಂದವರಿಗೆ ಸಾಂತ್ವನದ ಮಾತುಗಳನ್ನು ಆಡುತ್ತಾರೆ. ಕುಲಬಾಂಧವರು ಸತ್ತಂತ ವ್ಯಕ್ತಿಯ ಗುಣಗಳನ್ನು ಅವರು ಮಾಡಿರುವ ಒಳ್ಳೆಯ ಕಾರ್ಯಗಳನ್ನು ಕೆಲಸಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವರು. ನಂತರ ಶವಸಂಸ್ಕಾರಕ್ಕಾಗಿ ಕುಲದ ದೈವದವರು ಸೇರಿಕೊಂಡು ಮಾರುಕಟ್ಟೆಗೆ ಹೋಗಿ ಶವಸಂಸ್ಕಾರಕ್ಕೆ ಬೇಕಾಗುವ ಸಂಸ್ಕಾರ ಸಾಮಗ್ರಿಗಳನ್ನು ಅಂದರೆ ಬಿದಿರು, ಬಟ್ಟೆ, ನಾಲ್ಕು ಮಡಕೆ, ಹಗ್ಗ, ಹೂವು, ಕಾಯಿ, ಕರ್ಪೂರ, ಊದಿನಕಡ್ಡಿ, ಅರಿಶಿಣ, ಕುಂಕುಮ, ಮೈತೊಳೆಯಲು ಸಾಬೂನು, ಸೀಗೆಕಾಯಿಪುಡಿ, ಗಂಧದ ಎಣ್ಣೆ, ಎಳ್ಳು, ಮಂಡಕ್ಕಿ, ಎಲೆ, ಬಡೆಸೋಪು, ಸಾಸಿವೆ, ಗೋಧಿಹಿಟ್ಟು, ತುಪ್ಪ ಇವೆಲ್ಲವನ್ನು ಖರೀದಿಸಿ ತರುತ್ತಾರೆ. ಇವರು ಈ ಸಾಮಗ್ರಿಗಳನ್ನು ಕೊಂಡು ತಂದ ನಂತರ ಬಿದಿರನ್ನು ಕತ್ತರಿಸಿ ಚಟ್ಟವನ್ನು ತಯಾರಿಸುತ್ತಾರೆ. ಇದರ ಮೇಲೆ ಜೋಳದ ದಂಟನ್ನು ಹಾಸುತ್ತಾರೆ. ಇದನ್ನು ಸಿದ್ಧಪಡಿಸಿದ ನಂತರ ಸತ್ತ ವ್ಯಕ್ತಿಗೆ ಸ್ನಾನ ಮಾಡಿಸಲು ಮನೆಯ

ಹೊರಗಡೆ, ನೀರನ್ನು ಕಾಯಿಸುತ್ತಾರೆ. ಕಾಯಿಸಿದ ಬಳಿಕ ತಂದಿರುವ ಹೊಸ ಮಡಕೆಯಲ್ಲಿ ಸತ್ತ ವ್ಯಕ್ತಿಯನ್ನು ಹೊರ ತಂದು ಮಣೆಯ ಮೇಲೆ ಕೂರಿಸಿ ತಲೆಗೆ ತುಪ್ಪ ಹಚ್ಚಿ ಸೀಗೆಕಾಯಿ ಪುಡಿಯಿಂದ ಸ್ನಾನ ಮಾಡಿಸುತ್ತಾರೆ. ತುಪ್ಪ ಹಚ್ಚುವುದರ ಮೂಲಕ ಶವಕ್ಕೆ ಅಭ್ಯಂಜನ ಸ್ನಾನದ ಸಾಂಕೇತಿಕವಾಗಿದೆ. ಸ್ನಾನದ ನಂತರ ಶವಕ್ಕೆ ಕೌಪಿನವನ್ನು ಉಡಿಸಿ ಮೈಮೇಲೆ ಬಿಳಿಯ ಬಟ್ಟೆಯನ್ನು ಹೊದಿಸಿ ಬಿದಿರಿನ ಚಟ್ಟದ ಮೇಲೆ ಶವಕ್ಕೆ ಮಲಗಿಸುತ್ತಾರೆ. ಅರಿಶಿಣ ಕುಂಕುಮ ಹಚ್ಚಿ, ಹೂವು ಹಾಕಿ ಪೂಜೆ ಮಾಡುತ್ತಾರೆ. ನಂತರ ಗೋಧಿಹಿಟ್ಟಿನ ಆರತಿಯನ್ನು ಮಾಡಿ ಮನೆಯ ಹಿರಿಯಮಗನೆ ಈ ಎಲ್ಲ ಕಾರ್ಯಮಾಡಿ ಆರತಿಯನ್ನು ಬೆಳಗುತ್ತಾನೆ. ನಂತರ ವಾದ್ಯದೊಂದಿಗೆ ರುದ್ರಭೂಮಿಯತ್ತ ತೆರಳುತ್ತಾರೆ. ಹೀಗೆ ಹೋಗುವಾಗ ದೊಡ್ಡ ಮಗನ ಕೈಯಲ್ಲಿ ಬೆಂಕಿಯ ಮಡಕೆ ಮತ್ತು ಇನ್ನೊಂದು ಮಡಕೆಯಲ್ಲಿ ನೀರನ್ನು ಭುಜದ ಮೇಲೆ ಹೊತ್ತು ಮುಂದೆ ನಡೆದಿರುತ್ತಾನೆ. ಹೀಗೆ ಹೋಗುವಾಗ ಮಂಡಕ್ಕಿ, ಎಲೆ, ಸಾಸಿವೆಯನ್ನು ಶವದ ಮೇಲೆ ಚೆಲ್ಲುತ್ತ ಹಾಗೂ ದೇವರ ನಾಮವನ್ನು ಹೇಳುತ್ತಾ ಸಾಗುತ್ತಾರೆ. ದೇವರ ನಾಮವೆಂದರೆ ರಾಮ್ ನಾಮ್ ಸತ್ಯ ಹೈ ಎಂದು ಹೇಳುತ್ತಿರುತ್ತಾರೆ.

ರುದ್ರಭೂಮಿಯ ಸಮೀಪವಾಗಿ ಶವವನ್ನು ಭುಜದಿಂದ ಕೆಳಗಿಳಿಸಿ ತಲೆಯ ಹಿಂಭಾಗದಲ್ಲಿ ಐದು ಕಲ್ಲುಗಳನ್ನಿಟ್ಟು ಅವುಗಳಿಗೆ ನೀರು ಚಿಮುಕಿಸಿ ಅರಿಶಿಣ ಕುಂಕುಮ ಹಾಕಿ ಧೂಪ ಬೆಳಗಿ ಕಾಯಿ ಒಡೆದು ಕರ್ಪೂರ ಬೆಳಗಿ ತೆಗೆದುಕೊಂಡು ಹೋದ ಬೆಂಕಿಯಲ್ಲಿ ಲೋಬಾನ ಹಾಕಿ ಶವದ ಬಾಯಿಯಲ್ಲಿ ಎಳ್ಳು ಮತ್ತು ದುಡ್ಡು ಕಾಸಿನ ಜೊತೆ ಎಳ್ಳನೀರನ್ನು ಬಿಡುತ್ತಾರೆ. ಹೀಗೆ ಶವಸಂಸ್ಕಾರಕ್ಕೆ ಹೋದವರು ಎಲ್ಲರೂ ಎಳ್ಳು ನೀರು ಬಿಡುತ್ತಾರೆ. ನಂತರ ಮತ್ತೆ ಶವವನ್ನು ಹೊತ್ತುಕೊಂಡು ರುದ್ರಭೂಮಿಯಲ್ಲಿ ತೆಗೆದುಕೊಂಡು ಹೂಳಲು ಕುಣಿ ಮಾಡಿರುವ ಅಥವಾ ಕಿಚ್ಚು ಮಾಡಲು ಸಿದ್ಧಮಾಡಿರುವ ಕಟ್ಟಿಗೆಯ ಹತ್ತಿರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕುಣಿಯಲ್ಲಿ ಉತ್ತರಾಭಿಮುಖ ವಾಗಿ ಕುಳಿತುಕೊಳ್ಳುವ ಎತ್ತರಕ್ಕೆ ಗುಣಿಯನ್ನು ಕೊರೆದಿರುತ್ತಾರೆ. ಅದರಲ್ಲಿ ಶವವನ್ನು ಇಳಿಸಿ ಕುಳ್ಳಿರಿಸುತ್ತಾರೆ. ನಂತರ ಅದಕ್ಕೆ ಬಿದರಿನ ತಟ್ಟೆಯನ್ನು ಇಟ್ಟು ಶವದ ಮುಂದೆ ವಿಭೂತಿ ಉಂಡೆ, ತುಂಬಿದ ಕಾಯಿಯನ್ನು ಇಟ್ಟು ಹಿರಿಯ ಮಗ ಮೊದಲು ಮಣ್ಣು ಕೊಡುತ್ತಾನೆ. ನಂತರ ಹೋದವರೆಲ್ಲರು ಮಣ್ಣನ್ನು ಕೊಡುತ್ತಾರೆ. ನಂತರ ಮಣ್ಣಿನ ದಿಮ್ಮೆಯಾಕಾರದಲ್ಲಿ ಮಾಡಿ ಅದರ ಮೇಲೆ ಹೂ ಅರಿಶಿಣ ಕುಂಕುಮ ಹಾಕಿ ಧೂಪವನ್ನು ಹಾಕಿ ಕಾಯಿ ಒಡೆದು ಕರ್ಪೂರ ಬೆಳಗುತ್ತಾರೆ.

ಹಿರಿಯ ಮಗನಿಗೆ ಕೈಯಲ್ಲಿ ಬೆಂಕಿ ಮತ್ತು ನೀರಿನ ಮಡಕೆಯನ್ನು ಕೊಟ್ಟು ಕುಣಿಯ ಸುತ್ತ ಮೂರು ಬಾರಿ ಸುತ್ತಿಸುತ್ತಾರೆ. ಹೀಗೆ ಸುತ್ತುವಾಗ ಶವದ ತಲೆಯ ಹಿಂಭಾಗದಲ್ಲಿ ಬೀಗರಾದವರು ಹೊತ್ತುಕೊಂಡು ಹೋಗುವ ಮಡಕೆಗೆ ಕಲ್ಲಿನಿಂದ ಇಲ್ಲವೆ ಆಯುಧದಿಂದ ಒಂದು ಸುತ್ತಿಗೆ

ಒಂದು ಸಾರಿಯಂತೆ ಮೂರು ಸಾರಿ ತೂತನ್ನು ಹಾಕುತ್ತಾರೆ. ನಂತರ ಶವದ ಹಿಂಭಾಗಕ್ಕೆ ಬಂದು ಮಡಕೆ ಹೊತ್ತವನು ಮಡಕೆ ಮತ್ತು ಬೆಂಕಿಯನ್ನು ಹಿಮ್ಮುಖವಾಗಿ ಬಿಟ್ಟು ಶವಕ್ಕೆ ತಿರುಗಿ ನೋಡದ ಹಾಗೆ ಮುಂದೆ ಹೋಗುತ್ತಾನೆ.

ಸುಟ್ಟಾಗ ಇದೇ ರೀತಿ ಕಿಚ್ಚು ಹಚ್ಚಿದ ನಂತರ ಮೂರು ಸುತ್ತು ಮಡಕೆ ನೀರು ಬೆಂಕಿ ತೊಗೊಂಡು ಸುತ್ತಿ ಬೀಗರು ಮೂರು ತೂತು ಹಾಕುತ್ತಾನೆ. ಮನೆಯಿಂದ ಮಡಕೆಯಲ್ಲಿ ಕೊಂಡೊಯ್ದ ಬೆಂಕಿಯಿಂದಲೇ ಚಿತೆಗೆ ಬೆಂಕಿ ಇಡುವರು.

ಶವಸಂಸ್ಕಾರಕ್ಕೆ ಹೋದವರೆಲ್ಲರು ನೀರಿದ್ದಲ್ಲಿಗೆ ಹೋಗಿ ಸ್ನಾನ ಮಾಡಿಕೊಂಡು ಒದ್ದೆ ಬಟ್ಟೆಯಲ್ಲಿ ಮನೆಗೆ ಬರುತ್ತಾರೆ. ಬರುವಾಗ ಕೈಯಲ್ಲಿ ಗರಿಕೆ ಹುಲ್ಲನ್ನು ಹಿಡಿದು ತರುತ್ತಾರೆ. ಮನೆಯ ಕಡೆ ಶವ ತೆಗೆದುಕೊಂಡು ಹೋದ ನಂತರ ಮನೆಯ ಹೆಣ್ಣು ಮಕ್ಕಳು ಮನೆಯನ್ನು ಶುಭ್ರಗೊಳಿಸುತ್ತಾರೆ. ಸತ್ತ ವ್ಯಕ್ತಿಯನ್ನು ಮಲಗಿಸಿದ ಸ್ಥಳದಲ್ಲಿ ದೀಪವನ್ನು ಹಚ್ಚಿ ಇಟ್ಟಿರುತ್ತಾರೆ. ಹೊರಗಡೆ ಮನೆಯ ಹೊರಗಿನ ಮುಂಬಾಗಿಲು ಪಕ್ಕದಲ್ಲಿ ಸೆಗಣಿಯನ್ನು ಬಟ್ಟಲಾಕಾರದಲ್ಲಿ ಮಾಡಿ ಇಟ್ಟಿರುತ್ತಾರೆ. ಸಂಸ್ಕಾರಕ್ಕೆ ಹೋಗಿ ಸ್ನಾನ ಮಾಡಿ ಬಂದವರು ತಂದಿರುವ ಗರಿಕೆ ಹುಲ್ಲನ್ನು ಸೆಗಣಿಯ ಮೇಲೆ ಹಾಕಿ ಮನೆ ಹೊರಗಿನಿಂದ ದೀಪವನ್ನು ನೋಡಿ ನಮಸ್ಕರಿಸುತ್ತಾರೆ. ನಮಸ್ಕರಿಸಿದ ದೂರದ ಸಂಬಂಧಿಗಳು ಕುಲಬಾಂಧವರು ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ.

ಮೂರುದಿನದ ಕಾರ್ಯಕ್ರಮ : ಶವಸಂಸ್ಕಾರವಾದ ಮೂರನೆಯ ದಿನಕ್ಕೆ ಮಾಡುವ ಕಾರ್ಯ ಇದಾಗಿದೆ. ಇಲ್ಲಿ ಮೂರನೆಯ ದಿವಸ ಬೆಳಗಿನ ಜಾವಕ್ಕೆ ಮನೆಯ ಹೊರ ಬಾಗಿಲಲ್ಲಿ ಹಾಲು, ಮೊಸರು, ಲೋಬಾನವನ್ನು ಇಟ್ಟಿರುತಾರೆ. ನಂತರ ಕುಲಬಾಂಧವರಿಗೆ ಹೋಗಿ ಕರೆದು ಬರುತ್ತಾರೆ. ಕುಲಬಾಂಧವರೆಲ್ಲರೂ ಬಂದು ಹಾಗೂ ಶವಸಂಸ್ಕಾರಕ್ಕೆ ಪಾಲ್ಗೊಂಡ ಬಳಗದವರು ಈ ಕಾರ್ಯಕ್ರಮಕ್ಕೆ ತಪ್ಪದೆ ಬರಬೇಕಾಗುತ್ತದೆ. ಹಾಗೂ ಸತ್ತ ವ್ಯಕ್ತಿಗೆ ಮೊದಲು ಹೆಗಲು ಕೊಟ್ಟವರು ಬರಬೇಕಾಗುತ್ತದೆ. ಇವರೆಲ್ಲರು ಹೊರಗಿಟ್ಟಿರುವ ಹಾಲು ಮೊಸರು ಲೋಬಾನದಲ್ಲಿ ಕೈಯನ್ನು ಅದ್ದುವರು. ಈ ಕಾರ್ಯಕ್ರಮ ನಡೆಯುವ ವೇಳೆಗೆ ಯಾರಾದರಿಬ್ಬರು ಸತ್ತಂತಹ ವ್ಯಕ್ತಿಯ ಪ್ರಿಯವಾದ ವಸ್ತುಗಳನ್ನು ಅವನು ಬಳಸುತ್ತಿದ್ದ ತಿಂಡಿ ತಿನಿಸು ಫಲಾಹಾರಗಳನ್ನು ತರುತ್ತಾರೆ. ನಂತರ ಎಲ್ಲರೂ ಮುಟ್ಟಿರುವಂತಹ ಹಾಲು, ಮೊಸರು, ಲೋಬಾನವನ್ನು ತೆಗೆದುಕೊಂಡು ರುದ್ರಭೂಮಿಗೆ ತೆರಳುತ್ತಾರೆ. ರುದ್ರಭೂಮಿಯ ಸಮೀಪದಲ್ಲಿ ತೆಗೆದುಕೊಂಡು ಹೋಗಿರುವ ಎಲ್ಲ ಅಡಿಗೆ ಸಾಮಾಗ್ರಿಗಳನ್ನು ಅಂದರೆ ಅಕ್ಕಿ, ಬೇಳೆ, ಸೊಪ್ಪು, ತರಕಾರಿಗಳನ್ನು, ಗೋಧಿಹಿಟ್ಟನ್ನು ನಾದಿ ೧೬ ಹುರುಳಿಗಳನ್ನು ಮಾಡಿ ಒಂದೇ ಮಡಕೆಯಲ್ಲಿ ಇವೆಲ್ಲವನ್ನು ಹಾಕಿ ಬೇಯಿಸುತ್ತಾರೆ. ಇವೆಲ್ಲ ಬೆಂದ ಮೇಲೆ ಹುರುಳಿಗಳನ್ನು ಮಾತ್ರ ಹೊರ ತೆಗೆದು ಬೇರ್ಪಡಿಸಿ ಬೇಯಿಸಿದ

ಆಹಾರವನ್ನು ಎರಡು ಎಡೆಯನ್ನಾಗಿ ಮಾಡುತ್ತಾರೆ. ಪತ್ರಾವಳಿ ಎಲೆಯಲ್ಲಿ ಎಡೆ ಇಡುತ್ತಾರೆ. ಇದರಲ್ಲಿ ತಂದ ಫಲಹಾರಗಳನ್ನು ತಿಂಡಿ ತಿನಿಸುಗಳನ್ನು ಹಾಕಿ ಸತ್ತ ವ್ಯಕ್ತಿಯು ಕುಡಿಯುವವನಾಗಿದ್ದಾರೆ, ಧೂಮಪಾನ ಮಾಡುವವನಿದ್ದರೆ, ಮಾಂಸಾಹಾರಿಯಾಗಿದ್ದರೆ ಈ ಎಡೆಯಲ್ಲಿ ಮಾಂಸ, ಮದ್ಯ ಮತ್ತು ಬೀಡಿ, ಸಿಗರೇಟನ್ನು ಎಡೆಯಲ್ಲಿ ಇಡುತ್ತಾರೆ. ಬೇರ್ಪಡಿಸಿದ ಹುರುಳಿಗಳನ್ನು ತೆಗೆದುಕೊಂಡು ಹೋಗಿರುವ ಹಾಲಿನಲ್ಲಿ ಹಾಕುತ್ತಾರೆ. ನಂತರ ಮೊದಲು ಎಡೆಯನ್ನು ರುದ್ರಭೂಮಿಯ ಸಮೀಪ ಶವ ಇಳಿಸಿದ ಸ್ಥಳದಲ್ಲಿ ಎಡೆಯನ್ನಿಟ್ಟು ಹಾಲನ್ನು ಹಾಕುತ್ತಾರೆ. ನಂತರ ಲೋಬಾನ ಹಾಕಿ ಪೂಜೆ ಮಾಡುತ್ತಾರೆ. ಎರಡನೆಯ ಎಡೆಯನ್ನು ವ್ಯಕ್ತಿಯನ್ನು ಶವಸಂಸ್ಕಾರದ ಸ್ಥಳದಲ್ಲಿ ಎಡೆಯಿಟ್ಟು ಮೊದಲಿನ ಸ್ಥಳದಲ್ಲಿ ಮಾಡಿದಂತೆ ಹಾಗೆಯೆ ಪೂಜೆ ಮಾಡುತ್ತಾರೆ. ಬೆಂಕಿ ಹಿಡಿದು ಹಿರಿಯ ಮಗನಿಗೆ ಋಣಮುಕ್ತವಾಗುವಂತೆ ಕೇಶಮುಂಡನೆ ಮಾಡಿಸಿ, ಆ ಕೇಶವನ್ನು ಸಮಾಧಿಯ ಶಿರದ ಭಾಗಕ್ಕೆ ತಂದಿಡುತ್ತಾನೆ. ಅವನ ಕೈಯಿಂದಲೇ ಎಡೆಯನ್ನಿಟ್ಟು ಪೂಜೆ ಮಾಡುಸುತ್ತಾನೆ. ನಂತರ ನೀರಿರುವ ಸ್ಥಳದಲ್ಲಿ ಶವ ಹೊತ್ತಿದ್ದ ಪ್ರಥಮವಾಗಿ ಹೆಗಲು ಕೊಟ್ಟವರಿಗೆ ಹೆಗಲಿಳಿಸುವ ಕಾರ್ಯ ನಡೆಯುತ್ತೆ. ಇಲ್ಲಿ ಹಿಟ್ಟಿನ ಹುರುಳಿಗಳಿಂದ ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ಭುಜಕ್ಕೆ ಎರಡು ಹುರುಳಿಗಳನ್ನು ಹೆಗಲ ಮೇಲಿಂದ ಕಾಲಿನವರೆಗೆ ಇಳಿಸಿ ಅದನ್ನು ನೀರಿಗೆ ಹಾಕುತ್ತಾರೆ. ಇದೇ ರೀತಿಯಾಗಿ ಹೆಗಲು ಕೊಟ್ಟ ನಾಲ್ಕು ಜನರಿಗೆ ಹೆಗಲನ್ನು ಇಳಿಸುತ್ತಾರೆ. ಈ ಕಾರ್ಯ ಮುಗಿದ ನಂತರ ಹೊಳೆಯಲ್ಲಿ ಸ್ನಾನ ಮಾಡಿಕೊಂಡು ಒದ್ದೆ ಬಟ್ಟೆಯಿಂಧ ಮನೆಗೆ ತೆರಳುತ್ತಾರೆ.

ಮನೆಯಲ್ಲಿ ಅವರು ರುದ್ರಭೂಮಿಯಿಂದ ಮರಳಿ ಬರುವುದರೊಳಗೆ ಮನೆಯನ್ನು ಸ್ವಚ್ಛಗೊಳಿಸಿ ಸತ್ತ ವ್ಯಕ್ತಿಯನ್ನು ಮಲಗಿಸಿದ್ದ ಸ್ಥಳದ ನಾಲ್ಕು ಮೂಲೆಗೆ ಸಪ್ಪನೆಯ ಅನ್ನ ಬೇಳೆಯನ್ನು ಎಡೆಯಾಗಿ ಇಟ್ಟಿರುತ್ತಾರೆ. ಹಾಗೆಯೇ ದೀಪವನ್ನು ಹಚ್ಚಿರುತ್ತಾರೆ. ಹೆಗಲಿಳಿಸಿಕೊಂಡು ಬಂದ ನಾಲ್ಕು ಜನರು ನಾಲ್ಕು ಎಡೆಗಳಲ್ಲಿ ತಮ್ಮ ಕೈಯಿಂದ ಮುಟ್ಟುತ್ತಾರೆ. ನಂತರ ಹೊರಗೆ ಹೋಗಿ ಕೈ ತೊಳೆದುಕೊಳ್ಳುತ್ತಾರೆ. ನಂತರ ಆ ಎಡೆಯನ್ನು ಆಕಳಿಗೆ ತಿನಿಸುತ್ತಾರೆ. ಅಂದೇ ರಾತ್ರಿ ಸತ್ತಂತಹ ವ್ಯಕ್ತಿಗೆ ಸಸ್ಯಹಾರವನ್ನಾಗಲಿ, ಮಾಂಸಾಹಾರವನ್ನಾಗಲಿ ಮಾಡಿ ಸತ್ತ ವ್ಯಕ್ತಿಯ ಸ್ಥಳದಲ್ಲಿ ತುಂಬಿದ ತಂಬಿಗೆ ಇಟ್ಟು, ದೀಪ ಹಚ್ಚಿ ಮಾಡಿದ ಅಡುಗೆಯನ್ನು ಎಡೆ ಹಾಕಿ ಮನೆಯವರೆಲ್ಲಾ ಲೋಬಾನ ಹಾಕಿ ಕೈ ಮುಗಿಯುತ್ತಾರೆ. ನಂತರ ಬಂದವರಿಗೆ ಊಟವನ್ನು ಮಾಡಿಸುತ್ತಾರೆ.

ಹದಿನಾರುದಿನದ ಕಾರ್ಯ : ಈ ಕಾರ್ಯ ಸತ್ತ ವ್ಯಕ್ತಿಯನ್ನು ಒಳ ಕರೆದುಕೊಳ್ಳುವ ಕಾರ್ಯವಾಗಿರುತ್ತದೆ. ಅಂದಿನ ದಿನ ಮನೆಗೆ ಸುಣ್ಣ ಬಣ್ಣ ಬಳಿದು ಶುಭ್ರ ಮಾಡಿ ಗೋಮೂತ್ರವನ್ನು ಮನೆಯಲ್ಲಿ ಚಿಮುಕಿಸಿ ಪವಿತ್ರವನ್ನಾಗಿ ಮಾಡುತ್ತಾರೆ. ನಂತರ ಅವರ ಮನೆ ದೇವರುಗಳನ್ನು

ಬುಟ್ಟಿಯಲ್ಲಿ ಕಂಬಳಿ ಹಾಸಿ ಅದರಲ್ಲಿರಿಸಿಕೊಂಡು ಗಂಗೆ ಸ್ಥಳಕ್ಕೆ ಹೋಗಿ ಮನೆಯ ಹಿರಿಯ ಮಗನಿಗೆ ಅಲ್ಲಿಯೇ ಸ್ನಾನ ಮಾಡಿಸಿ ನಂತರ ಅವನು ಆ ದೇವರುಗಳನ್ನೆಲ್ಲಾ ತೊಳೆದು ಪಂಚಾಮೃತದಿಂದ ಅಭಿಷೇಕ ಮಾಡಿಸಿ ಕಂಬಂಳಿಯನ್ನು ನೆಲಕ್ಕೆ ಹಾಸಿ ತೊಳದಿರುವ ಪ್ರತಿಯೊಂದು ದೇವರ ಮೂರ್ತಿಗಳನ್ನು ಪೂಜೆ ಮಾಡುತ್ತಾರೆ. ಈ ಕಾರ್ಯದಲ್ಲಿ ಪ್ರಮುಖವಾಗಿ ಸತ್ತವ್ಯಕ್ತಿಯ ಚಿತ್ರವನ್ನು ಮಾಡಿಸಿ ಅಲ್ಲಿಗೆ ತೆಗೆದುಕೊಂಡು ಹೋಗಿರುತ್ತಾರೆ. ಅದನ್ನು ಪ್ರತ್ಯೇಕವಾಗಿ ತೊಳೆದು ಅಭಿಷೇಕ ಮಾಡಿ ಪ್ರತ್ಯೇಕವಾಗಿ ಅದನ್ನು ಕೊಬ್ಬರಿ ಬಟ್ಟಲದಲ್ಲಿ ಇರಿಸುತ್ತಾರೆ. ದೇವರಿಗೆ ಪೂಜೆ ಸಲ್ಲಿಸಿ ಮತ್ತು ಎಲ್ಲ ದೇವರನ್ನು ಬುಟ್ಟಿಯಲ್ಲಿಟ್ಟುಕೊಂಡು ಸತ್ತ ವ್ಯಕ್ತಿಯ ಬೆಳ್ಳಿಯ ಪದಕವನ್ನು ಕೈಯಲ್ಲಿ ಹಿಡಿದುಕೊಂಡು ತುಂಬಿದ ಕೊಡವನ್ನು ತೆಗೆದುಕೊಂಡು ಕಳಸದೊಂದಿಗೆ ವಾದ್ಯದೊಂದಿಗೆ ಮನೆಗೆ ಬರುತ್ತಾರೆ. ನಂತರ ದೇವರುಗಳನ್ನೆಲ್ಲಾ ಮನೆಯ ಜಗುಲಿ ಮೇಲಿರಿಸಿ ತುಂಬಿದ ಕೊಡವನ್ನು ದೇವರ ಮನೆಯಲ್ಲಿ ಪ್ರತ್ಯೇಕವಾಗಿ ಛಾವಣಿಯಿಂದ ಹೂವಿನ ಸರಮಾಲೆಯನ್ನು ಬಿಂದಿಗೆಯ ಒಳಗೆ ಇಳಿಯಾಗಿ ಬಿಟ್ಟಿರುತ್ತಾರೆ. ಆ ಬಿಂದಿಗೆ ಹತ್ತಿರ ಸತ್ತ ವ್ಯಕ್ತಿಯ ಪ್ರತ್ಯೇಕ ಮೂರ್ತಿಯನ್ನು ಇರಿಸಿ ಮಾಡಿದ ಭಕ್ಷಭೋಜನಗಳನ್ನು ಎಡೆಯಾಗಿಟ್ಟು ಪೂಜೆಯನ್ನು ಮಾಡುತ್ತಾರೆ. ಬಂದವರಿಗೆಲ್ಲಾ ಊಟವನ್ನು ಮಾಡಿಸುತ್ತಾರೆ. ವ್ಯಕ್ತಿಯನ್ನು ಮನೆಯೊಳಗೆ ಕರೆದುಕೊಂಡು ದೇವರಲ್ಲಿ ಸೇರಿಸುವ ಕಾರ್ಯವೆಂದು, ಇದನ್ನೇ ೧೬ ದಿವಸದ ಕಾರ್ಯವೆಂದು ಹೇಳುತ್ತಾರೆ. ಸತ್ತವ್ಯಕ್ತಿಯ ವರ್ಷಾಚರಣೆ ಯನ್ನು ಅಂದರೆ ಒಂದು ವರ್ಷಕ್ಕೆ ವರ್ಷ ತಿಥಿಯಾಗಿ ಆಚರಿಸುತ್ತಾರೆ. ಇಲ್ಲಿಯೂ ಸಹ ಭಕ್ಷ ಭೋಜನಗಳನ್ನು ಮಾಡಿಸಿ ಸತ್ತ ವ್ಯಕ್ತಿಗೆ ಎಡೆ ಹಾಕಿ ಪೂಜೆ ಮಾಡಿ ಬಂದಂತಹ ಕುಲಬಾಂಧವರಿಗೆ, ಬಂಧುಬಳಗಕ್ಕೆ ಹಾಗೂ ಹೊರಗಿನ ಜನಕ್ಕೆ ಊಟವನ್ನು ಹಾಕಿಸುತ್ತಾರೆ. ಮಾಡಿಸುತ್ತಾರೆ.

೪.೨. ವಾರ್ಷಿಕಾವರ್ತನದ ಆಚರಣೆಗಳು

ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ದೈವಗಳ ಆಚರಣೆಗಳು ಇರುತ್ತವೆ. ಅಂತಹ ದೈವಗಳನ್ನು ಅವರು ತಮ್ಮದೇ ಆದ ಕ್ರಮದಲ್ಲಿ ಪೂಜಿಸುವುದು, ಸ್ಥಾಪಿಸುವುದು ಅವುಗಳ ಕುರಿತು ನಂಬುಗೆಗಳನ್ನು ಇಟ್ಟು ಕೊಳ್ಳುವುದು, ವಿಧಿ ನಿಷೇಧಗಳು ಇದ್ದೇ ಇರುತ್ತವೆ. ಜಗತ್ತಿನ ಎಲ್ಲ ಸಮುದಾಯಗಳು ದೇವರ ಪ್ರೀತ್ಯಾರ್ಥವಾಗಿ ಹಬ್ಬಗಳನ್ನು ಆಚರಿಸುತ್ತಾ ಬಂದಿವೆ.

ಖಾಟಿಕರು ಮೂಲತಃ ಸ್ತ್ರೀ ಪ್ರಧಾನ ಸಂಸ್ಕೃತಿಯಲ್ಲಿ ಬೆಳೆದ ದ್ರಾವಿಡ ಮೂಲದ ಸಮುದಾಯ ವಾಗಿದೆ. ಇವರಿಗೆ ಸ್ತ್ರೀ ದೈವಗಳು ಪ್ರಧಾನವಾದರೂ ಪುರುಷ ದೈವಗಳು ಸಹ ಇವರಲ್ಲಿ ಪ್ರಾಮುಖ್ಯತೆಯನ್ನು ಗಳಿಸಿವೆ. ಇವರು ತಮ್ಮನ್ನು ಸೂರ್ಯವಂಶದವರು ಎಂದು ಹೇಳಿಕೊಳ್ಳುತ್ತಾರೆ. ಸೂರ್ಯನನ್ನು ಆರಾಧಿಸುತ್ತಾರೆ. ಜೊತೆಗೆ ಹುಲಿಗೆಮ್ಮ, ಎಲ್ಲಮ್ಮ, ಗಾಳೆಮ್ಮ, ಉಚ್ಚಂಗೆಮ್ಮ, ಈರಣ್ಣ, ಮೈಲಾರಲಿಂಗ, ನರಸಿಂಹಸ್ವಾಮಿ, ದೊಡ್ಡಬಸವೇಶ್ವರ, ಹೊನ್ನಕೇರಿ ಮಲ್ಲಯ್ಯ, ವೆಂಕಟೇಶ್ವರ,

ಭಾತಿಆಂಜನೇಯ, ಸುನಾಮ ಜಕನಿ ಎಂಬ ಸಮುದಾಯದ ಪ್ರಮುಖ ಸ್ತ್ರೀ ದೈವವನ್ನು ಹಾಗೆಯೇ ಮುಖ್ಯವಾಗಿ ತೀರಿಕೊಂಡಂತಹ ವ್ಯಕ್ತಿಗಳ ಬೆಳ್ಳಿಯ ರೂಪಗಳನ್ನು ಪೂಜಿಸುವುದು ಕಂಡುಬರುತ್ತದೆ. ಮದುವೆಯ ಸಂದರ್ಭದಲ್ಲಿ ಮುಖ್ಯವಾಗಿ ಈ ಬೆಳ್ಳಿಯ ರೂಪಗಳನ್ನು ಪೂಜಿಸುವುದು ಕಂಡುಬರುತ್ತದೆ. ಹಿರಿಯರನ್ನು ಪೂಜಿಸಿ ಧೂಪ ದೀಪಗಳಿಂದ ಮದುವೆಯ ಸಂದರ್ಭದಲ್ಲಿ ಹಿರಿಯರ ಆಶೀರ್ವಾದ ಪಡೆಯುವುದು ಮುಖ್ಯವಾಗಿರುತ್ತದೆ. ಇವುಗಳನ್ನು ಆಚರಿಸಿದರೆ ಧರ್ಮವನ್ನು ಆಚರಿಸಿದಂತೆಯೇ ಎಂಬ ನಂಬಿಕೆಯಲ್ಲಿ ಹಬ್ಬಗಳು ಆಚರಣೆಯಲ್ಲಿ ಬೆಳೆದು ಬಂದಂತೆ ತೋರುತ್ತದೆ.

ಹಾಗೆಯೇ ಬನ್ನಿಮರ, ಬೇವಿನ ಮರ, ಆಲದಮರ, ತುಳಸಿಗಿಡವನ್ನು ಹಾಗೂ ನಾಗದೇವತೆಯನ್ನು ಪೂಜಿಸುತ್ತಾರೆ. ನಾಗರಪಂಚಮಿಯಂದು ನಾಗರಕಲ್ಲುಗಳಿಗೆ ಹಾಲು ಎರೆಯುವ ಮುಖಾಂತರ ಪೂಜಿಸುತ್ತಾರೆ. ಹೀಗೆ ಪ್ರಕೃತಿಯಲ್ಲಿರುವ ಸೂರ್ಯ, ಚಂದ್ರ, ಗಿಡ, ಮರಗಳನ್ನು ಇವರು ಪೂಜಿಸುವ ಪ್ರಕೃತಿ ಆರಾಧಕರಾಗಿದ್ದಾರೆ. ಸಾಮುದಾಯಿಕ ಬದುಕಿನಲ್ಲಿ ಸಮುದಾಯದ ಕಷ್ಟ ಸುಖ ಸಾಧನೆಯಲ್ಲಿ ಮತ್ತು ಪರಲೋಕದ ಸುಖ ಪ್ರಾಪ್ತಿಗಳಲ್ಲಿ ಹಬ್ಬಗಳು ಬಹಳ ಪ್ರಮುಖವಾದ ಪಾತ್ರವಹಿಸುತ್ತವೆ.

ಮಾನವನ ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಮುನ್ನಡೆಯಲು ಸನಾತನವಾಗಿ ಆಚರಿಸುತ್ತಾ ಬಂದ ಈ ಹಬ್ಬಗಳು ಅನೇಕ ಸಮುದಾಯಗಳ ಚರಿತ್ರೆಯನ್ನು ಕಟ್ಟಿ ಕೊಡುವಲ್ಲಿ ಬಹಳ ಪ್ರಮುಖವಾಗಿವೆ.

ಖಾಟಿಕರು ಎಲ್ಲಾ ಹುಣ್ಣಿಮೆ, ಅಮವಾಸ್ಯೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡುವುದು ಕಂಡು ಬರುತ್ತದೆ. ಆದರೆ ವಿಶೇಷವಾಗಿ ಇವರು ಪ್ರತಿವರ್ಷ ಯುಗಾದಿ, ಶಿವರಾತ್ರಿ, ನಾಗರಪಂಚಮಿ, ಗಣೇಶಚತುರ್ಥಿ, ಹಿರಿಯರಹಬ್ಬ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ಚಾಚೂ ತಪ್ಪದೆ ಮಾಡುವ ಸಂಪ್ರದಾಯ ರೂಢಿಯಲ್ಲಿದೆ. ಅಲ್ಲದೆ ಮುಸಲ್ಮಾನರ ಮೊಹರಂ ಹಬ್ಬವನ್ನು ಕೂಡಾ ಆಚರಿಸುತ್ತೇವೆ ಎಂದು ಹೇಳುತ್ತಾರೆ.

ಹಬ್ಬಗಳು

ಖಾಟಿಕ್ ಸಮುದಾಯಗಳು ಸಸ್ಯಾರಾಧನೆ, ಪ್ರಾಣಿಯಾರಾಧನೆ ಎರಡನ್ನು ಮಾಡುತ್ತಾರೆ. ತಾವು ವಾಸಿಸುವ ಸ್ಥಳಗಳಲ್ಲಿ ವಿಶೇಷವಾಗಿ ಆರಾಧನೆ ಮಾಡುತ್ತಾ ಕಲ್ಲು, ಮಣ್ಣು, ನೀರು ಹರಿಯುವ ಸ್ಥಳ ಅವರು ಬಳಸುವ ಪರಿಕರಗಳು, ಇತ್ಯಾದಿಗಳನ್ನು ಆರಾಧಿಸುವ ಜನರಾಗಿದ್ದಾರೆ. ತಮ್ಮ ನಡುವಿನ ಅನೇಕ ವಸ್ತುಗಳನ್ನು ಪೂಜಿಸುತ್ತಾರೆ. "'ಹಬ್ಬ' ಎನ್ನುವ ಶಬ್ದ ಸಂಸ್ಕೃತದ ಪರ್ವನ್ ಪದದ ತದ್ಭವ 'ಪರ್ವ'ವಾಗಿದೆ. 'ಪರ್ವ' ಎಂದರೆ ಇನ್ನೊಂದರ ಜೊತೆಯಲ್ಲಿ ಸಂಧಿಸುವುದು

ಎಂದರ್ಥ. ಸಂಪ್ರದಾಯಗಳು ಮತ್ತು ಆಚರಣೆಗಳು ಹಬ್ಬಗಳಿಗೆ ಪ್ರೇರಕಗಳಾಗಿವೆ"(ಕೃಷ್ಣಮೂರ್ತಿ., ಓಡಿಗ ಬುಡಕಟ್ಟು ಸಮುದಾಯ ಒಂದು ಅಧ್ಯಯನ; ಪು. ೧೧೮). ಸಂಪ್ರದಾಯಗಳ ನೆಲೆಯಲ್ಲಿ ಪೂಜೆಯೂ ಜನರ ಸಾಮಾಜಿಕ ಚಲನ ಶೀಲತೆಯ ಒಂದು ಹಬ್ಬವಾಗಿದೆ ಮತ್ತು ಜೀವಂತ ನೆನಪು ತರುವ ಭಾವನೆಗಳಾಗಿವೆ. "ಸಂಸ್ಕೃತಿ ಬೆಳೆದದ್ದೇ ಹಬ್ಬಗಳಿಂದ ಹಾಗೂ ಹಬ್ಬಗಳನ್ನು ಆಚರಿಸುವುದರಿಂದ. ಬುಡಕಟ್ಟು ಜನರ ಸಂಸ್ಕೃತಿ ಒಂದು ವಿಶೇಷ ಸಂಸ್ಕೃತಿ ಎಂದು ತೋರಿಸಿಕೊಡುವುದೇ ಹಬ್ಬವಾಗಿದೆ. ಹಬ್ಬಗಳ ಹುಟ್ಟಿಗೆ ಬುಡಕಟ್ಟು ಧರ್ಮದ ನಂಬಿಕೆಗಳೇ ಕಾರಣ"(ಮೈತ್ರಿ ಕೆ.ಎಂ., (ಲೇ) ಗಿರಿಜನ ಸಿರಿ, ಅಭಿನಂದನ ಸಂಪುಟ: ಪು.೨೨೦).

ಆಧುನಿಕ ದಿನಗಳಲ್ಲಿ ಹಬ್ಬಗಳು ಕಡಿಮೆಯಾಗಿಲ್ಲ. ಎಂತಹ ಕಷ್ಟದ ಪರಿಸ್ಥಿತಿ ಇದ್ದರೂ ಸಹ ಹಬ್ಬಗಳನ್ನು ಆಚರಿಸುವುದು ಮಾತ್ರ ನಿಲ್ಲುವುದಿಲ್ಲ. ಬೇರೆ ಯಾವ ವಿಷಯಗಳಿಗೆ ಹಣ ಕ್ರೋಢೀಕರಣವಾಗದಿದ್ದರೂ ಹಬ್ಬದಲ್ಲಿ ತಮಗರಿವಿಲ್ಲದೇ ಹಣ ಜಮಾವಣೆಯಾಗುವುದು ಆಶ್ಚರ್ಯಕರವಾದ ಸಂಗತಿ. ದೇವರನ್ನು ತಮ್ಮೊಡನೆ ಒಲಿಸಿಕೊಳ್ಳುವ ಸತತ ಪ್ರಯತ್ನಗಳಾಗಿ ಹಬ್ಬ ಆಚರಣೆಯನ್ನು ಮಾಡುತ್ತಾರೆ. ಈ ರೀತಿಯಾಗಿ ತಮ್ಮ ಬದುಕಿನ ಎಲ್ಲ ಕಷ್ಟ ಸುಖಗಳಿಗೂ ದೇವರೇ ಕಾರಣ ಎಂದು ಭಾವಿಸಿದ್ದಾರೆ. ಖಾಟಿಕ್ ಸಮುದಾಯವು ಅನೇಕ ವೃತ್ತಿಗಳಲ್ಲಿ ಭಾಗಿಯಾಗಿ, ತಾವು ನಂಬಿರುವ ದೇವತೆಗಳನ್ನು ಪೂಜಿಸುವುದರೊಂದಿಗೆ ಹಬ್ಬಗಳನ್ನು ಆಚರಿಸುವುದನ್ನು ರೂಢಿಸಿ ಕೊಂಡಿದ್ದಾರೆ. ಜೊತೆಗೆ ಜೀವನ ನಿರ್ವಹಣೆಗಾಗಿ ಇನ್ನಿತರ ಕೆಲಸದಿಂದ ವರ್ಷವೆಲ್ಲ ದುಡಿಯುವುದರಿಂದ ಬಿಡುವು ಇರುತ್ತಿರಲಿಲ್ಲ. ಇಂತಹ ಸಮಯದಲ್ಲಿ ಅವರು ಸುಖ ಸಂತೋಷದಿಂದ ಇರಲು ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಅವುಗಳಲ್ಲಿ ಯುಗಾದಿ, ದಸರಾ, ದೀಪಾವಳಿ, ಮೊಹರಂ ಮುಖ್ಯವಾದವುಗಳು ಹಾಗೂ ಗ್ರಾಮದೇವತೆಗಳ ಹಬ್ಬಗಳನ್ನು ಸಹ ಮಾಡುವುದುಂಟು.

೪.೨.೧. ಯುಗಾದಿ ಹಬ್ಬ

ಯುಗಾದಿ ಹಬ್ಬ ವರ್ಷದ ಎಲ್ಲ ಹಬ್ಬಗಳಿಗೂ ಮೊದಲನೆಯ ಹಬ್ಬವಾಗಿದೆ. ಖಾಟಿಕ್ ಸಮುದಾಯವು ಯುಗಾದಿ ಹಬ್ಬದ ಸಂದರ್ಭದಲ್ಲಿ ತಮ್ಮ ಮನೆಯನ್ನು ಸ್ವಚ್ಛಗೊಳಿಸಿರುತ್ತಾರೆ. ಹಬ್ಬದ ದಿನ ಮುಂಜಾನೆ ಎದ್ದು ತಮ್ಮ ಮನೆಗಳನ್ನು ಸುಣ್ಣ, ಬಣ್ಣ ಮತ್ತು ಸಗಣಿಯಿಂದ ಸಾರಿಸಿ ತಮ್ಮ ಮನೆಗಳ ಮುಂದೆ ರಂಗೋಲಿ ಹಾಕುತ್ತಾರೆ. ಎಲ್ಲರ ಸ್ನಾನವಾದ ಮೇಲೆ ಶುಭ್ರವಾದ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಾರೆ. ಅನುಕೂಲವಾದರೆ ಹೊಸ ಬಟ್ಟೆಗಳನ್ನು ತಂದು ಹಾಕಿಕೊಳ್ಳುತ್ತಾರೆ. ಬಟ್ಟೆಗಳನ್ನು ತೊಟ್ಟುಕೊಂಡ ಮೇಲೆ ದೇವರನ್ನು ಇಟ್ಟು ಪೂಜಿಸುವ ಸ್ಥಳವನ್ನು ವಿಶೇಷವಾಗಿ ಅಲಂಕರಿಸಲಾಗುತ್ತದೆ. ಈ ಸಂದರ್ಭದಲ್ಲಿ ತಮ್ಮ ಕುಲದೇವರು, ಮನೆದೇವರುಗಳ ಮೂರ್ತಿ, ಫೋಟೋಗಳು ಮತ್ತು ವೃತ್ತಿ ಸಂಬಂಧಿ ಸಲಕರಣೆಗಳನ್ನಿಟ್ಟು ಅಲ್ಲಿರುವ ಎಲ್ಲ ದೈವಿ ವಸ್ತುಗಳಿಗೆ

ಕುಂಕುಮ, ಅರಿಶಿಣ, ವಿಭೂತಿ, ಹೂವು, ಕಾಯಿ, ಕರ್ಪೂರ, ದೀಪ-ಧೂಪಗಳಿಂದ ಆರತಿ, ಮಂಗಳಾರತಿ ಪದಗಳನ್ನು ಹಾಡುತ್ತಾ ಅಲ್ಲಿರುವ ಎಲ್ಲ ವಸ್ತುಗಳಿಗೆ ಪೂಜೆಸಲ್ಲಿಸಿ ನೈವೇದ್ಯಕ್ಕೆ ಹಿಡಿಯುವ ಸಂಪ್ರದಾಯ ರೂಢಿಯಲ್ಲಿದೆ. ಖಾಟಿಕ್ ಸಮುದಾಯವು ಯುಗಾದಿ ವರ್ಷದ ಆರಂಭದ ದಿನವೆಂದು ಭಾವಿಸಿಕೊಳ್ಳುತ್ತದೆ. ಅಲ್ಲದೇ ಆ ದಿನ ಯಾರ ಹತ್ತಿರ ಜಗಳ ಮಾಡುವಂತಿಲ್ಲ. ಅಲ್ಲಿನ ಶುಭ-ಅಶುಭ, ಒಳ್ಳೆಯದು-ಕೆಟ್ಟದ್ದು ಇಡೀ ವರ್ಷದ ತನಕ ಮುಂದುವರೆದುಕೊಂಡು ಹೋಗುವುದು ಎಂಬ ನಂಬಿಕೆಯುಳ್ಳವರಾಗಿದ್ದಾರೆ. ಯುಗಾದಿಯನ್ನು ಅತ್ಯಂತ ಉತ್ಸಾಹ ಸಂಭ್ರಮಗಳಿಂದ ಸ್ವಾಗತಿಸುತ್ತಾ, ತಮ್ಮ ತಮ್ಮ ಮನೆಗಳಲ್ಲಿ ಸಂತೋಷ ಸಡಗರದಿಂದ ಆಚರಣೆ ಮಾಡಿಕೊಳ್ಳುತ್ತಾರೆ. ಮೊದಲನೆಯ ಹಬ್ಬದ ಮುಂಜಾನೆ ಮನೆದೇವರಿಗೆ ಧೂಪಹಾಕಿ, "ಬೇವು-ಬೆಲ್ಲ" ತಿನ್ನುತ್ತಾರೆ.

ಚೈತ್ರ ಮಾಸದಲ್ಲಿ ಬರುವ ಯುಗಾದಿ ಹಬ್ಬವನ್ನು ಖಾಟಿಕ್ ಸಮುದಾಯದವರು ಒಗ್ಗಟ್ಟಿನಿಂದ ಆಚರಿಸುತ್ತಾರೆ. ಅಂದು ತಮ್ಮ ವೃತ್ತಿಯನ್ನು ಬಿಡುವು ಮಾಡಿಕೊಂಡು ಮನೆಮಂದಿಯೆಲ್ಲ ಜೊತೆಗೂಡಿ ಮಾವು-ಬೇವು ಸೇರಿಸಿ ಮನೆ ಬಾಗಿಲಿಗೆ, ದೇವರ ಜಗುಲಿಗೆ ತೋರಣ ಕಟ್ಟುತ್ತಾರೆ. ಎಣ್ಣೆ ಹಚ್ಚಿಕೊಂಡು ಎಣ್ಣೆನೀರು ಅಥವಾ ಬೇವಿನ ಸೊಪ್ಪು ಬೆರಸಿದ ಬಿಸಿ ನೀರಿನಿಂದ ಜಳಕ ಮಾಡುತ್ತಾರೆ. ಕೆಲವೊಂದು ಕುಟುಂಬಗಳಲ್ಲಿ ಮೊದಲನೆಯ ಹಬ್ಬದ ಸಂಜೆ 'ಹಿರಿಯರ ಹಬ್ಬ' ಆಚರಿಸುತ್ತಾರೆ. "ಸತ್ತು ಹೋದ ಹಿರಿಯ ವ್ಯಕ್ತಿಗಳ ಹೆಸರಿನ ಮೇಲೆ ಬೆಳ್ಳಿ ಅಥವಾ ಕಂಚಿನ ಪ್ರತಿಮೆಗಳನ್ನು ಮಾಡಿಸಿ, ಹಿರಿಯರ ಹಬ್ಬದಲ್ಲಿ ಪೂಜೆ ಸಲ್ಲಿಸುತ್ತಾರೆ". ಅಂದು ಹೊಸವರ್ಷದ ಹಬ್ಬ ಹರುಷವನ್ನು ತಂದು ಕೊಡುತ್ತದೆ.

೪.೨.೨. ಶಿವರಾತ್ರಿ ಹಬ್ಬ

ಮಾಘಮಾಸದ ಕೃಷ್ಣಪಕ್ಷದಲ್ಲಿ ಬರುವ ಚತುರ್ದಶಿಗೆ ಶಿವರಾತ್ರಿ ಎಂದು ಹೆಸರು. ಈ ಮಹಾಶಿವರಾತ್ರಿ ಹಬ್ಬ ಖಾಟಿಕ್ ಸಮುದಾಯದವರಿಗೆ ಒಂದು ಪುಣ್ಯದಿನವೆಂದರೆ ತಪ್ಪಾಗಲಾರದು. ಶಿವರಾತ್ರಿಯಲ್ಲಿ ಶಿವನಾಮ ಸ್ಮರಣೆ ಮಾಡುತ್ತ ಜಾಗರಣೆ ಮಾಡಿದರೆ ಸಹಸ್ರ ವರ್ಷಗಳವರೆಗೆ ತಪಸ್ಸು ಮಾಡಿದ ಫಲವು ಸಿದ್ಧಿಯಾಗುವುದೆಂದೂ; ಮಹಾಶಿವರಾತ್ರಿಯಲ್ಲಿ ಶಿವಭಕ್ತರು ಒಳ್ಳೇ ಭಕ್ತಿಯಿಂದ ಶಿವಭಜನೆ ಮಾಡುತ್ತ ಶುದ್ಧೋದಕದಿಂದ ಸ್ನಾನಮಾಡಿ ಶಿವನನ್ನು ಧೂಪ-ದೀಪ, ನೈವೇದ್ಯಾದಿಗಳಿಂದ ಪೂಜಿಸಿದ್ದಾದರೆ ಪವಿತ್ರವಾದ ಗಂಗಾನದಿಯಲ್ಲಿ ಮಿಂದು ಕಾಶೀ ವಿಶ್ವೇಶ್ವರನ ದರ್ಶನದಿಂದ ಲಭಿಸುವ ಪುಣ್ಯ ಫಲವು ದೊರಕುತ್ತದೆಯೆಂದು; ಪುಣ್ಯಕ್ಕೆ ಸರಿಸಮಾನ ಯಾವುದೂ ಇಲ್ಲವೆಂದು ಸ್ಕಂದ ಪುರಾಣದಲ್ಲಿ ಹೇಳಿರುವುದರಿಂದ, ಈ ಸಮುದಾಯವು ಹಂಪಿ ಕ್ಷೇತ್ರವಾದ ತುಂಗಭದ್ರೆಯಲ್ಲಿ ಸ್ನಾನವನ್ನು ಮಾಡಿ ಶ್ರೀ ವಿರುಪಾಕ್ಷೇಶ್ವರನ ದರ್ಶನವನ್ನು ಅಂದು ಕೆಲವರು ಮಾಡುತ್ತಾರೆ. ಆ ದಿನ ವಿಶೇಷ ಪೂಜೆ ಏರ್ಪಡಿಸುತ್ತಾರೆ.

ಖಾಟಿಕ್ ಸಮುದಾಯದ ಪ್ರಮುಖ ದೈವಗಳಾದ ಮೈಲಾರಲಿಂಗ, ಸೋಮಲಪುರದ ಮೈಲಾರಲಿಂಗ, ದೊಡ್ಡಬಸವೇಶ್ವರ ಎಂಬ ಲಿಂಗಗಳು ಪರಮೇಶ್ವರನ ಪ್ರತಿರೂಪವೆಂದು ಭಾವಿಸಿ, ಸಮುದಾಯದ ಕುಟುಂಬಗಳು ಶಿವರಾತ್ರಿ ದಿನ ದೇವಸ್ಥಾನಕ್ಕೆ ಕುಂಕುಮ, ಅರಿಶಿಣ, ವಿಭೂತಿ, ಹೂವು, ಕಾಯಿ, ಕರ್ಪೂರ, ದೀಪ-ಧೂಪಗಳಿಂದ ಆರತಿಗಳಿಂದ ಪೂಜೆ ಸಲ್ಲಿಸಿ ಶಿವನ ದರುಶನಕ್ಕೆ ಪಾತ್ರರಾಗುತ್ತಾರೆ. ಅಂದು ರಾತ್ರಿ ಮನೆಯಲ್ಲಿ ಜಾಗರಣೆ ಹಾಗೂ ಮಂಗಳಾರತಿ ಪದಗಳನ್ನು ಹಾಡುತ್ತಾ ಶಿವನಾಮ ಸ್ಮರಣೆಯನ್ನು ಮಾಡುತ್ತಾ ಈ ಹಬ್ಬವನ್ನು ಆಚರಿಸುತ್ತಾರೆ.

ಶಿವರಾತ್ರಿಯ ಪರ್ವಕಾಲದಲ್ಲಿ ಉಪವಾಸಮಾಡಿ, ಅಂದು ಜಾಗರಣೆಮಾಡಿ, ಲೋಕ ರಕ್ಷಕನಾದ ಶಿವನನ್ನು ಸ್ಮರಿಸಿ ಶಿವ ಶಿವ ಎಂದು ಜಯಘೋಷಮಾಡಿ ಬಿಲ್ವಪತ್ರೆಯಿಂದ ಶಿವನನ್ನು ಪೂಜಿಸಿದರೆ ಜನ್ಮ ಜನ್ಮಾಂತರದ ಪಾಪಗಳು ನಶಿಸಿ ಹೋಗಿ ಸಹಸ್ರ ಕೋಟಿ ಪುಣ್ಯವು ಲಭಿಸುವುದೆಂದು ಸೂತ ಪುರಾಣಿಕರು ಶಿವರಾತ್ರಿಯ ಮಹಿಮೆಯನ್ನು ಅಖಂಡವಾಗಿ ಹೊಗಳಿ ಹಾಡಿದ್ದಾರೆ. ವಶಿಷ್ಠ, ಗಾರ್ಗಿ, ವಿಶ್ವಾಮಿತ್ರರಂಥ ಮಹಾ ಯೋಗಿಗಳು ಕೂಡ ಶಿವರಾತ್ರಿ ವ್ರತವನ್ನು ಆಚರಿಸಿ ಪುಣ್ಯಶಾಲಿಗಳಾಗಿ ಹೋಗಿದ್ದಾರೆ. ಆದ್ದರಿಂದಲೇ ಸ್ಕಂದ ಪುರಾಣದಲ್ಲಿ 'ಶಿವದರುಶನ ಪಡೆಯುತ್ತಿರುವ ಶಿವಭಕ್ತರಿಗೆ ಸದಾ ಸ್ವರ್ಗದ ಬಾಗಿಲು ತೆರೆದಿರುತ್ತದೆ' ಎಂದು ಹೇಳಲಾಗಿದೆ. ಬೇಡರ ಕಣ್ಣಪ್ಪನ ಮಗ್ಧ ಭಕ್ತಿಗೆ ಶಿವ ಮೆಚ್ಚಿ ಶಿವರಾತ್ರಿಯ ದಿನ ಆತನಿಗೆ ದರುಶನ ಕೊಟ್ಟ ಈ ಪುಣ್ಯಕಥೆಯು ಶಿವರಾತ್ರಿಯ ಕಥೆಯೆಂದು ಬಹು ಪ್ರಸಿದ್ಧಿಯನ್ನು ಪಡೆದಿದೆ.

ಬೇಡರ ಕಣ್ಣಪ್ಪನ ಭಕ್ತಿಯ ಮಹತ್ವವನ್ನು ಕೊಂಡಾಡಿ ಜಗತ್ ಕರ್ತನಾದ ಶಿವನೊಬ್ಬನೇ ಅಖಿಲಾಂಡ ಕೋಟಿ ಬ್ರಹ್ಮಾಂಡವನ್ನು ರಕ್ಷಿಸತಕ್ಕವನೆಂಬ ಮಾತು ಈ ಶಿವರಾತ್ರಿಗೆ ಅನ್ವಯಿಸುತ್ತದೆ. ಇವರಲ್ಲಿ ಶಿವನಿಗೆ ಪ್ರಧಾನ ಪಾತ್ರಕೊಟ್ಟು ಆರಾಧಿಸುವ ಪ್ರವೃತ್ತಿ ಕಾಣಬಹುದಾಗಿದೆ. ಮನೆಗಳಲ್ಲಿ ಭಜನೆ, ಕೀರ್ತನೆ, ಜಾಗರಣೆ, ಉಪವಾಸದ ಮೂಲಕ ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ.

೪.೨.೩. ನಾಗರ ಪಂಚಮಿ

ಶ್ರಾವಣಮಾಸದಲ್ಲಿ ಬರುವ ನಾಗರಪಂಚಮಿ ಅಥವಾ ನಾಗಪ್ಪನ ಹಬ್ಬವನ್ನು ಖಾಟಿಕ್ ಸಮುದಾಯದವರು ಬಹಳ ನಿಷ್ಠೆಯಿಂದ ಆಚರಿಸುತ್ತಾರೆ. ಮನೆಗೆ ಸುಣ್ಣ-ಬಣ್ಣ ಮಾಡಿ ಶ್ವಚ್ಛಗೊಳಿಸುತ್ತಾರೆ. 'ಹುತ್ತ' ಅಥವಾ 'ನಾಗರಕಲ್ಲು'ಗಳಿಗೆ ಆದಿನ ಒಂದೊತ್ತಿನಿಂದ ಪೂಜೆ ಸಲ್ಲಿಸುತ್ತಾರೆ. ಮೀಸಲು ಅಡಿಗೆ ಮಾಡಿ, ತಂಬಿಟ್ಟು, ಚಿಗುಳಿ, ನೆನೆಯಕ್ಕಿ, ನೆನೆಗಡಲೆ, ತೆಂಗಿನಕಾಯಿ, ಬಾಳೆಹಣ್ಣು, ಅಂಗನೂಲು, ಮತ್ತು ಹೊಸಕಣ (ವಸ್ತ್ರ) ಮೊದಲಾದ ಸಾಮಾನುಗಳನ್ನು ತೆಗೆದುಕೊಂಡು ಕುಟುಂಬ ಪರಿವಾರದೊಂದಿಗೆ ದೇವಸ್ಥಾನ ಅಥವಾ ಸುತ್ತ-ಮುತ್ತ ಇರುವ 'ಹುತ್ತ'ದ ಹತ್ತಿರ ಹೋಗುತ್ತಾರೆ. ಹುತ್ತಕ್ಕೆ ಎಡೆಹಾಕಿ, ಕಾಯಿಒಡೆದು, ಹುತ್ತದಲ್ಲಿ ಮುತ್ತೈದೆಯರು ಹಾಗೂ ಮನೆಮಂದಿ ಎಲ್ಲರೂ ಐದು ಸಲ ಹಾಲು ಹಾಕಿ,

ತಂಬಿಟ್ಟಿನ ಎಡೆಯನ್ನು ಹುತ್ತದ ಬಳಿಯಲ್ಲಿಡುತ್ತಾರೆ. ನಾಗರಹಾವಿನ ಮೇಲಿನ ಭಯವೇ ಈ ಸಂಪ್ರದಾಯಕ್ಕೆ ಮೂಲ ಪ್ರೇರಣೆಯಾಗಿರಬೇಕು. 'ನಾಗರಹಾವು' ಪವಿತ್ರ ಪ್ರಾಣಿಯೆಂದು ಪೂಜಿಸುತ್ತಾರೆ. ತಮ್ಮ ಮಕ್ಕಳಿಗೆ ನಾಗಪ್ಪ, ನಾಗರಾಜ, ನಾಗಲಿಂಗ, ನಾಗಮ್ಮ, ನಾಗಲಾಂಬಿಕೆ, ನಾಗವೇಣಿ ಮೊದಲಾದ ಹೆಸರುಗಳು ಇವರಲ್ಲಿ ಬಳಕೆಯಲ್ಲಿವೆ.

೪.೨.೪. ಹಿರಿಯರ ಹಬ್ಬ

ಆಶ್ವೀಜ ಮಾಸದ ಮಾಳಪಕ್ಷದ ಮಹಾನವಮಿಯ ಅಮವಾಸ್ಯೆ ದಿನದ ಹಿಂದಿನ ದಿನವಾದ ಸರ್ವಪಿತೃಪಕ್ಷದಲ್ಲಿ ಖಾಟಿಕ್ ಸಮುದಾಯದವರು ಹಿರಿಯರ ಹಬ್ಬವನ್ನು ಆಚರಿಸುತ್ತಾರೆ. ಕೆಲವೊಂದು ಕಡೆಗಳಲ್ಲಿ ಯುಗಾದಿ, ದಸರಾ ಮತ್ತು ಗಂಡು ಮಕ್ಕಳಿಗೆ ಮದುವೆ ಸಂದರ್ಭದಲ್ಲಿಯೂ ಕೂಡ ಹಿರಿಯರಹಬ್ಬ ಮಾಡುತ್ತಾರೆ. ಬಹುಹಿಂದೆ ವೃದ್ಧರಾಗಿ ಸತ್ತವರು ದೇವರುಗಳ ಸಾಲಿನಲ್ಲಿ ಸೇರುತ್ತಾರೆಂಬ ನಂಬಿಕೆಯಿಂದ ಸತ್ತವರ ಬೆಳ್ಳಿ ಮೂರ್ತಿ ಅಥವಾ ಫೋಟೋಗಳನ್ನು ಮಾಡಿಸಿ ಮನೆಗಳಲ್ಲಿ ಇಟ್ಟು ಪೂಜಿಸುವ ಪದ್ಧತಿ ಇವರಲ್ಲಿದೆ. ಸತ್ತವರ ಹೆಸರಿನಲ್ಲಿ ತಾಮ್ರ, ಕಂಚು ಅಥವಾ ಹಿತ್ತಾಳೆ ಚೆಂಬು ಕಳಸವನ್ನು 'ಅಜ್ಜ-ಅಜ್ಜಿ'ಯೆಂದು ಭಾವಿಸಿ ನೀರು ತುಂಬಿಟ್ಟು, ಕಂಠಕ್ಕೆ ಹೂವಿನ ಕಂಕಣಕಟ್ಟಿ, ಮೇಲಿನ ಬಾಯಿಗೆ ವೀಳ್ಯೆದೆಲೆ ಮತ್ತು ತೆಂಗಿನಕಾಯಿಯನ್ನು ಜೋಡಿಸಿ "ಕಳಸ" ತಯಾರಿಸಿ ಬೆಳ್ಳಿ ಮೂರ್ತಿ ಅಥವಾ ಫೋಟೋಗಳನ್ನು ಮುಂದಿಟ್ಟು ಹೊಸಬಟ್ಟೆ ಮತ್ತು ಒಡವೆಗಳನ್ನು ತೊಡಿಸುತ್ತಾರೆ. ಅವರು ಜೀವಂತವಾಗಿದ್ದಾಗ ಬಳಸುತ್ತಿದ್ದ ಎಲೆ, ಅಡಿಕೆ, ತೆಂಗಿನಕಾಯಿ, ಬಾಳೆಹಣ್ಣು, ಹಬ್ಬಕ್ಕೆ ಮಾಡಿದ ಮೀಸಲು ಅಡಿಗೆಯ ರವೆಯ ಉಂಡೆಯನ್ನು ಹಾಗೂ ಅನ್ನ, ಸಾರು ಮೊದಲಾದ ಆಹಾರ ಪದಾರ್ಥ ಗಳನ್ನು ಎಡೆ ಹಾಕುತ್ತಾರೆ. ಅಜ್ಜ-ಅಜ್ಜಿ ಜೀವಂತವಾಗಿದ್ದಾಗ ಬಳಸುತ್ತಿದ್ದ ವಸ್ತುಗಳು, ತಿನ್ನುತ್ತಿದ್ದ ಆಹಾರ ಪದಾರ್ಥಗಳನ್ನು 'ಹಿರಿಯರ' ಪೂಜೆಗೆ ಇಡುವ ಪದ್ಧತಿ ಇವರಲ್ಲಿದೆ. ಎಲೆ, ಅಡಿಕೆ, ಹೊಗೆ ಸೊಪ್ಪು, ಹೊಗೆಪುಡಿ, ಬೀಡಿ, ಸಾರಾಯಿ, ಹಣ, ಬೆಳ್ಳಿ, ಬಂಗಾರ, ಸಿಹಿ ತಿಂಡಿಗಳನ್ನು ಇಟ್ಟು ಕಳಸ ಹೂಡಿ, ಪೂಜೆಮಾಡಿ ಧೂಪ ಹಾಕುತ್ತಾರೆ.

ಸತ್ತು ಹೋದ ಆತ್ಮಗಳು ಆದಿನ ರಾತ್ರಿ ಮನೆಗೆ ಬಂದು ಅವರಿಗೆ ಇಷ್ಟವಾದ ಪದಾರ್ಥಗಳನ್ನು ತಿಂದು, ತಾಂಬೂಲ ಹಾಕಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ಈ ಸಮುದಾಯಗಳಲ್ಲಿ ಕಂಡು ಬರುತ್ತದೆ. ದಸರಾ ಹಬ್ಬದಲ್ಲಿ ಹಿರಿಯರಹಬ್ಬ ಆಚರಿಸಿದರೆ, ಯುಗಾದಿ ಹಬ್ಬದಲ್ಲಿ ಸತ್ತವರ ಸಮಾಧಿಗೆ ಎಡೆ ಹಾಕಿ, ಮನೆಯಲ್ಲಿ ದೇವರ ಜಗುಲಿಯಲ್ಲಿ ಹೊಸಬಟ್ಟೆ ಏರಿಸುತ್ತಾರೆ. ಕೆಲವೊಂದು ಮನೆಗಳಲ್ಲಿ ವರ್ಷಕ್ಕೆ ಎರಡು ಬಾರಿ ಅಂದರೆ ದಸರಾ ಮತ್ತು ಯುಗಾದಿ ಹಬ್ಬದಲ್ಲಿ ಹಿರಿಯರ ಹಬ್ಬಮಾಡುತ್ತಾರೆ. ಹಿರಿಯರಿಗೆ ಇಟ್ಟಿದ್ದ ಎಡೆ ಆಹಾರ ಪದಾರ್ಥಗಳನ್ನು ಹಾಗೂ ಸಿಹಿ ತಿನುಸುಗಳನ್ನು ಮರುದಿನ ಬೆಳಿಗ್ಗೆ ಆಕಳಿಗೆ ನೀಡುತ್ತಾರೆ. ಪ್ರೇತಾತ್ಮದ ಮೇಲಿನ ನಂಬಿಕೆಗೆ ಇಂದಿಗೂ 'ಶ್ರಾದ್ಧ' ಕರ್ಮವನ್ನು ಆಚರಿಸಿ ಸತ್ತ ಪಿತೃಗಳನ್ನು ತೃಪ್ತಿಪಡಿಸುವ ಆಚರಣೆ ಇವರಲ್ಲಿದೆ.

೪.೨.೫. ಮಹಾನವಮಿ

ಖಾಟಿಕ್ ಸಮುದಾಯದಲ್ಲಿ ತಮ್ಮ ವೃತ್ತಿ ಸಂಬಂಧಿತ ಸಲಕರಣೆಗಳಿಗೆ ವರ್ಷಕ್ಕೆ ಮೂರು ಬಾರಿ ಪೂಜೆ ಸಲ್ಲಿಸುವ ಸಂಪ್ರದಾಯ ರೂಢಿಯಲ್ಲಿದೆ. ಮೊದಲು ಆರಂಭಿಕ ವರ್ಷದ ಯುಗಾದಿ ಹಬ್ಬದಲ್ಲಿ, ಎರಡನೆಯದಾಗಿ ಮಹಾನವಮಿ ಹಾಗೂ ದೀಪಾವಳಿ ಹಬ್ಬದಲ್ಲಿ ಪೂಜೆ ಸಲ್ಲಿಸುತ್ತಾರೆ. ದಸರಾ ಹಬ್ಬ ಬಹಳ ಮಹತ್ವ ಪಡೆದುಕೊಂಡಿದೆ. ವಿಜಯದಶಮಿಯಂದು ತಮ್ಮ ದೇವರು, ಆಯುಧಗಳನ್ನು ಪೂಜಿಸುವುದಾಗಿರುತ್ತದೆ. ಈ ಮಹಾನವಮಿ ಹಬ್ಬದ ಸಂದರ್ಭದಲ್ಲಿ ತಮ್ಮ ಮನೆಯಲ್ಲಿನ ಬಟ್ಟೆ ಬರೆಗಳನ್ನು ಸ್ವಚ್ಛಗೊಳಿಸಿ, ಮನೆಗಳನ್ನು ಸುಣ್ಣ, ಬಣ್ಣ, ಸಗಣಿಯಿಂದ ಸಾರಿಸಿ ಅಂಗಳಕ್ಕೆ ರಂಗೋಲಿ ಹಾಕುತ್ತಾರೆ. ಪೂಜೆ ಗೊತ್ತುಪಡಿಸಿಕೊಂಡ ಸ್ಥಳದಲ್ಲಿ ತಮ್ಮ ವೃತ್ತಿ ಸಂಬಂಧಿತ ಸಲಕರಣೆಗಳನ್ನಿಟ್ಟು ಅವುಗಳನ್ನು ಮಹಾಕಾಳಿಯ ಪ್ರತಿರೂಪವೆಂದು ಪೂಜ್ಯ ಭಾವನೆಯಿಂದ ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ವೃತ್ತಿ ಸಲಕರಣೆಗಳಿಗೆ ಶಾಂತಿಗಾಗಿ ಆಯುಧಪೂಜಾದಂದು ಕುರಿ ಬಲಿ ಕೊಡುವ ಸಂಪ್ರದಾಯ ರೂಢಿಯಲ್ಲಿದೆ. ದಸರಾ ಹಬ್ಬದ ಮಹಾನವಮಿ ದಿನ ಖಾಟಿಕ್ ಸಮುದಾಯದವರು ಹಿರಿಯರಹಬ್ಬ ಮತ್ತು ಆಯುಧ ಪೂಜೆ ಎರಡೂ ಹಬ್ಬಗಳನ್ನು ಏಕಕಾಲದಲ್ಲಿ ಆಚರಿಸುತ್ತಾರೆ. ಅಂದು ಕೆಲವರು ಸಿಹಿ ಅಡಿಗೆಯ ನೈವೇದ್ಯ ಮಾಡಿದರೆ ಮತ್ತೆ ಕೆಲವರು ಕುರಿ, ಮೇಕೆಗಳನ್ನು ಬಲಿಕೊಟ್ಟು ಮಾಂಸಾಹಾರದ ಎಡೆ ಹಾಕುತ್ತಾರೆ. ಹಿರಿಯರಹಬ್ಬ ಮತ್ತು ಆಯುಧ ಪೂಜೆಗೆ ವಿಶೇಷ ಮಹತ್ವ ಕೊಡುವ ಈ ಸಮುದಾಯವು ಬಹಳ ವಿಜೃಂಭಣೆಯಿಂದ ಈ ಹಬ್ಬಗಳನ್ನು ಆಚರಿಸುತ್ತಾರೆ. ಅವರವರ ಆರ್ಥಿಕ ಪರಿಸ್ಥಿತಿಯ ಮೇಲೆ ಹಬ್ಬ ಅವಲಂಬಿಸಿರುತ್ತದೆ. ಹೊಸ ಬಟ್ಟೆ ಸಡಗರ ಸಂಭ್ರಮಗಳಿಂದ ಹಬ್ಬ ಮಾಡುವ ಇವರು ಅವರವರ ಅನುಕೂಲಕ್ಕೆ ತಕ್ಕಂತೆ ದಸರಾ ಹಬ್ಬವನ್ನು ಆಚರಿಸುವ ಪದ್ಧತಿ ಈ ಸಮುದಾಯಗಳಲ್ಲಿ ಕಂಡು ಬರುತ್ತದೆ.

ಅಲ್ಲದೆ ತಮ್ಮ ಕುಲಶಕ್ತಿ ದೇವತೆಗಳಾದ ಎಲ್ಲಮ್ಮ, ಹುಲಿಗೆಮ್ಮ, ಉಚ್ಚಂಗೆಮ್ಮ, ಗಾಳೆಮ್ಮ ದೇವಿಯ ಹೆಸರಿನಲ್ಲಿ ಐದು ದಿನ ಇಲ್ಲವೇ ನವರಾತ್ರಿಯ ನವದಿನಗಳವರೆಗೆ ಎಣ್ಣೆಯ ಅಥವಾ ತುಪ್ಪದ ದೀಪವನ್ನು ಅಲಂಕಾರಗೊಂಡ ದೇವಿಯ ಮುಂದೆ ಹಚ್ಚಲಾಗುತ್ತದೆ. ಈ ದೀಪಗಳನ್ನು ಆರದ ಹಾಗೆ ಅವರ ಸಾಂಪ್ರದಾಯಿಕ ದಿನಗಳು ಮುಗಿಯುವವರೆಗೆ ಕಾಯುತ್ತಾರೆ. ಈ ಸಂದರ್ಭದಲ್ಲಿ ಮುತ್ತೈದೆಯರನ್ನು ಊಟ ಮಾಡಿಸುವ ಸಂಪ್ರದಾಯ ಅನುಸರಿಸುತ್ತಾರೆ. ಇವರು ತಮ್ಮ ಕುಲದ ಮುತ್ತೈದೆಯರನ್ನು ಕರೆಯಿಸಿ, ಅವರಿಗೆ ಅರಿಶಿಣ, ಕುಂಕುಮ ಮತ್ತು ಹೂವುಗಳನ್ನು ನೀಡಲಾಗುತ್ತದೆ. ಇದರಿಂದ ಮುತ್ತೈದೆಯರು ಮನೆಗೆ ಹೋಗುವಾಗ ನಿಮ್ಮ ಮುತ್ತೈದೆತನ ಗಟ್ಟಿಯಾಗಿರಲಿ ಎಂದು ಶುಭ ಹಾರೈಸಿ ಹೋಗುತ್ತಾರೆ.

೪.೨.೬. ದೀಪಾವಳಿ

ಆಶ್ವೀಜ ಹಾಗೂ ಕಾರ್ತೀಕ ಮಾಸಗಳ ಸಂಧಿಸ್ಥಾನದಲ್ಲಿ ದೀಪಾವಳಿ ಹಬ್ಬ ಬರುತ್ತದೆ. ಶ್ರೀ ಕೃಷ್ಣನು ಲೋಕ ಕಂಟಕನಾದ ನರಕಾಸುರನನ್ನು ಸಂಹರಿಸಿದ ನೆನಪಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿ ಹೆಸರಿಗೆ ತಕ್ಕಂತೆ ಬೆಳಕಿನ ಹಬ್ಬ. ಖಾಟಿಕ್ ಸಮುದಾಯದವರು ದೀಪಾವಳಿ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಆ ದಿನ ಸಂಜೆಯಾಗುತ್ತಿದ್ದಂತೆ ಎಲ್ಲರೂ ತಮ್ಮ ಅಂಗಡಿಗಳನ್ನು ಹಾಗೂ ಮನೆಯನ್ನು ಸಿಂಗಾರಮಾಡಿಕೊಂಡು ಮನೆಯ ಬಾಗಿಲಲ್ಲಿ ಮಣ್ಣಿನ ದೀಪ ಹಚ್ಚಿಡುವುದು, ಮನೆಯ ಹಾಗೂ ಅಂಗಡಿಯ ಮುಂಭಾಗದಲ್ಲಿ ಬಣ್ಣ ಬಣ್ಣದ ಚಿತ್ತಾರಗಳ ಆಕಾಶಬುಟ್ಟಿಯನ್ನು ಹಾಕಿರುತ್ತಾರೆ. ಅಣ್ಣ-ತಮ್ಮಗಳಿಗೆ ಆರತಿ ಮಾಡುವ ಸಂಪ್ರದಾಯಗಳು ಇವೆ. ಅಂದು ಸಂಜೆ ಮನೆ ಮತ್ತು ಅಂಗಡಿಗಳಲ್ಲಿ ಲಕ್ಷ್ಮಿಯನ್ನು ಕೂರಿಸುವ ಹಾಗೂ ಅಂಗಡಿಗಳನ್ನು ತೊಳೆದು ಸುಣ್ಣ ಬಣ್ಣಗಳಿಂದ ಹಾಗೂ ಬಣ್ಣದ ಹಾಳೆಯ ತೋರಣಗಳಿಂದ ಅಲಂಕರಿಸಿ ಲಕ್ಷ್ಮಿಯನ್ನು ಕೂಡಿಸುತ್ತಾರೆ. ಅವರ ಒಂದು ವರ್ಷದ ವ್ಯಾಪಾರದಲ್ಲಿ ಬಂದಿರುವ ಲಾಭ ನಷ್ಟಗಳನ್ನು ಪರೀಕ್ಷಿಸಿ ಹಾಗೂ ಮುಂದಿನ ವರ್ಷವಿಡೀ ಸದಾ ಲಕ್ಷ್ಮಿಯ ಕೃಪೆ ಇರಲಿ ಅವಳ ಒಲುಮೆಯೆ ನಮ್ಮ ಬದುಕಿನ ಉತ್ತಮ ಜೀವನವಾಗಿರುತ್ತದೆ ಹಾಗೂ ವ್ಯಾಪಾರದಲ್ಲಿ ಒಳ್ಳೆಯ ಲಾಭ ಮತ್ತು ಧನಸಂಪತ್ತು ಕರುಣಿಸಲಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಕಂಚು ಅಥವಾ ಹಿತ್ತಾಳೆ ಚೆಂಬಿನಲ್ಲಿ ನೀರನ್ನು ತುಂಬಿ ವೀಳ್ಯೆದೆಲೆ ಮತ್ತು ತೆಂಗಿನಕಾಯಿಯನ್ನು ಜೋಡಿಸಿ "ಲಕ್ಷ್ಮಿ ಕಳಸ" ತಯಾರಿಸಿ ಕಳಸದ ಮೇಲೆ ಮನೆಯಲ್ಲಿ ಅಲಂಕಾರಕ್ಕೆ ಬಳಸುವ ಬಂಗಾರದ ಒಡವೆಗಳಾದ ಮೂಗುತಿ, ಓಲೆ, ಝುಮುಕಿ, ಸರಗಳನ್ನು ತೊಡಿಸುತ್ತಾರೆ. ಹೂವಿನ ಮಾಲೆ ಹಾಗೂ ಕಂಕಣಕಟ್ಟಿ, ಲಕ್ಷ್ಮಿಯ ಬೆಳ್ಳಿ ಮೂರ್ತಿ ಅಥವಾ ಫೋಟೋಗಳನ್ನು ಇರಿಸಿ ತೆಂಗಿನಕಾಯಿ, ಬಾಳೆಹಣ್ಣು, ಹಬ್ಬಕ್ಕೆ ಮಾಡಿದ ಕರ್ಚಿಕಾಯಿ, ಸಿಹಿತಿನುಸುಗಳನ್ನು ಇಟ್ಟು ಪೂಜಿಸುತ್ತಾರೆ. ತಮ್ಮ ಅಂಗಡಿಯ ಪೂಜೆಗೆ ಅಥವಾ ಮನೆಯಲ್ಲಿ ನಡೆಯುವ ಪೂಜೆಗೆ ಸುತ್ತಮುತ್ತಲಿನ ನೆರೆಹೊರೆಯವರನ್ನು ಆಮಂತ್ರಿಸುತ್ತಾರೆ. ಪೂಜೆಗೆ ಬಂದಂತಹ ಮುತ್ತೈದೆಯರಿಗೆ ಕುಂಕುಮ, ಅರಿಶಿಣ, ಹೂವುಗಳನ್ನು ನೀಡಿ ಎಲ್ಲರಿಗೂ ಪ್ರಸಾದ ರೂಪದಲ್ಲಿ ಸಿಹಿ ತಿನಿಸುಗಳನ್ನು ಹಾಗೂ ಎಲೆ ಅಡಿಕೆ, ಬಾಳೆಹಣ್ಣುಗಳನ್ನು ನೀಡುತ್ತಾರೆ. ನಂತರ ಹೊರಗಡೆ ಅಂಗಳದಲ್ಲಿ ಪೇಟೆಯಿಂದ ತಂದಂತಹ ಪಟಾಕ್ಷಿ, ಸುರುಸುರುಬತ್ತಿಗಳು, ರಾಕೆಟ್‌ಬಾಣ, ಹೂವಿನ ಬಾಣ ಇತ್ಯಾದಿ ವಿಭಿನ್ನ ರೀತಿಯ ಪಟಾಕಿಗಳನ್ನು ಹಚ್ಚುತ್ತಾರೆ. ದೀಪಾವಳಿ ಹಬ್ಬದಲ್ಲಿ ಹಿರಿಯರ ಹಬ್ಬ ಮಾಡುತ್ತಿದ್ದರಂತೆ, ಆದರೆ ಈಗ ದಸರಾಹಬ್ಬದಲ್ಲಿ ಹಿರಿಯರ ಹಬ್ಬಮಾಡುತ್ತಿದ್ದಾರೆ. ಈ ಸಮುದಾಯಗಳಲ್ಲಿ ಯಾವುದೇ ಹಬ್ಬದಲ್ಲಿಯಾಗಲಿ, ವಿಶೇಷ ವಿಭಿನ್ನ ಪೂಜಾ ಪದ್ಧತಿಗಳು ಕಂಡು ಬರುವುದು.

೪.೨.೭. ಮೊಹರಂ ಹಬ್ಬ

ಸರ್ವಧರ್ಮಗಳ ಸಮನ್ವಯಕರೂ ಹಾಗೂ ಆರಾಧಕರೂ ಆಗಿರುವ ಖಾಟಿಕ್ ಸಮುದಾಯದವರು ಮುಸಲ್ಮಾನರ ಮೊಹರಂ ಹಬ್ಬವನ್ನು ತುಂಬಾ ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ. ಅಮವಾಸ್ಯೆಯಾಗಿ ಚಂದ್ರ ಕಂಡನೆಂದರೆ ಗುದ್ದಲಿ ಬಿದ್ದ ಮೇಲೆ ಅಲಾಯಿ ಕುಣಿಗೆ ಹೋಗಿ ಭಕ್ತಿ ಭಾವಗಳಿಂದ ನಮಸ್ಕರಿಸಿ ಬರುತ್ತಾರೆ. ಮೊಹರಂ ಹಬ್ಬದ ಪ್ರಾರಂಭದಿಂದ ಮೊಹರಂ ಕೊನೆಗೊಳ್ಳುವವರೆಗೆ ಪ್ರತಿ ನಿತ್ಯವು ಸಿಹಿ ಭಕ್ಷ್ಯಭೋಜನಗಳನ್ನು ತಯಾರಿಸುತ್ತಾರೆ. ಮೊಹರಂ ಹಬ್ಬದ ನೌವ್‌ಕನ್ (ಒಂಬತ್ತನೆಯ ದಿನ) ಕತ್ತಲರಾತ್ರಿ ದಿವಸ ಅಂದು ಮನೆಯಲ್ಲಿ ಹೊಸ ಮಣ್ಣಿನ ಮಡಕೆಗಳನ್ನು ಕೊಂಡುತಂದು ಅಂದಿನ ಎಲ್ಲ ಅಡುಗೆಗಳನ್ನು ಹೊಸ ಮಡಕೆಗಳಲ್ಲಿಯೇ ಮಾಡುತ್ತಾರೆ. ಮುಂಜಾನೆ ಎದ್ದು ಸ್ನಾನವನ್ನು ಮಾಡಿ ಮಡಿಯಿಂದ ಕೊಂಡು ತಂದ ಹೊಸ ಮಡಕೆಯಲ್ಲಿ ನೀರನ್ನು ಹಾಕಿ ಬೆಲ್ಲ ಅಥವಾ ಸಕ್ಕರೆಯನ್ನು ಹಾಕಿ ಕರಗಲು ಬಿಡುತ್ತಾರೆ. ನಂತರ ಅದರಲ್ಲಿ ಕಾಮಕಸ್ತೂರಿಯ ಎಲೆ ಹಾಗೂ ಅದರ ಬೀಜಗಳು, ಬಡೇಸೋಪು, ಏಲಕ್ಕಿಯನ್ನು ಕುಟ್ಟಿ ಅದರಲ್ಲಿ ಬೆರೆಸಿ ಪಾನಕವಾದ ಷರಬಾತ್‌ನ್ನು ಮಾಡುತ್ತಾರೆ. ಅಂದು ಸಂಜೆ ಮನೆಯಲ್ಲಿ ಎಲ್ಲರೂ ಸೇರಿ ಮಸೀದಿಗೆ ಸಣ್ಣ ಮಡಕೆಯಲ್ಲಿ ತಾವು ತಯಾರಿಸಿದ ಪಾನಕವನ್ನು ಹಾಗೂ ನೈವೇದ್ಯಕ್ಕಾಗಿ ಸಜ್ಜೆ ರೊಟ್ಟಿ, ತಳಸಪಲ್ಯೆ, ಜೋಳದ ಕಿಚಡಿ, ಬದನೆಕಾಯಿ ಪಲ್ಯೆ, ಅನ್ನ ಎಲ್ಲವನ್ನು ಹೊಸ ಮಣ್ಣಿನ ತಟ್ಟೆಯಲ್ಲಿ ತೆಗೆದುಕೊಂಡು ಹೋಗಿ ಪೀರ್ಲ ದೇವರಿಗೆ ಪೂಜಿಸಿ, ನೈವೇದ್ಯಕ್ಕೆ ಹಿಡಿದುಬರುತ್ತಾರೆ. ಮಾರನೆಯ ದಿನ ಮೊಹರಂ ಕೊನೆಯ ದಿನದಂದು ಮನೆಯಲ್ಲಿ ಗೋದಿ ಹಿಟ್ಟಿನಿಂದ ಭೋಂಗೆಯನ್ನು ತಯಾರಿಸುತ್ತಾರೆ. ವಿಶೇಷವಾಗಿ ಇವುಗಳನ್ನು ಭೋಂಗೆಮಣೆಯಲ್ಲಿ ಮಾಡುವುದಾಗಿರುತ್ತದೆ. ಇದನ್ನು ಹಂಚಿನಲ್ಲಿ ಬೇಯಿಸಿದ ನಂತರ ತುಪ್ಪವನ್ನು ಸವರಿ, ಬೀಸಿದ ಸಕ್ಕರೆ ಅಥವಾ ಪುಡಿ ಬೆಲ್ಲವನ್ನು ಉಪಯೋಗಿಸುತ್ತಾರೆ. ಸಕ್ಕರೆ ಅಥವಾ ಬೆಲ್ಲಕ್ಕೆ ತುರಿದ ಒಣ ಕೊಬ್ಬರಿ, ಏಲಕ್ಕಿ ಪುಡಿ ಹಾಗೂ ಗಸಗಸೆಯನ್ನು ಮಿಶ್ರವನ್ನಾಗಿಸಿ ತುಪ್ಪವನ್ನು ಸವರಿದ ಭೋಂಗೆಯ ಮೇಲೆ ಇದನ್ನು ಸವರುತ್ತಾರೆ. ಅಂದು ಸಂಜೆ ಮೊಹರಂ ಹಬ್ಬವು ಕೊನೆಯದ್ದಾಗಿರುತ್ತದೆ. ಪೀರ್ಲ ದೇವರು ಸಾಯುವ ದಿನದಂದು ರಾತ್ರಿ ಮನೆಯಲ್ಲಿ ಫಕೀರರುಗಳನ್ನು ಕರೆಯಿಸಿ ಪೀರ್ಲ ದೇವರಿಗೆ ಓದಿಕೆಯನ್ನು ಮಾಡಿಸಲಾಗುತ್ತದೆ. ಅಂದು ಮನೆಯಲ್ಲಿ ತಯಾರಿಸಿದ ಭೋಂಗೆ ಹಾಗೂ ಮೊಸರನ್ನವನ್ನು ಉಂಡೆಯಾಗಿ ಮಾಡಿ ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸುವ ಮುಖಾಂತರ, ನೈವೇದ್ಯಕ್ಕಾಗಿ ಇಡುತ್ತಾರೆ. ಸಾಮಾನ್ಯವಾಗಿ ಹಬ್ಬದ ದಿನವಾಗಿರುವುದರಿಂದ ತಮ್ಮ ಅನುಕೂಲಗಳಿಗೆ ತಕ್ಕಂತೆ ಮನೆಯಲ್ಲಿ ಗೋದಿಯ ಮಾಲದಿ, ಒಗ್ಗರಣೆ ಅನ್ನ, ಮಾಂಸದಡಿಗೆಯನ್ನು ಮಾಡಿ ಕೆಲವರು ಫಕೀರರುಗಳನ್ನು ಕರೆಸಿ ಊಟಮಾಡಿಸುತ್ತಾರೆ.

೪.೨.೮. ದೈವಗಳು-ಜಾತ್ರೆ-ಉತ್ಸವಗಳು

ದೇವತೆಗಳು ಮತ್ತು ದೇವರುಗಳನ್ನು ಒಂದು ಸೀಮಿಗೆ ಸಂಬಂಧಿಸಿದ್ದು ಎಂದು ಹೇಳಬಹುದು. ಆದರೆ ಒಂದು ಸಮುದಾಯಕ್ಕೆ ಸಂಬಂಧಿಸಿದ್ದು ಎಂದು ಹೇಳುವುದು ಕಷ್ಟದ ಕೆಲಸ. ಏಕೆಂದರೆ, ದೇವತೆಗಳು, ದೇವರುಗಳು ಮಾನವನ ಮಾನಸಿಕ ಭಾವನೆಗೆ ಸಂಬಂಧಿಸಿದ್ದು. ಖಾಟಿಕ್‌ರು ನಡೆದು ಕೊಳ್ಳುವ ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ, ಕಾಳಮ್ಮ, ಉಚ್ಚೆಂಗೆಮ್ಮ, ಮೈಲಾರಲಿಂಗ, ಬಾತಿ ಆಂಜನೇಯ, ನರಸಿಂಹಸ್ವಾಮಿ, ದೊಡ್ಡಬಸವೇಶ್ವರ, ವೆಂಕಟೇಶ್ವರ ಮುಂತಾದ ದೈವಗಳಿಗೆ ಸಾಮಾನ್ಯವಾಗಿ ಬೇರೆ ಬೇರೆ ಸಮುದಾಯದವರು ಬಹಳ ಭಯ ಭಕ್ತಿಯಿಂದ ನಡೆದುಕೊಂಡು, ಇದು ನಮ್ಮ ಕುಲದೇವರು, ನಮ್ಮ ಮನೆಯ ದೇವರು ಎಂದೂ ಹೇಳುತ್ತಾರೆ. ಹೀಗಿರುವಾಗ ಈ ದೇವರುಗಳು ಒಂದು ಸಮುದಾಯಕ್ಕೆ ಸಂಬಂಧಪಟ್ಟಿವೆ ಎಂದು ಹೇಳುವುದೂ ಕಷ್ಟದ ಕೆಲಸ.

ಖಾಟಿಕರು ತಮ್ಮ ಹಿಂದೂ ದೇವರುಗಳ ಜೊತೆಯಲ್ಲಿ ಮುಸ್ಲಿಂ ದೇವರುಗಳಿಗೂ ಕೂಡಾ ಬಹಳ ಭಯ ಭಕ್ತಿಯಿಂದ ನಂಬಿಕೆಯಿಟ್ಟು ಪೂಜೆ ಮಾಡುವುದರೊಂದಿಗೆ "ಹರಕೆ ಹೊರುವ" ಸಂಪ್ರದಾಯ ಅನುಸರಿಸುತ್ತಾರೆ.

ಖಾಟಿಕ್ ಸಮುದಾಯದ ಸ್ತ್ರೀ ದೈವಗಳು

ಸ್ತ್ರೀ ದೈವಗಳು	ದೈವಗಳ ನೆಲೆಗಳು
೧. ಎಲ್ಲಮ್ಮ	ಸೌದತ್ತಿ (ಬೆಳಗಾವಿ ಜಿಲ್ಲೆ)
೨. ಹುಲಿಗೆಮ್ಮ	ಹುಲಿಗಿ (ಕೊಪ್ಪಳ ತಾ. ಜಿಲ್ಲೆ)
೩. ಗಾಳೆಮ್ಮ	ಗಾಳೆಮ್ಮನಗುಡಿ (ಹೊಸಪೇಟೆ ತಾ. ಬಳ್ಳಾರಿ ಜಿ.)
೪. ಉಚ್ಚಂಗೆಮ್ಮ	ಉಚ್ಚಂಗಿದುರ್ಗ (ಹರಪನಹಳ್ಳಿ ತಾ. ದಾವಣಗೆರೆ ಜಿ.)
೫. ಸುನಾಮ ಜಕನಿ	ಆಂಧ್ರಪ್ರದೇಶ

ಖಾಟಿಕ್ ಸಮುದಾಯದ ಪುರುಷ ದೈವಗಳು

ಪುರುಷ ದೈವಗಳು	ನೆಲೆಗಳು
೧. ಮೈಲಾರಲಿಂಗ	ಮೈಲಾರ (ಹೂವಿನಹಡಗಲಿ)
೨. ಬಾತಿ ಆಂಜನೇಯ	ಹಳೆಬಾತಿ ಹರಿಹರ
೩. ನರಸಿಂಹಸ್ವಾಮಿ	ಬಿಜಾಪುರ, ಬೀದರ್
೪. ಈರಣ್ಣ	
೫. ಹೊನ್ನಕೇರಿ ಮಲ್ಲಯ್ಯ	ಸೋಮಲಾಪುರ (ರಾಣೆಬೆನ್ನೂರು)
೬. ದೊಡ್ಡಬಸವೇಶ್ವರ	ಕುರುಗೊಡು (ಬಳ್ಳಾರಿ ಜಿಲ್ಲಾ)
೭. ವೆಂಕಟೇಶ್ವರ	ತಿರುಪತಿ

ಖಾಟಿಕ್ ಸಮುದಾಯದ ಇಸ್ಲಾಂ ದೈವಗಳು

ಇಸ್ಲಾಂ ದೇವರುಗಳು	ನೆಲೆಗಳು
೧. ರಾಜಾಭಕ್ಷವಲಿ	ಯಮನೂರು, ಅಣ್ಣಿಗೇರಿ
೨. ದಾವಲ್‌ಮಲ್ಲಿಕ್	ಹುನುಗುಂದ
೩. ಖ್ವಾಜಾಬಂದೇನವಾಜ	ಗುಲ್ಬರ್ಗಾ
೪. ಮಾಬುಸುಬಾನಿ	ಹತ್ತಿಕುಣಿ ದರಗಾ ದೇವರು

೧. ಎಲ್ಲಮ್ಮ : ಖಾಟಿಕ್ ಸಮುದಾಯದವರಿಗೆ ಎಲ್ಲಮ್ಮ ದೇವತೆ ಅಧಿ ದೇವತೆ. ಖಾಟಿಕ್ ಸಮುದಾಯವು ಎಲ್ಲಮ್ಮನಿಗೆ ರೇಣುಕೆ, ಯಲ್ಲಮ್ಮ, ಉಚ್ಚಂಗೆಮ್ಮ, ಉಚ್ಚಂಗಿ ಎಲ್ಲಮ್ಮ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಈ ಹೆಸರುಗಳಿಂದ ಪ್ರಸಿದ್ಧಿಯಾದ ದೇವಾಲಯಗಳು ಅನೇಕ ಕಡೆಗಳಲ್ಲಿ ಕಂಡು ಬಂದರೂ, ಅವರು ಅಲ್ಲಿಗೆ ಹೋಗಿ ಆರಾಧಿಸುತ್ತಾರೆ. ಅವುಗಳಲ್ಲಿ ಸವದತ್ತಿ, ಉಚ್ಚಂಗಿದುರ್ಗ ಮೊದಲಾದ ಸ್ಥಳಗಳಿಗೆ ಖಾಟಿಕ್ ಸಮುದಾಯದವರು ಹೋಗಿ ಪೂಜೆ ಸಲ್ಲಿಸುತ್ತಾರೆ. ಜಮದಗ್ನಿ ಋಷಿಯ ಹೆಂಡತಿ ರೇಣುಕೆ ಕುರಿತು ಪುರಾಣ ಮತ್ತು ದಂತಕಥೆಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಹರಪನಹಳ್ಳಿ ತಾಲೂಕಿನಲ್ಲಿರುವ ಉಚ್ಚಂಗಿ ದುರ್ಗದಲ್ಲಿರುವ ಉಚ್ಚಂಗೆಮ್ಮ ದೇವಿಗೆ ನಡೆದುಕೊಳ್ಳುತ್ತಾರೆ.

'ಸ್ತ್ರೀ' ಶಕ್ತಿದೇವತೆಗಳ ಆರಾಧಕರಾದ ಖಾಟಿಕ್ ಸಮುದಾಯವು ಬಹುಸಂಖ್ಯಾತ ಜನ ಎಲ್ಲಮ್ಮ, ಉಚ್ಚಂಗೆಮ್ಮ ದೇವಿಗೆ ನಡೆದುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಇವರು ತಾವು ನೆಲೆಸಿರುವ ಪ್ರದೇಶಗಳಿಗೆ ಸಮೀಪವಿರುವ ಮತ್ತು ತಮ್ಮ ಭಾವನೆಗಳಿಗೆ ಸ್ಪಂದಿಸುವ ಎಲ್ಲಮ್ಮ, ಉಚ್ಚಂಗೆಮ್ಮ ದೇವಿಗೆ ಬಹಳ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಸವದತ್ತಿ ಹಾಗೂ ಉಚ್ಚಂಗಿಯಲ್ಲಿ ನಡೆಯುವ ಜಾತ್ರೆಗಳಿಗೆ ಅನುಕೂಲವಿದ್ದವರು ಪ್ರತಿವರ್ಷ ಹೋಗುತ್ತಾರೆ. ಅನಾನುಕೂಲ ವಿದ್ದವರು ಕನಿಷ್ಠ ಮೂರು ವರ್ಷಗಳಿಗೆ ಒಂದು ಸಲವಾದರು ಹೋಗುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ದೇವಿಗೆ ಹೂ, ಹಣ್ಣು, ಹಸಿರುಬಳೆಗಳು, ದಟ್ಟಿ ಸೀರೆ, ಕಾಯಿ, ಕರ್ಪೂರಗಳನ್ನು ಅರ್ಪಿಸಿ ಬರುತ್ತಾರೆ.

ಆದರೆ 'ಹರಕೆ' ಹೊತ್ತುಕೊಂಡವರು ಜಾತ್ರೆಯ ಸಂದರ್ಭದಲ್ಲಿ 'ಹರಕೆ' ತೀರಿಸುವದಿಲ್ಲ. ತಮಗೆ ಅನುಕೂಲವಿದ್ದ ಬೇರೆ ದಿನಗಳಲ್ಲಿ 'ಹರಕೆ' ಸಲ್ಲಿಸುತ್ತಾರೆ. ಹರಕೆಯು ಹೆಚ್ಚಾಗಿ ಗುಡಿಗೆ ಬಂದು ಪಡ್ಲಿಗಿ ತುಂಬಿಸುವದ್ದಾಗಿರುತ್ತದೆ. ಜೊತೆಗೆ ಇತರ ಹರಕೆಗಳನ್ನು ಬೇಡಿಕೊಳ್ಳುವ ಸಂಪ್ರದಾಯ ಅನುಸರಿಸುತ್ತಾರೆ. ಗುಡಿಯಲ್ಲಿ ಪಡ್ಲಿಗಿ ತುಂಬಿಸುವ ದಿನ ಗುಡಿಯ ಒಂದು ಭಾಗದಲ್ಲಿ ಹೋಳಿಗೆ, ಕಡಬು, ಅನ್ನಸಾರು, ಬದನೆಕಾಯಿ ಪಲ್ಯವನ್ನು ಮಾಡಿ ಪಡ್ಲಿಗಿ ತುಂಬುವ ಬುಟ್ಟಿಯಲ್ಲಿ ಹಾಕಿ

ಗುಡಿಯ ಸುತ್ತಲೂ ಐದು ಸುತ್ತು ಪ್ರದಕ್ಷಿಣೆ ಹಾಕಿದ ಮೇಲೆ ದೇವಿಗೆ ಹೂ, ಹಣ್ಣು, ದಂಡಿ, ದಟ್ಟಿಗಳಿಂದ ಅಲಂಕರಿಸಿ ಅರ್ಪಿಸಿ ಕಾಯಿ, ಕರ್ಪೂರಗಳಿಂದ ಪೂಜೆಸಲ್ಲಿಸಿ, ತುಂಬಿದ ಎಲ್ಲಮ್ಮನ ಪಡ್ಲಿಗಿ ದೇವಿಗೆ ಅರ್ಪಿಸುವ ಸಂಪ್ರದಾಯ ಅನುಸರಿಸುತ್ತಾರೆ. ಎಲ್ಲಮ್ಮ, ಉಚ್ಚಂಗೆಮ್ಮ ಹಾಗೂ ರೇಣುಕೆ ಮೂರ್ತಿಗಳು ನಮ್ಮ ಮನೆಗಳಲ್ಲಿ ಹಾಗೂ ಅಂಗಡಿಯಲ್ಲಿ ಇಂದಿಗೂ ಇವೆ ಹಾಗೂ ಆರಾಧಿಸುತ್ತೇವೆ ಎಂದು ಹೇಳುತ್ತಾರೆ.

ಎಲ್ಲಮ್ಮದೇವಿ ಪಡ್ಲಿಗಿ ತುಂಬುವ ಕಾರ್ಯ : ಮನೆಯಲ್ಲಿ ತಮ್ಮ ವೃತ್ತಿ ಸಂಬಂಧಿ ಸಲಕರಣೆಗಳು ಮತ್ತು ದೈವಿಗಳ ಪೂಜೆ ಮುಗಿದ ಮೇಲೆ ಎಲ್ಲಮ್ಮನ ಪಡ್ಲಿಗಿ ತುಂಬುವ ಕಾರ್ಯ ನಡೆಯುತ್ತದೆ. ಎಲ್ಲಮ್ಮನ ಪಡ್ಲಿಗಿ ತುಂಬಿಸಿಕೊಂಡು ಹೋಗುವುದಕ್ಕೆ ಜೋಗತಿಯರು ಬರುತ್ತಾರೆ. ಇವರು ಬರುವಾಗ ಎರಡು ಚಿಕ್ಕ ಬಿದರಿನ ಹೊಸ ಬುಟ್ಟಿಗಳನ್ನು ತೆಗೆದುಕೊಂಡು ಬರುತ್ತಾರೆ. ಇವರು ಬಂದ ಮೇಲೆ ಖಾಟಿಕ್ ಸಮುದಾಯದವರು ಆ ಎರಡು ಹೊಸ ಬಿದರಿನ ಬುಟ್ಟಿಗಳಲ್ಲಿ, ಒಂದರಲ್ಲಿ ಒಣ ಪದಾರ್ಥಗಳಾದ ಗೋದಿ ಹಿಟ್ಟು, ಅಕ್ಕಿ, ಬ್ಯಾಳಿ, ಬೆಲ್ಲಾ ಇನ್ನಿತರ ದವಸ ಧಾನ್ಯಗಳನ್ನು ಮತ್ತು ಈರುಳ್ಳಿ, ಬದನೆಕಾಯಿಗಳನ್ನು ತುಂಬಿ ಇದಕ್ಕೆ ಒಣಪಡ್ಲಿಗಿ ಎಂದು ಕರೆಯುತ್ತಾರೆ. ಇನ್ನೊಂದರಲ್ಲಿ ತಮ್ಮ ಮನೆಯಲ್ಲಿ ಮಾಡಿದ ಅಡಿಗೆಯ ಪದಾರ್ಥಗಳಾದ ಹೋಳಿಗೆ, ಕಡಬು, ಅನ್ನ, ಬದನೆಕಾಯಿಪಲ್ಯವನ್ನು ತುಂಬಿ ಇದಕ್ಕೆ ಹಸಿಪಡ್ಲಿಗಿ ಎಂದು ಕರೆಯುತ್ತಾರೆ.

ಈ ಎರಡು ಬುಟ್ಟಿಗಳ ಪಡ್ಲಿಗಿ ತುಂಬಿದ ಮೇಲೆ ಆ ಬುಟ್ಟಿಗಳಿಗೆ ಕುಂಕುಮ, ಅರಿಶಿಣಗಳನ್ನು ಹಚ್ಚಿ ಹೂಗಳನ್ನು ಹಾಕಿ ಕರ್ಪೂರದಿಂದ ಬೆಳಗಿ ಪೂಜೆ ಸಲ್ಲಿಸಲಾಗುತ್ತದೆ. ತದನಂತರ ಜೋಗತಿಯರು ಮನೆಯಲ್ಲಿರುವ ಎಲ್ಲ ಸದಸ್ಯರುಗಳಿಗೆ ತಮ್ಮ ಭಂಡಾರವನ್ನು ಹಣೆಗೆ ಹಚ್ಚಿ ಅವರನ್ನು ಆಶೀರ್ವದಿಸುತ್ತಾರೆ. ಭಂಡಾರವನ್ನು ಹಚ್ಚುವುದರೊಂದಿಗೆ ಜೋಗತಿಯರಿಗೆ ತಮಗೆ ಅನುಕೂಲವಾದಷ್ಟು ದೇಣಿಗೆ ರೂಪದಲ್ಲಿ ಹಣವನ್ನು ಕೊಟ್ಟು ಗೌರವಿಸಿ ಆ ಪಡ್ಲಿಗಿ ತುಂಬಿದ ಬುಟ್ಟಿಗಳೊಂದಿಗೆ ಮನೆಗೆ ಕಳಿಸಲಾಗುತ್ತದೆ.

ಕೊನೆಗೆ ತಮ್ಮ ಮನೆಯಲ್ಲಿ ತಯಾರಿಸಿದ ಬೇವು ಬೆಲ್ಲ, ಹೋಳಿಗೆ, ಕಡಬು, ಹಪ್ಪಳ, ಅನ್ನ ಸಾರು ಎಲ್ಲರು ಕುಳಿತುಕೊಂಡು ಊಟಮಾಡುತ್ತಾರೆ. ಆ ದಿನ ಎಲ್ಲರೂ ಸಂಭ್ರಮದಿಂದ ಸಂತೋಷದಲ್ಲಿರುತ್ತಾರೆ.

ಯುಗಾದಿ ಹಬ್ಬದ ಮರುದಿನ ಕರಿ ಎಂದು ಆಚರಣೆ ಮಾಡುತ್ತಾರೆ. ಈ ಕರಿಯ ದಿನ ತಮ್ಮ ಅಂಗಡಿಯಿಂದ ಮಾಂಸವನ್ನು ತೆಗೆದುಕೊಂಡು ಬಂದು ಅಂದು ಮನೆಯಲ್ಲಿ ಮಾಂಸದ ಆಹಾರವನ್ನು ತಯಾರಿಸಿ ಊಟ ಮಾಡುತ್ತಾರೆ.

ಸಮುದಾಯದಲ್ಲಿ ಎಲ್ಲಮ್ಮನ ಪಡ್ಲಿಗಿ ತುಂಬುವ ಕಾರ್ಯಕ್ರಮದಲ್ಲಿ ಜೋಗತಿಯರನ್ನು

ಆಧರದಿಂದ ಸ್ವಾಗತಿಸಿ ತಮ್ಮ ಕುಲದೇವಿ ರೂಪವಾದ ಎಲ್ಲಮ್ಮ ತಾಯಿಯ ಸ್ಥಾನಮಾನಗಳನ್ನು ಕೊಟ್ಟು ಸಾಕ್ಷಾತ್ ದೇವಿಯೇ ಜೋಗತಿಯ ರೂಪದಲ್ಲಿ ಮನೆಗೆ ಬಂದಳೆಂದು ಗೌರವ ಪೂರ್ವಕವಾಗಿ ಅವರನ್ನು ಭಕ್ತಿಯಿಂದ ಗೌರವಿಸುವುದು ಖಾಟಿಕ್ ಸಮುದಾಯದಲ್ಲಿ ಕಂಡುಬರುತ್ತದೆ.

೨. **ಹುಲಿಗೆಮ್ಮ :** ಖಾಟಿಕ್ ಸಮುದಾಯದವರು ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದ ಗ್ರಾಮದೇವತೆಯಾದ ಹುಲಿಗೆಮ್ಮದೇವಿಯನ್ನು ಮನೆದೇವರಾಗಿ ಮತ್ತು ತಮ್ಮ ಕಷ್ಟ, ಸಂಕಷ್ಟಗಳನ್ನು ಪರಿಹರಿಸಿ ಸದಾ ಕಾಪಾಡುತ್ತಾಳೆಂಬ ಮನೋಭಾವನೆಯಿಂದ ನಡೆದುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಮನೆದೇವರಾಗಿರುವ ಈ ತಾಯಿಯ ಭಕ್ತರು ಹುಲಿಗೆಮ್ಮದೇವಿ ಜಾತ್ರೆಗೆ ತಪ್ಪದೆ ಹೋಗಿ ಆ ತಾಯಿಯ ದರ್ಶನವನ್ನು ಪಡೆಯುತ್ತಾರೆ. ಸಾಮಾನ್ಯವಾಗಿ ಇವರು ಹುಲಿಗೆಮ್ಮದೇವಿಯ ಸಾನಿಧ್ಯದಲ್ಲಿ ಬ್ಯಾಟಿ ಮಾಡುವ ಹರಕೆ ಹೊರುತ್ತಾರೆ. ಜಾತ್ರೆಗೆ ಅಥವಾ ದರ್ಶನಕ್ಕೆ ಹೋಗಿ ಮಂಗಳವಾರ ಇಲ್ಲವೆ ಶುಕ್ರವಾರ ಅಥವಾ ಭಾರತ ಹುಣ್ಣಿಮೆ, ದವನದ ಹುಣ್ಣಿಮೆ ದಿನಗಳಲ್ಲಿ ನೆರವೇರಿಸಲಾಗುತ್ತದೆ. ದೇವಿಯಲ್ಲಿ ನೈವೇದ್ಯಕ್ಕಾಗಿ ಮೀಸಲು ಅಡಿಗೆಯ ಪದಾರ್ಥಗಳಾದ ಹೋಳಿಗೆ, ಕಡಬು, ಅನ್ನ, ಬದನೆಕಾಯಿಪಲ್ಯವನ್ನು ಮಾಡಿ ಪಡ್ಲಿಗೆ ತುಂಬುತ್ತಾರೆ. ಮಾತಂಗಿಯರಿಗೆ ಕರೆಸಿ ತಮ್ಮ ಸಂಪ್ರದಾಯದ ಪದ್ಧತಿಗಳ ಪ್ರಕಾರ ಮಾತಂಗಿಯರನ್ನು ಗೌರವಿಸಿ ಬಿದಿರು ಬುಟ್ಟಿಯಲ್ಲಿ ತುಂಬಿದ 'ಪಡ್ಲಿಗಿ'ಯನ್ನು ಕುಂಕುಮ, ಅರಿಶಿಣಗಳನ್ನು ಹಚ್ಚಿ ಹೂಗಳನ್ನು ಹಾಕಿ ಕರ್ಪೂರದಿಂದ ಬೆಳಗಿ ಪೂಜೆ ಸಲ್ಲಿಸಲಾಗುತ್ತದೆ. ನಂತರ ಮಾತಂಗಿಯರಿಗೆ ಕೊಟ್ಟು ಕಳಿಸುವ ಸಂಪ್ರದಾಯ ಇವರಲ್ಲಿದೆ. ಆಗಿ ಹುಣ್ಣಿಮೆಯೆಂದು ಶ್ರೀ ಹುಲಿಗೆಮ್ಮ ದೇವಿಗೆ ಕಂಕಣವನ್ನು ಕಟ್ಟುತ್ತಾರೆ. ಕಂಕಣ ಕಟ್ಟಿದ ಹತ್ತನೆಯ ದಿನಕ್ಕೆ ದೇವಿಯ ಜಾತ್ರೆಯಾಗುತ್ತದೆ. ಮರುದಿವಸ ಅಗ್ನಿಕುಂಡವನ್ನು ಏರ್ಪಡಿಸಿರುತ್ತಾರೆ. ಇದರಿಂದ ಮನೆದೇವತೆಯಾಗಿರುವ ಹುಲಿಗೆಮ್ಮನ ವಕ್ಕಗಳು ಈ ಮಾಸದಲ್ಲಿ ಯಾವುದೇ ರೀತಿಯ ಶುಭಕಾರ್ಯಗಳನ್ನು ಮಾಡುವಂತಿಲ್ಲ.

೩. **ಗಾಳೆಮ್ಮ :** ಗಾಳೆಮ್ಮ ದೇವಿಗೆ ನಡೆದುಕೊಳ್ಳುವ ಖಾಟಿಕ್ ಸಮುದಾಯವು ದೇವಿಗೆ ಕುರಿ, ಬಿಡುವ ಸಂಪ್ರದಾಯ ಅನುಸರಿಸುವುದು ರೂಢಿಯಲ್ಲಿದೆ. ಹೊಸಪೇಟೆ ತಾಲೂಕಿನ, ಹಂಪಿ ರಸ್ತೆಯಲ್ಲಿರುವ ಗಾಳೆಮ್ಮ ಗುಡಿಗೆ ಇಲ್ಲಿನ ಖಾಟಿಕ್‌ರು ದೈವ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಜೊತೆಗೆ ಮನೆಯಲ್ಲಿ ನಡೆಯುವ ಶುಭಕಾರ್ಯವಾದ ಮದುವೆಯ ಸಂದರ್ಭದಲ್ಲಿ ಈ ತಾಯಿಯನ್ನು ಪೂಜಿಸಿ ಕುರಿಯನ್ನು ಹರಕೆಯಾಗಿ ನೀಡುವ ಮುಖಾಂತರವೇ ಮುಂದಿನ ಕಾರ್ಯವನ್ನು ಮಾಡುವರು. ಹರಕೆ ಸಲ್ಲಿಸುವ ದಿನ ಬೆಳಿಗ್ಗೆ ಎದ್ದು ಸ್ನಾನ ಮಾಡಿಕೊಂಡು ಶುದ್ಧವಾದ ಬಟ್ಟೆಗಳನ್ನು ತೊಟ್ಟು ಕೊಂಡು ಗ್ರಾಮದ ಪ್ರಮುಖ ಸ್ತ್ರೀದೈವಗಳನ್ನು ಕಾಯಿ ಹಣ್ಣುಗಳನ್ನು ನೀಡಿ ಪೂಜಿಸಿಕೊಂಡು ಬರುತ್ತಾರೆ. ನಂತರ ತಾವು ಬಿಡುವ ಹರಕೆಯ ಕುರಿಯನ್ನು ಗಾಳೆಮ್ಮ ದೇವಿಯ ಗುಡಿಗೆ

ತೆಗೆದುಕೊಂಡು ಹೋಗಿ ದೇವಿಗೆ ಪೂಜೆಸಲ್ಲಿಸಿದ ಮೇಲೆ ಆ ಕುರಿಯ ಕೊರಳಿನಲ್ಲಿ ಮಲ್ಲಿಗೆಯ ಹೂವಿನ ಹಾರವನ್ನು ಹಾಕಿ ದೇವಸ್ಥಾನದ ಪ್ರದಕ್ಷಿಣೆಯನ್ನು ಮಾಡಿಸುತ್ತಾರೆ. ನಂತರ ದೇವಿಗೆ ಹರಕೆ ಸಲ್ಲಿಸಿ ಮನೆಗೆ ಹಿಂದಿರುಗುವ ಸಂಪ್ರದಾಯ ಅನುಸರಿಸುತ್ತಾರೆ. ನಂತರ ಹೂ, ಹಣ್ಣು, ದಂಡಿ, ಸೀರೆಗಳಿಂದ ಅಲಂಕರಿಸಿ ಅರ್ಪಿಸಿ ಕಾಯಿಕರ್ಪೂರಗಳಿಂದ ಪೂಜೆಸಲ್ಲಿಸಿ ಪೂಜಾರಿಯಾದವರು ಆ ಕುರಿಯನ್ನು ಪೂಜಿಸಿ ಬ್ಯಾಟಿಯನ್ನು ನೀಡಲು ಸಮ್ಮತಿಸುತ್ತಾನೆ. ಪೂಜಾರಿಯು ಸಮ್ಮತಿಸಿದ ಬಳಿಕ ತಾವು ನೀಡುವ ಬ್ಯಾಟಿಯನ್ನು ತೆಗೆದುಕೊಂಡು ದೇವಸ್ಥಾನದ ಹೊರಗಡೆ ಉಳಿದುಕೊಳ್ಳಲು ನೀಡಿದ ಸ್ಥಳದಲ್ಲಿ ತಮ್ಮ ಕುರಿಗೆ ಚೂರಿಯನ್ನು ಹಾಕಿಸುತ್ತಾರೆ. ನಂತರ ಬ್ಯಾಟಿಯ ಕುರಿ ಮಾಂಸವನ್ನು ಅಡಿಗೆ ಮಾಡಿ ದೇವಿಗೆ ನೈವೇದ್ಯವನ್ನು ಮಾಡಿಸಿ, ಬಂದಂತಹ ಎಲ್ಲರೂ ಅಲ್ಲಿಯೇ ಊಟಮಾಡಿ ಬರುವ ಸಂಪ್ರದಾಯ ಅನುಸರಿಸುತ್ತಾರೆ. ಕೊನೆಯಲ್ಲಿ ಉಳಿದಂತಹ ಅಡಿಗೆ ಪದಾರ್ಥಗಳನ್ನು ಮನೆಗೆ ತರದೆ ಅಲ್ಲಿಯೇ ಹಂಚಿ ಬರುವ ಸಂಪ್ರದಾಯವಿದೆ ಎಂದು ವಕ್ತೃಗಳಾದ ದೊಡ್ಡನರಸಮ್ಮ ಕಲ್ಯಾಣಕರ್ ಅವರು ಹೇಳುತ್ತಾರೆ. ಈ ಸಂದರ್ಭಗಳಲ್ಲಿ ವಾದ್ಯ ಮೇಳಗಳನ್ನು ಕೂಡಾ ತೆಗೆದು ಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ.

೪. **ಮೈಲಾರಲಿಂಗ ಜಾತ್ರೆ :** ಪ್ರತಿವರ್ಷ ಮಾಘ ಮಾಸದಲ್ಲಿ ಮೈಲಾರಲಿಂಗನ ಕಾರಣೀಕೋತ್ಸವ ನಡೆಯುವ ಸಮಯದಲ್ಲಿ ಖಾಟಿಕ್ ಸಮುದಾಯದವರು ಮೈಲಾರಲಿಂಗನ ದರುಶನ ಹಾಗೂ ಜಾತ್ರೆಗೆ ಹೋಗಿ ಪೂಜಿಸುತ್ತಾರೆ. ಇವರ ಜೊತೆಯಲ್ಲಿ ಇತರ ಸಮುದಾಯದವರು ಸುತ್ತಮುತ್ತಲ ಗ್ರಾಮದ ಭಕ್ತರು ಪಾಲ್ಗೊಳ್ಳುತ್ತಾರೆ. ನೂರಾರು ಅಂಗಡಿ ಮಳಿಗೆಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಖಾಟಿಕ್ ಸಮುದಾಯದಲ್ಲಿ ಮನೆದೇವರಾಗಿ ಪೂಜಿಸುವ ಪ್ರಮುಖ ಮನೆಗಳು ಇಲ್ಲಿ ಭಾಗವಹಿಸಿ ತಮ್ಮ ಭಕ್ತಿ ಸೇವೆ ಮಾಡಿಕೊಳ್ಳುತ್ತಾರೆ. ಈ ಭಾಗದಲ್ಲಿ ನಡೆಯುವ ಜಾತ್ರೆ ಮೂರು ದಿನಗಳವರೆಗೆ ನಡೆಯುತ್ತಿದ್ದು, ಪ್ರತಿದಿನ ಒಂದಿಲ್ಲೊಂದು ವಿಧಿಯಾಚರಣೆಗಳಿರುತ್ತವೆ.

೫. **ಸುನಾಮ ಜಕನಿ :** ಖಾಟಿಕ್ ಸಮುದಾಯದಲ್ಲಿ ಹನುಮಂತಕಾರಿ ಎಂಬ ಬೆಡಗಿನವರು ಮನೆದೇವತೆಯಾಗಿ ಪೂಜಿಸುವ ಪ್ರಮುಖ ದೇವತೆಯೆ ಸುನಾಮ ಜಕನಿ. ಹಾಗೆಯೇ ಎಲ್ಲರೂ ಈ ದೇವತೆಯನ್ನು ಪೂಜಿಸುವುದು ಕಂಡುಬರುತ್ತದೆ. ಈ ದೇವಿಯ ಕಥೆಯು ಹೀಗಿದೆ, ಹನುಮಂತಕಾರಿ ಬೆಡಗಿನ ಮಗಳಾಗಿ ಹುಟ್ಟಿದ ಸುನಾಮಗೆ ಮಲಕಾರಿ ಬೆಡಗಿನವರು ಸೊಸೆಯಾಗಿ ಮಾಡಿಕೊಂಡಿರುತ್ತಾರೆ. ಸುನಾಮಳ ಗಂಡನಿಗೆ ಮದ್ಯದ ಚಟವಿದ್ದು ಮಾಂಸ ಮಾರುವ ಚಾಕಣಾ ಮಾರುವ ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾನೆ. ಒಮ್ಮೆ ಕುರಿಯ ಅವಯಗಳನ್ನು ತಂದು ತೊಳೆದು ಸಾರು ಮಾಡುವಂತೆ ಹೇಳುತ್ತಾನೆ. ಅವಳು ಸರಿ ಎಂದು ತೊಳೆದು ಸಾರು ಮಾಡಲು ಅಣಿಗೊಳಿಸುವಾಗ ಬೆಕ್ಕು ಬಂದು ಮಾಂಸದ ದೊಡ್ಡ ಖಂಡವನ್ನು ಎತ್ತಿಕೊಂಡು ಹೋಗುತ್ತೆ, ಆಗ ಸಾರು ಮಾಡದೆ ಸುಮ್ಮನೆ ಕುಳಿತ

ಹೆಂಡತಿಯನ್ನು ಕಂಡು ವಿಷಯ ತಿಳಿದ ಗಂಡ ಅವಳಿಗೆ ಚೆನ್ನಾಗಿ ಥಳಿಸುತ್ತಾನೆ. ಆಗ ಸುನಾಮ ಮೂರ್ಛೆಯನ್ನು ಹೊಂದಿ ಬಿದ್ದು ಬಿಡುತ್ತಾಳೆ. ಹೆಂಡತಿ ಸತ್ತಳೆಂದು ತಿಳಿದು ಅವಳನ್ನು ಮಣ್ಣು ಮಾಡಿಬಿಡುತ್ತಾನೆ. ಅವಳ ತವರು ಮನೆಯವರು ಬಂದು ಕೇಳುತ್ತಾರೆ. ಆಗ ನಿಮ್ಮ ಮಗಳು ನನ್ನ ಹೆಂಡತಿ ಸತ್ತಳು ಅದಕ್ಕೆ ಮಣ್ಣು ಮಾಡಿದೆ ಎಂದು ಎದುರುತ್ತರವನ್ನು ನೀಡುತ್ತಾನೆ. ಕೊಪಗೊಂಡ ತವರು ಮನೆಯವರು ಏನು ಮಾಡಲಾಗದೆ ಊರಿಗೆ ಹಿಂತಿರುಗುವ ಸಂದರ್ಭದಲ್ಲಿ ಮಗಳ ಸಮಾಧಿಗೆ ಕೈಮುಗಿದು ತೆರಳುತ್ತಾರೆ. ಒಂದು ದಿನ ಸುನಾಮ ತನ್ನ ತಂದೆ ತಾಯಿಯರ ಕನಸಲ್ಲಿ ಬಂದು ನಾನು ಇನ್ನು ಸತ್ತಿಲ್ಲ, ಆದರೆ ನನ್ನ ಗಂಡನಿಗೆ ಸಹಾಯ ಮಾಡಲು ಯಾರೂ ಇಲ್ಲ ಅದಕ್ಕಾಗಿ ನನ್ನ ತಂಗಿಯನ್ನು ಅವನಿಗೆ ಮದುವೆ ಮಾಡಿಕೊಡಿ. ಹಾಗೆಯೇ ನನಗೆ ಪೂಜೆ ಸಲ್ಲಿಸಿ ನನ್ನ ಪೂಜೆ ಮಾಡಿದವರಿಗೆ ಫಲವನ್ನು ನೀಡುತ್ತೇನೆಂದು ಹೇಳಿದಳು. ಅದರ ಪ್ರಕಾರ ಸುನಾಮಳ ತಂಗಿ ಜಕನಿಯನ್ನು ಸುನಾಮಳ ಗಂಡನಿಗೆ ಮದುವೆ ಮಾಡಿಕೊಟ್ಟರು ಹಾಗೂ ಸುನಾಮಳಿಗೆ ಪೂಜೆ ಸಲ್ಲಿಸಿದರು. ಇಂದಿಗೂ ಸುನಾಮ ತುಂಬಾ ಪ್ರಭಾವಿ ದೇವತೆ ಆಂಧ್ರಪ್ರದೇಶದ ಗುತ್ತಿಯಲ್ಲಿ ಸುನಾಮ ದೇವಿಯ ದೇವಸ್ಥಾನವನ್ನು ಕಟ್ಟಿ ವರ್ಷಕ್ಕೊಮ್ಮೆ ಅಭಿಷೇಕ ಕಳಸಪೂಜೆ ಇತರ ಹಲವು ಪೂಜೆಗಳನ್ನು ಮಾಡುವುದು ಕಾಣಬಹುದು. ಮದುವೆಯಾಗದ ಕನ್ಯೆಯರು, ಮಕ್ಕಳಾಗದವರು, ಹಲವು ಕಷ್ಟಗಳಿಗೆ ಈ ತಾಯಿ ಪರಿಹಾರ ನೀಡಿದ್ದಾಳೆಂದು ವಕ್ತೃಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸುತ್ತಾರೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದ ರಾಜ್ಯಗಳಲ್ಲಿ ಪ್ರತಿ ಮನೆಯವರು ಅಕ್ಕಿ, ಬೆಲ್ಲ, ಗೋಧಿ ಇಲ್ಲವೆ ಹಣವನ್ನು ಈ ದೇವಿಗೆ ಮುಡುಪಾಗಿ ಕೊಡುತ್ತಾರೆ. ಹೀಗೆ ಬಂದ ಹಣದಿಂದ ದವಸಧಾನ್ಯ ದಿಂದ ವರ್ಷಕ್ಕೊಮ್ಮೆ ಈ ದೇವಿಯ ಹೆಸರಿನಲ್ಲಿ ಜಾತ್ರೆ ಮಹೋತ್ಸವ ನಡೆಯುವುದು.

ಮುಸ್ಲಿಂ ದೇವರುಗಳು

ಸದಾ ಶಾಂತಿ ಸೌಹಾರ್ದತೆಯನ್ನು ಬಯಸುವ ಖಾಟಿಕ್ ಸಮುದಾಯದವರು ಸರ್ವಧರ್ಮಗಳಲ್ಲಿ ಸಮಾನ ಭಾವನೆಯನ್ನು ಹೊಂದಿರುವ ಇವರು ಮುಸ್ಲಿಂ ದೇವರುಗಳಿಗೂ ಕೂಡ ತುಂಬಾ ಭಕ್ತಿ ಭಾವನೆಯಿಂದ ಹರಕೆಗಳನ್ನು ಹೊತ್ತು ಹರಕೆ ತೀರಿಸುವ ಸಂಪ್ರದಾಯ ಅನುಸರಿಸುತ್ತಾ ಬಂದಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ದಾವಣಗೆರೆ ಜಿಲ್ಲೆಯಲ್ಲಿ ಬರುವ ಸುತ್ತಮುತ್ತಲಿನ ಖಾಟಿಕರು ಹುನುಗುಂದ ತಾಲೂಕಿನಲ್ಲಿರುವ ದಾವಲ್‌ಮಲಿಕ್ ದೇವರಿಗೆ ನಡೆದುಕೊಳ್ಳುತ್ತಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಸುತ್ತಮುತ್ತಲಿನ ಖಾಟಿಕ್‌ರು ಗದಗ ಜಿಲ್ಲೆಯ ಅಣ್ಣಿಗೇರಿಯ ಹತ್ತಿರಬರುವ ರಾಜಾಭಕ್ಷವಲಿ ಹಾಗೂ ಖ್ವಾಜಾಬಂದೇನವಾಜ ದೇವರಿಗೆ ನಡೆದು ಕೊಳ್ಳುತ್ತಾರೆ. ಹಾಗೆಯೇ ಸಾಮಾನ್ಯವಾಗಿ ಬಹಳಷ್ಟು ಜನರು ಮಾಬುಸುಬಾನಿ ಗ್ಯಾರವಿಯನ್ನು ಮಾಡುವವರಾಗಿದ್ದಾರೆ. ದೇವರಿಗೆ ಹರಕೆ ಹೊತ್ತವರು ಕುರಿಯ ಬ್ಯಾಟಿ ಮಾಡಲೇಬೇಕೆಂಬ

ಸಂಪ್ರದಾಯ ಇರುವುದರಿಂದ ಅಲ್ಲಿಗೆ ಹೋಗಿ ಬಹಳ ಭಕ್ತಿ ಭಾವನೆಯಿಂದ ಪೂಜೆಸಲ್ಲಿಸಿ ಹಿಂತಿರುಗಿದ ನಂತರ ಮನೆಯಲ್ಲಿ ಹರಕೆಯನ್ನು ತೀರಿಸುತ್ತಾರೆ. ಫಕೀರರನ್ನು ಊಟ ಮಾಡಿಸುವ ಸಂಪ್ರದಾಯ ಅನುಸರಿಸುತ್ತಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಇವರ ದೇವರುಗಳಿಗೂ ಕೂಡ ತಮ್ಮ ಭಕ್ತಿಭಾವನೆಗೆ ಸಿಗುವಂತಹ ಹರಕೆಯನ್ನು ಹೊತ್ತು ಹರಕೆ ತೀರಿಸುವ ಸಂಪ್ರದಾಯ ಅನುಸರಿಸುತ್ತಾರೆ.

ಆಧಾರಗಳು

೧. ಕೃಷ್ಣಮೂರ್ತಿ., ಒಡಿಗ ಬುಡಕಟ್ಟು ಸಮುದಾಯ ಒಂದು ಅಧ್ಯಯನ, ಪಿಎಚ್.ಡಿ. ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೮

೨. ಮೈತ್ರಿ ಕೆ.ಎಂ., (ಲೇ) ಗಿರಿಜನ ಸಿರಿ, ಅಭಿನಂದನ ಸಂಪುಟ: ವಿಶ್ವಜನಾಂಗಗಳು ಮತ್ತು ಭಾರತ ಕರ್ನಾಟಕ ಬುಡಕಟ್ಟುಗಳು, ಖಂಡೋಬಾ ಪಿ.ಕೆ., ಅಭಿನಂದನ ಸಮಿತಿ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ಪು. ೨೨೦

ಅಧ್ಯಾಯ - ೫

ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಜೀವನ

೫.೧. ಆರ್ಥಿಕ ಜೀವನ

ಮನುಷ್ಯನ ವಿಕಾಸದ ಇತಿಹಾಸವನ್ನು ಗಮನಿಸಿದಾಗ ಅವನು ಆದಿ ಕಾಲದಿಂದ ಪ್ರಸ್ತುತ ಆಧುನಿಕ ಬದುಕಿನವರೆಗೂ ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ ಕಾಲ ಕಾಲಕ್ಕೆ ಈತನಲ್ಲಾಗುವ ಬದಲಾವಣೆ, ವೈಜ್ಞಾನಿಕ ಅನ್ವೇಷಣೆಗಳು ಇವುಗಳೊಂದಿಗೆ ಆ ಮೂಲಕವಾಗಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕವಾಗಿ ಮಾನವ ಮುಂದುವರೆದ ಹಾಗೂ ಹಿಂದುಳಿದ ಹತ್ತು ಹಲವು ಮುಖಗಳು ಗೋಚರಿಸುತ್ತವೆ. ಇಡೀ ಭೂಗೋಳದಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಂದು ಸಮುದಾಯದ ಜೀವನ ಮೌಲ್ಯವನ್ನು ನಿರ್ಧರಿಸುವಲ್ಲಿ ಮುಖ್ಯಪಾತ್ರ ಬೇಟೆ, ಕೃಷಿ, ಪಶುಪಾಲನೆ. ಹೀಗೆ ಮನುಷ್ಯ ಒಂದೊಂದು ಹಂತ ತಲುಪಿ ಆತನ ಬದುಕಿನ ರೂಪುರೇಷಗಳು ಬದಲಾವಣೆಗೆ ಒಳಗಾದುದನ್ನು ಇತಿಹಾಸದ ಮೂಲಕ ತಿಳಿಯಬಹುದಾಗಿದೆ.

ಸಮುದಾಯ ಅನುಸರಿಸುತ್ತಿರುವ ಆರ್ಥಿಕ ಚಟುವಟಿಕೆಗಳು ಮಾನವನ ಶ್ರಮ ಸಂಪತ್ತಿನ ಬಳಕೆ ಸಂಪನ್ಮೂಲಗಳ ಪಾತ್ರ ಜನಸಂಖ್ಯೆ ಶಿಕ್ಷಣದ ಪಾತ್ರ ಪ್ರಭಾವ ಕೌಟುಂಬಿಕ ಜೀವನದಲ್ಲಿನ ಆವರ್ತಗಳು ಉದ್ಯೋಗಗಳ ಹಂಚಿಕೆಯಿಂದ ಬದಲಾಗುತ್ತಿರುವ ಸಮಾಜದಲ್ಲಿ ನಿರ್ಮಿಸಿಕೊಂಡಿರುವ ರೀತಿ, ನೀತಿ ತಿಳಿಯುವುದಾಗಿದೆ. ಹೀಗೆ ಸಮುದಾಯದ ಜೀವನ ವಿಧಾನದಲ್ಲಿ ಆರ್ಥಿಕತೆ ಎಂಬುದು ತುಂಬಾ ಮಹತ್ವದ ಪಾತ್ರವಹಿಸುತ್ತದೆ. ಈ ಎಲ್ಲಾ ಬದಲಾವಣೆಗಳಿಂದ ಸಾಂಸ್ಕೃತಿಕ ಅಂಶಗಳಾದ ಸಾಮಾಜಿಕ, ರಾಜಕೀಯ, ಧಾರ್ಮಿಕ ರೀತಿ ನೀತಿಗಳಲ್ಲಿನ ಬದಲಾವಣೆಗಳು ಆರ್ಥಿಕ ವ್ಯವಸ್ಥೆಯ ಆಧಾರದ ಮೇಲೆಯೇ ನಿರ್ಧಾರವಾಗುತ್ತದೆ.

ಒಂದು ಸಮುದಾಯದ ಸರ್ವಾಂಗೀಣ ಆಶಯಗಳು ರೂಪುಗೊಳ್ಳುವುದು. ಆರ್ಥಿಕವಾಗಿ ಆ ಸಮುದಾಯ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಆಧರಿಸಿರುತ್ತದೆ. ಭಾರತದಂತಹ ಸಂಪ್ರದಾಯಶೀಲ ಸಮಾಜದಲ್ಲಿ ಸಮುದಾಯವೊಂದರ ವರ್ತಮಾನದ ಸ್ಥಿತಿಗಳಿಗೆ ನಿನ್ನೆಗಳಲ್ಲಿ ಕಾರಣಗಳಿರುತ್ತವೆ. ಆದ್ದರಿಂದ ಸಮುದಾಯದವೊಂದರ ಈವತ್ತಿನ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಅದರ ಆರ್ಥಿಕ ಚಟುವಟಿಕೆಗಳ ಚಾರಿತ್ರಿಕ ರೂಪಾಂತರಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

ಒಂದು ಸಮುದಾಯದ ಬದುಕಿನ ಎಲ್ಲ ವಿವರಗಳು ರೂಪುಗೊಳ್ಳುವುದು ಆ ಸಮುದಾಯ ಯಾವ ಬಗೆಯ ಉತ್ಪಾದನಾ ಚಟುವಟಿಕೆಯಲ್ಲಿ ಪಾಲ್ಗೊಂಡಿದೆ ಎಂಬುದನ್ನು ಅವಲಂಬಿಸಿದೆ. ಅಂದರೆ ಆರ್ಥಿಕ ಚಟುವಟಿಕೆಗಳು ಸಮುದಾಯವೊಂದರ ಬದುಕಿನ ಗಡಿಯನ್ನು ನಿರ್ದೇಶಿಸುತ್ತದೆ. ನಾವು ಇಂದು ಗುರುತಿಸುವ ಪ್ರತಿಯೊಂದು ಸಾಂಸ್ಕೃತಿಕ ಘಟಕವು ತನ್ನ ಅನನ್ಯತೆಯನ್ನು ಉಳಿಸಿಕೊಂಡಿರುವುದು ತನ್ನ ಉತ್ಪಾದನಾ ಚಟುವಟಿಕೆಯ ಮೇಲೆಯೇ ಒಂದು ಸಮುದಾಯದ ಅಧ್ಯಯನವೆಂದರೆ ಅದರ ಆರ್ಥಿಕ ಚಟುವಟಿಕೆಗಳ ರೂಪಾಂತರಗಳ ಅಧ್ಯಯನವೇ ಆಗಿದೆ.

ಸಮುದಾಯದ ಸಾಮಾಜಿಕ ಜೀವನ ನಿರ್ಧರಿಸುವಲ್ಲಿ ಆರ್ಥಿಕ ವೃತ್ತಿಗಳು ಮುಖ್ಯ ಪಾತ್ರ ವಹಿಸುತ್ತವೆ. ಖಾಟಿಕ ಸಮುದಾಯದ ಮೂಲ ಉದ್ಯೋಗವಾದ ಸೈನಿಕವೃತ್ತಿಯಿಂದ ಜೀವನ ನಿರ್ವಹಣೆಗೆಂದು ಅವಲಂಬಿಸಿದ ವೃತ್ತಿಯಾದ ಕುರಿ ಮಾಂಸ ಮಾರುವುದಾಗಿದೆ. ಈ ಮಾಂಸ ಮಾರುವ ಪ್ರಕ್ರಿಯೆ ಎಂದಿನಿಂದ ಪ್ರಾರಂಭಿಸಿರಬಹುದು ಎಂಬ ಪ್ರಶ್ನೆ ಮೂಡಿದಾಗ ಶ್ರೀ ರಾಜನಾಥ ಸೋನಕರ್ ಶಾಸ್ತ್ರಿಯವರು ಹೇಳುವಂತೆ ಆದಿ ಕಾಲದಲ್ಲಿ ಕಾಡುಗಳಲ್ಲಿ ಅಲೆಯುತ್ತಿದ್ದಾಗ ಎಲ್ಲರೂ ತಮ್ಮ ಹೊಟ್ಟೆಹೊರೆದು ಕೊಳ್ಳಲು ಅಗತ್ಯಕ್ಕೆ ತಕ್ಕಂತೆ ಕಾಡಿನ ಪ್ರಾಣಿಗಳನ್ನು ಬೇಟೆಯಾಡುತ್ತ ಮಾಂಸ ತಿಂದು ಜೀವಿಸುತ್ತಿದ್ದರು. ಅಂತಹ ಒಂದು ಪೂರ್ವಜಾತಿಯಾಗಿರುವ ಖಾಟಿಕರು ಕಾಲಾನಂತರ ತಮಗೆ ತಿಳಿದಿರುವ ಹವ್ಯಾಸ ಬೇಟೆಯನ್ನೇ ತಮ್ಮ ಉದ್ಯೋಗವಾಗಿಸಿಕೊಂಡು ಬೇಟೆಯಾಡಿ ಉಳಿದ ಮಾಂಸವನ್ನು ಬೇರೆಯವರಿಗೆ ಮಾರಾಟವನ್ನಾಗಿ ಮಾಡಿ ಇತರೆ ಗೃಹೋಪಯೋಗಿ ಆಹಾರ ಪದಾರ್ಥಗಳನ್ನು ಪಡೆದು ಜೀವನ ನಿರ್ವಹಣೆ ಮಾಡತೊಡಗಿದರು.

ದಿನಾಲು ಬೇಟೆಯಾಡುವುದಕ್ಕಿಂತ ಪಶುಗಳನ್ನು ಸಾಕಿ ತಮಗೆ ಅವಶ್ಯವೆನಿಸಿದಾಗ ಅವುಗಳನ್ನು ಉಪಯೋಗಿಸುವುದು ಅವರಿಗೆ ಅರಿವಿಗೆ ಬಂದಿತು. ಹೀಗಾಗಿ ಪಶುಪಾಲನೆಯು ಇವರ ಮುಂದಿನ ಹೆಜ್ಜೆಯಾಗಿ ಪರಿಣಮಿಸಿತು. ಕಾಲಾನಂತರ ಸಮಾಜ ಜೀವನ ರೂಪುಗೊಳ್ಳತೊಡಗಿತು. ನಾಗರೀಕತೆಗಳು ಪ್ರಾರಂಭಗೊಳ್ಳತೊಡಗಿದವು. ಕಾಲಕ್ಕೆ ತಕ್ಕಂತೆ ಖಾಟಿಕರು ಸಹ ಪ್ರಾಣಿಗಳನ್ನು ಸಾಕುತ್ತ ಮಾಂಸ ಮಾರುವ ವೃತ್ತಿಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ನಿರ್ವಹಿಸತೊಡಗಿದರು. ಆದಿಮಾನವನ ಒಂದು ಗುಂಪು ಈ ರೀತಿಯಾಗಿ ತಮ್ಮ ಮೂಲ ಉದ್ಯೋಗವಾಗಿ ಬದಲಾಯಿಸಿ ಕೊಂಡಿರುವ ಸಾಧ್ಯತೆಗಳು ಹೆಚ್ಚಾಗಿವೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು ಒಂದು ಇತಿಹಾಸವನ್ನು ಕಟ್ಟಿಕೊಡುವ ಕ್ರಿಯೆಯಲ್ಲಿ ತುಂಬಾ ಮಹತ್ವವಾದ ಪಾತ್ರವನ್ನು ವಹಿಸುವ ಹೇಳಿಕೆಯಾಗಿದೆ.

ಇಂದು ಭಾರತದ ತುಂಬೆಲ್ಲಾ ಹರಡಿರುವ ಖಾಟಿಕರ ಮೂಲ ಉದ್ಯೋಗ ಮಾಂಸ ಮಾರಾಟ ಮತ್ತು ಹಣ್ಣು ಹಂಪಲುಗಳ ಮಾರಾಟ ಎಂದು, ಈ ಎರಡು ಉದ್ಯೋಗಗಳು ಇವರಲ್ಲಿ ಹೆಚ್ಚು

ಪ್ರಚಲಿತಗಳಲ್ಲಿವೆ ಎಂದು 'ಕಾಟಿಕ್ ಜಾತಿಯ ಉಗಮ ಮತ್ತು ಇತಿಹಾಸ' ಎಂಬ ಶಾಸ್ತ್ರೀಯವರ ಪುಸ್ತಕದಿಂದ ತಿಳಿದುಬರುತ್ತದೆ. ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಖಾಟಿಕರ ಮುಖ್ಯ ಉದ್ಯೋಗ ಮಾಂಸ ಮಾರಾಟ ಮಾಡುವಿಕೆ ಆಗಿದೆ. ಹೀಗೆ ತನ್ನ ಮೂಲ ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಇಂದಿಗೂ ಈ ನಾಗರೀಕತೆಯ ಹೊಸ್ತಿಲಲ್ಲು ತನ್ನ ಮೂಲ ವೃತ್ತಿಯಲ್ಲಿ ಮುಂದುವರಿಯುತ್ತಿರುವ ಈ ಸಮುದಾಯದ ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು ಇಂದಿನ ಜರೂರತ್ತಾಗಿದೆ. ಏಕೆಂದರೆ ಒಂದು ಸಮುದಾಯದ ಅಡಿಪಾಯ ಎಂದರೆ ಅದರ ಆರ್ಥಿಕತೆಯ ಮೇಲೆ ಇವರ ನೈಜ ಪರಿಸ್ಥಿತಿಯ ಸೌಧವನ್ನು ಅರಿಯಬೇಕಾಗಿದೆ. ಹಾಗಾಗಿ ಒಂದು ಸಮುದಾಯದ ಆರ್ಥಿಕ ಪರಿಸ್ಥಿತಿಯ ಅಧ್ಯಯನ ಆ ಸಮುದಾಯ ಇಂದು ಸಮಾಜದಲ್ಲಿ ಪಡೆದಿರುವ ಸ್ಥಾನಮಾನ ಒಟ್ಟಾರೆ ಪರಿಸ್ಥಿತಿಯನ್ನು ನಿರ್ದೇಶಿಸುತ್ತದೆ. ಈ ರೀತಿಯಾಗಿ ಆದಿಕಾಲದಿಂದ ಇಂದಿನವರೆಗೂ ಮಾಡಿಕೊಂಡು ಬಂದಿರುವ ಉದ್ಯೋಗ ಇವರ ಹೊಟ್ಟೆ ತುಂಬಿಸಿದೆಯೇ? ಇವರಿಗೆ ಸಮಾಜದಲ್ಲಿ ಗೌರವ ತಂದು ಕೊಟ್ಟಿದೆಯೇ? ಇವರ ಪರಿಸ್ಥಿತಿ ಸುಧಾರಿಸಿದೆಯೇ? ಹೀಗೆ ಹತ್ತು ಹಲವು ಪ್ರಶ್ನೆಗಳನ್ನಿಟ್ಟುಕೊಂಡು ಈ ಅಧ್ಯಯನ ವಿಶ್ಲೇಷಿಸಲಾಗಿದೆ.

ಮೊಘಲರ ಕಾಲದಲ್ಲಿ ಅವರ ಸೈನ್ಯದ ತುಕಡಿಗಳಾಗಿ ಕೆಲವು ಜನರು ಸೇವೆಗೈದರು. ಉಳಿದವರು ರಾಜಾಶ್ರಯದಿಂದ ಹೊರಬಿದ್ದಾಗ ಹಾಗೂ ಇವರ ದಬ್ಬಾಳಿಕೆಯಿಂದ ರಾಜ್ಯದಿಂದ ಪಲಾಯನ ಮಾಡಿದವರಾಗಿ ಬಂದವರೆ ಈ ಖಾಟಿಕ್ ಸಮುದಾಯದ ಮೂಲದವರು ಎಂದು ಕೆಲವು ವಕ್ತೃಗಳ ಅಭಿಪ್ರಾಯವಾಗಿದ್ದು, ರಾಜಾಶ್ರಯವನ್ನು ತೊರೆದ ಬಳಿಕ ಇವರು ಜೀವನ ನಿರ್ವಹಣೆಗಾಗಿ ಈ ವೃತ್ತಿಯನ್ನು ಅವಲಂಬಿಸಬೇಕಾಯಿತು. ಇದು ಹೀಗೆ ಬೆಳೆಯುತ್ತ ರಾಜ್ಯಾದ್ಯಾಂತ ಸವಿಸ್ತಾರವಾಗಿ ಸಮುದಾಯವು ಪಸರಿಸಿತು. ರಾಜ್ಯದ ಗಡಿ ಸೈನಿಕರಿಗೂ ಸಹ ಇವರು ಮಾಂಸವನ್ನು ಕಡಿದು ಪೂರೈಸುತ್ತಿದ್ದರು ಹಾಗೂ ಇಂದಿಗೂ ಪೂರೈಸುತ್ತಿರುವುದು ಈ ಖಾಟಿಕ್ ಸಮುದಾಯದವರೇ. ಕರ್ನಾಟಕದಲ್ಲಿ ಅಮೀನ್‌ಗಡ ಎಂಬ ಸ್ಥಳದಲ್ಲಿ ನಡೆಯುವ ದೊಡ್ಡ ಕುರಿ ಸಂತೆಯ ವ್ಯಾಪಾರದಲ್ಲಿ ಬರುವ ಬೆಳಗಾವಿ, ಸೋಲಾಪುರದ ಖಾಟಿಕರು ಇವತ್ತಿಗೂ ಮಿಲಿಟರಿಗಳಿಗೆ ಮಾಂಸವನ್ನು ಪೂರೈಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ಹೀಗೆ ಈ ಕಾಯಕವೇ ಪ್ರಧಾನವಾಗಿರಿಸಿಕೊಂಡು ಬಂದ ಈ ಖಾಟಿಕ್ ಸಮುದಾಯವು ಇದಕ್ಕಿಂತ ಮುಂಚೆ ಇವರನ್ನು ಶಿಕಾರಿ, ಅಖೇಟಕರು ಎಂದು ಗುರುತಿಸಲಾಗುತ್ತಿತ್ತು ಎಂದು ಶಾಸ್ತ್ರೀಯವರು ತಿಳಿಸುತ್ತಾರೆ.

ಖಾಟಿಕ್ ಸಮುದಾಯವು ಪ್ರಾಚೀನ ಕಾಲದಿಂದಲೂ ತನ್ನ ಮೂಲ ವೃತ್ತಿಯನ್ನು ಜೀವನ ನಿರ್ವಹಣೆಗಾಗಿ ನಂಬಿ, ಅವಲಂಬಿಸಿಕೊಂಡಿದ್ದಾಗಿದೆ. ಜಾತಿ ವ್ಯವಸ್ಥೆ ಮತ್ತು ವೃತ್ತಿ ರಚನೆಗಳಿಂದ ಜೀವನೋಪಾಯದ ಕೆಲಸಗಳನ್ನು ನಿರ್ವಹಿಸಿಕೊಂಡು ಜೊತೆ ಜೊತೆಯಲ್ಲೇ ಉನ್ನತ ಜಾತಿಗಳು

ಅನೇಕ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಂಡರು. ಹೊಸ ಸ್ಥಾನಮಾನಗಳನ್ನು ಸೃಷ್ಟಿಸಿಕೊಂಡರು. ತಮ್ಮ ಮೂಲ ಕಸುಬುಗಳನ್ನೇ ಹೊಟ್ಟೆಪಾಡಿಗಾಗಿ ಇಂದಿಗೂ ಅವಲಂಬಿಸಿಕೊಂಡು ಬಂದಿದ್ದ ಈ ಸಮುದಾಯಕ್ಕೆ ಮೂಲವೃತ್ತಿಯೂ ಕ್ಷೀಣಿಸುತ್ತಿರುವುದು ಆತಂಕವನ್ನು ಸೃಷ್ಟಿಸಿದೆ. ಆಧುನಿಕ ಸಂದರ್ಭದಲ್ಲಿ ಖಾಟಿಕ್ ಸಮುದಾಯದ ಆರ್ಥಿಕ ಸ್ಥಾನಮಾನಗಳು ಕೆಳಸ್ತರದಲ್ಲಿವೆ. ಸಮಾಜದಲ್ಲಿ ಅನೇಕ ಸಮುದಾಯ ಗಳು ಮನೆ, ಭೂಮಿ ಮುಂತಾದ ಸೌಲಭ್ಯಗಳಿಂದ ವಾಸಿಸುತ್ತಿದ್ದಾರೆ. ಇಂತಹ ಜನರ ಸಮೂಹದಲ್ಲಿ ಈ ಸಮುದಾಯ ಅನೇಕ ಸಮಸ್ಯೆಗಳಿಂದ ಜೀವನ ಮಾಡಬೇಕಾದ ಪರಿಸ್ಥಿತಿಯಲ್ಲಿದೆ. ಯಾವುದೇ ಕೆಲಸವಾಗಲಿ ಅತ್ಯಂತ ನಿಷ್ಠೆ ಹಾಗೂ ಶ್ರದ್ಧೆಯಿಂದ ಕೆಲಸಮಾಡುವ ಶಕ್ತಿ ಇವರಲ್ಲಿದೆ. ಯಾವ ಹೊಸ ವೃತ್ತಿಯೇ ಆಗಲಿ ಅದಕ್ಕೆ ಬಹುಬೇಗ ಹೊಂದಿಕೊಳ್ಳುವರು.

೫.೧.೧. ಸಾಂಪ್ರದಾಯಿಕ ವೃತ್ತಿ

ಖಾಟಿಕರ ಮೂಲ ಉದ್ಯೋಗ ಕುರಿಮಾಂಸ ಮಾರುವುದಾಗಿದೆ. ಈ ಉದ್ಯೋಗದ ಹಿನ್ನೆಲೆಯನ್ನು ಗಮನಿಸಿದಾಗ ಮಾನವ ತನ್ನ ಆದಿಕಾಲದಿಂದಲೂ ಬೇಟೆಯಾಡಿ ಉದರ ಪೋಷಣೆ ಮಾಡಿಕೊಂಡು ಬಂದದ್ದು ಇತಿಹಾಸದಿಂದ ತಿಳಿದುಬರುತ್ತದೆ. ಹೀಗೆ ಇತಿಹಾಸದಿಂದ ಮಾಂಸದ ಮಾರಾಟವನ್ನೇ ಮೂಲವೃತ್ತಿಯನ್ನಾಗಿ ವ್ಯಾಪಾರ ಮಾಡಿಕೊಂಡು ಬಂದ ಸಮುದಾಯವೇ ಖಾಟಿಕ್ ಸಮುದಾಯವಾಗಿದೆ. ಇಂದಿಗೂ ಈ ಮೂಲವೃತ್ತಿಯನ್ನು ತಮ್ಮ ಬದುಕಿನ ನಿರ್ವಹಣೆಗೆ ಅಳವಡಿಸಿಕೊಂಡು ಜೀವನ ಸಾಗಿಸುವವರಾಗಿ ಕಂಡುಬರುತ್ತಾರೆ. ಊರು ಬೆಳೆದಂತೆ ನಾಗರೀಕತೆ ಬೆಳೆದಂತೆ ಇವರು ಇದೇ ಕಾಯಕವನ್ನು ಮುಂದುವರಿಸಿದರು. ಹೀಗೆ ಮಾಂಸಮಾರುವಿಕೆಯೇ ಇವರ ಮುಖ್ಯ ಉದ್ಯೋಗವಾಗಿ ಮುಂದುವರೆಯಿತು. ಬೇಟೆಯಾಡುವವರನ್ನು ಶಿಕಾರಿ, ಅಖೇಟಕ ಎಂದು ಕರೆಯುತ್ತಿದ್ದರು ನಂತರ ಕಾಲಾನುಕ್ರಮದಲ್ಲಿ ಕಾಟಿಕ್, ಕಟಿಕ್, ಖಾಟಿಕ್ ಎಂದಿರುವ ಹೆಸರುಗಳಿಂದ ಗುರುತಿಸಲಾಯಿತು.

ಶಾಸ್ತ್ರೀಯವರು ಹೇಳುವ ಪ್ರಕಾರ ಇವರಿಗೆ ರಾಜ್ಯಗಳು ಇದ್ದು ಇವರು ರಾಜ್ಯಾಡಳಿತ ನಡೆಸಿರುವ ಪುರಾವೆಗಳನ್ನು ಒದಗಿಸುತ್ತಾರೆ. ಮಹಮ್ಮದ ಘಜನಿ ಇವರ ರಾಜ್ಯಗಳನ್ನು ನಾಶಪಡಿಸಿದುದ್ದಾಗಿ ದಾಖಲೆಯನ್ನು ಒದಗಿಸುತ್ತಾರೆ. ಬೇಟೆಯಾಡುತ್ತ ಜೀವನ ಸಾಗಿಸುತ್ತಿದ್ದು ತಮ್ಮ ಬಳಿ ಉಳಿದ ಮಾಂಸವನ್ನು ಇತರೆ ಸಮುದಾಯಗಳಿಗೆ ಮಾರುವಿಕೆಯ ಮುಖಾಂತರ ಉದ್ಯೋಗವನ್ನಾಗಿಸಿಕೊಂಡ ಈ ಸಮುದಾಯ ನಂತರ ಇದೇ ಉದ್ಯೋಗವನ್ನು ಖಾಯಂ ಆಗಿ ಮುಂದುವರೆಸಿಕೊಂಡು ಸಾಗಿಸುತ್ತ, ಪ್ರಸ್ತುತ ದಿನಗಳಲ್ಲೂ ಅದನ್ನೇ ನಿರ್ವಹಿಸುತ್ತಾ ಸಾಕ್ಷಿಯಾಗಿ ನಿಂತಿವೆ.

ನಂತರ ಅಲೆಗ್ಸಾಂಡರ್‌ನ ಸೈನ್ಯಕ್ಕೆ ಸಿಕ್ಕ ಸೈನಿಕರು ತಮ್ಮ ಹೆಸರನ್ನು ಕಟ್, ಕಟಿಕ್ ಎಂದು ಕರೆಯಲು ನಿರಾಕರಿಸಿ ತಮ್ಮನ್ನು ಖಟಿಕ್ ಎಂದು ಗುರುತಿಸಿಕೊಂಡರು. ಅಂದಿನಿಂದ ಖಟಿಕ್ ಶಬ್ದ ಉಗಮವಾಯಿತು. ಯುನಾನಿ ಸಾಹಿತ್ಯದಲ್ಲಿ ಕಾಥಿಯಾವಾಡ ಎಂದು ಇವರ ರಾಜಧಾನಿಯಾಗಿದ್ದು

ಇವರ ಕೋಟೆಯನ್ನು ಯುನಾನಿ ಸೈನಿಕರು ನಾಶಪಡಿಸಿದರು ಎಂಬ ವಿಚಾರ ತಿಳಿದುಬರುತ್ತದೆ. ವೀರಯೋಧರು, ಸಾಹಿಸಿ ಸೈನಿಕರಾಗಿದ್ದರೆಂದು ಇವರ ಬಗ್ಗೆ ತಿಳಿದುಬರುತ್ತದೆ. ಇದನ್ನು ಗಮನಿಸಿದಾಗ ಇವರು ಪೂರ್ವದಲ್ಲಿ ಬಲಿಷ್ಠ ಯೋಧರಾಗಿರುವ ಸೈನಿಕ ವೃತ್ತಿಯನ್ನು ಹೊಂದಿರುವ ವೀರ ಸಮುದಾಯವಾಗಿದ್ದು, ಯಾವುದಾದರು ಚಿಕ್ಕ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದಿರಬಹುದೆಂದು ತಿಳಿದುಬರುತ್ತದೆ ಹೀಗೆ ಯುನಾನಿ ಸೈನಿಕರು ಅಲೆಗ್ಸಾಂಡರ್, ಮಹಮ್ಮದ್ ಘಜನಿ, ಬ್ರಿಟಿಷ್‌ರು ಹೀಗೆ ಹಲವಾರು ದಾಳಿಗಳನ್ನು ಎದುರಿಸುದಂತಹ ಧೀರ ಸಮುದಾಯವಾಗಿದೆ. ಇದು ಉತ್ತರ ಭಾರತದಲ್ಲಿ ಖಾಟಿಕರ ಇತಿಹಾಸದ ಪರಿಚಯ. ಆದರೆ ಉತ್ತರದಿಂದ ದಕ್ಷಿಣಕ್ಕೆ ಬಂದ ಖಾಟಿಕರಿಗೆ ತಮ್ಮ ಇತಿಹಾಸವೇ ಮರೆತುಹೋಗಿದೆ. ಅವರು ಇಲ್ಲಿಯ ಹಿಂದು ಅರಸರ ಪಾಳೆಗಾರರಲ್ಲಿ ಆಶ್ರಯ ಪಡೆದು ಜೀವನ ನಿರ್ವಹಿಸತೊಡಗಿದರು. ಇವರಿಗೆ ತಾವು ಉತ್ತರ ಭಾರತದಿಂದ ಬಂದಿದ್ದೇವೆ ಎಂದು ತಿಳಿದಿದೆಯೇ ಹೊರತು ನಿರ್ದಿಷ್ಟವಾಗಿ ಯಾವ ಕಾಲದಲ್ಲಿ ಹೇಗೆ ಬಂದವರಾಗಿರುವುದೆಂಬ ಯಾವುದೇ ಸ್ಪಷ್ಟವಾದ ಮಾಹಿತಿ ನೀಡುವುದಿಲ್ಲ. ಆದರೆ ಮೌಖಿಕ ಆಧಾರಗಳ ಮೇಲೆಯೇ ನಾವು ಈ ಸಮುದಾಯದ ಇತಿಹಾಸವನ್ನು ರಚಿಸಬೇಕಾಗಿದೆ. ಸಮುದಾಯದ ಹಿರಿಯ ವಕ್ತೃಗಳು, ಕೆಲವೇ ಕೆಲವು ಪುಸ್ತಕಗಳು ಹಾಗೂ ಗೆಜೆಟಿಯರ್‌ಗಳ ಸಹಾಯದ ಮೂಲಕ ಇವರ ಇತಿಹಾಸವನ್ನು ರಚಿಸುವ ಕಾರ್ಯ ಮಾಡಬಹುದಾಗಿದೆ.

೫.೧.೨. ಮೂಲ ಕಸುಬು

ಖಾಟಿಕರಲ್ಲಿ ಕುರಿಮಾಂಸ ಮಾರುವಿಕೆಯು ಮುಖ್ಯವಾದ ಉದ್ಯೋಗವಾಗಿದೆ. ಇವರು ತಮ್ಮ ವ್ಯಾಪಾರಕ್ಕೆ ಅನುಗುಣವಾಗಿ ಕುರಿಗಳನ್ನು ಸಂತೆಗಳಿಂದ ಕೊಂಡು ತರುತ್ತಾರೆ. ಕರ್ನಾಟಕದಲ್ಲಿ ಕುರಿಗಳು ಸಿಗುವ ಹಾಗೂ ಕುರಿಗಳ ಸಂತೆಗಳು ನಡೆಯುವ ಸ್ಥಳಗಳಾದ ಚಿತ್ರದುರ್ಗ, ದಾವಣಗೆರೆ, ರಾಮ್‌ಪುರ, ರಾಯಚೂರು ಜಿಲ್ಲೆಯ ಅಮಿನಗಢ್ (ಸೋಮವಾರ ಸಂತೆ), ಬಳ್ಳಾರಿ ಜಿಲ್ಲೆಯ ಕುಕ್ಕನಪಳ್ಳಿ (ಶುಕ್ರವಾರ ಸಂತೆ), ಹಗರಿಬೊಮ್ಮನಹಳ್ಳಿ (ಗುರುವಾರ ಸಂತೆ) ಹಾಗೂ ಹಲವು ತಾಲ್ಲೂಕುಗಳಲ್ಲಿ ಕಾಣಸಿಗುತ್ತವೆ. ಈ ರೀತಿಯಾಗಿ ವಾರದ ಸಂತೆಗಳಿಗೆ ವ್ಯಾಪಾರಸ್ಥರು ಹೋಗಿ ತಮ್ಮ ವ್ಯಾಪಾರದ ಅನೂಕೂಲಕ್ಕೆ ತಕ್ಕಂತೆ ಕುರಿ-ಮೇಕೆಗಳನ್ನು ಸಂತೆಯಲ್ಲಿ ಕೊಂಡುಕೊಳ್ಳುವರು. ಈ ವಾರದ ಸಂತೆಗಳಿಗೆ ದೂರದ ಊರಿನಿಂದ ಬರುವ ವ್ಯಾಪಾರಸ್ಥರು ರಾತ್ರಿಯಲ್ಲಿಯೇ ಬಂದು ಸಂತೆಯಲ್ಲಿ ಬೀಡುಬಿಡುತ್ತಾರೆ. ಕಾರಣ ಸಂತೆಯಲ್ಲಿ ಬೆಳಗಿನ ಜಾವದಲ್ಲಿಯೇ ಮಾರಾಟವು ಪ್ರಾರಂಭಗೊಳ್ಳುತ್ತದೆ. ಹಾಗೂ ಬೆಳಗಿನ ಜಾವದಲ್ಲಿ ಒಳ್ಳೆಯ ಕುರಿ-ಮೇಕೆಗಳು ಸಿಗುತ್ತವೆ. ಕೆಲವು ವೇಳೆ ವ್ಯಾಪಾರದ ಮಾರುಕಟ್ಟೆಯಲ್ಲಿ ಕುರಿ-ಮೇಕೆಗಳು ದುಬಾರಿಯಾಗುವ ಸಂಭವಗಳುಂಟಾಗಿ ಹೊತ್ತು ಮೀರಿದಂತೆ ಕುರಿ-ಮೇಕೆಗಳ ಬೆಲೆ ಕಡಿಮೆಯಾಗುತ್ತ ಬರುತ್ತದೆ. ಇಲ್ಲಿಗೆ ಬರುವವರು ಆಯಾ ಊರಿನ ವ್ಯಾಪಾರಿಗಳ ತಂಡೋಪತಂಡ

ಜೊತೆಗೂಡಿ ವಾಹನಗಳಾದ ಲಾರಿ, ಟೆಂಪೂ, ಮಿನಿವ್ಯಾನ್‌ಗಳನ್ನು ಮಾಡಿಕೊಂಡು ಸಂತೆಗಳಿಗೆ ಬರುತ್ತಾರೆ. ಇದರಿಂದ ವ್ಯಾಪಾರ ಮಾಡಿದ ಕುರಿ-ಮೇಕೆಗಳನ್ನು ಇವುಗಳಲ್ಲಿ ಹಾಕಿಕೊಂಡು ಹೋಗಲು ಅನುಕೂಲವಾಗುತ್ತದೆ. ಸಾಮಾನ್ಯವಾಗಿ ಇವರು ತಮ್ಮ ಹಣದ ಅನುಕೂಲತೆ ಹಾಗೂ ತಾವು ನಡೆಸುವ ವ್ಯಾಪಾರಕ್ಕನುಗುಣವಾಗಿ ಕುರಿ-ಮೇಕೆಗಳನ್ನು ಖರೀದಿಸುತ್ತಾರೆ. ಸಣ್ಣ ಊರುಗಳಲ್ಲಿ ವ್ಯಾಪಾರ ಮಾಡುವ ವ್ಯಾಪಾರಸ್ಥರು ಎರಡು ಸಾವಿರದಿಂದ ಮೂರು ಸಾವಿರದವರೆಗೆ ಕುರಿ-ಮೇಕೆಗಳನ್ನು ಖರೀದಿಸುತ್ತಾರೆ. ಪಟ್ಟಣ ಹಾಗೂ ನಗರಗಳಲ್ಲಿ ವ್ಯಾಪಾರಸ್ಥರು ಐದು ಸಾವಿರದಿಂದ ಹತ್ತು ಸಾವಿರದವರೆಗೆ ಖರೀದಿ ಸುವಂತವರಾಗಿರುತ್ತಾರೆ. ಅವರಲ್ಲಿ ನಡೆಯುವ ವ್ಯಾಪಾರ ಹಾಗೂ ಮಾರಾಟದಿಂದ ಗಳಿಸಬಹುದಾದ ಲಾಭ ಹಾಗೂ ಖರ್ಚುಗಳನ್ನು ತಾಳೆ ನೋಡಿ ಕುರಿ-ಮೇಕೆಗಳನ್ನು ಖರೀದಿಸುತ್ತಾರೆ. ಸುಮಾರಾಗಿ ೫ ರಿಂದ ೧೦ ಕೆ.ಜಿ.ಯ ಕುರಿ-ಮೇಕೆಗಳನ್ನು ಸಣ್ಣೂರುಗಳಲ್ಲಿ ಗ್ರಾಹಕರ ಅಭಿರುಚಿಗಳಿಗೆ ಅನುಗುಣವಾಗಿ ಖರೀದಿಸಿದರೆ, ಪಟ್ಟಣ, ನಗರದ ವ್ಯಾಪಾರಿಗಳು ೮ ರಿಂದ ೨೦ ಕೆ.ಜಿ ಹೊಂದಿರುವ ಕೊಬ್ಬಿದ ಕುರಿ-ಮೇಕೆಗಳನ್ನು ಖರೀದಿಸುತ್ತಾರೆ. ವ್ಯಾಪಾರದಲ್ಲಿ ಖರೀದಿಸುವ ಕುರಿ-ಮೇಕೆಗಳಲ್ಲಿ ಕೆಲವೊಂದು ದುಬಾರಿಯಾದರೆ ಮತ್ತೊಂದರಲ್ಲಿ ಲಾಭಸಿಗುವ ರೀತಿಯಲ್ಲಿ ವ್ಯಾಪಾರವನ್ನು ಕುದುರಿಸಿಕೊಳ್ಳುತ್ತಾರೆ. ಈ ವೃತ್ತಿಯಲ್ಲಿ ಲಾಭವಾದರೆ- ಲಾಭ, ನಷ್ಟವಾದರೆ- ನಷ್ಟವಾಗಿ ಅವರ ಅಂದಿನ ವ್ಯಾಪಾರದ ಅದೃಷ್ಟ ಮತ್ತು ವ್ಯವಹಾರದ ಬುದ್ಧಿವಂತಿಕೆಯ ಮೇಲೆ ವ್ಯಾಪಾರದ ಲಾಭ-ನಷ್ಟಗಳು ಅವಲಂಬಿಸಿವೆ. ಈ ಸಂತೆಗಳಲ್ಲದೆ ಹಳ್ಳಿಯ ಕುರುಬರು ಹಾಗೂ ವಲಸೆ ಕುರುಬರಲ್ಲಿಯೂ ಕುರಿ-ಮೇಕೆಗಳನ್ನು ಖರೀದಿ ಸುತ್ತಾರೆ. ಇಂತಹ ಕಡೆ ಕೆಲವೊಮ್ಮೆ ಕಡಿಮೆ ಬೆಲೆಗೂ ಸಿಗುವುದುಂಟು. ಇವರಲ್ಲಿಯೇ ಕುರಿ-ಮೇಕೆಗಳ ಖರೀದಿಗಳಲ್ಲಿ ಪೈಪೋಟಿಗಳು, ಸ್ಪರ್ಧೆಗಳು ನಡೆಯುತ್ತಿವೆ. ಬೆಂಗಳೂರು, ಮೈಸೂರು, ಶಿವಮೊಗ್ಗ, ಬೆಳಗಾವಿ, ಸೊಲ್ಲಾಪುರ ಹೀಗೆ ಮಹಾನಗರಗಳಲ್ಲಿ ಮಾಂಸದ ಪೂರೈಕೆಯು, ಹೆಚ್ಚಾಗಿರುವುದರಿಂದ ಇವರ ಎದುರು ಸಣ್ಣ ವ್ಯಾಪಾರಿಗಳು ಸ್ಪರ್ಧಿಸದೇ ಈ ದೊಡ್ಡ ವ್ಯಾಪಾರಿಗಳು ವ್ಯಾಪಾರ ಮುಗಿಸಿ ಅವರ ವ್ಯಾಪಾರಕ್ಕೆ ಬೇಕಾದ ದೊಡ್ಡ ಟಗರುಗಳು, ಕುರಿಗಳನ್ನು ತಗೊಂಡ ನಂತರ ಸಣ್ಣ ವ್ಯಾಪಾರಿಗಳು ತಮ್ಮಲ್ಲಿರುವ ಹಣಕ್ಕೆ ತಮ್ಮ ಗಿರಾಕಿಗಳಿಗೆ ತಕ್ಕಂತೆ ಕುರಿಗಳನ್ನು ಖರೀದಿಸುತ್ತಾರೆ.

ಒಬ್ಬ ವಕ್ತೃವಿನ ಪ್ರಕಾರ ದೊಡ್ಡ ಗಿರಾಕಿಗಳು ಸಾಮಾನ್ಯವಾಗಿ ೩೦ ರಿಂದ ೪೦ ಕೆ.ಜಿ. ತೂಕದ ಕುರಿಗಳನ್ನು ಕೊಂಡು ಕೊಂಡರೆ. ಸಣ್ಣ ವ್ಯಾಪಾರಿಗಳು ೧೦ ಕೆ.ಜಿ. ಒಳಗಿನ ಕುರಿಗಳನ್ನು ಕೊಳ್ಳುತ್ತಾರೆ. ಹೀಗೆ ವ್ಯಾಪಾರ ಮಾಡುವುದು ಒಂದು ಕಲೆ ಎಂದೇ ಹೇಳಬಹುದು. ಏಕೆಂದರೆ ಕುರಿಗಳನ್ನು ಕೊಳ್ಳು ವಾಗ ಅದರ ಕಣ್ಣು, ಕೊಂಬು, ತೊಗಲು, ಹಲ್ಲು ಇವೆಲ್ಲವುಗಳನ್ನೆಲ್ಲ ಪರೀಕ್ಷಿಸಿ ತೆಗೆದುಕೊಳ್ಳುತ್ತಾರೆ. ಕುರಿಯ ಕಣ್ಣುಗಳು ಹಳದಿ ಬಣ್ಣದಿದ್ದರೆ ಅದಕ್ಕೆ ಕಾಮಾಲೆ ರೋಗವಿದೆಯೆಂದು, ಟಗರಿನ ಕೊಂಬುಗಳು ಹಲ್ಲುಗಳನ್ನು ನೋಡಿ ಅದರ ಆಧಾರದ ಮೇಲೆ ಕುರಿಯ ವಯಸ್ಸನ್ನು ತಿಳಿಯುತ್ತಾರೆ. ಕುರಿಯನ್ನು

ಕೊಳ್ಳುವಾಗ ಸಣ್ಣ ವ್ಯಾಪಾರಿಗಳು ಅದರ ಮಾಂಸವನ್ನು ಲೆಕ್ಕ ಹಾಕಿದರೆ ದೊಡ್ಡ ವ್ಯಾಪಾರಿಗಳು ಕುರಿಯ ತೊಗಲನ್ನು ಲೆಕ್ಕ ಹಾಕಿ ಮಾಂಸದಲ್ಲಿ ನಷ್ಟವಾದರೆ ತೊಗಲಿನಲ್ಲಿ ಲಾಭಗಳಿಸಬಹುದು ಎಂದು ಲೆಕ್ಕ ಹಾಕುತ್ತಾರೆ. ಹೀಗೆ ಈ ವ್ಯಾಪಾರವು ಬಹಳ ಸೂಕ್ಷ್ಮವಾದುದಾಗಿರುತ್ತದೆ. ಏಕೆಂದರೆ ಮಾಂಸವು ಬಹುಬೇಗ ಕೆಡುವಂತ ಪದಾರ್ಥವಾಗಿದೆ ಮತ್ತು ಕುರಿಯನ್ನು ಕೊಂಡು ಅದನ್ನು ಶುಚಿಮಾಡಿ ಮಾರುವಾಗ ಅದರ ತೂಕವು ಕಡಿಮೆಯಾಗುತ್ತದೆ. ನಂತರ ಗಾಳಿಯಲ್ಲಿ ಮಾಂಸವು ಒಣಗಿದರೆ ಮತ್ತೆ ತೂಕದಲ್ಲಿ ಇಳಿಯುತ್ತ ಬರುತ್ತದೆ. ಹಾಗಾಗಿ ಈ ಉದ್ಯೋಗವು ಲಾಭವಾದರೆ ಲಾಭ ನಷ್ಟವಾದರೆ ನಷ್ಟ ಅವರ ಅದೃಷ್ಟದ ಮೇಲೆ ಅವರ ಬುದ್ಧಿವಂತಿಕೆಯ ಮೇಲೆ ವ್ಯಾಪಾರವು ಲಾಭ-ನಷ್ಟವನ್ನವಲಂಬಿಸುತ್ತದೆ.

ಕುರಿಗಳನ್ನು ಕೊಂಡು ಕೊಂಡ ನಂತರ ಅವುಗಳಿಗೆ ಬಣ್ಣಗಳಿಂದ ತಮ್ಮವು ಎಂದು ಗುರುತು ಮಾಡಿಕೊಳ್ಳುತ್ತಾರೆ. ಕೆಲವರು ಕೆಂಪು, ಕೆಲವರು ಹಸಿರು, ನೀಲಿ ಬಣ್ಣಗಳಿಂದ ಗುರುತು ಮಾಡಿದರೆ ಕೆಲವರು ಕುರಿಯ ಕೂದಲುಗಳನ್ನು ಯಾವುದಾದರೊಂದು ಗುರುತಾಗಿ ಕತ್ತರಿಸುತ್ತಾರೆ. ಹೀಗೆ ಅವರವರ ಕುರಿಗಳನ್ನು ಕೊಂಡು ಒಂದೇ ಊರಿನವರಾದರೆ ಒಂದು ಲಾರಿಯಲ್ಲಿಯೋ ಇಲ್ಲ ವ್ಯಾನಿನಲ್ಲಿಯೋ ತಮ್ಮ ಕುಲಬಾಂಧವರ ಎಲ್ಲಾ ಕುರಿಗಳನ್ನು ಹಾಕಿಕೊಂಡು ಬರುತ್ತಾರೆ. ದೊಡ್ಡ ವ್ಯಾಪಾರಿಗಳು ತಮ್ಮದೇ ಆದ ಲಾರಿಗಳನ್ನು ತಂದಿರುತ್ತಾರೆ. ಅವುಗಳಲ್ಲಿ ತಮ್ಮ ಕುರಿಗಳನ್ನು ಹಾಕಿಕೊಂಡು ಊರಿಗೆ ತೆರಳುತ್ತಾರೆ. ಹಿಂದೆ ಈ ಕುರಿಸಂತೆಗಳಲ್ಲಿ ಆಹಾರ ನೀರಿನ ಸಮಸ್ಯೆ ತುಂಬಾ ಇತ್ತು. ಇತ್ತೀಚಿಗೆ ಕೆಲವು ಹೋಟೆಲು ವ್ಯವಸ್ಥೆ, ಡಾಬಾ ಹೋಟೆಲುಗಳು, ಬಂಡಿಗಳು ಇದ್ದು ಊಟ ನೀರಿನ ವ್ಯವಸ್ಥೆಗಳಿವೆ. ಹಿಂದೆ ನಾವು ತುಂಬಾ ಕಷ್ಟಪಡುತ್ತಿದ್ದೆವು. ಆದರೆ ಇಂದು ಸವಲತ್ತಾಗಿದೆ. ಆಗ ಕುರಿಗಳು ಹೆಚ್ಚಾಗಿದ್ದು ವ್ಯಾಪಾರಿಗಳು ಕಡಿಮೆ ಇದ್ದರು. ಈಗ ಮಾಂಸದ ಅವಶ್ಯಕತೆ ಹೆಚ್ಚಾಗಿದೆ ಎಲ್ಲ ವರ್ಗಗಳು ಮಾಂಸ ತಿನ್ನುವುದನ್ನು ಕಲಿತಿವೆ. ಹಾಗಾಗಿ ಈಗ ಮಾಲು(ಕುರಿಗಳು) ಕಡಿಮೆ ವ್ಯಾಪಾರಿಗಳು ಹೆಚ್ಚಾಗಿ ತುಂಬಾ ಪೈಪೋಟಿ ಇದೆ. ಲಾಭವೂ ಕಡಿಮೆಯಾಗಿದೆ. ಹಿಂದೆ ನಮ್ಮ ಹಿರಿಯರು ಈ ಉದ್ಯೋಗ ಮಾಡುವಾಗ ತುಂಬಾ ಲಾಭವಿತ್ತು ಎಂದು ತಿಳಿಸುವ ಮಾಹಿತಿದಾರರು ಮುಂದುವರೆದು ನಮಗೆ ಕಡಿಮೆ ಲಾಭವಿದ್ದರೂ ಈ ವೃತ್ತಿಯನ್ನೇ ಏಕೆ ಮುಂದುವರೆಸುತ್ತೇವೆ ಎಂದರೆ ಇದು ನಮಗೆ ವಂಶಪಾರಂಪರ್ಯವಾಗಿ ಬಂದ ವೃತ್ತಿ ಇದನ್ನು ಬಿಟ್ಟು ನಮಗೆ ಬೇರೆ ವೃತ್ತಿ ಗೊತ್ತಿಲ್ಲ. ಅದಕ್ಕೆ ಬಂದಷ್ಟು ಲಾಭ ಬರಲಿ, ನಷ್ಟವಾದರೆ ಆಗಲಿ ಹೇಗೋ 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ಎಂಬ ಆಶಾಭಾವನೆ ಇವರದು.

ಹೀಗೆ ಹರಸಾಹಸ ಮಾಡಿ ಕುರಿ-ಮೇಕೆಗಳನ್ನು ತಂದು ಸ್ಲಾಟರ್ ಹೌಸ್‌ನಲ್ಲಿ ಕುರಿಗಳನ್ನು ಮೂಲ್ಲಾನಿಂದ ಚೂರಿ ಹಾಕಿಸಿ ಸ್ವಚ್ಛಮಾಡಿ ಅಂಗಡಿಗಳಿಗೆ ಮಾಂಸ ಮಾರಲು ತೆಗೆದುಕೊಂಡು ಹೋಗುತ್ತಾರೆ. ಕಲ್ಮಾ ಓದಿ ಚೂರಿ ಹಾಕಿದ ಮುಸ್ಲಿಂ ಮುಲ್ಲಾನಿಗೆ ಒಂದು ಕುರಿಗೆ ಎರಡು, ಮೂರು

ಅಥವಾ ಐದು ರೂ.ಗಳನ್ನು ನೀಡುತ್ತಾರೆ. ಕೆಲವರು ಸ್ಲಾಟರ್‌ಹೌಸ್‌ನಲ್ಲಿ ಇನ್ನೂ ಕೆಲವರು ಮನೆಗಳ ಹಿತ್ತಲಲ್ಲಿ ಕೊಯಿಸುತ್ತಾರೆ. ಮನೆಯಲ್ಲಿಯೂ ಸಹ ಮೂಲ್ಲಾ ಬಂದು ಓದಿಕೆ ಮಾಡಿ ಕುರಿಗೆ ಚೂರಿ ಹಾಕುತ್ತಾನೆ. ಮನೆಗಳಲ್ಲಿ ಕುರಿ ಮಾಂಸವನ್ನು ಸ್ವಚ್ಛಮಾಡುವಾಗ ಮನೆಯ ಕುಟುಂಬದವರೆಲ್ಲರೂ ಕೆಲಸದಲ್ಲಿ ಪಾಲ್ಗೊಳ್ಳುತ್ತಾರೆ. ಕುರಿಯನ್ನು ಕೊಯ್ಯಿಸುವಾಗ ಚಿಕ್ಕಮಕ್ಕಳು, ಹೆಣ್ಣು ಮಕ್ಕಳು ಕುರಿಯ ರಕ್ತವನ್ನು ಹಿಡಿಯುವಲ್ಲಿ ಸಹಕರಿಸುತ್ತಾರೆ. ಗಂಡು ಮಕ್ಕಳು ಕುರಿಯ ಚರ್ಮವನ್ನು ಸುಲಿಯುತ್ತಾರೆ ಹಾಗೂ ಹೊಟ್ಟೆಯೊಳಗಿನ ಕರಳು, ಜಠರ, ಯಕೃತ್, ಶ್ವಾಸಕೋಶ, ಕಳ್ಳುಪಚ್ಚಿ ಇವುಗಳನ್ನು ಮನೆಯ ಹೆಣ್ಣುಮಕ್ಕಳು ಶುಚಿಗೊಳಿಸುತ್ತಾರೆ. ವ್ಯಾಪಾರಕ್ಕೆ ಸಿದ್ಧವಾದ ಮಾಂಸವನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಅವರ ವ್ಯಾಪಾರದ ಕೇಂದ್ರಗಳಿಗೆ ಹೋಗಿ ಕಬ್ಬಿಣದ ಕೊಂಡಿಗಳಿಗೆ ನೇತು ಹಾಕಿ ವ್ಯಾಪಾರದ ಇತರೆ ಸಿದ್ಧತೆಗಳಾದ ತಕ್ಕಡಿ, ತೂಕದ ಬಟ್ಟುಗಳು, ಮಾಂಸ ಕಡಿಯಲು ಬೇಕಾದ ಕತ್ತಿ, ಚಾಕುಗಳು, ಮಾಂಸವನ್ನು ಪೊಟ್ಟಣ ಕಟ್ಟಲು ಬೇಕಾದ ಪೇಪರ್, ಪ್ಲಾಸ್ಟಿಕ್ ಚೀಲಗಳನ್ನು ಹೀಗೆ ಎಲ್ಲಾ ರೀತಿಯಲ್ಲಿ ಜೋಡಿಸಿಕೊಂಡು ವ್ಯಾಪಾರಕ್ಕೆ ನಿಲ್ಲುತ್ತಾರೆ. ಹೆಣ್ಣು ಮಕ್ಕಳು ತಮಗೆ ಶುಚಿಗೊಳಿಸಲು ನೀಡಿದ ಕರಳು, ಜಠರ ಹೀಗೆ ಎಲ್ಲವನ್ನು ಶುಭ್ರಗೊಳಿಸಿ ಕೊಂಡು ಜೊತೆಗೆ ತಲೆ ಕಾಲುಗಳನ್ನು ಸುಟ್ಟುಕೊಂಡು, ರಕ್ತವನ್ನು ತೆಗೆದುಕೊಂಡು ಇವರು ವ್ಯಾಪಾರದ ಅಂಗಡಿಗಳ ಮುಂದಿನ ಬಯಲಿನಲ್ಲಿ ಕುಳಿತು ಇವುಗಳನ್ನು ತಾವು ಮಾರಾಟ ಮಾಡುತ್ತಾರೆ. ಇಲ್ಲವೇ ಮನೆಯ ಮುಂದೆಯೇ ಮಾರಾಟ ಮಾಡಬಹುದು ಅಥವಾ ತಲೆಯ ಮೇಲೆ ಹೊತ್ತುಕೊಂಡು ಬೀದಿಗಳಲ್ಲಿ ಮಾರಾಟ ಮಾಡುತ್ತಾರೆ. ಆದರೆ ಇತ್ತಿಚೆಗೆ ವ್ಯಾಪಾರದಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶ ನೀಡಲಾಗುವುದಿಲ್ಲ. ಮಾರ್ಕೆಟ್‌ಗಳಲ್ಲಿಯೇ ಮಾಂಸದ ವ್ಯಾಪಾರದ ಜೊತೆಯೇ ಇದನ್ನು ಮಾರಾಟ ಮಾಡುವುದು ಕ್ಷೇತ್ರಕಾರ್ಯದಿಂದ ಕಂಡಬಂದಿದೆ.

ಜನವಸತಿಯ ಆಧಾರದ ಮೇಲೆ ಮಾಂಸ ಕೊಂಡುಕೊಳ್ಳುವ ಜನವರ್ಗದ ಮೇಲೆ ಆಧರಿಸಿ ಒಂದು ಇಲ್ಲವೇ ಎರಡು ಕುರಿ ಅಥವಾ ಕೋಳಿಗಳನ್ನು ಮಾರುತ್ತಾರೆ. ಇಲ್ಲ ತಾಲೂಕು ಅಥವಾ ಪಟ್ಟಣಗಳಲ್ಲಿ ಅಂಗಡಿಗಳನ್ನು ಬಾಡಿಗೆಗೆ ಪಡೆದು ವ್ಯಾಪಾರ ಮಾಡುತ್ತಾರೆ. ಇನ್ನು ಕೆಲವರು ಸರಾಯಿ ಅಂಗಡಿ, ಚಾಕಣಾ ಮಾರುವುದು, ಕೂಲಿಗಳಾಗಿ ಕೆಲಸ ಮಾಡುವುದು, ಚಿಕ್ಕಪುಟ್ಟ ಹೋಟೆಲುಗಳನ್ನು ತೆರೆಯುವುದು, ಬಂಡಿಗಳಲ್ಲಿ ಅನ್ನ ಮಾಂಸದ ಸಾರು, ಮೊಟ್ಟೆ, ಮೀನು ಮಾರುವುದು ಮತ್ತು ಅದನ್ನು ಶುಚಿಗೊಳಿಸುವ ಕಾಯಕದಲ್ಲಿ ಕೆಲವರು ನಿರತರಾಗಿರುವುದನ್ನು ಕಾಣಬಹುದು. ಕೋಳಿ ಮಾಂಸ ಮಾರುವುದು ಮತ್ತು ಕುರಿ ಮಾರ್ಕೆಟ್‌ಗಳಲ್ಲಿ ಕುರಿಯ ತಲೆ ಕಾಲು, ಕಳ್ಳುಪಚ್ಚಿ, ರಕ್ತ ಕರುಳು ಹೀಗೆ ಕುರಿಯ ಅವಯವ ಭಾಗಗಳನ್ನು ಸ್ತ್ರೀಯರು ಮತ್ತು ಮಕ್ಕಳು ಮಾರುವುದು ನಿರ್ದಿಷ್ಟ ಪ್ರದೇಶಗಳಲ್ಲಿ ಇವರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಶಾಲೆಯ ಮುಖ ಕಾಣದ ಪುಡಿಗಾಸಿಗಾಗಿ ತಂದೆಯ ಹಿಂದೆ ಹೋಗಿ ಕುರಿಯ ರಕ್ತವನ್ನು ಬೊಗಸೆಯಲ್ಲಿ, ಪಾತ್ರೆಯಲ್ಲಿ ಹಿಡಿದು ಮಾರುವ

ಮಕ್ಕಳು ನಾಳಿನ ಭವಿಷ್ಯವನ್ನು ಚಿಂತಿಸದೆ ರಕ್ತಸಿಕ್ತ ಬಟ್ಟೆಯಲ್ಲಿ ಗಬ್ಬು ನಾತದಲ್ಲಿ ಚಿಲ್ಲರೆ ಪುಡಿ ಗಾಸನ್ನು ಎಣಿಸುತ್ತಾ ಖುಷಿಪಡುವುದರಲ್ಲಿ ಮಗ್ನವಾಗಿರುತ್ತಾರೆಯೇ ಹೊರತು ತಮ್ಮ ಆರೋಗ್ಯ ರೋಗರುಜಿನದ ಭಯ, ನಾಳಿನ ಭವಿಷ್ಯವನ್ನು ಕುರಿತು ಒಮ್ಮೆಯೂ ಯೋಚಿಸುವುದಿಲ್ಲ. ಹಿರಿಯ ಅನುಭವಸ್ಥರು ಹಳ್ಳಿ ಕಾಡು, ಮೇಡುಗಳಲ್ಲಿ ತಿರುಗಿ ಕುರುಬರಿಂದ ಕುರಿಗಳನ್ನು ಖರೀದಿಸುತ್ತಾರೆ. ಖರೀದಿಸುವ ಮುನ್ನ ಕುರಿಯನ್ನು ಕಣ್ಣು ಮೂಗು ಅದರ ಕೊಂಬುಗಳನ್ನು ಪರೀಕ್ಷಿಸಿ ವ್ಯಾಪಾರ ಮಾಡುತ್ತಾರೆ. ಕುರಿಯ ಕಣ್ಣು ಹಳದಿ ಬಣ್ಣದಿದ್ದರೆ ಅದಕ್ಕೆ ಕಾಮಲೆ ರೋಗವಿದೆ. ಹಸಿರು ಬಣ್ಣವಿದ್ದರೆ ಅದಕ್ಕೆ ಹಾವು ಕಚ್ಚಿರುವ ಇಲ್ಲ ಯಾವುದಾದರೂ ವಿಷಜಂತು ಕಡಿದಿದೆ ಎಂದು ತಿಳಿಯುತ್ತಾರೆ. ಕುರಿಮರಿ ಒಂದು ವರ್ಷದಿದ್ದರೆ ಅದಕ್ಕೆ ನೆರೆ ಕೂದಲು ಬಂದಿರುತ್ತದೆ. ಒಂದು ವರ್ಷದಿದ್ದರೆ ಎರಡು ಹಲ್ಲು, ಎರಡು ವರ್ಷಕ್ಕೆ ನಾಲ್ಕು ಹಲ್ಲು, ಮೂರು ವರ್ಷಕ್ಕೆ ಆರು ಹಲ್ಲುಗಳು ಬಂದಿರುತ್ತದೆ. ಮತ್ತು ಕೊಂಬು ಸುತ್ತಲು ಸುರುಳಿ ಸುತ್ತಿಕೊಂಡಿದ್ದರೆ ಕುರಿಯು ಮೂರು ವರ್ಷದ ಮೇಲಿದೆ ಎಂದು ಗುರುತಿಸುತ್ತಾರೆ. ಹೀಗೆ ತಮ್ಮ ಅನುಭವದ ಜ್ಞಾನದ (ಜನಪದ ಜ್ಞಾನ) ಮೂಲಕ ಕುರಿಗಳನ್ನು ಖರೀದಿಸಿ ಹಳ್ಳಿ ಸಮೀಪವಿದ್ದರೆ ತಾವೇ ಹೊಡೆದುಕೊಂಡು ಕುರಿಮಂದೆಯನ್ನು ತಂದು ಮನೆ ಅಥವಾ ಕುರಿದೊಡ್ಡಿಯಲ್ಲಿ ಕಟ್ಟುತ್ತಾರೆ. ಇನ್ನು ಕೆಲವರು ಹಳ್ಳಿಗಳಲ್ಲಿ ತಿರುಗಿ ಕುರಿ ಗಳನ್ನು ಸಂಗ್ರಹಿಸುವುದರ ಜೊತೆಗೆ ಬಜಾರುಗಳಿಗೆ ಹೋಗಿ ಅಂದರೆ ಕುರಿಸಂತೆಗಳಲ್ಲಿ ಕುರಿಗಳನ್ನು ಖರೀದಿಸಿ ಲಾರಿ ಇಲ್ಲವೆ ಯಾವುದಾದರು ವಾಹನಗಳಲ್ಲಿ ಹಾಕಿಕೊಂಡು ಬರುತ್ತಾರೆ. ಹೀಗೆ ಕುರಿ ಸಂತೆಗಳಿಗೆ ತೆರಳುವಾಗ ರಾತ್ರಿ ಕಳ್ಳರ ಕಾಟ ಮತ್ತು ಪೋಲೀಸರು ಇವರನ್ನು ಕಳ್ಳರಿರಬಹುದೆಂದು ಶಂಕಿಸಿ ತೊಂದರೆ ಕೊಡುವುದುಂಟು. ನಂತರ ಅವರಿಗೆ ಭರವಸೆಯನ್ನು ನೀಡಿ ಕೆಲವೊಮ್ಮೆ ಹಣ ನೀಡಿ ಸಲಾಮು ಹೊಡೆದು ಪರಿಚಯ ಮಾಡಿಕೊಂಡು ಬಿಡುತ್ತಾರೆ. ಏಕೆಂದರೆ ಮುಂದೆ ಮತ್ತೆ ಸಂತೆಗೆ ಹೋಗುವಾಗ ಗುರುತಿಸಲಿಕ್ಕೆ ಅನುಕೂಲವಾಗುವಂತೆ ಅವರಲ್ಲಿ ಭರವಸೆಯನ್ನು ತರುವಂತೆ ತಮ್ಮ ಪರಿಚಯ ವಿಳಾಸವನ್ನು ಹೇಳುತ್ತಾರೆ. ಹೀಗೆ ಹತ್ತೂರು ತಿರುಗಿ ತಂದ ಕುರಿಗಳನ್ನು ವ್ಯಾಪಾರ ಮಾಡುವ ಈ ಸಮುದಾಯ ಬಳ್ಳಾರಿ, ಕೊಪ್ಪಳ, ಹೊಸಪೇಟೆ, ಗಂಗಾವತಿ, ರಾಯಚೂರುಗಳಲ್ಲಿ ಹೇರಳವಾಗಿ ಸಿಗುವರು. ಇಂದಿನ ದಿನಗಳಲ್ಲಿ ಮೇಲಿನ ಈ ಸ್ಥಳಗಳು ಗಣಿಗಾರಿಕೆಯಿಂದ ಕೂಲಿ ಕಾರ್ಮಿಕರಿಂದ ಜನಜಂಗುಳಿಯಿಂದ ಕೂಡಿದ್ದು ಹಣದ ವಹಿವಾಟು ಸರಾಗವಾಗಿ ನಡೆಯುತ್ತಿರುವಂತ ಸ್ಥಳಗಳಾಗಿರುವುದರಿಂದ ಇಲ್ಲಿ ಪ್ರವಾಸಿಗರು ಸಹ ಐತಿಹಾಸಿಕ ಸ್ಥಳವನ್ನು ನೋಡಲು ಬರುವುದರಿಂದ ಇಲ್ಲಿ ಹೋಟೆಲು ಉದ್ಯಮವು ಸುಧಾರಿಸಲ್ಪಟ್ಟು ಮಾಂಸದ ಬೇಡಿಕೆಯು ಹೆಚ್ಚಿದೆ. ಈ ಕಾರಣಕ್ಕಾಗಿ ಇಲ್ಲಿ ಈ ಸಮುದಾಯವು ಹೆಚ್ಚಾಗಿ ಕಂಡುಬರುತ್ತದೆ.

ಇಂದು ಪ್ರತಿಯೊಬ್ಬರು ಮಾಂಸ ಸೇವಿಸುವುದು ಒಂದು ಫ್ಯಾಷನ್ ಆಗಿರುವ, ಜಾತಿ ವ್ಯವಸ್ಥೆಯೂ ಸಡಿಲವಾಗಿರುವಂತ ಸಂದರ್ಭದಲ್ಲಿ ಇವರ ಉದ್ಯೋಗವು ಚೆನ್ನಾಗಿಯೇ ನಡೆದು ಇವರು

ಶ್ರೀಮಂತರಾಗಿರಬಹುದು ಎಂದು ಯೋಚಿಸಿದರೆ ಇದು ತುಂಬಾ ಸತ್ಯಕ್ಕೆ ದೂರವಾದ ಮಾತೆನಿಸುವುದು. ಏಕೆಂದರೆ ಮಾಂಸ ಬಹುಬೇಗ ಕೆಡುವಂತೆ ಪದಾರ್ಥ ಒಂದು ದಿನ ಕಷ್ಟಪಟ್ಟು ಐಸ್‌ಡಬ್ಬಿಯಲ್ಲಿ ಹಾಕಿಟ್ಟರೆ ಅದು ಉಳಿಯುವುದು ನಂತರ ಮರುದಿನಕ್ಕೆ ಉಪಯೋಗಿಸಲು ಬರುತ್ತದೆ. ಆದರೆ ಅಂದು ವ್ಯಾಪಾರವಾಗದಿದ್ದರೆ ಅದನ್ನು ಎಸೆಯಬೇಕು. ಇಲ್ಲವೆ ಮನೆಗೆ ಉಪಯೋಗಿಸಬೇಕಾಗುತ್ತದೆ. ಹೀಗೆ ನಷ್ಟ ಉಂಟಾಗಿ ಎಷ್ಟೋ ಜನರು ಕಂಗಾಲಾಗಿರುವುದು. ಕೂಲಿನಾಲಿ ಮಾಡುವುದು ಸಹ ಕಂಡುಬರುತ್ತದೆ. ಇಂಥ ಸಂದರ್ಭದಲ್ಲಿ ಇವರು ಕುರಿಯ ತಲೆಮಾಂಸದಿಂದ ಮಾಡಿದ ಚಾಕಣಾವನ್ನು ತಯಾರಿಸಿ ರೊಟ್ಟಿ ಅನ್ನದ ಜೊತೆ ಮದ್ಯದಂಗಡಿಗಳ ಹತ್ತಿರ ಮಾರುವುದು ಸಾಮಾನ್ಯ. ಮತ್ತೆ ದುಡ್ಡನ್ನು ಸಾಲ ಪಡೆದೋ ಹೇಗೊ ಜಮಾಯಿಸಿಯೋ ಇಲ್ಲ ಹೆಣ್ಣು ಮಕ್ಕಳ ಒಡವೆಯನ್ನು ಗಿರಿವಿ ಇಟ್ಟು ಹಣತಂದು ಮತ್ತೆ ಕುರಿ ಖರೀದಿಸಿ ವ್ಯಾಪಾರ ಮಾಡುವರು. ಹೀಗೆ ಸಿಕ್ಕರೆ ಶಿಕಾರಿ ಇಲ್ಲದಿದ್ದರೆ ಭಿಕಾರಿಯಾಗಿ ಜೀವನ ನಡೆಸುವ ಇವರು ಇಂದಿನ ದಿನ ಹೊಟ್ಟೆ ತುಂಬಿದರೆ ಸಾಕು ನಾಳೆಯ ಚಿಂತೆ ಮಾಡುವ ಗೊಡವೆಗೆ ಹೋಗುವುದಿಲ್ಲ.

ಹೀಗೆ ಕರ್ನಾಟಕದಲ್ಲಿ ಚದುರಿರುವ ಈ ಸಮುದಾಯ ತನ್ನ ಮೂಲವೃತ್ತಿಯನ್ನು ಮುಂದುವರಿಸಿ ಕೊಂಡು ಹೋಗಲು ಅದರಲ್ಲೆ ಸುಧಾರಣೆಯನ್ನು ತಂದುಕೊಂಡು ಉತ್ತಮ ಸ್ಥಿತಿಯನ್ನು ಪಡೆಯಲು ಸಾಧ್ಯ ಎಂದು ಯೋಚಿಸಿದರೆ ಈ ವೃತ್ತಿಯನ್ನು ಮಾಡುವವರಿಗೆ ಈ ಸಮಾಜ ನೀಡಿರುವ ಕಟುಕ ಎಂಬ ಹಣೆಪಟ್ಟಿಯಿಂದ ಮುಕ್ತಿಗೊಳ್ಳಲು ಒಂದು ಕಡೆ ಹವಣಿಸುವ ಪರಿಸ್ಥಿತಿಯಿಂದ ಇವರು ಹೊರತಾಗಿಲ್ಲ. ಏಕೆಂದರೆ ಈ ಕಾಯಕದಿಂದ ಇವರಿಗೆ ನೆಮ್ಮದಿ ಇಲ್ಲ. ಒಂದು ಕಷ್ಟಪಟ್ಟು ಕುರಿ ಯನ್ನು ತಂದು ಮಾಂಸ ಉಳಿಸದೆ ಮಾರುವ ಹರಸಹಾಸ, ಅದರಲ್ಲೂ ಗೆದ್ದರೆ ಸಿಗುವ ಅಲ್ಪ ಲಾಭ ಇದರಲ್ಲಿ ಮನೆಮಂದಿಯ ಖರ್ಚು. ಇವರಿಗಿರುವ ಮದ್ಯದ ಚಟ ಎಲ್ಲವನ್ನು ತೃಪ್ತಿಪಡಿಸುವುದು ಸಾಧ್ಯವಿಲ್ಲ. ಅದಕ್ಕೆ ಮತ್ತೆ ಸಾಲ ತರುವುದು ನಂತರ ಉದ್ಯೋಗ ಮಾಡುವುದು ಈ ರೀತಿಯ ದಿನಚರಿಯ ಜನ ಈ ಉದ್ಯೋಗದಿಂದ ಸುಸ್ತಾಗಿ ಬೇರೆ ಚಿಕ್ಕಪುಟ್ಟ ಹೋಟೆಲು ತೆಗೆಯುವುದು. ಬಂಡಿಗಳಲ್ಲಿ ಪಲಾವ್, ಮಾಂಸದ ಸಾರು, ಮೊಟ್ಟೆ, ಮೀನು ಮಾರುವುದು. ಕೂಲಿಗಳಾಗಿ ಕೆಲವರು, ಬೆರಳೆಣಿಕೆಯಷ್ಟು ಜನರು ವ್ಯವಸಾಯದಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ.

ಮಾಂಸ ಮಾರುವುದು, ತಿನ್ನುವುದು ಕೀಳೆಂಬ ಭಾವನೆ ಈ ಸಮಾಜದಲ್ಲಿದೆ. ಮಾಂಸ ತಿನ್ನುವವರು ಸಹ ಇಲ್ಲಿ ನಾವು ಹೊಲಸನ್ನು ಮುಟ್ಟುವುದಿಲ್ಲ ಎಂದು ಎಲ್ಲರೆದುರು ತಾವೇ ಮಡಿ ಮೈಲಿಗೆಯಂತೆ ನಟಿಸುವ ಜನರೇನು ಕಡಿಮೆ ಇರದ ಈ ಸಮಾಜದಲ್ಲಿ ಮಾಂಸ ಮಾರುವ ಜನಸಮುದಾಯವು ನಿಧಾನವಾಗಿ ಬೇರೊಂದು ಉದ್ಯೋಗದ ಕಡೆ ಮುಖ ಮಾಡುತ್ತ ಇತ್ತ ಬಿಡಲು ಆಗದೆ ಮಾರುವುದಕ್ಕೂ ಆಗದೆ ಪರದಾಡುವಂತ ಸ್ಥಿತಿಯಲ್ಲಿ ಬದುಕುತ್ತಿರುವುದು; ಪಡುತ್ತಿರುವ ಬವಣೆ, ತನ್ನ ಸಮುದಾಯದ ಹೆಸರನ್ನು ಹೇಳಿಕೊಳ್ಳಲು ನಾಚುವಂತ ಪರಿಸ್ಥಿತಿಯಲ್ಲಿ ಸತ್ತು ಬದುಕುತ್ತಿರುವ ಬದುಕಿ ಸಾಯುತ್ತಿರುವ

ವಿಪರ್ಯಾಸದ ಪರಿಸ್ಥಿತಿಯಲ್ಲಿದ್ದಾರೆ. ಉತ್ತರದಿಂದ ವಲಸೆ ಬಂದ ಈ ಸಮುದಾಯ ಕರ್ನಾಟಕದ ತುಂಬೆಲ್ಲ ಹರಡಿಕೊಂಡಿದ್ದಾರೆ. ಖಾಟಿಕ್ ವೃತ್ತಿಯನ್ನು ಮಾಡುವುದರ ಜೊತೆಗೆ ಈ ಸಮುದಾಯದವರು ಮೀನು ಮಾರಾಟ ಮಾಡುವುದು ಕೋಳಿಗಳನ್ನು ತಂದು ಅವುಗಳ ಮಾಂಸ ಮತ್ತು ಮೊಟ್ಟೆ ಮಾರುವುದು. ಸಣ್ಣಪುಟ್ಟ ಕಿರಾಣಿ ಅಂಗಡಿ, ಬೀಡಿ ಅಂಗಡಿಗಳನ್ನು ನಡೆಸುವುದು ಸಾರಾಯಿ ಅಂಗಡಿಗಳನ್ನು ನಡೆಸುವುದು ಮತ್ತದರ ಜೊತೆಗೆ ಸರಾಯಿ ಸೇಂದಿ ಅಂಗಡಿಗಳಲ್ಲಿ ಚಾಕಣಾ ಮಾರುವುದು ಇವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೇ ಕೂಲಿ ನಾಲಿ ಮಾಡುವುದು ಕಳೆತೆಗೆಯಲು ಹೋಗುವುದು. ಇವರಲ್ಲಿ ಮುಖ್ಯವಾಗಿ ಅನೈರ್ಮಲ್ಯ ವೃತ್ತಿಯಾದ ಕುರಿಮಾಂಸ ಕೋಳಿಮಾಂಸ ಮಾರುವುದು ಮತ್ತು ಕುರಿ ಮೇಕೆಗಳ ಹೊಟ್ಟೆಯಲ್ಲಿರುವ ಕಲ್ಮಶತೆಗೆದು, ಕಳ್ಳುಪಚ್ಚಿ ಕುರಿಯ ತಲೆ ಕೈಕಾಲು ಸುಟ್ಟು ಮಾರುವುದು ರಕ್ತ ಮಾರುವುದು ಇದೇ ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ ಈ ವೃತ್ತಿ ಯಾರೂ ಇವರಿಗೆ ಕಲಿಸಬೇಕಾಗಿಲ್ಲ ವಂಶಪಾರಂಪರ್ಯವಾಗಿ ಮಕ್ಕಳು ಚಿಕ್ಕವರಿರುವಾಗಲೇ ತಂದೆಯೊಡನೆ ಕುರಿದೊಡ್ಡಿಗಳಿಗೆ ಹೋಗಿ ರಕ್ತ ಹಿಡಿಯುವುದು ಕುರಿಯ ಕೈ ಕಾಲು ತಲೆ ಸುಟ್ಟು ಅದನ್ನು ಕಡಿದು ಪುಡಿಗಾಸು ಮಾಡಿಕೊಳ್ಳುವ ರುಚಿಗೆ ಬೆನ್ನತ್ತುವ ಇವರು ಇದೇ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಹಾಗಾಗಿ ಈ ಸಮುದಾಯದ ಅಧ್ಯಯನವು ಇವರ ಆರ್ಥಿಕ ಸ್ಥಿತಿಯ ಸುಧಾರಣೆಯನ್ನು ಕುರಿತು ಮುಂದಿನ ಇವರ ಭವಿಷ್ಯವನ್ನು ಕುರಿತು ಏನಾದರು ಪರಿಹಾರವಿದೆಯೆ ಎಂದು ಸಂಶೋಧಿಸುವ ಒಂದು ಸಣ್ಣ ಪ್ರಯತ್ನವಾಗಿದೆ.

ವಿದ್ವಾಂಸರಾದ ಸಿರಾಜ ಉಲ್ ಹಸನ್ ಅವರ ಪುಸ್ತಕದಲ್ಲಿ ಟಿಪ್ಪು ಸುಲ್ತಾನನು ಮಾಂಸವನ್ನು ಖರೀದಿಸುವ ಮುನ್ನ ಕುರಿಯನ್ನು ಮುಲ್ಲಾ ಜುಬಾ ಎಂಬ ಕ್ರಿಯೆಗೆ ಒಳಪಡಿಸಿರುವನೋ ಇಲ್ಲವೋ ಎಂಬುದನ್ನು ತಿಳಿದು ಮಾಂಸ ಖರೀದಿಸಬೇಕೆಂಬ ನಿಮಯ ಜಾರಿಗೆ ತಂದಾಗ ಹಿಂದೂಗಳಾದ ಖಾಟಿಕರು ಅನಿವಾರ್ಯ ಪರಿಸ್ಥಿತಿಯಲ್ಲಿ ಮುಲ್ಲಾಗಳನ್ನು ಕರೆದು ಕುರಿಯನ್ನು ಜುಬಾ ಕ್ರಿಯೆಗೆ ಒಳಪಡಿಸಿ ನಂತರ ಮಾಂಸವನ್ನು ಮಾರುವ ಕ್ರಿಯೆ ಪ್ರಾರಂಭವಾಯಿತು ಎಂಬ ವಿಚಾರ ತಿಳಿದುಬರುತ್ತದೆ. ಹೀಗೆ ಒಂದು ಉದ್ಯೋಗದ ಮೇಲೆ ಒಂದು ಧಾರ್ಮಿಕ ಕ್ರಿಯೆಯ ಮೂಲಕ ಹಿಡಿತವನ್ನು ಸಾಧಿಸಿರುವ ಕಾರ್ಯ ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಿರುವುದು ಕಾಣಸಿಗುತ್ತದೆ. ಇಂದಿಗೂ ಕುರಿಯನ್ನು ಕೊಯ್ಯುವಾಗ ಮುಲ್ಲಾನನ್ನು ಕರೆಯದೆ ಕುರಿಯನ್ನು ಕಡಿಯುವುದಿಲ್ಲ.

ಇದಕ್ಕೆ ಕಾರಣ ಬೇರೆ ಬೇರೆ ಸಮುದಾಯದವರು ಮಾಂಸವನ್ನು ಖರೀದಿಸುವಾಗ ಜುಬಾ ಮಾಡಿದ ಮಾಂಸ ತಿನ್ನುವುದರಿಂದ ಪಾಪ ಬರುವುದಿಲ್ಲ. ದೇವರಿಂದ ಅಪ್ಪಣೆ ಪಡೆದು ಪ್ರಾಣಿಯನ್ನು ಕೊಲ್ಲುವುದರಿಂದ ಈ ಮಾಂಸ ಶ್ರೇಷ್ಠವೆಂಬ ಭಾವನೆ ಮುಸ್ಲಿಮರಲ್ಲಿದೆ. ಇದೇ ಭಾವನೆ ಇತರ ಸಮುದಾಯದಲ್ಲು ಬೇರೂರಿರುವುದರಿಂದ ಖಾಟಿಕರು ಪ್ರಾಣಿಗಳನ್ನು ಜುಬಾ ಕ್ರಿಯೆಗೆ ಒಳಪಡಿಸಲೇ

ಬೇಕು ಇಲ್ಲವೆಂದರೆ ಇವರು ಮಾರುವ ಮಾಂಸವನ್ನು ಯಾರೂ ಕೊಳ್ಳುವುದಿಲ್ಲ. ಹೀಗಾಗಿ ಇವರು ಇಂದಿಗೂ ಸಹ ಮುಲ್ಲಾನನ್ನು ಕರೆಯಿಸಿ ಅವರು ಜುಬಾ ಮಾಡಿದ ನಂತರವೇ ಮಾಂಸವನ್ನು ಮಾರುವುದು ಕಂಡುಬರುತ್ತದೆ.

ಈ ಸಮುದಾಯದವರ ಮಟನ್ ಮಾರ್ಕೆಟ್ ಸಿಸ್ಟಮನ್ನು ಕುರಿತು ವಿವರಿಸುವಾಗ ಒಂದು ಈ ಸಮುದಾಯದವರೆ ಹಣ ಖರ್ಚು ಮಾಡಿಕೊಂಡು ಮಾರ್ಕೆಟ್ ಕಟ್ಟಿಸಿಕೊಂಡಿರುವುದು ಕೆಲವು ಪ್ರದೇಶ ಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಕೊಪ್ಪಳ, ಹೊಸಪೇಟೆ ಇನ್ನೊಂದು ಸರ್ಕಾರ ವತಿಯಿಂದ ಮುನಿಸಿಪಾಲಿಟಿಯವರು ಮಾರ್ಕೆಟ್‌ನ್ನು ಕಟ್ಟಿಸಿ ಅದನ್ನು ಬಾಡಿಗೆಗೆ ಕೊಡುತ್ತಾರೆ. ವರ್ಷಕ್ಕೊಮ್ಮೆ ಆ್ಯಕ್ಷನ್ ಮುಖಾಂತರ ಅಂಗಡಿಗಳನ್ನು ಬಾಡಿಗೆಗೆ ನೀಡಲಾಗುತ್ತದೆ. ಬಾಡಿಗೆ ಒಂದು ಅಂಗಡಿಗೆ ಸಾವಿರದಿಂದ ಹನ್ನೆರಡು ನೂರು ರೂಪಾಯಿಯವರೆಗೆ ಇರುತ್ತದೆ. ಮಾರ್ಕೆಟಿನ ಒಳಗಡೆ ಹೋದಂತೆ ಮಧ್ಯದ ಮತ್ತು ಕೊನೆಯ ಅಂಗಡಿಗಳಿಗೆ ಕಡಿಮೆ ಬೆಲೆ ಇರುತ್ತದೆ. ಮುಸಲ್ಮಾನರು ಮತ್ತು ಖಾಟಿಕರು ಸೇರಿ ಅಂಗಡಿಗಳನ್ನು ಬಾಡಿಗೆಗೆ ಕೊಂಡು ವ್ಯಾಪಾರ ಮಾಡುವುದನ್ನು ಕಾಣಬಹುದು. ಕೆಲವೊಮ್ಮೆ ಈ ಎರಡು ಸಮುದಾಯದವರಲ್ಲಿ ಸ್ಪರ್ಧೆ ಕಂಡು ಬಂದು ಯಾರು ಹೆಚ್ಚು ಹಣ ಹೊಂದಿರುತ್ತಾರೋ ಅವರು ಹೆಚಚಿನ ಅಂಗಡಿಗಳನ್ನು ಪಡೆದರೆ ಮತ್ತೆ ಕೆಲವೊಮ್ಮೆ ಇವರು ತಲೆಮಾರುಗಳ ಮುಖಾಂತರ ಅಂಗಡಿಗಳನ್ನು ನಡೆಸಿಕೊಂಡು ಬರುವುದರಿಂದ ಅಫರವರು ಭಾಂದವ್ಯದಿಂದ ಒಂದಾಗಿ ಸೇರಿ ಮುನಿಸಿಪಾಲಿಟಿಯವರಿಂದ ಆ್ಯಕ್ಷನ್‌ನ್ನು ಒಂದು ನಿಗದಿತ ಬೆಲೆಗೆ ಕೊಂಡುಕೊಳ್ಳುವರು. ಹಾಗೆಯೇ ಸ್ಲಾಟರ್ ಹೌಸ್ ಬಗ್ಗೆ ಕುರಿತು ಹೇಳುವಾಗಲೂ ಮುನಿಸಿಪಾಲಿಟಿಯವರು ಕುರಿಗಳನ್ನು ಕೊಯ್ಯಲು ತಯಾರಿಸಿರುವ ದೊಡ್ಡಿ ಎಂದು ಹೇಳಬಹುದು. ಇಲ್ಲಿ ನೀರಿನ ವ್ಯವಸ್ಥೆ, ರಕ್ತ, ಗಲೀಜು ಹೋಗಲು ಚರಂಡಿ ವ್ಯವಸ್ಥೆ ಇರುತ್ತದೆ. ಇದನ್ನು ಸಹ ಮುನಿಸಿಪಾಲಿಟಿಯವರು ಕಟ್ಟಿಸಿ ಆ್ಯಕ್ಷನ್‌ಮ ಮೂಲಕ ಅಂದರೆ ಒಂದು ವರ್ಷಕ್ಕೆ ಇಂತಿಷ್ಟು ಹಣ ಎಂದು ನಿಗದಿ ಮಾಡಿ ಕೊಡುತ್ತಾರೆ. ಇದನ್ನು ಸ್ಲಾಟರ್ ಹೌಸನ್ನು ಗುತ್ತಿಗೆಗೆ ಪಡೆದವರು ಒಂದು ಕುರಿಯನ್ನು ಕೊಯ್ಯಿಸಿದವರು ಒಂದು ರೂಪಾಯಿ ಎಂದು ನಿಗದಿ ಮಾಡಿ ಎಷ್ಟು ಜನ ಎಷ್ಟು ಕುರಿಗಳನ್ನು ಕೊಯ್ಯಿಸುತ್ತಾರೋ ಒಂದಕ್ಕೆ ಒಂದು ರೂಪಾಯಿಯಂತೆ ಹಣವನ್ನು ನೀಡಬೇಕಾಗುತ್ತದೆ. ಈ ಹಣವನ್ನು ದಿನಾಲೂ ಸಂಗ್ರಹಿಸಬಹುದು. ಇಲ್ಲವೆ ವಾರಕೊಮ್ಮೆ ಸಂಗ್ರಹಿಸಿಕೊಳ್ಳಬಹುದು. ಸ್ಲಾಟರ್ ಹೌಸ್‌ನಲ್ಲಿ ಒಂದು ಪೆಟ್ಟಿಗೆಯನ್ನಿಟ್ಟಿರುತ್ತಾರೆ. ಕುರಿ ಕೊಯ್ಯಿಸಿದವರು ಅದರಲ್ಲಿ ಹಣವನ್ನು ಹಾಕುತ್ತಾರೆ. ಹೀಗೆ ಸಂಗ್ರಹಿಸಿದ ಹಣವನ್ನು ವಾರಕ್ಕೊಮ್ಮೆ ಎತ್ತಿಕೊಳ್ಳಲಾಗುತ್ತದೆ. ಸ್ಲಾಟರ್‌ಹೌಸ್‌ಲ್ಲಿ ಕುರಿ ಕೊಯ್ಯಿಸಲಿ ಬಿಡಲಿ ಆದರೆ ಸರ್ಕಾರಕ್ಕೆ ಅಂದರೆ ಮುನಿಸಿಪಾಲಿಟಿಯವರಿಗೆ ಮಾತ್ರ ಆ್ಯಕ್ಷನ್ ಸಂದರ್ಭದಲ್ಲಿ ಪೂರ್ತಿ ಹಣ ನೀಡಿ ಗುತ್ತಿಗೆ ಪಡೆಯಬೇಕಾಗುತ್ತದೆ.

ಹೊಸಪೇಟೆಯ ಮಟನ್ ಮಾರ್ಕೆಟ್‌ನಲ್ಲಿ ವಾರದ ಶನಿವಾರದ ಒಂದು ದಿನ ಮಾತ್ರ ಯಾರು

ಕುರಿಗಳನ್ನು ಕೊಯ್ಯಿಸುವುದಿಲ್ಲ. ಒಬ್ಬರು ಮಾತ್ರ ಆ್ಯಕ್ಷನ್ ಮೂಲಕ ಒಂದೇ ಅಂಗಡಿಯನ್ನು ತೆರೆದು ವ್ಯಾಪಾರ ಮಾಡುವ ಪದ್ಧತಿ ಇದೆ. ಶನಿವಾರ ಹೆಚ್ಚಾಗಿ ಯಾರೂ ಮಾಂಸವನ್ನು ಖರೀದಿಸುವುದಿಲ್ಲ. ಹಾಗಾಗಿ ಒಬ್ಬರೆ ಅಂಗಡಿ ತೆಗೆದು ವ್ಯಾಪಾರ ಮಾಡುತ್ತಾನೆ.

ಇನ್ನು ಹೊರಗಡೆ ಮಟನ್ ವ್ಯಾಪಾರ ಮಾಡಲು ಅಂಗಡಿಗಳನ್ನು ಇಟ್ಟುಕೊಳ್ಳಲು ಸಹ ಮುನಿಸಿಪಾಲಿಟಿಯವರಿಂದ ಹಿಡಿದು ತಾಲೂಕು ಅಧಿಕಾರಿ, ಜಿಲ್ಲಾಧಿಕಾರಿಯವರೆಗೂ ಅನುಮತಿ ಪಡೆಯ ಬೇಕಾಗುತ್ತದೆ. ಅನುಮತಿ ಪತ್ರ ಪಡೆಯದಿದ್ದರೆ ಯಾವುದೇ ಸಂದರ್ಭದಲ್ಲಿ ಮುನಿಸಿಪಾಲಿಟಿಯವರು ಬಂದು ಅಂಗಡಿಯನ್ನು ಕಿತ್ತುಕೊಳ್ಳಬಹುದು. ಇಲ್ಲವೆ ಅಕ್ಕಪಕ್ಕದ ಅಂಗಡಿಯವರು ಮಾಂಸದ ವಾಸನೆ, ರಕ್ತ, ಗಲೀಜು ಎಂದು ಕಿರಿಕಿರಿ ಮಾಡಿ ಅಂಗಡಿ ತೆಗೆಸುವ ಸಂದರ್ಭ ಬರುವುದು ಸಾಮಾನ್ಯ. ಅದಕ್ಕೆ ಇವರು ಎಲ್ಲೇ ಅಂಗಡಿ ತೆಗೆಯಲಿ ಮೊದಲು ಮುನಿಸಿಪಾಲಿಟಿಯವರ ಪರವಾನಿಗೆ ಪತ್ರವನ್ನು ಪಡೆಯುತ್ತಾರೆ. ನಂತರ ಅಂಗಡಿ ಪ್ರಾರಂಭಿಸುತ್ತಾರೆ. ಹೀಗೆ ಉದ್ಯೋಗದ ಸಂದರ್ಭದಲ್ಲಿ ಹಲವು ರೀತಿಯ ಅಡ್ಡಿ ಅತಂಕಗಳನ್ನು ಎದುರಿಸಿ ವ್ಯಾಪಾರ ಮಾಡಿದರು ಲಾಭವು ಕಡಿಮೆ ಬರುತ್ತದೆ ಎಂದು ಹೊಸಪೇಟೆಯ ಮಟನ್ ವ್ಯಾಪಾರಿ ಮೌನಾಜಿರಾವ್ ಕಾಂಬಳೆಕರ್ ತಿಳಿಸುತ್ತಾರೆ.

೫.೧.೩. ವೃತ್ತಿ ಸಂಬಂಧದ ಪರಿಕರಗಳು ಹಾಗೂ ತಯಾರಿಕೆ

ಖಾಟಿಕ್‌ರ ಮೂಲ ಉದ್ಯೋಗ ಮಾಂಸ ಮಾರಾಟ ಮಾಡುವುದಾಗಿದೆ. ಹಾಗಾಗಿ ಇವರ ಉದ್ಯೋಗಕ್ಕೆ ಸಂಬಂಧಿಸಿರುವ ಸಲಕರಣೆಗಳನ್ನು ಇಲ್ಲಿ ಪರಿಚಯಿಸುತ್ತಾ, ಅವುಗಳ ತಯಾರಿಕೆಯನ್ನು ಕುರಿತು ತಿಳಿಸುವ ಪ್ರಯತ್ನ ಮಾಡಲಾಗಿದೆ. ಒಂದು ಸಮುದಾಯಕ್ಕೆ ಆ ಸಮುದಾಯವು ತನ್ನ ಕುಟುಂಬ ನಿರ್ವಹಣೆಗಾಗಿ ಅವಲಂಬಿಸಿರುವ ವೃತ್ತಿ ಹಾಗೂ ಆ ವೃತ್ತಿಗೆ ಅವಶ್ಯವಾಗಿರುವ ಸಲಕರಣೆಗಳು ಪೂಜನೀಯವಾಗಿರುತ್ತವೆ. ಕಾರಣ ಅವುಗಳಿಲ್ಲದೆ ಅವರ ಜೀವನ ಸಾಗುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ ಅವರು ಈ ವಸ್ತುಗಳನ್ನು ದೇವರೆಂದು ಪ್ರಮುಖವಾಗಿ ಕಾಣುವುದು ಕಂಡುಬರುತ್ತದೆ. ಖಾಟಿಕರು ಮುಖ್ಯವಾಗಿ ತಮ್ಮ ವೃತ್ತಿಯ ಅನುಕೂಲತೆಗಾಗಿ ಬಳಸುವ ಸಲಕರಣೆಗಳು ಎಂದರೆ ಮಾಂಸ ಕಡಿಯುವ ಕೊರಡು, ಕತ್ತರಿಸಲು ಬಳಸುವ ಸತರ್, ಚೂರಿಗಳು ಮತ್ತು ಮಾಂಸವನ್ನು ಗ್ರಾಹಕರಿಗೆ ತೂಕಮಾಡಿ ನೀಡಲು ತಕ್ಕಡಿ, ತೂಕದ ಕಲ್ಲುಗಳು ಹಾಗೂ ಆಯುಧಗಳನ್ನು ಸಾಣೆಹಿಡಿಯಲು ಬಳಸುವ ಮಸೆಗಲ್ಲು, ಮಾಂಸವನ್ನು ತೂಗುಹಾಕಲು ಬಳಸುವ ಕಬ್ಬಿಣದ ಕೊಂಡಿಗಳು ವ್ಯಾಪಾರದಲ್ಲಿ ಪ್ರಮುಖವಾಗಿ ಬಳಸುವ ಸಾಧನಗಳು.

ಕೊರಡು ಅಥವಾ ಕೊಲ್ಲು, (ಕುಂದಾ) : ಸಾಮಾನ್ಯವಾಗಿ ಇದು ಮಾಂಸವನ್ನು ತುಂಡರಿಸಲು ಬಳಸುವ ಒಂದು ಮರದ ದಿಮ್ಮಿಯಾಗಿರುತ್ತದೆ. ಮಾಂಸವನ್ನು ಕೊರಡಿನ ಮೇಲಿಟ್ಟು ತುಂಡುಗಳನ್ನಾಗಿ ಮಾಡಲು ಬಳಸಲಾಗುತ್ತದೆ. ಸಾಮಾನ್ಯವಾಗಿ ಜಾಲಿಮರದ ಮಧ್ಯದ ಕಾಂಡವಾಗಿದ್ದು, ಉಪಯೋಗಿಸಲು

ಯೋಗ್ಯವಾಗಿರುವ ಹುಳುಕು ಹಿಡಿಯದಿರುವ ದುಂಡನೆಯ ದಪ್ಪವಿರುವ ದಿಮ್ಮಿಯನ್ನು ಕೊರಡು (ಕೊಲ್ಲ) ಅಥವಾ ಕುಂದಾ (ಹಿಂದಿ) ಆಗಿ ಬಳಸಲಾಗುತ್ತದೆ. ಇದನ್ನು ಕಟ್ಟಿಗೆ ಡಿಪೋಗಳಿಂದ ಕೊಂಡು ಕೊಂಡು ತರಲಾಗುತ್ತದೆ. ಇದರ ಮೇಲ್ಮುಖವನ್ನು ಸ್ವಚ್ಛವಾಗಿ ಕತ್ತರಿಸಿಕೊಂಡು ಮಾಂಸವನ್ನು ಕಡಿಯಲು ಅನುಕೂಲವಾಗುವ ರೀತಿಯಲ್ಲಿ ಇದನ್ನು ತಮ್ಮ ಅಂಗಡಿಗಳ ಮುಂಭಾಗದಲ್ಲಿ ಇಟ್ಟಿರುತ್ತಾರೆ.

ಸತ್ತರ್ (ಕತ್ತಿ) : ಈ ಸಾಧನವನ್ನು ಮಾಂಸ ಕಡಿಯಲು ಹಾಗೂ ಮಾಂಸ ಬಿಡಿಸಲು ಬಳಸುವ ಮುಖ್ಯ ಆಯುಧವಾಗಿ ಉಪಯೋಗಿಸುತ್ತಾರೆ. ಇದನ್ನು ಕಮ್ಮಾರರ ಹತ್ತಿರ ಕಬ್ಬಿಣದಿಂದ ತಯಾರಿಸಿ ಕೊಂಡು ಬರುತ್ತಾರೆ. ಇದರ ಜೊತೆಗೆ ಮಾಂಸವನ್ನು ಸುಲಭವಾಗಿ ಕತ್ತರಿಸಲು ಅನುಕೂಲವಾಗುವ ಚೂರಿಗಳನ್ನು ಸಹ ಮಾಡಿಸಿಕೊಂಡು ಬರುತ್ತಾರೆ.

ಕೊಂಡಿ (ಕೊಕ್ಕೆ) : ಈ ಪರಿಕರವನ್ನು ಅಂಗಡಿಗಳ ಮುಂಭಾಗದಲ್ಲಿ ಮಾಂಸವನ್ನು ತೂಗುಹಾಕಲು ಬಳಸುತ್ತಾರೆ.

ತಕ್ಕಡಿ : ಮಾಂಸವನ್ನು ತೂಕ ಮಾಡಲು ತಕ್ಕಡಿಯನ್ನು ಬಳಸುತ್ತಾರೆ. ಗ್ರಾಹಕನಿಗೆ ಬೇಡಿದ ಪ್ರಮಾಣವನ್ನು ನಿರ್ಧರಿಸಿ ನೀಡಲು ಇವರು ತಕ್ಕಡಿಯನ್ನು ಬಳಸುತ್ತಾರೆ. ತಕ್ಕಡಿಯನ್ನು ಪಟ್ಟಣ ಅಥವಾ ನಗರಗಳಲ್ಲಿ ಖರೀದಿಸಿ ತರುತ್ತಾರೆ.

ತೂಕದ ಕಲ್ಲುಗಳು : ಮಾಂಸ ಮಾರಾಟದಲ್ಲಿ ಗ್ರಾಹಕರ ಬೇಡಿಕೆಯ ಪ್ರಮಾಣದಲ್ಲಿ ನೀಡುವಾಗ ತೂಕದ ಕಲ್ಲುಗಳನ್ನು ಬಳಸುತ್ತಾರೆ. ಉದಾಹರಣೆಯಾಗಿ ಇವರು ಬಳಸುವ ಕಲ್ಲುಗಳ ಪ್ರಮಾಣವು ಈ ರೀತಿಯಾಗಿವೆ. ೨೫ ಗ್ರಾಂ. ೫೦ ಗ್ರಾಂ. ೧೦೦ ಗ್ರಾಂ. ೨೦೦ ಗ್ರಾಂ. ೫೦೦ ಗ್ರಾಂ. ೧೦೦೦ ಗ್ರಾಂ. ೨೦೦೦ ಗ್ರಾಂ. ೫೦೦೦ ಗ್ರಾಂ.ಗಳಾಗಿರುತ್ತವೆ. ಹೆಚ್ಚಾಗಿ ೨೫ ಗ್ರಾಂ ನಿಂದ ೧೦೦೦ ಗ್ರಾಂ ತೂಕದ ಕಲ್ಲುಗಳನ್ನು ಹೊಂದಿರುತ್ತಾರೆ.

ಮಸೆಕಲ್ಲು : ಇದನ್ನು ತಾವು ಬಳಸುವ ಆಯುಧಗಳಾದ ಸತ್ತರ್ ಹಾಗೂ ಚೂರಿಗಳನ್ನು ಮೊನಚಾಗಿ ಮಾಡಿಕೊಳ್ಳಲು ಬಳಸುತ್ತಾರೆ.

೫.೧.೪. ವೃತ್ತಿ ಸಲಕರಣೆಗಳ ಬಗೆಗಿನ ನಂಬಿಕೆ, ಆಚರಣೆ ಮತ್ತು ವಿಧಿ-ನಿಷೇಧಗಳು

ವೃತ್ತಿ ಮೂಲ ಸಮುದಾಯಗಳು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಹತ್ತು ಹಲವು ನಂಬಿಕೆಗಳನ್ನು ಆಚರಣೆ, ವಿಧಿ-ನಿಷೇಧಗಳನ್ನು ಹೊಂದಿರುತ್ತವೆ. ಆ ಸಲಕರಣೆಗಳು ಇತರ ಸಮುದಾಯಗಳಿಗೆ ಎಷ್ಟೇ ನಿಕೃಷ್ಟವಾಗಿ ಕಂಡರೂ ಸಹಿತ ಅವುಗಳ ಮೂಲಕವೇ ತಮ್ಮ ತುತ್ತಿನ ಚೀಲವನ್ನು ತುಂಬಿಕೊಳ್ಳುವ ಸಮುದಾಯಕ್ಕೆ ಆ ಸಲಕರಣೆಗಳು ಅತೀ ಪೂಜ್ಯನೀಯವೆನಿಸುತ್ತವೆ. ಅಂತಹ ಸಲಕರಣೆಗಳ ಹೆಚ್ಚುಗಾರಿಕೆ ಯನ್ನು ತಿಳಿಸುವ ಹತ್ತು ಹಲವು ಕಥೆಗಳು, ಐತಿಹ್ಯಗಳು ಸಮುದಾಯದೊಳಗೆ ಇರುತ್ತವೆ.

ಖಾಟಿಕರು ತಮ್ಮ ವೃತ್ತಿಗೆ ಸಂಬಂಧಿಸಿರುವ ಸಲಕರಣೆಗಳನ್ನು ತುಂಬಾ ಪೂಜ್ಯನೀಯ ದೃಷ್ಟಿಯಿಂದ ನೋಡುತ್ತಾರೆ. ಅವುಗಳ ಬಗ್ಗೆ ಇರುವ ಆಚರಣೆಗಳೆಂದರೆ ಪ್ರತಿದಿನ ಅಂಗಡಿಯನ್ನು ತೆರೆದು ವ್ಯಾಪಾರ ಪ್ರಾರಂಭಿಸುವ ಮೊದಲಿಗೆ ಅಂಗಡಿಯನ್ನು ಸ್ವಚ್ಛವಾಗಿ ತೊಳೆದುಕೊಂಡು ಕೊರಡು, ಸತ್ತರ್, ಚಾಕು, ತಕ್ಕಡಿ, ತೂಕದ ಕಲ್ಲುಗಳನ್ನು ತೊಳೆದು ಅವುಗಳಿಗೆ ಅರಿಷಣ ಕುಂಕುಮ ಹಚ್ಚಿ ಹೂ ಹಾಕಿ ಉದ್ದಿನಕಡ್ಡಿ ಹಚ್ಚಿ ಬೆಳಗಿ ಅಂಗಡಿಯಲ್ಲಿ ಇರುವ ಹುಲಿಗೆಮ್ಮದೇವಿ ಇಲ್ಲ ಅವರ ಮನೆದೇವರುಗಳ ಭಾವಚಿತ್ರ ಅಥವಾ ಯಾವುದಾದರು ಮಂತ್ರಗಳನ್ನು ಬರೆದು ಹಾಕಿರುವ ಫೋಟೋಗಳಿಗೆ ಊದಿನಕಡ್ಡಿ ಬೆಳಗಿಸಿ ದೀಪ ಹಚ್ಚಿ, ಧೂಪವನ್ನು ಹಾಕಿ ಪ್ರತಿನಿತ್ಯ ಪೂಜಿಸುತ್ತಾರೆ. ಇಂದಿನ ವ್ಯಾಪಾರವು ಚೆನ್ನಾಗಿ ನಡೆಯಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡು ವ್ಯಾಪಾರಕ್ಕೆ ನಿಲ್ಲುತ್ತಾರೆ.

ಖಾಟಿಕ್‌ರ ವರ್ಗಗಳು ತಮ್ಮ ಸಲಕರಣೆಗಳನ್ನು ಕುರಿತು ತುಂಬಾ ಪೂಜ್ಯನೀಯ ಭಾವನೆಗಳನ್ನಿಟ್ಟು ಕೊಂಡಿದ್ದಾರೆ. ಅವರಲ್ಲಿ ಅವರು ಮಾಂಸ ತೂಕ ಮಾಡುವ ತೂಕದ ಕಲ್ಲುಗಳನ್ನು ಕುರಿತು ಒಂದು ಕಥೆಯು ಚಿತ್ರದುರ್ಗದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂತು. ಅದೇನೆಂದರೆ "ಮೊದಲು ಸಾಲಿಗ್ರಾಮವೆಂಬುದು ನಮ್ಮಲ್ಲಿಯೇ ಇತ್ತು, ಅದರಿಂದಲೇ ನಾವು ಮಾಂಸವನ್ನು ತೂಕ ಮಾಡಿ ಕೊಡುತ್ತಿದ್ದೆವು. ಆ ಸಾಲಿಗ್ರಾಮವು ವ್ಯಾಪಾರದ ಸಂದರ್ಭದಲ್ಲಿ ತುಂಬಾ ಮಹತ್ವದಾಗಿತ್ತು. ಏಕೆಂದರೆ ಆಗ ತೂಕದ ಕಲ್ಲುಗಳಿರಲಿಲ್ಲ. ಗಿರಾಕಿಗೆ ಎಷ್ಟು ಕೆ.ಜಿ. ಮಾಂಸ ಬೇಕೋ ಅಷ್ಟು ಹಣವನ್ನು ತೆಗೆದು ಕೊಂಡು ತಕ್ಕಡಿಯಲ್ಲಿ ಸಾಲಿಗ್ರಾಮವಿಟ್ಟರೆ ಗಿರಾಕಿ ಕೊಟ್ಟ ಹಣಕ್ಕೆ ಎಷ್ಟು ಕೆ.ಜಿ. ಮಾಂಸ ಬೇಕೋ ಅಷ್ಟು ಮಾಂಸ ಸರಿಯಾಗಿ ತಕ್ಕಡಿ ತೂಗುತ್ತಿತ್ತು. ಹೀಗೆ ಸಾಲಿಗ್ರಾಮವು ಬಂದಂತ ಗಿರಾಕಿಗಳು ಕೊಟ್ಟ ಹಣಕ್ಕೆ ಸರಿಯಾಗಿ ತೂಕವನ್ನು ಕೊಡುತ್ತಿತ್ತು. ಒಂದು ಸಾಲಿಗ್ರಾಮಕ್ಕೆ ಇಷ್ಟೊಂದು ಶಕ್ತಿಯಿತ್ತು. ಆದರೆ ಕಾಲಾನಂತರ ಬೇರೆಯವರು ನಮ್ಮಿಂದ ಸಾಲಿಗ್ರಾಮವನ್ನು ಕಿತ್ತುಕೊಂಡರು. ನಂತರ ಅವರು ಅದನ್ನು ದೇವರೆಂದು ಪೂಜಿಸತೊಡಗಿದರು. ಹೀಗೆ ನಮ್ಮಿಂದ ಸಾಲಿಗ್ರಾಮ ದೂರವಾಯಿತು. ಹಾಗಾಗಿ ನಾವು ಈ ತೂಕದ ಕಲ್ಲುಗಳನ್ನು ಬಳಸುವುದು ಅಂದಿನಿಂದ ಪ್ರಾರಂಭವಾಯಿತು ಎಂದು ನಮ್ಮ ಹಿರಿಯರು ತಿಳಿಸುತ್ತಿದ್ದರು" ಎಂದು ಮಾಹಿತಿದಾರರು ತಿಳಿಸುತ್ತಾರೆ. ಹೀಗೆ ಈ ಕಥೆಯು ಖಾಟಿಕರನ್ನು ಕುರಿತು ಅಧ್ಯಯನ ಮಾಡುವಾಗ ಅವರ ಪುರಾಣ ಕಥೆಯಲ್ಲು ಸಿಗುತ್ತದೆ. ಅದು ಇದಕ್ಕಿಂತ ಸ್ವಲ್ಪ ಭಿನ್ನವಾಗಿರುವುದು ಕಂಡುಬರುತ್ತದೆ. ಕಥೆಯು ಹೀಗಿದೆ. "ಮೇರು ಪರ್ವತದ ಮೇಲೆ ಒಬ್ಬ ರಾಕ್ಷಸನಿದ್ದು ಅವನು ಸೂರ್ಯನ ಬೆಳಕನ್ನು ಭೂಮಿಗೆ ತಲುಪಲು ಅಡ್ಡಿಪಡಿಸುತ್ತಿದ್ದಾನೆ. ಹಾಗಾಗಿ ದೇವತೆಗಳೆಲ್ಲ ಸೇರಿ ವಿಠೋಬನನ್ನು ರಾಕ್ಷಸನಿಗೆ ಸಂಹರಿಸುವ ಆದೇಶ ನೀಡಿದರು. ಅದರಂತೆ ವಿಠೋಬ ಆ ರಾಕ್ಷಸನ ರೂಪ ತಳೆದಿರುವ ಕುರಿಯನ್ನು ಸಂಹರಿಸಿದನು. ಆಗ ಆ ಕುರಿಯ ಕುತ್ತಿಗೆಯಲ್ಲಿ ಸಾಲಿಗ್ರಾಮ ದೊರೆಯಿತು. ಮುಂದೆ ಖಾಟಿಕರು ಈ ಸಾಲಿಗ್ರಾಮವನ್ನು ತಮ್ಮ ವ್ಯಾಪಾರಕ್ಕೆ ತೂಕದ ಕಲ್ಲನ್ನಾಗಿ

ಬಳಸಿದರು". ಹೀಗೆ ಇವರು ಸಾಲಿಗ್ರಾಮವು ತಮ್ಮಲ್ಲಿತ್ತು ಕಾಲಾನಂತರ ಇದನ್ನು ಬೇರೆಯವರು ತಮ್ಮಿಂದ ಕಸಿದುಕೊಂಡರು ಎಂದು ಹೇಳುತ್ತಾರೆ. ಮುಖ್ಯವಾಗಿ ಇವರು ತಮ್ಮ ಸಲಕರಣೆಗಳನ್ನು ತುಂಬಾ ಮಹತ್ವವಾಗಿ ಪೂಜಿಸುವುದು ದಸರಾ ಹಬ್ಬದ ಸಂದರ್ಭದಲ್ಲಿ ಬರುವ ಆಯುಧ ಪೂಜೆಯ ದಿನ. ಅಂದು ತಮ್ಮ ವೃತ್ತಿಯ ಸಲಕರಣೆಗಳನ್ನು ಶುಚಿಯಾಗಿ ತೊಳೆದು ಅಂಗಡಿಯನ್ನು ಸಹ ಸುಣ್ಣ, ಬಣ್ಣ ಹಚ್ಚಿ ಕೆಲವೊಮ್ಮೆ ನೀರಿನಿಂದಲೇ ತೊಳೆದು ಅಂಗಡಿಯಲ್ಲಿರುವ ದೇವರ ಪೋಟೋಗಳನ್ನು ಸಹ ತೊಳೆದು ಸಲಕರಣೆಗಳಿಗೆ ಅರಿಶಿಣ ಕುಂಕುಮ ಹಚ್ಚಿ ಹೂ ಹಾಕಿ ದೀಪಹಚ್ಚಿ ಧೂಪಹಾಕಿ ಕಾಯಿ ಒಡೆದು ನಂತರ ಎಲ್ಲರಿಗೂ ಮಂಡಕ್ಕಿ ಕಾಯಿಚೂರನ್ನು ಹಂಚುವರು. ಇದೇ ಇವರಲ್ಲಿ ಮುಖ್ಯವಾಗಿ ವೃತ್ತಿ ಸಲಕರಣೆಗಳಿಗೆ ಸಂಬಂಧಿಸಿದ ಆಚರಣೆಯಾಗಿದೆ.

ಹೊಸದಾಗಿ ಸಲಕರಣೆಗಳನ್ನು ತಂದಾಗಲೂ ಅವುಗಳನ್ನು ತೊಳೆದು ಪೂಜೆ ಮಾಡಿ ಉಪಯೋಗಿಸುತ್ತಾರೆ ಅಥವಾ ವ್ಯಾಪಾರಕ್ಕೆ ಬಳಸುತ್ತಾರೆ. ಹೊಸದಾಗಿ ಸತ್ತೂರ್‌ನ್ನು ಕಮ್ಮಾರರಿಂದ ಮಾಡಿಸಿ ತಂದಾಗ ಅದಕ್ಕೆ ಟಗರಿನ ಕೊಂಬಿನ ನೀರನ್ನು ಕುಡಿಸುತ್ತಾರೆ. ಹೀಗೆ ಮಾಡುವುದರಿಂದ ಸತ್ತರ್ ಹೆಚ್ಚು ಚೂಪಾಗಿದ್ದು ತುಕ್ಕು ಹಿಡಿಯುವುದಿಲ್ಲ ಎಂಬ ನಂಬಿಕೆ ಇದೆ.

೫.೧.೫. ವೃತ್ತಿಗೆ ಸಂಬಂಧಿಸಿದ ಭಾಷೆ

ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಭಾಷೆ ಇರುತ್ತದೆ. ಹಾಗೆಯೇ ಬುಡಕಟ್ಟುಗಳು ಅವುಗಳ ಭಾಷೆಯಿಂದಲೇ ವೈವಿಧ್ಯತೆಯನ್ನು ಪಡೆಯುತ್ತವೆ. ಖಾಟಿಕ್ ಸಮುದಾಯದ ಮಾತೃಭಾಷೆ ಹಿಂದಿಯಾಗಿದ್ದು ಇವರು ಉತ್ತರದಿಂದ ಬಂದವರೆಂದು ಹೇಳಲಾಗುತ್ತದೆ. ಮನೆಯಲ್ಲಿ ಇಂದಿಗೂ ಇವರು ಹಿಂದಿಯನ್ನೇ ಮಾತೃಭಾಷೆಯಾಗಿ ಬಳಸುತ್ತಾರೆ. ಹೆಚ್ಚಾಗಿ ಮುಸ್ಲಿಂ ಕೇರಿಗಳ ಪಕ್ಕ ಇವರ ಕೇರಿಗಳು ಕಂಡುಬರುವುದರಿಂದ ಮತ್ತು ವ್ಯಾಪಾರದ ಸಂದರ್ಭದಲ್ಲೂ ಮುಸಲ್ಮಾನರೊಂದಿಗೆ ಹೆಚ್ಚು ಸಂಪರ್ಕವಿರುವುದರಿಂದ ಇವರ ಮೇಲೆ ಉರ್ದು ಭಾಷೆಯು ಹೆಚ್ಚು ಪ್ರಭಾವ ಬೀರಿದೆ. ಹಾಗಾಗಿ ಇವರ ಭಾಷೆಯು ಕೆಲವೊಮ್ಮೆ ಉರ್ದು ಮಿಶ್ರಿತ ಹಿಂದಿಯಾಗಿರುವುದು ಕಂಡುಬರುತ್ತದೆ. ಇವರಲ್ಲಿ ಇನ್ನೊಂದು ಗೌಪ್ಯ ಭಾಷೆಯು ಕಂಡುಬರುತ್ತದೆ. ಅಂದರೆ ಮುಖ್ಯವಾಗಿ ಉದ್ಯೋಗ ವ್ಯಾಪಾರದ ಸಂದರ್ಭದಲ್ಲಿ ಇವರು ಈ ಭಾಷೆಯನ್ನು ಬಳಸುತ್ತಾರೆ. ವ್ಯಾಪಾರದ ಸಂದರ್ಭದಲ್ಲಿ ಅಂದರೆ ಮಾಂಸ ವಿಕ್ರಯ ಮಾಡುವಾಗ ಬೇರೆಯವರಿಗೆ ತಿಳಿಯಬಾರದು ಎಂದು ಕೋಡ್ ಲಾಂಗ್ವೇಜ್‌ನ್ನು ಬಳಸಲಾಗುತ್ತದೆ. ಇದು ಯಾವ ಭಾಷೆ ಎಂದು ಗುರುತಿಸಲು ಕಷ್ಟವಾಗುತ್ತದೆ. ಆದರೆ ಇದೊಂದು ರೀತಿಯಲ್ಲಿ ಒಂದು ಸಮುದಾಯವು ಇತರರಿಗೆ ತಿಳಿಯಲಾರದ ಒಂದು ಗೌಪ್ಯವಾಗಿ ವ್ಯವಹರಿಸಲ್ಪಡುವ ಭಾಷೆ ಎಂದು ಹೇಳಬಹುದೇನೋ. ಈ ಗೌಪ್ಯ ಭಾಷೆಯಲ್ಲಿ ಬಳಸುವ ಕೆಲವು ಪದಗಳು ಕೆಳಗಿನಂತಿವೆ.

ಸಂಖ್ಯಾವಾಚಕಗಳು

ಸಂಖ್ಯೆ	ಕನ್ನಡ ಭಾಷೆ	ಹಿಂದಿ-ಉರ್ದು ಮಿಶ್ರಿತ	ಗೌಪ್ಯ ಭಾಷೆ
೦೧	ಒಂದು	ಏಕ್	ಏಕಣ್
೦೨	ಎರಡು	ದೊ	ವಂಕೆ
೦೩	ಮೂರು	ತೀನ್	ತಿರೊಕೊ
೦೪	ನಾಲ್ಕು	ಚಾರ್	ಚಾರ್
೦೫	ಐದು	ಪಾಂಚ್	ಬೂದೆ
೦೬	ಆರು	ಚೇ	ಸಿಪೆ
೦೭	ಏಳು	ಸಾತ್	ಸತ್‌ಕೊ
೦೮	ಎಂಟು	ಆಂಟ್	ಅಟಕೊ
೦೯	ಒಂಬತ್ತು	ನವು	ನವು
೧೦	ಹತ್ತು	ದಸ್	ದಢೆ
೧೧	ಇಪ್ಪತ್ತು	ಬೀಸ್	ವಾಂಕೆದಢೆ
೧೨	ಐವತ್ತು	ಪಾಚಸ್	ಬೂದೆದಢೆ
೧೩	ನೂರು	ಸವ್	ನಿಲಿದಢೆ

ಹಣಕ್ಕೆ ಸಂಬಂಧಿಸಿದ ಪದಗಳು

ಸಂಖ್ಯೆ	ಕನ್ನಡ ಭಾಷೆ	ಹಿಂದಿ-ಉರ್ದು ಮಿಶ್ರಿತ	ಗೌಪ್ಯ ಭಾಷೆ
೦೧	ಹಣ	ರುಪೈ	ಗೌಣೆ
೦೨	ಒಂದು ರೂಪಾಯಿ	ಏಕ್ ರೂಪೈ	ಕೈಲಾ
೦೩	ಎರಡು	ದೊ ರೂಪೈ	ವಂಕೆಕ್ಕೈಲೆ
೦೪	ಮೂರು	ತೀನ್ ರೂಪೈ	ತಿರೊಕೊಕ್ಕೈಲೈ
೦೫	ಐದು ರೂಪಾಯಿ	ಪಾಂಚ್ ರೂಪೈ	ಬೂದ್ಕೆಕೈಲೆ
೦೬	ಹತ್ತು	ದಸ್ ರೂಪೈ	ದಢೆಕ್ಕೈಲೆ
೦೭	ಇಪ್ಪತ್ತು	ಬೀಸ್ ರೂಪೈ	ವಂಕೆದಢೆ
೦೮	ಮೂವತ್ತು	ತೀಸ್ ರೂಪೈ	ತಿರೊಕೊದಢೆ
೦೯	ಐವತ್ತು	ಪಚಸ್ ರೂಪೈ	ಅದ್‌ಗೂಂಡಾಗ
೧೦	ನೂರು	ಸವ್ ರೂಪೈ	ನೀಲಿ ಕೈಲೆ

ದಿನನಿತ್ಯ ಬಳಸುವ ಪದಗಳು

ಸಂಖ್ಯೆ	ಕನ್ನಡ ಭಾಷೆ	ಹಿಂದಿ-ಉರ್ದು ಮಿಶ್ರಿತ	ಗೌಪ್ಯ ಭಾಷೆ
೦೧	ಹೇಳು	ಬೊಲ್	ಭಣಕ್
೦೨	ಕೇಳು	ಪೂಚ್	ಪೂಚ್‌ಸುಲ್

೦೩	ನೋಡು	ದೇಖ್	ಮನಾರ್
೦೪	ಹೋಗು	ಚಲ್	ಉಕಣ್
೦೫	ನೀಡು	ದೇ	ಥರಾ
೦೬	ಕೊಟ್ಟುಬಿಡು	ದೇಕ್‌ಚೋಡ್	ಫಾಡ್‌ಸುಲ್
೦೭	ಸ್ವಲ್ಪ	ಜರಾ	ಕಸ್
೦೮	ಸುಮ್ಮನಿರು	ಚೂಪ್	ಥೈಕಸುಲ್
೦೯	ಬಹಳ	ಬಹೂತ್	ಬಿಷಾರ್
೧೦	ತುಂಬಾ	ಭರಕೊ	ಜಂಡ್, ರಾಸ್
೧೧	ಒಳ್ಳೆಯ	ಅಚ್ಚಾ	ಚಿಟಾಲ
೧೨	ಕೆಟ್ಟ	ಖರಾಬ್	ಐದಾ
೧೩	ನೀರು	ಪಾನಿ	ಅಬೀಚಾ
೧೪	ತಿನ್ನು	ಖಾಲೇ	ಸೂಡ್
೧೫	ಹೊಡಿ	ಮಾರ್	ಹಡಸ್
೧೬	ಹುಡುಗ	ಛೋಕರಾ	ಬಾಲಿಂಗಾ
೧೭	ಹುಡುಗಿ	ಛೋಕರಿ	ಬಾಲಿಂಗಿ
೧೮	ಚಿಕ್ಕವನು	ಚೋಟಾ	ಬಟ್ಲ
೧೯	ಚಿಕ್ಕವಳು	ಚೋಟಿ	ಬಟ್ಲೀ
೨೦	ಕದಿಯುವುದು	ಉಟಾಲೇ	ಉಕಣಾಲೇ
೨೧	ಅನ್ನ	ಖಾನಾ	ಬಾಸ್ನಿ
೨೨	ಚಪಾತಿ, ರೊಟ್ಟಿ	ರೋಟಿ	ಟಾಪ
೨೩	ಉಪ್ಪು	ನಮಕ್	ಶಕ್ಕರ್
೨೪	ಹಿಟ್ಟು	ಆಟಾ	ಉಜಲ
೨೫	ಪೋಲಿಸ್	ಪೋಲಿಸ್‌ವಾಲ್	ಲಾಲ್‌ಬಾಲಿಂಗ, ಕೋರಿಕಡಿ
೨೬	ಚಪ್ಪಲಿ	ಚಪ್ಪಲ್	ಲುಕಾಣೆ
೨೭	ಮನೆ	ಘರ್	ಫೈಹ್ನಾ
೨೮	ಸಾರಾಯಿ	ದಾರೊ	ಫಾಟ್ನಿ

ವ್ಯಾಪಾರಕ್ಕೆ ಸಂಬಂಧಿಸಿದ ಪದಗಳು

ಸಂಖ್ಯೆ	ಕನ್ನಡ ಭಾಷೆ	ಹಿಂದಿ-ಉರ್ದು ಮಿಶ್ರಿತ	ಗೌಪ್ಯ ಭಾಷೆ
೦೧	ಮಾಂಸ	ಗೋಶ್	ಪೋಲ್
೦೨	ಕದಿಯುವುದು	ಉಠಾಲೇ	ಉಕಣಾಲೇ
೦೩	ಎಲುಬು	ಹಡ್ಡಿ	ತೈಯ್
೦೪	ಒಳ್ಳೆಯ ಮಾಂಸ	ಅಚ್ಚಾ ಗೋಶ್	ಚಿಟಾಲ್ ಪೋಲ್
೦೫	ಕೆಟ್ಟ ಮಾಂಸ	ಖರಾಬ್ ಘೋಸ್	ಐದಾ ಪೋಲ್

೦೬	ಚರ್ಮ	ಚಮಡ	ಲಿಪಾಡ
೦೭	ತಲೆ	ಸಿರಾ	ದಂತಾಲಿ
೦೮	ಮಾಂಸದ ಚೂರು	ಗೋಶ್‌ಕ ತುಕಡ	ಬಿಂಚೆ
೦೯	ಬಲಿತ ಕುರಿ	ಬಡಾ ಬಕರ್	ಚೊಂಡಾ ಮೇಕಾಣ
೧೦	ಕುರಿ ಮೇಕೆ	ಬಕರೇ	ಮೇಕಣೆ
೧೧	ಮೇಕೆ	ಛೇಲಿ	ಜಕಡಿ
೧೨	ಟಗರು	ಪೋಟ್ಲ	ಮೇಸಿ, ಪಾಕೆಟ್
೧೩	ನೀರು ಹಚ್ಚು	ಪಾನೀ ದಾಲ್	ಅಭೀಚಫಾಡ್
೧೪	ಕಡಿಮೆ ನೀಡು	ಜಾರದೇ, ಕಂಮದೇ	ಕಸ್‌ಥರಾ

ಈ ರೀತಿಯಾಗಿ ಖಾಟಿಕರಲ್ಲಿ ವ್ಯವಹಾರಿಕ ಭಾಷೆಯಾಗಿ ತಮ್ಮ ಗೌಪ್ಯಭಾಷೆಯನ್ನು ಬಳಸಿಕೊಂಡು ಗ್ರಾಹಕ ಹಾಗೂ ವ್ಯಾಪಾರಿಗಳಿಗೆ ಅರ್ಥವಾಗದ ರೀತಿಯಲ್ಲಿ ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡು ಎದುರಿಗಿನ ವ್ಯಕ್ತಿಗೆ ಅರ್ಥವಾಗದ ರೀತಿಯಲ್ಲಿ ಇದರ ಬಳಕೆಯಾಗುತ್ತದೆ. ಈ ಭಾಷೆಯನ್ನು ಕುರಿತು ಪ್ರಶ್ನಿಸಿದಾಗ ಇದು ನಮ್ಮ ಪೂರ್ವಿಕರಿಂದ ಬಂದಿರುವಂತಹ ಭಾಷೆಯಾಗಿದೆ. ಆದರೆ ಇದು ಲಿಖಿತ ರೂಪದಲ್ಲಿರುವುದಿಲ್ಲ, ನಮ್ಮಿಂದಲೇ ಮುಸಲ್ಮಾನರು ಈ ಭಾಷೆಯನ್ನು ಕಲಿತಿದ್ದಾರೆ. ನಾವೇ ಅವರಿಗೆ ಮೊದಲು ಈ ಭಾಷೆಯನ್ನು ಕಲಿಸಿದ್ದು, ಅವರಿಗೆ ಈ ಭಾಷೆ ಬರುವುದಿಲ್ಲ. ಆದರೆ ನಾವೇ ವ್ಯಾಪಾರದ ಸಂದರ್ಭದಲ್ಲಿ ಈ ಭಾಷೆಯನ್ನು ಹೆಚ್ಚು ಬಳಸುವುದರಿಂದ ನಮ್ಮಿಂದ ಮುಸಲ್ಮಾನ ವ್ಯಾಪಾರಿಗಳು ಈ ಭಾಷೆಯನ್ನು ಕಲಿತವರಾಗಿದ್ದು ಇದನ್ನು ವ್ಯಾಪಾರಕ್ಕೆ ಮಾತ್ರ ಸೀಮಿತವಾಗಿ ಬಳಸುವವರಾಗಿದ್ದಾರೆ. ಖಾಟಿಕ್‌ರಿಂದ ಮುಸಲ್ಮಾನರು ಈ ಭಾಷೆಯನ್ನು ಕಲಿತಿದ್ದಾರೋ ಮುಸಲ್ಮಾನರಿಂದ ಖಾಟಿಕರು ಕಲಿತಿರುವರೋ ಎಂದು ಕೇಳಿದರೆ, ಮುಸಲ್ಮಾನರೇ ಖಾಟಿಕ್‌ರಿಂದ ಕಲಿತಿರುವರು ಎಂದು ಖಾಟಿಕರು ಹೇಳುತ್ತಾರೆ. ಇದು ಒಂದು ದಖ್ಖನಿ ಭಾಷೆಯಾಗಿದೆ ಎಂಬುದು ಸಹ ಇವರು ಪೂರ್ವಿಕರಿಂದ ತಿಳಿದು ಬಂದಿರುವುದಾಗಿ ಹೇಳುತ್ತಾರೆ. ಈ ಭಾಷೆಯನ್ನು ಕುರಿತು ಬೇರೆಯಾಗಿಯೇ ಅಧ್ಯಯನ ಮಾಡುವ ಅವಶ್ಯಕತೆ ಇದೆ.

೫.೧.೬. ಇತರೆ ಅವಲಂಬಿತ ವೃತ್ತಿಗಳು

ಖಾಟಿಕರು ಮುಖ್ಯವಾಗಿ ಮಾಡುವ ವೃತ್ತಿ ಎಂದರೆ ಕುರಿಮಾಂಸ ಮಾರಾಟವಾಗಿದೆ. ಆದರೆ ಇಂದು ಈ ವೃತ್ತಿಯಲ್ಲಿ ಹೆಚ್ಚಿನ ಲಾಭವನ್ನು ಕಾಣದೆ ಬೇರೆ ಉದ್ಯೋಗಗಳ ಕಡೆ ಗಮನ ನೀಡುತ್ತಿದ್ದಾರೆ. ಇವರಲ್ಲಿ ಸಾರಾಯಿ ಮದ್ಯದ ಕಂಟ್ರಾಕ್ಟರುಗಳು ಹಿಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಮದ್ಯ ಮಾರಾಟ ಮಾಡುವುದೂ ಇವರ ಮತ್ತೊಂದು ಮುಖ್ಯ ಉದ್ಯೋಗವಾಗಿದೆ ಎಂಬುದು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ತಿಳಿದುಬರುತ್ತದೆ. ಮದ್ಯದಂಗಡಿಗಳ ಗುತ್ತಿಗೆಯನ್ನು ಹಿಡಿಯುವಲ್ಲಿ ಈಡಿಗ ಸಮುದಾಯವು ಇವರಿಗೆ ಹೆಚ್ಚಿನ ಪೈಪೋಟಿಗಾರರಾಗಿದ್ದರು ಹಾಗಾಗಿ ನಷ್ಟವನ್ನು

ಹೊಂದಿ ಈ ವೃತ್ತಿಯು ಅವರ ಕೈವಾಶವಾಯಿತೆಂದು ಮತ್ತು ಇವರ ಪೈಪೋಟಿಯಲ್ಲಿ ಮನೆ ಮಾರು ಸಂಪತ್ತುಗಳನ್ನು ಕಳೆದುಕೊಂಡು ಕಂಗಲಾಗಿರುವುದು 'ಕರ್ನಾಟಕದ ಕಲಾಲ್'ರು ಎಂಬ ಚೂಡಾಮಣಿ ರಾವ್ ಬರೆದಿರುವ ಪುಸ್ತಕದಿಂದ ತಿಳಿದುಬರುತ್ತದೆ. ಹೀಗೆ ಮದ್ಯಮಾರಾಟ ಮಾಡುವುದು ತಪ್ಪಿದಂತಹ ಸಂದರ್ಭದಲ್ಲಿ ಅವರು ಮದ್ಯದಂಗಡಿಗಳಲ್ಲಿ ಚಾಕಣಾ ಮಾರುವಲ್ಲಿ ಇವರು ಕಂಡು ಬರತೊಡಗಿದರು. ಈ ರೀತಿ ಮದ್ಯದ ಮಾರಾಟ ಮಾಡುವಲ್ಲಿ ಇವರು ಪೈಪೋಟಿ ಮಾಡಲಾರದೆ ವಿಫಲರಾದರು ಎಂದು ತಿಳಿದುಬರುತ್ತದೆ. ಆದರೆ ಇಂದಿಗೂ ಕೆಲವರು ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಮದ್ಯದಂಗಡಿಯ ಗುತ್ತಿಗೆಯನ್ನು ಹಿಡಿದು ಈ ವೃತ್ತಿಯಲ್ಲೇ ಮುಂದುವರಿಯುತ್ತಿರುವುದು ಕ್ಷೇತ್ರಕಾರ್ಯದಿಂದ ಕಂಡು ಬರುತ್ತದೆ.

ಈ ಸಮುದಾಯದಲ್ಲಿ ಕೃಷಿ ಭೂಮಿಯನ್ನು ಹೊಂದಿರುವಂತಹ ಕುಟುಂಬಗಳು ಬಹಳಷ್ಟು ಕಡಿಮೆ ಪ್ರಮಾಣದಲ್ಲಿವೆ. ಒಂದು ವೇಳೆ ಭೂಮಿಯನ್ನು ಹೊಂದಿದ್ದರು ಇವರು ಅದನ್ನು ಗುತ್ತಿಗೆಗೆ ಬೇರೆಯವರಿಗೋ ಅಥವಾ ಬಾಡಿಗೆಯಿಂದ ಬಿತ್ತನೆಯ ಕಾರ್ಯವನ್ನು ಮಾಡಿಸುತ್ತಾರೆ. ಇನ್ನು ಕೆಲವು ಖಾಟಿಕರು ಇತ್ತೀಚೆಗೆ ತಮ್ಮ ಉದ್ಯೋಗವನ್ನು ಸಮಾಜದಲ್ಲಿ ಜನ ಕೀಳಾಗಿ ನೋಡುವುದರಿಂದ ಬೇರೆ ಉದ್ಯೋಗದ ಬಗ್ಗೆ ಆಕರ್ಷಿತರಾಗಿ ಬಟ್ಟೆ ಅಂಗಡಿಗಳು, ಕಿರಾಣಿ ಅಂಗಡಿಗಳು, ದೂರವಾಣಿ ಬೂತ್‌ಗಳು, ಚಿಕ್ಕಪುಟ್ಟ ಹೋಟೆಲ್‌ಗಳನ್ನು ಮಾಡುತ್ತಿದ್ದಾರೆ. ಇನ್ನು ಅನಕ್ಷರಸ್ಥರಾಗಿರುವ ಈ ಜನ ಹೆಚ್ಚಾಗಿ ಇತ್ತೀಚಿಗೆ ಬಂಡಿಗಳಲ್ಲಿ ಚಿಕನ್ ಪಕೋಡ, ಪಲಾವ್, ಮೊಟ್ಟೆ, ಮೀನು ಹೀಗೆ ಫಾಸ್ಟ್‌ಫುಡ್ ಎಂಬ ಮಾಯೆ ಎಲ್ಲೆಲ್ಲೂ ಆವರಿಸಿರುವುದರಿಂದ ಜನರಿಗೆ ರುಚಿಯಾದ ಶುಚಿಯಾದ ಆಹಾರ ಕಡಿಮೆ ಬೆಲೆಗೆ ಸಿಗುವ ಸ್ಥಳಗಳೆಂದರೆ ಈ ಬಂಡಿಗಳು. ಇಲ್ಲಿ ಮದ್ಯ ಕುಡಿದ ಜನರೇ ಹೆಚ್ಚಾಗಿ ಇವರಿಗೆ ಗಿರಾಕಿಗಳಾಗಿರುತ್ತಾರೆ. ಏಕೆಂದರೆ ಐದು ಹತ್ತು ರೂಪಾಯಿಳಲ್ಲಿ ನೆಂಚಿಕೊಳ್ಳಲು ಇಲ್ಲಿ ಚಿಕ್ಕನ್ ಮೊಟ್ಟೆ, ಆಮ್ಲೇಟ್‌ಗಳು ಸಿಗುವುದರಿಂದ ಇಂಥ ಗಿರಾಕಿಗಳೇ ಹೆಚ್ಚಾಗಿ ಬರುತ್ತಾರೆ. ಹಾಗೆಯೆ ಟೂರಿಸ್ಟ್ ಮಂದಿ, ಮಧ್ಯಮ ವರ್ಗದ ಜನ ಇವರಿಗೆ ಗಿರಾಕಿಗಳಾಗಿರುತ್ತಾರೆ. ಇನ್ನು ಕೆಲವರು ಕೂಲಿಕಾರ್ಮಿಕರಾಗಿ, ಬಟ್ಟೆ ಅಂಗಡಿ, ಮೈನ್ಸ್‌ನಲ್ಲಿ ಹೋಟೆಲುಗಳಲ್ಲಿ ಕೆಲಸಗಾರರಾಗಿ ಕೆಲಸ ಮಾಡುತ್ತಾರೆ. ಹಾಗೆಯೇ ಮಾಂಸದಂಗಡಿಯಲ್ಲಿ ಮಾಂಸವನ್ನು ತುಂಡರಿಸುವ ಮಾಂಸದ ಅವಯವಗಳನ್ನು ಮಾರುವ, ಕತ್ತರಿಸುವ, ಅವರಿಗೆ ಕೆಲಸದಲ್ಲಿ ನೆರವಾಗುವ (ತಲೆ-ಕಾಲುಗಳನ್ನು ಸುಡುವ, ಸ್ವಚ್ಛ ಗೊಳಿಸುವ) ಆಳುಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರಿಗೆ ಇವರ ಮೂಲ ಉದ್ಯೋಗ ಬಿಟ್ಟು ಬೇರೆ ಉದ್ಯೋಗವು ತಿಳಿದಿಲ್ಲ. ಅನಕ್ಷರಸ್ಥ ಸಮುದಾಯ ಇಂದಿನ ಈ ಜಾಗತೀಕರಣದ ಹೊತ್ತಲ್ಲಿ ಎಚ್ಚೆತ್ತುಕೊಳ್ಳುತ್ತಿದೆ. ಬೇರೆ ಸಮುದಾಯದವರು ಸಹ ಇವರಿಗೆ ಪ್ರತಿಸ್ಪರ್ಧಿಗಳಾಗಿ ನಿಲ್ಲುವುದರಿಂದ ಇವರು ತಮ್ಮ ಮೂಲವೃತ್ತಿಯಿಂದ ವಿಮುಖ

ರಾಗುತ್ತಿದ್ದಾರೆ. ಆದರೆ ಇದು ಕೆಲವು ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತಿದೆ. ಕೆಲವು ಕಡೆ ಖಾಟಿಕರೆ ತಮ್ಮ ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಹಾಗೂ ಇತ್ತೀಚಿಗೆ ಕೋಳಿ ಮಾಂಸ ಮಾರಾಟ ಮಾಡುವಿಕೆಯು ಹೆಚ್ಚು ಲಾಭದಾಯಕವಾಗಿ ಕಂಡುಬರುತ್ತಿರುವುದರಿಂದ ಕೋಳಿ ಮಾಂಸ ಮಾರಾಟ ಮಾಡುವ ಅಂಗಡಿಗಳು ಹೆಚ್ಚಾಗಿ ಕಂಡುಬರುತ್ತಿದೆ. ಇದನ್ನು ಚಿತ್ರದುರ್ಗ, ಹೊಸಪೇಟೆ, ಕೊಪ್ಪಳ, ಗಂಗಾವತಿ ಈ ಭಾಗಗಳಲ್ಲಿ ಗುರುತಿಸಬಹುದು. ಕೋಳಿಮಾಂಸ ಮಾರಾಟವು ಇವರನ್ನು ಆಕರ್ಷಿಸಲು ಮುಖ್ಯವಾಗಿರುವ ಕಾರಣವೆಂದರೆ ಕೋಳಿಗಳನ್ನು ಖರೀದಿಸಲು ಕುರಿಗಳನ್ನು ಖರೀದಿಸುವಷ್ಟು ಹಣ ಅಥವಾ ಬಂಡವಾಳ ಬೇಕಾಗಿಲ್ಲ. ಕಡಿಮೆ ಬಂಡವಾಳದಲ್ಲಿ ಕೋಳಿಗಳನ್ನು ಖರೀದಿಸಿ ತಮಗೆ ಬೇಕಾದ ಹಾಗೆ ಮಾಂಸವನ್ನು ಮಾರಬಹುದು. ಮಾಂಸವೆಂಬುದು ಬಲುಬೇಗ ಕೆಡುವ ಪದಾರ್ಥವಾಗಿ ರುವುದರಿಂದ ತಮ್ಮ ವ್ಯಾಪಾರಕ್ಕೆ ಗಿರಾಕಿಗಳಿಗೆ ನೋಡಿ ಲೆಕ್ಕಚಾರ ಮಾಡಿ ಕೋಳಿಮಾಂಸ ಮಾರಲು ಅನುಕೂಲವಾಗಿರುವುದರಿಂದ ಹೆಚ್ಚಾಗಿ ಖಾಟಿಕರು ಈ ವೃತ್ತಿಯ ಕಡೆ ಆಕರ್ಷಿತರಾಗಿರುವುದು ಕಂಡು ಬರುತ್ತದೆ. ಹೀಗೆ ಕೆಲವು ಚಿಕ್ಕಪುಟ್ಟ ಕೆಲಸಗಳಲ್ಲೂ ಇವರು ದುಡಿದು ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತದೆ.

ಇವರು ವ್ಯಾಪಾರ ಮಾಡಲು ಹಣವನ್ನು ಪಡೆಯುವುದು ಯಾವುದೇ ಬ್ಯಾಂಕಿನಿಂದಲ್ಲ. ಬದಲಾಗಿ ದುಬಾರಿ ಬಡ್ಡಿಯಿಂದ ಹಣ ಕೊಡುವ ಲೇವಾದೆವಿದಾರರ ಹತ್ತಿರ, ಕಾರ್ಪೋರೇಷ್‌ನಗಳಲ್ಲಿ ಇವರು ಹಣವನ್ನು ಸಾಲವಾಗಿ ಪಡೆದು ತಮ್ಮ ವ್ಯಾಪಾರ ವಹಿವಾಟು ನೋಡಿಕೊಳ್ಳುತ್ತಾರೆ. ಇವರಿಗೆ ಸಿಗುವ ಅತ್ಯಲ್ಪ ಲಾಭದಲ್ಲಿ ಮನೆಖರ್ಚು, ಅಂಗಡಿ ಖರ್ಚು ಜೊತೆಗೆ ಸಾಲ ಎಲ್ಲವನ್ನು ನೋಡಿಕೊಳ್ಳಲು ಸಾಧ್ಯವಾಗದೆ ಎಷ್ಟೋ ಸಾರಿ ಅಂಗಡಿ ಮುಚ್ಚಿ ಬೇರೆಯವರ ಹತ್ತಿರ ಹೆಚ್ಚು ಬಡ್ಡಿಗೆ ಮತ್ತೆ ಸಾಲ ಮಾಡಿ ಅಂಗಡಿ ಮಾಡುವುದು ಇಲ್ಲವೆ ಬೇರೆಯವರ ಹತ್ತಿರ ಕೂಲಿಗಳಾಗಿ ಕೆಲಸಕ್ಕೆ ಹೋಗುವುದು ಮತ್ತೆ ಹಣ ಕೂಡಿಸಿ ಅಂಗಡಿ ಮಾಡುವುದು ಇವರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ದನದ ಮಾಂಸ ಮತ್ತು ಹಂದಿ ಮಾಂಸ ಇವರಿಗೆ ನಿಷಿದ್ಧವಾದುದು. ಹಾಗೆಯೇ ಏನಾದರೂ ರೋಗ ಬಂದು ಕುರಿ ಸತ್ತರೆ ಅವರು ಅದನ್ನು ಮುಟ್ಟುವುದಿಲ್ಲ. ಬೇರೆ ಯಾರಿಗಾದರು ಕೊಟ್ಟುಬಿಡುತ್ತಾರೆ. ಸತ್ತಂತ ಕುರಿ ಮಾಂಸ ಮಾರುವುದು, ತಿನ್ನುವುದು ಅದನ್ನು ಮುಟ್ಟುವುದು ಸಹ ಇವರಲ್ಲಿ ನಿಷಿದ್ಧವಾಗಿದೆ.

೫.೨. ಶೈಕ್ಷಣಿಕ ಪದ್ಧತಿ

ಖಾಟಿಕ್ ಸಮುದಾಯದಲ್ಲಿ ಶಿಕ್ಷಣದ ಕೊರತೆ ಬಹಳಷ್ಟು ಇರುವುದು ಕಂಡುಬರುತ್ತದೆ. ಇವರಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರ ಸಾಲಿಗೆ ಇರುವುದು ಕ್ಷೇತ್ರಕಾರ್ಯದಲ್ಲಿನ ಸಮಯದಲ್ಲಿ ಕಂಡು ಬಂದಿರುವುದು. ಇದರಿಂದ ಹೆಚ್ಚಿನ ವಿಷಯಗಳಾಗಲಿ, ಮಾಹಿತಿಗಳಾಗಲಿ, ಪೂರ್ವ ಐತಿಹ್ಯದ ಬಗ್ಗೆಯಾಗಲಿ ತಿಳಿದುಕೊಳ್ಳಲು ಬಹಳಷ್ಟು ಶ್ರಮ ಪಡಬೇಕಾಯಿತು. ಆದರೂ ಇತ್ತೀಚೆಗೆ ಈ

ಸಮುದಾಯದವರಲ್ಲಿ ಸಮಾಜ ಸಂಘಟನೆಯ ಕೆಲಸವು ಪ್ರಗತಿಯ ಪಥದತ್ತ ಸಾಗುತ್ತಿರುವುದರಿಂದ ವಿದ್ಯಾವಂತ ಯುವಕರು, ಕೆಲವು ಆಸಕ್ತಿಯುಳ್ಳ ಹಿರಿಯರು ಸಮಾಜವು ಮುಂದುವರೆದು ಪ್ರಗತಿ ಸಾಧಿಸಲು ಈ ಸಮುದಾಯದವರು ಶಿಕ್ಷಣವಂತರಾಗಿ ಮುಂದೆ ಬರುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಇತ್ತೀಚಿಗೆ ಖಾಟಿಕ್ ಸಮುದಾಯದವರು ಶಿಕ್ಷಣದತ್ತ ಬಹಳಷ್ಟು ಒಲವು ತೋರಿಸುತ್ತಿದ್ದಾರೆ. ತಮ್ಮ ಮಕ್ಕಳು ತಮ್ಮಂತೆಯೇ ಬಡತನದ ಬದುಕು ಹಾಗೂ ಅವಿದ್ಯಾವಂತನಾಗದೇ ವಿದ್ಯಾವಂತರಾಗಲಿ ಎಂದು ಶಾಲಾ ಕಾಲೇಜುಗಳ ಮೆಟ್ಟಿಲುಗಳನ್ನು ಹತ್ತಿಸಲು ಮುಂದಾಗುತ್ತಿದ್ದಾರೆ. ನಮ್ಮ ಬವಣೆಯ ಬದುಕು ನಮ್ಮಿಂದಲೇ ಕೊನೆಗಾಣಲಿ ಎನ್ನುವುದರ ಮೂಲಕ ತಮ್ಮ ಮಕ್ಕಳನ್ನು ಸಮಾಜವು ಗೌರವಯುತವಾಗಿ ಕಾಣುವಂತೆ ನಾವು ಅವರಿಗೆ ಉತ್ತಮ ಶಿಕ್ಷಣ ಹಾಗೂ ಒಳ್ಳೆಯ ಉದ್ಯೋಗಗಳನ್ನು ಪಡೆಯುವಲ್ಲಿ ಅವರನ್ನು ಸಹಕರಿಸಬೇಕು ಮತ್ತು ಮಾರ್ಗದರ್ಶಕರಾಗಿ ನಾವು ನಿಲ್ಲಬೇಕು ಎಂದು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ವಕ್ತೃಗಳ ಅಭಿಪ್ರಾಯಗಳಾಗಿ ಹೊರಹೊಮ್ಮುತ್ತವೆ.

ಕ್ಷೇತ್ರಕಾರ್ಯದಲ್ಲಿ ಅವರ ಶಿಕ್ಷಣದ ಹಿನ್ನೆಡೆಗೆ ಕಾರಣಗಳನ್ನು ಕುಟುಂಬಗಳಲ್ಲಿ ಪ್ರಶ್ನಿಸಿದಾಗ ಅವರು ಈ ರೀತಿಯಾಗಿ ವಿವರಿಸುತ್ತಾರೆ. ನಾನು ಐದನೆ ತರಗತಿಯ ವಿದ್ಯಾಭ್ಯಾಸಕ್ಕೆ ಶಾಲೆ ಬಿಡ ಬೇಕಾಯಿತು. ಓದಲು ಹೆಚ್ಚಿನ ಆಸಕ್ತಿ ಹೊಂದಿದವನಾಗಿದ್ದೆ. ಆದರೆ ಈ ನಮ್ಮೀ ವೃತ್ತಿಯಿಂದ ತಂದೆಗೆ ಸಹಾಯಕನಾಗಿ ಅಂಗಡಿಯಲ್ಲಿ, ಸಂತೆಗಳಲ್ಲಿ ಅವರ ವ್ಯಾಪಾರದಲ್ಲಿ ಸಹಕರಿಸಲು ನಾನು ವಿದ್ಯಾಭ್ಯಾಸವನ್ನು ಬಿಡಬೇಕಾಯಿತು. ಅಂಗಡಿಯಲ್ಲಿ ಸಣ್ಣ-ಪುಟ್ಟ ಸಹಾಯಗಳು, ಸಂತೆಗಳಲ್ಲಿ ಖರೀದಿಸಿದ ಕುರಿ-ಮೇಕೆಗಳನ್ನು ಕಾಯುವುದು, ಹುಲ್ಲುಮೇಯಿಸುವುದು ಹೀಗೆ ಅನೇಕ ರೀತಿಯಲ್ಲಿ ಸಹಾಯಕ್ಕಾಗಿ ನನ್ನನ್ನು ಓದಿನಿಂದ ವಿಮುಕ್ತಿಗೊಳಿಸಲಾಯಿತು. ಹೀಗಾಗಿ ನನ್ನ ಅಕ್ಷರಭ್ಯಾಸವು ನಿಂತುಹೋಯಿತು. ಇದು ಕೇವಲ ನನ್ನ ಒಬ್ಬನ ಕಥೆಯಲ್ಲ. ನಮ್ಮ ಸಮುದಾಯದ ಬಹುತೇಕ ಈ ವೃತ್ತಿಯಲ್ಲಿರುವವರು ಕೇವಲ ೧ ರಿಂದ ೫ನೇ ತರಗತಿಯ ಶಿಕ್ಷಣಕ್ಕೆ ಕೊನೆ ಹಾಡಿದವರು ಸಿಗುತ್ತಾರೆ. ಆದರೆ ನಮ್ಮ ಲೆಕ್ಕಾಚಾರ, ಮಾತು, ವ್ಯಾಪಾರದ ಅರಿವು ಇವುಗಳು ಕೇವಲ ವ್ಯವಹಾರಿಕ ಜ್ಞಾನಗಳಾಗಿವೆ ಅಷ್ಟೇ ಎಂಬುದಾಗಿ ತಿಳಿಸುತ್ತಾರೆ.

ಮೊದಲಿಗೆ ನಮ್ಮ ಹಿರೀಕರು ಮಾಡಿದ ತಪ್ಪಿನಿಂದ ನಾವು ಶಾಲೆಗಳನ್ನು ಬಿಡಬೇಕಾಯಿತು. ಯಾವಾಗ ನಮ್ಮ ಕೈಯಲ್ಲಿ ಪುಸ್ತಕ ಪೆನ್ನುಗಳನ್ನು ಬಿಡಿಸಿ ರಕ್ತದ ಪಾತ್ರೆ, ಕುರಿಯ ಕಾಲು ಹಿಡಿಯಲು ನೀಡಿದರೋ ಅಂದೇ ನಮ್ಮ ಶಾಲೆಯ ಕನಸು ಕೊನೆಯಾಯಿತು. ಚಿಲ್ಲರೆ ಪುಡಿಗಾಸಿಗಾಗಿ ರಕ್ತ ಹಿಡಿದು ಮಾರುವುದು, ಕುರಿಯ ಅವಯವಗಳನ್ನು ಮಾರುವುದು, ತಲೆಕಾಲುಗಳನ್ನು ಸುಡುವುದು, ಮಾಂಸವನ್ನು ಕಡಿಯಲು ಕತ್ತಿಯನ್ನು ನೀಡಿ ಮಕ್ಕಳ ಭವಿಷ್ಯವನ್ನು ಈ ವೃತ್ತಿಯಲ್ಲೇ ಅಡಗಿದೆ ಎಂಬಂತೆ ಹಿರಿಯರು ಮಗ ಯಾವಾಗ ಈ ಎಲ್ಲಾ ಕೆಲಸಗಳನ್ನು ಕಲಿಯುತ್ತಾನೆಯೋ ಅಂದೇ ಅವನನ್ನು ಮುಂದಿನ

ಅಂಗಡಿಯ ಮಾಲೀಕನಾಗಿಸುವ ಕನಸನ್ನು ಕಾಣುತ್ತಾರೆ. ಮಕ್ಕಳೂ ಒಂದು ಹಂತಕ್ಕೆ ಬಂದರೆ ಸಾಕು ಅವರನ್ನು ಅಂಗಡಿಯ ಜವಾಬ್ದಾರಿಯನ್ನು ನೀಡಿ ಅವರು ಕೇವಲ ಸಂತೆಗಳಿಗೆ ಹೋಗಿ ಕುರಿ-ಮೇಕೆಗಳನ್ನು ಮಾತ್ರ ಖರೀದಿಸಿ ತರುವಂತರಾಗಿರುತ್ತಾರೆ. ಇಡೀ ಅಂಗಡಿಯ ಜವಾಬ್ದಾರಿಯನ್ನು ನಿರ್ವಹಿಸಲೇ ಬೇಕಾಗುತ್ತದೆ. ಹೀಗೆ ಈ ಸಮುದಾಯದ ಪ್ರತಿಯೊಬ್ಬ ತಂದೆಯು ಮಕ್ಕಳನ್ನು ಈ ಮೂಲವೃತ್ತಿಯೇ ನಮ್ಮ ಭವಿಷ್ಯದ ಬದುಕು ಎಂಬಂತೆ ಕಂಡುಕೊಂಡು ಇಂದು ಪಾಶ್ಚಾತ್ತಾಪ ಪಡುವ ಸ್ಥಿತಿಯಲ್ಲಿ ನಾವು ಹಾಗೂ ನಮ್ಮ ಪೂರ್ವಿಕರು ಚಿಂತಿಸುವಂತಾಗಿದೆ. ಈ ರೀತಿಯಾಗಿ ನಮ್ಮ ಸಮುದಾಯದ ಮಕ್ಕಳಲ್ಲಿ ಹಾಗೂ ನಮ್ಮಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿಯೂ ಮೂಡದಿರುವುದರಿಂದ ಅಕ್ಷರಭ್ಯಾಸದಿಂದ ವಂಚಿತರಾಗುತ್ತಿದ್ದೇವೆ ಎಂದು ಚಿತ್ರದುರ್ಗದ ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ವಕ್ತೃಗಳು ಹೇಳಿರುವುದುಂಟು.

ಹೀಗೆ ಒಂದು ಸಮುದಾಯವು ಶಿಕ್ಷಣದಿಂದ ವಂಚಿತವಾಗಿ ಈ ಸಮಾಜದ ಅಂಚಿಗೆ ತನ್ನಷ್ಟಕ್ಕೆ ತಾನೇ ಹೇಗೆ ದೂರವಾಗುತ್ತದೆ ಹಾಗೂ ಸರಿದುಕೊಳ್ಳುತ್ತಿದೆ ಎಂಬುದು ಇವರ ಶಿಕ್ಷಣ ಮತ್ತು ಆರ್ಥಿಕತೆಯ ಸ್ಥಿತಿಗಳನ್ನು ಗಮನಿಸಿದರೆ ತಿಳಿಯುತ್ತದೆ. ಖಾಟಿಕರು ಶಿಕ್ಷಣದಲ್ಲಿ ಯಾಕೆ ಮುಂದುವರೆದಿಲ್ಲ ಯಾಕಿಷ್ಟು ಹಿಂದುಳಿದಿದ್ದಾರೆ ಎಂಬುದನ್ನು ಗಮನಿಸಿದರೆ ಇವರಿಗೆ ಶಿಕ್ಷಣದ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡುವವರಿಲ್ಲ. ಮುಂದೆ ಏನು ಓದಬೇಕು, ಶಾಲೆಯಲ್ಲಿ ಸೇರಿಸಲು ಏನು ಅರ್ಹತೆಗಳಿರಬೇಕು, ಜನ್ಮ ದಿನಾಂಕ, ಪ್ರಮಾಣಪತ್ರ, ವಯಸ್ಸು ಹೀಗೆ ಹತ್ತು ಹಲವು ವಿವರಗಳ ಬಗ್ಗೆ ಇವರಿಗೆ ಮಾಹಿತಿ ನೀಡುವವರು ಇರುವುದಿಲ್ಲ. ಮಕ್ಕಳು ಎಸ್.ಎಸ್.ಎಲ್.ಸಿ ಪಾಸಾದ ತಕ್ಷಣ ಮುಂದೆ ಏನು ಓದಬೇಕು ಯಾವ ಮಾರ್ಗ ಅವರಿಗೆ ಸೂಕ್ತವಾದುದು ಯಾವ ವಿಷಯವನ್ನು ಆಯ್ಕೆ ಮಾಡಿಕೊಂಡರೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಹೀಗೆ ಹತ್ತು ಹಲವು ವಿಷಯಗಳನ್ನು ಕುರಿತು ಚಿಂತಿಸುವವರು ಮಾರ್ಗದರ್ಶನ ಮಾಡುವವರು ವಿದ್ಯಾವಂತರು ಈ ಸಮುದಾಯದಲ್ಲಿ ತುಂಬಾ ಕಡಿಮೆ. ಎಲ್ಲೋ ಒಬ್ಬರಿಬ್ಬರು ಮಾರ್ಗದರ್ಶನ ಮಾಡುವವರಿದ್ದರು. ಹಣಕಾಸಿನ ತೊಂದರೆಯಿಂದಾಗಿಯು ವಿದ್ಯಾಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ಆರ್ಥಿಕ ಸಹಾಯವಿಲ್ಲದೆ ಏನೂ ಮಾಡಲು ಆಗುವುದಿಲ್ಲ. ಹಾಗಾಗಿ ಮುಖ್ಯವಾಗಿ ಆರ್ಥಿಕವಾಗಿ ಈ ಸಮುದಾಯ ಸಬಲಗೊಂಡು ಮುಂದಿನ ಹೆಜ್ಜೆಯನ್ನು ಇಡುವುದರಿಂದ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಮುಂದುವರೆಯಲು ಸಾಧ್ಯ. ಈ ಸಮುದಾಯದಲ್ಲಿರುವ ಕೆಲವು ಪಿಯುಸಿ, ಬಿ.ಎ. ಓದಿರುವಂತಹ ಯುವಕರಿಗೆ ಸರ್ಕಾರದಿಂದ ಯಾವ ಸವಲತ್ತು ಸಿಗದೆ ನೌಗರಿಗಳು ಸಿಗದೆ ಇತ್ತ ಮೂಲ ವೃತ್ತಿಯನ್ನು ಮಾಡಲು ಆಗದೆ ವ್ಯರ್ಥ ಕಾಲಹರಣ ಮಾಡುತ್ತಿರುವವರಿಗೆ ನೋಡಿ ನಾವು ಯಾಕೆ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು, ಶಿಕ್ಷಣ ಕೊಡಿಸಿದರು ಮುಂದೆ ಅವರಿಗೆ ನೌಕರಿಗಳನ್ನು ಕೊಡುವವರು ಯಾರು, ಅವರಿಗೆ ನೌಕರಿಗಳು

ಸಿಗುತ್ತವೆಯೇ ಎಂಬ ಪ್ರಶ್ನೆಗಳೊಂದಿಗೆ ಅಲ್ಲಿಯೂ ಸಲ್ಲದೆ ಇಲ್ಲಿಯೂ ಸಲ್ಲದೆ ವ್ಯರ್ಥವಾಗಬಾರದೆಂಬ ಕಾರಣದಿಂದ ಮಕ್ಕಳಿಗೆ ಶಿಕ್ಷಣ ಕೊಡಿಸದೆ ತಮ್ಮ ಉದ್ಯೋಗದಲ್ಲಿ ತೊಡಗುವಂತೆ ಎಚ್ಚರವಹಿಸುತ್ತಾರೆ. ನಮ್ಮ ಉದ್ಯೋಗವನ್ನು ಕಲಿಸಿದರೆ ಮುಂದೆ ನಾಲ್ಕು ಕಾಸು ದುಡಿದು ಮನೆ ಸಾಕುತ್ತಾನೆ, ಆಧಾರ ವಾಗುತ್ತಾನೆ ಎಂಬ ಆಶಾವಾದ. ಸರ್ಕಾರವಾಗಲಿ, ಸಂಘಸಂಸ್ಥೆಗಳಾಗಲಿ ಈ ಸಮುದಾಯದ ವಯಸ್ಕರರಿಗೆಯಾಗಲಿ, ಅರ್ಧಕ್ಕೆ ಶಾಲೆ ಬಿಟ್ಟಂತ ಮಕ್ಕಳ ಬಗ್ಗೆ ಯಾಗಲಿ ಕಾಳಜಿ ವಹಿಸುವುದಿಲ್ಲ. ಇದಕ್ಕೆ ಕಾರಣ ಇವರು ವಾಸಿಸುವ ಕೇರಿಗಳು, ಸ್ಥಳಗಳು ಗಲೀಜಾಗಿದ್ದು ಕೊಳಚೆ ಪ್ರದೇಶದಂತಿರುವುದರಿಂದ ಅಲ್ಲಿ ಶಿಕ್ಷಕರು ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳಲು ಬರಲು ಇಷ್ಟ ಪಡುವುದಿಲ್ಲ. ಒಂದು ವೇಳೆ ಬಂದರು ಮಕ್ಕಳು ಸ್ಲಾಟರ್ ಹೌಸ್‌ಲ್ಲೋ, ಮಟನ್ ಮಾರ್ಕೆಟ್‌ನಲ್ಲೋ ರಕ್ತ, ತಲೆಕಾಲು ಮಾರುವುದು, ಕುರಿಯ ಕರುಳಿನ ಅವಯವಗಳನ್ನು ಮಾರುತ್ತ ಪುಡಿಗಾಸನ್ನು ಎಣಿಸುವತ್ತ ಖುಷಿಯಲ್ಲಿ ಮಗ್ನರಾಗಿ ರುತ್ತಾರೆ. ಹೀಗಾಗಿ ಈ ಸಮುದಾಯಗಳ ಮಕ್ಕಳ ಬಗ್ಗೆ ಈ ಜನರ ಬಗ್ಗೆ ಸಮಾಜ ಒಂದು ನಿರ್ಲಕ್ಷ್ಯ ಭಾವನೆಯನ್ನು ತಾಳಿರುವುದು ಕಂಡುಬರುತ್ತದೆ. ಹಾಗೆಯೇ ಮನೆಯಲ್ಲಿ ಎಲ್ಲರೂ ಸೇರಿ ಉದ್ಯೋಗದಲ್ಲಿ ಭಾಗಿಯಾಗಿರುವುದರಿಂದ ಮಕ್ಕಳು ಸಹ ತಮ್ಮ ಒಲವನ್ನು ವಿದ್ಯಾಭ್ಯಾಸದಲ್ಲಿ ತೊಡಗಿಸುವಂತೆ ತಮ್ಮ ಗಮನ ಹರಿಸುವುದಿಲ್ಲ. ಹಾಗಾಗಿ ಈ ಎಲ್ಲಾ ಕಾರಣದಿಂದ ಈ ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿದಿವೆ ಎಂದು ಹೇಳಬಹುದು.

೫.೩. ರಾಜಕೀಯ ಜೀವನ

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಹಣವಂತ ಸಮೂಹಗಳಿಗೆ ಮಾತ್ರ ಅಧಿಕಾರ ಎಂಬ ಒಂದು ಅನುಶಾಸನ ಮೌಖಿಕ ಅರ್ಥವಂತಿಕೆಯಾಗಿ ಇಲ್ಲಿ ಉಳಿದು ಬಂದಿದೆ. ಹೀಗಾಗಿ ಕೆಳವರ್ಗದ ಜಾತಿಗಳಲ್ಲಿ ಜನಸಂಖ್ಯೆಯು ಕಡಿಮೆ ಇದ್ದು ಆರ್ಥಿಕ ಪರಿಸ್ಥಿತಿಯು ತುಂಬಾ ಹೀನಾಯ ಸ್ಥಿತಿಯಲ್ಲಿರುವುದ ರಿಂದ ಇವರ ರಾಜಕೀಯ ಜೀವನವನ್ನು ಅಧ್ಯಯನ ಮಾಡಿದರೆ ಈ ಸಮುದಾಯಗಳಿಗೆ ಸೌಲಭ್ಯ ಎಂದರೇನು? ಸರ್ಕಾರ ಎಂದರೇನು? ರಾಜಕೀಯ ಎಂದರೇನು? ಎಂಬುದನ್ನು ಅರ್ಥಮಾಡಿಕೊಳ್ಳಲು ಹೋಗದೆ ತಮ್ಮ ದಿನನಿತ್ಯದ ಸಾಂಸಾರಿಕ ಹೊಣೆಯನ್ನು ತೂಗಿಕೊಂಡು ಮುಂದೆ ನಡೆಯುವುದರಲ್ಲಿ ಇವರು ತೃಪ್ತರಾಗಿ ನಾಳಿನ ಚಿಂತೆ ಏಕೆ? ಎಂದು ಇದ್ದುದರಲ್ಲೆ ಜೀವನ ನಡೆಸುವ ಅರೆಹೊಟ್ಟೆಯಲ್ಲಿ ಜೀವನ ಸಾಗಿಸುವ ಹಲವು ಸಮುದಾಯಗಳನ್ನು ಇಂದು ನಾವು ಕಾಣಬಹುದು. ಇಂಥ ಪರಿಸ್ಥಿತಿಗೆ ಖಾಟಿಕ್ ಸಮುದಾಯವು ಹೊರತಾಗಿಲ್ಲ ಎಂದು ಹೇಳಬಹುದು. ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಸಮುದಾಯಕ್ಕೆ ಸೌಲಭ್ಯ ಸವಲತ್ತುಗಳು ಸಿಗಬೇಕೆಂದರೆ ಇವರು ತಮ್ಮ ಮತಗಳನ್ನು ಬಲಿಷ್ಠ ಜಾತಿಗಳಿಗೆ ಮಾರಬೇಕು, ಇಲ್ಲ ಸರ್ಕಾರ ಇವರ ಮೇಲೆ ಕರುಣೆಯನ್ನು ತೋರಬೇಕು. ಹಾಗಾದಾಗ ಮಾತ್ರ ಏನಾದರು ಅಲ್ಪಸ್ವಲ್ಪ ಸೌಲಭ್ಯ ಸಿಗಲು ಸಾಧ್ಯವೆಂದು ಹೇಳಬಹುದು.

ಹೀಗಾಗಿ ಕೆಳವರ್ಗ ಜಾತಿಗಳಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುವುದು ಭಾರತದ ಇಂದಿನ ಪರಿಸ್ಥಿತಿಯಲ್ಲಿ ಕಷ್ಟ ಸಾಧ್ಯದ ವಿಷಯವಾಗಿದೆ. ಈ ಕುರಿತು ರಾಮಮನೋಹರ ಲೋಹಿಯಾರವರು ಹೀಗೆ ತಿಳಿಸುತ್ತಾರೆ. "ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕಾಗಿದೆ. ಸಮಿತಿಗಳನ್ನು ರಚಿಸುವಾಗ ಶೂದ್ರ, ಹರಿಜನ ಮತ್ತು ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಅಗಸ, ಕ್ಷೌರಿಕ, ಗಾಣಿಕ, ಕಮ್ಮಾರ ಮತ್ತು ಇತರೆ ಹಿಂದುಳಿದ ಜಾತಿಗಳಲ್ಲಿ ನೂರಾರು ಬಗೆಯ ಸಮಸ್ಯೆಗಳಿವೆ. ಅವರ ಕೇರಿಗಳಿಗೆ ಒಳ್ಳೆಯ ರಸ್ತೆಗಳು, ಸೂಕ್ತ ಬೆಲೆಗೆ ಕಚ್ಚಾ ಸಾಮಾಗ್ರಿಗಳು ದೊರೆಯಬೇಕು, ಪೋಲೀಸರ ದಬ್ಬಾಳಿಕೆ ಇವರ ಮೇಲೆ ನಿಲ್ಲಬೇಕು, ಇವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿ ಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು"(ರಾಮ ಮನೋಹರ ಲೋಹಿಯಾ;೧೯೮೮:೧೭೫).

ಬಹುತೇಕ ನಿರ್ಲಕ್ಷಿತ ಜಾತಿ ಬುಡಕಟ್ಟುಗಳು ಭಾರತದಲ್ಲಿ ಇನ್ನೂ ಅನೇಕವಾಗಿವೆ. ಅವುಗಳು ಇರುವ ಕುರಿತು ಸರ್ಕಾರ ಗಮನ ಹರಿಸುತ್ತಿಲ್ಲ. ಅಂತಹ ನಿರ್ಭಾಗ್ಯ ಜಾತಿ ಬುಡಕಟ್ಟುಗಳು ಸ್ವತಃ ತಾವು ನಿರ್ಲಕ್ಷಿತರು ಎಂದು ಹೇಳಿಕೊಳ್ಳಲೂ ಗಂಟಲಿಲ್ಲದ ಅಸಹಾಯಕರಾಗಿದ್ದಾರೆ. ನಾಗರೀಕತೆಯ ಪ್ರಭಾವದಿಂದಾಗಿ ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವ ಸಮುದಾಯಗಳು ತಮ್ಮ ಮೂಲವೃತ್ತಿ ಬದುಕಿನ ಜಂಜಾಟಗಳಲ್ಲೆ ಕಾಲ ಕಳೆಯುತ್ತಿವೆ. ಈ ಸಮುದಾಯಗಳಿಗೆ ಅನಕ್ಷರತೆಯು ಬಹುದೊಡ್ಡ ಶಾಪವಾಗಿದೆ. ಮೊದಲೇ ಆರ್ಥಿಕವಾಗಿ ಹಿಂದುಳಿದ ಈ ಸಮುದಾಯ ಅನಕ್ಷರತೆಯಿಂದ ಇನ್ನಷ್ಟು ಹಿಂದುಳಿದು, ರಾಜಕೀಯ ಜ್ಞಾನ ಪಡೆಯುವಲ್ಲಿ ಎಷ್ಟು ಕಾಲ ಹಿಡಿಯುತ್ತದೆಯೋ?

ಇಂದು ಭಾರತದ ರಾಜಕೀಯ ಸ್ತಂಭ ನಿಂತಿರುವುದೇ ಜಾತಿಗಳ ಆಧಾರದ ಮೇಲೆ. ಜನಸಂಖ್ಯಾ ದೃಷ್ಟಿಯಿಂದ ಪ್ರಭಾವವಾಗಿರುವ ಬಹುಸಂಖ್ಯಾತ ಜಾತಿಗಳು ಸರ್ಕಾರದಿಂದ ಸಿಗುವ ಅಲ್ಪ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುತ್ತಿವೆ ಮತ್ತು ಅಂತಹ ಸಮುದಾಯದವರು ಇಂದು ತುಂಬಾ ಪ್ರಜ್ಞಾವಂತರಾಗಿದ್ದು ತಾವು 'ಮತಗಳ ಠೇವಣಿ' (Voting Bank) ಎಂಬುದನ್ನು ಸೂಚ್ಯವಾಗಿ ಆಡಳಿತಾರೂಢ ರಾಜಕೀಯ ಪಕ್ಷಗಳಿಗೆ ಎಚ್ಚರಿಕೆ ಕೊಡುವುದರ ಮೂಲಕ ತಮಗೆ ಬೇಕಾದ ಸೌಲಭ್ಯಗಳನ್ನು ಹೊಂದುವ ಗುಣಗಳನ್ನು ಪಡೆದಿವೆ.

ಲೋಹಿಯಾರವರು ಗುರುತಿಸಿರುವಂತೆ "ವೃತ್ತಿ ಮೂಲ ಸಮುದಾಯಗಳು ಜನಸಂಖ್ಯಾ ದೃಷ್ಟಿಯಿಂದ ತೀರಾ ಅಲ್ಪವಾಗಿರುವುದರ ಕಾರಣವಾಗಿ ಅವುಗಳನ್ನು ಆಡಳಿತಾರೂಢ ಸರ್ಕಾರಗಳು ಅಲಕ್ಷಿಸುವ ಅಪಾಯವಿರುವುದನ್ನು ಕಾಣಬಹುದಾಗಿದೆ". ಧ್ವನಿ ಕಳೆದುಕೊಂಡಿರುವ ಈ ಸಮುದಾಯಗಳು ಇಂದು ತನ್ನ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಸರ್ಕಾರದಿಂದ ಸೌಲಭ್ಯಗಳನ್ನು ಪಡೆಯಲು ಹಾತೊರೆಯುತ್ತಿವೆ.

ವಿದ್ಯಾಭ್ಯಾಸಕ್ಕಾಗಿ ಮೀಸಲಾತಿ ಹಾಗೂ ವೃತ್ತಿಯಲ್ಲಿ ಪಾಲು ಪಡೆಯುವಲ್ಲಿ ಈ ಸಮುದಾಯಗಳು ಪಡುತ್ತಿರುವ ಕಷ್ಟ ಹೇಳತೀರದ್ದಾಗಿದೆ. ಯಾವುದೇ ಎಂ.ಎಲ್.ಎ., ಎಂ.ಪಿ.ಗಳು ಈ ಸಮುದಾಯಗಳಲ್ಲಿ ಕಂಡುಬರುವುದಿಲ್ಲ. ಎಲ್ಲೋ ಒಂದು ಕಡೆ ಪುರಸಭೆಯಲ್ಲೋ, ಗ್ರಾಮಪಂಚಾಯತಿಗಳಲ್ಲೋ ಬೆರಳಣಿಕೆಯ ಸಂಖ್ಯೆಯಲ್ಲಿ ಒಬ್ಬರೊ ಇಬ್ಬರೊ ಸದಸ್ಯರಾಗಿ ಕಂಡುಬರುವವರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇವರು ಮುಂದುವರೆಯುವುದು ತುಂಬಾ ಕಷ್ಟವಾಗಿದೆ.

ಉತ್ತರ ಭಾರತದಲ್ಲಿ ಕೌನ್ಸಲರ್, ಎಂ.ಎಲ್.ಎ., ಎಂ.ಪಿಗಳಿಂದ, ಮುಖ್ಯಮಂತ್ರಿಗಳವರೆಗೆ ಈ ಸಮುದಾಯದವರು ತಮ್ಮ ಛಾಪನ್ನು ಮೂಡಿಸಿ ಅಲ್ಲಿ ಖಾಟಿಕ್ ಎಂದರೆ ಮಹಾನ್ ಶಕ್ತಿಯ ಹಾಗೆ ರಾರಾಜಿಸುತ್ತಿರುವಾಗ ದಕ್ಷಿಣದಲ್ಲಿರುವ ಈ ಬಡ ಬಂಧುಗಳು ತಮ್ಮ ಜೀವನ ಸಾಗಿಸಲು ನಿತ್ಯ ಯಾತನೆ ಅನುಭವಿಸುತ್ತಿರುವುದು ವಿಪರ್ಯಾಸವೇ ಸರಿ. ಉತ್ತರ ಭಾರತದ ಹಲವು ಪ್ರದೇಶ, ರಾಜ್ಯಗಳಲ್ಲಿ ಖಾಟಿಕ್ ಸಮುದಾಯವು ಪರಿಶಿಷ್ಟ ಜಾತಿಯಲ್ಲಿದ್ದು ಹಲವು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಮುಂದುವರೆಯುತ್ತಿರುವುದನ್ನು ನೋಡಿದರೆ ದಕ್ಷಿಣಕ್ಕೆ ಹಿಂದೂ ಅರಸರ ಆಸರೆಯನ್ನು ಬೇಡಿ ಬಂದ ಈ ಸಮುದಾಯಕ್ಕೆ ಸಿಕ್ಕಿದಾದರೂ ಏನು ಎಂಬ ಪ್ರಶ್ನೆ ಕಾಡದೇ ಇರದು. ಇಂತಹ ಪರಿಸ್ಥಿತಿಯಲ್ಲಿರುವ ಈ ಸಮುದಾಯಕ್ಕೆ ಪರಿಶಿಷ್ಟ ಜಾತಿಯ ಸವಲತ್ತು ಸಿಗಲೇಬೇಕು ಎಂದು ಹೇಳಬೇಕಾಗುತ್ತದೆ. ಹೀನಾಯ ವೃತ್ತಿಯನ್ನು ಮಾಡುವ ಅಸ್ಪೃಶ್ಯ ಸಮುದಾಯವಾಗಿರುವ ಈ ಸಮುದಾಯ ಸಮಾಜದಲ್ಲಿ ಇಂದಿಗೂ ನಿಂದನೆಗೆ ಗುರಿಯಾಗಿರುವುದು ಕಂಡುಬರುತ್ತಿದೆ. ಸಮಾಜದಲ್ಲಿ ನಿಜವಾಗಿಯೂ ತಮ್ಮ ಜಾತಿಯ ಹೆಸರಿನಿಂದಲೇ ಅವಮಾನಕ್ಕೊಳಗಾಗುತ್ತಿರುವ ಈ ಸಮುದಾಯ ರಾಜಕೀಯವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದುವರೆಯಲು ಪರಿಶಿಷ್ಟ ಪಂಗಡದಲ್ಲಿ ಈ ಖಾಟಿಕ್ ಸಮುದಾಯವನ್ನು ಸೇರಿಸುವುದು ಅತ್ಯಂತ ಮುಖ್ಯವಾದ ಕೆಲಸವಾಗಿದೆ.

ಶಿವಮೊಗ್ಗದಲ್ಲಿ ಸಿದ್ಧರಾಮಣ್ಣ, ಹರಿಹರದಲ್ಲಿ ರಾಮಚಂದ್ರಪ್ಪ ಕಲಾಲ್, ಕೊಪ್ಪಳದಲ್ಲಿ ಭಾರತ್ ಹೀಗೆ ಕರ್ನಾಟಕದಲ್ಲಿ ಮೂರು ಜನ ಮಾಜಿ ಕೌನ್ಸಲರುಗಳು ಈ ಖಾಟಿಕ್ ಸಮುದಾಯದಲ್ಲಿ ಕಂಡುಬರುತ್ತಾರೆ. ಇವರು ಹೇಳುವುದು ಇದನ್ನೇ ಸರ್ಕಾರ ಯಾವುದಾದರೂ ಸವಲತ್ತು ಕೊಡುವುದಿರಲಿ ನಮ್ಮ ಪೀಳಿಗೆಯು ವಿದ್ಯಾವಂತರಾಗಿ ಮುಂದುವರಿಯಲಿಕ್ಕೆ ಶಿಕ್ಷಣದಲ್ಲಿ ನಮಗೆ ಮೀಸಲಾತಿ, ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಿದರೆ ತುಂಬಾ ಸಹಾಯವಾಗುತ್ತದೆ ಹಾಗೂ ಅದರ ಅವಶ್ಯಕತೆಯೂ ಇದೆ. ಸರ್ಕಾರ ನಮ್ಮನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸುವುದರಿಂದ ನಮ್ಮ ಮುಂದಿನ ಪೀಳಿಗೆಯು ವಿದ್ಯಾವಂತರಾಗಿ ಶೈಕ್ಷಣಿಕ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂದುವರಿಯಲು ಸಾಧ್ಯ ಎಂಬುದನ್ನು ತಿಳಿಸುತ್ತಾರೆ.

ಇಡೀ ಕ್ಷೇತ್ರಕಾರ್ಯದಿಂದ ತಿಳಿದು ಬರುವುದೇನೆಂದರೆ ರಾಜಕೀಯದಲ್ಲಿ ಖಾಟಿಕರ ಪಾತ್ರ ಕೇವಲ

ಹಣವಂತ ಮೇಲ್ಜಾತಿಯವರು ಹೇಳುವ ಪಕ್ಷ ಅಥವಾ ವ್ಯಕ್ತಿಗೆ ಮತ ಚಲಾಯಿಸುವ ಮಟ್ಟಕ್ಕೆ ಸೀಮಿತಗೊಂಡಿದೆ. ಹಾಗೆ ಜಿಲ್ಲೆ ಮತ್ತು ತಾಲೂಕು ಮಟ್ಟದ ರಾಜಕೀಯ ಕ್ಷೇತ್ರದಲ್ಲಿಯೂ ಇವರ ಪಾತ್ರ ಶೂನ್ಯವಾಗಿರುವುದನ್ನು ಕಾಣಬಹುದು. ಯಾವುದೊ ಒಂದೆರಡು ಪ್ರದೇಶಗಳಲ್ಲಿ ಜನಸಂಖ್ಯೆ ಸ್ಥಿತಿಯು ಹೆಚ್ಚಾಗಿರುವ ಕಡೆಯಲ್ಲಿ ಇವರ ಪುರಸಭೆ ಹಾಗೂ ಗ್ರಾಮಪಂಚಾಯತಿಗಳಲ್ಲಿ ಸಣ್ಣ ಪುಟ್ಟ ಸ್ಥಾನಗಳನ್ನು ಪಡೆದಿರುವುದು ಕಂಡರೆ, ಮತ್ಯಾವುದರಲ್ಲಿ ಇವರು ಪ್ರವೇಶವಿಲ್ಲದಿರುವುದು ಕಂಡುಬರುತ್ತದೆ. ಆದರೆ ಈ ಖಾಟಿಕ್ ಸಮುದಾಯದವರಲ್ಲಿ ಬಡತನ, ಅನಕ್ಷರತೆಗಳು ಹೋಗುವವರೆಗೂ ಇವರ ಸ್ಥಿತಿ ಚಿಂತಾಜನಕವೆಂದೆನಿಸುತ್ತದೆ. ಇವರು ಸಮಾಜದ ಮುಖ್ಯವಾಹಿನಿಯಲ್ಲಿ ಬರಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಮತ್ತು ಸ್ವಯಂ ಸೇವಾ ಸಂಘಗಳು ನಿಸ್ವಾರ್ಥವಾಗಿ ಕಾರ್ಯ ನಡೆಸಿದಲ್ಲಿ ಮಾತ್ರ ಈ ಖಾಟಿಕ್ ಸಮುದಾಯದಂತಹ ಕನಿಷ್ಟ ಮಟ್ಟದ ಕೆಳ ಸಮುದಾಯಗಳು ತಮ್ಮ ಕಾಲಮೇಲೆ ತಾವು ನಿಂತು, ಧ್ವನಿ ತೆರೆದು ತಮ್ಮ ಹಕ್ಕುಗಳನ್ನು ಕೇಳಲು ಶಕ್ತವಾಗುತ್ತವೆ ಎಂದೆನಿಸುತ್ತದೆ.

ಅಧ್ಯಾಯ - ೬

ಭಾಷೆ ಮತ್ತು ಜನಪದ ಸಾಹಿತ್ಯ

ಭಾಷೆ

ಖಾಟಿಕ್‌ರ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಈ ಸಮುದಾಯದ ಭಾಷೆಯ ಚರ್ಚೆಯನ್ನು ಅಗತ್ಯವಾಗಿ ಮಾಡಬೇಕಾಗುತ್ತದೆ. ಏಕೆಂದರೆ ಒಂದು ಸಮುದಾಯದ ಭಾಷೆಯು ಆ ಸಮುದಾಯದ ಸಾಮಾಜಿಕ ಸಾಂಸ್ಕೃತಿಕ ಸ್ಥಾನಮಾನಗಳನ್ನು ತಿಳಿಸುತ್ತದೆ. ಖಾಟಿಕರು ಮೂಲತಃ ಉತ್ತರದಿಂದ ವಲಸೆ ಬಂದವರು. ಇವರ ಮಾತೃಭಾಷೆ ಹಿಂದಿಯಾಗಿದೆ. ಕರ್ನಾಟಕದಲ್ಲಿ ಬದುಕುತ್ತಿರುವ ಈ ಸಮುದಾಯದವರು ತಮ್ಮ ಸುತ್ತಲೂ ವ್ಯವಹಾರಿಕ ಭಾಷೆಯಾಗಿ ಕನ್ನಡ ಭಾಷೆಯನ್ನು ಬಳಸುತ್ತಾರೆ. ಕೆಲವರು ಮನೆಯಲ್ಲಿ ಹಿಂದಿ ಭಾಷೆಯ ಜೊತೆ ಕನ್ನಡವನ್ನು ಬಳಸುತ್ತಾರೆ. ಹಾಗೆಯೇ ಆಂಧ್ರದ ಹಾಗೂ ಕರ್ನಾಟಕದ ಗಡಿ ಪ್ರದೇಶಗಳಾದ ಬಳ್ಳಾರಿ, ಹೊಸಪೇಟೆ ಈ ಭಾಗಗಳಲ್ಲಿ ತೆಲುಗು ಭಾಷೆಯನ್ನು, ಹುಬ್ಬಳ್ಳಿ, ಧಾರವಾಡ, ಗದಗ ಈ ಭಾಗಗಳಲ್ಲಿ ಮರಾಠಿ ಭಾಷೆ, ಬೆಂಗಳೂರು, ಮೈಸೂರು ಕಡೆಯಲ್ಲಿ ತಮಿಳು, ಗುಲ್ಬರ್ಗಾ, ಬಿಜಾಪುರ ಭಾಗಗಳಲ್ಲಿ ಈ ಸಮುದಾಯದವರ ಮೇಲೆ ಉರ್ದು ಮಿಶ್ರಿತ ಕನ್ನಡ, ಹಿಂದಿ, ಹೀಗೆ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿರುವ ಭಾಷೆಗಳು ಈ ಸಮುದಾಯದವರ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ ಇವರು ಆಯಾ ಪ್ರಾದೇಶಿಕ ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಮತ್ತು ಮುಖ್ಯವಾಗಿ ಉದ್ಯೋಗದ ಸಂದರ್ಭದಲ್ಲಿ ವ್ಯಾಪಾರಿಗಳು ತಮ್ಮ ಗ್ರಾಹಕರಿಂದಲೂ ಹಲವಾರು ಭಾಷೆಗಳನ್ನು ಕಲಿಯುತ್ತಾರೆ ಮತ್ತು ವ್ಯವಹಾರಕ್ಕೆ ಸಂಬಂಧಿಸಿದಂತೆ ಹಲವು ಸಮುದಾಯದ ಗ್ರಾಹಕರು ಇವರಲ್ಲಿ ಬರುವುದರಿಂದ ಇವರು ಹಲವು ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಕೆಲವೊಮ್ಮೆ ವ್ಯವಹಾರಕ್ಕೆ ಎಷ್ಟು ಬೇಕು ಅಷ್ಟೇ ಭಾಷೆ ಕಲಿತಿರುವವರನ್ನು ಕಾಣಬಹುದಾಗಿದೆ.

ನಮ್ಮ ಸುತ್ತಲೂ ಇರುವ ಕೆಲವು ಇತರ ಸಮುದಾಯದವರನ್ನು ನೋಡಿದರೆ ಅವರು ಇಲ್ಲಿಗೆ ವ್ಯಾಪಾರಕ್ಕಾಗಿ ಬಂದಿರುವುದಾಗಿ ತಿಳಿದು ಬರುತ್ತದೆ. ಅವರ ಭಾಷೆಯನ್ನು ಗಮನಿಸಿದರೆ ಅವರು ಇಲ್ಲಿಯ ಭಾಷೆಗಳನ್ನು ಕಲಿಯಲು ಇಷ್ಟಪಡುವುದಿಲ್ಲ. ಇದಕ್ಕೆ ಕಾರಣ ಅವರು ಮಾಡುವ ವ್ಯಾಪಾರವೇ ಕಾರಣವೆಂದು ಹೇಳಬಹುದು. ಮುಖ್ಯವಾಗಿ ಮಾರ್ವಾಡಿಗಳನ್ನು ಗಮನಿಸಿದಾಗ ಈ ಮಾತು ಸ್ಪಷ್ಟ

ವೆನಿಸುತ್ತದೆ. ಏಕೆಂದರೆ ಇವರು ಬೆಳ್ಳಿ, ಬಂಗಾರದ ವ್ಯಾಪಾರ, ಬಟ್ಟೆ ವ್ಯಾಪಾರದಲ್ಲಿ ನಿರತರಾಗಿರುತ್ತಾರೆ. ಜನರಿಗೆ ಬೆಳ್ಳಿ, ಬಂಗಾರ, ಬಟ್ಟೆಗಳು ಅವಶ್ಯಕವಾಗಿ ಬೇಕಾಗಿರುವುದರಿಂದ ಅವರಾಗಿ ಹೋಗಿ ದುಡ್ಡು ಕೊಟ್ಟು ತಮಗೆ ಬೇಕಾದ ವಸ್ತುಗಳನ್ನು ಕೊಂಡು ತರುತ್ತಾರೆ. ಇಂಥ ಸಂದರ್ಭದಲ್ಲಿ ವ್ಯಾಪಾರಗಾರರಿಗೆ ಭಾಷೆಯ ಅವಶ್ಯಕತೆ ಇರುವುದಿಲ್ಲ. ಅವರು ಅಲ್ಪ ಸ್ವಲ್ಪ ಮಾತನಾಡಿ ವ್ಯವಹಾರ ಮುಗಿಸುತ್ತಾರೆ. ಆದರೆ ಖಾಟಿಕ್ ಸಮುದಾಯದವರು ಸಣ್ಣಪುಟ್ಟ ಉದ್ಯೋಗ ಮಾಡುವುದರಿಂದ ಮತ್ತು ಇವರು ಮಾರುವ ವಸ್ತು ಬಹುಬೇಗ ಕೆಡುವುದರಿಂದ ಈ ವ್ಯಾಪಾರದ ಸಂದರ್ಭದಲ್ಲಿ ಇವರಲ್ಲಿ ಬರುವ ಗಿರಾಕಿಗಳು ಸಹ ವಿವಿಧ ಸಮುದಾಯಕ್ಕೆ ಸೇರಿದವರಾಗಿದ್ದು ಈ ಸಮುದಾಯದವರೊಂದಿಗೆ ನಿಕಟ ಸಂಪರ್ಕವನ್ನು ಅಂದರೆ ಒಳ್ಳೆಯ ಬಾಂಧವ್ಯವನ್ನಿಟ್ಟು ಕೊಂಡಿರುತ್ತಾರೆ. ಜೊತೆಗೆ ಗಿರಾಕಿಗಳ ಭಾಷೆಯಲ್ಲೆ ಮಾತನಾಡಿದರೆ ಗಿರಾಕಿಗಳು ಬರುತ್ತಾರೆ. ಇಲ್ಲದಿದ್ದರೆ ಬೇರೆ ಕಡೆ ಹೋಗುತ್ತಾರೆ. ಆದರೆ ಬೆಳ್ಳಿ ಬಂಗಾರದಂಥ ವ್ಯಾಪಾರದಲ್ಲಿ ಗಿರಾಕಿಗಳು ತಮಗೆ ಭಾಷೆ ಗೊತ್ತಾಗದಿದ್ದರೂ ಅಂಗಡಿಯವರ ಭಾಷೆ ಮಾತನಾಡಲು ಹಾತೊರೆಯುತ್ತಾರೆ. ಹಾಗಾಗಿ ಮುಖ್ಯವಾಗಿ ವ್ಯಾಪಾರದ ಸಂದರ್ಭಕ್ಕೆ ತಕ್ಕಂತೆ ಹಲವು ಭಾಷೆಗಳನ್ನು ಇವರು ಕಲಿಯಲೇ ಬೇಕಾಗಿರುವುದರಿಂದ ಇವರಿಗೆ ಹಲವು ಭಾಷೆಗಳನ್ನು ಕಲಿಯುವ ಅನಿವಾರ್ಯತೆಯೂ ಇದೆ ಎಂದು ಹೇಳಬಹುದು.

ಇವರ ಸಾಹಿತ್ಯವನ್ನು ಗಮನಿಸಿದರೆ ಅವರ ಸಮಗ್ರ ಜೀವನ ವಿಧಾನವನ್ನು ಅವಲೋಕಿಸಿದರೆ ಹಿಂದಿ ಭಾಷೆಯು ಇವರಲ್ಲಿ ತುಂಬಾ ಪ್ರಭಾವಿಸಿದೆ. ಕೆಲವೊಮ್ಮೆ ಕನ್ನಡ ಭಾಷೆಯು ಈ ಸಮುದಾಯಕ್ಕೆ ತುಂಬಾ ಹತ್ತಿರವಾಗಿ ಪ್ರಭಾವಿಸಿರುವಂತ ಸಂದರ್ಭದಲ್ಲಿಯೂ, ಮೂಲ ಸಂಸ್ಕೃತಿಯ ಛಾಯೆಯಾಗಿ ಇವರ ಮದುವೆಯ ವಿವಿಧ ಆಚರಣೆಗಳಲ್ಲಿ, ಇತರ ಕಾರ್ಯಕ್ರಮಗಳಲ್ಲೂ ಇವರು ಹಿಂದಿ ಹಾಡುಗಳನ್ನು ಹಾಡುತ್ತಾರೆ. ಹಾಗೆಯೇ ತನ್ನ ಸುತ್ತಲೂ ಇತರ ಸಮುದಾಯದವರ ಸಂಪರ್ಕದಿಂದಾಗಿ ಕನ್ನಡ ಭಾಷೆಯು ಇವರಿಗೆ ಪ್ರಭಾವಿಸಿರುವುದರಿಂದ ಇವರು ಕನ್ನಡ ಹಾಡುಗಳನ್ನು, ಕಥೆಗಳನ್ನು ಒಟ್ಟಾಗಿ ತನ್ನ ಸುತ್ತಲಿನ ಜನಪದ ಸಾಹಿತ್ಯವನ್ನು ಬಳಸಿಕೊಳ್ಳುತ್ತಾರೆ.

ಈ ಸಮುದಾಯದವರು ಮಾತನಾಡುವ ಹಿಂದಿ ಭಾಷೆಯು ಉರ್ದು ಮಿಶ್ರಿತವಾಗಿರುವುದು ಕಂಡುಬರುತ್ತದೆ. ಯಾಕೆಂದರೆ ಇವರು ವಾಸಿಸುವ ಪರಿಸರವು ಇದಕ್ಕೆ ಕಾರಣವಾಗಿದೆ. ಹೆಚ್ಚಾಗಿ ಮುಸ್ಲಿಂ ಜನ ಸಮುದಾಯ ವಾಸಿಸುವ ಕೇರಿಗಳ ಪಕ್ಕ ಇವರ ಕೇರಿಗಳು ಕಂಡುಬರುತ್ತವೆ ಮತ್ತು ಉರ್ದು, ಹಿಂದಿ ಭಾಷೆಗೆ ಹತ್ತಿರವಾಗಿರುವಂತ ಭಾಷೆಯಾಗಿರುವುದರಿಂದ ಸಹಜವಾಗಿ ಪ್ರಭಾವಿಸಿದ್ದಾಗಿದೆ. ಕೆಲವರು ಸ್ಪಷ್ಟವಾಗಿ ಮೂಲ ಹಿಂದಿಯನ್ನೇ ಮಾತನಾಡುತ್ತಾರೆ.

ಖಾಟಿಕ್ ಸಮುದಾಯದವರ ಭಾಷೆಯನ್ನು ಕುರಿತು ಚರ್ಚಿಸುವಾಗ ಇವರು ವ್ಯಾಪಾರದ ಸಂದರ್ಭದಲ್ಲಿ ಮಾತನಾಡುವ ಗೌಪ್ಯಭಾಷೆಯನ್ನು ಹೇಳಲೇಬೇಕಾಗುತ್ತದೆ. ಹಿಂದೆ ಖಾಟಿಕ್‌ರ ವೃತ್ತಿಯನ್ನು

ಕುರಿತು ಚರ್ಚಿಸುವಾಗ ಈ ಭಾಷೆಯ ಬಗ್ಗೆ ಚರ್ಚಿಸಿದರೂ, ಭಾಷೆಗೆ ಸಂಬಂಧಿಸಿದ ಈ ಅಧ್ಯಾಯದಲ್ಲಿ ಅದರ ಕುರಿತು ಇನ್ನಷ್ಟು ಮಾಹಿತಿಯನ್ನು ಕೊಡಬಹುದಾಗಿದೆ. ಮುಖ್ಯವಾಗಿ ವ್ಯಾಪಾರದ ಸಂದರ್ಭದಲ್ಲಿ ಅಂದರೆ ಈ ಸಮುದಾಯದವರು ಕುರಿ ಸಂತೆಗಳಿಗೆ ತೆರಳಿದಾಗ ಕುರಿಗಳನ್ನು ಕೊಳ್ಳುವಾಗ ಅವರವರಲ್ಲಿ ಅಂದರೆ ತಮ್ಮ ಸಮುದಾಯದ ವ್ಯಕ್ತಿಗಳಲ್ಲಿ ಕುರಿಗಳ ಬೆಲೆಯನ್ನು ಕುರಿತು, ಅದರ ಗುಣ ಲಕ್ಷಣ ಅಂದರೆ ಕುರಿಯು ಕೊಬ್ಬಿದ್ದು, ಒಳ್ಳೆ ತೂಕವನ್ನು ಹೊಂದಿದೆಯೋ ಅಥವಾ ಜಡ್ಡಿನಿಂದ ಅನಾರೋಗ್ಯವಾಗಿ ಕಡಿಮೆ ತೂಕವನ್ನು ಹೊಂದಿದೆಯೋ ಎಂದು ಹತ್ತು ಹಲವು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಈ ಗೌಪ್ಯಭಾಷೆಯನ್ನು ಬಳಸುತ್ತಾರೆ. ಈ ಭಾಷೆ ಈ ಸಮುದಾಯದವರಿಗೆ ಮತ್ತು ಮುಸಲ್ಮಾನ ವ್ಯಾಪಾರಸ್ಥರಿಗೆ ಸಹ ತಿಳಿಯುತ್ತದೆ. ಏಕೆಂದರೆ ಈ ವ್ಯಾಪಾರ ಮಾಡುವವರಿಗೆ ಮಾತ್ರ ಈ ಭಾಷೆ ತಿಳಿದಿರುತ್ತದೆ. ಹಾಗೆಯೇ ಮಟನ್ ಮಾರ್ಕೆಟ್‌ನಲ್ಲಿಯೂ ಇವರು ಮಾಂಸ ಚೆನ್ನಾಗಿದೆಯೋ ಎಂಬುದನ್ನು ಹೇಳಲು ಇಲ್ಲವೆ ಗಿರಾಕಿಯನ್ನು ಕುರಿತು ಅವನು ಕೊಳ್ಳುವ ಮಾಂಸದ ಬಗ್ಗೆ ಇತರರಿಗೆ ಅಂದರೆ ಮಾಂಸವನ್ನು ತುಂಡರಿಸುವ ಯುವಕರಿಗೆ ಕುರಿತು ಏನಾದರು ಹೇಳುವಂತ ಸಂದರ್ಭದಲ್ಲಿ ಗೌಪ್ಯ ಭಾಷೆಯನ್ನು ಬಳಸುವುದನ್ನು ಕಾಣಬಹುದು.

ಇವರು ಸಹ ಈ ಸಮುದಾಯದವರೊಂದಿಗೆ ಮಟನ್ ಮಾರ್ಕೆಟ್‌ನಲ್ಲಿ ವ್ಯಾಪಾರ ಮಾಡುವುದರಿಂದ ಇವರಿಂದ ಈ ಭಾಷೆಯನ್ನು ಕಲಿತಿರುತ್ತಾರೆ. ಹಾಗಾಗಿ ಈ ಭಾಷೆಯನ್ನು ಕುರಿತು ಈ ಸಮುದಾಯದವರಿಗೆ ನೀವು ಎಲ್ಲಿಂದ ಈ ಭಾಷೆಯನ್ನು ಕಲಿತಿರುವಿರಿ ಎಂದು ಪ್ರಶ್ನಿಸಿದರೆ, ಇದು ನಮ್ಮ ಹಿರಿಯರ ತಲೆ ಮಾರಿನಿಂದಲೂ ಬಂದಂತ ಭಾಷೆಯಾಗಿದೆ ಎಂದಷ್ಟೇ ತಿಳಿಸುತ್ತಾರೆ. ನಮ್ಮಿಂದಲೇ ಮುಸ್ಲಿಂ ವ್ಯಾಪಾರಿಗಳು ಈ ಭಾಷೆಯನ್ನು ಕಲಿತಿದ್ದಾರೆ ಎಂದು ಹೇಳುತ್ತಾರೆ.

ಕೆ.ಎಸ್. ಸಿಂಗ್ ಅವರ ಪಿಪುಲ್ಸ್ ಆಫ್ ಇಂಡಿಯಾ ಪುಸ್ತಕದಲ್ಲಿ ಇವರಾಡುವ ಈ ಭಾಷೆ ಯನ್ನು ದಖ್ಖನಿ ಭಾಷೆ ಎಂದು ಗುರುತಿಸಲಾಗಿದೆ. ಇವರಾಡುವ ಈ ಗೌಪ್ಯಭಾಷೆಯನ್ನು ದಿನನಿತ್ಯದ ಜೀವನದಲ್ಲೂ ಇವರು ಮಾತನಾಡುತ್ತಾರೆ. ಅಂದರೆ ಮುಖ್ಯವಾಗಿ ಇತರರಿಗೆ ತಿಳಿಯಬಾರದೆಂದು ತಮ್ಮ ತಮ್ಮಲ್ಲೆ ಮಾತನಾಡಿಕೊಳ್ಳುವುದು ಕಂಡುಬರುತ್ತದೆ. ಹಿಂದಿ ಭಾಷೆಯನ್ನಾಡುವ ಇತರ ಸಮುದಾಯಗಳಿಗೂ ಈ ಭಾಷೆ ಅಂದರೆ ಖಾಟಿಕ್ ಸಮುದಾಯದವರು ಮಾತನಾಡುವ ಗೌಪ್ಯಭಾಷೆಯು ತಿಳಿಯುವುದಿಲ್ಲ. ಇವರಾಡುವ ಗೌಪ್ಯಭಾಷೆಯ ಕೆಲವು ವಾಕ್ಯಗಳು ಇಂತಿವೆ.

ಗೌಪ್ಯಭಾಷೆ	ಹಿಂದಿ ಭಾಷೆ	ಕನ್ನಡ ಭಾಷೆ
ಕಬ್ ಆಸುಲ್ಯಾ	ಕಬ್ ಆಯಾ	ಯಾವಾಗ ಬಂದ
ಬಾಲಿಂಗೆಕು ಮನಾರ್	ಲಡಕೆ ಕೋ ದೇಖ್	ಹುಡುಗನಿಗೆ ನೋಡು
ಧಡೆ ಕೈಲೆಕು ಭಣಕ್	ದಸ್‌ರೂಪೈಕು ಪೂಚ್	ಹತ್ತು ರೂಪಾಯಿಗೆ ಕೇಳು

ಐದೆ ಬಾಲಿಂಗೆಕು ಉಕುಣಾಸುಲ್	ಖರಾಬ್ ಆದಮಿ ಹೈ ಭೇಜ್ ದೋ	ಕೆಟ್ಟ ಮನುಷ್ಯ ಇವನಿಗೆ ಜಾಗ ಖಾಲಿಮಾಡಿಸು
ಗೌಣೆ ಕೈದಿ ಕ್ಯಾ ನೈ	ಪೈಸೆ ದಿಯ ಯಾ ನಹೀ	ದುಡ್ಡು ಕೊಟ್ಟಿದ್ದಾನೆಯೆ ಇಲ್ಲವೆ
ಸೂಡ್‌ತಾ ಕ್ಯಾಪೂಜ್‌ಸುಲ್	ಖಾನಾ ಖಾಯೆಗಾ ಕ್ಯಾ ಪೂಚ್	ಊಟ ಮಾಡುತ್ತಾನೆಯೇ ಕೇಳು
ಲಾಲ್‌ಬಾಲಿಂಗೆ ಗೌಣೆ ಪೂಚತೆ	ಪೋಲೀಸ್ ಪೈಸೆ ಪೂಚತೆ ಹೈ	ಪೋಲಿಸರು ಹಣ ಕೇಳುತ್ತಾರೆ
ಚಿಟಾಲೆ ಹೈತೋ ಗೌಣೆ ಕೈದ್-ಕೋ ಉಕ್‌ಣಾಲೇ	ಅಚ್ಛಾ ಹೈ ತೋ ಪೈಸೆ-ದೇಕೆ ಲೇಲೆ ನಾ	ಚೆನ್ನಾಗಿದ್ದಾರೆ ದುಡ್ಡು ಕೊಟ್ಟು-ಕಳಿಸು
ಐದೆ ಕು ಹಡಸ್‌ಸುಲ್	ಖರಾಬ್/ಬುರಾ ಆದಮಿ ಹೈ ಮಾರೋ	ಕೆಟ್ಟ ಮನುಷ್ಯ ಹೊಡೆಯಿರಿ
ಬಿಷಾರ್ ಗೌಣೆ ಹೈ ಉಕಾಣಾಲೆ	ಬಹುತ್ ಪೈಸೆ ಹೈ ಉಠಾಲೋ	ತುಂಬಾ ಹಣವಿದೆ ಎತ್ತುಕೊಳ್ಳಿ
ಕಾ ಜಾ ಸುಲ್ಯಾ ಕೀ ಮಾಲುಮ್ ನೈ	ಕಹಾಪರ್‌ಗಯಾ ಹೈ ಪತಾ ನಹೀ	ಎಲ್ಲಿ ಹೋಗಿದ್ದಾನೋ ತಿಳಿಯುತ್ತಿಲ್ಲ

ಜನಪದ ಸಾಹಿತ್ಯ

ಸಾಹಿತ್ಯದ ಮೂಲಕ ಒಂದು ಸಮುದಾಯದ ಜೀವನ ವಿಧಾನವನ್ನು ಅರಿಯಬಹುದಾಗಿದೆ. ಸಾಹಿತ್ಯ ಎನ್ನುವುದು ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡ ಬದುಕಿನ ವ್ಯಾಖ್ಯಾನವೇ ಆಗಿದೆ. ಸಾಹಿತ್ಯಕ್ಕೂ ನಾವು ಬದುಕುವ ಪರಿಸರಕ್ಕೂ ಒಂದು ಬಗೆಯ ಸಂಬಂಧ ಇದ್ದೇ ಇರುತ್ತದೆ. ಸಮಾಜದಲ್ಲಿ ಸಂಭವಿಸುವ ಘಟನೆಗಳೇ ಸಾಹಿತ್ಯದ ಮುಖ್ಯ ಆಕರ. ಸಾಹಿತ್ಯ ಸಮಾಜದ ಪ್ರತಿನಿಧೀಕರಣದ ಕನ್ನಡಿಯಾಗಿದೆ. ಹಾಗಾಗಿ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಸಾಮಾಜಿಕ ಚಿತ್ರಣಕ್ಕೂ ಮತ್ತು ವಾಸ್ತವಿಕ ಸಮಾಜದ ಸ್ವರೂಪಕ್ಕೂ ಸಾಮ್ಯತೆಗಳಿರುವುದು ಕಂಡುಬರುತ್ತದೆ. ಕಾರಣ ಸಾಹಿತ್ಯ ಎಂಬುದು ಸಮಾಜವನ್ನು ಹೊರತುಪಡಿಸಿದ ಸಂಗತಿ ಏನಲ್ಲ. ಹಾಗಾಗಿ ಸಾಹಿತ್ಯದ ಮೂಲಕ ಸಾಮಾಜಿಕ ವಾಸ್ತವಿಕತೆಯನ್ನು ಅರಿಯಬಹುದಾಗಿದೆ.

ಜನರ ಸಾಂಪ್ರದಾಯಿಕ ಮೌಲ್ಯಗಳನ್ನು ಕೊಂಡೊಯ್ಯುವ ವಾಹಕವಾದ ಸಾಹಿತ್ಯಿಕ ಆಕರಗಳ ಆಧಾರದ ಮೇಲೆ ಖಾಟಿಕರ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುತ್ತ ಅವರ ಜೀವನ ವಿಧಾನದ ಕೆಲವು ಒಳನೋಟಗಳನ್ನು ನೋಡುವ ಪ್ರಯತ್ನ ಇದಾಗಿದೆ.

ಸಾಹಿತ್ಯವನ್ನು ಶಿಷ್ಟ ಮತ್ತು ಜನಪದ ಎಂದು ವಿಭಾಗಿಸಿಕೊಂಡು ಬಂದ ಕ್ರಮ ನಮ್ಮಲ್ಲಿ ರೂಢಿಯಲ್ಲಿದೆ. ಈ ವಿಭಾಗೀಕರಣಗಳು ಏನೇ ಇದ್ದರೂ ಅಂತಿಮವಾಗಿ ಸಾಹಿತ್ಯ ಸಾಮಾಜಿಕ ರಚನೆಯೇ ಆಗಿದೆ. ಹಾಗಾಗಿ ಮೇಲೆ ಚರ್ಚಿಸಿದ ವಿಷಯಗಳೆಲ್ಲ ಶಿಷ್ಟ ಸಾಹಿತ್ಯಕ್ಕೂ, ಮೌಖಿಕ ಸಾಹಿತ್ಯಕ್ಕೂ ಅನ್ವಯಿಸುವಂತ ವಿಚಾರಗಳೇ ಆಗಿವೆ. ಆದರೆ ಈ ಅಧ್ಯಯನವನ್ನು ಜಾನಪದಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿರುವ ಕಾರಣ ಮೌಖಿಕ ಸಾಹಿತ್ಯದ ಕಡೆಗೆ ಮಾತ್ರ ಗಮನ ಹರಿಸಲಾಗಿದೆ.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಜನಪದ ಸಾಹಿತ್ಯ ಸಂಗ್ರಹದ ಕೆಲಸ ಸಾಕಷ್ಟಾಗಿದೆ. ಆದರೆ ಆ ಸಂಗ್ರಹಿತ ಪಠ್ಯಗಳನ್ನು ವಿಶ್ಲೇಷಿಸುವ ಮತ್ತು ನಿರ್ವಚಿಸುವ ಪ್ರಯತ್ನಗಳು ನಡೆದಿವೆಯಾದರೂ ತುಂಬಾ ವಿರಳ. ಅಕಾಡೆಮಿಕ್ ವಲಯದಲ್ಲಿ ಲಿಖಿತ ಆಕರಗಳಿಗೆ ದೊರೆತ ಆದ್ಯತೆ ಮತ್ತು ಮಾನ್ಯತೆಗಳು ಮೌಖಿಕ ಆಕರಗಳಿಗೆ ದೊರೆತಿಲ್ಲ. ಆದರೆ ಇತ್ತೀಚೆಗೆ ಮೌಖಿಕ ಆಕರಗಳು ಕೂಡಾ ಸಂಸ್ಕೃತಿಯ ವಾಹಕಗಳು ಎಂಬ ಸತ್ಯವನ್ನು ಮನಗಂಡಿರುವುದರಿಂದ ಯಾವುದೇ ಸಮುದಾಯದ ಸಂಸ್ಕೃತಿಯ ವಿಸ್ಮೃತಿಗಳನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಮೌಖಿಕ ಆಕರಗಳು ಮುಖ್ಯವೆನಿಸತೊಡಗಿವೆ. ಖಾಟಿಕರ ಸಾಹಿತ್ಯವನ್ನು ಪರಿಶೀಲಿಸುವ ಮುನ್ನ ಜನಪದ ಸಾಹಿತ್ಯವನ್ನು ಕುರಿತು ಒಂದಿಷ್ಟು ತಿಳಿಯೋಣ.

ಮೌಖಿಕ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಎಂದು ಕರೆಯಲ್ಪಡುವ ಸಾಹಿತ್ಯ ಜಾನಪದದ ಒಂದು ಪ್ರಕಾರ. ಜನಪದರಿಂದ ಮೌಖಿಕ ರೂಪದಲ್ಲಿ ರಚನೆಗೊಂಡ ಪ್ರಕಟಿತ ಅಥವಾ ಅಪ್ರಕಟಿತ ರೂಪದಲ್ಲಿರುವ ಸಾಹಿತ್ಯವು ಗಾದೆ, ಗೀತೆ, ಒಗಟು, ಒಡಪು, ಲಾವಣಿ, ಖಂಡಕಾವ್ಯ, ಮಹಾಕಾವ್ಯ, ಐತಿಹ್ಯ, ಪುರಾಣ ಹೀಗೆ ಮುಂತಾದ ರೂಪದಲ್ಲಿರುತ್ತದೆ. ಜನಪದ ಸಾಹಿತ್ಯ ಎಂಬುದು ಜನರ ನಿತ್ಯ ಜೀವನದ ನೋವು ನಲಿವಿನ ಸಂಗತಿಗಳನ್ನು ದಾಖಲಿಸಿಕೊಂಡ ಆಕರವೆ ಆಗಿದೆ. ಈ ಕುರಿತು ಅನೇಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದುಂಟು. ಹಾಗಾಗಿ ವಿದ್ವಾಂಸರ ವಲಯದಲ್ಲಿ ಜನಪದ ಸಾಹಿತ್ಯ ಕುರಿತಂತೆ ಇರುವ ವಿಚಾರಗಳನ್ನು ತಿಳಿಯಬಹುದು.

"ಜನಪದ ಸಾಹಿತ್ಯವೆಂದರೆ ಕೇವಲ ಹಾಡಲ್ಲ, ಅದರಲ್ಲಿ ದೇವರ ಧ್ಯಾನ, ಭಕ್ತಿ, ಚಿಂತನೆಯಷ್ಟೇ ಇರುವುದಿಲ್ಲ. ಧಾರ್ಮಿಕ ಆಚರಣೆ, ನಡೆ, ನುಡಿ, ಕಲೆ, ಸಾಹಿತ್ಯ, ಸಂಗೀತಗಳಲ್ಲದೆ ಅದು ಒಂದು ಜನಾಂಗದ ಸಮಗ್ರ ಜೀವನದ ಜೀವಂತ ಚಿತ್ರಣವಾಗಿದೆ. ಪ್ರತ್ಯೇಕವಾಗಿ ಮನಸ್ಸಿನಲ್ಲಿ ಮೂಡಿ ನಿಲ್ಲಬಲ್ಲ ಚಿತ್ರವಾಗಿದೆ. ಕರುಳ ತಂತಿಯನ್ನು ಮೀಟಬಲ್ಲ ನಾದ ಮಾಧುರ್ಯ ಅದರಲ್ಲಿ ಅಡಕವಾಗಿದೆ. ಜನ ಸಾಮಾನ್ಯರ ಅಂತರಾಳದಿಂದ ಹೊರ ಹೊಮ್ಮಿದ ಸಹಜ ಅನುಭವವಾಗಿದೆ. ಒಂದು ನಾಡಿನ ಜನಾಂಗದ ಸಂಸ್ಕೃತಿಯ ಸಮಗ್ರ ಚಿತ್ರಣಕ್ಕೆ ಹಿಡಿದ ಕನ್ನಡಿಯಾಗಿದೆ" (ಡಾ. ಅರ್ಜುನಗೊಳಸಂಗಿ; ೨೦೦೦:೧) ಎಂದಿದ್ದಾರೆ.

"ಜನಪದ ಸಾಹಿತ್ಯ ನಮ್ಮ ಬದುಕಿನ ಜೊತೆಗೆ ಹುಟ್ಟು ಪಡೆದಂತಹದ್ದು. ಬದುಕು ಬೇರೆ ಈ ಸಾಹಿತ್ಯ ಬೇರೆ ಅಲ್ಲ. ಬದುಕಿನ ಜೊತೆಗೆ ಸೃಷ್ಟಿಗೊಳ್ಳುವ ಮಾನವ ಬದುಕನ್ನೇ ದಾಖಲಿಸುವ ಕೆಲಸ ಈ ಸಾಹಿತ್ಯ ಮಾಡುತ್ತದೆ. ಹೀಗೆ ಬದುಕಿನ ಅಂಗವಾಗಿ ಬದುಕನ್ನು ದಾಖಲಿಸುವ ಕೆಲಸ ಮಾಡುವ ಇದು ಮಾನವ ಬದುಕಿನ ಬಹುದೊಡ್ಡ ಸಾಂಸ್ಕೃತಿಕ ಕೊಡುಗೆಯೇ ಆಗಿದೆ"(ಡಾ. ವೀರಣ್ಣ ದಂಡೆ;೨೦೦೧:೯೭) ಎಂದಿರುವರು. ಅಲ್ಲದೇ ಅವರು ಮುಂದುವರೆದು "ಮಾನವ ಬದುಕಿನ ಬಹುಮುಖ್ಯ ಶೋಧಗಳಲ್ಲಿ ಒಂದಾಗಿರುವ ಜನಪದ ಸಾಹಿತ್ಯಕ್ಕೆ ಸಹಜವಾಗಿಯೇ ಒಂದು ಖಚಿತವಾದ ಸಾಂಸ್ಕೃತಿಕ

ದೃಷ್ಟಿ ಇರಲು ಸಾಧ್ಯವಿದೆ. ಬದುಕಿನ ಜೊತೆಗೆ ಬೆರೆತುಕೊಂಡ ಈ ಸಾಹಿತ್ಯದ ದೃಷ್ಟಿಯನ್ನು ನಿಯಂತ್ರಿಸುವುದು ಸಹಜವಾಗಿಯೇ ಮಾನವ ಬದುಕೇ ಆಗಿರುತ್ತದೆ. ನಮ್ಮ ಬದುಕು ಏನಿದೆಯೋ, ಬದುಕು ಏನನ್ನು ಗ್ರಹಿಸಲು ಸಾಧ್ಯವೋ ಅದನ್ನೇ ಜನಪದ ಸಾಹಿತ್ಯ ಗ್ರಹಿಸಿಕೊಳ್ಳಲು ಸಾಧ್ಯ"(ಡಾ. ವೀರಣ್ಣ ದಂಡೆ;೨೦೦೧:೯೭) ಎಂದಿದ್ದಾರೆ.

"ಶಿಷ್ಟ ಸಾಹಿತ್ಯದಂತೆ ಜನಪದ ಸಾಹಿತ್ಯವು ಚಾರಿತ್ರಿಕ ಉತ್ಪಾದನೆಯಾಗಿದೆ. ಮಹಿಳಾ ಜನಪದ ಸಾಹಿತ್ಯವು ನಿರ್ದಿಷ್ಟವಲ್ಲದಿದ್ದರೂ ಸ್ಥೂಲವಾಗಿ ಚಾರಿತ್ರಿಕ ಸನ್ನಿವೇಶಗಳನ್ನು ಸಾಮಾಜಿಕ ನಂಬಿಕೆ ಆಚರಣೆಗಳ ಮೂಲಕ ಕಟ್ಟಿಕೊಡುತ್ತದೆ. ಜನಪದ ಸಾಹಿತ್ಯಕ್ಕೆ ಸಂವಹನಾ ಸ್ವರೂಪವಿದೆ. ಅದು ತಾನು ರೂಪುಗೊಂಡ ಹಾಗೂ ರೂಪುಗೊಳ್ಳುತ್ತಿರುವ ಸಾಂಸ್ಕೃತಿಕ ಪರಿಸರವನ್ನು ವಿವರಿಸುತ್ತದೆ. ಜನ ಸಾಮಾನ್ಯರ ಸಂಸ್ಕೃತಿಯ ವಾಹಕವಾದ ಜನಪದ ಸಾಹಿತ್ಯವು ಮಹಿಳೆಯರನ್ನು ಹಾಗೂ ಅವರ ಬದುಕನ್ನು ಹೇಗೆ ಪ್ರತಿನಿಧಿಕರಿಸಿದೆ ಎನ್ನುವುದನ್ನು ವಿಶ್ಲೇಷಿಸುವ ಜರೂರಿದೆ"(ಡಾ. ಶೈಲಜಾ ಹಿರೇಮಠ;೨೦೦೬:೫೯೩) ಎಂದಿದ್ದಾರೆ.

"ಜನಪದ ಸಂಸ್ಕೃತಿಯ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಬಹುಮುಖ್ಯವಾದದ್ದು ಜಗತ್ತಿನ ಬಹುತೇಕ ಎಲ್ಲ ಅನಕ್ಷರಸ್ಥ ಜನಸಮುದಾಯಗಳ ಹಾಗೂ ಶೋಷಿತ ಜನರ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಇರುವ ಏಕೈಕ ಮಾಧ್ಯಮವೆಂದರೆ ಕಂಠಸ್ಥ ಸ್ವರೂಪದಲ್ಲಿ ಹರಿದು ಬರುವ ಜನಪದ ಸಾಹಿತ್ಯವೇ ಆಗಿದೆ. ಈ ಸಾಹಿತ್ಯದ ಸೃಷ್ಠಿಯಲ್ಲಿ ಪುರುಷರಂತೆಯೇ ಸ್ತ್ರೀಯರೂ ಸಹ ತಲೆ ತಲೆಮಾರುಗಳಿಂದಲೂ ಸಮಾನವಾಗಿ ಭಾಗಹಿಸುತ್ತಾ ಬಂದಿದ್ದಾರೆ. ಅನಕ್ಷರತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದ ಕಾರಣವಾಗಿ ಬಹುತೇಕ ಹಿನ್ನೆಲೆಯಲ್ಲಿಯೇ ಉಳಿದ ಸ್ತ್ರೀ ಸಂವೇದನೆಗಳನ್ನು ತಿಳಿದುಕೊಳ್ಳಲು ಜನಪದ ಸಾಹಿತ್ಯ ವಿಶ್ವಾಸಾರ್ಹ ಮಾಹಿತಿಯ ಆಕರ"(ಡಾ. ಕೆ.ಆರ್. ಸಂಧ್ಯಾರೆಡ್ಡಿ;೨೦೦೦:೧) ಎಂದು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಸಾಹಿತ್ಯ ಎಲ್ಲಿಂದಲೋ ಉದ್ಭವಿಸಿದ್ದಲ್ಲ. ಜನಪದರು ತಮ್ಮ ಬದುಕಿನಲ್ಲಿ ಕಂಡುಂಡ ಅನುಭವವನ್ನು ಹಾಡಾಗಿಸಿದ್ದಾರೆ, ಕಥೆಯಾಗಿಸಿದ್ದಾರೆ, ಪುರಾಣವಾಗಿಸಿದ್ದಾರೆ ಇತ್ಯಾದಿ. ಹಾಗಾಗಿ ಜನಸಾಮಾನ್ಯರ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಪ್ರಮುಖವಾದದ್ದು. ಶಿಷ್ಟ ಸಾಹಿತ್ಯಕ್ಕಿಂತಲೂ ಭಿನ್ನವಾಗಿದ್ದು ಈ ಮೌಖಿಕ ಸಾಹಿತ್ಯದಲ್ಲಿ ಧ್ವನಿ ಇಲ್ಲದವರ ಧ್ವನಿಯ ಆಲಾಪನೆಗಳು ಕೇಳಿಬರುತ್ತವೆ. ಬಹುಪಾಲು ಅನಕ್ಷರಸ್ಥ ಜನರು, ದುಡಿಯುವ ಜನರು ಹೇಳಿಕೊಂಡ ಸಾಹಿತ್ಯವೇ ಮೌಖಿಕ ಸಾಹಿತ್ಯವಾಗಿದ್ದರಿಂದ ಅವರೇ ಹೇಳಿಕೊಂಡ ಈ ಸಾಹಿತ್ಯದಲ್ಲಿ ಅವರ ಬದುಕಿನ ಹತ್ತು ಹಲವು ಸಂಗತಿಗಳು ಹಾಸುಹೊಕ್ಕಾಗಿರುವುದರಿಂದ ಜನ ಸಾಮಾನ್ಯರ ಬದುಕಿನ ಬಗೆಗೆ ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಮೌಖಿಕ ಆಕರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಒಂದು ಸಮುದಾಯದ ಅಧ್ಯಯನದಲ್ಲಿ ಅವರ ಮೌಖಿಕ ಸಾಹಿತ್ಯದ ಪಾತ್ರವು ಮುಖ್ಯವಾಗುತ್ತದೆ.

ಖಾಟಿಕರ ಸಾಹಿತ್ಯದಲ್ಲಿ ಬರುವ ಹಾಡುಗಳು, ಗಾದೆಗಳು, ಒಡಪು, ಕಥೆ, ಒಗಟುಗಳನ್ನು ಇಲ್ಲಿ ಅವಲೋಕಿಸುತ್ತ ಅವರ ಜೀವನ ಚಿತ್ರಣವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಮದುವೆಯ ಹಾಡುಗಳನ್ನು ಗಮನಿಸಿದರೆ ಇವರ ಮದುವೆಯ ಪದ್ಧತಿ ರೀತಿ ನೀತಿಗಳು ತಿಳಿಯುತ್ತವೆ. ಉದಾಹರಣೆಗೆ,

"ಹಲ್‌ದಿ ಮೈ ಕೂಟುಂಗಿ ಸೋಫಾ ಪೂರಾರಾಕಲ್ಲ
ಸುವಾಗಿನ್ ಹಾತಾಸೆ ಪುರಾವೂಂಗಿ ಎ ಹಳ್ಳ
ಹಲ್‌ದಿ ಮೈ ಕೂಟುಂಗಿ ಸೋಫಾ ಪೂರಾ ಪೀಲಾ
ಮಾ ತೇರೆ ನಗೀನ್ ಕೇ ವಖತ್ ಕೋ ತಗಡ್
ಚಡ್ಯಾ ಹೈ ಮೈಲಾ"

ಅರಿಶಿಣ ಕುಟ್ಟುವಾಗ ಪಡಸಾಲೆಯಲ್ಲಾ ಹಳದಿಮಯವಾಗಿದೆ
ಸುಮಂಗಲೆಯರ ಕೈಯಿಂದ ತಾಳಿಯ ಹರಳನ್ನು ಪೋಣಿಸೋಣ
ಅರಿಶಿಣ ಕುಟ್ಟುವಾಗ ಪಡಸಾಲೆಯಲ್ಲಾ ಹಳದಿಮಯವಾಗಿದೆ
ನಿನ್ನ ಮದುವೆಯ ಸಂದರ್ಭದಲ್ಲಿ ಬೆಳ್ಳಿಯ
ರೂಪವು ಪೂಜೆಗೊಳ್ಳಲಿ

ಹೀಗೆ ಮದುವೆಯ ಸಂದರ್ಭದಲ್ಲಿ ಅರಿಶಿಣ ಕುಟ್ಟುವಾಗ ನಡೆಯುವ ತಾಳಿಯ ಹರಳನ್ನು ಪೋಣಿಸುವ ಕಾರ್ಯ, ಬೆಳ್ಳಿಯ ರೂಪಗಳನ್ನು ಪೂಜಿಸುವ ಪದ್ಧತಿಯಿರುವುದಾಗಿ ತಿಳಿದುಬರುತ್ತದೆ. ಮದುಮಗನಿಗೆ ಕುದುರೆಯ ಮೇಲೆ ಮೆರವಣಿಗೆಯ ಸಂದರ್ಭದಲ್ಲಿ

"ಶರಗರತ್ ನಿಕಲ್ಯೆ ಭಾಯಿ
ಸಾರಂಗಿ ಘೋಡೆ ಪೋ
ಬಾ ತೇರಿ ಜನಿ ಮಾಯಿ ಬೋಲಿ
ಚಾಂದ್ ಛುಡಾಯ್ ಸೇರೆಪೋ"

ಎತ್ತರದ ಕುದುರೆಯ ಮೇಲೆ
ಮದುಮಗನ ಮೆರವಣಿಗೆ
ಹೊರಟಿದೆ ಮದುಮಗನ ತಾಯಿ
ಹೇಳುತ್ತಾಳೆ ಬಾಸಿಂಗದ ಮೇಲೆ ಚಂದ್ರನನ್ನು ಬಿಡಿಸಿರೆ

"ಬಾರಿಕ್ ಚಾವಲ್ ತಬಾಕ್ ಮೆ ರಖಲಾಯಿ
ಬಾಲಾಜಿ ಸಾಮಿಕಾ ನಾಮ್ ಬೋಲ್ ಕೋ
ಫೈಲಾ ಚೌಕ್ ಪುರಾಯಿ
ಬಾರಿಕ್ ಚಾವಲ್ ಕಿ ಘುಂಗುರು ವಾಲಿ ಚೌಕ್
ಇಸ್‌ಮೆ ನೂರ್ ಬರಸೇಗಾ
ಖಿಲೇ ಫೂಲ್ ಕಲ್ಯಾಕಿ
ಬಾರಿಕ್ ಚಾವಲ್ ಕಿ ಘುಂಗುರು ವಾಲಿ ಚೌಕ್
ಮಾತು ಚೌಕಿ ಪೂ ಆ ಬೈಟ್
ಬಾಲೇ ಜೂರೆ ಹೌಸು
ಕೊಂಗ್ಯೆ ಚೋಟಿ ಕರ್ ಕೋ
ಟೀಲಾ ಲಗ್ಯೆ ಚಾಂದ್ ತಾರಾ
ಮಾ ತೇರೆ ನನ್ಹೆ ಸುವಾಗ್ ಪೋ
ಸತ್ ಕೈ ಹೋಂಗಿ ಖಾಲಾ"

ಸಣ್ಣನೆಯ ಅಕ್ಕಿಯನ್ನು ತಟ್ಟೆಯಲ್ಲಿ ಇಟ್ಟು
ಬಾಲಾಜಿ ದೇವರ ಹೆಸರನ್ನು ಹೇಳುತ್ತ
ಮೊದಲ ಹಸೆಯನ್ನು ಬಿಡಿಸಿರೆ
ಸಣ್ಣನೆಯ ಅಕ್ಕಿಯಿಂದ ಬರೆದ ಗೆಜ್ಜೆಯಂತಿರುವ
ಹಸೆಯಲ್ಲಿ ಮಂಗಲವಾಗಲಿ
ಇದರ ಮೇಲೆ ಹಾಸಿರುವ ಮೊಗ್ಗುಗಳೆಲ್ಲ ಹೂವಾಗಲಿ
ಇಂಥ ಹಸೆಯ ಮೇಲೆ ಹಾಕಿರುವ ಚೌಕಿಯಲ್ಲಿ
ಬಂದು ಕುಳಿತು ಕೋ ಮದುಮಗಳೇ ಇದು
ನಮ್ಮ ಮನಸ್ಸಿನ ಆಕಾಂಕ್ಷೆಯೂ ಹೌದು
ತಲೆ ಬಾಚಿ ಜಡೆಹಾಕಿ ಚಂದ್ರ ತಾರೆಯರ
ಬಿಂದಿಯನ್ನು ಹಚ್ಚಿರುವ ಮದುಮಗಳೆ
ನಿನ್ನ ಮುತ್ತೈದೆತನದ ಮೇಲೆ ನಿನ್ನ
ಚಿಕ್ಕಮ್ಮಂದಿರು ದೃಷ್ಟಿ ತೆಗೆಯುತ್ತಾರೆ ಬಾಮ್ಮ

ಹೀಗೆ ಮಗಳು ಮದುವೆಯಲ್ಲಿ ಹಸೆಯ ಮೇಲೆ ಕುಳಿತು ಕೊಳ್ಳುವಾಗ ಅವಳಿಗೆ ಎಲ್ಲರೂ ಅಂದರೆ ತಾಯಿ ಚಿಕ್ಕಮ್ಮಂದಿರೆಲ್ಲಾ ಮನಸ್ಸು ತುಂಬಾ ಅವಳ ಶೃಂಗಾರವನ್ನು ನೋಡುತ್ತ ಅವರ

ಮನಸ್ಸಿನ ಆಕಾಂಕ್ಷೆಯನ್ನು ತೃಪ್ತಿಪಡಿಸಿಕೊಳ್ಳುತ್ತಾರೆ. ಹಾಗೆಯೇ ಯಾರ ದೃಷ್ಟಿಯು ಅವಳಿಗೆ ತಾಗದಿರಲೆಂದು ಹಾಡುತ್ತಾರೆ.

"ಘುಡಿಯಾ ಗುಡಿಯಾ ಖೇಲ್‌ತಿ ಬೊಮ್ಮನಿ
ಗುಲೇರ್ ಕೆ ಝಾಡ್ ತಲ್ಲೆ
ಮಾ ತೇರೆ ಆಲೆ ಬಾಲ್ ಖುಲ್ಲೇ
ತೇರೆ ಮಾ ಬಾಪ್ ಕೆ ಛಾವ್ ತಲ್ಲೆ

ಜವ್ವೆ ಆತೆ ಕರಕೋ
ಪೈಲಿ ಶಾಮ್ ಸುನಾಯಿ
ಉಂಚಾ ಶಮಾ ಲೇಕೋ
ಬಾರಿಕ್ ಚಾವಲ್ ಚುನ್ನೀ

ಜವಾಯಾಂಕಾ ಗೇ ಜವಾಯಿ
ಮೇರಾ ಸಗ್ಗಾ ಜವಾಯ್ ಪ್ಯಾರಾ
ಜವಾಯ್ ಕಿ ಪಗಡಿ ಮೆ
ಹೀರಾ ಢಲ್ಕಾ ಹೈ ಸಾರಾ"

ಗೊಂಬೆ ಆಟಿಕೆಗಳನ್ನು ತೆಗೆದುಕೊಂಡು ಹತ್ತಿ ಮರದ ಕೆಳಗೆ ಆಟ ಆಡುತ್ತಿರುವ ಬ್ರಾಹ್ಮಣ ಕನ್ನೆಯಂತೆ ಕಂಗೊಳಿಸುವ ನನ್ನ ಮಗಳೆ, ನಿನ್ನ ತಂದೆ ತಾಯಿಯರ ನೆರಳಿನಲ್ಲಿ ನಿನ್ನ ಅದೃಷ್ಟ ಖುಲಾಯಿಸಲಿ. ಆಳಿಯ ಬರುತ್ತಾನೆಂದು ಸಂಜೆಗೆ ತಿಳಿಯಿತು. ಹಾಗಾಗಿ ಎತ್ತರದ ದೀಪ ತೆಗೆದುಕೊಂಡು ಸಣ್ಣಕ್ಕಿಯನ್ನು ಆರಿಸುತ್ತಿದ್ದೇನೆ. ಎಲ್ಲರ ಅಳಿಯರಿಗಿಂತ ನನ್ನ ಅಳಿಯನೆ ಚಂದ, ಅಳಿಯನ ಪಗಡಿಯಲ್ಲಿ ವಜ್ರವು ಕಂಗೊಳಿಸುತ್ತಿದೆ. ಹೀಗೆ ಈ ಹಾಡು ಮಗಳ ಮೇಲಿನ ಮಮತೆ ಅವಳ ಅದೃಷ್ಟ ಉಜ್ವಲವಾಗಲಿ ಎಂದು, ಅಳಿಯನ ಆಗಮನಕ್ಕೆ ಅಕ್ಕಿಯನ್ನು ಆರಿಸಿ ನಡೆದಿರುವ ತಯಾರಿ, ಅಳಿಯನ ಅಂದ ಚಂದ ಗುಣಗಾನವನ್ನು ಕುರಿತು ತಿಳಿಸುತ್ತದೆ.

"ಹಮೆ ಸಾತೋ ಭಾನಾ ಮಿಲ್ ಕೋ
ಪಾಲ್ ಕಿ ಮೆ ಪಾನ್ ಖಾನಾ
ಜವಾಯ್ ಕಿ ಗಾಡಿಮೆ
ಪಾಯಲ್ ಕಿ ಬಹುಲಾನಾ
ಹಮೆ ಸಾತೋ ಭಾನಾ ಮಿಲ್‌ಕೋ
ದರಿಯಾ ದೇಖ್‌ನೆ ಜಾನಾ

ಸವಲೇ ಮೂಕೆ ಭಾಯ್ ಕೋ
ಗುಲ್ಲಿ ಮೋತಿ ಲಾನಾ"

ನಾವು ಏಳು ತಂಗಿಯರು ಕೂಡಿ ಪಲ್ಲಕ್ಕಿಯಲ್ಲಿ ಕುಳಿತು ಎಲೆ ಅಡಿಕೆ ತಿನ್ನಬೇಕು. ಅಳಿಯನ ಗಾಡಿಯಲ್ಲಿ ಮೋಟಾರಿನಲ್ಲಿ ಗೆಜ್ಜೆ ಹಾಕಿಕೊಂಡ ಸೊಸೆಯನ್ನು ತರಬೇಕು. ನಾವು ಏಳು ಅಕ್ಕ ತಂಗಿಯರು ಕೂಡಿ ಸಮುದ್ರ ನೋಡಲಿಕ್ಕೆ ಹೋಗಬೇಕು. ಕಂದು ಬಣ್ಣದ ಅಣ್ಣನಿಗೆ ಮುತ್ತನ್ನು ತರಬೇಕು. ಹೀಗೆ ಅಕ್ಕ ತಂಗಿಯರು ತಮ್ಮ ಅಣ್ಣನಿಗೆ ಹುಡುಗಿ ನೋಡಲು ಹೋಗುವಾಗ ಈ ಮೇಲಿನಂತೆ ಹಾಡುವುದು ಕಂಡುಬರುತ್ತದೆ.

"ದೇವರಾನ್ಯಾ ಜಟಾನ್ಯಾ
ಪೆಹನ್ ತೈ ಜರ್ ಕೆ ಸಾಡ್ಯಾ
ಮಾ ತುಮೆ ಹಲ್ಲು ಬರ್ ತೋ ರಾಣ್ಯಾ
ತೇಲ್ ಚಡಾನೆ ನಿಕಲ್ಯಾ
ದೇವರಾನ್ಯಾ ಜಟನ್ಯಾ
ಏಕ್ ರಂಜನ್ ಕೆ ಪಾನ್ಯಾ
ಹಂಸ್ಯೆನಿ ಪೂಚಿತೋ
ಹಮೆ ಪರ್ಯೆ ಮಾಕೆ ಜಾಯಾ
ಆರಸ್‌ಗೆ ಮೇರಿ ಬೊಮ್ಮನಿ
ತೂ ನಿವ್ವಡ್ ಬೈಟಿ ಚಾಂದ್
ಮಾ ತೇರ ನವದೇಕೆ ನವ್ ಮೀರ್‍ಯಾ
ಸೇರೆ ತಲ್ಲೇ ಮಾಂಗ್"

ಮನೆಯ ಹಿರಿಯ ಸೊಸೆ, ಕಿರಿಯ ಸೊಸೆಯರು ಅಕ್ಕತಂಗಿಯರಂತೆ ಜರತಾರಿ ಸೀರೆಯನ್ನುಟ್ಟು ಸಡಗರದಿಂದ ಇದ್ದಾರೆ. ನೀವು ನಿಧಾನವಾಗಿ ಕೆಲಸ ಮಾಡಿ ರಾಣಿಯರೆ. ಎಣ್ಣೆ ಏರಿಸಲು ಬನ್ನಿರೆ ಅಕ್ಕ ತಂಗಿಯರು ಒಂದೇ ಕಾರಂಜಿಯ ನೀರಿನಂತೆ ಕಂಗೊಳಿಸುತ್ತಿದ್ದಾರೆ. ನೀವು ಯಾರ ಮಕ್ಕಳೆಂದು ಊರಿನ ಹಿರಿಯರು (ಗೌಡತಿ) ಕೇಳಿದರೆ ನಾವು ಬೇರೆ ಬೇರೆಯವರ ಮಕ್ಕಳು ಎಂದು ತಿಳಿಸುತ್ತಾರೆ. ಅಂದರೆ ಮದುವೆಯ ಸಡಗರ ಸಂಭ್ರಮದಲ್ಲಿ ಎಲ್ಲ ಸೊಸೆಯಂದಿರು ಅಕ್ಕತಂಗಿಯರಂತೆ ಸೇರಿ ಕೆಲಸ ಮಾಡುತ್ತಿರುವ ಸನ್ನಿವೇಶದ ಹಾಡು ಇದಾಗಿದ್ದು, ಕೊನೆಗೆ ಬ್ರಾಹ್ಮಣ ಕನ್ನೆಯಂತೆ ಕಂಗೊಳಿಸುವ ಮದುಮಗಳು ಅರ್ಧಚಂದ್ರನಂತೆ ಮುದುಡಿಕೊಂಡು ಕುಳಿತಿದ್ದಾಳೆ. ಅವಳ ಒಂಬತ್ತು ನಿರಿಗೆ ಬಾಸಿಂಗದ ಕೆಳಗೆ ಬೈತಲೆ ತೆಗೆದಿರುವ ಇವಳು ಸುಂದರವಾಗಿ ಕಾಣುತ್ತಿದ್ದಾಳೆ ಎಂದು ವರ್ಣಿಸುವ ಈ ಕೊನೆಯ ಸಾಲಿನಲ್ಲಿ ಮದುಮಗಳು ಸುಂದರವಾಗಿ ಕಂಗೊಳಿಸುತ್ತಿದ್ದಾಳೆ ಎಂದಷ್ಟೇ ಹೇಳದೆ ಅವಳು ಬ್ರಾಹ್ಮಣ

ಕನ್ನೆಯಂತೆ ಸುಂದರವಾಗಿ ಕಾಣುತ್ತಿದ್ದಾಳೆ ಎಂದು ಹೇಳುವುದು ನಮ್ಮ ಈ ಸಮುದಾಯಗಳು ತಮ್ಮಲ್ಲಿ ಏನೇ ಉತ್ಕೃಷ್ಟವಾದದಿದ್ದರು ಅದು ತಮ್ಮದೆಂದು ಹೇಳಿಕೊಳ್ಳದೆ ಮೇಲ್ವರ್ಜೆಯದಂತೆ ಎಂದು ಹೇಳಿಕೊಳ್ಳುತ್ತಾರೆ. ಸಂಸ್ಕೃತೀಕರಣದ ಪ್ರಭಾವನ್ನಿಲ್ಲಿ ಗುರುತಿಸಬಹುದು.

ಹಿರಿಯರಿಗೆ ಎಣ್ಣೆ ಏರಿಸುವ ಸಂದರ್ಭದಲ್ಲಿ ಹಾಡುವ ಹಾಡು-

"ಅರಸೆ ನಹಲಯ್ಯೋ
ಬರಸೆ ನಹಲಯ್ಯೋ
ಸರಸೋಕಾ ತೇಲ್ ಚಡಯ್ಯೋ
ಆಬ್‌ಕೋನ್ ಸುವಾಗಿನ್
ಪಾತರಿಯಾ ರಂಗ್ ಲಯ್ಯೋ"

"ಅರಸೆ ನಹಲಯ್ಯೋ
ಬರಸೆ ನಹಲಯ್ಯೋ
ಸರಸೋಕ್ ತೇಲ್ ಚಡಯ್ಯೋ
ಅಬ್‌ಕೌನ್ ಸುವಾಗಿನ್
ಸಂತೋಷಿ ಮಾ ಸುವಾಗಿನ್
ಪಾತರಿಯಾ ರಂಗ್ ಲಯ್ಯೋ"

ಹಾಲಿನಿಂದ ಸ್ನಾನ ಮಾಡಿಸಿರೆ, ತುಪ್ಪದಿಂದ ಸ್ನಾನ ಮಾಡಿಸಿರೆ, ಈಗ ಸಾಸಿವೆಯ ಎಣ್ಣೆ ಏರಿಸಿರೆ ಇಲ್ಲಿ ಮುತ್ತೈದೆಯಾರಿದ್ದಾರೆ ಸಂತೋಷಿ ಮಾತೆಯೆ ಮುತ್ತೈದೆ ಪಾತರಗಿತ್ತಿಯರೆ ಬಣ್ಣ ತನ್ನಿರೆ. ಹೀಗೆ ಎಣ್ಣೆ ಏರಿಸುವಾಗ ಅಲ್ಲಿರುವ ಸುಮಂಗಲೆಯರ ಹೆಸರು, ದೇವತೆಗಳ ಹೆಸರನ್ನು ಹೇಳುತ್ತ ಎಣ್ಣೆ ಏರಿಸುವುದನ್ನು ಈ ಹಾಡುಗಳಲ್ಲಿ ಕಾಣುತ್ತೇವೆ.

"ಸುನ್ನೇಕಿ ಚಂಗೇರಿ
ರುಪೈಕಾ ಸಾಮಾನ್
ಅಲಂವೇಲಮ್ಮ ಗೆ ಸುವಾಗಿನ್
ಚಡಗೈ ಮಾ ರಾಜನ್"

"ಕಿಸೇಗೆ ಸಾಜ್ಯಾ ದವನಾ
ಕಿಸೇಗೆ ಸಾಜ್ಯಾ ಮರವಾ
ಬಾಲಾಜಿ ಸಾಮಿಕೆ ಪಗಡಿಮೆ
ಸವಾ ನೂರ್‌ಕೆ ಹೂರಾ"

"ಸುನ್ನೇಕಿ ಚಂಗೇರಿ
ರೂಪೈಕಾ ಸಾಮಾನ್
ಗೌರಿಬಾಯಿಗೆ ಸುವಾಗಿನ್
ಚಡ್ ಗೈ ಮಾ ರಾಜನ್
ಕಿಸೇಗೆ ಸಾಜ್ಯಾ ದವನಾ
ಕಿಸೇಗೆ ಸಾಜ್ಯಾ ಮರವಾ
ಈಶ್ವರ ದಾದಾಕಿ ಪಗಡಿಮೆ
ಸವಾ ನೂರ್ ಕೆ ಹೂರಾ"

"ದರಿಯಾ ಕಾ ಗೈಲೋನ್
ಡೋಂಗರ್ ಪೂ ಕಿ ರಾಯಿ
ಗೈಲೋನ್ ಚಡಾಯೆಂಗಿ ಕೌನ್
ಜನ್ನಿ ಮಾ ಕಿ ಜಾಯಿ"

"ದರಿಯಾ ಕಾ ಗೈಲೋನ್
ಡೋಂಗರ್ ಪೂಕಿ ರಾಯಿ
ಗೈಲೋನ್ ಉತಾರೆಂಗಿ ಕೌನ್
ಜನಿಮಾಕಿ ಜಾಯಿ"

ಮದುವೆಯ ದಿನ ಬಿದಿರಿನ ಬುಟ್ಟಿಯನ್ನು ಚಂದಾಗಿ ಅಲಂಕಾರ ಮಾಡಿ ಶೃಂಗರಿಸಿ ಅದರಲ್ಲಿ ಒಂದು ಕೆಂಪು ಬಟ್ಟೆಯನ್ನು ಹಾಸಿ ಜೋಳ ಅಥವಾ ಗೋಧಿಯನ್ನು ಹಾಕಿ ಆ ಬುಟ್ಟಿಯ ಮುಂದೆ ಚೌಕಿ ಹಾಕಿ ಅದರ ಮುಂದೆ ಮದುಮಗಳಿಗೆ ಕೂಡಿಸಿ ಒನಕೆ ತೊಳೆದು ಅರಿಶಿಣ ಕುಂಕುಮ ಹಚ್ಚಿ ವೀಳ್ಯೆದೆಲೆ ಕಟ್ಟಿ ಮದುಮಗಳ ಕೈಯಲ್ಲಿ ಒನಕೆ ಕೊಟ್ಟು ಕುಟ್ಟುವಂತೆ ಹೇಳುತ್ತಾರೆ. ಈ ಸಂದರ್ಭದಲ್ಲಿ ಈ ಹಾಡನ್ನು ಹಾಡುವರು. ಈ ಹಾಡಿನ ಭಾವಾರ್ಥ ಬಂಗಾರದ ಬುಟ್ಟಿಯಲ್ಲಿ ಬಂಗಾರದಂತ ವಸ್ತುವನ್ನು ಸುಮಂಗಲೆ ಗೌರಿ ಒನಕೆ ಹಿಡಿದು ಕುಟ್ಟುತ್ತಿದ್ದಾಳೆ ಎಂದು ಹಾಡುತ್ತ ತಮ್ಮ ಮನೆದೇವರ ಇಲ್ಲವೇ ಗಂಡಂದಿರ ಹೆಸರನ್ನು ಹೇಳುತ್ತಾ ಅವರ ಪಗಡಿಯಲ್ಲಿ ಸಾವಿರ ರೂಪಾಯಿ ಬೆಲೆ ಬಾಳುವ ವಜ್ರ ಕಂಗೊಳಿಸುತ್ತಿದೆ ಎಂದು ಹಾಡುತ್ತಾರೆ. ಮುಂದೆ ಈ ಹಾಡಿನಲ್ಲಿ ಒಂದು ಆಚರಣೆಯನ್ನು ಕುರಿತು ಕೆಲವು ಸಾಲುಗಳಿವೆ. ಅದೇನೆಂದರೆ ಮದುಮಗಳ ತಾಯಿ ತನ್ನ ಸೀರೆಯ ಸೆರಗಿನ ಒಂದು ಕೊನೆಯ ತುದಿಯಲ್ಲಿ ವೀಳ್ಯದೆಲೆ ಮತ್ತು ಕಲ್ಲು ಸಕ್ಕರೆ ಇಟ್ಟು ಕಟ್ಟಿಕೊಂಡು ಅದನ್ನು ಮದುಮಗಳ ತಲೆಯ ಬಲಭಾಗದಿಂದ ಕೆಳಗೆ ಬಿಡುತ್ತಾಳೆ. ಇದರರ್ಥ ಇಂದಿಗೆ ನನ್ನ ಹಾಲಿನ ಋಣಮುಕ್ತವಾಯಿತು ಎಂದು ಸಾಂಕೇತಿಕವಾಗಿ ಇದು ಸೂಚಿಸುತ್ತೆ. ಮದ್ರಾಸ್, ಬೆಂಗಳೂರು, ಮೈಸೂರು ಕಡೆಗಳಲ್ಲಿ ಈ

ಆಚರಣೆ ಕಂಡುಬರುತ್ತದೆ. ಮಗುವಾಗಿದ್ದಾಗ ಅವಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಆಕಳ ಹೊಟ್ಟೆಯಲ್ಲಿ ದೊರೆಯುವ ಗೈಲೋನ ಎಂಬ ಪದಾರ್ಥ, ಸಾಸಿವೆ ಹೀಗೆ ಹಲವು ವಸ್ತುಗಳನ್ನು ಇವರು ಮನೆಮದ್ದಾಗಿ ಬಳಸುವುದುಂಟು. ಇವನ್ನೆಲ್ಲ ಇವರು ತಮ್ಮ ಹಾಡಿನಲ್ಲಿ ತಿಳಿಸುತ್ತಾರೆ. ಹೀಗೆ ತಮ್ಮ ಮಗಳು ಬೇರೆ ಯವರ ಸೊಸೆಯಾಗಿ ಹೋಗುವ ಸಂದರ್ಭದಲ್ಲಿ ಅವಳ ಬಾಲ್ಯದಿಂದ ಇಂದಿನವರೆಗೂ ಅವಳನ್ನು ತಾವು ನೋಡಿಕೊಂಡ ಲಾಲನೆ ಪಾಲನೆ ಮಾಡಿದ ಪ್ರೀತಿಸಿದ ಕ್ಷಣಗಳನ್ನು ಇವರ ಹಾಡುಗಳು ತಿಳಿಸುತ್ತವೆ.

"ಶರಗತ್ ನಿಕಲ್ಯೆ ಭಾಯಿ
ಗಲಿಗಲಿ ಬಾಜಾ
ಗಾಂವ್ ಕೆ ಹಾಕಮ್ ಪೂಚತೇ
ಕಿಸ್ ನಗರಿ ಕಾ ರಾಜಾ"

"ಬೇಟಿ ಪೂಚನೆ ಆಯೆತೋ
ತುಮೆ ಕಾಂಕೆ ಕಿದರ್ ಕೇ
ಹಮೆ ಮೈಸೂರ್ ಕೆ ರಜವಾಡೆ
ಊಂಚೆ ಖಾನ್‌ದಾನ್ ವಾಲೆ"

ಮದುಮಗನ ಮೆರವಣಿಗೆ ಹೊರಟಿರುವಾಗ
ಬೀದಿ ಬೀದಿಯೆಲ್ಲಾ ವಾಲಗದ (ಬ್ಯಾಂಡ್) ಸದ್ದು
ಊರಿನ ಪ್ರಮುಖರು ಕೇಳುತ್ತಾರೆ
ಯಾವ ಊರಿನ ರಾಜನ ಮೆರವಣಿಗೆ
ಹೊರಟಿದೆ ಎಂದು

ಹುಡುಗಿಯನ್ನು ಕೇಳಲಿಕ್ಕೆ ಬಂದರೆ
ನೀವು ಎಲ್ಲಿಯವರು ಯಾವ ಊರಿನವರು
ಎಂದು ಕೇಳುತ್ತಿದ್ದಾರೆ
ನಾವು ಮೈಸೂರಿನ ಅರಸು ಮನೆತನದವರು
ದೊಡ್ಡ ವಂಶದವರು

ಮೆರವಣಿಗೆಯಲ್ಲಿ ಕುದುರೆಯ ಮೇಲೆ ಕುಳಿತು ಹೊರಟಿರುವ ಮದುಮಗನು ರಾಜನಂತೆ ಕಂಗೊಳಿಸುತ್ತಿದ್ದಾನೆ. ಹಾಗಾಗಿ ಊರಿನ ಪ್ರಮುಖರೆಲ್ಲ ಯಾವ ಊರಿನ ರಾಜ ಎಂದು ಕೇಳುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ನಾವು ಮೈಸೂರಿನ ಅರಸುಮನೆತನದವರೆಂದು ಎಂದು ಗುರುತಿಸಿ ಕೊಳ್ಳುವುದು

ಒಂದು. ಇವರು ಅರಸು ಮನೆತನದ ಹತ್ತಿರದವರಾಗಿದ್ದು ಸೈನಿಕರಾಗಿಯೂ, ಮೈಸೂರು ಅರಸರಲ್ಲಿ ಕೆಲಸ ಮಾಡಿರುವ ಸಾಧ್ಯತೆಯಿರುವುದರಿಂದ ಈ ರೀತಿಯಾಗಿ ತಮ್ಮ ಹಾಡುಗಳಲ್ಲಿ ಗುರುತಿಸಿ ಕೊಳ್ಳುವುದನ್ನು ಕಾಣಬಹುದು.

ಮದುವೆಯ ಸಂದರ್ಭದಲ್ಲಿ ಹಾಡುವ ಹಾಡು

"ಛೋಟೆ ಪನ್ ಕಾ ಲಾಡ್ ಮೇರಾ
ಬಚ್‌ಪನ್ ಕಾ ಲಾಡ್ ಮೇರಾ
ಮಾ ಬಾಪ ಮೆ ಮೈ ಅಕೇಲಿ
ಸಸುರಾಲ್ ಮೆ ಮೈ ರಂಗೇಲಿ
ಛೋಟೆಪನ್ ಕಾ ಲಾಡ ಮೇರಾ" ||ಪ||

"ಬಾಗೇ ಚಮನ್ ಕು ಗೈತಿ
ಹಲ್‌ದಿ ಲಗಾವೋ ಕೈತಿ
ಬೆಹನೋ ಮೆ ಮೈ ಅಕೇಲಿ
ನಡಂದೋ ಮೆ ಮೈ ರಂಗೇಲಿ
ಛೋಟೆಪನ್ ಕಾ ಲಾಡ್ ಮೇರಾ" ||ಪ||

"ಬಾಗೆ ಚಮನ್ ಕೋ ಗೈತಿ
ಪಾನಿ ನಹಲಾವೋ ಕೈತಿ
ಭಾಯೋಮೆ ಮೈ ಅಕೇಲಿ
ದೇವರಾಮೆ ಮೈ ರಂಗೇಲಿ
ಛೋಟೆಪನ್ ಕಾ ಲಾಡ್ ಮೇರಾ" ||ಪ||

"ಬಾಗೆ ಚಮನ್ ಕೋ ಗೈತಿ
ಫೂಲಾ ಪಿನಾವೋ ಕೈತಿ
ಸಹಲ್ಯಾ ಮೆ ಮೈ ಅಕೇಲಿ
ನಡಂದೋ ಮೆ ಮೈ ರಂಗೇಲಿ
ಛೋಟೆಪನ್ ಕಾ ಲಾಡ್ ಮೇರಾ" ||ಪ||

ಬಾಲ್ಯದ ಪ್ರೀತಿಯನ್ನು ನೆನೆಸುತ್ತಾ ತಾನು ಅಪ್ಪ, ಅಮ್ಮ, ಅಣ್ಣ, ತಂಗಿಯರಲ್ಲಿ ಬೆಳೆದು ಪ್ರೀತಿಯ ಒಬ್ಬಳೇ ಮಗಳಾಗಿ ಮುದ್ದಿನಿಂದ 'ಸಾಕಿ ಸಲುಹಿದರು. ಅರಿಶಿಣ ಹಚ್ಚಿ, ಹೂವು ಮುಡಿಸಿ ನೀರೆರೆಯಿರಿ ಹಸಿರು ತೋಟದಲ್ಲಿ, ಎಂದು ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತ ತನ್ನ ಅತ್ತೆ, ಮಾವ,

ಮೈದುನ, ನಾದಿನಿಯರಲ್ಲಿ ತಾನು ಪ್ರೀತಿಯಿಂದ ಬಾಳ್ವೆ ನಡೆಸುತ್ತ ಅವರಲ್ಲಿಯೂ ಪ್ರೀತಿಗಳಿಸುವೆ ಎಂದು ಹುಡುಗಿ ತನ್ನ ಬಾಲ್ಯವನ್ನು ನೆನೆಸುತ್ತ ಮದುವೆಯ ನಂತರವೂ ಪ್ರೀತಿಯಿಂದ ಬಾಳುವೆ ನಡೆಸುವುದಾಗಿ ಹೇಳುತ್ತ, ಈ ಹಾಡನ್ನು ಮದುವೆಯ ಸಂದರ್ಭದಲ್ಲಿ ಹಾಡುವುದು ಕಂಡುಬರುತ್ತದೆ.

ವಿದಾಯದ ಹಾಡು

"ಬೇಟಿ ಜಾತಿ ಹೈ ಪ್ಯಾರಿ ದುಲ್ಹನಿಯ" ||ಪ||

ಅಮ್ಮ ರೋನೆ ಲಗಿ ಅಪನೆ ದಿಲ್ ಮೆ
ಅಬ್ ಮೈ ಹೋಗಯಿ ಪರಾಯಿ ಕೆ ಬಸ್ ಮೆ ||ಪ||

"ಸಾಸೋ ಸಸರೋ ಕಾ ಚಲ್‌ನಾ ಹೋಗಾ
ಘಬರಾನೆ ಕೆ ದಿನ್ ಆಯೆ

ಬಾಬಾ ರೋನೆ ಲಗೆ ಅಪನೆ ದಿಲ್ ಮೆ
ಅಬ್ ಮೈ ಹೋಗಯಿ ಪರಾಯಿ ಕೆ ಬಸ್ ಮೆ ||ಪ||

ಭಾಯಾ ರೋನೆ ಲಗೆ ಅಪನೆ ದಿಲ್ ಮೆ
ಅಬ್ ಮೈ ಹೋಗಯಿ ಪರಾಯಿ ಕೆ ಬಸ್ ಮೆ
ದೇವರ್ ಜೇಟೋಕಾ ಚಲ್‌ನಾ ಹೋಗಾ
ಘಬರಾನೆಕೆ ದಿನ್ ಆಯೆ ||ಪ||

ಬೆಹನಾ ರೋನೆ ಲಗೆ ಅಪನೆ ದಿಲ್ ಮೆ
ಅಬ್ ಮೈ ಹೋಗಯಿ ಪರಾಯಿ ಕೆ ಬಸ್ ಮೆ
ಸಾಸೋ ನಡಂದೋ ಕಾ ಚಲ್ ನಾ ಹೋಗಾ
ಘಬರಾನೆ ಕೆ ದಿನ್ ಆಯೆ ||ಪ||

ಮಗಳು ಗಂಡನ ಮನೆಗೆ ಹೋಗುವಾಗ ತಂದೆ, ತಾಯಿ, ಅಣ್ಣ, ಅಕ್ಕ, ತಂಗಿಯರು ಬೀಳ್ಕೊಡುವ ಸಂದರ್ಭದಲ್ಲಿ ಈ ಹಾಡನ್ನು ಹಾಡುವರು.

ಮಗಳು ಮದುಮಗಳಾಗಿ ಹೊರಟಿದ್ದಾಳೆ
ತಾಯಿ ಮನಸ್ಸಿನಲ್ಲಿಯೇ ಅಳುತ್ತಿದ್ದಾಳೆ
ಈಗ ನಾನು ಬೇರೆಯವರ ವಶವಾಗಿದ್ದೇನೆ
ಅತ್ತೆ ಮಾವಂದಿರು ನಡೆಸಿಕೊಳ್ಳುತ್ತಾರೆ
ಹೆದರಿಕೆಯ ದಿನಗಳು ಇನ್ನು ಮುಂದೆ ಎದುರಿಸಬೇಕಾಗುತ್ತದೆ

ಮಗಳು ಹೋಗುತ್ತಿದ್ದಾಳೆ ಮದುಮಗಳಾಗಿ
ಅಣ್ಣ ಮನಸ್ಸಿನಲ್ಲಿಯೆ ಅಳುತ್ತಿದ್ದಾನೆ
ನಾನೀಗ ಪರಕೀಯರ ವಶವಾಗಿದ್ದೇನೆ
ಭಾವ ಮೈದುನರು ನಡೆಸಿಕೊಳ್ಳುತ್ತಾರೆ
ಹೆದರಿಕೆಯ ದಿನಗಳು ಇನ್ನು ಮುಂದೆ ಎದುರಿಸಬೇಕಾಗುತ್ತದೆ

ಮಗಳು ಹೋಗುತ್ತಿದ್ದಾಳೆ ಮದುಮಗಳಾಗಿ
ಅಕ್ಕತಂಗಿಯರು ಅಳುತ್ತಿದ್ದಾರೆ ಮನಸ್ಸಿನಲ್ಲಿಯೇ
ನಾನೀಗ ಪರಕೀಯರ ವಶವಾಗಿದ್ದೇನೆ
ಅತ್ತೆ ನಾದಿನಿಯರು ನಡೆಸಿಕೊಳ್ಳುತ್ತಾರೆ
ಹೆದರಿಕೆಯ ದಿನಗಳು ಇನ್ನು ಮುಂದೆ ಎದುರಿಸಬೇಕಾಗುತ್ತದೆ

ಮಗಳು ಮದುಮಗಳಾಗಿ ಗಂಡನ ಮನೆಗೆ ಹೋಗುವಾಗ ಅಲ್ಲಿ ಅತ್ತೆ, ಮಾವ, ನಾದಿನಿ, ಮೈದುನರು ಹೇಳಿದಂತೆ ನಡೆದುಕೊಳ್ಳಬೇಕು ಎಂದು ತವರು ಮನೆಯವರು ತಮ್ಮ ಹುಡುಗಿ ಹೇಗೆ ಇರುತ್ತಾಳೋ ಎಂದು ಚಿಂತಿಸುವುದು ಈ ಹಾಡಿನಲ್ಲಿ ಕಂಡು ಬರುತ್ತದೆ.

ದೇವರೂಟದ ಸಂದರ್ಭದಲ್ಲಿ ದೇವರ ಕೋಣೆಯ ಎದುರು ಮದುಮಗಳಿಗೆ ಕುಳ್ಳಿರಿಸಿ ಹಿರಿಯರ, ದೇವರ ಪೂಜೆಯ ಸಂದರ್ಭದಲ್ಲಿ, ಎಣ್ಣೆ ಏರಿಸುವ ಸಂದರ್ಭದಲ್ಲಿ ಈ ಹಾಡನ್ನು ಹಾಡುವರು.

"ಹರಿಬೇಲ್ ಚಮನ್ ಮೆ
ಕ್ಯಾ ಖಾಸಿ ಲಗಿ ಹೈ
ಹುಕುಂ ಲೇವ್ ಹುಲಿಗೆಮ್ಮ ಸೆ
ಲಗಾನ ಜರೂರ್ ಹೈ"

"ಹರಿಬೇಲ್ ಚಮನ್ ಮೆ
ಕ್ಯಾಖಾಸಿ ಲಗಿಹೈ
ಹುಕುಂ ಲೆವ್ ಮೈಲಾರ್ ಲಿಂಗ ಸೆ
ಲಗಾನಾ ಜರೂರ ಹೈ"

"ಮಿಸ್ಸಿಕೆ ದೋ ಚೀಟ್ಯಾ
ದೇವಾರೆ ಪೋ ಧರಿಹೈ
ರಚಾ ಲೇವ್ ಮರ್ದಾನ ಗಯಾಬ್ ಸೆ
ಲಗಾನಾ ಜರೂರ್ ಹೈ
ಹರಿಬೇಲ್ ಚಮನ್ ಮೆ ಕ್ಯಾ ಖಾಸಿ ಲಗಿಹೈ"

"ಹಲ್‌ದಿ ಕೆ ದೋ ಚೀಟ್ಯಾ
ದೇವಾರೆ ಪೋ ಧರಿ ಹೈ
ರಜಾ ಲೆವ್ ಮುದ್ದಮ್ಮ ಸೇ
ಲಗಾನಾ ಜರೂರ್ ಹೈ
ಹರಿಬೇಲ್ ಚಮನ್ ಮೆ ಕ್ಯಾಖಾಸಿ ಲಗೀಹೈ"

"ಕುಂಕುಮ ಕೆ ದೋ ಚೀಟ್ಯಾ
ದೇವಾರೆಪೋ ಧರಿಹೈ
ರಜಾ ಲೇವ್ ತಾಯಮ್ಮ ಸೆ
ಲಗಾನಾ ಜರೂರ್ ಹೈ
ಹರಿಬೇಲ್ ಚಮನ್ ಮೆ ಕ್ಯಾಖಾಸಿ ಲಗೀಹೈ"

ಹಸಿರು ತುಂಬಿರುವ ಈ ಹಂದ್ರದಲ್ಲಿ ಮನೆದೇವರ ಮುಂದೆ ಏನು ಸಡಗರ ಲಕ್ಷಣ ಕಂಗೊಳಿಸುತ್ತಿದೆ. ಹುಲಿಗೆಮ್ಮ ದೇವಿಯ ಅಪ್ಪಣೆ ಪಡೆದು ಎಣ್ಣೆ ಏರಿಸುವುದು ಅವಶ್ಯವಾಗಿದೆ. ಮದುಮಗ/ಳು ಎಣ್ಣೆ ಏರಿಸುವಾಗ ಮನೆ ದೇವರಿಗೆ, ಹಿರಿಯರಿಗೆ ಎಣ್ಣೆ ಏರಿಸುವಾಗ ದೇವರ ಕೋಣೆಯ ಮುಂದೆ ಮಾವಿನ ಎಲೆ, ಸಜ್ಜುಕದ ಹೋಳಿಗೆ, ಹೂಗಳಿಂದ ಬಿದಿರಿನ ಚಿಕ್ಕ ಚಟ್ಟಕ್ಕೆ ಅಲಂಕರಿಸುತ್ತಾರೆ. ಹಾಗೆಯೆ ದೇವರಿಗೆ ಹಾಕಿರುವ ಅನ್ನ, ತುಪ್ಪದ ಎಡೆ, ಧೂಪ, ದೀಪ, ಕಂಬಳಿಯ ಮೇಲೆ ಹಾಕಿರುವ ಹಸೆ, ಸುತ್ತಲು ಇಟ್ಟಿರುವ ಸುಂದರವಾಗಿ ಅಲಂಕಾರಗೊಂಡ ಚಿಕ್ಕ ಮಣ್ಣಿನ ಲೋಟಗಳು ಕಳೆಯನ್ನು ತಂದಿರುತ್ತವೆ. ಇಂತಹ ಕಳೆ ಹೊಂದಿರುವ ವಾತಾವರಣದಲ್ಲಿ ಮನೆದೇವರ, ದೇವತೆಗಳ ಅಪ್ಪಣೆ ಪಡೆದು ಎಣ್ಣೆಯನ್ನು ಏರಿಸುವ ಕಾರ್ಯದಲ್ಲಿ ಈ ಹಾಡನ್ನು ಹಾಡುವರು. ಈ ಸಂದರ್ಭದಲ್ಲಿ ಅಂದರೆ ಪೂಜೆಯ ವೇಳೆ ಎರಡು ಅರಿಶಿಣದ ಚೀಟಿಗಳು, ಎರಡು ಮಿಸ್ಸಿ ಚೀಟಿ, ಎರಡು ಕುಂಕುಮದ ಚೀಟಿಗಳನ್ನು ದೇವರಿಗೆ ಅರ್ಪಿಸುತ್ತ ಅವರವರ ಮನೆದೇವರುಗಳ ದೇವತೆಗಳ ಅಪ್ಪಣೆ ಪಡೆದು ಈ ಕಳೆ ತುಂಬಿದ ವಾತಾವರಣದಲ್ಲಿ ಎಣ್ಣೆ ಏರಿಸುವಂತೆ ಕಾರ್ಯ ನಡೆದಿರುವಾಗ ಈ ಹಾಡನ್ನು ಹಾಡುವರು.

ಎಣ್ಣೆ ಏರಿಸುವ ಹಾಡು

"ತೇಲೊ ತೇಲೊ ತಮಲ್ಯಾವೊ
ಎ ತೇಲ ಲಗಡೆ ಗಾಡೆಹೋ
ಕೋನ್ ದೇವ ಭೋಲಾ ಹೋ
ಮೈಲಾರ ದೇವ ಸಾಮಿ ಆಲೆ ಆಲೆ ಹೋ

ನರಸಿಂಗ್ ಸಾಮಿ ಆಲೆ ಆಲೆ ಹೋ
ಹುಲಿಗೆಮ್ಮ ಬಾಯಿ ಆಲೆ ಆಲೆ ಹೋ"

"ಸುನ್ನೇಕಿ ತಿರ್ ಲೇಕೋ ಸುರಯ ತೇಲ್ ಚಡಾವೋ
ತೇಲಮಾ ಚಡಾನೆ ಹುಲಿಗೆಮ್ಮ ಬಾಯಿ ಕೋ ಬುಲಾವೋ
ಹುಲಿಗೆಮ್ಮ ಬಾಯಿನೆ ನಹಿ ಆಯೆ ತೋ
ಭೇಜೋ ಹಾತ್ ಕಾ ತೀರೋ - ಸುನ್ನೇಕಿ ತಿರ್ ಲೇಕೋ"

"ತೇಲ್ ಮಾ ಚಡಾನೆ
ಮೈಲಾರಲಿಂಗ ಕೋ ಬುಲಾವೋ
ಮೈಲಾರ ಸಾಮಿನೆ ನಹಿ ಆಯೆ ತೋ
ಭೇಜೋ ಹಾತ್‌ಕಾ ತೀರೋ - ಸುನ್ನೇಕಿ ತಿರ್ ಲೇಕೋ"
"ತೇಲ್ ಮಾ ಚಡಾನೆ
ಮರ್ದಾನ ಗಾಯಬ್ ಕೋ ಬುಲಾವೋ
ಮರ್ದಾನ ಗಾಯಬ್ ನೆ ನಹಿ ಆಯೆ
ಭೇಜೋ ಹಾತ್ ಕಾ ತೀರೋ - ಸುನ್ನೇಕಿ ತಿರ್ ಲೇಕೋ"

"ತೇಲ್ ಮಾ ಚಡಾನೆ
ಗಂಗಾ ಗೌರಿ ಕೋ ಬುಲಾವೋ
ಗಂಗಾ ಗೌರಿನೇ ನಹಿ ಆಯೇ
ಭೇಜೋ ಹಾತ್ ಕಾ ತೀರೋ"

ಮದುವೆಯ ಸಂದರ್ಭದಲ್ಲಿ ಹಿರಿಯರಿಗೆ ಮತ್ತು ಮನೆದೇವರಿಗೆ ಪೂಜೆ ಮಾಡುವಾಗ ಪಟ್ಟಾ (ದೇವರೂಟದ) ಸಂದರ್ಭದಲ್ಲಿ ಎಣ್ಣೆ ಏರಿಸುವಾಗ ಎಣ್ಣೆಯು ಗಾಢವಾಗಿದೆ ಇದನ್ನು ಏರಿಸಿರೆ ಮೈಲಾರಲಿಂಗನಿಗೆ ಜಯವಾಗಲಿ ಎಲ್ಲರಿಗಿಂತ ಯಾವ ದೇವರು ತುಂಬಾ ಮುಗ್ಧ(ಬೋಲಾ) ನರಸಿಂಗ ದೇವರಿಗೆ ಜಯವಾಗಲಿ, ಹುಲಿಗೆಮ್ಮ ದೇವರಿಗೆ ಜಯವಾಗಲಿ

"ಬಂಗಾರದ ಕಡ್ಡಿಯಿಂದ ಸುವಾಸನೆಯ ಎಣ್ಣೆಯನ್ನು ಏರಿಸಿರೆ
ಎಣ್ಣೆ ಏರಿಸಲಿಕ್ಕೆ ಹುಲಿಗೆಮ್ಮ ದೇವಿಗೆ ಕರೆಯಿಸಿರೆ
ಹುಲಿಗೆಮ್ಮ ದೇವಿ ಬರದಿದ್ದರೆ ಇಲ್ಲಿಂದಲೇ ಎಣ್ಣೆ ಏರುವಂತಾಗಲಿ"

ಎಣ್ಣೆಯನ್ನು ಏರಿಸಿರೆ. ಹೀಗೆ ಈ ಎಣ್ಣೆಯನ್ನು ಏರಿಸುವಂತ ಸಂದರ್ಭದಲ್ಲಿ ಮನೆದೇವರುಗಳಿಗೆ ಮತ್ತು ಹಿರಿಯರಿಗೆ ಎಣ್ಣೆ ಏರಿಸುತ್ತ ಮೈಲಾರಲಿಂಗ, ನರಸಿಂಗದೇವರು, ಹುಲಿಗೆಮ್ಮದೇವಿ, ಗಂಗೆ

ಗೌರಿ, ಮರ್ದಾನ ಗಾಯಬ್, ಮುಸ್ಲಿಂ ದೇವರು ಹೀಗೆ ಹತ್ತು ಹಲವು ದೇವರಗಳನ್ನು ಎಣ್ಣೆ ಏರಿಸುತ್ತ ಅವರು ಬಾರದಿದ್ದರೆ ಇಲ್ಲಿ ಅವರ ಹೆಸರನ್ನು ಹೇಳಿ ಏರಿಸುವ, ಎಣ್ಣೆ ಅವರಿಗೆ ಏರಲಿ ಎಂಬ ಆಶಯವು ಇದೆ. ಇವರು ವಲಸೆ ಬಂದಂತ ಸಂದರ್ಭದಲ್ಲಿ ಇವರ ದೇವರುಗಳನ್ನು ಕುರಿತು ಪೂಜಿಸುತ್ತ ಎಣ್ಣೆ ಏರಿಸುತ್ತಿದ್ದು ನಂತರ ಇಲ್ಲಿಯ ಸ್ಥಳೀಯ ದೇವರುಗಳೆ ಇವರ ಮನೆದೇವರುಗಳಾಗಿ ಪರಿವರ್ತಿತವಾಗಿರಬಹುದಾದಂತ ಸಂದರ್ಭದಲ್ಲಿ ಹೀಗೆ ಪೂಜೆಗೆ ಬರದಿದ್ದ ದೇವರುಗಳಿಗೆ ಈ ಎಣ್ಣೆ ಸೇರಲಿ ಎಂದು ಇವರು ಪೂಜಿಸುವುದು ಕಂಡುಬರುತ್ತದೆ. ಜೊತೆಗೆ ಮುಖ್ಯವಾಗಿ ಹಿರಿಯರನ್ನು ಇವರು ದೇವರುಗಳಿಗಿಂತ ಹೆಚ್ಚಾಗಿ ಪೂಜಿಸುವ ಅವರ ನೆನಪಿಗಾಗಿ ಬೆಳ್ಳಿಯ ರೂಪಗಳನ್ನು ಮಾಡಿ ಆರಾಧಿಸುವುದು ಬುಡಕಟ್ಟುಗಳಲ್ಲಿ ಇಂದಿಗೂ ಇರುವ ಪೆಟ್ಟಿಗೆ ದೇವರುಗಳನ್ನು ನೆನಪಿಸುತ್ತದೆ. ಹೀಗೆ ಒಂದು ಸಂದರ್ಭದಲ್ಲಿ ನೆಲೆನಿಂತಾಗ ಹಿರಿಯ ದೇವರು, ಮನೆದೇವರುಗಳನ್ನು ಮದುವೆಯ ಸಂದರ್ಭದಲ್ಲಿ ಮುಖ್ಯವಾಗಿ ಪೂಜಿಸುವುದನ್ನು ಕಾಣಬಹುದು.

"ಪಿಂಜರ ಬನ್ ಕೆ ಪಾಲ್ಕಿ ಚಡ್ ಕೆ
ನಿಗಿನ್ ಲೇನೆ ಆಯೆ ಮಾ" ||ಪ||

"ಭಾಯಿ ನಿಗಿನ್ ಜಾತಾ ಕರ್ ಕೆ
ಭಾಯಿ ಕ್ಯೂ ನಹಿ ಆಯೆಮಾ
ಪಿಂಜರ ಬನಕೆ ಪಾಲ್ಕಿ ಚಡ್‌ಕೆ
ನಿಗಿನ್ ಲೇನೆ ಆಯೆಮಾ"

"ಪೋತರಾ ನಿಗಿನ್ ಜಾತಾ ಕರ್‌ಕೆ
ದಾದಾ ಕ್ಯೂ ನಹಿ ಆಯೆಮಾ
ಪಿಂಜರ ಬನ್‌ಕೆ ಪಾಲ್ ಕಿ ಚಡ್‌ಕೆ
ನಿಗಿನ್ ಲೇನೆ ಆಯೆ ಮಾ"

"ಭಾಯಿ ನಿಗಿನ್ ಜಾತಾ ಕರ್‌ಕೆ
ಭಾನಾ ಕ್ಯೂ ನಹಿ ಆಯೆಮಾ
ಪಿಂಜರ ಬನ್‌ಕೆ ಪಾಲ್ಕಿ ಚಡ್‌ಕೆ
ನಿಗಿನ್ ಲೇನೆ ಆಯೆಮಾ"

"ಶಕ್ಕರ್ ಥೋಡಿ ಲಾಯೆ ಕರ್‌ಕೋ
ಪೀರ ನಕ್ಕೋ ಭೇಜೊಮಾ

ಪಿಂಜರ ಬನ್‌ಕೆ ಪಾಲ್‌ಕಿ ಚಡ್‌ಕೆ

ನಿಗಿನ್ ಲೇನೆ ಆಯೆಮಾ"

ಕುದುರೆಯ ಮೇಲೆ ಕುಳಿತು, ಹುಲಿಯಂತೆ ಅಂದರೆ ಒಳ್ಳೆಯ ಗತ್ತಿನಿಂದ ಮದುವೆ ಮಾಡಿಕೊಂಡು ಹೋಗಲು ಬಂದಿರುವ ಮದುಮಗನ ಮನೆಯವರನ್ನು ಕುರಿತು ಈ ಹಾಡು ಮದುವೆಯ ಸಂದರ್ಭದಲ್ಲಿ ಮದುಮಗನ ಮನೆಯವರ ಹಾವಭಾವಗಳನ್ನು ಕುರಿತು ಅವರ ನಡವಳಿಕೆಯನ್ನು ಕುರಿತು ತಿಳಿಸುತ್ತದೆ. ಇದರ ಭಾವಾರ್ಥ ಈ ರೀತಿ ಇದೆ.

ಕುದುರೆಯ ಮೇಲೆ ಕುಳಿತು ಗತ್ತಿನಿಂದ ಮದುವೆ ಮಾಡಿಕೊಂಡು ಹೋಗಲು ಬಂದಿದ್ದಾರೆ. ಅಣ್ಣ ಮದುವೆ ಮಾಡಿ ಕೊಳ್ಳುತ್ತಿದ್ದಾನೆಂದು, ಅವನ ಅಣ್ಣ ತಮ್ಮಂದಿರೇಕೆ ಬರಲಿಲ್ಲ ಕುದುರೆಯ ಮೇಲೆ ಕುಳಿತು ಗತ್ತಿನಿಂದ ಮದುವೆ ಮಾಡಿಕೊಂಡು ಹೋಗಲು ಬಂದಿದ್ದಾರೆ. ಆದರೆ ಮೊಮ್ಮಗ ಮದುವೆಗೆ ಹೊರಟನೆಂದು ಅಜ್ಜ ಯಾಕೆ ಬರಲಿಲ್ಲ. ಇದೇ ರೀತಿ ಅಣ್ಣ ಮದುವೆಗೆ ಹೊರಟಿರುವನೆಂದು ಅಕ್ಕ ತಂಗಿಯರೇಕೆ ಬಂದಿಲ್ಲ. ನಾವು ಸಕ್ಕರೆ ಕಡಿಮೆ ತಂದಿದ್ದೇವೆಂದು ನಮ್ಮ ಮೆರವಣಿಗೆ ಹಿಂದೆ ಕಳಿಸಬೇಡಿ. ಕುದುರೆ ಹತ್ತಿ ಗತ್ತಿನಿಂದ ಮದುವೆ ಮಾಡಿಕೊಂಡು ಹೋಗಲು ಬಂದಿವ್ರಿ. ಹೀಗೆ ಮದುಮಗನ ಕಡೆಯವರು ಹೆಣ್ಣಿನ ಕಡೆಯವರಿಗೆ ಮದುವೆಯ ಸಂದರ್ಭದಲ್ಲಿ ಕೊಡುವ ವಸ್ತುಗಳಿಗೆ ಏನಾದರು ಕಡಿಮೆ ಇದ್ದರೆ ಸುಧಾರಿಸಿಕೊಂಡು ಮದುವೆ ಮಾಡಿ ಎಂದು ಕೇಳಿಕೊಳ್ಳುವುದು ಈ ಹಾಡಿನಲ್ಲಿ ಕಂಡುಬರುತ್ತದೆ.

"ಆಜ್ ಕಿ ತಿಲ್ ಘುಡಿ
ಅಮ್ಮ ಮ್ಮೆ ಪರ್ ಘುರಿ
ಗಲ್ಲೆ ಮ ಕಮ್ ದಿಯೆ
ಅಮ್ಮ ದೂರ್ ಕ್ಯೂ ದಿಯೆ"

"ಆಜ್ ಕಿ ತಿಲ್ ಘುಡಿ
ಭಾಯಿ ಮೆ ಪರ್ ಘುರಿ
ಕಾನೋ ಮೆ ಕಮ್ ದಿಯೆ
ಭಾಯಿ ದೂರ್ ಕ್ಯೂ ದಿಯೆ"

"ಆಜ್ ಕಿ ತಿಲ್ ಘುಡಿ
ಭಾನಾ ಮೆ ಪರ್ ಘುರಿ
ಹಾತೋ ಮೆ ಕಮ್ ದಿಯೆ
ಬಾನಾ ದೂರ್ ಕ್ಯೂ ದಿಯೆ"

“ಆಜ್ ಕಿ ತಿಲ್ ಘುಡಿ

ಬಾಬಾ ಮ ಪರ್ ಘುರಿ

ನಾಕೋ ಮೆ ಕಮ್ ದಿಯೆ

ಬಾಬಾ ದೂರ್ ಕ್ಯೂ ದಿಯೆ”

ಮದುವೆಯಲ್ಲಿ ಹೆಣ್ಣಿಗೆ ತಾಳಿಕಟ್ಟಿ ಆದ ಸಂದರ್ಭದಲ್ಲಿ ಹಾಡಿನ ಭಾವಾರ್ಥ ಈ ಕೆಳಗಿನಂತಿದೆ.

ಇವತ್ತಿನ ಈ ಕ್ಷಣದಿಂದ ತಾಯಿ ನಾನು ಬೇರೆ ಮನೆಯವಳಾದೆ

ಕೊರಳಿಗೆ ಹಾಕಲು ಕಡಿಮೆ ಬಂಗಾರ ಕೊಟ್ಟೆ

ತಾಯಿ ನನಗೆ ತುಂಬಾ ದೂರ ಮದುವೆ ಮಾಡಿ ಯಾಕೆ ಕೊಟ್ಟೆ.

ಇವತ್ತಿನ ಈ ಕ್ಷಣದಿಂದ ಅಣ್ಣ ನಾನು ಬೇರೆ ಮನೆಯವಳಾದೆ

ಕಿವಿಗೆ ಹಾಕಲು ಬಂಗಾರ ಕಡಿಮೆ ಕೊಟ್ಟೆ

ಅಣ್ಣ ನನ್ನ ತುಂಬಾ ದೂರ ಯಾಕೆ ಮಾಡಿದೆ.

ಇವತ್ತಿನ ಈ ಕ್ಷಣದಿಂದ ಅಕ್ಕ ನಾನು ಬೇರೆ ಮನೆಯವಳಾದೆ

ಕೈಗೆ ಹಾಕಲು ಬಂಗಾರ ಕಡಿಮೆ ಕೊಟ್ಟೆ

ಅಕ್ಕ ತುಂಬಾ ದೂರ ನನಗೆ ಯಾಕೆ ಮದುವೆ ಮಾಡಿ ಕೊಟ್ಟೆ.

ಇವತ್ತಿನ ಈ ಕ್ಷಣದಿಂದ ತಂದೆ ನಾನು ಬೇರೆ ಮನೆಯವಳಾದೆ

ಮೂಗಿಗೆ ಹಾಕಲು ಕಡಿಮೆ ಬಂಗಾರ ಕೊಟ್ಟೆ

ತಂದೆ ನನ್ನನ್ನು ತುಂಬಾ ದೂರ ಯಾಕೆ ಮಾಡಿದೆ.

ಈ ರೀತಿ ಮದುವೆಯಾದಾಗ ವಿದಾಯ ಹೇಳುತ್ತಲೇ ತನಗೆ ಕಡಿಮೆ ಬಂಗಾರ ನೀಡಿದರ ಬಗ್ಗೆ ಮದುಮಗಳು ಅಸಂತೋಷಗೊಂಡಿರುವುದನ್ನು ಹಾಡಿನ ಮೂಲಕ ವ್ಯಕ್ತಪಡಿಸುತ್ತಿದ್ದಾಳೆ.

ಮದುವೆಯ ನಂತರ ಬೀಳ್ಕೊಡುಗೆ ಹಾಡುಗಳು

“ಮೈ ಜಾತು ಅಮ್ಮ ಸಾಸೋ ಕೆ ಸಾತ್

ಸರಕಾರಿ ಬಸ್ಸೋಮೆ

ಅಮ್ಮ ಜೋ ರೋನೆ ಲಗೇ

ಜರ್ ಕೆ ಪಲ್ಲುವ ಭೀಗೆ”

“ಮೈ ಜಾತು ಬಾಬಾ ಸಸರೋ ಕೆ ಸಾತ್.

ಸರಕಾರಿ ಬಸ್ಸೋಮೆ

ಬಾಬಾ ಜೋ ರೋನೆ ಲಗೇ

ಜರ್ ಕೆ ಶಮಲೆ ಭೀಗೆ

ಮ್ಯೆ ಜಾತು ಬಾಬಾ ಸರಕಾರಿ ಬಸ್ಸೋಮೆ"

"ಮ್ಯೆ ಜಾತು ಭಾಯಾ ದೇವರಾಂಕೆ ಸಾತ್ ಸರಕಾರಿ ಬಸ್ಸೋಮೆ

ಭಾಯಿ ಜೋ ರೋನೆ ಲಗೇ

ಹಾತ್ ಕೆ ಕರಚೀಫ್ ಭೀಗೆ

ಮ್ಯೆ ಜಾತು ಭಾಯ ಸರಕಾರಿ ಬಸ್ಸೋಮೆ"

"ಮ್ಯೆ ಜಾತು ಭಾನಾ ನಡಂದಾಕೆ ಸಾತ್ ಸಕಾರಿ ಬಸ್ಸೋಮೆ

ಭಾನಾ ಜೋ ರೋನೆ ಲಗೇ

ಜರ್ ಕೆ ಚುನರ್‍ಯಾ ಭೀಗೆ

ಮ್ಯೆ ಜಾತು ಭಾನಾ ನಡಂದಾ ಕೆ ಸಾತ್ ಸರಕಾರಿ ಬಸ್ಸೋಮೆ"

ನಾನು ಹೋಗ್ತೀನಮ್ಮ ನಮ್ಮ ಅತ್ತೆಯರೊಂದಿಗೆ ಸರಕಾರಿ ಬಸ್ಸಿನಲ್ಲಿ

ಅಮ್ಮ ಅತ್ತು ಅತ್ತು ಅವಳ ಜರಿಯ ಸೀರೆಯು ಒದ್ದೆಯಾಗಿದೆ

ನಾನು ಹೋಗ್ತೀನಪ್ಪ ನಮ್ಮ ಮಾವಂದಿರೊಂದಿಗೆ ಸರ್ಕಾರಿ ಬಸ್ಸಿನಲ್ಲಿ

ಅಪ್ಪ ಅತ್ತಿದ್ದಕ್ಕೆ ಅವರ ಜರಿಯ ಶಲ್ಯ ಒದ್ದೆಯಾಗಿದೆ

ನಾನು ಹೋಗ್ತೀನಣ್ಣ ನಮ್ಮ ಭಾವಂದಿರೊಂದಿಗೆ ಸರ್ಕಾರಿ ಬಸ್ಸಿನಲ್ಲಿ

ಅಣ್ಣ ಅತ್ತು ಕರವಸ್ತ್ರ ಒದ್ದೆಯಾಗಿದೆ

ನಾನು ಹೋಗ್ತೀನಕ್ಕ, ವಾರಗಿತ್ತಿಯರೊಂದಿಗೆ ಸರಕಾರಿ ಬಸ್ಸಿನಲ್ಲಿ

ಅಕ್ಕ ಅತ್ತಿದ್ದಕ್ಕೆ ಜರಿಯ ದುಪ್ಪಟ್ಟ ಒದ್ದೆಯಾಗಿದೆ

ಹೀಗೆ ವಿಶೇಷವಾಗಿ ಸರ್ಕಾರಿ ಬಸ್ಸಿನಲ್ಲಿ ಖುಷಿಯಿಂದ ಹೋಗುವ ಸಂದರ್ಭದಲ್ಲೂ ತನ್ನ ತವರು ಮನೆಯವರನ್ನು ಅಗಲಿ ತಂದೆ, ತಾಯಿ, ಅಣ್ಣ, ಅಕ್ಕ, ತಂಗಿಯರನ್ನು ಬಿಟ್ಟು ಹೋಗುವ ದುಃಖವನ್ನು ಮದುಮಗಳು ಈ ಹಾಡಿನಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದು.

"ಮ್ಯೆ ಖರ್ಚು ಬಾರಾ ಹಜಾರ್

ಚಲೋ ಬೀವಿ ಘರ್ ಅಪನಾ" ||ಪ||

"ಮೇರೆ ಬಾಬಾ ಸೆ ಮಿಲ್‌ತು ಕನಾ

ಎ ದೊಲೆ ಕೋ ಟೆಹರೋ ಕನಾ

ತೇರೆ ಬಾಬಾ ಸೆ ಕ್ಯಾ ಮಿಲ್‌ನಾ
ಮೈ ಖರ್ಚು ಬಾರಾ ಹಜಾರ್
ಚಲೋ ಬೀವಿ ಘುರ ಅಪನಾ"

"ಮೇರೆ ಅಮ್ಮಸೆ ಮಿಲ್‌ತು ಕನಾ
ವೋ ದೂಲೆಕೋ ಟೆಹರೋ ಕನಾ
ತೇರೆ ಅಮ್ಮಸೆ ಕ್ಯಾ ಮಿಲ್ ನಾ
ಮೈ ಖರ್ಚು ಬಾರಾ ಹಜಾರ್
ಚಲೋ ಬೀವಿ ಘುರ್ ಅಪನಾ"

"ಮೇರೆ ಭಾಯಾ ಸೇ ಮಿಲ್‌ತು ಕನಾ
ಎ ದೂಲೆ ಕೋ ಟೆಹರೋ ಕನಾ
ತೆರೆ ಭಾಯಾಸೆ ಕ್ಯಾ ಮಿಲೆನಾ
ಮೈ ಖರ್ಚು ಬಾರಾ ಹಜಾರ್
ಚಲೋ ಬೀವಿ ಘುರ್ ಅಪನಾ"

"ಮೇರೆ ಭಾನಾ ಸೆ ಮಿಲ್‌ತು ಕನಾ
ಎ ದೂಲೆ ಕೋ ಟೆಹರೋ ಕನಾ
ತೇರೆ ಭಾನಾಸೆ ಕ್ಯಾ ಮಿಲ್‌ನಾ
ಮೈ ಖರ್ಚು ಬಾರಾ ಹಜಾರ್
ಚಲೋ ಬೀವಿ ಘುರ್ ಅಪನಾ"

"ಮೇರಿ ದಾದಿ ಸೆ ಮಿಲ್‌ತು ಕನಾ
ಎ ದೊಲೆ ಕೋ ಟೆಹರೋ ಕನಾ
ತೇರಿ ದಾದಿ ಸೇ ಕ್ಯಾ ಮಿಲ್‌ನಾ
ಮೈ ಖರ್ಚೂ ಬಾರಾ ಹಜಾರ್
ಚಲೋ ಬೀವಿ ಘುರ್ ಅಪನಾ"

ಮದುವೆಯಾದ ನಂತರ ಮದುಮಗ ಮದುಮಗಳನ್ನು ತನ್ನ ಮನೆಗೆ ಕರೆದೊಯ್ಯುವಂತ ಸಂದರ್ಭದಲ್ಲಿ ತಾನು ಹನ್ನೆರಡು ಸಾವಿರ ರೂಪಾಯಿ ಮದುವೆಗೆ ಖರ್ಚು ಮಾಡಿದ್ದೇನೆ ನಡೆ ನಮ್ಮ ಮನೆಗೆ ಹೋಗೋಣ ಎಂದು ಕರೆದರೆ ನನ್ನ ತಾಯಿಯನ್ನು ಮಾತನಾಡಬೇಕು ಸ್ವಲ್ಪ ನಿಲ್ಲಿ ಎಂದು ಮದುಮಗಳು ಹೇಳಿದರೆ ನಾನು ಹನ್ನೆರಡು ಸಾವಿರ ಖರ್ಚು ಮಾಡಿದ್ದೇನೆ, ನಡೆ ಹೆಣ್ಣೆ ನಮ್ಮ

ಮನೆಗೆ ಹೋಗೋಣ ಎಂದು ಮತ್ತೆ ಮದುಮಗ ಕರೆಯುತ್ತಾನೆ. ಹೀಗೆ ಇಡೀ ಹಾಡಿನಲ್ಲಿ ಮದುಮಗ ತನ್ನ ಮನೆಗೆ ಕರೆದರೆ ಮದುಮಗಳು ತನ್ನ ತಂದೆ, ತಾಯಿ, ಅಣ್ಣ, ಅಕ್ಕಂದಿರನ್ನು ಮಾತನಾಡಿಸಬೇಕೆಂದು ತನ್ನ ತವರು ಮನೆಯವರೊಂದಿಗೆ ಬಂಧನ ಕಳೆಯುವುದು ತುಂಬಾ ನೋವಿನ ಸಂಗತಿ ಎಂದು ತನ್ನ ಭಾವನೆಗಳನ್ನು ವ್ಯಕ್ತಪಡಿಸಿದರೆ ಮದುಮಗ ತಾನು ಹನ್ನೆರಡು ಸಾವಿರ ಖರ್ಚು ಮಾಡಿದ್ದೇನೆ, ನನ್ನ ಮನೆಗೆ ಹೋಗೋಣ ಬಾ ಎಂದು ಕರೆಯುತ್ತಿರುವ ಇದು ವಿದಾಯದ ಹಾಡಾಗಿದೆ.

ಕೈಕೋ ರೋತಿ ದುಲ್ಹನ ಬನಿ
ಅಪನ ಘರ್ ಸಾತ್ ಹೈ,
    ತುಮ್ಹಾರಿ ಅಮ್ಮ ಯಾದ್ ಆಯಿತೋ
    ಹಮಾರಿ ಅಮ್ಮ ಸಾತ್ ಹೈ.
ಕೈಕು ರೋತಿ ದುಲ್ಹನ ಬನಿ
ಅಪನ ಘರ್ ಸಾತ್ ಹೈ,
    ತುಮ್ಹಾರೆ ಬಾಬಾ ಯಾದ್ ಆಯೆತೋ
    ಹಮಾರೆ ಬಾಬಾ ಸಾತ್ ಹೈ.
ಕೈಕು ರೋತಿ ದುಲ್ಬನ ಬೇಟಿ
ಅಮ್ಮಕಾ ಘರ್ ದೂರ್ ಹೈ,
    ತುಮ್ಹಾರಿ ಅಮ್ಮ ಯಾದ್ ಆಯೆತೋ
    ಹಮಾರಿ ಅಮ್ಮ ಸಾತ್ ಹೈ.
ಕೈಕು ರೋತಿ ದುಲ್ಹನ್ ಬೇಟಿ
ಬಾಬಾಕಾ ಘರ್ ದೂರ್ ಹೈ,
    ತುಮಾರೆ ಬಾಬಾ ಯಾದ್ ಆಯತೋ
    ಹಮಾರೆ ಬಾಬಾ ಸಾತ್ ಹೈ.
ಕೈಕೋ ರೋತಿ ದುಲ್ಹನ ಬೇಟಿ
ಭಾಯಿಕಾ ಘರ್ ದೂರ್ ಹೈ,
    ತುಮ್ಹಾರೆ ಭಾಯಿ ಯಾದ್ ಆಯೆತೋ
    ಹಮಾರೆ ಭಾಯಿ ಸಾತ್ ಹೈ.
ಕೈಕೋ ರೋತಿ ದುಲ್ಹನ್ ಬೇಟಿ
ಬೆಹನಾಕಾ ಘರ್ ದೂರ ಹೈ,
    ತುಮ್ಹಾರೆ ಬೆಹನಾ ಯಾದ್ ಆಯೆತೋ
    ಹಮಾರೆ ಬೆಹನಾ ಸಾತ್ ಹೈ.

ಕೈಕೋ ರೋತಿ ದುಲ್ಹನ್ ಬೇಟಿ
ಅಪನಾ ಘರ್ ಸಾತ್ ಹೈ,
ತುಮ್ಹಾರೆ ಭಾವಜಾ ಯಾದ್ ಆಯೆತೋ
ಹಮಾರೆ ಭಾವಜಾ ಸಾತ್ ಹೈ.

ವಿದಾಯದ ನಂತರ ಮದುಮಗಳು ತನ್ನ ತವರು ಮನೆಯವರನ್ನು ನೆನೆಸಿ ಅಳುತ್ತಿರುವ ಸಂದರ್ಭದಲ್ಲಿ ಮದುಮಗ ಅವಳಿಗೆ ಸಮಾಧಾನ ಪಡಿಸುವಂತಹ ಹಾಡುಗಳು ಸಹ ಸಿಗುತ್ತವೆ. ಈ ಹಾಡಿನ ಭಾವಾರ್ಥ ಈ ಕೆಳಗಿನಂತಿದೆ.

ಯಾಕೆ ಆಳುತ್ತೀಯಾ ಮದುಮಗಳೇ
ನಮ್ಮ ಮನೆಯವರು ನಿನ್ನ ಜೊತೆಗಿದ್ದಾರೆ,
ನಿಮ್ಮ ತಾಯಿ ನೆನಪಾದರೆ
ನಮ್ಮ ತಾಯಿ ನಿನ್ನ ಜೊತೆಗಿದ್ದಾಳೆ.

ಯಾಕೆ ಆಳುತ್ತೀಯಾ ಮದುಮಗಳೇ
ನಮ್ಮ ಮನೆಯವರು ನಿನ್ನ ಜೊತೆಗಿದ್ದಾರೆ,
ನಿನ್ನ ತಂದೆಯ ನೆನಪಾದರೆ
ನನ್ನ ತಂದೆಯವರು ಜೊತೆಗಿದ್ದಾರೆ.

ಯಾಕೆ ಆಳುತ್ತೀಯಾ ಮದುಮಗಳೇ
ನಮ್ಮ ಮನೆಯವರು ನಿನ್ನ ಜೊತೆಗಿದ್ದಾರೆ,
ನಿನ್ನ ಅಣ್ಣನ ಮನೆ ದೂರವಿದೆ
ನಿನ್ನ ಅಣ್ಣ ನೆನಪು ಬಂದರೆ
ನನ್ನ ಅಣ್ಣನು ಜೊತೆಗಿದ್ದಾನೆ.

ಯಾಕೆ ಆಳುತ್ತೀಯಾ ಮದುಮಗಳೇ
ನಮ್ಮ ಮನೆಯವರು ನಿನ್ನ ಜೊತೆಗಿದ್ದಾರೆ,
ನಿನ್ನ ಅಕ್ಕನ ಮನೆ ದೂರವಿದೆ
ನಿನ್ನ ಅಕ್ಕನ ನೆನಪಾದರೆ
ನನ್ನ ಅಕ್ಕಂದಿರು ನಿನ್ನ ಜೊತೆಗಿರುತ್ತಾರೆ.

ಯಾಕೆ ಆಳುತ್ತೀಯಾ ಮದುಮಗಳೇ
ನಮ್ಮ ಮನೆಯವರು ನಿನ್ನ ಜೊತೆಗಿದ್ದಾರೆ,

ನಿನ್ನ ಅತ್ತಿಗೆಯರು ನೆನಪಾದರೆ
ನನ್ನ ಅತ್ತಿಗೆಯವರು ಜೊತೆಗಿದ್ದಾರೆ.

ಹೀಗೆ ತನ್ನ ಮನೆಯವರೊಂದಿಗೆ ಬೆರೆತು ಬಾಳುವಂತೆ ಅವಳ ಮನೆಯವರಂತೆ ತನ್ನ ಮನೆಯವರು ಅವಳಿಗೆ ಹೊಂದಿಕೊಳ್ಳುವುದರ ಜೊತೆಗೆ ಅವಳು ಹೊಂದಿಕೊಂಡು ಸಂಸಾರ ಸಾಗಿಸಲಿ ಎಂದು ಆಸೆ ಪಡುತ್ತಾನೆ.

"ಮಿಸರಿ ಕೆ ಥೈಲೆ
ಲೈ ಮೇರೆ ಭಾಯಿ
ಮಿಸರಿ ತೋಲಿಯಾ
ಬನಿ ಜಾಲಿಯಾ
ಚಾತುರ್ ಬೇಟಿ ದೇ

ಮಿಸರಿ ಕೆ ಥೈಲೆ ಲೈ ತೋ ಲೈ
ಬೈಟ್ ಮೇರಿ ಬೈ
ನನ್ಹಿ ನಾದಾನ್ ಖೇಲ್‌ನೆ ಗೈ
ಬೈಟ್ ಮೇರಿ ಬೈ

ಖೋಪರೆ ಕೆ ಥೈಲ ಲೈ ಮೇರೆ ಭಾಯಿ
ಖಜುರ್ ತೋಲಿಯಾ
ಬನಿ ಜಾಲಿಯಾ
ಚಾತುರ್ ಬೇಟಿ ದೇ

ಖೋಪರೆ ಕೆ ಥೈಲೆ ಲೈ ತೊ ಲೈ
ಬೈಟ್ ಮೇರಿ ಬೈ
ನನ್ಹಿ ನಾದಾನ್ ಖೇಲಂನೆ ಗೈ
ಬೈಟ್ ಮೇರಿ ಬೈ

ಖಜುರಾ ಕೆ ಪೂಡೆ ಲೈ ಮೇರೆ ಭಾಯಿ
ಲೈ ಮೇರೆ ಭಾಯಿ
ಖಜುರ್ ತೋಲಿಯಾ
ಬನಿ ಜಾಲಿಯಾ
ಚಾತುರ್ ಬೇಟಿ ದೆ

ಖಜುರಾ ಕೆ ಪೂಡೆ ಲೈ ತೊ ಲೈ

ಬೈಟ್ ಮೇರಿ ಬೈ

ನನ್ಹಿ ನಾದಾನ್ ಖೇಲ್‌ನೆ ಗೈ

ಬೈಟ್ ಮೆರಿ ಬೈ

ಪೂಲೋ ಕೆ ಪೂಡೆ ಲೈ ಮೇರೆ ಭಾಯಿ

ಲೈ ಮೇರೆ ಭಾಯಿ

ಪೂಲಾ ಜಾನಿಯಾ

ಚಾತುರ ಬೇಟಿ ದೇ

ಉಜಾಲೆ ಪಾರೆ ಬೇಟಿ ದೇತು

ಬೆಹನ್ ನಹಿ ಮಾನ್‌ತಿ

ಮದುವೆಯ ಸಂದರ್ಭದಲ್ಲಿ ತಾಳಿ ಆದ ನಂತರ ದೇವರ ಮನೆಗೆ ಕಂಕಣ ಬಿಚ್ಚಲು ಮದುಮಗ ಮದುಮಗಳನ್ನು ಕೋಣೆಯೊಳಗೆ ಕರೆದುಕೊಂಡು ಬರುವಾಗ ಒನಕೆ ಅಡ್ಡ ಹಿಡಿದು ಮಗಳನ್ನು ಕೊಡಬೇಕೆಂದು ಅಕ್ಕ ತಂಗಿಯರು ಅಣ್ಣನಿಗೆ ಕೇಳುವ ಸಂದರ್ಭದಲ್ಲಿ ಈ ಹಾಡನ್ನು ಹಾಡುವರು. ಒನಕೆ ಸರಿಸಿ ಅಣ್ಣನಿಂದ ದುಡ್ಡು ಪಡೆದು ಮಗಳನ್ನು ಕೊಡಬೇಕೆಂದು ಭಾಷೆ ತೆಗೆದು ಕೊಳ್ಳುವಳು.

ಕಲ್ಲಸಕ್ಕರೆಯ ಚೀಲ ತಂದಿರುವೆ

ಕಲ್ಲುಸಕ್ಕರೆಯನ್ನು ತೂಕ ಮಾಡಿಕೊ

ನಿನ್ನ ಚಾಣಾಕ್ಷ್ಯ ಮಗಳನ್ನು ಕೊಡು

ಕಲ್ಲು ಸಕ್ಕರೆ ತಂದರೆ ತಂದೆ

ಕುಳಿತು ಕೊಳ್ಳಕ್ಕ ನನ್ನ ಮಗಳು

ಆಡಲಿಕೆ ಹೊರಗಡೆ ಹೋಗ್ಯಾಳಾ

ಹೀಗೆಯೇ ಅಕ್ಕ ಉತ್ತುತ್ತಿಯ ಚೀಲ, ಕೊಬ್ಬರಿಯ ಚೀಲ, ಹೂವಿನ ಪೊಟ್ಟಣ ತಂದಿರುವೆ ನಿನ್ನ ಮಗಳನ್ನು ಕೊಡು ಎಂದು ಕೇಳುತ್ತಾಳೆ. ಅದಕ್ಕೆ ನನ್ನ ಮಗಳು ಹೊರಗಡೆ ಆಡಲಿಕ್ಕೆ ಹೋಗಿದ್ದಾಳೆ ಎಂದು ಹೇಳುತ್ತಾನೆ. ಕೊನೆಗೆ ಮಗಳು ಕೊಡದಿದ್ದರೆ ಕೋಣೆಯೊಳಗೆ ಬಿಡುವುದಿಲ್ಲ ಎಂದು ಹಠ ಹಿಡಿಯುತ್ತಾಳೆ. ಆಗ ಆಯಿತು ಮಗಳನ್ನು ಕೊಡುತ್ತೇನೆ ಎಂದು ಅಣ್ಣ ಒಪ್ಪಿಕೊಂಡ ನಂತರ ಕೋಣೆಯೊಳಗೆ ಹೋಗಲು ಜಾಗ ಬಿಡುತ್ತಾರೆ.

ಮದುಮಗಳು ಗಂಡನ ಮನೆಗೆ ಹೋಗುವಾಗ ಹಾಡುವ ಹಾಡು-

“ರೋತೆ ರೋತೆ ಜಾತಿ
ಸಾವುರೇ ಕೀ ಬೇಟಿ
ತೂ ನಕ್ಕೋ ರೋಗೆ ಮಾಯಿ
ತೇರೆ ಬಾಲೆ ಬಾಲ್ ಗಜಮೋತಿ
ಜೇಜ್ ನಿಕಲ್ಯಾ ಬೇಟಿ
ಜೇಜ್ ಕೆ ಮೂಕು ಹಾತಿ
ಅಬಿ ಕ್ಯಾ ಬೋಲ್ ಬೇಟಿ
ಮೇರೆ ನತ್ ಕು ಚಾಲಿಸ್ ಮೋತಿ”

ಅಳುತ್ತಾ ಅಳುತ್ತಾ ಹೋಗುತ್ತಿದ್ದಾಳೆ ಮನೆ ಮಗಳು, ಅಳಬೇಡ ನಮ್ಮ ಮಗಳೇ ನಿನ್ನ ಕೂದಲಿನ ಎಳೆ ಎಳೆಗೂ ದೊಡ್ಡ ಮುತ್ತನ್ನು ಪೋಣಿಸುವೆ. ನಿನ್ನ ಮದುವೆಯ ಸಾಮಾನುಗಳನ್ನು ಹೊತ್ತು ಆನೆಯು ಹೊರಟಿದೆ. ನಿನಗೆ ಇನ್ನೇನು ಬೇಕು ಎಂದು ತಾಯಿ ಮಗಳನ್ನು ಕೇಳಿದರೆ ನನ್ನ ಮೂಗಿನ ನತ್ತಿಗೆ ನಲವತ್ತು ಮುತ್ತುಗಳನ್ನು ಕೊಡು ಎಂದು ಮಗಳು ತಾಯಿಗೆ ಕೇಳುತ್ತಾಳೆ.

“ಸುನಾರ್ ಘರ್ ಕಾ ಸುನ್ನಾ
ಮನಾರ್ ಘರ್ ಕಾ ಪೋತ್
ಮಾ ತುಜೆ ಸುವಾಗ್ ಚಡ್‌ತಾ ಆಜ್
ಚಾಷುಂಬೆ ಕಿ ರಾತ್
ಉಜಾಲೆ ಕೆ ಪಾರೆ
ಚುಡಿಯಾ ಚಿವ್ ಚಿವ್ ಆರೆ
ಮೇರಿ ಸುವಾಗಿನ್ ಬೊಮ್ಮನಿಕಾ
ಬಾಸಿ ಫೂಲ್ ಉತಾರೆ”

ಅಕ್ಕಸಾಲಿಗನ ಮನೆಯಿಂದ ತಂದ ಚಿನ್ನ ಹರಳು, ನಿನಗೆ ಮುತ್ತೈದೆತನ ದೊರೆಯುತ್ತೆ. ಇಂದಿನ ಬುಧವಾರದ ರಾತ್ರಿಯಂದು ಬೆಳಗಿನ ಜಾವದಲ್ಲಿ ಗುಬ್ಬಿಗಳು ಚಿಲಿಪಿಲಿ ಗುಟ್ಟುತ್ತಿವೆ. ಬ್ರಾಹ್ಮಣರ ಕನ್ನೆಯಂತೆ ಕಂಗೊಳಿಸುವ ನನ್ನ ಸುಮಂಗಲೆಯು ಮುಡಿದ ನಿನ್ನೆಯ ಹೂವುಗಳನ್ನು ತೆಗೆಯಿರಿ ಎಂದು ಹೇಳುವ ಈ ಹಾಡು ಮತ್ತೊಮ್ಮೆ ಮದುಮಗಳನ್ನು ಬ್ರಾಹ್ಮಣರ ಕನ್ನೆಗೆ ಹೋಲಿಸುವುದು ಹಾಗೆಯೇ ಮದುಮಗಳು ಮುಡಿದ ಹೂವುಗಳನ್ನು ತೆಗೆಯಲು ಗುಬ್ಬಿಗಳಿಗೆ ಹೇಳುತ್ತ ಹೊಸ ಬಾಳಿನಲ್ಲಿ ಕಾಲಿಡುತ್ತಿರುವುದನ್ನು ಸಂಕೇತಿಸುತ್ತದೆ.

“ಬಂಗಡ್ಯಾ ಹರೇ ದಾದಾ
ತೆರೆ ಸಿರ್‌ಕು ಲಗೇ ಚಿಂದಡಿ

ಮೇರಿ ಸುವಾಗಿನ್ ಬೊಮ್ಮನಿಕು
ತು ಪಿನಾರೆ ಕಾಂಚ್ ಕಿ ಬಂಗಡಿ"

"ಬಂಗಡ್ಯಾ ಹರೇ ದಾದಾ
ತೇರೆ ಸರ್ ಕೋ ಲಗೇ ಚಿಂದಡ
ಮೇರಿ ಸುವಾಗಿನ್ ಬೊಮ್ಮನಿಕು
ತೂ ಪಿನಾರೆ ದೂರಾ ನಗದಾ
ಬಂಗಡ್ಯಾ ಪೆಹೆನತಿ ಬೊಮ್ಮನಿ
ಇಸ್ ಬಂಗಡಿ ಕರೆಲಾ
ಮಾ ತೇರೆ ನನ್ಹಿ ಸುವಾಗ್ ಕೋ
ಸತ್ಯೈ ಹೋಗಿ ಖಾಲಾ"

ಬಳೆಗಾರ ಮದುಮಗಳಿಗೆ ಬಳೆಗಳನ್ನು ಹಾಕುವಂತ ಸಂದರ್ಭದಲ್ಲಿ ಈ ಮೇಲಿನ ಹಾಡನ್ನು ಹಾಡುವರು. ಈ ಹಾಡಿನ ತಾತ್ಪರ್ಯ ಈ ರೀತಿಯಾಗಿರುವುದು. ಬಳೆಗಳನ್ನು ಹಾಕುವ ಯಜಮಾನ ನಿನ್ನ ತಲೆಗೆ ರುಮಾಲನ್ನು ಕಟ್ಟಿಕೊಂಡು ನನ್ನ ಬ್ರಾಹ್ಮಣ ಕನ್ನೆಯಂತಿರುವ ಮದುಮಗಳಿಗೆ ಗಾಜಿನ ಬಳೆಗಳನ್ನು ಏರಿಸು. ಜೋಡಿ ಜೋಡಿ ಬಳೆಗಳನ್ನು ಕೈಯಲ್ಲಿ ಏರಿಸು. ಬಳೆಗಳನ್ನು ತೊಡುತ್ತಿರುವ ಬ್ರಾಹ್ಮಣರ ಕನ್ನೆಯಂತಿರುವ ಮದುಮಗಳ ಈ ಬಳೆಗಳು ಮುತ್ತೈದೆಯ ಸಂಕೇತ. ಮದುಮಗಳ ಚಿಕ್ಕಮ್ಮಂದಿರೆಲ್ಲಾ ದೃಷ್ಟಿಯಾಗದಿರಲೆಂದು ಹರಸುತ್ತಿದ್ದಾರೆ.

ಲಾಲಿ ಹಾಡು

ಬಂಗಾರ ತೊಟ್ಟಿಲ
ಬೆಳ್ಳಿಯ ಹಿಡಿಹಗ್ಗ
ಶೃಂಗರದ ಶ್ರೀ ಕೃಷ್ಣಗ
ಚೆಂದಾಗಿ ತೂಗಿರಿ ಜೋ ಜೋ ||ಪ||
ಅಕ್ಕಿಯ ಪಾಯಸ
ಬಳೆದು ಬಟ್ಟಲ ತುಂಬಿ
ತುತ್ತಮಾಡಿ ಉಣಿಸಿದರೆ
ಹಠಮಾರಿ ಅಳುತಾನೆ ಜೋ ಜೋ
ಕಣ್ಣಿಗೆ ಕಾಡಿಗೆ
ತೀಡಿ ತೀಡಿ ಹಚ್ಚಿದರೆ
ಹಠಮಾರಿ ಅಳುತಾನೆ ಜೋ ಜೋ

ಬಂಗಾರ ತೊಟ್ಟಿಲ ಬೆಳ್ಳಿಯ ಹಿಡಿಹಗ್ಗ
ಉತ್ತತ್ತಿ ಪಾಯಸ
ಎರೆದು ಬಟ್ಟಲ ತುಂಬಿ
ತುತ್ತು ಮಾಡಿ ಉಣಿಸಿದರೆ
ಹಠಮಾರಿ ಅಳುತಾನೆ ಜೋ ಜೋ
ಕಾಲ ಮೇಲೆ ನೀರ ಬಿದ್ದು
ಸೂರ್ಯ ಚಂದ್ರರ ಕಂಡು
ಅದರಂತೆ ತಾ ತೋರಿ
ಬೋರಾಡಿ ಅಳುತಾನೆ ಜೋ ಜೋ
ಕಿವಿಯಾಗ ಕಿವಿಮುರಿಗಿ
ಕಾಲಗ ಹಾಲಗಡಗ
ಶೃಂಗಾರದ ಶ್ರೀಕೃಷ್ಣಗ
ಚಂದಾಗಿ ತೂಗಿರಿ ಜೋ ಜೋ
ಬಂಗಾರ ತೊಟ್ಟಿಲ ಬೆಳ್ಳಿಯ ಹಿಡಿಹಗ್ಗ

ಮಗುವಿನ ನಾಮಕರಣದ ಸಂದರ್ಭದಲ್ಲಿ ಹಾಡುವ ಹಾಡುಗಳು-

"ಸುನ್ನೇಕಾ ಗವಾರ
ರೇಷಮ್ ಕೆ ಹರೆಡೋರೆ
ಹುಲಿಗೆಮ್ಮ ಬಾಯಿ ಕಾ ಹೈ ಜಹೆರಾ
ಝುಲಾಂದೆ ಗವಾರಾ"

"ಸುನ್ನೇಕಾ ಗವಾರ
ರೇಷಮ್ ಕೆ ಹರೆಡೋರೆ
ಸಾಂಚೆ ಮರ್ದಾನ್ ವಲಿಯೊಂಕಾ ಹೈ ಜಹೆರಾ
ಜುಲೆಂದೆ ಗವಾರ"

"ಸುನ್ನೇಕಾ ಗವಾರ
ರೇಷಮ್ ಕೆ ಹರೆಡೋರೆ
ರಾಜಾಭಕ್ಷಾರ ಕಾ ಹೈ ಜಹೆರಾ
ಜುಲೆಂದೆ ಗವಾರಾ"

"ಸುನ್ನೇಕಾ ಗವಾರ
ರೇಷಮ್ ಕೆ ಹರೆಡೋರೆ
ಗವಿಸ್ವಾಮಿ ಕಾ ಹೈ ಜಹೆರಾ
ಜುಲೆಂದೆ ಗವಾರಾ"

ಮಗುವಿನ ನಾಮಕರಣದ ಸಂದರ್ಭದಲ್ಲಿ ಹಾಡುವ ಹಾಡುಗಳು ಹಿಂದಿಯಲ್ಲಿದ್ದು ಅವುಗಳನ್ನು ಕನ್ನಡದಲ್ಲಿ ಅನುವಾದ ಮಾಡುತ್ತ ಅರ್ಥೈಸುವ ಪ್ರಯತ್ನ ಮಾಡಲಾಗಿದೆ.

ಬಂಗಾರದ ತೊಟ್ಟಿಲು
ರೇಷ್ಮೆಯ ಹಸಿರು ಹಗ್ಗ
ಹುಲಿಗೆಮ್ಮ ದೇವಿಯ ಮಗುವಿದು
ತೂಗಲಿ ತೊಟ್ಟಿಲು.

ಬಂಗಾರದ ತೊಟ್ಟಿಲು
ರೇಷ್ಮೆಯ ಹಸಿರು ಹಗ್ಗ
ಮರ್ದಾನಿ ದೇವರ ಮುದ್ದಿನ ಕಣ್ಮಣಿಯಿದು
ತೂಗಲಿ ತೊಟ್ಟಿಲು.

ಬಂಗಾರದ ತೊಟ್ಟಿಲು
ರೇಷ್ಮೆಯ ಹಸಿರು ಹಗ್ಗ
ರಾಜಾಭಕ್ಷಾರ ದೇವರ ಮುದ್ದಿನ ಕಣ್ಮಣಿಯ
ತೂಗಲಿ ತೊಟ್ಟಿಲು.

ಬಂಗಾರದ ತೊಟ್ಟಿಲು
ರೇಷ್ಮೆಯ ಹಸಿರು ಹಗ್ಗ
ಗವಿಸಿದ್ದೇಶ್ವರ ಸ್ವಾಮಿಯ ಮುದ್ದಿನ ಕಣ್ಮಣಿಯ
ತೂಗಲಿ ತೊಟ್ಟಿಲು.

ಈ ರೀತಿ ಹಲವು ಮನೆದೇವರ ಹಾಗೂ ಪ್ರಭಾವಿತ ದೇವರುಗಳ ಮುದ್ದಿನ ಕಣ್ಮಣಿ ಎಂದು ಮಗುವನ್ನು ತೊಟ್ಟಿಲಲ್ಲಿ ಹಾಕಿ ತೂಗುವರು. ಈ ಸಂದರ್ಭದಲ್ಲಿ ಮೇಲಿನಂತೆ ಹಾಡುವರು.

"ತಾನಾ ಕ್ಯೂ ರೋತ
ಚುಪ್ ಕ್ಯೂ ನೈ ಸೋತ
ಅಪನೆ ಛೋಟೆ ಪಾವೋಸೆ
ಪಾಯಲ್ ಬಜಾತಾ ಹೈ ತಾನಾ" ||ಪ||

"ತಾನಾ ಕ್ಯೂ ರೋತ
ಚುಪ್ ಕ್ಯೂ ನೈ ಸೋತ
ಅಪನೆ ದಾದಾ ಕೆ ಗೋದೊಮೆ
ಖೇಲುಂಗ ಕತಾಹೈ ತಾನಾ"

"ತಾನಾ ಕ್ಯೂ ರೋತ
ಚುಪ್ ಕ್ಯೂ ನೈ ಸೋತ
ಅಪನೆ ದಾದಿ ಕೆ ಗೋದೊಮೆ
ಖೇಲುಂಗಾ ಕತಾ ಹೈ ತಾನಾ"

"ತಾನಾ ಕ್ಯೂ ರೋತ್
ಚುಪ್ ಕ್ಯೂ ನೈ ಸೋತ
ಅಪನೆ ಮಾ ಬಾಪ್ ಕೆ ಗೋದೊಮೆ
ಖೇಲುಂಗ ಕೆಹತಾ ಹೈ ತಾನಾ"

"ತಾನಾ ಕ್ಯೂ ರೋತ
ಚುಪ್ ಕ್ಯೂ ನೈ ಸೋತ
ತಾನ ತೇರೆ ಮೂಮೆ
ರಾಮ ಲಕ್ಷ್ಮಣ್ ಕಿ ಬೋಲಿ ಜೋ ಜೋ"

ತಾನಾ ಕ್ಯೂ ರೋತ ಚುಪ ಕ್ಯೂ ನೈ ಸೋತ ||ಪ||

ಮಗುವೇಕೆ ಅಳುತ್ತಲಿದೆ
ಸುಮ್ಮನೆ ಯಾಕೆ ಮಲಗುತ್ತಿಲ್ಲ
ತನ್ನ ಪುಟ್ಟ ಕಾಲುಗಳಿಂದ ಗೆಜ್ಜೆ ಆಡಿಸುತಿದೆ ಪುಟ್ಟಮಗು ||ಪ||

ಮಗುವೇಕೆ ಅಳುತಲಿದೆ
ಸುಮ್ಮನೆ ಏಕೆ ಮಲಗುತ್ತಿಲ್ಲ
ತನ್ನ ಅಜ್ಜನ ಮಡಿಲಲ್ಲಿ
ಆಡುತ್ತೇನೆಂದು ಹಠ ಮಾಡುತ್ತಿದ್ದಾನೆ ಪುಟ್ಟಮಗು

ಮಗುವೇಕೆ ಅಳುತಲಿದೆ
ಸುಮ್ಮನೆ ಏಕೆ ಮಲಗುತ್ತಿಲ್ಲ

ತನ್ನ ಅಜ್ಜಿಯ ಮಡಿಲಲ್ಲಿ
ಆಡುತ್ತೇನೆಂದು ಹಠ ಮಾಡುತ್ತಿದ್ದಾನೆ ಪುಟ್ಟಮಗು

ಮಗುವೇಕೆ ಅಳುತಲಿದೆ
ಸುಮ್ಮನೆ ಏಕೆ ಮಲಗುತ್ತಿಲ್ಲ
ತನ್ನ ತಂದೆ ತಾಯಿಯ ಮಡಿಲಲ್ಲಿ
ಆಡುತ್ತೇನೆಂದು ಹಠ ಮಾಡುತ್ತಿದ್ದಾನೆ ಪುಟ್ಟಮಗು

ಮಗುವೇಕೆ ಅಳುತಲಿದೆ
ಸುಮ್ಮನೆ ಏಕೆ ಮಲಗುತ್ತಿಲ್ಲ
ಮಗುವೆ ನಿನ್ನ ಬಾಯಿಯಲ್ಲಿ
ರಾಮ ಲಕ್ಷ್ಮಣರ ಮಾತಿರಲಿ ಜೋ ಜೋ

ಮಗುವೇಕೆ ಅಳುತಲಿದೆ
ಸುಮ್ಮನೆ ಏಕೆ ಮಲಗುತ್ತಿಲ್ಲ

ಇನ್ನೊಂದು ಹಾಡು ಈ ರೀತಿ ಇದೆ,

"ಮುನಿರಾಬಾದ್ ಶೆಹರ್ ಕೆ ಚಾರ್ ಮಿನಾರೆ
ಚಾರ್ ತರಫ ಕೆ ಕಮಲ್ ಹೈ
ಉಸಮೆ ಬೈಟೆ ಹುಲುಗಾ ದೇವಿ
ಉನಕೆ ಮೂಪೆ ನೂರ್ ಹೈ"

"ಮೈಲಾರ್ ದೇಶ್‌ಕೆ ಚಾರ್ ಮಿನಾರೆ
ಚಾರ್ ತರಫ್ ಕೆ ಕಮಲ್ ಹೈ
ಉಸಮ ಬೈಟೆ ಮೈಲಾರಲಿಂಗ ಸಾಮಿ
ಉನಕೆ ಮೂಪರ್ ನೂರ್ ಹೈ
ಉನಕೆ ಮೂಪರ್ ನೂರ್ ಬರಸ್ ತಾಹೈ
ಕ್ಯಾ ಮಜೆಕಿ ಜೋತ್ ಹೈ"

"ಕೊಪ್ಪಳ ದೇಶಕೆ ಚಾರ ಮಿನಾರೆ
ಚಾರ್ ತರಫ್ ಕೆ ಕಮಲ್ ಹೈ
ಉಸಮೆ ಬೈಟೆ ಗವಿಸಿದ್ಧ ಸಾಮಿ
ಉನಕೆ ಮೂಪೆ ನೂರ್ ಹೈ

ಉನಕೆ ಮೂಪರ್ ನೂರ್ ಬರಸ್ ತಾಹೈ
ಕ್ಯಾ ಮಜೆಕಿ ಜೋತ್ ಹೈ"

"ಯಮನೂರು ದೇಶ್‌ಕೆ ಚಾರ ಮಿನಾರೆ
ಚಾರ್ ತರಫ ಕೆ ಕಮಲ್ ಹೈ
ಉಸಮೆ ಬೈಟೆ ರಾಜಾಭಕ್ಷಾರ್
ಉನಕೆ ಮೂಪರ್ ನೂರ್ ಹೈ
ಉನಕೆ ಮೂಪರ್ ನೂರ್ ಬರಸ್ ತಾ ಹೈ
ಕ್ಯಾ ಮಜೆ ಕಿ ಜೋತ್ ಹೈ"

"ಹೊಸಪೇಟ ದೇಶ್‌ಕೆ ಚಾರ ಮಿನಾರೆ
ಚಾರ್ ತರಫ ಕೆ ಕಮಲ್ ಹೈ
ಉಸಮೆ ಬೈಟೆ ಮಹಮ್ಮದ್ ಷಾ ಖಾದರಿ
ಉನಕೆ ಮೂಪರ್ ನೂರ್ ಹೈ
ಉನಕೆ ಮೂಪರ್ ನೂರ್ ಬರಸ್ ತಾ ಹೈ
ಕ್ಯಾ ಮಜೆ ಕಿ ಜೋತ್ ಹೈ"
ಮುನಿರಾಬಾದ್ ಶಹರಿನ ನಾಲ್ಕು ಮಿನಾರಗಳು
ನಾಲ್ಕು ಮಿನಾರಿನ ಸುತ್ತ ಕಮಲಗಳಿವೆ
ಅದರಲ್ಲಿ ಕುಳಿತಿರುವ ಹುಲಿಗೆಮ್ಮದೇವಿ
ಅವಳ ಮುಖದಲ್ಲಿ ಕಳೆಯಿದೆ
ಅವಳ ಮುಖದ ಕಳೆಯಲ್ಲಿ ಏನು ಉಜ್ವಲ ಜ್ಯೋತಿಯಿದೆ

ಮೈಲಾರ ದೇಶದ ನಾಲ್ಕು ಮಿನಾರಗಳು
ನಾಲ್ಕು ಕಡೆಗೂ ಕಮಲಗಳಿವೆ
ಅದರಲ್ಲಿ ಕುಳಿತಿರುವ ಮೈಲಾರಲಿಂಗ ಸ್ವಾಮಿ
ಅವರ ಮುಖದಲ್ಲಿ ಕಳೆಯು ಕಂಗೊಳಿಸುತ್ತಿದೆ
ಆ ಕಳೆಯಲ್ಲಿ ಉಜ್ವಲ ಜ್ಯೋತಿಯು ಕಂಗೊಳಿಸುತ್ತಿದೆ

ಕೊಪ್ಪಳ ದೇಶದ ನಾಲ್ಕು ಮಿನಾರಗಳು
ನಾಲ್ಕು ಕಡೆಗೂ ಕಮಲಗಳಿವೆ
ಅದರಲ್ಲಿ ಕುಳಿತಿರುವ ಗವಿಸಿದ್ದೇಶ್ವರ ಸ್ವಾಮಿ

ಅವರ ಮುಖದಲ್ಲಿ ಕಳೆಯು ಕಂಗೊಳಿಸುತ್ತಿದೆ
ಆ ಕಳೆಯಲ್ಲಿ ಉಜ್ವಲ ಜ್ಯೋತಿಯು ಕಂಗೊಳಿಸುತ್ತಿದೆ

ಯಮನೂರು ದೇಶದ ನಾಲ್ಕು ಮಿನಾರಗಳು
ನಾಲ್ಕು ಕಡೆಗೂ ಕಮಲಗಳಿವೆ
ಅದರಲ್ಲಿ ಕುಳಿತಿರುವ ರಾಜಾಭಕ್ಷಾರ್ ದೇವರು
ಅವರ ಮುಖದಲ್ಲಿ ಕಳೆಯು ಕಂಗೊಳಿಸುತ್ತಿದೆ
ಆ ಕಳೆಯಲ್ಲಿ ಉಜ್ವಲ ಜ್ಯೋತಿಯು ಕಂಗೊಳಿಸುತ್ತಿದೆ

ಹೊಸಪೇಟೆ ದೇಶದ ನಾಲ್ಕು ಮಿನಾರಗಳು
ನಾಲ್ಕು ಕಡೆಗೂ ಕಮಲಗಳಿವೆ
ಅದರಲ್ಲಿ ಕುಳಿತಿರುವ ಮಹಮ್ಮದ್ ಷಾ ಖಾದರಿ ದೇವರು
ಅವರ ಮುಖದಲ್ಲಿ ಕಳೆಯು ಕಂಗೊಳಿಸುತ್ತಿದೆ
ಆ ಕಳೆಯಲ್ಲಿ ಉಜ್ವಲ ಜ್ಯೋತಿಯು ಕಂಗೊಳಿಸುತ್ತಿದೆ
ಇದನ್ನು ನೋಡಲು ಚಂದ

ಹಿಂದು ಮುಸ್ಲಿಂ ದೇವರುಗಳು ಎನ್ನುವ ಭೇದವಿಲ್ಲದೆ ಎಲ್ಲಾ ದೇವರುಗಳಿಗೂ ಕೈಮುಗಿಯುವ ಈ ಸಮುದಾಯದವರು ಮಗುವಿನ ನಾಮಕರಣದ ಸಂದರ್ಭದಲ್ಲಿ ಮಗುವಿಗೆ ಹಿಂದೂ ದೇವರುಗಳ ಹೆಸರುಗಳೊಂದಿಗೆ ತಮಗೆ ಪ್ರಭಾವಿಸಿರುವ ತಮ್ಮ ಸುತ್ತಲಿನ ಮುಸ್ಲಿಂ ದೇವರುಗಳ ಹೆಸರುಗಳನ್ನು ಮಗುವಿಗೆ ಇಡುವುದನ್ನು ಕಾಣಬಹುದು.

"ಪಾಪಾ ತೇರೆ ಗೋರೆ ಗೋರೆ ಗಾಲ್
ಪಾಪಾ ತೇರೆ ಸಿರಮೆ ಗುಂಗುರು ವಾಲೆ ಬಾಲ್
ಪಾಪಾ ತೇರಿ ದಾದಿ ಆಯೆಂಗಿ
ಖಿಷಿಸೆ ತುಮ್ಹೆ ಗೋದಮೆ ಲೇಲೆಂಗಿ
ಮಯೋಸೆ ಗೋದಮೆ ಲೇಲೆಂಗಿ"

"ಪಾಪಾ ತೇರೆ ಗೋರೆ ಗೋರೆ ಗಾಲ್
ಪಾಪಾ ತೇರೆ ಸಿರಮೆ ಗುಂಗುರು ವಾಲೆ ಬಾಲ್
ಪಾಪಾ ತೇರೆ ದಾದಾ ಆಯೆಗಾ
ಖಿಷಿಸೆ ತುಮ್ಹೆ ಗೋದಮೆ ಲೇಲೆಂಗಾ
"ಪಾಪಾ ತೇರೆ ಗೋರೆ ಗೋರೆ ಗಾಲ್

ಪಾಪಾ ತೇರೆ ಸಿರಮೆ ಗುಂಗುರು ವಾಲೆ ಬಾಲ್
ಪಾಪಾ ತೇರಿ ಫೂಫಿ ಆಯೆಗೆ
ಖುಷಿಸೆ ಗೋದಮೆ ಲೇಲೆಂಗಿ"

"ಪಾಪಾ ತೇರೆ ಗೋರೆ ಗೋರೆ ಗಾಲ್
ಪಾಪಾ ತೇರೆ ಸಿರಮೆ ಗುಂಗುರು ವಾಲೆ ಬಾಲ್
ಪಾಪಾ ತೇರೆ ಚಾಚಾ ಆಯೆಂಗೆ
ಖುಷಿಸೆ ಗೋದಮೆ ಲೇಲೆಂಗೆ"

ಮಗುವೆ ನಿನ್ನ ಹಾಲುಗೆನ್ನೆಗಳು
ನಿನ್ನ ತಲೆತುಂಬಾ ಗುಂಗುರು ಕೂದಲುಗಳು
ಮಗುವೆ ನಿನ್ನ ಅಜ್ಜಿ ಬರುತ್ತಾಳೆ
ಸಂತೋಷದಿಂದ ನಿನಗೆ ಮಡಿಲಲ್ಲಿ ಎತ್ತುಕೊಳ್ಳುವಳು
ಪ್ರೀತಿಯಿಂದ ಮಮತೆಯಿಂದ ಮಡಿಲಲ್ಲಿ ಎತ್ತುಕೊಳ್ಳುವಳು.

ಮಗುವೆ ನಿನ್ನ ಹಾಲುಗೆನ್ನೆಗಳು
ನಿನ್ನ ತಲೆತುಂಬಾ ಗುಂಗುರು ಕೂದಲುಗಳು
ಮಗುವೆ ನಿನ್ನ ಅಜ್ಜ ಬರುತ್ತಾರೆ
ಮಮತೆಯಿಂದ ಮಡಿಲಲ್ಲಿ ಎತ್ತುಕೊಳ್ಳುವರು.

ಮಗುವೆ ನಿನ್ನ ಹಾಲುಗೆನ್ನೆಗಳು
ನಿನ್ನ ತಲೆತುಂಬಾ ಗುಂಗುರು ಕೂದಲುಗಳು
ಮಗುವೆ ನಿನ್ನ ಅತ್ತೆ ಬರುತ್ತಾಳೆ
ಮಮತೆಯಿಂದ ಮಡಿಲಲ್ಲಿ ಎತ್ತುಕೊಳ್ಳುವಳು.

ಮಗುವೆ ನಿನ್ನ ಹಾಲುಗೆನ್ನೆಗಳು
ನಿನ್ನ ತಲೆತುಂಬಾ ಗುಂಗುರು ಕೂದಲುಗಳು
ಮಗುವೆ ನಿನ್ನ ಚಿಕ್ಕಪ್ಪ ಬರುತ್ತಾರೆ
ಮಮತೆಯಿಂದ ಮಡಿಲಲ್ಲಿ ಎತ್ತುಕೊಳ್ಳುತ್ತಾರೆ.

ಹೀಗೆ ಮುದ್ದಿನ ಮಗುವಿನ ಅಂದ ಚಂದವನ್ನು ಹೊಗಳುತ್ತ ಮಗುವಿನ ಅಜ್ಜ, ಅಜ್ಜಿ, ಅತ್ತೆ, ಚಿಕ್ಕಪ್ಪ ಹಲವು ಬಂಧುಗಳು ಬಂದು ಮಮತೆಯಿಂದ ಮಡಿಲಲ್ಲಿ ಎತ್ತುಕೊಳ್ಳುವರು ಎಂದು ಹಾಡುವ ಈ ಹಾಡು ತುಂಬಾ ಚಾಲ್ತಿಯಲ್ಲಿದ್ದು ನಾಮಕರಣದ ವೇಳೆ ಹಾಡುವುದನ್ನು ಕಾಣುತ್ತೇವೆ.

ಮಕಮಲ್ ಕಿ ನ್ಹ್ಯಾಲಿ

ಗವಾರೆಮೆ ಡಾಲಿ

ತಾನ ಲಿಡ್ ಲಿಡ್ ಕೋ ಸೋತ

ಹರಗಿಜ್ ನೈ ರೋತ ಜೋ ಜೋ...

ಹಮ್ ಜೊ ರಹೆಂಗೆ

ಕೊಪ್ಪಳ ಶೆಹರ್ ಮೆ

ಸಾಂಚೆ ಮರ್ದಾನ ವಲಿಯೋಂಕೆ

ಸುನ್ನೇಕೆ ಶಮೆ ಜೋ ಜೋ...

ಮಕಮಲ್ ಕಿ ನ್ಹ್ಯಾಲಿ ಗವಾರೆಮೆ ಡಾಲಿ

ಹಮ್ ಜೊ ರಹೆಂಗೆ

ಮುನಿರಾಬಾದ್ ಶೆಹರಮೆ

ಸಾಂಚೆ ಹುಲಿಗೆಮ್ಮ ಬಾಯಿಕೆ

ಸುನ್ನೇಕೆ ಶಮೆ ಜೋ ಜೋ...

ಮಕಮಲ್ ಕಿ ನ್ಹ್ಯಾಲಿ ಗವಾರೆಮೆ ಡಾಲಿ

ತಾನಾ ಕ್ಯೂ ರೋತ

ಚುಪ್ ಕ್ಯೂ ನೈ ಸೋತ

ಸಾಂಚೆ ರಾಜಾಭಕ್ಷಾರ್ ಕಾ ಉಜಾಲಾ ಜೋ ಜೋ...

ಹಮ್ ಜೊ ರಹೆಂಗೆ

ಯಮನೂರ ಶೆಹರಮೆ

ಸಾಂಚೆ ರಾಜೆಭಕ್ಷಾರ ಕೆ

ಸುನ್ನೇಕೆ ಶಮ ಜೋ ಜೋ...

ಮಕಮಲ್ ಕಿ ನ್ಹ್ಯಾಲಿ ಗವಾರೆಮೆ ಡಾಲಿ

ಕನ್ನಡಾನುವಾದ

ರೇಷ್ಮೆಯ ಗಾದಿ ತೊಟ್ಟಿಲಲ್ಲಿ ಹಾಕಿ

ಮಗು ಹೊರಳಾಡುತ್ತ ಅಳದೆ ಮಲಗುತ್ತಿದೆ ಜೋ ಜೋ...

ನಾವು ಇರುವುದು ಕೊಪ್ಪಳ ಶಹರದಾಗ

ಮರ್ದಾನವಲಿ ದೇವರ ಬಂಗಾರದ ಜ್ಯೋತಿಯೇ ಜೋ ಜೋ...

ನಾವು ಇರುವುದು ಮುನಿರಾಬಾದ ಶಹರದಾಗ
ಹುಲಿಗೆಮ್ಮ ದೇವಿಯ
ಬಂಗಾರದ ಜ್ಯೋತಿಯೇ ಜೋ ಜೋ...

ಮಗು ಯಾಕೆ ಅಳ್ತಾ ಇದೆ
ಸುಮ್ಮನೆ ಯಾಕೆ ಮಲಗುತ್ತಿಲ್ಲ
ರಾಜಾಭಕ್ಷಾರ ದೇವರ ಬೆಳಕೆ ಜೋ ಜೋ...

ನಾವು ಇರುವುದು ಯಮನೂರು ಶಹರದಾಗ
ರಾಜಾಭಕ್ಷಾರ ದೇವರ ಬಂಗಾರದ ಜ್ಯೋತಿಯೇ ಜೋ ಜೋ...

ರೇಷ್ಮೆಯ ಗಾದಿ ತೊಟ್ಟಿಲಲ್ಲಿ ಹಾಕಿ
ಮಗು ಹೊರಳಾಡುತ್ತ ಅಳದೆ ಮಲಗುತ್ತಿದೆ ಜೋ ಜೋ...

ಹೀಗೆ ಮಗುವನ್ನು ರೇಷ್ಮೆಯ ಗಾದಿಯಲ್ಲಿ ಹಾಕಿ ತೊಟ್ಟಿಲು ತೂಗುತ್ತ ಹಲವು ದೇವರುಗಳನ್ನು ನೆನಸುತ್ತ ಮಗುವಿಗೆ ಮಲಗಿಸುವುದನ್ನು ಕಾಣುತ್ತೇವೆ.

ಸೋಬಾನೆ ಹಾಡುಗಳು

ಕೋಟಿ ಚಿನ್ನದ ಕೋಟಿ
ಕೋಟಿ ಚಿನ್ನದ ಕೋಟಿ
ಕೋಟಿ ತೆಳಗಿರುವ ಎಲೆಯ ಬಲ್ಲೆ ಸೋಬಾನೆ

ಕೋಟಿನ ತೆಳಗಿರುವ ಎಲೆ
ಕೇಳ್ಯಾಳೆ ಹೊಸ ಸುದ್ದಿ ಸೋಬಾನೆ ಅವರತ್ತಿ
ಹೊಸ ಸುದ್ದಿ ಕೇಳ್ಯಾಳೆ ಖುಷಿಯಾಗಿ ನಕ್ಕಾಳೆ
ಎಸಳ ಮಲ್ಲಿಗಿ ಕೊಯ್ಯಸಾರೆ ಸೋಬಾನೆ

ಎಸಳ ಮಲ್ಲಿಗೆ ಕೊಯಸಿ ದಂಡೆಯ ಕಟ್ಟಿ
ಸೊಸಿಯಿದ್ದ ಮನೆಗೆ ಕಳುವ್ಯಾರೆ ಸೋಬಾನೆ

ಕೋಟಿ ಚಿನ್ನದ ಕೋಟಿ
ಕೋಟಿ ಚಿನ್ನದ ಕೋಟಿ
ಕೋಟಿ ತೆಳಗಿರುವ ಹೂವ ಬಲ್ಲೆ ಸೋಬಾನೆ

ಕೋಟಿನ ತೆಳಗಿರುವ ಹೂವ ಹೊಲೆಯಾದರೆ
ಅವರತ್ತಿ ಕೇಳ್ಯಾಳೆ ಹೊಸ ಸುದ್ದಿ ಸೋಬಾನೆ

ಅತ್ತಿಯಾದರೆ ಕೇಳ್ಯಾಳೆ ಖುಷಿಯಾಗಿ ನಕ್ಯಾಳೆ
ಹತ್ತ ಸೇರ ಅರಿಶಿಣ ಕುಟ್ಟಿ ಬಟ್ಟಲ ತುಂಬಿ
ಸೊಸಿಯಿದ್ದ ಮನೆಗೆ ಕಳುವ್ಯಾರೆ ಸೋಬಾನೆ

ಹಿತ್ತಲದಾಗಿಟ್ಟ ಎರೆಯರೆಲ್ಲ ಸೋಬಾನೆ
ಕೋಟಿ ಚಿನ್ನದ ಕೋಟಿ
ಕೋಟಿ ಚಿನ್ನದ ಕೋಟಿ
ಕೋಟಿ ತೆಳಗಿರುವ ಹೂವ ಬಲ್ಲೆ ಸೋಬಾನೆ

ಕೋಟಿನ ತೆಳಗಿರುವ ಹೂವ ಬಲ್ಲೆ ಸೋಬಾನೆ
ಆರುಕಂಭದ ನಡುವೆ
ಗೀರು ಮಂಚದ ನಾಟಿ
ರಾಯರ ಮಗನ ಸುಖ ನಿದ್ರೆ ಸೋಬಾನೆ

ರಾಯರ ಈ ಮಗನ ಸುಖ ನಿದ್ರೆಯಾದರೆ
ಹೊತ್ತಿಗೆ ಬಂದಾನ ಬಂದಾನ ಇವ ನೋಡೆ ಸೋಬಾನೆ

ಹೊತ್ತಾರೆ ಬಂದಾರೆ ಮತ್ತೇ ನೋಡೋಣಂತೆ
ಅತ್ತೀಯ ಮಗಳೊಂದತಿರಂಟೆ ಸೋಬಾನೆ

ಮಾವನ ಸೋಬಾನೆ
ಮಾವನ ಮಗಳೊಂದತಿರಂಟೆ ಸೋಬಾನೆ
ಹೊನ್ನಿನುಂಗುರ ಗೆದಿಯಬಂದೆ ಸೋಬಾನೆ
ರತ್ನದುಂಗುರ ಗೆದಿಯಬಂದೆ ಸೋಬಾನೆ

ಗಾದೆಗಳು

ಜನತೆಯ ಅನುಭವದ ಸಂಪತ್ತು ನೆನಪಿಡಲು ಸುಲಭವಾಗುವಂತೆ ಪ್ರಾಸಬದ್ಧವಾದ ಚಿಕ್ಕ ವಾಕ್ಯಗಳಾಗಿ ಗಾದೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಜನಪ್ರಿಯವಾದ ಸಾಹಿತ್ಯ ಪ್ರಕಾರಗಳಲ್ಲಿ ಗಾದೆಗಳು ಮುಖ್ಯವಾಗಿ ಗಮನಸೆಳೆಯುತ್ತವೆ. ಒಂದು ಸಮುದಾಯದ ಮನಸ್ಸು ಗಾದೆಗಳಲ್ಲಿ ಅಡಕವಾಗಿರುವುದನ್ನು ಕಾಣಬಹುದು. ಪುರಾಣ, ಚರಿತ್ರೆ, ಸ್ಥಳಗತೆ, ಅನುದಿನದ ಘಟನೆಗಳು, ಕಷ್ಟ ಕೋಟಲೆಗಳು ಮತ್ತು ಆನಂದದ ವಿಶಾಲ ಹಿನ್ನೆಲೆ ಹೊಂದಿರುವ ಗಾದೆಗಳು ಜನತೆಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ವಿಶೇಷವಾಗಿ ನೆರವಾಗುತ್ತ ಬದುಕನ್ನು ತಿದ್ದುವಲ್ಲಿ ರಹಸ್ಯಗಳ ಬೆನ್ನಟ್ಟಿ ಹೋಗುವಲ್ಲಿ ಇವು ಯಾವಾಗಲೂ ಮುಂದಾಗಿರುತ್ತವೆ.

ಒಂದು ದೇಶದ ನಿಜವಾದ ಬಣ್ಣ ಬದುಕು ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ. ಜನತೆಯ ಕಳೆದ ದಿನಗಳ ರೋಷ, ಕೆಚ್ಚು, ಮೌಢ್ಯ, ಮಾನಸಿಕ ವಿಕಾರ, ನಗೆ, ನೋವು, ನ್ಯಾಯ-ಅನ್ಯಾಯ ಮೊದಲಾದ ಎಲ್ಲಾ ಸಂಗತಿಗಳ ಮಡು ಈ ಗಾದೆಗಳು. ಇವನ್ನೆಲ್ಲಾ ವಿಂಗಡಿಸಿ ನಿತ್ಯದ ಬದುಕಿಗೆ ಹೇಗೆ ಬಳಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಬೇಕು. ಹೀಗಾಗಿ ಸಮಾಜ ಸಾಹಿತ್ಯ, ಚರಿತ್ರೆ, ಭಾಷೆ, ಮನಸ್ಸು, ಮಾನವ ಮುಂತಾದ ಬಗೆ ಬಗೆಯ ವಿಷಯಗಳ ಬಗ್ಗೆ ಅಧ್ಯಯನ ನಡೆಸುವವರಿಗೆ ಗಾದೆಗಳು ಸವಾಲಾಗಿವೆ ಮತ್ತು ಹೆಚ್ಚಿನ ಗುಟ್ಟುಗಳನ್ನು ತಿಳಿಸುತ್ತವೆ.

ಹೆಚ್ಚಿನ ಗಾದೆಗಳಿಗೆ ಯಾರ, ಯಾವ ಬಗೆಯ ಹಂಗೂ ಇಲ್ಲ. ಏನು ಹೇಳಬೇಕೋ ಅದನ್ನು ಹೇಳಿ ಮುಗಿಸುತ್ತವೆ. ಸ್ವಂತವಾಗಿ ಅನುಭವಸಿ ಗೊಂದಲಗಳೊಡನೆ ಬೇಸತ್ತ ಜನತೆಯು ಕೊನೆಗೆ ಕಂಡುಕೊಂಡ ನಿಜದ ಕಿಡಿಗಳು ಈ ಗಾದೆಗಳು.

'ಹಾಗಲ ಕಾಯ್ಗೆ; ಬೇವಿನಕಾಯಿ ಸಾಕ್ಷಿ ಇದ್ದಂಗೆ'

'ಬೇಲಿ ಎದ್ದು ಹೊಲ ಮೇಯ್ದಂಗೆ'

'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ'

'ಹುಟ್ಟು ಗುಣ ಸುಟ್ರು ಹೋಗಲ್ಲ'

'ಅಯ್ಯ ಸತ್ತರೆ ಅಮವಾಸ್ಯೆ ನಿಲ್ಲಲ್ಲ'

'ಹೊಟ್ಟೆಗೆ ಹಿಟ್ಟಿಲ್ಲದಿದ್ದರು; ಜುಟ್ಟಿಗೆ ಮಲ್ಲಿಗೆ ಹೂವು'

'ಪುರಾಣ ಹೇಳಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ'

'ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ'

'ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ'

'ಎರಡು ಕೈಯಿ ಕೂಡಿದ್ರೆ ಚಪ್ಪಾಳೆ'

'ಎಡಗಣ್ಣಿಗೆ ಬಲಗಣ್ಣು ಹಗೆ'

'ಎತ್ತು ಏರಿಗೆಳಿದ್ರೆ; ಕೋಣ ನೀರಿಗೆಳಿತು'

'ಮಂಗ ತಾನು ಕೆಡೋದು ಅಲ್ದೆ ವನನೆಲ್ಲಾ ಕೆಡಿಸ್ತು'

'ತುಂಬಿದ ಕೊಡ ತುಳುಕುವುದಿಲ್ಲ'

'ದುಷ್ಟರ ಕಂಡ್ರೆ ದೂರ ಇರು'

'ಬಡವರ ಮನೆ ಊಟ ಚಂದ; ಶ್ರೀಮಂತರ ಮನೆ ನೋಟ ಚಂದ'

'ಮಂಗನ ಕೈಲಿ ಮಾಣಿಕ್ಯ ಕೊಟ್ಟಂಗೆ'

'ಕತ್ತೇಗೇನ್ ಗೊತ್ತು; ಕಸ್ತೂರಿ ವಾಸನೆ'

'ನಾಯಿ ಬಾಲಡೊಂಕು'

'ನೂರು ಇಲಿ ತಿಂದು ಬೆಕ್ಕು ಹಜ್‌ಗೆ ಹೋದಂಗೆ'

'ಹಸ್‌ದು ಹಲಸ್ನಣ್ಣು ತಿನ್ನು; ಉಂಡು ಮಾವ್‌ನಹಣ್ಣು ತಿನ್ನು'

'ಹಾಸಿಗೆ ಇದ್ದಷ್ಟು ಕಾಲುಚಾಚು'

'ಹಾಲು ಅನ್ನ ಉಂಡು ಹಾಸಗ್ಯಾಗ ಇರು ಮಗಳೆ ಅಂದ್ರೆ;
ಊರ ಮಿಂಡ್ರನ್ನು ನೋಡಿ ನೀರು ತರುತ್ತೇನಿ ಅಂದಳಂತೆ'

'ಆಕಳು ಕಪ್ಪಾದರೆ ಹಾಲು ಕಪ್ಪೆ'

'ಕಟುಗರ ಮುಂದೆ ಬಸವನ ಪುರಾಣ ಓದಿದಂತೆ'

'ಓದು ಒಕ್ಕಾಲು; ಬುದ್ಧಿ ಮುಕ್ಕಾಲು'

'ಆನೆ ಹೋಗುತ್ತೆ ನಾಯಿ ಬೊಗಳುತ್ತೆ'

'ಬಿದ್ದ ಕಲ್ಲು ಅಗಸನದು; ಎದ್ದ ಕಲ್ಲು ಪೂಜಾರಿಯದು'

'ಬತ್ಲೆ ಇರೋ ಊರಲ್ಲಿ; ಬಟ್ಟೆ ತೊಟ್ಟೋರು ಹುಚ್ಚರು'

'ಬೀದಿ ಮಕ್ಕಳು ಬೆಳೆದೊ ಕ್ಯಾಣೆ ಮಕ್ಕಳು ಕೊಳತೊ'

'ನೂಲಿನಂತೆ ಸೀರೆ; ತಾಯಿಯಂತೆ ಮಗಳು'

'ಬಡವನ ಹೆಂಡ್ರು ಊರಿಗೆಲ್ಲಾ ಸೊಸೆ'

'ಹಣೆ ಬರಹಕ್ಕೆ ಹೊಣೆ ಯಾರು?'

'ಪಾಪಿ ಸಮುದ್ರಕ್ಕೆ ಹೋದರು ಮಣಕಾಲ ಕೆಳಗೆ ನೀರು'

'ಅಡಕೆಗೆ ಹೋದ ಮಾನ ಆನೆ ಕೊಟ್ರು ಬಾರದು'

'ಆಗೋದ ಮದ್ವುಗೆ ವಾಲಗ ಯಾಕೆ'

'ಊರು ಸುಟ್ರು ಹನುಮಪ್ಪ ಹೊರಗೆ'

'ಹಳ್ಳಿ ಊರಾಗ ಹನುಮಪ್ಪ ಚಂದ'

ಒಗಟುಗಳು

ಒಗಟು ಬುದ್ಧಿವಂತಿಕೆಗೆ ಒಡ್ಡುವ ಸವಾಲುಗಳು. ಒಂದು ವಸ್ತುವನ್ನು ಮತ್ತೊಂದರ ಮೂಲಕ ತುಂಬಾ ಚಮತ್ಕಾರವಾಗಿ ವರ್ಣಿಸುವ ಕ್ರಿಯೆ ಇಲ್ಲಿ ನಡೆದಿರುತ್ತದೆ. ಒಗಟುಗಳು ಅನುಮಾನದ ಮೂಲಕ ಅರ್ಥ ಹುಡುಕಲು ತೊಡಗಿಸುತ್ತವೆ. ಈ ಒಗಟುಗಳು ಮೂಲದಲ್ಲಿ ಒಬ್ಬನೇ ವ್ಯಕ್ತಿಯಿಂದ ರಚಿತವಾಗಿದ್ದರೂ ಜನಬಳಕೆಯಲ್ಲಿ ಹೆಚ್ಚು ಹೆಚ್ಚು ಪ್ರಯೋಗವನ್ನು ಕಂಡುಕೊಂಡಿವೆ.

ಬುದ್ಧಿಗೆ ಕಸರತ್ತನ್ನು ನೀಡುವ ಒಗಟುಗಳು ಮನೋರಂಜನೆಗಾಗಿಯೂ ಜನರು ಇವುಗಳಿಂದ ಆನಂದವನ್ನು ಪಡೆಯುತ್ತ ಕಾಲಕಳೆಯುವಲ್ಲಿಯೂ ಉಪಯುಕ್ತವಾಗಿವೆ. ಮದುವೆಯ ಕಾರ್ಯಕ್ರಮಗಳಲ್ಲಿ ಒಗಟಿನ ಪಾತ್ರವು ಮುಖ್ಯವಾಗಿರುವುದನ್ನು ಗಮನಿಸಬಹುದು.

ಪ್ರಕೃತಿಯಲ್ಲಿ ತಾನು ಕಂಡ ಅನೇಕ ವಸ್ತುಗಳನ್ನು ಬೇರೊಂದು ಕ್ರಿಯೆಯ ಮೂಲಕ ಚಮತ್ಕಾರ ಪೂರ್ಣವಾಗಿ ಸುಂದರವಾದ ಸಾಲುಗಳಲ್ಲಿ ಹೇಳುವ ಬೆಡಗು, ಒಗಟುಗಳಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಲೆಕ್ಕಕ್ಕೆ ಸಂಬಂಧಿಸಿದ ಕೆಲವು ಒಗಟುಗಳು ಬುದ್ಧಿಶಕ್ತಿಯನ್ನು ಪರೀಕ್ಷಿಸುವ ಸಾಧನಗಳಾಗಿವೆ. ಸೂಕ್ಷ್ಮ ಬುದ್ಧಿಯವನಿಗೆ ತಟ್ಟನೆ ಹೊಳೆಯುವಂತಹ ಸಂಗತಿಗಳು ಸಾಮಾನ್ಯವಾಗಿ ಅಲ್ಲಿ ಕಂಡುಬರುತ್ತವೆ.

ಒಗಟುಗಳ ಮಹತ್ವವನ್ನು ಕುರಿತು ಹೇಳುವುದಾದರೆ ಅವುಗಳನ್ನು ರೂಢಿಸಿ ಬಳಸುವ ಜನತೆಯ ಯುಗಧರ್ಮ, ನಂಬಿಕೆ, ಆಸಕ್ತಿ ಹಾಗೂ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಒಂದು ಸಮುದಾಯವನ್ನು ಕುರಿತು ತಿಳಿಯುವಲ್ಲಿ ಆ ಸಮುದಾಯದ ಸಾಹಿತ್ಯದಲ್ಲಿ ಒಗಟುಗಳು ಪ್ರಾಮುಖ್ಯತೆಯನ್ನು ಪಡೆಯುತ್ತವೆ ಎಂದು ಹೇಳಬಹುದು.

"ಹಚ್ಚನ್ನ ಹಕ್ಕಿ ಪುಚ್ಚ ತೆಗೆದು
ಕಲ್ಲ ಮೇಲಿಟ್ಟು ಕಾರ ಅರೆದರು"
ಕೊತ್ತಂಬರಿ ಸೊಪ್ಪು

"ಹಳದಿ ಸೀರೆ ಕರಿಯ ತುರುಬು
ಮೈ ತುಂಬಾ ಕೂದಲು"
ಮಾವಿನ ಹಣ್ಣು

"ಇಷ್ಟೇ ಇಷ್ಟು ಗದ್ದಿ
ಗದ್ದಿಗೆ ನೀರು
ನೀರಿಗೆ ಬೇರು ಬೇರಿಗೆ ಬೆಂಕಿ"
ದೀಪ

"ಎರಡು ಕಂಬ
ಕಂಬದ ಮೇಲೆ ಮನಿ
ಮನಿಮೇಲೆ ರೆಕ್ಕೆ, ರೆಕ್ಕೆ ಮೇಲೆ ಗುಡ್ಡ
ಗುಡ್ಡದ ಮೇಲೆ ಹುಲ್ಲು ಹುಲ್ಲಿನ ಮೇಲೆ ದಾರಿ"
ಮನುಷ್ಯ

"ಎರಡು ಹೆಣ
ನಾಲ್ಕು ಪರದೆ"
ಕಣ್ಣು

"ಆಡೆ ಡಾಂಬರ್ ಬಂದಾರೆ
ಕಸರೆಕಾರಿಗೆ ಇಳಿದಾರೆ
ಮುತ್ತಿನ ಡೈರಿ ಹೊಡೆದಾರೆ"
ಜೇನು

"ಆರುಸೇರು ಮಂಡಾಳ ಮೂರುಸೇರ ಅವಲಕ್ಕಿ
ಧೋತ್ರದಾಗ ಹಾಕ್ಕೊಂಡು ಪಾತ್ರದಾಕಿ ಮನೆಗೆ ಹೋಗುತ್ತಾರ"
ತಾಟು

"ಬೆಳ್ಳಿ ಭಡಿ ನೆಲಕೆ ಬಡಿ"
ಸಿಂಬಳಾ

"ಅಪ್ಪನ ರೊಕ್ಕ ಎಣಿಸಲಾರೆ; ಅಮ್ಮನ ಸೀರೆ ಮಡಚಲಾರೆ"
ತಾರೆ, ಆಕಾಶ

"ಅಪ್ಪ ಆಕಾಶಕ್ಕೆ
ಅಜ್ಜಿ ಪಾತಾಳಕ್ಕೆ
ಮಗಳು ಮದುವೆಗೆ
ಮಗ ವ್ಯಾಪಾರಕ್ಕೆ
ತೆಂಗಿನ ಮರದ ತುದಿ, ಬೇರು, ತೆಂಗಿನಗರಿ, ತೆಂಗಿನಕಾಯಿ

"ಗಡಗಡ ಬಂದ ಅಂಗಿ ಬಿಚ್ದ
ಬಾವ್ಯಾಗ್ ಬಿದ್ದ"
ಬಾಳೆಹಣ್ಣು

"ತಾತಾ ಗಿಂಡಿ ತಾಮ್ರದ ಗಿಂಡಿ
ಕೆತ್ತಿಸಿ ನೋಡಿದರೆ ಮುತ್ತಿನ ಗಿಂಡಿ"
ದಾಳಿಂಬೆ ಹಣ್ಣು

"ಹರೀಮಜಿದ ಉಜಲಾ ಖಾನಾ
ಉಸಮೇ ಬೈಟ್ಯಾ ಸಿದ್ಧಿ ದಿವಾನಾ"
ಸೀತಾಫಲ

"ಬಾಪ್ ಹರ್‍ಯೆ ಬಚ್ಚೆ ಕಾಲೆ ಮಾ ಲಾಲ್"
ಕಲ್ಲಂಗಡಿಹಣ್ಣು

"ಬಾಷಾಕಿ ಬೇಟಿ ಕಷ ಕಷ ಮೇ
ಲೋಟಿ ಪೇಟ್‌ಮೆ ಚೋಟಿ"
ಕರಬೂಜಾಹಣ್ಣು

"ಚಲೋಸ್ಯೆ ಬಜಾರ ಜಾಯೆಂಗೆ
ಬೂಸಾ ನೈಸೋ ಅನಾಜ್ ಲಾಯೇ"
ನಮ್ಮಾಕ್ (ಉಪ್ಪು)

"ಚಲೋ ಸ್ಯೆ ಬಜಾರ್ ಜಾಯೆಂಗೆ
ಪನ್ನಾ ನೈಸೋ ಸಾಡಿ ಲಾಯೆಂಗೆ
ಧೋಬಿ ಧೋತಾ ನೈ ರಾಣಿ ಪೇನ್ತಿ ನೈ"
ಪೇಪರ್

"ಪಾಡ್ ಪು ಥೋಪಡಿ
ನಿಕಲ್ ಜಾ ಖೇಕಡಿ"
ಸಿಂಬಳ

"ಹರೀ ಘುಡಿ ಮುಂಗ್ ಭರಿ
ಸಿರ್‌ಪೋ ಲೇಕರ್ ಸದರಿ ಚಡೀ"
ಪೊಪ್ಪಾಯಿ ಗಿಡ

"ಹಾತ್ ಹತೇಲಿ ಚಂಪೇಕಿ ಕಲಿ
ಭರ್ತಿ ನದಿಮೇ ತೀರಕೆ ಚಲಿ"
ಹೋಳಿಗೆ (ಪೂರಿ)

"ಏಕ್ ಸಿಲ್ ಹಜಾರ್ ಬಿಲ್"

ಖಾಟ್ (ಮಂಚ)

"ಸಿಲ್ ಕೆ ನೀಚೆ ತಿಲ್ ಕೆ ದಾನೆ

ಚಲೋ ಸಯ್ಯಾ ಚುನಕೋ ಖಾನೆ"

ಇರುವೆ

ಕಥೆಗಳು

ಕಥೆಗಳನ್ನು ಹೇಳುವ ಮತ್ತು ಕೇಳುವ ಕ್ರಿಯೆಯು ಮಾನವ ಜೀವನದಲ್ಲಿ ತುಂಬಾ ಹಿಂದಿನಿಂದಲೂ ನಡೆದುಬಂದಿದೆ. ಇದು ಎಲ್ಲಾ ಕಾಲಗಳ, ಎಲ್ಲಾ ಎಲ್ಲೆಗಳ ಸಂಗತಿ. ನಾಟಿ, ಕಳೆ ಕೀಳುವಿಕೆ, ಕೊಯ್ಲು, ಕಣದ ಕೆಲಸ ಮುಂತಾದ ದುಡಿಮೆಯ ಸಂದರ್ಭದಲ್ಲಿ ಹೇಳಲಾಗುವ ಕಥೆಯು ದಣಿವನ್ನು ಮರೆಸಿ ಮನಸ್ಸಿಗೆ ಗೆಲುವು ತರುತ್ತದೆ. ಆರಾಮದ ವೇಳೆಯಲ್ಲಿ ಮಕ್ಕಳನ್ನು ಮಲಗಿಸುವಾಗ ಸೆಕೆ ಉಕ್ಕುವ ಬೇಸಿಗೆಯ ರಾತ್ರಿಗಳಲ್ಲಿ ಕಥೆಗಳನ್ನು ಕೇಳುವ ಕಿವಿಗಳು ಹೆಚ್ಚಿನ ಕುತೂಹಲದಿಂದ ಕೂಡಿರುತ್ತವೆ.

ಕಥೆಗಳ ಗರ್ಭದಲ್ಲಿ ಕಾಲಕಾಲದ ನಂಬಿಕೆಗಳು, ಧಾರ್ಮಿಕ, ಸಾಮಾಜಿಕ ಮೌಲ್ಯಗಳು, ಪರಂಪರೆಯಲ್ಲಿನ ವಿವಿಧ ಪದ್ಧತಿಗಳು ತುಂಬಿಕೊಂಡಿವೆ. ಇಲ್ಲಿ ಮನರಂಜನೆ ಮತ್ತು ನೀತಿಬೋದೆ ಕಂಡುಬಂದರೂ ಆಳದಲ್ಲಿ ಅನ್ಯಾಯದ ವಿರುದ್ಧದ ಪ್ರತಿಭಟನೆಯ ಸಣ್ಣ ಎಳೆಗಳಿವೆ. ಅದನ್ನೂ ಮೀರಿ ಮೌಢ್ಯವನ್ನು ಸದಾ ರಕ್ಷಿಸಿ ಹೊತ್ತು ತರುತ್ತಿರುವ ಕುರುಡು ನಿಷ್ಠೆ ಕೂಡಾ ಇದೆ. ಎಲ್ಲಕ್ಕೂ ಹೆಚ್ಚಾಗಿ ಎಲ್ಲೆ ಕಾಣದ ನಿರಾಸೆಯ ನಡುವೆ ಬೇರೆ ಕಡೆಗೆ ಮುಖವನ್ನು ಹುದುಗಿಸಿ ಸುಖದ ದಿನಗಳನ್ನು ಕಲ್ಪಿಸಿಕೊಂಡು ನೆಮ್ಮದಿ ತಂದುಕೊಳ್ಳುವ ಕನಸುಗಾರಿಕೆ ಕಾಣುತ್ತದೆ.

ಜನಪದರಂತೂ ಕಥೆಗಾಗಿಯೇ ತಮ್ಮ ಇಡೀ ಬದುಕನ್ನು ಧಾರೆಯೆರೆದಿದ್ದಾರೆ. ಬದುಕಿನ ಎಲ್ಲವನ್ನೂ ಕಥೆಯಾಗಿಸಿಟ್ಟಿದ್ದಾರೆ. ಆದ್ದರಿಂದ ಜನಪದ ಕಥೆಗಳು ಒಳಗೊಳ್ಳದ ವಸ್ತು ವಿಷಯಗಳಿಲ್ಲ. ಇವು ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಪ್ರಾಚೀನ ಮಾನವನ ಬದುಕು, ಬಯಕೆ, ಆಸೆ, ನಿರಾಸೆ, ಆಕಾಂಕ್ಷೆ, ನಂಬಿಕೆ, ಸಂಪ್ರದಾಯ, ಆಚರಣೆ, ನೋವು, ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಕಾಮ, ಕನಸು, ಕಲ್ಪನೆ ಇತ್ಯಾದಿ ಮಾನವ ಗುಣಾವಗುಣಗಳನ್ನು ಹೊತ್ತು ಬಂದ ಒಂದು ಸಾಹಿತ್ಯ ಪ್ರಕಾರ. ಅದನ್ನೊಂದು ಕಲೆಯಾಗಿ ಅಭಿವ್ಯಕ್ತಿಸಿದ್ದು ನಮ್ಮ ಜನಪದರ ವಿಶಿಷ್ಟ ಪ್ರತಿಭೆ. ಅಲ್ಲಿ ಭಾಷೆ ಇದೆ, ಸಾಹಿತ್ಯ ಇದೆ. ಮನಶಾಸ್ತ್ರದ ಅಂಶಗಳಿವೆ. ಮಾನವಶಾಸ್ತ್ರದ ಗುಣಗಳಿವೆ. ಚಾರಿತ್ರಿಕ ಹಾಗೂ ಸಾಮಾಜಿಕ ಘಟನೆಗಳ ಚಿತ್ರಗಳಿವೆ. ಮಾನವನ ಹಿರಿ ಕಿರಿತನದ ಗುಣಾವಗುಣಗಳಿವೆ. ಲೌಕಿಕ ಅಲೌಕಿಕ ಮಾನುಷ ಅತಿಮಾನುಷ ಅಷ್ಟೇ ಏಕೆ ಕಾಲ್ಪನಿಕ ಜಗತ್ತಿನ ವಿಸ್ಮಯಕಾರಿ ಅಂಶಗಳು ಪ್ರಾಣಿ ಪ್ರಪಂಚದ ಅದ್ಭುತ ಸಂಗತಿಗಳು ಅಲ್ಲಿ ದಟ್ಟಸಿವೆ.

ಈ ಜನಪದ ಕಥೆಗಳ ಉದ್ದೇಶವೇ ಒಂದು ರೀತಿಯಲ್ಲಿ ವೈಶಿಷ್ಟ್ಯ ಪೂರ್ಣ. ರಂಜನೆ, ಬೋಧನೆ, ಪ್ರಚೋದನೆಗಳ ಸ್ವರೂಪವನ್ನು ಗಮನಿಸಿದಾಗ ಇವುಗಳು ಪರಿಣಾಮಕಾರಿಯಾದ ಅಂಶಗಳನ್ನು ಹೊರಚೆಲ್ಲುತ್ತವೆ. ಅವುಗಳ ಮನರಂಜನೆಯಷ್ಟೇ ಬೋಧನಾತ್ಮಕ ಕಥೆಯೂ ಮುಖ್ಯವಾದುವೇ. ಮಾನವ ಹೇಗೆ ಬದುಕಬೇಕು. ಲೋಕದಲ್ಲಿ ಅವನು ಹೇಗೆ ವರ್ತಿಸಬೇಕು ಎಂಬ ರೀತಿಯ ಶಿಕ್ಷಣಾತ್ಮಕ ದೃಷ್ಟಿ ಅಲ್ಲಿನ ಬಹುಪಾಲು ಕಥೆಗಳಲ್ಲಿ ಕಂಡುಬರುತ್ತದೆ. ಅವು ಆಯಾ ಸಮುದಾಯದ ಸಂಸ್ಕೃತಿಯನ್ನು ರೂಪಿಸುವ ನೀತಿ ಪ್ರಧಾನ ಕಥೆಗಳೆಂದರೂ ಆಗುತ್ತದೆ.

ಒಂದು ಸಮುದಾಯವನ್ನು ಅರ್ಥಮಾಡಿಕೊಳ್ಳುವಲ್ಲಿ ಆ ಸಮುದಾಯದ ಜನಜೀವನ ವಿಧಾನ ಎಲ್ಲವನ್ನು ಆ ಸಮುದಾಯದಲ್ಲಿ ಪ್ರಚಲಿತವಿರುವ ಕಥೆಗಳು ನಿರ್ದೇಶಿಸುತ್ತವೆ. ಒಂದು ಕಥೆಯ ಗರ್ಭವನ್ನು ಹೊಕ್ಕು ನೋಡಿದಾಗ ಅಲ್ಲಿ ಒಂದು ಸಮುದಾಯದ ನಂಬಿಕೆ, ಆಚರಣೆ, ನ್ಯಾಯ, ನೀತಿ, ಧರ್ಮ, ಜೀವನದ ಮೌಲ್ಯ ಹೀಗೆ ಹತ್ತು ಹಲವು ಸುಳಿವು, ಹೊಳಹುಗಳು ಕಾಣಸಿಗುತ್ತವೆ. ಖಾಟಿಕ್ ಸಮುದಾಯದಲ್ಲಿ ಪ್ರಚಲಿತವಿರುವ ಕಥೆಗಳು ಈ ತೆರನಾಗಿವೆ. ಉದಾಹರಣೆಗಾಗಿ ಮೂರು ಕಥೆಗಳನ್ನು ಕೊಡಲಾಗಿದೆ.

ಒಂದೂರಿನಲ್ಲಿ ಒಂದು ಅಣ್ಣ ತಂಗಿ ಇದ್ದರು. ಅಣ್ಣ ತಂಗಿಯನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಹೀಗಿರುವಾಗ ಒಂದು ದೊಡ್ಡ ಶ್ರೀಮಂತ ಕುಟುಂಬದಲ್ಲಿ ಮದುವೆ ಮಾಡಿ ಕೊಡುತ್ತಾನೆ. ತಂಗಿಯು ಸುಖವಾಗಿ ಇರುತ್ತಾಳೆ. ಆದರೆ ಶ್ರೀಮಂತವಾಗಿರುವ ಗಂಡನ ಮನೆಯವರು ಅವಳಿಗೆ ಎಂದೂ ತವರುಮನೆಗೆ ಕಳಿಸುತ್ತಿರಲಿಲ್ಲ. ಯಾವಾಗಲೂ ಮನೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕಾಗಿತ್ತು. ಹೀಗಿರುವಾಗ ಅಣ್ಣನು ಅವಳಿಗೆ ಕರೆಯಲು ಹೋಗುತ್ತಿರಲಿಲ್ಲ. ಯಾವಾಗಲಾದರು ಒಮ್ಮೆ ಮಾತನಾಡಿಸಿಕೊಂಡು ಬಂದು ಬಿಡುತ್ತಿದ್ದ. ಹೀಗೆ ಕಾಲಕಳೆಯುತ್ತಿರಲು ಅಣ್ಣನು ಮದುವೆ ಮಾಡಿಕೊಂಡು ಸುಖವಾಗಿದ್ದ. ಒಮ್ಮೆ ಅಣ್ಣನ ಮನೆಯ ಅಕ್ಕಪಕ್ಕದವರು ಅಣ್ಣನ ಹೆಂಡತಿಯನ್ನು ಕುರಿತು ಈ ಸಾರಿ ಶ್ರಾವಣ ಮಾಸದಲ್ಲಿ ನಾಗಪ್ಪನಿಗೆ ಹಾಲೆರೆಯುವಾಗ ನಿಮ್ಮ ನಾದಿನಿಯನ್ನು ಕರೆಕಳಿಸು ಎಂದು ಹೇಳುತ್ತಾರೆ. ಇದನ್ನು ಕೇಳಿ ವಿಸ್ಮಯಳಾಗಿ ಅವಳು ತನ್ನ ಗಂಡನಿಗೆ ಕೇಳುತ್ತಾಳೆ. ನನಗೇಕೆ ನಿಮಗೊಂದು ತಂಗಿ ಇರುವ ಸುದ್ದಿಯನ್ನು ಹೇಳಲಿಲ್ಲ? ನೀವು ಈ ಸಾರಿ ಅವಳಿಗೆ ಊರಿಗೆ ಹೋಗಿ ಕರೆದುಕೊಂಡು ಬನ್ನಿ. ನೀವು ಕರೆದುಕೊಂಡು ಬರದಿದ್ದರೆ ನಾನು ಹಬ್ಬ ಮಾಡುವುದಿಲ್ಲ ಎಂದು ಹಠ ಹಿಡಿಯುತ್ತಾಳೆ. ಆಯಿತು ಎಂದು ಮನಸ್ಸಿಲ್ಲದ ಮನಸ್ಸಿನಿಂದ ಗಂಡ ಊರಿಗೆ ತಂಗಿಯನ್ನು ಕರೆಯಲು ಹೋಗುತ್ತಾನೆ. ದಾರಿಯಲ್ಲಿ ದ್ಯಾಮವ್ವನ ಗುಡಿ ಸಿಗುತ್ತೆ. ಅಲ್ಲಿಗೆ ಹೋಗಿ ಅವನು ತಾಯಿ ತುಂಬಾ ದಿನಗಳ ಮೇಲೆ ನನ್ನ ತಂಗಿಯನ್ನು ಕರೆಯಲಿಕ್ಕೆ ಹೋಗ್ತಾ ಇದ್ದೀನಿ ಅವಳ ಗಂಡನ ಮನೆಯವರು ಕಳಿಸೋದಿಲ್ಲ ನನ್ನ ಹೆಂಡ್ತಿ ನೋಡಿದರೆ ನಿನ್ನ ತಂಗಿಯನ್ನು ಕರೆದು ತರದಿದ್ದರೆ

ಹಬ್ಬ ಮಾಡಲ್ಲ ಎಂದಿದ್ದಾಳೆ. ನನ್ನ ತಂಗಿಗೆ ನನ್ನ ಜೊತೆ ಅವಳ ಗಂಡನ ಮನೆಯವರು ಕಳಿಸಿದರೆ ನನ್ನ ರುಂಡ ನಿನಗೆ ಅರ್ಪಿಸುತ್ತೇನೆ ಎಂದು ಬೇಡಿಕೊಂಡು ತಂಗಿಯ ಊರಿಗೆ ತೆರಳುತ್ತಾನೆ. ತಂಗಿ ಮನೆಗೆ ಬಂದ ಅಣ್ಣನನ್ನು ನೋಡಿ ತುಂಬಾ ಸಂತೋಷಗೊಳ್ಳುತ್ತಾಳೆ. ಬಂದ ವಿಚಾರವನ್ನು ತಂಗಿಗೆ ತಿಳಿಸಿ ನಿನ್ನ ಅತ್ತಿಗೆ ಹಬ್ಬಕ್ಕೆ ಊರಿಗೆ ಕರೆದು ತರುವಂತೆ ಹೇಳಿದ್ದಾಳೆ ಎಂದು ತಿಳಿಸುತ್ತಾನೆ. ಇದನ್ನು ಕೇಳಿ ಸಂತೋಷಗೊಂಡ ತಂಗಿ ಹೋಗಿ ಗಂಡನಿಗೆ ಹೇಳುತ್ತಾಳೆ. ಆಯಿತು ನಾನು ಬರುತ್ತೇನೆ ಜೊತೆಗೆ ಹೋಗೋಣಾ ಎಂದು ಅವನು ತಯಾರಾಗಿ ಬರುತ್ತಾನೆ. ಇದನ್ನು ಕಂಡು ಸಂತೋಷಗೊಂಡ ಅಣ್ಣ ತಂಗಿ ಮತ್ತು ಭಾವನಿಗೆ ಕರೆದುಕೊಂಡು ಊರಿಗೆ ತೆರಳುತ್ತಾನೆ. ರಸ್ತೆ ಮಧ್ಯದಲ್ಲಿ ದ್ಯಾಮವ್ವನಿಗೆ ಬೇಡಿಕೊಂಡಿದ್ದು ನೆನಪಾಗಿ ತಂಗಿ ಮತ್ತು ಭಾವನಿಗೆ ಮುಂದೆ ಕಳಿಸಿ ತಾನು ಬರುತ್ತೇನೆ ಎಂದು ತಿಳಿಸಿ ದ್ಯಾಮವ್ವನ ಗುಡಿಯ ಕೈಯಲ್ಲಿರುವ ಕತ್ತಿಯಿಂದ ತನ್ನ ರುಂಡವನ್ನು ತುಂಡರಿಸಿಕೊಳ್ಳುತ್ತಾನೆ. ಹೀಗೆ ತನ್ನ ಪ್ರಾಣ ಅರ್ಪಿಸಿಕೊಂಡಾಗ ತುಂಬಾ ಹೊತ್ತು ಅಣ್ಣ ಬಾರದಿರುವುದನ್ನು ಕಂಡು ತಂಗಿ ಗಂಡನಿಗೆ ಕಳಿಸುತ್ತಾಳೆ. ಅವನು ಸತ್ತು ಬಿದ್ದ ಭಾವನಿಗೆ ನೋಡಿ ತಾನೇ ಇವನನ್ನು ಕೊಂದಿರುವನೆಂದು ತನ್ನ ಹೆಂಡತಿ ಎಲ್ಲಿ ತಪ್ಪು ತಿಳಿದುಕೊಳ್ಳುತ್ತಾಳೋ ಎಂದು ಅದೇ ಕತ್ತಿಯಿಂದ ತಾನು ರುಂಡ ಕಡಿದುಕೊಂಡು ಸಾಯುತ್ತಾನೆ. ಇನ್ನು ಯಾಕೆ ಬಂದಿಲ್ಲ ಏನಾಗಿದೆಯೋ ನೋಡೋಣ ಎಂದು ತಂಗಿ ಬಂದು ನೋಡಿದರೆ ಗಂಡ, ಅಣ್ಣ ಇಬ್ಬರು ಸತ್ತಿರುವುದನ್ನು ಕಂಡು ದ್ಯಾಮವ್ವನಿಗೆ ಹೇಗಾದರು ಮಾಡಿ ಇಬ್ಬರ ಪ್ರಾಣಗಳನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಆಗ ದೇವತೆ ಪ್ರತ್ಯಕ್ಷಳಾಗಿ ಎರಡು ನಿಮಿಷದಲ್ಲಿ ಅವರವರ ರುಂಡಗಳನ್ನು ಅವರವರಿಗೆ ಜೋಡಿಸಬೇಕೆಂದು ಹೇಳುತ್ತಾಳೆ ಆಯಿತು ಎಂದು ತಂಗಿ ಅವಸರದಲ್ಲಿ ಗಂಡನ ರುಂಡ ಅಣ್ಣನಿಗೆ, ಅಣ್ಣನ ರುಂಡ ಗಂಡನಿಗೆ ಜೋಡಿಸಿ ಬಿಡುತ್ತಾಳೆ. ನಂತರ ಜೀವ ಬಂದಾಗ ಯಾರಿಗೆ ಅಣ್ಣ ಎನ್ನಬೇಕು ಯಾರಿಗೆ ಗಂಡ ಎಂದು ಸಂಸಾರ ಸಾಗಿಸಲಿ ಎಂದು ಪೇಚಿಗೆ ಸಿಲುಕುತ್ತಾಳೆ.

ಈ ಕಥೆಯನ್ನು ನವಿಲಿನ ಕಥೆ ಎನ್ನುತ್ತಾರೆ. ಯಾಕೆ ಎಂದು ಕೇಳಿದರೆ ವಕ್ತೃ ಶಕುಂತಲಾ ಬಾಯಿ ಹೇಳುತ್ತಾರೆ. ನವಿಲಿಗೆ ಸಂಸಾರವಿಲ್ಲ, ಗಂಡು ನವಿಲಿನ ಕಣ್ಣೀರಿನಿಂದ ಅದೇ ಅವಳ ಗರ್ಭಧರಿಸುವುದಕ್ಕೆ ಕಾರಣವಾಗಿದೆ. ಹೀಗೆ ಗಂಡನಿಗೆ ಪ್ರೀತಿಸಬೇಕೆಂದರೆ ರುಂಡ ಅಣ್ಣನದು, ಅಣ್ಣನನ್ನು ಅಣ್ಣ ಎಂದು ಕರೆಯಲು ಆಗುವುದಿಲ್ಲ ಕಾರಣ ದೇಹ ಗಂಡನದು ಹೀಗೆ ಈ ಕಥೆಯು ನವಿಲಿನ ಸಂಸಾರಕ್ಕೆ ಸಾಂಕೇತಿಸುವುದರಿಂದ ಇದನ್ನು ನವಿಲಿನ ಕಥೆ ಎನ್ನುವರು.

'ಡುಮ್ಮ ಡುಮ್ಮಿ' ಕಥೆ

ಒಂದೂರಲ್ಲಿ ಒಂದು ಜೋಡಿ ದಂಪತಿ ಇದ್ದರು, ಅವರ ಹೆಸರು ಡುಮ್ಮ ಡುಮ್ಮಿ. ಕೂಲಿ ಮಾಡಿ ಜೀವನ ನಡೆಸುತ್ತಿದ್ದರು. ಒಂದಾನೊಂದು ದಿನ ಹಬ್ಬ ಮಾಡಬೇಕೆಂದು ನಿರ್ಧಾರ ಮಾಡಿದರು.

ಸಂತೆಯಿಂದ ಬೆಲ್ಲ, ಬ್ಯಾಳಿ, ಹಿಟ್ಟು, ಎಣ್ಣೆ ತಂದು ಡುಮ್ಮ ಡುಮ್ಮಿಗೆ ಹೋಳಿಗೆ ಮಾಡೆಂದು ಹೇಳಿ ಕೂಲಿಗೆ ಹೋಗಿ ಬಿಟ್ಟನು. ಡುಮ್ಮಿ ಕಷ್ಟಪಟ್ಟು ಮೂರು ಹೋಳಿಗೆ ಮಾಡುತ್ತಾಳೆ. ಮಾಡ್ತಾ ಮಾಡ್ತಾ ಒಂದು ಕುದ್ದೈತೋ ಕುದ್ದಿಲ್ಲೋ ಎಂದು ಒಂದು ತಿನ್ನುತ್ತಾಳೆ. ಇನ್ನೊಂದು ಬೆಂದೈತೋ ಬೆಂದಿಲ್ಲೋ ಎಂದು ಮತ್ತೊಂದು ತಿನ್ನುತ್ತಾಳೆ. ನನ್ನ ಪಾಲಿನದು ನಾ ಯಾಕೆ ಬಿಡಬೇಕೆಂದು ಅದನ್ನು ತಿನ್ನುತ್ತಾಳೆ. ಬೇಸುಂಡು ಮಲಗುತ್ತಾಳೆ. ಗಂಡ ಕೂಲಿಯಿಂದ ಬಂದು ಹೋಳಿಗೆ ಉಳಿಯದಿರುವುದನ್ನು ಕಂಡು ಹೆಂಡತಿಗೆ ಗದರಿಸಿ ಕೇಳಿದಾಗ ಮೂರು ತಿಂದುದ್ದು ಹೇಳುತ್ತಾಳೆ. ಡುಮ್ಮ ಬೇಸತ್ತು ಚೆನ್ನಾಗಿ ಹೊಡೆದು ಉಪವಾಸ ಮಲಗುತ್ತಾನೆ.

'ತಾಯಿ ಶಾಪ ಎಂದು ಬಿಡಲ್ಲ'

ಕಾಶಿ ಎಂಬ ಸಣ್ಣ ಗ್ರಾಮದಲ್ಲಿ ಇಬ್ಬರು ದಂಪತಿಗಳು. ಕಾಶಿವಿಶ್ವನಾಥನ ಭಕ್ತರು. ಮಕ್ಕಳಿರಲಿಲ್ಲ. ಒಂದು ಪಟ್ಟು ಹನ್ನೆರಡು ವರ್ಷ ಆದ ಮೇಲೆ ಅವರಿಗೆ ಮಕ್ಕಳಾಗುತ್ತಾರೆ. ಭಗವಂತನು ಇವರ ಭಕ್ತಿಯನ್ನು ಮೆಚ್ಚಿ ಮಕ್ಕಳಾಗುವ ವರ ನೀಡುತ್ತಾನೆ.

ಬಿಜಾಪುರ ಭಾಗದ ಅರಸರು ಕೃಷ್ಣಾನದಿ ಭೀಮಾನದಿ ದಂಡೆಯಲ್ಲಿ ವಾಸವಾಗಿ ಆ ಅರಸನು ತನ್ನ ರಾಜಧಾನಿಗೆ ಹೋದನು. ಒಂದು ನಾಯಿಯನ್ನು ಸಾಕಿದ್ದನು. ರಾಜನು ಯಾವಾಗಲು ಅದನ್ನು ಬಿಟ್ಟು ಊಟ ಮಾಡುತ್ತಿರಲಿಲ್ಲ. ಆದರೆ ರಾಣಿ ಗರ್ಭವತಿ ಆದಾಗಿನಿಂದ ರಾಜ ನಾಯಿಯನ್ನು ಮರೆತು ಬಿಡುತ್ತಾನೆ. ಒಮ್ಮೆ ರಾಜ ಮಾವಿನ ಹಣ್ಣನ್ನು ತಿನ್ನುವಾಗ ನಾಯಿ ಬಾಗಿಲ ಹತ್ತಿರ ನಿಂತು ರಾಜನು ಹಣ್ಣು ಕೊಡುತ್ತಾನೆಂದು ಕಾಯುತ್ತದೆ. ಆದರೆ ರಾಜ ಕೊಡದಿದ್ದಾಗ ನನ್ನ ಮಕ್ಕಳು ರಾಣಿಯು ಹೊಟ್ಟೆಯಲ್ಲಿ ಅವನ ಮಕ್ಕಳು ನನ್ನ ಹೊಟ್ಟೆಯಲ್ಲಿ ಹುಟ್ಟಲೆಂದು ತಪಸ್ಸು ಮಾಡುತ್ತಾರೆ. ರಾಣಿ ನಾಯಿ ಮಕ್ಕಳನ್ನು ನಾಯಿ ಎರಡು ಹೆಣ್ಣನ್ನು ಹಡೆಯುತ್ತಾರೆ. ರಾಜನ ಮಕ್ಕಳನ್ನು ನಾಯಿ ಹತ್ತಿರ ನಾಯಿ ಮಕ್ಕಳನ್ನು ರಾಣಿ ಹಾಲುಣಿಸುತ್ತಾರೆ. ಆದರೆ ಬೆಸ್ತರ ನಾಯಿ ಒಂದು ದೂರದ ಗುಡ್ಡದಲ್ಲಿ ತನ್ನ ಎರಡು ಹೆಣ್ಣನ್ನು ತಗೊಂಡೋಗಿ ಇರುತ್ತಾಳೆ. ಹೆಣ್ಣು ದೊಡ್ಡವಗತ್ತವೆ ನಾಯಿ ಹೊರಗಡೆಯಿಂದ ಆಹಾರ ತಂದು ಅವರನ್ನು ಸಾಕುತ್ತಾಳೆ. ಒಮ್ಮೆ ಇಬ್ಬರು ರಾಜರು ಶಿಕಾರಿಗೆ ಬಂದು ನೀರಡಿಕೆಯಾಗಿ ಇವರ ಮನೆಗೆ ಬಂದು ಇಬ್ಬರು ಹೆಣ್ಣು ಮಕ್ಕಳನ್ನು ನೀರು ಕುಡಿದು ಹಾರಿಸಿಕೊಂಡು ಹೋಗುತ್ತಾರೆ. ಸಣ್ಣ ಮಗಳು ತನ್ನ ಕತ್ತಿನ ಸರದ ಮಣಿ ಒಂದೊಂದಾಗಿ ಹಾಕಿಕೊಂಡು ಹೋಗುತ್ತಾಳೆ. ನಾಯಿ ಮಣಿಸರದ ಗುರುತು ಹುಡುಕಿಕೊಂಡು ಸಣ್ಣ ಮಗಳ ಮನೆಗೆ ಹೋದರೆ ಅವಳನ್ನು ಕಂಡು ಮಗಳು ಚೆನ್ನಾಗಿ ಉಪಚಾರ ಮಾಡುತ್ತಾರೆ. ಅಳಿಯ ಇನ್ನು ಎರಡು ದಿವ ದೊಡ್ಡ ಮಗಳ ಮನೆಯಲ್ಲಿರು ಎಂದು ದೊಡ್ಡ ಮಗಳ ಮನೆಗೆ ಬಿಟ್ಟು ಬರುತ್ತಾನೆ. ಆದರೆ ದೊಡ್ಡ ಮಗಳು ನಾಯಿ ನನ್ನ ಅರಮನೆಗೆ ಶೋಭೆಯಲ್ಲ ಎಂದ ಬಿಸಿ ಗಂಜಿ ಹಾಕಿ ಸುಡುತ್ತಾಳೆ. ಇದರಿಂದ ನಾಯಿ ಒದ್ದಾಡಿ ಬಂದು

ಸಣ್ಣ ಮಗಳ ಮನೆಗೆ ಬಂದು ಸತ್ತು ಹೋಗುತ್ತೆ. ಅಳಿಯ ಮಗಳು ಆ ನಾಯಿಯನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಮುಚ್ಚಿಡುತ್ತಾರೆ. ಒಂದು ಮೂರು ತಿಂಗಳ ಕಾಲ ತೆಗೆಯಾದ ನಂತರ ತೆಗೆಯುತ್ತಾರೆ. ಅದರ ತುಂಬಾ ಮುತ್ತು ರತ್ನ ಬಂಗಾರ ಬೆಳ್ಳಿ ಆಗಿರುತ್ತದೆ. ದೊಡ್ಡ ಮಗಳು ತನ್ನ ತಾಯಿ ಬಂಗಾರವಾಗಿರುವುದರಿಂದ ನನಗರ್ಧ ಕೊಡು· ಎನ್ನುತ್ತಾರೆ. ಆದರೆ ಅದನ್ನು ಮುಟ್ಟಲು ಹೋದಾಗ ಅದು ಮೂಳೆಗಳಾಗುತ್ತವೆ. ಇದರಿಂದ ಬೇಸತ್ತು ದೊಡ್ಡ ಮಗಳು ಹಿಂತಿರುಗುತ್ತಾಳೆ. ಹಾಗಾಗಿ ಸಣ್ಣವಳು ಚೆನ್ನಾಗಿರುತ್ತಾಳೆ.

'ತಾಯಿ ಶಾಪ ಎಂದೂ ಬಿಡಲ್ಲ' ಎಂಬುವುದು ಈ ಕಥೆಯ ನೀತಿ ಸಾರವಾಗಿದೆ.

ಅಧ್ಯಾಯ - ೭

ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು

ಖಾಟಿಕ್ ಸಮುದಾಯದ ಬಗ್ಗೆ ಅಧ್ಯಯನ ನಡೆಸುವಾಗ ಮೊದಲನೆಯದಾಗಿ ಯಾರೂ ಈ ಸಮುದಾಯವನ್ನು ಕುರಿತು ಅಧ್ಯಯನ ನಡೆಸದಿರುವುದು ಕಂಡುಬರುತ್ತದೆ. ಎಲ್ಲೋ ಒಂದೆರಡು ಲೇಖನಗಳನ್ನು ಬಿಟ್ಟು ಅಷ್ಟಾಗಿ ಅಧ್ಯಯನ ನಡೆಯದಿರುವುದು, ಈ ಸಮುದಾಯಕ್ಕೆ ಸಂಬಂಧಿಸಿದ ದಾಖಲೆಗಳು ಸೃಷ್ಟಿಯಾಗಿರುವುದು ಕಂಡುಬರುವುದಿಲ್ಲ. ಎರಡನೆಯದಾಗಿ ಈ ಸಮುದಾಯದ ಜನರು ಅನಕ್ಷರಸ್ಥರಾಗಿದ್ದು ತಮ್ಮನ್ನು ಕುರಿತು ದಾಖಲೆಗಳನ್ನು ಸೃಷ್ಟಿಸಿ ಚರಿತ್ರೆ ಕಟ್ಟುವ ಕಾರ್ಯ ದೂರದ ಮಾತಾಗಿದೆ. ಇಂದು ಇವರ ಚರಿತ್ರೆಯನ್ನು ಕಟ್ಟುವಲ್ಲಿ ಇವರ ಮೌಖಿಕ ಇತಿಹಾಸ, ಆಚರಣೆಗಳು, ಸ್ಮೃತಿಗಳೇ ಆಧಾರವಾಗಿವೆ.

ಹಿಂದಿನ ಕಾಲದ ಸಮಾಜದಲ್ಲಿ ಖಾಟಿಕರನ್ನು ಕುರಿತು ತಿಳಿಸುವಲ್ಲಿ ಮುಖ್ಯವಾಗಿ ನನ್ನ ಅಧ್ಯಯನದಲ್ಲಿ ಇವರ ಇತಿಹಾಸ ಪ್ರಾರಂಭವಾಗುವುದು ಇವರು ಮೊಘಲರ ಅವಧಿಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದು ಇಲ್ಲಿ ನೆಲೆನಿಂತು ಇಲ್ಲಿಯ ಸಮಾಜದ ಸುತ್ತಮುತ್ತಲಿನ ಜನ ಸಮುದಾಯದೊಂದಿಗೆ ಯಾವ ರೀತಿ ಸಂಬಂಧಗಳನ್ನು ಬೆಳೆಸಿಕೊಂಡರು. ಹೇಗೆ ಬೆರತರು. ಇಲ್ಲಿಯವರು ಈ ಸಮುದಾಯವನ್ನು ಕುರಿತು ಹೇಗೆ ಪ್ರತಿಕ್ರಿಯಿಸಿದರು. ಇವರನ್ನು ಯಾವ ದೃಷ್ಟಿಕೋನ ಮತ್ತು ಸಮಾಜದಲ್ಲಿ ಇವರ ನೆಲೆ, ಬೆಲೆಯನ್ನು ಗುರುತಿಸಿದ್ದು ಹೇಗೆ ಯಾವ ಸ್ಥಾನಮಾನ ದೊರೆಯಿತು ಇಂತಹ ಮುಂತಾದ ಹಲವು ಪ್ರಶ್ನೆಗಳಿಗೆ ಉತ್ತರ ಹುಡುಕುವುದಾಗಿದೆ.

ಮತ್ತೊಮ್ಮೆ ಇಲ್ಲಿ ಖಾಟಿಕರನ್ನು ಅವರ ಇತಿಹಾಸವನ್ನು ಕುರಿತು ಒಂದು ಇತಿಹಾಸ ಸರಪಳಿಯನ್ನು ಕಟ್ಟಿಕೊಡುವ ಮೂಲಕ ಇವರ ಹಿಂದಿನ ಕಾಲದ ಇತಿಹಾಸ, ಸ್ಥಾನಮಾನ ತಿಳಿಯುವುದು ಉಚಿತವೇನೋ ಎಂದೆನಿಸುತ್ತದೆ. ಮನುಷ್ಯನ ಉಗಮ ಮತ್ತು ವಿಕಾಸದ ಹಂತದಲ್ಲಿ ನಾವು ಖಾಟಿಕರ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಸೋನ್‌ಕರ್ ಶಾಸ್ತ್ರೀಯವರ ಪುಸ್ತಕ ತುಂಬಾ ಮಹತ್ವದ್ದಾಗಿದೆ. ಖಾಟಿಕರು ಮೂಲತಃ ಬೇಟೆಯಾಡುತ್ತ ಜೀವನ ನಡೆಸುತ್ತಿದ್ದ ಶಿಕಾರಿ ಅಥವಾ ಆಖೇಟಕರು ಎಂದು ಗುರುತಿಸುತ್ತಾ ಮುಂದೆ ಬೇಟೆಯಾಡಿ ತಂದ ಮಾಂಸವನ್ನು ಉಪಯೋಗಿಸಿ ಉಳಿದ ಮಾಂಸವನ್ನು ತನ್ನ ಸುತ್ತಲಿನ

ಇತರ ಜನರಿಗೆ ನೀಡುವ ಮೂಲಕ ಅವರಿಂದ ತಮಗೆ ಬೇಕಾದ ಸಾಮಗ್ರಿಯನ್ನು ಪಡೆಯುತ್ತ ಜೀವನ ಸಾಗಿಸುತ್ತಿದ್ದರು. ನಾಗರೀಕತೆ ಬೆಳೆದಂತೆ ಇವರು ಮಾಂಸವನ್ನು ಮಾರುವ ಕಾಯಕದಲ್ಲೆ ಮುಂದುವರೆದು ಹಾಗೆಯೇ ಬೇಟೆಯಾಡುವುದರಿಂದ ಬಿಲ್ಲುಗಾರಿಕೆಯಲ್ಲಿ ಪ್ರಾವೀಣರಾಗಿರುವುದರಿಂದ ಯೋಧರಾಗಿಯೂ ಕಾರ್ಯನಿರ್ವಹಿಸಿ ಹಲವು ವಿದೇಶಿ ದಾಳಿಗಳನ್ನು ಎದುರಿಸಿರುವುದು ಕಂಡುಬರುತ್ತದೆ. ಹೀಗೆ ಮೊಘಲರ ಕಾಲದಲ್ಲಿ ರಾಜಪೂತ ಅರಸರ ಮಾಂಡಲಿಕರಲ್ಲಿ ಸೈನಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ನಂತರ ಅವರು ಮತಾಂತರಕ್ಕೆ ಪ್ರೇರೇಪಿಸಿದಾಗ ಅಲ್ಲಿಂದ ದಕ್ಷಿಣಕ್ಕೆ ಬಂದು ಇಲ್ಲಿಯ ವಿಜಯನಗರದ ಅರಸರು ಮತ್ತು ಪಾಳೆಗಾರರಲ್ಲಿ ಯೋಧರಾಗಿ ಕಾರ್ಯ ನಿರ್ವಹಿಸಿರುವುದು ಕಂಡಬರುತ್ತದೆ. ಆ ನಂತರ ರಾಜ್ಯ ಆಳ್ವಿಕೆ ಎಲ್ಲ ಹೋದ ನಂತರ ಇವರು ಮದ್ಯ ಮತ್ತು ಮಾಂಸ ಮಾರಾಟದಲ್ಲಿ ತೊಡಗಿಕೊಂಡರು. ಸಮಯಕ್ಕೆ ತಕ್ಕಂತೆ ಇತರ ಚಿಕ್ಕಪುಟ್ಟ ಉದ್ಯೋಗಗಳನ್ನು ಮಾಡುತ್ತ ಜೀವನ ನಿರ್ವಹಣೆಯನ್ನು ಮಾಡತೊಡಗಿದರು.

ಇವರು ಮಾಡುವ ವೃತ್ತಿಯ ಆಧಾರದ ಮೇಲೆ ಜನ ಇವರನ್ನು ಕರ್ನಾಟಕದಲ್ಲಿ ಕಟುಗರು, ಕಟುಕರು ಎಂದು ಗುರುತಿಸತೊಡಗಿದರು. ಇವರು ಮೂಲತಃ ಖಾಟಿಕ್‌ರು. ಶಾಸ್ತ್ರೀಯವರು ಇವರನ್ನು ಕುರಿತು ಈ ರೀತಿಯಲ್ಲಿ ಹೇಳುತ್ತಾರೆ. “ಖಾಟಿಕ್ ಜಾತಿ ಭಾರತದ ಪ್ರಾಚೀನ ಜಾತಿಗಳಲ್ಲಿ ಒಂದು ಇವರು ಮೊದಲು ಶಿಕಾರಿ ಅಥವಾ ಆಖೇಟಕರಾಗಿದ್ದು ಸಮಯ ಪರಿಸ್ಥಿತಿಗೆ ಅನುಸಾರವಾಗಿ ತಮ್ಮ ಧರ್ಮ, ಜಾತಿ, ವ್ಯವಹಾರ ಮತ್ತು ಅಸ್ಥಿತ್ವದ ರಕ್ಷಣೆ ಮಾಡುತ್ತ ಕಠ, ಕಠಕ್, ಕಾಠಿಕ್ ಸ್ಥಿತಿಯಿಂದ ತೆರಳುತ್ತ ವರ್ತಮಾನದಲ್ಲಿ ಖಾಟಿಕ್ ಅವಸ್ಥೆಗೆ ತಲುಪಿದ್ದಾರೆ. ಇಂದಿನ ಸ್ವತಂತ್ರ್ಯ ಭಾರತದಲ್ಲಿ ಚಕ್, ಚಿಕವಾ, ಧನಗರ್, ಖಸಾಯಿ, ಬಹೀಲಿಯ, ಸೂರ್ಯವಂಶಿ, ಹಲಾಲ್, ಕಲಾಲ್, ಆದಿ ಅನೇಕ ಉಪ ಶಾಖೆಗಳಲ್ಲಿ ಕಂಡುಬರುವವರು ಮೂಲತಃ ಖಾಟಿಕ್‌ರೇ ಆಗಿದ್ದಾರೆ.

ಹೀಗೆ ಖಾಟಿಕ್ ಸಮುದಾಯ ಕರ್ನಾಟಕದಲ್ಲಿ ತನ್ನನ್ನು ಹಲವಾರು ಹೆಸರುಗಳಿಂದ ಗುರುತಿಸಿ ಕೊಳ್ಳುತ್ತಿರುವುದನ್ನು ಕಾಣಬಹುದು. ಇವರು ವೃತ್ತಿಯಾಧಾರವಾಗಿ ತಮ್ಮನ್ನು ಸಮಾಜ ಗುರುತಿಸುತ್ತಿರುವು ದನ್ನು ನಿರಾಕರಿಸುತ್ತ ಸೂರ್ಯವಂಶಿ ಕ್ಷತ್ರಿಯ, ಮರಾಠಿ, ಅರೆಮರಾಠಿ, ಕ್ಷತ್ರಿಯ, ರಜಪೂತ ಎಂದು ಗುರುತಿಸಿಕೊಳ್ಳಲು ಮುಂದಾಗುತ್ತಾರೆ. ಏಕೆಂದರೆ ಇವರಿಗೆ ಸಮಾಜದಲ್ಲಿ ಕಟುಕರೆಂದರೆ ಖಾಟಿಕ್ ಎಂದರೆ ಸ್ಥಾನಮಾನ ಇಲ್ಲದಿರುವುದೆ ಕಾರಣವಾಗಿದೆ. ಹೀಗಾಗಿ ಬಹಳಷ್ಟು ಜನರು ಇವರ ಮೂಲ ವೃತ್ತಿಯಿಂದ ಏತಕ್ಕಾಗಿ ಸಮಾಜದಲ್ಲಿ ಅವಮಾನಿತರಾಗಬೇಕೆಂದು ತಮ್ಮ ವೃತ್ತಿಯನ್ನೇ ಬದಲಾಯಿಸಿ ಕೊಂಡಿರುವುದು ಸಹ ಕಂಡುಬರುತ್ತದೆ. ಹೀಗೆ ಒಂದು ಸಮುದಾಯ ಈ ಸಮಾಜದಲ್ಲಿ ಹೇಗೆ ಉಸಿರಾಡುತ್ತಿದೆ ಎನ್ನುವುದು ನನ್ನ ಅಧ್ಯಯನದ ಮುಖ್ಯ ವಿಷಯ.

ಇವರನ್ನು ವರ್ಣವ್ಯವಸ್ಥೆಯ ಯಾವ ಮೂಲದಿಂದ ಬಂದವರೆಂದು ಗುರುತಿಸುವಾಗ ಕರ್ನಾಟಕದಲ್ಲಿ

ಖಾಟಿಕ್‌ರ ಮತ್ತು ಹಿಂದೂ ಶೂದ್ರ ಸಮುದಾಯದ ಜೊತೆಗಿನ ಸಂಬಂಧ ಅವರೊಂದಿಗಿನ ಒಡನಾಟ ಮತ್ತು ಪಾಲ್ಗೊಳ್ಳುವಿಕೆಯನ್ನು ಗಮನಿಸಿದರೆ ಅವರ ಸಾಮಾಜಿಕ ಸ್ಥಾನಮಾನಗಳ ಚಿತ್ರಣ ದೊರೆಯುತ್ತದೆ. ಸಮಾಜದಲ್ಲಿ ಖಾಟಿಕ್‌ರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ಇವರು ವಾಸಿಸುವ ಕೇರಿಗಳನ್ನು ಕಟುಕರ ಕೇರಿ, ಕಟುಕರ ಬೀದಿ, ಕಟುಕ ಮೊಹಲ್ಲಾ, ಕಟುಗರ ಓಣಿ ಎಂದು ಗುರುತಿಸುತ್ತಾರೆ. ಇವರ ಹೆಸರುಗಳನ್ನು ಸಹ ಕಟುಗರ ರಾಮಪ್ಪ, ಕಟುಗರ ಯಂಕಪ್ಪ, ಕಟುಗರ ಶಂಕ್ರಪ್ಪ, ಎಂದು ಕರೆಯುತ್ತಾರೆ. ಹಾಗೆಯೇ ಲಿಂಗಾಯತ ಕುರುಬ ನಾಯಕ ಬೇರೆ ಸಮುದಾಯಗಳು ಇವರನ್ನು ತಮ್ಮ ಮನೆಯಲ್ಲಿ ಒಳಗೆ ಬಿಟ್ಟುಕೊಂಡರೂ, ಅದು ಮನೆಯ ಮುಂದಿನ ಪಡಸಾಲೆಯವರೆಗೆ ಮಾತ್ರ ಪ್ರವೇಶವಿರುತ್ತದೆ. ನಡುಮನೆ ಅಥವಾ ಅಡುಗೆ ಮನೆಯಾಗಲಿ ದೇವರ ಕೋಣೆಯವರೆಗೆ ಇವರಿಗೆ ಪ್ರವೇಶವಿರುವುದಿಲ್ಲ. ಇವರು ಸಹ ಇಲ್ಲಿಯ ಜನರಲ್ಲಿ ಸಾಮಾನ್ಯವಾಗಿ ಹೆಚ್ಚಾಗಿ ಬೆರೆಯಲು ಇಷ್ಟಪಡುವುದಿಲ್ಲ. ಕಾರಣ ಇವರ ನಿರಂತರ ಉದ್ಯೋಗ ಹಾಗೂ ವ್ಯಾಪಾರದಿಂದ ಸಮಯದ ಅಭಾವ ಒಂದಾದರೆ, ಇನ್ನೊಂದು ಅನ್ಯ ಸಮುದಾಯದವರು ಇವರನ್ನು ನೋಡುವ ದೃಷ್ಟಿಕೋನದಿಂದ ಎಂಬ ಕಾರಣಕ್ಕೆ ಸಮಾಜದಲ್ಲಿ ಯಾರೊಂದಿಗೂ ಹೆಚ್ಚಾಗಿ ಬೆರೆಯುವುದಿಲ್ಲ. ಮುಸ್ಲಿಂ ಸಮುದಾಯದೊಂದಿಗೆ ಮಾತ್ರ ಹೆಚ್ಚು ಬಾಂಧವ್ಯ ಹಾಗೂ ಒಡನಾಟ ಇರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಒಂದು ಇವರೊಂದಿಗೆ ವ್ಯಾಪಾರ, ವ್ಯವಹಾರ ಸಂಬಂಧವಿರುವುದು ಮತ್ತು ಭಾಷೆಯು ಇವರನ್ನು ಹತ್ತಿರ ಬೆಸೆಯುವಂತೆ ಮಾಡಿದೆ ಎಂದು ಹೇಳಬಹುದು. ಇವರಾಡುವ ಗುಪ್ತಭಾಷೆಯನ್ನು ಮುಸ್ಲಿಂ ವ್ಯಾಪಾರಸ್ಥರು ಬಲ್ಲವರಾಗಿರುತ್ತಾರೆ. ಹಾಗಾಗಿ ವ್ಯಾಪಾರದ ಬಾಂಧವ್ಯ ಇವರನ್ನು ಪರಸ್ಪರ ನಿಕಟವಾಗಿಸುವ ಒಂದು ಅವಿನಾಭಾವ ಸಂಬಂಧವಾಗಿದೆ. ಇವರು ಪರಸ್ಪರರಲ್ಲಿ ಹಾಗೂ ವ್ಯಾಪಾರದಲ್ಲಿ, ವ್ಯವಹಾರದಲ್ಲಿಯಾಗಲಿ ಅಥವಾ ಕುಶಲ ಕ್ಷೇಮಗಳನ್ನು ವಿಚಾರಿಸುವಾಗ ಮಾಮು (ಮಾವ), ಚಾಚಾ (ದೊಡ್ಡಪ್ಪ ಚಿಕ್ಕಪ್ಪ), ದಾದಾ ನಾನಾ (ಅಜ್ಜ) ಆಪಾ (ಅಕ್ಕ), ದೀದಿ (ಸಹೋದರಿ), ಖಾಲಾ, ಚಾಚಿ (ಚಿಕ್ಕಮ್ಮ), ಬೈಯಾ (ಅಣ್ಣ) ಎಂದು ಸಂಭೋದಿಸುತ್ತಾರೆ. ಹಾಗೆಯೇ ತಮ್ಮಲ್ಲಿರುವ ಪ್ರೀತಿ ವಾತ್ಸಲ್ಯ ಮತ್ತು ಸ್ನೆಹಗಳಿಂದ ಅವರೊಂದಿಗೆ ಹಂಚಿಕೊಳ್ಳುತ್ತಾರೆ. ಅವರ ಮದುವೆ ಕಾರ್ಯಕ್ರಮ ಇತರೆ ಕಾರ್ಯಗಳಲ್ಲಿ ಇವರು ಭಾಗವಹಿಸುವುದು ಸಹ ಕಂಡುಬರುತ್ತದೆ. ಈ ರೀತಿ ಖಾಟಿಕ್ ಸಮುದಾಯ ಮುಸ್ಲಿಂ ಸಮುದಾಯ ದೊಂದಿಗೆ ಅನನ್ಯತೆಯ ಸಂಬಂಧಗಳನ್ನು ಹೊಂದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬರುತ್ತದೆ.

ಖಾಟಿಕ್ ಸಮುದಾಯವು ಉತ್ತರದಿಂದ ದಕ್ಷಿಣಕ್ಕೆ ಬಂದಂತಹ ಸಂದರ್ಭದಲ್ಲಿ ಇಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುವ ಜೊತೆಗೆ ಹೊಟ್ಟೆಪಾಡಿಗಾಗಿ ಮಾಂಸ ಮತ್ತು ಮದ್ಯ ಮಾರಾಟ ಮಾಡುತ್ತ ಜೀವನ ಸಾಗಿಸುವಾಗ ತಮ್ಮ ಸಂಸ್ಕೃತಿಯ ಮೂಲ ನೆಲೆಗಳಾದ ಅವರ ಆಚರಣೆ, ಸಂಪ್ರದಾಯಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ಭಾರತ ಆರಂಭದಿಂದಲೂ ಅನ್ಯ

ದೇಶಿಯರ ಆಕ್ರಮಣಗಳಿಗೆ ತುತ್ತಾಗುತ್ತ ರಾಜಕೀಯ ಗುಲಾಮಗಿರಿಯನ್ನು ಅನುಭವಿಸಿದರೂ ತನ್ನ ಸಾಮಾಜಿಕ ರಚನೆಯ ಒಳವಿವರಗಳನ್ನು ಬಿಟ್ಟುಕೊಟ್ಟಿಲ್ಲ. ಇಲ್ಲಿನ ಧಾರ್ಮಿಕ ಬದ್ಧತೆಯೊಂದಿಗೆ ಬೆಸೆದು ಹೋದ ಸಮಾಜ ಅದರ ಕಟ್ಟುಪಾಡುಗಳನ್ನು ರೂಪಿಸಿಕೊಳ್ಳುವಾಗ ಮನುಷ್ಯ ಮತ್ತು ದೇವರ ನಡುವಿನ ಸಂಬಂಧವನ್ನು ಕಟ್ಟಿಕೊಂಡಿದೆ. ದೇವರು, ಧರ್ಮ, ಜಾತಿ, ಪಾಪ-ಪುಣ್ಯ, ಸ್ವರ್ಗ-ನರಕ ಮೊದಲಾದವುಗಳೆಲ್ಲಾ ಒಂದರೊಳಗೊಂದರಂತೆ ಹೆಣೆದುಕೊಂಡು ಇಲ್ಲಿನ ಸಮಾಜದ ತಾರತಮ್ಯ ನೆಲೆಯನ್ನು ರೂಪಿಸಿವೆ. ಖಾಟಿಕರು ಸಹ ಇಂತಹ ರಚನೆಯ ಒಳಗಡೆಯೇ ಆಕಾರ ಪಡೆದುಕೊಂಡವರಾಗಿದ್ದಾರೆ. ಅವರ ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಯೋಚಿಸುವಾಗ ಸಹಜವಾಗಿಯೇ ಅವರ ಮೂಲ ಸಂಸ್ಕೃತಿಯ ರೂಪಗಳು ಕಣ್ಣೆದುರಿಗೆ ಬರುತ್ತವೆ.

ಮುಖ್ಯವಾಗಿ ಇವರ ವೃತ್ತಿಯ ಕಾರಣದಿಂದಾಗಿ ಸಮಾಜ ಇವರನ್ನು ಅಸ್ಪೃಶ್ಯರಂತೆ ಕಾಣುತ್ತದೆ. ಆದರೆ ಇವರ ಮತ್ತು ದಲಿತರ ಸಂಬಂಧಗಳನ್ನು ನೋಡಿಕೊಂಡಾಗ ಇವರು ದಲಿತರನ್ನು ತಮ್ಮ ಮನೆಯಲ್ಲಿ ಸೇರಿಸಿಕೊಳ್ಳಲು ಇಷ್ಟಪಡುವುದಿಲ್ಲ. ಹಾಗೆಯೇ ಅವರಿಂದ ಆಹಾರ ಪಾನೀಯಗಳನ್ನು ಸಹ ಸ್ವೀಕರಿಸುವುದಿಲ್ಲ. ಇದನ್ನು ಗಮನಿಸಿದಾಗ ಇವರ ಮೂಲ ನೆಲೆ ಯಾವುದಿರಬಹುದು ಎಂದು ಗುರುತಿಸುವುದು ಕಷ್ಟವಾಗುತ್ತದೆ. ಸಮಾಜದ ಇತರ ಸಮುದಾಯಗಳು ಇವರನ್ನು ಅಸ್ಪೃಶ್ಯರಂತೆ ಕಾಣುತ್ತದೆ. ಇವರು ತಮಗಿಂತ ಕನಿಷ್ಟರನ್ನಾಗಿ ಮತ್ತೊಂದು ಕೆಳ ಸಮುದಾಯಗಳನ್ನು ಕಾಣುವಂತ ಸಂದರ್ಭದಲ್ಲಿ ಯಾರ ನೆಲೆ ಯಾವುದು ಎಂದು ಗುರುತಿಸುವುದು ಕಷ್ಟದ ಕೆಲಸವೇ ಎಂದು ತೋರುತ್ತದೆ.

ಮೂಲದಿಂದ ಬೇಟೆಯಾಡುತ್ತ ಬಂದ ಒಂದು ಸಮುದಾಯ ಕಾಲಾನಂತರ ಬೇಟೆಯಿಂದ ಪಶುಪಾಲನೆ ನಂತರ ಮಾಂಸ ಮಾರಾಟ ಮಾಡುವಿಕೆಯಲ್ಲಿ ತೊಡಗಿಕೊಂಡು ಬಂದುದನ್ನು ಗಮನಿಸಿದಾಗ ಮಾಂಸ ಮಾರಾಟ ಮಾಡುವಿಕೆ ಇವರ ಮೂಲ ಉದ್ಯೋಗವಾಗಿರುವುದು ಕಂಡುಬರುತ್ತದೆ. ಅವಶ್ಯವಿದ್ದಾಗ ಸೈನಿಕರಾಗಿ ನಂತರ ಹೊಟ್ಟೆ ಪಾಡಿಗಾಗಿ ಈ ಉದ್ಯೋಗವನ್ನು ಸ್ವೀಕರಿಸಿ ಅದನ್ನೇ ವಂಶಪಾರಂಪರ್ಯವಾಗಿ ಮುಂದುವರೆಸಿಕೊಂಡು ಬಂದಿರುವ ಸಮುದಾಯ ಇಂದಿನ ಜಾಗತೀಕರಣದಲ್ಲಿಯೂ ತನ್ನ ಮೂಲವೃತ್ತಿಯನ್ನುಳಿಸಿಕೊಳ್ಳುತ್ತಾ ಆಧುನಿಕತೆಯ ಭರಾಟೆಯಲ್ಲಿ ಸಾಗುವ ಸಮಾಜದ ಬದಲಾವಣೆಗಳ ಪರಿಸ್ಥಿತಿಗಳಿಂದ ಒಂದು ಕಡೆ ತನ್ನ ವೃತ್ತಿಯನ್ನು ಉಳಿಸಿಕೊಳ್ಳುವ ಮತ್ತೊಮ್ಮೆ ಹೊಸ ಔದ್ಯೋಗಿಕರಣಗಳಾದ ಕೈಗಾರಿಕೀಕರಣ, ಜಾಗತೀಕರಣ, ಸಂಸ್ಕೃತೀಕರಣದ ಪ್ರಭಾವದಿಂದ ಹೊಸ ಉದ್ಯೋಗದ ಕಡೆ ಚಲನೆಯನ್ನು ಪ್ರಾರಂಭಿಸುವ ವ್ಯಕ್ತಿ ಸ್ವಾತಂತ್ರ್ಯ, ಜಾತಿ ಸ್ವಾತಂತ್ರ್ಯ, ಶಿಕ್ಷಣದ ಸವಲತ್ತುಗಳಿಲ್ಲದರಿಂದ ಇಂತಹ ಸಮುದಾಯಗಳಿಗೆ ಮುಂದೆ ಚಲಿಸಲು ಆಗದೆ ಹಿಂದೆ ಉಳಿಯಲು ಆಗದೆ ಒದ್ದಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿರುವುದು. ಆದ್ದರಿಂದ ಇಂತಹ ಹೊಸತನ ಮೈಗೂಡಿಸಿಕೊಳ್ಳಲು ಶಿಕ್ಷಣ,

ರಾಜಕೀಯ, ಆರ್ಥಿಕ, ಕಂಪ್ಯೂಟರ್ ಜ್ಞಾನಗಳು ಬಡ ಸಮುದಾಯಗಳ ಮೆದುಳಿಗೆ ತಲುಪಿ ಅವರು ಜಾಗೃತರಾಗುವ ಹೊತ್ತಿಗೆ ಇಂತಹ ನೂರೆಂಟು ಸಮುದಾಯಗಳಿಗಿಂತ ಜಗತ್ತು ಯಾವ ಹಂತದಲ್ಲಿರುತ್ತದೆಯೋ ಸಮಯವೇ ನಿಗದಿಸುತ್ತದೆ.

ಆಧುನಿಕತೆ ಹೆಚ್ಚಿದಂತೆಲ್ಲಾ ಈ ವೃತ್ತಿ ಮೂಲ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆಯ ಪರಿಣಾಮವಾಗಿ ವೃತ್ತಿ ಮೂಲ ಸಮುದಾಯಗಳು ಜನತೆಯ ಕಣ್ಣಿನಿಂದ ದೂರಾವಾಗುತ್ತಿವೆ. ಇದಕ್ಕೆ ಕಾರಣ ಇವರು ತಮ್ಮ ವೃತ್ತಿಯಿಂದ ಎಷ್ಟೇ ದುಡಿದರು ತುಂಬದ ಅರೆಹೊಟ್ಟೆ, ಕುಟುಂಬದ ಹೊರೆ, ಉತ್ತಮ ಶಿಕ್ಷಣಗಳಂತಹ ಸ್ಥಿತಿಯಿಂದ ಮುಂದುವರೆಯಲ್ಲು ಹಾಗೂ ಉತ್ತಮ ಸ್ಥಿತಿಗೆ ತಲುಪಲು ಆಗುತ್ತಿಲ್ಲ. ಇನ್ನೊಂದೆಡೆ ವಿದ್ಯೆ ಇದ್ದರೆ ತಂತ್ರಜ್ಞಾನ ಲೋಕದಲ್ಲಿ ಗಳಿಸುವ ಮತ್ತು ಎಣಿಸಲಾರದ ವೇತನ ನೀಡುತ್ತಿರುವ ಆಧುನಿಕ ವ್ಯವಸ್ಥೆ ಇವರಲ್ಲಿ ವಿದ್ಯೆ ಪಡೆದು ಆಧುನೀಕತೆಯನ್ನು ತಲುಪುವುದಕ್ಕೆ ಸಮಯವಿಲ್ಲ. ಇವರು ಕಲಿತು ಮುಂದುವರೆಯುವ ತನಕ ಅದು ಮತ್ತೇನನ್ನೊ ಸಾಧಿಸಿ ಇವರೊಂದಿಗೆ ಕಣ್ಣುಮುಚ್ಚಾಲೆ ಆಟವನ್ನು ಆಡುತ್ತಿದೆಯೇನೋ ಅನ್ನಿಸುತ್ತದೆ. ಇನ್ನೊಂದೆಡೆ ಮನುಷ್ಯ ಎಷ್ಟೇ ಹಾಗೂ ಏನೇ ಸಾಧಿಸಿದರು ಅವರನ್ನು ಜಾತಿಯಿಂದ ಅಳೆಯುವ ನಮ್ಮ ಸಮಾಜದ ಮಾನದಂಡ. ಇದರಿಂದ ವ್ಯಕ್ತಿಯ ಪರಿಸ್ಥಿತಿ ನಮ್ಮ ಜನಪದರು ಹೇಳುವಂತೆ "ರೋಸಿಗೆ ಬಂದು ಬಿಟ್ಟದೆ ನೋಡಿ ನೋಡಿ" ಎಂದು ಬೇಜಾರು ಪಟ್ಟುಕೊಳ್ಳುವಂತ ಪರಿಸ್ಥಿತಿಯಿಂದಾಗಿ ಇಂತಹ ಸಮುದಾಯಗಳು ನರಳುತ್ತಿವೆ. ಅನೇಕ ಸಾಮಾಜಿಕ ನಿರ್ಲಕ್ಷದಿಂದ ಶ್ರಮವನ್ನು ಕಡೆಗಾಣಿಸುವ ಬುದ್ದಿವಂತರಿಂದ ಇಂತಹ ಸಮುದಾಯಗಳು ಇಂದು ಸವಕಲು ನಾಣ್ಯಗಳಾಗುತ್ತಿವೆ.

ಆಧುನೀಕತೆಯಿಂದಾಗಿ ಅಲಕ್ಷ್ಯಕ್ಕೊಳಗಾಗಿರುವ ಖಾಟಿಕ್ ಸಮುದಾಯವು ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದೆ. ಇಂದು ಪರಿಶಿಷ್ಟ ಜಾತಿ, ಪಂಗಡಗಳಲ್ಲಿ ಬಹುಶಃ ಈ ಸಮುದಾಯಕ್ಕಿಂತ ರಾಜಕೀಯವಾಗಿ ಪ್ರಬಲವಾಗಿರುವ ಎಷ್ಟೋ ಸಮುದಾಯಗಳು ಸೇರ್ಪಡೆಗೊಳ್ಳುತ್ತಿರುವುದನ್ನು ಮತ್ತು ಒತ್ತಡಗಳನ್ನು ಹೇರುತ್ತಿರುವುದನ್ನು ದಿನ ಪತ್ರಿಕೆಗಳಲ್ಲಿ ದಿನವೂ ಓದುತ್ತೇವೆ.

ಖಾಟಿಕ್‌ರನ್ನು ಏತಕ್ಕಾಗಿ ಪರಿಶಿಷ್ಟ ಜಾತಿಗೆ ಸೇರಿಸಬೇಕು ಎಂಬ ಪ್ರಶ್ನೆ ಎದುರಾದಾಗ ಇವರು ಹೇಳುವುದು ನಾವು ವೃತ್ತಿಯಿಂದ ಕಟುಕರು ಈ ಉದ್ಯೋಗ ಬಿಟ್ಟು ನಮಗೆ ಬೇರೆ ಉದ್ಯೋಗ ಮಾಡಲಿಕ್ಕೆ ಬರುವುದಿಲ್ಲ. ಈ ವೃತ್ತಿಯಲ್ಲಿಯೆ ಕುರಿತಂದು ಅದನ್ನು ಸ್ವಚ್ಛಗೊಳಿಸಿ ಮಾರಾಟ ಮಾಡುವಲ್ಲಿನ ಪ್ರಕ್ರಿಯೆಗಳು ಬಹಳಷ್ಟು ಹಿಂಸೆಗೊಳಪಡಿಸುತ್ತದೆ. ಕುರಿಯನ್ನು ಮೂಲ್ಲಾನಿಂದ ಕತ್ತಿಗೆ ಚೂರಿ ಹಾಕಿಸುವುದರಿಂದ ರಕ್ತ ಹಿಡಿದು ಹೊಟ್ಟೆಯೊಳಗಿನ ಕಲ್ಮಶವನ್ನು ಸ್ವಚ್ಛಗೊಳಿಸುವಾಗ ಪಡುವ ಹಿಂಸೆ

ಯಾತನೆ ಯಾರಿಗೂ ಬೇಡ. ಕುರಿ ಹೊಟ್ಟೆಯೊಳಗಿನ ಅಂಗಗಳು ಜೊತೆಯಲ್ಲಿ ಮಲಮೂತ್ರ ಎಲ್ಲವನ್ನು ತೊಳೆದು ನೀರಿನಿಂದ ಸ್ವಚ್ಛಗೊಳಿಸುವ ಕ್ರಿಯೆ ಬಹಳಷ್ಟು ಹಿಂಸಾದಾಯಕವಾಗಿರುತ್ತದೆ. ಕುರಿ ಮೇಕೆಗಳ ಚರ್ಮವನ್ನು ಮಾಂಸದಿಂದ ಬೇರ್ಪಡಿಸುವುದು ಒಂದು ಕಲೆಯಾಗಿದೆ. ಇಲ್ಲಿಯೂ ಸಹ ಮನಸ್ಸಿಗೆ ಮುಜುಗರವಾಗುತ್ತದೆ. ಇವುಗಳನ್ನು ಹಿಂಸೆಯಿಂದಲೆ ಸ್ವಚ್ಛಗೊಳಿಸಿ ಗ್ರಾಹಕರ ಮುಂದೆ ವ್ಯಾಪಾರಕ್ಕಾಗಿ ಮಾರುವಂತಹ ಪ್ರಸಂಗದಲ್ಲಿಯೂ ಮಾಂಸವನ್ನು ತುಂಡರಿಸುವ, ಸಣ್ಣಾಗಿ ಕತ್ತರಿಸುವ, ಅಂಗಗಳು ಸೀಳುವ ಕೆಲಸವು ಹಿಂಸಾದಾಯಕವಾಗಿದೆ. ಇವೆಲ್ಲವುಗಳ ಹಿಂಸೆಯನ್ನು ಬದಿಗೊತ್ತಿ ಮಾರಿದರು ಸಿಗುವ ಲಾಭ ಅಷ್ಟಕಷ್ಟೇಯಾಗಿದೆ. ಇದರಿಂದ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಾಗೂ ಜೀವನ ನಿರ್ವಹಣೆಗೆ, ಅಂಗಡಿಯ ಬಾಡಿಗೆ, ಖರ್ಚುವೆಚ್ಚಗಳು, ಆರೋಗ್ಯ ಹೀಗೆ ಹತ್ತು ಹಲವಾರು ಸಮಸ್ಯೆಗಳು ಎದುರಾದರೂ, ಮುಂದಿನ ಮಕ್ಕಳ ಭವಿಷ್ಯದ ಕಡೆ ಚಿಂತನೆ ಮಾಡಿದಾಗ ಹೆಚ್ಚಿನ ಹಾಗೂ ಉನ್ನತ ಮಟ್ಟದ ಶಿಕ್ಷಣ ನೀಡಲು ನಮಗೆ ಯಾವುದೇ ರೀತಿಯ ಶುಲ್ಕವಿನಾಯಿತಿ ಇಲ್ಲದಿರುವುದು. ಇದರಿಂದ ಪೂರ್ಣ ಶುಲ್ಕವನ್ನು ಕಟ್ಟಿ ಶಿಕ್ಷಣ ನೀಡಲು ಬಹಳಷ್ಟು ಕಷ್ಟವಾಗಿದೆ. ಜೊತೆಗೆ ಹೆಚ್ಚಿನ ಶಿಕ್ಷಣವನ್ನು ಮಾಡಿಸಿದರು ಯಾವುದೇ ರೀತಿಯ ಉತ್ತಮ ಉದ್ಯೋಗಗಳು ಸಿಗದಿರುವುದು ಕಾರಣ ಅಲ್ಲಿರುವ ಮೀಸಲಾತಿಗಳು ಇದರಿಂದ ಬೇರೆ ಸಮುದಾಯಗಳು ಸ್ಪರ್ಧೆ ಮಾಡುವುದರಿಂದ ಇವರು ಉದ್ಯೋಗಾವಕಾಶಗಳಲ್ಲಿಯು ವಂಚನೆಗೆ ಈಡಾಗಬೇಕಾಗಿದೆ. ಇವರ ಮನೆಯ ಪರಿಸರಗಳು ಉತ್ತಮ ಶಿಕ್ಷಣ ನೀಡಲು ಹಾಗೂ ಓದಲು ಅನುಕೂಲಕರವಾಗಿರುವುದಿಲ್ಲ. ಅವಿಭಕ್ತ ಕುಟುಂಬ ವ್ಯವಸ್ಥೆ ಮನೆಯಲ್ಲಿ ಎಲ್ಲರೂ ಒಂದಾಗಿ ಈ ವ್ಯವಸಾಯ ಮಾಡಿದರೆ ಮಾತ್ರ ಹೊಟ್ಟೆಗೆ ಹಿಟ್ಟು ಮನೆಯ ಮಕ್ಕಳು ರಕ್ತದ ಪಾತ್ರೆ ಹಿಡಿಯುವುದರಿಂದ ಮಹಿಳೆಯರು ಕುರಿಯ ಅವಯವಗಳನ್ನು ಶುಚಿಗೊಳಿಸುವುದರಿಂದ ಮನೆಯ ಪ್ರತಿಯೊಬ್ಬ ಸದಸ್ಯರು ಈ ಉದ್ಯೋಗದಲ್ಲಿ ತನ್ನದೇ ಆದ ಪಾತ್ರವನ್ನು ವಹಿಸುತ್ತಾನೆ. ಹಾಗಾಗಿ ಇಂತಹ ವಾತಾವರಣದಲ್ಲಿ ಇವರು ಬೇರೆ ಸಮುದಾಯದವರೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲವೇನೋ ಎನಿಸುತ್ತದೆ. ಸಮಾಜದಲ್ಲಿ ಕಟ್ಟಕಡೆಯ ಸ್ಥಾನವನ್ನು ಹೊಂದಿರುವ ಹಾಗೂ ಅಪಮಾನಕ್ಕೆ ಒಳಗಾಗಿರುವ ಈ ಸಮುದಾಯವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬಹಳಷ್ಟು ಹಿಂದುಳಿದಿರುವುದರಿಂದ ತಮ್ಮ ಸಮುದಾಯಕ್ಕೆ ಸರ್ಕಾರವು ಪರಿಶಿಷ್ಟ ಜಾತಿಯಲ್ಲಿ ದೊರೆಯುವ ಮೂಲಭೂತ ಸೌಲಭ್ಯಗಳು ಹಾಗೂ ಶಿಕ್ಷಣ, ಉದ್ಯೋಗದಲ್ಲಿನ ಮೀಸಲಾತಿಯನ್ನು ನೀಡಬೇಕು ಎಂಬುದು ಇವರ ಧ್ವನಿಯಾಗಿದೆ.

ಒಬ್ಬ ವಕ್ತೃವಿನ ಪ್ರಕಾರ ನಾವು ಕುರಿ ಕೋಳಿ ಪ್ರಾಣಿಗಳ ಮಲ ಮೂತ್ರ ಎತ್ತಿ ಅವನ್ನು ಸಾಕಿ ಪೋಷಣೆ ಮಾಡಿ ಡಾಕ್ಟರುಗಳಿಂದ ಪರೀಕ್ಷಿಸಿ ತಿನ್ನಲು ಯೋಗ್ಯವಾದ ಕುರಿಗಳನ್ನು ಕಡಿದು ಅವುಗಳನ್ನು ಶುಚಿಮಾಡಿ ಈ ಸಮಾಜಕ್ಕೆ ಅವಶ್ಯಕವಾಗಿರುವ ಆಹಾರವನ್ನು ಒದಗಿಸುತ್ತೇವೆ. ಎಷ್ಟೋ ವೇಳೆ ನಮ್ಮ

ಮಹಿಳೆಯರು ಕುರಿಯ ಕರುಳನ್ನು ಶುಚಿಮಾಡುವಾಗ ಹೊಲಸು ಹೊಟ್ಟೆಯೊಳಗೆ ಹೋಗುತ್ತೆ ಹೊಲಸು ಹೊರುವವರಿಗೆ ಸೌಲಭ್ಯ ನೀಡಿದ್ದೀರಿ ನಾವು ಹೊಲಸು ತಿಂದು ಬೇರೆಯವರಿಗೆ ಶುಚಿಯಾದ ಆಹಾರವನ್ನು ತಿನ್ನಲು ಯೋಗ್ಯ ಮಾಂಸ ಕುರಿಯ ಅವಯವಗಳನ್ನು ಪೂರೈಸುತ್ತೇವೆ. ನಮ್ಮ ಮಕ್ಕಳು ಈ ಸಮಾಜದಲ್ಲಿ ಮುಂದೆ ಬಂದು ವಿದ್ಯಾವಂತರಾಗಲಿ ಎಂಬ ಉದ್ದೇಶದಿಂದ ಶಿಕ್ಷಣದಲ್ಲಿ ಉದ್ಯೋಗದಲ್ಲಿ ಪ್ರಗತಿ ಸಾಧಿಸಲಿಕ್ಕೆ ನಮ್ಮ ಜಾತಿಯನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಲು ಸರ್ಕಾರಕ್ಕೆ ಹಲವು ಬಾರಿ ಬೇಡಿಕೆಯನ್ನು ಮುಂದಿಟ್ಟಿದ್ದೇವೆ ಎಂದು ತಿಳಿಸುತ್ತಾರೆ. ಈ ಸಮುದಾಯವು ೧೯೮೮ರಿಂದ ಸರ್ಕಾರದಿಂದ ನ್ಯಾಯ ಕೇಳುತ್ತಿದ್ದು ಅದು ಫಲಿಸಲಿಕ್ಕೆ ಇನ್ನು ಎಷ್ಟು ಶತಮಾನಗಳನ್ನು ಕಾಯಬೇಕೋ ಎಂದು ತನ್ನ ಪಾಡಿಗೆ ತಾನು ಇದ್ದು ಇಲ್ಲದಂತೆ ಬದುಕುತ್ತಿದೆ.

ಆಧುನಿಕ ಪ್ರವೇಶದಿಂದಾಗಿ ಭಾರತದ ಬಹುಪಾಲು ಬುಡಕಟ್ಟು ಪಂಗಡಗಳು ಈ ತರಹದ ಸಮುದಾಯಗಳು ಬುಡಮೇಲಾದುದು ಹೇಗೆ ಎಂಬುದನ್ನು ಕುರಿತು ಯೋಚಿಸುವಾಗ ಆಧುನಿಕತೆ ಭಾರತೀಯನಿಗೆ ಅಧ್ಯಯನದ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿದರೂ ಬುಡಕಟ್ಟು ಸಮುದಾಯ ಗಳನ್ನು ನೋಡಿದಾಗ ಅವರ ಪರಿಸ್ಥಿತಿ ಹೆಚ್ಚು ಹೆಚ್ಚು ಶೋಚನೀಯವಾಗಿರುವುದನ್ನು ನೋಡಬಹುದು. ಪ್ರಾರಂಭದಲ್ಲಿ ತಮ್ಮ ಪಾರಂಪರಿಕ ವೃತ್ತಿಯಿಂದಾಗಿ ತುಂಬಾ ಸ್ವಾವಲಂಬಿಗಳಾಗಿದ್ದ ಸಮುದಾಯಗಳು ಆರ್ಥಿಕವಾಗಿ ಶೋಚನೀಯ ಸ್ಥಿತಿಯನ್ನು ಬಹುಶಃ ತಲುಪಿರಲಿಲ್ಲ ಎಂದೆನಿಸುತ್ತದೆ.

ಖಾಟಿಕ್ ಸಮುದಾಯವನ್ನು ಕುರಿತು ಆಲೋಚಿಸುವಾಗ ಮೊದಲು ಇವರಿಗೆ ವೃತ್ತಿಯಲ್ಲಿ ಬರುವ ಲಾಭದಿಂದ ತಮ್ಮ ಜೀವನ ನಿರ್ವಹಣೆ ಕಷ್ಟವಾಗರಿಲಿಲ್ಲ. ಆಗ ಇವರಿಗೆ ಉದ್ಯೋಗಕ್ಕೆ ಕುರಿಗಳ ಸಂಖ್ಯೆ ಜಾಸ್ತಿ ಇದ್ದು ಮಾಂಸಾಹಾರ ಮಾಡುವ ಜನವರ್ಗವು ಒಂದು ಪ್ರಮಾಣದಲ್ಲಿತ್ತು ಎಂದು ಹೇಳಬಹುದು. ಆದರೆ ಇಂದು ಮಾಂಸಾಹಾರ ಎಂಬುದು ಒಂದು ಫ್ಯಾಷನ್ ರೂಪ ತಾಳುತ್ತಿರುವುದು ಕಂಡುಬರುತ್ತೆ. ಕೆಲವೊಂದು ಸಮುದಾಯದವರು ಕದ್ದುಮುಚ್ಚಿ ಬಳಸುತ್ತಾರೆ. ಎನ್ನುವ ಮಾತುಗಳು ಕೇಳಿಬರುತ್ತಿದ್ದರು ಅದನ್ನು ಯಾರೂ ಬಾಯಿಬಿಟ್ಟು ಹೇಳಲು ಇಷ್ಟಪಡುವುದಿಲ್ಲ.

ತಾವು ತುಂಬಾ ಮಡಿವಂತರು, ಮಾಂಸಾಹಾರ ಉಪಯೋಗಿಸುವುದೇ ಮಹಾ ಘೋರ ಅಪರಾಧ ಎನ್ನುವಂತೆ ಮಾತನಾಡುತ್ತಾರೆ. ಇನ್ನು ಮಾಂಸ ಉಪಯೋಗಿಸುವವರು ಮನೆಯಲ್ಲಿ ಉಪಯೋಗಿಸುತ್ತೇವೆ ಎಂದು ಹೇಳುವುದಿಲ್ಲ. ತಾವು ಮಾಂಸ ತಿನ್ನುವವರಿದ್ದರು ನಾನು ತಿನ್ನಲ್ಲ ಮನೆಯಲ್ಲಿ ಒಬ್ಬಿಬ್ಬರು ಉಪಯೋಗಿಸುತ್ತಾರೆ. ಹೊಲಸು ಮಾಡಿದ್ದೇವೆ ಎಂದು ತಿನ್ನುವ ಆಹಾರದ ಬಗ್ಗೆ ತಾಳುವ ನಿಲುವು ಇದು. ಹೀಗೆ ಸಮಾಜದಲ್ಲಿ ಮಾಂಸಾಹಾರವನ್ನು ಅದನ್ನು ಮಾರುವ ಸಮುದಾಯವನ್ನು ಕುರಿತು ಸಮಾಜವೇ ಒಂದು ಕಲ್ಪನೆಯನ್ನು ಹುಟ್ಟುಹಾಕಿದೆ. ಸಾತ್ವಿಕ ಆಹಾರ. ತಾಮಸಿಕ ಆಹಾರ, ಆಹಾರದಿಂದ ಮನುಷ್ಯನ ಗುಣಗಳನ್ನು ತಿಳಿಸುವ ಕೆಲಸದ ಮೇಲೆ ಸಮಾಜವನ್ನೆ ಯಾವುದು ಸರಿ ಯಾವುದು ತಪ್ಪು

ಎಂಬ ಯೋಚನೆಗೆ ನೂಕಿ ಆಹಾರವನ್ನು ಪೂರೈಸುವ ಸಮುದಾಯದ ಕುರಿತು ಭಯಂಕರ ಚಿತ್ರಣ ನೀಡಿದೆ. ನಮ್ಮ ಸಾಹಿತ್ಯವನ್ನು ಒಮ್ಮೆ ಗಮನಿಸಿದಾಗ ಅದರಲ್ಲಿ ಸಿಗುವ ಹಲವು ಮಾಹಿತಿಗಳು ಖಾಟಿಕ್‌ರನ್ನು ಕುರಿತು ಈ ಸಮಾಜದ ದೃಷ್ಟಿಕೋನ ಗೊತ್ತಾಗುತ್ತದೆ.

"ತಲೆಗಳ ತುಂಡು, ತೋಳ್ಗಳ ತುಂಡು, ನಡು ತುಂಡು, ಸಲೆಜಾನು ಜಂಘೆಯ ತುಂಡು ಬೆಲೆಯಿಂದೆ ಕಟುಕರಂಗಡಿಯಂತೆ ರಣರಂಗ ಸಲೆ ಜಿಗುಪ್ಸೆಯ ತೋರಿಸಿತು" ಮೋಹನ ತರಂಗಿಣಿಯಲ್ಲಿ ಬರುವ ಮೇಲಿನ ವಾಕ್ಯಗಳು ರಣರಂಗವು ಕಟುಕರಂಗಡಿಯಂತೆ ಭಯಾನಕ ವಾತಾವರಣದಿಂದ ಕಂಗೊಳಿಸಿ ಜಿಗುಪ್ಸೆಯನ್ನುಂಟು ಮಾಡುವಂತಿತ್ತು ಎಂದು ತಿಳಿದುಬರುತ್ತದೆ.

"ಕಟುಕರ ಮನೆಯ ಕುರಿಯ ಹಾಗೆ" ಎಂಬಿ ಗಾದೆಯು ಕುರಿಯು ಇಂದಲ್ಲ ನಾಳೆ ಸಾಯುವುದು ಖಂಡಿತ ಅದರ ಸಾವು ತಪ್ಪಿದಲ್ಲ ಎಂಬ ಧ್ವನಿಯನ್ನು ಹೇಳುತ್ತಾ ಕಟುಕರ ಮತ್ತು ಕುರಿಯ ಸಂಬಂಧದಲ್ಲಿ ಯಾವ ತರಹದ ನಂಟಿರುತ್ತದೆ ಅವರ ದೃಷ್ಟಿಯಲ್ಲಿ ಕುರಿಯನ್ನುವುದು ಅವರ ವ್ಯಾಪಾರದ ವಸ್ತುವೆ ವಿನಃ ಅದು ಪ್ರಾಣಿ ಅಥವಾ ದಯೆಯ ವಿಚಾರ ಸುಳಿಯುವುದಿಲ್ಲ ಎಂಬುದನ್ನು ತಿಳಿಸುತ್ತೆ.

ಕಟುಗ ಗಂಜಿಕೆಯೇಕೆ ದಿಟಕೆ ಮೂದಲೆಯೇಕೆ (ಸರ್ವಜ್ಞ)

ಆ ಕಟಿಗರು ಅವನ ರಭಸಕ್ಕೆ ಭೀತರಾದವರಂತೆ

ಶಕಟದಾಸನಂ ಬಿಟ್ಟು ದಿಕ್ಕು ದಿಕ್ಕಿಗೆ ಓಡಿ ಹೋಗಲು

ಮುದ್ರಾಮಂಜುಷಾದಲ್ಲಿ ದೊರೆಯುವ ಈ ಮಾಹಿತಿಯು

ಅಂಜಿ ಅಳುವ ಬಾಲಕನಂ ಕಂಡು ಕಡುಕರ ಮನ ಕರಗಿತು. ಚಂದ್ರಹಾಸನ ಕಥೆಯಲ್ಲಿ ಬರುವ ಈ ವಾಕ್ಯವನ್ನು ಗಮನಿಸಿದರೆ ಇಲ್ಲಿಯವರೆಗೆ ಸಮಾಜ ಕಟುಕರೆಂದ ತಕ್ಷಣ ಹೃದಯವಿಲ್ಲದವರು ಮನುಷ್ಯತ್ವವಿಲ್ಲ ಎಂದು ಗುರುತಿಸುವಾಗ ಒಂದು ಚಿಕ್ಕ ಮಗು ಅಳುವುದನ್ನು ಕಂಡು ಕಟುಕರ ಮನ ಕರಗಿರುವುದು ಅವರಲ್ಲಿಯೂ ಕರುಣೆ ಎನ್ನುವುದಿದೆ. ಇವರು ಮನುಷ್ಯರೇ, ಇವರಲ್ಲಿಯೂ ಪ್ರೀತಿ, ಮಮತೆ, ಕರುಣೆ, ಸ್ನೇಹ ಎಂಬುದಿದೆ. ಆದರೆ ವೃತ್ತಿ ಮಾಡಿದ ತಕ್ಷಣ ಇವರ ಮನ ಕಲ್ಲು ಎನ್ನುವುದು ಸರಿಯಲ್ಲ. ಹೀಗೆ ನಮ್ಮ ಸಾಹಿತ್ಯದಲ್ಲಿ ಖಾಟಿಕ್‌ರನ್ನು ಕುರಿತು ಚಿತ್ರಣ ದೊರೆಯುತ್ತದೆ.

ಇತ್ತೀಚಿನ ದಿನಗಳಲ್ಲಿ ಕುರಿಮಾಂಸ ಮಾರಾಟದೊಂದಿಗೆ ಹಲವು ಇತರ ಚಿಕ್ಕಪುಟ್ಟ ವೃತ್ತಿಗಳಲ್ಲಿ ಖಾಟಿಕ್‌ರು ತೊಡಗಿಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಯಾಗಿ ಕೋಳಿಮಾಂಸ ಮಾರಾಟ ಮಾಡುವುದು, ಮೀನುವ್ಯಾಪಾರ ಮಾಡುವುದರಿಂದ ಮೀನನ್ನು ಸ್ವಚ್ಛಗೊಳಿಸಿ ಗಿರಾಕಿಗಳಿಗೆ ನೀಡುವುದು, ಮೊಟ್ಟೆ ವ್ಯಾಪಾರ ರಾತ್ರಿ ಹೊತ್ತು ರಸ್ತೆಯಲ್ಲಿ ಚಿಕನ್ ಪಕೋಡ, ಅನ್ನ ಮಾಂಸದ ಸಾರು

ಮಾರುವುದು. ಹೀಗೆ ಅದು ಹತ್ತು ಹಲವು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸ ಬಹುದು. ಇತ್ತೀಚೆಗೆ ಮಕ್ಕಳ ಶಿಕ್ಷಣದ ಕಡೆ ಗಮನ ಹರಿಸಿದ್ದಾರೆ. ನಮ್ಮಂತೆ ನಮ್ಮ ಮಕ್ಕಳು ಕಷ್ಟಪಡುವುದು ಬೇಡ ಆದರೆ ವಿದ್ಯೆ ಹತ್ತದಿದ್ದರೆ ನಮ್ಮ ಕುಲಕಸುಬು ನಮಗೆ ತಪ್ಪಿದ್ದಲ್ಲ. ಎಂದು ಹೇಳುತ್ತಾರೆ. ಹೀಗೆ ಒಂದು ಕಡೆ ತಮ್ಮ ಮಕ್ಕಳು ವಿದ್ಯಾವಂತರಾಗಲಿ ಎಂಬ ಆಶಾವಾದದೊಂದಿಗೆ ಕುಲಕಸುಬನ್ನು ಮುಂದುವರೆಸುವ ಯೋಚನೆಯುಳ್ಳವರು ಒಂದು ಸಮುದಾಯದಲ್ಲಿ ಕಂಡಬರುತ್ತಾರೆ. ಹಾಗೆಯೇ ಈ ಉದ್ಯೋಗವೇ ಬೇಡ ಎಂದು ಕಿರಾಣಿ ಅಂಗಡಿಯೋ, ಬಟ್ಟೆ ವ್ಯಾಪಾರವೋ, ಸ್ಟೇಷನರಿ ಅಂಗಡಿಯೋ ಸ್ವಲ್ಪವಾದರು ಸ್ಥಿತಿ ಉತ್ತಮಗೊಂಡು ಸಮಾಜದ ಜನರೊಂದಿಗೆ ಬೆರೆಯುವಲ್ಲಿ ಕೆಲವರು ಆಸಕ್ತಿ ವಹಿಸುವವರು ಸಿಗುತ್ತಾರೆ. ಅಪ್ಪ ಹಾಕಿದ ಆಲದ ಮರ ಎಂದು ಬೇರೆ ಉದ್ಯೋಗ ಬಾರದೆ ಇದೇ ಉದ್ಯೋಗದಲ್ಲಿ ಹಾಗೂ ಹೀಗೂ ಮಾಡಿ ಜೀವನ ನಿರ್ವಹಿಸುತ್ತ ಮಕ್ಕಳಿಗೆ ಶಿಕ್ಷಣ ಮಗಳ ಮದುವೆ, ಸಾಲಸೋಲ ತೆಗೆದುಕೊಂಡು ಬದುಕು ಸಾಗಿಸುವವರು ಇರುವರು. ಹೀಗೆ ಒಂದು ಸಮುದಾಯದಲ್ಲಿ ಹಲವು ಸ್ಥಿತಿಯಲ್ಲಿರುವ ಜನ ಕಂಡುಬರುತ್ತಾರೆ.

ಕೈಗಾರಿಕೀಕರಣದ ಪ್ರಭಾವದಿಂದಾಗಿ ಇವರು ಹೊಸ ಉದ್ಯೋಗಗಳತ್ತ ಆಕರ್ಷಿತರಾಗಿ ಬೇರೆ ಬೇರೆ ಉದ್ಯೋಗಗಳನ್ನು ಮಾಡುವಲ್ಲಿ ಆಸಕ್ತರಾಗಿದ್ದರು ಬಂಡವಾಳದ ಕೊರತೆ. ಹೊಸ ಉದ್ಯೋಗದ ಬಗ್ಗೆ ಮಾಹಿತಿ, ವ್ಯವಹಾರ ಜ್ಞಾನ ಇಲ್ಲದಿರುವುದರಿಂದ ವೃತ್ತಿ ಕೌಶಲ್ಯದ ಕೊರತೆ ಹೀಗೆ ಹಲವು ಅಡೆತಡೆಗಳು ಎದುರಾಗಿ ಇವರು ತಮ್ಮ ಉದ್ಯೋಗದಲ್ಲೇ ಮುಂದುವರಿಯುವಲ್ಲಿ ಆಸಕ್ತಿ ವಹಿಸಿದ್ದಾರೆ. ಆದರೆ ವಿದ್ಯೆಯ ಕಡೆಗೆ ಇವರು ಇತ್ತೀಚೆಗೆ ಹೆಚ್ಚು ಒಲವನ್ನು ತೋರಿಸುತ್ತಿದ್ದಾರೆ. ಇವರು ಉದ್ಯೋಗ ದಲ್ಲಿ ಬದಲಾವಣೆಯನ್ನು ಬಯಸಿದರು ದೊಡ್ಡ ದೊಡ್ಡ ವ್ಯಾಪಾರಗಳಾಗಲಿ ತುಂಬಾ ಉತ್ತಮ ಶ್ರೇಷ್ಠಮಟ್ಟದ ಉದ್ಯೋಗಗಳನ್ನು ಮಾಡುವಂತಹ ಶಕ್ತಿ ಇವರಲ್ಲಿ ಇಲ್ಲ, ಬದಲಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಇವರು ಹಣ್ಣು, ಹೂವು ಮಾರುವುದು, ಗುಜರಿ ಅಂಗಡಿ ಇಡುವುದು. ಗೋಣಿಚೀಲ ಮಾರಾಟ, ಆಟೋರಿಕ್ಷಾ ಓಡಿಸುವುದು, ರಸ್ತೆ ಬದಿಯಲ್ಲಿ ಬೀಡಿ ಸೀಗರೇಟು ಅಂಗಡಿ ಇಡುವುದು. ಹಾಗೆಯೇ ಚಿಕನ್ ಪಕೋಡ, ಪಲಾವ, ಅನ್ನಸಾರು, ರೊಟ್ಟಿ, ಮೊಟ್ಟೆಗಳನ್ನು ಬಂಡಿಗಳಲ್ಲಿಟ್ಟುಕೊಂಡು ಮಾರುವುದು. ಮೀನಿನ ಮಾರ್ಕೆಟ್‌ಗಳಲ್ಲಿ ಮೀನುಗಳನ್ನು ಕಡಿದು ಕೊಡುವುದು. ಹಾಗೆಯೆ ಲಾರಿ ಡ್ರೈವರ್‌ಗಳಾಗಿ, ಕೂಲಿಗಳಾಗಿ, ಡ್ರೈವರ್, ಮೆಕಾನಿಕ್‌ಗಳಾಗಿ ಹಲವು ಚಿಕ್ಕಪುಟ್ಟ ಕೆಲಸಗಳಲ್ಲಿ ಕಂಡು ಬರುತ್ತಾರೆ. ಇತ್ತೀಚೆಗೆ ಚಿಕನ್ ಅಂಗಡಿಗಳು ಹೆಚ್ಚು ಪ್ರಚಲಿತವಾಗಿರುವುದು ಕಂಡುಬರುತ್ತದೆ.

ಮಾಂಸ ಮಾರುವ ದೊಡ್ಡ ವ್ಯಾಪಾರಿಗಳಲ್ಲಿ ಮಾಂಸ ಕತ್ತರಿಸುವ ಅಂಗಡಿಯ ಕೆಲಸಗಳನ್ನು ಮಾಡುವ, ಕುರಿಯ ಅವಯವಗಳನ್ನು ಮಾರುವ ವೃತ್ತಿಯಲ್ಲಿಯೂ ಈ ಸಮುದಾಯದ ಮಧ್ಯಮ, ಬಡವರ್ಗದವರು ದುಡಿಯುವುದು ಕಂಡುಬರುತ್ತದೆ. ಹೀಗೆ ಜೀವನ ನಿರ್ವಹಣೆಗೆ ಸಾಧ್ಯವಾದುದೆಲ್ಲವನ್ನು

ಅವರು ಮಾಡುತ್ತಾರೆ. ಖಾಟಿಕ್‌ರ ಸಾಮಾಜಿಕ, ಆರ್ಥಿಕ ಸ್ಥಿತಿಗಳು ಸಮಾಧಾನಕರವಾಗಿಲ್ಲ. ಇದಕ್ಕೆ ಇವರು ತಮ್ಮ ಮೂಲ ಕಸುಬನ್ನು ಪೂರ್ತಿ ಬಿಡಲು ಆಗದೆ ಮುಂದುವರೆಸಲು ಆಗದೆ ಹಲವು ಇತರ ಚಿಕ್ಕಪುಟ್ಟ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಿದರೆ ಹೊಟ್ಟೆ ಹೊರೆಯುವ ನಿರಂತರ ಹೋರಾಟದಲ್ಲಿರುವುದು ತಿಳಿಯುತ್ತದೆ.

ಜಾಗತೀಕರಣ ಎನ್ನುವುದು ಖಾಟಿಕ್‌ರ ವಿಚಾರದಲ್ಲಿ ಅಂತಹ ಪರಿಣಾಮವನ್ನು ಬೀರಿದಂತಿಲ್ಲ. ಇದು ಕೇವಲ ಆರ್ಥಿಕವಾದ ಜಾಗತಿಕ ಮಾರುಕಟ್ಟೆಗೆ ಸಂಬಂದಿಸಿದ ವಿಷಯವೋ, ಇಂಡಿಯಾದ ಸಾಮಾಜಿಕ ಸಾಂಸ್ಕೃತಿಕ ಒಳವಾರಣಗಳನ್ನು ಪಲ್ಲಟಗೊಳಿಸಲ್ಲ ಮಾಯಾವಿಯೋ ಎಂಬ ಬಗ್ಗೆ ತಜ್ಞರಲ್ಲಿಯೇ ಗೊಂದಲವಿಂದ್ದಂತಿದೆ. ಜಾಗತೀಕರಣವನ್ನು ವಿಸ್ಮಯದಿಂದ ನೋಡುತ್ತವೆಯೇ ಹೊರತು ಸಂಸ್ಕೃತಿಯ ನಿಜರೂಪಗಳನ್ನು ಅದಕ್ಕೆ ತೆರೆದುಕೊಳ್ಳುವುದಿಲ್ಲ. ಸಮಾಜದ ಮೇಲುಸ್ತರಗಳೇ ಜಾಗತೀಕರಣ ದಿಂದ ಪರಿವರ್ತನೆಗೆ ಒಳಗಾಗುತ್ತವೆ. ಭವಿಷ್ಯದ ಆಲೋಚನೆಗಳೇ ಇಲ್ಲದ ಇಂಥ ಹತ್ತಾರು ಸಮುದಾಯಗಳು ತಮ್ಮ ಪರಂಪರಾಗತ ಜೀವನ ವಿಧಾನವನ್ನು ಜಾಗತೀಕರಣದಂತಹ ಯಾವುದೇ ದಾಳಿಗಳಿಂದ ರಕ್ಷಿಸಿಕೊಳ್ಳಬಲ್ಲವಾಗಿವೆ.

ಜಾಗತೀಕರಣದಿಂದ ವಿಶ್ವವೇ ಹಳ್ಳಿಯಾಗಿದೆ. ಪ್ರಂಪಚದ ಮೂಲೆ ಮೂಲೆಗಳ ಸುದ್ದಿ ಕ್ಷಣ ಮಾತ್ರದಲ್ಲಿ ಲಭ್ಯವಾಗುತ್ತದೆ. ಜಗತ್ತಿನ ಯಾವುದೇ ಭಾಗದ ಉತ್ಪನ್ನಗಳು ರಸ್ತೆ ಕಾಣದ ಹಳ್ಳಿಗಳನ್ನು ತಲುಪುತ್ತವೆ. ಅಗತ್ಯವಿರಲಿ, ಇಲ್ಲದಿರಲಿ ಜನರ ಮನೆ ಮನಸ್ಸುಗಳಲ್ಲಿ ಹೊಕ್ಕು ಶೃಂಗಾರದ ವಸ್ತುಗಳು ರಾರಾಜಿಸುತ್ತವೆ. ಜನ ತಮ್ಮ ಭಾಷೆಯಲ್ಲಿ ಅನ್ಯ ಭಾಷೆಯ ಪದಗಳನ್ನು ಸೇರಿಸಿಕೊಳ್ಳಬಹುದು. ಉಡುಗೆ, ತೊಡುಗೆಯಲ್ಲಿ ಆಧುನಿಕರಾಗಬಹುದು. ಇಂಡಿಯಾದ ಸಾಮಾಜಿಕ ರಚನೆಯ ಒಳಭಾಗದಲ್ಲಿ ಹೂತು ಹೋಗಿರುವ ಧಾರ್ಮಿಕವಾದ ಸಂವೇದನೆಗಳು ಮಾತ್ರ ಬದಲಾಗಲಾರವು. ಜಾಗತೀಕರಣ ಭಾರತದ ರೈತರ ಕೃಷಿಗೆ ಅಪಾಯಕಾರಿಯಾಗಿರುವ ಹಾಗೇನೂ ಇತರ ಕ್ಷೇತ್ರಗಳಿಗೆ ಹಾನಿಕರವಲ್ಲ ಎಂಬಂತಹ ಅಬಿಪ್ರಾಯಗಳಿವೆ. ಆಳುವ ವ್ಯವಸ್ಥೆಯೇ ಅಂತರರಾಷ್ಟ್ರೀಯ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡು ದೇಶೀ ಉತ್ಪನ್ನಗಳು ಕಡಿಮೆ ಬೆಲೆಗೆ ಮಾರಾಟವಾಗುವಂತೆ ನೋಡಿಕೊಳ್ಳುತ್ತಿದೆ. ಹೀಗಿರುವಾಗ ಇಲ್ಲಿನ ನೆಲ ಜಲದಂತಹ ಮೂಲ ಅವಶ್ಯಕತೆಗಳನ್ನು ಮತ್ತು ಸಾಂಸ್ಕೃತಿಕ ಸಂವೇದನೆಗಳ ಮೂಲ ಸ್ವರೂಪವನ್ನು ಸಮಕಾಲೀನ ಪ್ರೇರಣೆಗಳ ಜೊತೆಗೇ ಉಳಿಸಿಕೊಳ್ಳುವ ಬಗ್ಗೆ ಚರ್ಚೆಯಾಗಬೇಕಿದೆ. ಖಾಟಿಕ್ ಬದುಕಿನ ಪರಿವರ್ತನೆಯನ್ನು ಕೂಡ ಈ ನೆಲೆಯಲ್ಲಿಯೇ ಗಮನಿಸಬೇಕಿದೆ.

ಸಾಮಾಜಿಕ ಪರಿವರ್ತನೆಯನ್ನು ಸಾಮಾನ್ಯವಾಗಿ ಸಮಾಜ ಸ್ವೀಕರಿಸುವ ಸಮಕಾಲೀನ ಪ್ರೇರಣೆ ಪ್ರಭಾವಗಳ ನೆಲೆಯಲ್ಲಿ ಗುರುತಿಸಲಾಗುತ್ತದೆ. ಚಲನಶೀಲ ಸಮಾಜದ ಜೀವನ ವಿಧಾನ ಮತ್ತು ಆಲೋಚನಾಕ್ರಮ ರೂಪಗೊಳ್ಳುವುದು ಮತ್ತು ಪರಂಪರಾಗತ ಆಚರಣೆಗಳಲ್ಲಿ ಅನೇಕ ಬಗೆಯ

ಒತ್ತಡಗಳಿಂದಾಗಿ ಹಲ ಕೆಲವು ಮಾರ್ಪಾಡುಗಳನ್ನು ತಂದುಕೊಳ್ಳುವುದು ಸಮಕಾಲೀನ ಪ್ರೇರಣೆ ಪ್ರಭಾವಗಳಿಂದ ಸಾಧ್ಯವಾಗುತ್ತದೆ. ಜನಸಂಖ್ಯೆ, ಬದಲಾಗುತ್ತಿರುವ ಸಾಮಾಜಿಕ ಸಂವೇದನೆಗಳು, ಬದುಕಿನ ತೀವ್ರಗತಿ, ರಾಜ್ಯಾವಸ್ಥೆಯಲ್ಲಿ ಕಂಡುಬರುತ್ತಿರುವ ಬದಲಾವಣೆ, ತಂತ್ರಜ್ಞಾನದ ಆಶ್ಚರ್ಯಕರ ಬೆಳವಣಿಗೆ ಮತ್ತು ವ್ಯಾಪ್ತಿ, ಪರಿಸರಪ್ರಜ್ಞೆ, ಧರ್ಮ ಮೂಲವಾದ ಆತಂಕ, ತಳಮಳ, ಸಾಮಾನ್ಯರ ಬದುಕಿನ ಭದ್ರತೆಗಿರುವ ಅಪಾಯಗಳು, ರಾಷ್ಟ್ರದ ಒಳ ಹೊರಗಿನ ಒಟ್ಟಾರೆ ವಿದ್ಯಮಾನಗಳು ಹೀಗೆ ಸಮಾಜ ಅನ್ನುವುದು ಹತ್ತು ಹಲವು ದಿಕ್ಕುಗಳ ದೃಷ್ಟಿಗಳ ತಾಕಲಾಟದಲ್ಲಿ ಸಂಕೀರ್ಣಗೊಳ್ಳುತ್ತಿರುವುದು ನಿಜ. ಸಮಾಜದ ಸಂಕೀರ್ಣತೆಗೂ, ಈ ಸಂಕೀರ್ಣತೆಯನ್ನು ಗೋಜಲುಗೊಳಿಸಲು ಬಹುಮಟ್ಟಿಗೆ ಕಾರಣವಾಗುವ ಧಾರ್ಮಿಕ, ರಾಜಕೀಯ ಒತ್ತಡಗಳಿಗೂ ಇರಬಹುದಾದ ಸಂಬಂಧ ವಸಾಹತುಶಾಹಿ ಆಡಳಿತ ವ್ಯವಸ್ಥೆಯ ಮೂಲದಲ್ಲಿರುವಂತಿದೆ. ಶತಮಾನಗಳ ಕಾಲ ವಸಾಹತುವಾಗಿಯೇ ಉಳಿದಿದ್ದ ಇಂಡಿಯಾ ಸ್ವಾತಂತ್ರ್ಯದ ನಂತರ ಕೂಡ ಆ ಮೂಲದ ಲಕ್ಷಣಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಚ್ಚಳವಾಗಿ ಕಾಪಾಡಿಕೊಂಡು ಬಂದಿದ್ದರ ಪರಿಣಾಮವಾಗಿ ಇಲ್ಲಿನ ಸಂಸ್ಕೃತಿ ಕೂಡ ನವ ವಸಾಹತುಶಾಹಿ ಗುಣಗಳನ್ನು ಇನ್ನೂ ಅರಗಿಸಿಕೊಳ್ಳುವುದರಲ್ಲೇ ಇದೆ. ಹಾಗಾಗಿ ಇಂಡಿಯಾದ ಪ್ರಾಚೀನ ಸಂಸ್ಕೃತಿಯ ನೆಲೆ ಬೆಲೆಯನ್ನು ಸಮಕಾಲೀನ ಸಂದರ್ಭದ ಒಳ ಹೊರ ಒತ್ತಡಗಳ ಹಿನ್ನೆಲೆಯಲ್ಲಿ ಗುರುತಿಸುವಾಗ ವಸಾಹತು ಮೂಲದ ಆಧುನಿಕತೆಯ ಮಾನದಂಡವಾಗುತ್ತಿದೆ. ಬದುಕಿನ ಬಾಹ್ಯರೂಪ ಮತ್ತು ಮನೋಧರ್ಮದ ನಡುವಿನ ಅಂತರದಲ್ಲಿ ಸಾಮಾಜಿಕ ಸಂವೇದನೆಗಳ ಮತ ಧರ್ಮ ನಿರಪೇಕ್ಷ ಗುಣವನ್ನು ಕಾಣಬಹುದಾದ್ದರಿಂದ ಸಂಸ್ಕೃತಿ ಅನ್ನುವುದು ಸಾಮಾಜಿಕ ಪರಿವರ್ತನೆಯ ಸಂದರ್ಭದಲ್ಲಿ ಬೇರೆಯದೇ ಆದ ಆವರಣದಲ್ಲಿ ಅಭಿವ್ಯಕ್ತವಾಗುತ್ತದೆ. ಈ ಮಾತು ಖಾಟಿಕ್‌ರ ಸಂಸ್ಕೃತಿಯನ್ನು ಸಾಮಾಜಿಕ ಬದಲಾವಣೆಯ ಹಿನ್ನೆಲೆಯಲ್ಲಿ ಗಮನಿಸುವಾಗಲೂ ನಿಜವೆನಿಸುತ್ತದೆ.

ಖಾಟಿಕ್‌ರ ಸ್ಥಿತ್ಯಂತರ ಪರಿಸ್ಥಿತಿಯನ್ನು ಅಧ್ಯಯನ ಮಾಡುವಾಗ ಅವರ ಆಚರಣೆಗಳನ್ನು ಕುರಿತು ಗಮನಿಸಿದರೆ ಹಿಂದೆ ಇವರ ಮದುವೆಯ ಆಚರಣೆಗಳಾಗಲಿ ಅಥವಾ ಇತರ ಬೇರೆ ಸಮಾರಂಭ ಗಳಲ್ಲಿ ಕುರಿಬಲಿ ನೀಡುವುದು ಮಾಂಸಾಹಾರವು ಮುಖ್ಯವಾದ ಆಹಾರ ಪದ್ಧತಿಯಾಗಿತ್ತು. ಆದರೆ ಇಂದು ಇವರ ಆಚರಣೆಗಳನ್ನು ಗಮನಿಸಿದಾಗ ಮಾಂಸಾಹಾರವು ತುಂಬಾ ಕಡಿಮೆಯಾಗಿದ್ದು ತಮ್ಮ ದೇವರಿಗೆ ನೈವೇದ್ಯ ಮಾತ್ರ ಮಾಂಸಾಹಾರವನ್ನು ಬಳಸಿ ಉಳಿದಂತೆ ಸಸ್ಯಹಾರವು ಪ್ರಮುಖವಾಗಿ ಬಳಸಲಾಗುತ್ತದೆ. ಇದಕ್ಕೆ ಒಂದು ಕಾರಣ ಇಂದಿನ ದುಬಾರಿಯಾಗಿರುವ ಖರ್ಚು ವೆಚ್ಚದಲ್ಲಿ ಮಾಂಸಾಹಾರವನ್ನು ಎಲ್ಲರಿಗೂ ಪೂರೈಸುವುದು ಕಷ್ಟ. ಇನ್ನೊಂದು ಈ ಸಮುದಾಯದವರು ಇತರ ಸಮುದಾಯದವರಿಗೆ ತಮ್ಮ ಕೆಲಸ ಕಾರ್ಯಗಳಿಗೆ ಆಹ್ವಾನಿಸುವರು ಇಂಥ ಸಂದರ್ಭದಲ್ಲಿ ಎಲ್ಲರೂ ಮಾಂಸಾಹಾರ ತಿನ್ನುವವರಿರುವುದಿಲ್ಲ. ಹಾಗಾಗಿ ಸಸ್ಯಾಹಾರ ಶ್ರೇಷ್ಠ ಎಂಬ ಕಲ್ಪನೆಯಿಂದ ಮತ್ತು

ಸಸ್ಯಾಹಾರವು ಒಂದು ಸಾಮಾಜಿಕ ಅಂತಸ್ತನ್ನು, ಗೌರವವನ್ನು ತಂದು ಕೊಡುತ್ತದೆ ಎಂಬ ಕಾರಣದಿಂದ ಹೆಚ್ಚಾಗಿ ಸಸ್ಯಾಹಾರವನ್ನು ಬಳಸುತ್ತಿರುವುದನ್ನು ಕಾಣಬಹುದು. ಮದುವೆಯ ಸಂದರ್ಭದಲ್ಲಿ ಹಲವು ಹೊಸ ಆಚರಣೆಗಳು ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಹಿಂದೆ ಇಲ್ಲದಂತ ಹೊಸ ಬ್ಯಾಂಡ್ ಸಿಸ್ಟಮ್‌ಗಳು, ಆರ್ಕೆಸ್ಟ್ರಾಗಳು, ವಿವಿಧ ಅಲಂಕಾರಗಳನ್ನು ಹೊಂದಿರುವ ಮದುವೆಯ ಚಪ್ಪರಗಳು, ದೀಪಾಲಂಕಾರ ವ್ಯವಸ್ಥೆ ಮದುವೆಯ ಜೋಡಿಗಳಿಗೆ ಕೂಡಿಸಲು ಹೊಸ ಮಾದರಿಯ ಅಲಂಕಾರಿಕ ಕುರ್ಚಿಗಳು, ಮದುಮಗಳಿಗೆ ಹಾಕುವ ಮದರಂಗಿಯ ಅಲಂಕಾರಿಕ ಚಿತ್ತಾರಗಳು, ಅಭರಣಗಳಲ್ಲೂ ನವೀನತೆ, ಬಟ್ಟೆ ಉಡುಗೆ ತೊಡುಗೆಗಳಲ್ಲಿ ಆಧುನಿಕತೆಯ ಛಾಪನ್ನು ಗುರುತಿಸ ಬಹುದು.

ಅಲಂಕಾರ, ಬ್ಯುಟಿಪಾರ್ಲರ್‌ಗಳಲ್ಲಿ ಅವರು ಶೃಂಗರಿಸಿಕೊಳ್ಳುವುದು. ಉಡುಗೆ ತೊಡುಗೆಗಳನ್ನು ಗಮನಿಸಿದರು ಈ ಸಮುದಾಯದ ಯುವತಿಯರು ಹೆಣ್ಣು ಮಕ್ಕಳು ಆಧುನಿಕ ರೀತಿಯ ಉಡುಪುಗಳಾದ ಚೂಡಿದಾರ, ಪ್ಯಾಂಟು, ಶರ್ಟ್, ನೈಟಿ, ಮಿಡಿಗಳು ಆಧುನಿಕ ರೀತಿಯ ಸೀರೆ ಡಿಸೈನುಗಳನ್ನು ಬಳಸಿದರೆ, ಯುವಕರು ಶರ್ಟ್, ಪ್ಯಾಂಟ್, ಬನಿಯಾನ್‌ಗಳು, ಟೀ ಶರ್ಟ್‌ಗಳು, ಬರ್ಮೋಡಾ, ಹಾಫ್ ಪ್ಯಾಂಟ್ ಹೀಗೆ ಸಿನಿಮಾ ಶೈಲಿಯ ಉಡುಪುಗಳನ್ನು ಸಹ ತೊಡುವುದನ್ನು ಕಾಣಬಹುದು. ಮನೆಯ ರಚನೆಗಳಲ್ಲೂ ಹೊಸ ಮಾದರಿಗಳನ್ನು ಅಳವಡಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಮನೆಯ ಒಳಗಡೆ ಪಡಸಾಲೆಯಲ್ಲಿ ಸೋಫಾ, ಕುರ್ಚಿಗಳು, ನಡುಮನೆಯಲ್ಲಿ ಅಲಂಕಾರಿಕ ವಸ್ತುಗಳು, ಷೋಕೇಸ್‌ಗಳು, ಟಿ.ವಿ. ಇಂತಹ ವಸ್ತುಗಳಿಂದ ಬದಲಾಗಿರುವುದು ಹಾಗೆಯೇ ಮನೆಯ ಪೂಜಾ ವಿಧಾನಗಳಲ್ಲೂ, ದೇವರುಗಳ ವಿಷಯದಲ್ಲೂ ಸಾಕಷ್ಟು ಬದಲಾವಣೆಗಳು ಕಂಡುಬಂದಿರುವುದನ್ನು ಕಾಣಬಹುದು. ಉದಾಹರಣೆಗೆ ಅಭಿಷೇಕ ಮಾಡಿಸುವುದು, ಕುಂಕುಮಾರ್ಚನೆ, ಸಾಕಷ್ಟು ಹೊಸ ದೇವರುಗಳು ದೇವರ ಮನೆಗೆ ಪ್ರವೇಶಿಸಿದ್ದಾಗಿದೆ. ಅವುಗಳಲ್ಲಿ ಧರ್ಮಸ್ಥಳದ ಮಂಜುನಾಥ, ತಿರುಪತಿಯ ವೆಂಕಟೇಶ್ವರ, ಸತ್ಯನಾರಾಯಣಸ್ವಾಮಿ ಹೀಗೆ ಹಲವು ದೇವರುಗಳು ಮನೆಯಲ್ಲಿ ಪೂಜಿಸುವಂತಹ ಕುಟುಂಬಗಳಲ್ಲಿ ಇತ್ತೀಚೆಗೆ ಪೂಜೆಗೊಳ್ಳುತ್ತಿರುವುದು ಕಂಡುಬರುತ್ತಿದೆ. ಇದೆಲ್ಲಾ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಗಮನ ಸೆಳೆಯುತ್ತವೆ. ಹೊಸ ದೇವಾನು ದೇವತೆಗಳು ಈ ಸಮುದಾಯ ದಲ್ಲಿ ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು. ಹೀಗೆ ಒಟ್ಟಾಗಿ ಈ ಸಮುದಾಯವು ನಿಧಾನವಾಗಿ ಬದಲಾಗುತ್ತಿರುವ ಸಂದರ್ಭಕ್ಕೆ ತನ್ನನ್ನು ತಾನು ಒಗ್ಗಿಸಿಕೊಳ್ಳುವತ್ತ ಪ್ರಯತ್ನಿಸುತ್ತಿರುವುದು ಕಂಡು ಬರುತ್ತಿದೆ.

ಹಿಂದಿನಿಂದಲೂ ಈ ಸಮುದಾಯದಲ್ಲಿ ದೈವ ಪಂಚಾಯಿತಿ(ಜಮಾತ್)ಯು ನ್ಯಾಯ ತೀರ್ಮಾನ ಮಾಡುತ್ತ ಸಮುದಾಯದ ಸದಸ್ಯರಲ್ಲಿ ಒಡಕುಗಳು, ವ್ಯಾಜ್ಯಗಳು ಕಂಡುಬಂದರೆ ಅದನ್ನು

ಬಗೆಹರಿಸುವಲ್ಲಿ ಪ್ರಮುಖ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ಇಂದು ದೈವ ಪಂಚಾಯಿತಿಯ ಮಾತನ್ನು ಕೆಲವರು ಒಪ್ಪಿದರೆ ಮತ್ತೆ ಕೆಲವರು ಸರ್ಕಾರದ ಕಾನೂನುಗಳಾದ ಪೋಲೀಸ್, ಕೋರ್ಟ್ ಕಛೇರಿಗಳ ಮೆಟ್ಟಿಲು ಹತ್ತುವುದು ಕಂಡುಬರುತ್ತದೆ. ಈ ರೀತಿ ನ್ಯಾಯ ವ್ಯವಸ್ಥೆಯಲ್ಲಿ ಬದಲಾವಣೆ ಗಳಾಗಿರುವುದು ಕಂಡುಬರುತ್ತದೆ.

ಯುವ ಸಮೂಹವು ಕೆಟ್ಟ ವ್ಯಸನಗಳಿಗೆ ಮಾರು ಹೋಗುತ್ತಿರುವುದು ಕಂಡುಬರುತ್ತದೆ. ಉದಾಹರಗೆ ಗುಟಕಾ, ಸಿಗರೇಟು, ಕುಡಿತ, ಜೂಜು ಹೀಗೆ ಆಧುನಿಕತೆಯ ಯುವ ಪೀಳಿಗೆಯು ಇದನ್ನು ಫ್ಯಾಷನ್ ಎನ್ನುವಂತೆ ಯುವ ಜನತೆ ಈ ಚಟಗಳಿಗೆ ದಾಸರಾಗಿ ಮಾರು ಹೋಗುವುದು ಸಾಮಾನ್ಯ ಎನಿಸಿಬಿಟ್ಟಿದೆ. ಹಾಗೆಯೇ ಇಂದು ಹಲವು ಸಾಂಪ್ರದಾಯಿಕ ಆಚರಣೆಗಳ ಜೊತೆಗೆ ಹುಟ್ಟುಹಬ್ಬ ನವೀನ ರೀತಿಯಲ್ಲಿ ಆಚರಿಸಿಕೊಳ್ಳುವುದು, ವ್ಯಾಲೆಂಟೈನ್ಸ್ ಡೇ, ಫ್ರೆಂಡ್ಸ್ ಡೇ, ರೋಸ್ ಡೇ, ಬ್ಯಾಂಗಲ್ಸ್ ಡೇ, ಮದರ್ಸ್ ಡೇ, ಫಾದರ್ಸ್ ಡೇ ಹೀಗೆ ಹತ್ತು ಹಲವು ಹೊಸ ಸಂಪ್ರದಾಯಗಳು ಖಾಟಿಕ್ ಯುವ ಜನತೆಯಲ್ಲಿ ಹಾಸುಹೊಕ್ಕಾಗಿರುವುದು ಕಾಣಬಹುದು.

ಖಾಟಿಕ್‌ರು ಇತರ ಸಮುದಾಯದವರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದಾರೆ. ಮುಖ್ಯವಾಗಿ ಮುಸ್ಲಿಂರೊಂದಿಗೆ, ಈಡಿಗರೊಂದಿಗೆ ಇವರ ನಂಟು ಹೆಚ್ಚು ಎಂದು ಹೇಳಬಹುದು. ಮುಸ್ಲಿಂರು ಖಾಯಂ ಗ್ರಾಹಕರಾಗಿ ಮಾಂಸ ಖರೀದಿಸುವ ಹಾಗೂ ಹಿಂದಿ ಭಾಷೆಯನ್ನು ಬಲ್ಲವರಾಗಿರು ವುದರಿಂದ ಇವರೊಂದಿಗೆ ಒಳ್ಳೆಯ ಬಾಂಧವ್ಯವಿದೆ. ಹಾಗೆಯೇ ಮಧ್ಯ ಮಾರಾಟ ಇವರ ಎರಡನೆಯ ಪ್ರಮುಖ ವೃತ್ತಿ ಎಂದು ಗುರುತಿಸುವುದಾದರೆ ಈಡಿಗರೊಂದಿಗೆ ಮಧ್ಯ ಮಾರುವಿಕೆ ಹಾಗೂ ಮಧ್ಯ ಮಾರುವ ಈಡಿಗರ ಅಂಗಡಿಗಳಲ್ಲಿ ಖಾಟಿಕ್‌ರು ಚಾಕಣಾ ಮಾರುವ ಪ್ರಮುಖ ವೃತ್ತಿಯಲ್ಲಿ ತೊಡಗಿಕೊಂಡಿರುವುದರಿಂದ ಖಾಟಿಕ್ ಮತ್ತು ಈಡಿಗರಲ್ಲಿ ಅಣ್ಣ ತಮ್ಮಂದಿರ ನೆಂಟಿದೆ ಎಂದು ಹೇಳಬಹುದು. ಮದ್ಯ ಕುಡಿದ ನಂತರ ಅಲ್ಲಿಯೇ ರೊಟ್ಟಿ, ಅನ್ನ, ಚಾಕಣಾ ಮಾಂಸದ ಸಾರು ಕುಡಿದ ಜನರು ಕೊಂಡು ತಿನ್ನುವುದರಿಂದ ಮದ್ಯಕ್ಕೆ ಮಾಂಸವು ಪೂರಕವಾಗಿರುವುದರಿಂದ ಈ ವ್ಯಾಪಾರವು ನಡೆಯುತ್ತದೆ. ಹೀಗೆ ಕೆಲವೊಮ್ಮೆ ಈಡಿಗರು ಖಾಟಿಕ್‌ರಿಗೆ ತಮ್ಮ ಮದ್ಯದಂಗಡಿಗಳನ್ನು ಸಹ ನೋಡಿಕೊಳ್ಳುವಂತೆ ಹೇಳುತ್ತಿದ್ದರು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬರುತ್ತದೆ. ಹೀಗೆಯೇ ಕುರಿ ವ್ಯಾಪಾರದಲ್ಲಿ ಇವರಿಗೆ ಹತ್ತಿರವಾಗಿರುವ ಸಮುದಾಯವೆಂದರೆ ಕುರುಬರು ಎಂದು ಹೇಳಬಹುದು. ಹಾಗಾಗಿ ಇವರು ಕುರುಬರು ಮತ್ತು ಖಾಟಿಕ್‌ರ ಸಂಬಂಧಗಳು ಉತ್ತಮವಾಗಿವೆ. ಇವರು ತಮ್ಮ ಮನೆಯ ಕೆಲಸ, ಶುಭ ಕಾರ್ಯಗಳಿಗೆ ಕುರುಬರನ್ನು ಈಡಿಗರನ್ನು ಮುಸ್ಲಿಂರನ್ನು ಆಮಂತ್ರಿಸುತ್ತಾರೆ. ಅವರ ಮನೆಗಳಿಗೂ ಹೋಗಿ ಬರುತ್ತಾರೆ. ಸಮಾಜದಲ್ಲಿ ಯಾರೊಂದಿಗಾದರೂ ಜಗಳವಾಡಿದರು ಅದು ಆ ಸಮುದಾಯಕ್ಕೆ ಸೀಮಿತವಾಗಿರುತ್ತದೆ. ಒಟ್ಟಾರೆಯಾಗಿ ಇವರು ಹೆಚ್ಚಾಗಿ

ಯಾರೊಂದಿಗೂ ಜಗಳಕ್ಕೆ ಹೋಗುವುದಿಲ್ಲ. ಸಮಾಜದಲ್ಲಿ ಇತರರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತಾರೆ. ಈಡಿಗರ ಮತ್ತು ಖಾಟಿಕರ ನಡುವಿನ ಸಂಬಂಧಗಳನ್ನು ಕುರಿತು ತಿಳಿಸುವಲ್ಲಿ ಹೊಸಪೇಟೆ ಖಾಟಿಕ್ ಸಮುದಾಯದ ಸಮಾರಂಭದಲ್ಲಿ ಸನ್ಮಾನ್ಯ ಶಾಸಕರಾದ ಶ್ರೀ ಹೆಚ್.ಜಿ. ರಾಮುಲು ಅವರು ಹೇಳಿದಂತೆ ನಾವು ನೀವು ಅಣ್ಣ ತಮ್ಮಂದಿರು ನಾವು ಮೇಲೆ ಕುಳಿತು ಮಧ್ಯ ಮಾರಾಟ ಮಾಡಿದರೆ ನೀವು ಕೆಳಗೆ ಕುಳಿತು ಅದಕ್ಕೆ ಪೂರಕವಾಗಿ ಮಾಂಸದ ಅಡುಗೆ ಚಾಕಣಾವನ್ನು ಮಾರುತ್ತೀರಿ. ನಮ್ಮದು ಮತ್ತು ನಿಮ್ಮದು ಅತ್ಯಂತ ಒಳ್ಳೆಯ ಬಾಂಧವ್ಯ. ಅದು ಬಹಳ ಹಿಂದಿನಿಂದಲೂ ಇಂದಿನ ವರೆಗೂ ನಡೆದುಕೊಂಡು ಬಂದಿರುವುದನ್ನು ಕಾಣಬಹುದು ಎಂದು ತಿಳಿಸಿದರು.

ಅಧ್ಯಾಯ - ೮

ಸಮಾರೋಪ

ಇಂಡಿಯಾದ ಪ್ರತಿಯೊಂದು ಜಾತಿಯು ತಮ್ಮ ಉತ್ಪಾದನಾ ಸಾಮರ್ಥ್ಯದಿಂದಾಗಿ ಸ್ವಯಂಪೂರ್ಣ ಘಟಕಗಳಂತೆ ಇವೆ. ಹೀಗಿರುವ ಪ್ರತಿ ಸಮುದಾಯವು ದೇಶದಲ್ಲಿ ನಿಶ್ಚಿತವಾದ ಚಟುವಟಿಕೆಗಳನ್ನು ಮಾಡುತ್ತಲೇ ಬಂದಿವೆ. ಇಂತಹ ಜಾತಿಗಳಲ್ಲಿ ಅವುಗಳು ನಿರ್ವಹಿಸುವ ಕಾರ್ಯಗಳಿಂದಾಗಿ ಶ್ರೇಷ್ಠ ಮಧ್ಯಮ ಹಾಗೂ ಕನಿಷ್ಠ ತಮದವು ಎಂದು ಗುರುತಿಸಲ್ಪಟ್ಟಿವೆ. ಹೀಗೆ ಗುರುತಿಸುವ ಸಮುದಾಯಗಳು ಕಾಲಾನಂತರದಲ್ಲಿ ಆರ್ಥಿಕ ಒಡೆತನದ ನಿರಾಕರಣೆ ಹಾಗೂ ಮೇಲ್ಜಾತಿಗಳ ನೀಚತನದಿಂದಾಗಿ ಒಂದು ರೀತಿಯ ಬಿಕ್ಕಟ್ಟಿಗೆ ಒಳಗಾಗಿವೆ. ಈ ತರಹದ ಬಿಕ್ಕಟ್ಟು ಕೇವಲ ಆರ್ಥಿಕವಾಗಿರದೆ, ಸಾಂಸ್ಕೃತಿಕವಾಗಿಯೂ ಪರಂಪರೆಯಲ್ಲಿ ಮುಂದುವರೆಯುತ್ತಲೇ ಬಂದಿದೆ. ಇತ್ತೀಚೆಗಂತು ಈ ಸಾಂಸ್ಕೃತಿಕ ವಾತಾವರಣ ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಸಂಸ್ಕೃತಿ ಪದದ ಅರ್ಥ ವಿಚಿತ್ರವಾಗಿ ವ್ಯಾಖ್ಯಾನಕ್ಕೆ ಒಳಗಾಗುತ್ತಿದೆ. ಜೊತೆಗೆ ಆ ಪದದ ಅರ್ಥ ಗೊತ್ತಿಲ್ಲದವರು ಅದರ ಬಗ್ಗೆ ಮಾತನಾಡುತ್ತಾ ಒಂದು ರೀತಿಯಲ್ಲಿ ಅದನ್ನು ಕುಲಗೆಡಿಸುತ್ತಿದ್ದಾರೆ. ವ್ಯಕ್ತಿ ವಿಶಿಷ್ಟವಾದ ನೀತಿ ನಡವಳಿಕೆಗಳು ಮತ್ತು ಸಾಮುದಾಯಿಕ ನಂಬಿಕೆ ಆಚರಣೆಗಳ ನಡುವಿನ ಸಂಬಂಧ ಶಿಥಿಲಗೊಳ್ಳುತ್ತಿದೆ. ಒಂದು ಕಾಲದಲ್ಲಿ ಸಾಂಪ್ರದಾಯಿಕ ಸಮಾಜವನ್ನು ಹಾಗೂ ಅದರ ಜಾತೀಯತೆಯನ್ನು ಸಡಿಲಿಸಿ ಶತಶತಮಾನಗಳಿಂದ ತುಳಿತಕ್ಕೊಳಗಾಗಿದ್ದ ಸಮುದಾಯಗಳಿಗೆ ಆಧುನಿಕತೆ ಎನ್ನುವುದು ಒಂದು ರೀತಿಯ ಮುಕ್ತತೆಯನ್ನು ತಂದುಕೊಟ್ಟಿತು ಹಾಗೂ ಆ ಸಮುದಾಯಗಳ ಮೂಲ ಕಸುಬುಗಳು ವೇಗದ ಆಧುನಿಕತೆಯನ್ನು ಪಡೆಯುತ್ತ ಆಕರ್ಷಣೆಯ ಮಾರುಕಟ್ಟೆಯನ್ನು ಸೃಷ್ಟಿಸಿಕೊಂಡವು. ಸಮುದಾಯಗಳ ವಿಶಿಷ್ಟ ವೃತ್ತಿ ಮತ್ತು ಉತ್ಪಾದನೆಗಳು ಮಾರುಕಟ್ಟೆಯ ಸರಕಾದಂತೆ ಸಂಸ್ಕೃತಿ ಎನ್ನುವುದು ಹಿನ್ನೆಲೆಗೆ ಸರಿದು ಕೇವಲ ಅಧ್ಯಯನದ ವಸ್ತುವಾಯಿತು.

ಆಧುನಿಕತೆಯ ಮುಂದುವರೆದ ರೂಪವಾದ ಜಾಗತೀಕರಣದಿಂದಾಗಿ ದೇಶಿ ಮಾರುಕಟ್ಟೆಯು ಲಾಭಕಾರಿಯಲ್ಲದ ಅಸ್ಥಿತ್ವವಿಲ್ಲದ ಅರ್ಥವಿಲ್ಲದಂತೆ ಕಾಣುತ್ತಿದೆ. ಈ ದೇಶೀಯ ಕರಕುಶಲ ಕೈಗಾರಿಕೆಗಳ ಉತ್ಪನ್ನಗಳಿಗೆ ಸರಿಯಾದ ಬೆಲೆಯಿಲ್ಲದೆ ರೈತ, ಕಾರ್ಮಿಕ, ಕಲಾವಿದ, ಶಿಕ್ಷಕ ಹೀಗೆ ಪ್ರತಿಯೊಬ್ಬ ವೃತ್ತಿ ನಿರತನು ಬಿಕ್ಕಟ್ಟಿನಲ್ಲಿದ್ದಾನೆ. ಜಾಗತೀಕರಣ ತಂದಿಟ್ಟಿರುವ ಈ ಬಿಕ್ಕಟ್ಟಿನಿಂದ ಪಾರಾಗುವುದು ಇಂದಿನ

ಪ್ರಶ್ನೆಯಾಗಿ ಉಳಿದಿಲ್ಲ. ಬದಲಾಗಿ ನಮ್ಮ ಎಲ್ಲ ಬಗೆಯ ಮೂಲ ಕಸುಬು ಮತ್ತು ಕಲಾವಂತಿಕೆಯನ್ನು ಜೀವಂತವಾಗಿ ಉಳಿಸಿಕೊಳ್ಳುತ್ತ ಸಾಮಾಜಿಕ ಚಲನೆಗೆ ಸಂವೇದನೆಗಳನ್ನು ತೊಡಿಸುವ ಬಗ್ಗೆ ಯೋಚಿಸ ಬೇಕಾಗಿದೆ. ಸಂಸ್ಕೃತಿಯನ್ನು ಇಂದು ಜಾಗತೀಕರಣದ ಮಾಯೆಯಿಂದಾಗಿ ಹರಾಜಿಗಿಡುವ ಪ್ರಯತ್ನಗಳು ನಡೆಯುತ್ತಿವೆ. ಇಂಡಿಯಾದ ಈ ಪರಂಪರೆಯಲ್ಲಿ ಕನಿಷ್ಠ ಗರಿಷ್ಠ ಎಂದು ಒಂದೊಮ್ಮೆ ವಿಶ್ಲೇಷಣೆಗೊಳ್ಳು ತ್ತಿದ್ದ ಸಂಸ್ಕೃತಿ ಇದೀಗ ಮಾರುಕಟ್ಟೆಯ ಪೈಪೋಟಿಗಿಳಿದು ಬಿಟ್ಟಿದೆ. ಈ ಮಾರುಕಟ್ಟೆ ರಾಜಕೀಯ ಅಧಿಕಾರವನ್ನು ಸಾಧಿಸಿಕೊಡುವ ಸಾಧನವಾಗಿರುವುದು ಪೈಪೋಟಿಯ ತೀವ್ರತೆಗೆ ಕಾರಣವಾಗಿದೆ.

ಸಂಸ್ಕೃತಿ ಎನ್ನುವುದು ಮಾರುಕಟ್ಟೆಯಲ್ಲಿ ರಾಜಕೀಯ ಅಧಿಕಾರವನ್ನು ಸಾಧಿಸಿಕೊಡುವ ಸಾಧನವಾಗಿರುವ ಇಂತಹ ಸಂದರ್ಭದಲ್ಲಿ ಸಂಸ್ಕೃತಿ ಅಧ್ಯಯನಕ್ಕೆ ಮುಂದಾಗುವುದು ಸಮುದಾಯವೊಂದರ ಸಾಂಸ್ಕೃತಿಕ ರೂಪಗಳ ಶೋಧನೆ ಆ ವಿಶ್ಲೇಷಣೆಯ ದೃಷ್ಟಿಯಿಂದ ಮಾತ್ರವಲ್ಲದೆ ಆಯಾ ಸಮುದಾಯಗಳ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅಭ್ಯಾಸಿಸುವ ದೃಷ್ಟಿಯಿಂದ ಕೂಡಾ ಅಗತ್ಯವಾದುದು. ಹಾಗಾಗಿ ಅನಿವಾರ್ಯವಾಗಿ ಸಂಸ್ಕೃತಿ ಅಧ್ಯಯನ ಈ ತೆರನಾದ ಜವಾಬ್ದಾರಿ ಯನ್ನು ನಿರ್ವಹಿಸಬೇಕಾಗಿದೆ. ಹಾಗಾಗಿ ಜನಪರವು, ಧರ್ಮ ನಿರಪೇಕ್ಷವು ಆದ ದೃಷ್ಟಿಕೋನಗಳಿಂದ ಸಮುದಾಯ ಅಧ್ಯಯನಗಳು ನಡೆಯುವುದು ಅತ್ಯಗತ್ಯವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ನಮ್ಮ ಬುಡಕಟ್ಟು ಸಮುದಾಯಗಳು ತಮ್ಮ ಸಾಂಸ್ಕೃತಿಕ ಚಹರೆಯನ್ನು ಇತರ ಸಮುದಾಯಗಳ ಜೊತೆಗೆ ಸೇರಿದಾಗಲೂ ಬಿಟ್ಟು ಕೊಡದೆ ಅವರುಗಳ ಬಗೆಗೆ ತೋರುವ ಸಹನೆ ಮತ್ತು ಪ್ರೇಮದ ಉತ್ಕಟತೆಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಈ ರೀತಿಯ ಅಧ್ಯಯನವನ್ನು ಮಾಡಲು ಜಾನಪದಕ್ಕಿರುವಷ್ಟು ಸಾಧ್ಯತೆ ಬೇರೆ ಜ್ಞಾನಶಿಸ್ತುಗಳಿಗಿಲ್ಲ. ಏಕೆಂದರೆ ಜಾನಪದ ಎನ್ನುವುದು ಜನಪದರ ಜೀವನ ವಿಧಾನದ ಅಧ್ಯಯನವಾಗಿರುವಂತೆಯೇ ಆ ಜೀವನ ವಿಧಾನವನ್ನು ಚರಿತ್ರೆ ಮತ್ತು ಸಮಕಾಲೀನ ಸವಾಲುಗಳೊಂದಿಗೆ ವಿಶ್ಲೇಷಣೆಯನ್ನು ಮಾಡುವುದಾಗಿರುತ್ತದೆ.

ದೇಶೀಯ ಸಾಂಸ್ಕೃತಿಕ ನೆಲೆಗಳನ್ನು ಶೋಧಿಸುವ ಹಾಗೂ ಈ ಹೊತ್ತಿನ ಸವಾಲು ಗಳೊಂದಿಗೆ ಅವುಗಳನ್ನು ಚರ್ಚಿಸುವ ದೃಷ್ಟಿಯಿಂದ ಕರ್ನಾಟಕದ ಖಾಟಿಕ್ ಸಮುದಾಯ ಅಧ್ಯಯನ ಮಹತ್ವ ವಾದುದು. ನಮ್ಮ ದೇಶದ ಜಾತಿವ್ಯವಸ್ಥೆಯಲ್ಲಿನ ಪ್ರತಿಯೊಂದು ಸಮುದಾಯವು ತನ್ನದೇ ಆದ ಪೌರಾಣಿಕ ಹಾಗೂ ಚಾರಿತ್ರಿಕ ನೆನಪುಗಳನ್ನು ಹೊಂದಿರುತ್ತದೆ. ಮತ್ತು ಈ ಜಾತಿ ಪದ್ಧತಿ ಕಾರಣಕ್ಕೆ ಪ್ರತಿಯೊಂದು ಅನ್ಯ ಸಮುದಾಯದ ನಡುವೆ ಶ್ರೇಷ್ಠವೋ ಕನಿಷ್ಠವೋ ಆದಂತಹ ಸಾಮಾಜಿಕ ನಡು ವಳಿಕೆಗಳನ್ನು ರೂಪಿಸಿಕೊಂಡಿರುತ್ತವೆ.

ಪ್ರಸ್ತುತ ಅಧ್ಯಯನಕ್ಕೊಳಪಟ್ಟಿರುವ ಖಾಟಿಕ್ ಸಮುದಾಯವು ಚಾರಿತ್ರಿಕವಾಗಿ ನೋಡಿದಾಗ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದಿರುವ ಸಮುದಾಯವಾಗಿದೆ. ಖಾಟಿಕ್

ಸಮುದಾಯವು ಭಾರತದಲ್ಲಿ ಅಕ್ಬರನ ಆಳ್ವಿಕೆ ಪ್ರಾರಂಭವಾದಗಿನಿಂದ ಹಿಡಿದು ಔರಂಗಜೇಬನ ಆಳ್ವಿಕೆ ಯಲ್ಲಿಯೂ ಇವರು ವಲಸೆ ಬಂದಿರಬಹುದಾದ ಸಾಧ್ಯತೆಗಳಿವೆ. ಅದರಲ್ಲೂ ಹೆಚ್ಚಾಗಿ ಔರಂಗಜೇಬನ ಆಡಳಿತದಲ್ಲಿ ನಡೆದ ಮತಾಂತರ ಪ್ರಕ್ರಿಯೆಗೆ ಒಳಗಾಗದೆ ಹೋಗಿರುವ ಸಂದರ್ಭಗಳೇ ಹೆಚ್ಚೆಂದು ಕಂಡುಬರುತ್ತದೆ. ಮೂಲದಲ್ಲಿ ಇವರು ಸಣ್ಣಪುಟ್ಟ ಪಾಳೆಯಗಾರರಾಗಿ ದೊಡ್ಡ ರಾಜರುಗಳ ಸೈನಿಕರಾಗಿ ಮತ್ತೆ ಕೆಲವರು ಮಾಂಸ ಮಾರುವ ಉದ್ಯೋಗವನ್ನು ಮಾಡುವವರಾಗಿದ್ದರು. ವಲಸೆ ಬಂದು ಕರ್ನಾಟಕದಲ್ಲಿ ಯಾವುದೇ ಪಾಳೆಯಪಟ್ಟನ್ನು ಆಳಿರುವಂತಹ ಗುರುತುಗಳು ಕಂಡುಬರುತ್ತಿಲ್ಲ. ಆದರೆ ಹಲವಾರು ರಾಜ ಮಹಾರಾಜರುಗಳಲ್ಲಿ ಸೈನಿಕರಾಗಿ, ಸೈನಿಕರಿಗೆ ಮಾಂಸವನ್ನು ಒದಗಿಸುವ ಕೆಲಸಗಾರರಾಗಿ ತಮ್ಮನ್ನು ತೊಡಗಿಸಿಕೊಂಡಿರಬಹುದಾದ ಸಾಧ್ಯತೆಗಳಿವೆ.

ವಸಾಹತು ಕಾಲಘಟ್ಟದಲ್ಲಿ ರಾಜ ಮಹಾರಾಜರುಗಳ ಆಳ್ವಿಕೆಯು ಮುಗಿದ ನಂತರ ಸೈನಿಕರಾಗಿದ್ದ ವರು ಸಹ ತಮ್ಮ ಸಮುದಾಯದ ಮೂಲ ಉದ್ಯೋಗವಾದ ಮಾಂಸ ಮಾರುವ ಕಾಯಕಕ್ಕೆ ನಿಂತು ಕೊಂಡರು. ವಸಾಹತು ಕಾಲಘಟ್ಟದ ಆಧುನಿಕತೆಯು ಇವರಿಗೆ ಒಂದು ರೀತಿಯಲ್ಲಿ ಬೇರೆ ಉದ್ಯೋಗಗಳಿಗೆ ಹೋಗಲು ಸ್ವಾತಂತ್ರ್ಯ ನೀಡಿತಾದರು, ಇವರುಗಳಲ್ಲಿ ಬಹುಪಾಲು ಜನರು ಹೊಸ ಉದ್ಯೋಗಗಳಿಗೆ ಹೋಗಲು ಮಾನಸಿಕವಾಗಿ ಸಿದ್ಧರಾಗಲಿಲ್ಲ. ಹೊಸ ಉದ್ಯೋಗಗಳಿಗೆ ಹೋದ ಕೆಲ ಬೆರಳೆಣಿಕೆಯ ಜನರು ಅಲ್ಲಿಯೂ ತಮ್ಮನ್ನು ಮುನ್ನೆಲೆಗೆ ತಂದುಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಸ್ತುತದ ಜಾಗತೀಕರಣದ ಸಂದರ್ಭದಲ್ಲಿ ಇವರ ಆರ್ಥಿಕ ಪರಿಸ್ಥಿತಿ ತೀವ್ರವಾದ ಬಿಕ್ಕಟ್ಟಿಗೊಳಗಾಗಿ, ಮೂಲಭೂತ ಅವಶ್ಯಕತೆಗಳಿಗೂ ಸಹ ಪರದಾಡುವ ಸ್ಥಿತಿಯಲ್ಲಿದ್ದಾರೆ. ಜೊತೆಗೆ ಸರ್ಕಾರ ನೀಡುತ್ತಿರುವ ಮೀಸಲಾತಿ ಹಾಗೂ ಇನ್ನಿತರ ಸೌಲಭ್ಯಗಳು ಇವರಿಗೆ ಕನ್ನಡಿಯ ಗಂಟಾಗಿವೆ. ಮೀಸಲಾತಿಯಂತು ಇನ್ನು ಎಟುಕಲಾರದ ತುತ್ತಾಗಿದೆ. ಮೀಸಲಾತಿ ಪಟ್ಟಿಯಲ್ಲಿ ಇವರಿರುವ ಗುಂಪಿನಲ್ಲಿ ಈ ಸಮುದಾಯಕ್ಕಿಂತ ಪ್ರಬಲ ಸಮುದಾಯಗಳು ಇದ್ದು ಆ ಮೀಸಲಾತಿಯ ಸವಲತ್ತುಗಳನ್ನು ಅವರೇ ಬಾಚಿಕೊಳ್ಳುತ್ತಿದ್ದಾರೆ. ಎಷ್ಟೋ ಸಂದರ್ಭದಲ್ಲಿ ಇವರುಗಳಿಗೆ ತಾವು ಯಾವ ಮೀಸಲಾತಿ ಗುಂಪಿನಲ್ಲಿದ್ದೇವೆ ಎಂಬುದು ಸಹ ಗೊತ್ತಿರುವುದಿಲ್ಲ. ಹಾಗೆಯೇ ಸರ್ಕಾರದ ವಿಶೇಷ ಪ್ಯಾಕೇಜ್‌ಗಳಾಗಲಿ, ವಿಶೇಷ ಸವಲತ್ತುಗಳಾಗಲಿ ಈ ಸಮುದಾಯಗಳಿಗೆ ಇದುವರೆಗೆ ದಕ್ಕುತ್ತಿಲ್ಲ. ಕೆಲವು ವಿಶಿಷ್ಟ ಯೋಜನೆಗಳಿಗೆ ಅಂದರೆ ವಯಸ್ಕರ ಶಿಕ್ಷಣ, ಮರಳಿ ಶಾಲೆಗೆ, ಸರ್ವಶಿಕ್ಷಣ ಅಭಿಯಾನ ಯೋಜನೆಗಳಿಗೆ ಖಾಟಿಕ್ ಸಮುದಾಯವೊಂದು ಇದೆ ಎಂಬುದು ಸಹ ತಿಳಿದಿಲ್ಲ.

ಕೆಲವು ಸಲಹೆಗಳು

* ಈ ಸಮುದಾಯದ ಬಗೆಗೆ ಇತರ ಸಮುದಾಯದವರಲ್ಲಿ ಇರುವ ಖಾಟಿಕ್ ಸಮುದಾಯವೆಂದರೆ, ಹೃದಯವಿಲ್ಲದವರು, ಕಟುಕರು, ಕಟುಹೃದಯಿಗಳು ಎಂಬ ಮನೋಭಾವವನ್ನು ತೊರೆದು ಇವರು ಸಹ ನಮ್ಮಂತೆ ಮನುಷ್ಯರು ಎಂಬ ಭಾವನೆಯನ್ನು ರೂಢಿಸಿಕೊಳ್ಳಬೇಕಾಗಿದೆ.

* ಸರ್ಕಾರ ಮುಖ್ಯವಾಗಿ ಇವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು.
* ಸರ್ಕಾರದ ವತಿಯಿಂದ ಜನತಾ ಮನೆಗಳನ್ನು ಕೊಡಬೇಕು. ಈ ಸಮುದಾಯದವರಿಗೆ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಬೇಕು.
* ಈ ಸಮುದಾಯದವರ ಉದ್ಯೋಗಕ್ಕೆ ಮಾಂಸ ಮಾರಲು ಸುಸಜ್ಜಿತವಾದಂತ ಮಾರ್ಕೆಟ್ ವ್ಯವಸ್ಥೆ, ಸ್ಲಾಟರ್‌ಹೌಸ್ ವ್ಯವಸ್ಥೆ, ಮಾರ್ಕೆಟ್‌ನಲ್ಲಿ ನೀರಿನ ವ್ಯವಸ್ಥೆ, ಕುರಿಯನ್ನು ತೊಳೆದ ನೀರು, ರಕ್ತ, ಗಲೀಜು ಹೋಗಲು ಅನುಕೂಲವಾಗಿರುವ ಸುಸಜ್ಜಿತ ಒಳಚರಂಡಿಯ ವ್ಯವಸ್ಥೆಯನ್ನು ಸರ್ಕಾರವು ಮಾಡಿಕೊಡಬೇಕು.
* ಕುರಿ ಮೇಕೆಗಳು ಆರೋಗ್ಯವಾಗಿ ಇವೆಯೇ ಇಲ್ಲವೇ, ಈ ಪ್ರಾಣಿಗಳ ಮಾಂಸ ತಿನ್ನಲು ಯೋಗ್ಯ ವಾಗಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಡಾಕ್ಟರ್ ವ್ಯವಸ್ಥೆ ಇರಬೇಕು.
* ಈ ಸಮುದಾಯದ ಕೇರಿಗಳಿಗೆ ಹತ್ತಿರವಾಗಿ ಸರ್ಕಾರ ಇವರ ಮಕ್ಕಳಿಗೆ ವಸತಿ ಶಾಲೆಗಳನ್ನು ಸ್ಥಾಪಿಸಬೇಕು. ಜೊತೆಗೆ ಕಡ್ಡಾಯವಾಗಿ ಮಕ್ಕಳು ವಿದ್ಯೆ ಕಲಿಯಲು ಬೇಕಾದ ಕ್ರಮ ತೆಗೆದು ಕೊಳ್ಳಬೇಕು.
* ಖಾಟಿಕ್ ಸಮುದಾಯದವರು ಮಕ್ಕಳನ್ನು ಬಾಲಕಾರ್ಮಿಕರಾಗಿ ಬಳಸದಿರುವಂತೆ ಎಚ್ಚರಿಕೆ ವಹಿಸಬೇಕು. ಹಾಗೆ ಬಳಸಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.
* ಹಳ್ಳಿಗಳಲ್ಲಿರುವಂತ ಸಮುದಾಯದವರಿಗೆ ಪರ್ಯಾಯ ಉದ್ಯೋಗ ಕಲ್ಪಿಸುವುದು ಮತ್ತು ಅಂತವರ ಮಕ್ಕಳಿಗೆ ಶಿಕ್ಷಣದಲ್ಲಿ ಮುಂದುವರೆಯಲು ವಸತಿ ಶಾಲೆಗಳನ್ನು ಕಲ್ಪಿಸಬೇಕು. ಅಲ್ಲಿಯ ಶಿಕ್ಷಣ ಪದ್ಧತಿಯು ಉದ್ಯೋಗ ಸಂಬಂಧಿ (Job Orient Course) ಶಿಕ್ಷಣ ಮಾದರಿಯನ್ನು, ಕಂಪ್ಯೂಟರ್ ಶಿಕ್ಷಣವನ್ನು ನೀಡಬೇಕು.
* ಈ ಸಮುದಾಯದ ಜನಸಂಖ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಇವರ ಸಮುದಾಯಕ್ಕೆ ಸೀಮಿತವಾಗಿ ಸಮುದಾಯ ಭವನಗಳನ್ನು ಸ್ಥಾಪಿಸಿ, ಆ ಸಮುದಾಯ ಭವನದಲ್ಲಿ ಈ ಸಮುದಾಯದ ವಯಸ್ಕರರಿಗೆ ವಯಸ್ಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು. ಹಾಗೆಯೇ ಮಕ್ಕಳಿಗೆ ಇಲ್ಲಿ ಉಚಿತ ಕಂಪ್ಯೂಟರ್ ಶಿಕ್ಷಣ, ಇತರ ಸಣ್ಣಪುಟ್ಟ ಉದ್ಯೋಗ ತರಬೇತಿಯನ್ನು ನೀಡುವ ವ್ಯವಸ್ಥೆ ಮಾಡಬೇಕು.
* ಈ ಸಮುದಾಯದ ಜನರಿಗೆ ಜನ ಜಾಗೃತಿ ಕಾರ್ಯಕ್ರಮಗಳನ್ನು ತಕ್ಷಣದಲ್ಲಿ ನೆರವೇರಿಸುವುದರ ಜೊತೆಗೆ ಅವರಲ್ಲಿ ಜಾಗೃತಿಯನ್ನು ಮೂಡಿಸುವುದು, ನೈರ್ಮಲ್ಯ, ಕುಟುಂಬ ಯೋಜನೆ, ಇಂಥ ವಿಷಯಗಳ ಕುರಿತು ಜಾಗೃತಿ ಶಿಬಿರಗಳನ್ನು ಏರ್ಪಡಿಸಬೇಕು.

* ಸಮುದಾಯದ ಮಹಿಳೆಯರಿಗೆ ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದ ವೃತ್ತಿ ನೈಪುಣ್ಯತೆಯ ತರಬೇತಿಯನ್ನು ನೀಡಬೇಕು. ಹಾಗೆಯೇ ಈ ವೃತ್ತಿ ನೈಪುಣ್ಯತೆಯನ್ನು ಪಡೆದವರಿಗೆ ಸ್ವ ಉದ್ಯೋಗ ಕೈಗೊಳ್ಳಲು ಆರ್ಥಿಕ ಸಹಾಯ ನೀಡಬೇಕು. ಹಾಗೆಯೇ ಇವರು ಸ್ವ-ಉದ್ಯೋಗದಡಿ ತಯಾರಿಸಿದ ಸರಕುಗಳನ್ನು ಸರ್ಕಾರ ನೇರವಾಗಿ ಕೊಂಡುಕೊಳ್ಳುವ ಮುಖಾಂತರ ಇವರು ತಯಾರಿಸಿದ ಪದಾರ್ಥಗಳಿಗೆ ಮಾರುಕಟ್ಟೆಯನ್ನು ಒದಗಿಸಿ ಕೊಡಬೇಕು.

* ಈಗಾಗಲೇ ಈ ಸಮುದಾಯದಲ್ಲಿ ಅಲ್ಪಸ್ವಲ್ಪ ಓದಿದ ಯುವಕರು ಮತ್ತು ಯುವತಿಯರಿಗೆ ಉದ್ಯೋಗ ಕಲ್ಪಿಸಿಕೊಡುವತ್ತ ಸರ್ಕಾರ ತೀವ್ರವಾಗಿ ಗಮನಿಸಬೇಕಾಗಿದೆ. ಜೊತೆಗೆ ಸರ್ಕಾರಿ ಉದ್ಯೋಗಗಳನ್ನು ಎಲ್ಲರಿಗೂ ಕೊಡಲು ಸಾಧ್ಯವಿಲ್ಲದ ಕಾರಣ ಅವರು ಸ್ವ ಉದ್ಯೋಗ ಮಾಡಿಕೊಳ್ಳಲು ನೆರವು ನೀಡಬೇಕು.

* ಈ ಸಮುದಾಯದವರು ಜಾಸ್ತಿ ಇರುವ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಿಗೆ ಇದೇ ಸಮುದಾಯದವರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿ ಕೊಡಬೇಕು.

* ಸರ್ಕಾರ ಒಂದು ಸಂಸ್ಥೆ ರಚಿಸಿ ಕುರಿ ಕೋಳಿಗಳನ್ನು ಖರೀದಿಸಿ ಈ ಸಮುದಾಯದವರಿಗೆ ಕಡಿಮೆ ಬೆಲೆಯನ್ನು ನಿರ್ಧರಿಸಿ ವಿತರಿಸಬೇಕು.

* ಈ ಸಮುದಾಯದವರು ತಾವು ಮಾಡುತ್ತಿರುವ ಉದ್ಯೋಗದಿಂದಾಗಿ ಬೇಗನೆ ಕಾಯಿಲೆಗಳಿಗೆ ಈಡಾಗುವ ಸಂದರ್ಭಗಳುಂಟು. ಹಾಗಾಗಿ ಅಂತಹವರನ್ನು ಗುರುತಿಸಿ ಅವರ ಆರೋಗ್ಯ ಸುಧಾರಣೆಗೆ ಕ್ರಮಕೈಗೊಳ್ಳಬೇಕು, ಕ್ರಮಕೈಗೊಳ್ಳುವುದರ ಜೊತೆಗೆ ಮಾಶಾಸನ ನೀಡುವುದರ ಮುಖಾಂತರ ಅವರ ಜೀವನಕ್ಕೆ ಭದ್ರತೆಯನ್ನು ಒದಗಿಸಬೇಕು.

* ಇವರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಇವರಿಗೆ ಪರಿಶಿಷ್ಟ ಜಾತಿಯಲ್ಲಿ ಸೇರಿಸಬೇಕು.

* ಈಗಾಗಲೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಇದೇ ಸಮುದಾಯದವರನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಅವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸದೆ 'ಖಾಟಿಕ್' ಎಂದು ಜಾತಿ ಹೆಸರನ್ನು ಬರೆಸಿದವರಿಗೆ ಪ್ರವರ್ಗ-II A ನಲ್ಲಿ ನಮೂದಿಸಲಾಗುತ್ತಿದೆ. ಆದರೆ 'ಕಾಟಿಕ್' ಎನ್ನುವ ಪದ ಪ್ರವರ್ಗ-I ರಲ್ಲಿ ಬರುತ್ತದೆ. ಆರ್ಥಿಕವಾಗಿ ತೀರಾ ಹಿಂದುಳಿದಿರುವ ಹಾಗೂ ಸಾಮಾಜಿಕವಾಗಿ ಕೀಳಾಗಿ ಕಾಣುವ ಈ ಸಮುದಾಯದವರು ಈಗಿನ ಮೀಸಲಾತಿಯಲ್ಲಿರುವ ಇನ್ನಿತರ ಜಾತಿಗಳಾದ ಕುರುಬರು, ಈಡಿಗರು ಮುಂತಾದ ಬಲಿಷ್ಠ ಜಾತಿಗಳೊಂದಿಗೆ ಪೈಪೋಟಿ ಮಾಡಲು ಸಾಧ್ಯವೇ?

ಪ್ರಬಂಧದ ಅಧ್ಯಾಯಗಳು

ಒಟ್ಟಾರೆ ಪ್ರಬಂಧವನ್ನು ಎಂಟು ಅಧ್ಯಾಯಗಳಲ್ಲಿ ವಿಸ್ತರಿಸಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯವು 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ' ಎಂದಿದೆ. ಅಧ್ಯಯನಕ್ಕಾಗಿ ತೆಗೆದುಕೊಂಡ ವಿಧಾನಗಳು, ಖಾಟಿಕರ ಬಗ್ಗೆ ನಡೆದ ಅಧ್ಯಯನದ ಸಮೀಕ್ಷೆ, ಅಧ್ಯಯನದ ರೂಪುರೇಷೆಗಳು, ಅಧ್ಯಯನದ ಮುಖ್ಯ ಉದ್ದೇಶಗಳನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವು 'ಖಾಟಿಕ್‌ರ ಮೂಲ'. ಈ ಅಧ್ಯಾಯದಲ್ಲಿ ಖಾಟಿಕ್ ಮೂಲದ ಬಗೆಗೆ ಇದುವರೆಗೆ ಥರ್ಸಟ್ಟನ್, ಅಯ್ಯಂಗಾರ, ಕೆ.ಎಸ್. ಸಿಂಗ್, ಸೂರ್ಯನಾಥ ಕಾಮತ್ ಯು. ಮುಂತಾದವರು ಅವರ ಮೂಲ ಕುರಿತು ಹೇಳಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಹಾಗೆಯೇ ಖಾಟಿಕ್ ಪದ ಯಾವ ರೀತಿ ಬಂದಿದೆ ಮತ್ತು ಎಲ್ಲಿಂದ ಎಲ್ಲಿಗೆ ವಲಸೆ ಬಂದರು, ಮುಸಲ್ಮಾನರ ಆಡಳಿತದ ಸಂದರ್ಭದಲ್ಲಿ ಇವರಿಗಾದ ತೊಂದರೆಗಳು ಮತ್ತು ಪೌರಾಣಿಕ ಅಂಶಗಳನ್ನು ಕುರಿತು ಹಾಗೆಯೇ ಇವರ ಬಗ್ಗೆ ಇರುವ ವದಂತಿಗಳನ್ನು ಚರ್ಚಿಸಿ ಛೋಟೆಲಾಲ್ ಶರ್ಮ, ಗಣಪತಲಾಲ್ ಇವರುಗಳು ಮೂಲದ ಬಗ್ಗೆ ಬರೆದ ಅಂಶಗಳನ್ನು ಕ್ರೋಢೀಕರಿಸಿ, ಇವರು ಎಲ್ಲಿಂದ ಬಂದರು ಇವರಿಗೆ ಈ ಹೆಸರು ಬರಲು ಕಾರಣ ಮುಂತಾದವುಗಳ ಜೊತೆಗೆ ಇವರ ಜನಸಂಖ್ಯೆ, ಇವರು ವಾಸಿಸುವ ಪ್ರದೇಶಗಳನ್ನು ಕುರಿತು ಚರ್ಚೆ ನಡೆಸಲಾಗಿದೆ.

ಮೂರನೆಯ ಅಧ್ಯಾಯವು 'ಖಾಟಿಕ್ ಸಮುದಾಯದ ಸಾಮಾಜಿಕ ಜೀವನ'ವನ್ನು ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಖಾಟಿಕ್ ಸಮುದಾಯದ ಕೌಟುಂಬಿಕ ಪದ್ಧತಿ, ಒಳಪಂಗಡ ವ್ಯವಸ್ಥೆ, ಬೆಡಗುಗಳು, ರಕ್ತಸಂಬಂಧ, ಮನೆಗಳ ರಚನೆ, ಆಹಾರ ಪದ್ಧತಿ, ಉಡುಗೆ-ತೊಡಗೆ, ವೈದ್ಯಪದ್ಧತಿ, ನ್ಯಾಯ ಪದ್ಧತಿ, ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿಕೊಳ್ಳುವ ಕ್ರಮ, ನಂಬಿಕೆ ನಿಷೇಧಗಳು ಆ ಸಮುದಾಯದಲ್ಲಿರುವ ಸಂಘ ಸಂಸ್ಥೆಗಳನ್ನು ಕುರಿತು ಚರ್ಚೆ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವು 'ಖಾಟಿಕ್ ಸಮುದಾಯದ ಆಚರಣೆಗಳು' ಎಂದಿದ್ದು, ಖಾಟಿಕ್ ಸಮುದಾಯವು ಜೀವನಾವರ್ತನದಲ್ಲಿ ಕೈಗೊಳ್ಳುವ ಪ್ರತಿಯೊಂದು ಆಚರಣೆಗಳು ಹಾಗೂ ಅವುಗಳ ಬಗೆಗಿರುವ ನಂಬಿಕೆ ಮುಂತಾದವುಗಳ ಕುರಿತು ಚರ್ಚಿಸಲಾಗಿದೆ. ಜೊತೆಗೆ ವಾರ್ಷಿಕಾವರ್ತನದಲ್ಲಿ ನಡೆಸುವ ವಿಶಿಷ್ಟ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿ ವಿಶೇಷವಾಗಿ ಹಬ್ಬಗಳಾದ ಯುಗಾದಿ, ಶಿವರಾತ್ರಿ, ಗಣೇಶಚತುರ್ಥಿ, ದಸರಾ, ದೀಪಾವಳಿಯಲ್ಲಿ ಖಾಟಿಕ್ ಸಮುದಾಯ ಹೇಗೆ ಆಚರಿಸುತ್ತಿದೆ ಎಂಬುದನ್ನು ಹೇಳಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಜೀವನ' ಕುರಿತು ಚರ್ಚಿಸಲಾಗಿದೆ. ಮುಖ್ಯವಾಗಿ ಈ ಅಧ್ಯಾಯವು ಅವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ

ಹಾಗೂ ರಾಜಕೀಯವಾಗಿ ಹಿಂದುಳಿಯಲು ಕಾರಣಗಳೇನು ಅವರ ಶೈಕ್ಷಣಿಕ ಪರಿಸ್ಥಿತಿ ಅವರು ಮಾಡುತ್ತಿರುವ ಉದ್ಯೋಗದಿಂದಾಗಿ ಹೇಗೆ ಕೆಳಮಟ್ಟದಲ್ಲಿದೆ. ಹಾಗೆಯೇ ಗೊತ್ತಿದ್ದೋ ಗೊತ್ತಿಲ್ಲದೆಯೋ ಅವರ ಮೂಲ ಉದ್ಯೋಗದಲ್ಲಿ ಮಕ್ಕಳನ್ನು ಸೇರಿಸಿಕೊಳ್ಳುವ ಮುಖಾಂತರ ಈ ಸಮುದಾಯದವರು ಮಕ್ಕಳಿಗೆ ವಿದ್ಯಾಭ್ಯಾಸದಿಂದ ಹೇಗೆ ವಂಚಿತರನ್ನಾಗಿ ಮಾಡುತ್ತಿದೆ ಎಂಬುದನ್ನು ಸಹ ಚರ್ಚಿಸಲಾಗಿದೆ. ಹಾಗೆಯೆ ರಾಜಕೀಯವಾಗಿ ಮುಂದಾಗಲು ಇವರಿಗೆ ಇರುವ ಅಡೆತಡೆಗಳೇನು ಮುಂತಾದವುಗಳನ್ನು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯ 'ಜನಪದ ಸಾಹಿತ್ಯ ಹಾಗೂ ಭಾಷೆ' ಎಂದಿದ್ದು ಈ ಅಧ್ಯಾಯವು ಖಾಟಿಕ್ ಸಮುದಾಯದಲ್ಲಿರುವ ಜನಪದ ಕಥೆ, ಗೀತೆ, ಗಾದೆ, ಒಗಟು ಮುಂತಾದವುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಸಂಗ್ರಹಿಸಿರುವ ಜನಪದ ಸಾಹಿತ್ಯದಲ್ಲಿ ಅವರ ಜೀವನಕ್ಕೆ ಸಂಬಂಧಪಟ್ಟಂತೆ ಇರುವ ಅಂಶಗಳನ್ನು ಹೆಕ್ಕಿ ತೆಗೆಯಲಾಗಿದೆ. ಉದಾಹರಣೆಗೆ; ಅವರು ಉತ್ತರ ಭಾರತದಿಂದ ವಲಸೆ ಬರುವಾಗ ತಮ್ಮ ದೈವವನ್ನು ಬಿಟ್ಟು ಇಲ್ಲಿಯ ದೈವವನ್ನು ದೇವರನ್ನಾಗಿ ಪಡೆದುದರ ಬಗೆಗೆ, ಹಾಗೆಯೇ ಮದುವೆ ಸಂದರ್ಭದಲ್ಲಿ ಅರಿಶಿಣ ಹಚ್ಚುವ ಸಂದರ್ಭದಲ್ಲಿ ನಾವು ಮೂಲದಲ್ಲಿ ಹೇಗೆ ರಾಜ ಮಹಾರಾಜರಾಗಿದ್ದೆವು ಎಂದು ಹಾಡು ಹೇಳುವ ಅವರು ತಮ್ಮ ಗತ ಜೀವನವನ್ನು ನೆನಪಿಸಿ ಕೊಳ್ಳುವ ಹಾಡುಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ 'ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು' ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯವು ಮುಖ್ಯವಾಗಿ ನಾಗರೀಕತೆ ಬೆಳೆದಂತೆ ಮತ್ತು ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಖಾಟಿಕ್ ಸಮುದಾಯ ಹೇಗೆ ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಬದಲಾವಣೆಗೊಳಪಡಿಸಿಕೊಳ್ಳುತ್ತ ಸ್ಥಿತ್ಯಂತರವನ್ನು ಪಡೆದಿದೆ ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟು 'ಸಮಾರೋಪ'ವಾಗಿದ್ದು ಪ್ರಬಂಧದ ಕೊನೆಯ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಚರ್ಚಿಸಲಾಗಿದೆ.

ಆಧಾರ ಗ್ರಂಥಗಳು

ಕನ್ನಡ

ಅರ್ಜುನ ಗೊಳಸಂಗಿ., ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದಿಯ ಅಧ್ಯಯನ, ವಿಮೋಚನಾ ಪ್ರಕಾಶನ, ಅಥಣಿ, ೨೦೦೦

ಕಿಟ್ಟೆಲ್ ಎಫ್. ರೆವರೆಂಡ್., ಕನ್ನಡ ಇಂಗ್ಲಿಷ್ ಡಿಕ್ಷನರಿ; Asian Educational Services, New Delhi, Madras, 1999

ಚಿಂತಾಮಣಿ ಕೆ. ಜೋರಾಪುರ., ಕರ್ನಾಟಕದಲ್ಲಿ ಕ್ಷತ್ರಿಯ ಪಂಗಡಗಳು ಭಾಗ-೧, ಪ್ರಹ್ಲಾದ ಪ್ರಕಾಶನ, ಬೆಳಗಾವಿ.

ಚೂಡಾಮಣಿರಾವ್ ಕಲಾಲ್., ಕರ್ನಾಟಕ ಕಲಾಲರು (ಸೂರ್ಯವಂಶ ಕ್ಷತ್ರಿಯರು), ಬಿ.ಎಫ್. ಕಾಳೆ, ಶೇಷಾಚಲ ಗ್ರಂಥಮಾಲೆ, ಮದಿಹಾಳ, ಧಾರವಾಡ, ೧೯೪೬

ಪ್ರಶಾಂತ್ ಎಚ್.ಡಿ., (ಸಂ) ಜನ ಸಮುದಾಯ ಸಂಪುಟ, ಕರ್ನಾಟಕ ರಾಜ್ಯ ಕೋಶ-೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಪಂಡಿತ ಜೆ. ಮೈಸಾಳೆ., (ಪ್ರ.ಸಂ) ಸಚಿತ್ರ ಕನ್ನಡ ಹಿಂದೀ ಆದರ್ಶ ಕೋಶ, ರಾಮಕೃಷ್ಣ ಬುಕ್ ಡಿಪೋ, ಧಾರವಾಡ, ೧೯೫೭

ಮೈತ್ರೇಯಿ ಮುಖ್ಯೋಪಾಧ್ಯಾಯ (ಅನು) ವೈದೇಹಿ, ಬೆಳ್ಳಿಯ ಸಂಕೋಲೆಗಳು, ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ, ೧೯೮೫

ವೀರಣ್ಣ ದಂಡೆ., ದೇಸೀ ದೃಷ್ಟಿ, ಕವಿಮಾರ್ಗ ಪ್ರಕಾಶನ, ಕಲಬುರ್ಗಿ, ೨೦೦೧

ವೆಂಕಟ ಸುಬ್ಬಯ್ಯ ಜಿ., (ಸಂ) ಕನ್ನಡ ನಿಘಂಟು ಎರಡನೆ ಸಂಪುಟ, ೧೯೭೬

ಶ್ರೀಮತಿ ಎಚ್.ಎಸ್., (ಸಂ) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ಸೂರ್ಯನಾಥ ಯು ಕಾಮತ್., ಭಾರತದ ಗೆಜೆಟಿಯರ್, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೧, ೧೯೮೪

ಸೂರ್ಯನಾಥ ಯು ಕಾಮತ್., (ಸಂ) ಭಾರತದ ಗ್ಯಾಸೆಟಿಯರ್ ಧಾರವಾಡ ಜಿಲ್ಲೆ ಪರಿಷ್ಕೃತ ಆವೃತ್ತಿ ಕರ್ನಾಟಕ ರಾಜ್ಯ ಸರ್ಕಾರ, ಪರಿಶ್ರೀ ಪ್ರಿಂಟರ್ಸ್, ಬೆಂಗಳೂರು, ೧೯೯೫

ಸಂಧ್ಯಾರೆಡ್ಡಿ ಕೆ.ಆರ್., ಜನಪದ ಸಾಹಿತ್ಯದಲ್ಲಿ ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦

ಇಂಗ್ಲೀಷ್

Edgar Thurston and K. Rangachari., Caste and Tribes of India Southern, Vol-III, Asian Educational Services, New Delhi, Madras, 1987

Enthoven R.E., The Tribes and Castes of Bombay 1922, Vol-2, Asian Educational Services, New Delhi, Madras, 1990

Sherning M.A., Hindu Tribes and Castes, Vol-II, Cosmo Publications India, Delhi, 1974

Singh K.S., India's Communities, vo V H to M, Oxford University Press, 1998

Syed Siraj Ul Hasan., The Caste and Tribes of HEH The Nizam's Dominions, 1986

John T. Platts., Encyclopacdic Dictionary of Urdu Hindi and English, Cosmon Wealth Publishers, New Delhi, 1884

ಹಿಂದಿ

ಶ್ರೀ ರಾಜನಾಥ ಸೋನಕರ್ ಶಾಸ್ತ್ರಿ., ಖಟಿಕ್ ಜಾತಿ ಕಿ ಉತ್ಪತ್ತಿ ಔರ್ ವಿಕಾಸ್, ಕುಶಾಲ್ ಪಬ್ಲಿಕೇಷನ್ಸ್ ಎಂಡ್ ಡಿಸ್ಟ್ರೀಬ್ಯೂಟರ್ಸ್, ವಾರಣಾಸಿ, ೨೦೦೫

ಮಾಮ್‌ಚಂದ ರಿವಾಡಿಯ್., ಖಾಟಿಕ್ ಸಮಾಜ ಕ ಇತಿಹಾಸ, ರಿವಾಡಿಯ ಪ್ರಕಾಶನ, ಹೊಸದೆಹಲಿ, ೨೦೦೦

ಪತ್ರಿಕೆ

ಜನತಾವಾಣಿ - 'ಸಾಮಾಜಿಕ ಸ್ಥಾನಮಾನಗಳು ಕಟುಕ ಜನಾಂಗಕ್ಕೂ ಬೇಡವೆ?' ಸಂಚಿಕೆ-೩೨೫, (ಲೇ) ಎಂ.ಡಿ. ನಾಗರಾಜ್ ದಾವಣಗೆರೆ, ಮೇ ೧, ೧೯೮೯

ಕರ್ನಾಟಕ ಕಾಟಿಕ್ - 'ಕಾಟಿಕ್ ಬಂಧುಗಳೇ ಎಚ್ಚರವಾಗಿರಿ...!' ಸಂ-೧ ವಿಶೇಷ ಸಂ-೬-೭ (ಲೇ) ಕೃಷ್ಣಕಂಬಾಳೆಕರ್, ಚಿತ್ರದುರ್ಗ, ಮೇ ೮, ೨೦೦೭ ರಿಂದ ಜೂನ್ ೮, ೨೦೦೭

ಪರಾಮರ್ಶನ ಗ್ರಂಥಗಳು

ಕರಿಶೆಟ್ಟಿ ರುದ್ರಪ್ಪ., ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

ಕುವೆಂಪು., ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, ೧೯೬೦

ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು

ಕೋಟಗಾನಹಳ್ಳಿ ರಾಮಯ್ಯ., ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಗಣೇಶ್ ಮೊಗಳ್ಳಿ., ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಚಂದ್ರು ಕಾಳೇನಹಳ್ಳಿ., ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ದಾದಾಪೀರ್ ಬಿ.ಸಿ., ಪಿಂಜಾರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ನಾಯ್ಕರ್ ಬಿ.ಪ., ಹಾಲು ಮತಸ್ಥರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩

ನಾಯಕ ಡಿ.ಬಿ., ದೇಸಿ ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲ್ಬರ್ಗಾ, ೨೦೦೩

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಪ್ರಭಾಕರ ಎ.ಎಸ್., (ಸಂ) ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

ಪುರುಷೋತ್ತಮ ಬಿಳಿಮಲೆ., ಕೊರಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಬೋನಾ ಬಸವರಾಜ., ಹಾಲುಮತದ ಹುಟ್ಟು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦

ಬೋರಲಿಂಗಯ್ಯ ಹಿ.ಚಿ., ಕಾಡು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ,

ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ರಾಜಪ್ಪ ದಳವಾಯಿ ಆರ್., ಹಕ್ಕಿಪಿಕ್ಕಿಯವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು

ಲಲಿತ ಎ.ಸಿ., ಕಾಡುಕುರುಬರು ಮತ್ತು ಜೇನು ಕುರುಬರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಲಕ್ಷ್ಮೀಪತಿ ಕೋಲಾರ., ಮಾಸ್ತೀಕರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ವೆಂಕಟಸ್ವಾಮಿ ಎಂ., ಅಸ್ಪೃಶ್ಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೩

ಶಿವರಾಮ ಕಾರಂತ., ಕುಡಿಯರ ಕೂಸು, ಹರ್ಷಮುದ್ರಣ ಪ್ರಕಟಣಾಲಯ, ಪುತ್ತೂರು, ದ.ಕ. ೧೯೫೪

ಅಧ್ಯಯನಕ್ಕೆ ಮಾಹಿತಿ ಒದಗಿಸಿದ ವಕ್ತೃಗಳು

ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
ಶಕುಂತಲಾ ಬಾಯಿ	೫೦	ಗೃಹಿಣಿ	ಹೊಸಪೇಟೆ	ಬಳ್ಳಾರಿ
ತೇಜಾ ಬಾಯಿ	೮೦	ಗೃಹಿಣಿ	ಹೊಸಪೇಟೆ	''
ನಾಗಮ್ಮ ಬಾಯಿ	೪೦	ಗೃಹಿಣಿ	ಹೊಸಪೇಟೆ	''
ಲಕ್ಷ್ಮೀ ಬಾಯಿ	೩೦	ಗೃಹಿಣಿ	ಹೊಸಪೇಟೆ	''
ಸುಶೀಲಾ ಬಾಯಿ	೩೫	ಗೃಹಿಣಿ	ಹೊಸಪೇಟೆ	''
ಮೌನಾಜಿ ರಾವ್	೭೦	ಮಟನ್‌ವ್ಯಾಪಾರಿ	ಹೊಸಪೇಟೆ	''
ನಾಗೇಶ್ ರಾವ್	೪೦	ಮಟನ್‌ವ್ಯಾಪಾರಿ	ಹೊಸಪೇಟೆ	''
ಹುಲುಗೇಶ್	೩೦	ಮಟನ್‌ವ್ಯಾಪಾರಿ	ಹೊಸಪೇಟೆ	''
ತಾರನಾಥ	೪೦	ಮದ್ಯವ್ಯಾಪಾರಿ	ಹೊಸಪೇಟೆ	''
ಪದ್ಮಾವತಿ ಬಾಯಿ	೫೫	ಗೃಹಿಣಿ	ಹೊಸಪೇಟೆ	''
ಜಮುನಾ ಬಾಯಿ	೬೦	ಗೃಹಿಣಿ	ಹೊಸಪೇಟೆ	''
ರಾಮಚಂದ್ರ ರಾವ್	೭೦	ಮೊಟ್ಟೆವ್ಯಾಪಾರಿ	ಹೊಸಪೇಟೆ	''
ಶ್ರೀನಿವಾಸ ರಾವ್	೪೮	ಶಿಕ್ಷಕರು	ಹೊಸಪೇಟೆ	''
ಜಾಲೋಜಿ ರಾವ್	೨೯	ಫೋಟೋ ಸ್ಟುಡಿಯೋ	ಹೊಸಪೇಟೆ	''
ತಾಯಪ್ಪ ಕಲಾಲ್	೩೭	ನೌಕರಿ	ಹೊಸಪೇಟೆ	''
ತಾರನಾಥ ಕಲಾಲ್	೩೬	ಬುಕ್‌ಸ್ಟಾಲ್	ಹೊಸಪೇಟೆ	''
ಸಾದನಾಬಾಯಿ	೩೦	ಗೃಹಿಣಿ	ಹೊಸಪೇಟೆ	''
ನಿರ್ಮಲಾ ಬಾಯಿ	೩೪	ಗೃಹಿಣಿ	ಹೊಸಪೇಟೆ	''
ಕೃಷ್ಣೋಜಿ ರಾವ್	೫೭	ಖಾನವಳಿ	ಹೊಸಪೇಟೆ	''
ಅಶೋಕ ರಾವ್	೫೪	ಖಾನವಳಿ	ಹೊಸಪೇಟೆ	''
ಸುರೇಶ್	೩೦	ಮಟನ್‌ವ್ಯಾಪಾರಿ	ಹೊಸಪೇಟೆ	''
ಲಕ್ಷ್ಮೀ ಬಾಯಿ	೩೭	ಗೃಹಿಣಿ	ಹೊಸಪೇಟೆ	''

ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
ನಾರಾಯಣರಾವ್ ಫಲಂಗಕರ್	೬೫	ವ್ಯವಸಾಯ	ಕಮಲಾಪುರ	ಬಳ್ಳಾರಿ
ಲಕ್ಷ್ಮೀಬಾಯಿ	೪೦	ಗೃಹಿಣಿ	ಬಳ್ಳಾರಿ	ಬಳ್ಳಾರಿ
ಇಂದ್ರಾಬಾಯಿ	೪೧	ಗೃಹಿಣಿ	ಬಳ್ಳಾರಿ	''
ಭೋಟಿಮಾ	೭೨	ಗೃಹಿಣಿ	ಬಳ್ಳಾರಿ	''
ಗೋಪಾಲ ಕಲ್ಯಾಣಕರ್	೪೦	ಔಷಧಿ ಅಂಗಡಿ	ಹುಲುಗಿ	ಕೊಪ್ಪಳ
ಜಕನಿಬಾಯಿ	೫೮	ಗೃಹಿಣಿ	ಕೊಪ್ಪಳ	''
ನೀಲಾಬಾಯಿ	೪೨	ಚಿಕನ್‌ವ್ಯಾಪಾರಿ	ಕೊಪ್ಪಳ	''
ಶಕುಂತಲಾಬಾಯಿ	೪೦	ಗೃಹಿಣಿ	ಕೊಪ್ಪಳ	''
ಸುಗುಣಬಾಯಿ	೫೫	ಗೃಹಿಣಿ	ಕೊಪ್ಪಳ	''
ಮಹೇಂದ್ರರಾವ್	೫೫	ಚಿಕನ್ ವ್ಯಾಪಾರಿ	ಕೊಪ್ಪಳ	''
ಭರತ ರಾವ್	೬೮	ಮಧ್ಯವ್ಯಾಪಾರಿ	ಕೊಪ್ಪಳ	''
ದೀಪಕ್	೨೨	ಚಿಕನ್‌ವ್ಯಾಪಾರಿ	ಕೊಪ್ಪಳ	''
ನರೇಶ್	೨೭	ಚಿಕನ್‌ವ್ಯಾಪಾರಿ	ಕೊಪ್ಪಳ	''
ರಾಜೇಶ್‌ರಾವ್	೩೨	ಮಧ್ಯವ್ಯಾಪಾರಿ	ಕೊಪ್ಪಳ	''
ರಘು	೨೫	ಚಿಕನ್‌ವ್ಯಾಪಾರಿ	ಕೊಪ್ಪಳ	''
ದೇವರಾಜ್	೩೬	ಮಟನ್‌ವ್ಯಾಪಾರಿ	ಕೊಪ್ಪಳ	''
ರವಿ	೩೬	ಕಂಡಕ್ಟರ್	ಕೊಪ್ಪಳ	''
ಸುರೇಶ್ ಚೋಳಪ್ಪ	೩೪	ಡಿ.ಎಂ.ಎಲ್.ಟಿ.	ಬೇಟಗೇರಿ	ಗದಗ
ಸುರೇಶ್ ಕುಮಾರ	೩೫	ಎಕ್ಸೈಜ್ ಡಿಪಾರ್ಟಮೆಂಟ್	ಬೆಟಗೇರಿ	''
ರಾಮಚಂದ್ರ ಕಲಾಲ್	೪೦	ವಕೀಲರು	ಹರಿಹರ	ದಾವಣಗೆರೆ
ಸುಭಾಷ್ ಡಿ. ಕಲಾಲ್	೩೬	ವ್ಯಾಪಾರಿ	ಹರಿಹರ	''
ನಾಗರಾಜ್ ಕಲಾಲ್	೫೩	ವಕೀಲರು	ದಾವಣಗೆರೆ	''
ಪ್ರಕಾಶ್ ಕುವರ್‌ಕರ್	೪೨	ಎಲ್.ಐ.ಸಿ. ಏಜೆಂಟ್	ದಾವಣಗೆರೆ	''
ಮಲ್ಲಿಕಾರ್ಜುನ ಪಡಮ್‌ಕರ್	೩೨	ವ್ಯಾಪಾರಿ	ದಾವಣಗೆರೆ	''

ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
ಎಂ.ಬಿ. ಕಲಾಲ್	೪೨	ವ್ಯಾಪಾರಸ್ಥರು	ಹಾವೇರಿ	ಹಾವೇರಿ
ಮನೋಹರ್ ಕಲಾಲ್	೩೮	ವ್ಯಾಪಾರಿ	ರಾಯಚೂರು	ರಾಯಚೂರು
ಶಿವಾಜಿರಾವ್ ಎನ್.	೩೫	ಮಟನ್‌ವ್ಯಾಪಾರಿ	ಶಿವಮೊಗ್ಗ	ಶಿವಮೊಗ್ಗ
ಬಾಬುರಾವ್ ಎಸ್.	೩೮	ವ್ಯಾಪಾರಿ	ಶಿವಮೊಗ್ಗ	''
ಗಣಪತ್‌ಜಿ ರಾವ್	೬೧	ವ್ಯಾಪಾರಿ	ಹುಬ್ಬಳ್ಳಿ	ಹುಬ್ಬಳ್ಳಿ
ಸಾಂಬಾಜಿರಾವ್	೬೫	ವ್ಯಾಪಾರಿ	ಹುಬ್ಬಳ್ಳಿ	''
ಮಾರುತಿರಾವ್ ರಾಜಾರಾಮ್	೬೨	ವ್ಯಾಪಾರಿ	ಹುಬ್ಬಳ್ಳಿ	''
ರಾಜು ಕಲಾಲ್	೪೧	ಪತ್ರಿಕೆ ಸಂಪಾದಕರು	ಹುಬ್ಬಳಿ	''
ಕಾಶಿನಾಥ ರಾಮಪ್ಪ	೭೫	ನಿವೃತ್ತ ರೈಲ್ವೇಧಿಕಾರಿ	ಹುಬ್ಬಳ್ಳಿ	''
ಎಲ್ಲುಬಾಯಿ	೬೩	ಗೃಹಿಣಿ	ಧಾರವಾಡ	ಧಾರವಾಡ
ಜೀವನ್ ಮಾನಕರ್	೪೫	ಕ್ಲರ್ಕ	ಧಾರವಾಡ	''
ಮಾರುತಿರಾವ್	೪೦	ವ್ಯಾಪಾರಿ	ಬಾಗಲಕೋಟೆ	ಬಾಗಲಕೋಟೆ
ಸಾಯಿನಾಥ ರಾವ್	೪೦	ಅಧ್ಯಾಪಕರು	ಚಿತ್ರದುರ್ಗ	ಚಿತ್ರದುರ್ಗ
ಕೃಷ್ಣಾಜೀ ಕಾಂಬಳೇಕರ್	೪೦	ಎಲೆಕ್ಟ್ರಾನಿಕ್ಸ್ ಅಂಗಡಿ	ಚಿತ್ರದುರ್ಗ	''
ಶಿವಾಜಿರಾವ್	೩೫	ಚಿಕನ್ ವ್ಯಾಪಾರಿ	ಚಿತ್ರದುರ್ಗ	''
ಸುಶೀಲಾಬಾಯಿ	೩೦	ಗೃಹಿಣಿ	ಚಿತ್ರದುರ್ಗ	''
ಸರೋಜಬಾಯಿ	೫೦	ಗೃಹಿಣಿ	ಚಿತ್ರದುರ್ಗ	''
ಮಂಜುಳಾಬಾಯಿ	೩೭	ಹಿಂದಿ ಅಧ್ಯಾಪಕರು	ಚಿತ್ರದುರ್ಗ	''
ಲಕ್ಷ್ಮಿ	೪೦	ಗೃಹಿಣಿ	ಚಿತ್ರದುರ್ಗ	''
ಮೀನಾಬಾಯಿ	೩೬	ಗೃಹಿಣಿ	ಚಿತ್ರದುರ್ಗ	''
ಲಕ್ಷ್ಮೀಬಾಯಿ	೫೦	ಕುರಿತಲೆ ಸುಡುವುದು	ಚಿತ್ರದುರ್ಗ	''
ಸುಗುಣಬಾಯಿ	೪೫	ವ್ಯಾಪಾರಿ	ಚಿತ್ರದುರ್ಗ	''
ಶ್ಯಾಮರಾವ್ ಕೆ.	೫೮	ನಿವೃತ್ತ ಇನ್ಸ್‌ಪೆಕ್ಟರ್	ಬೆಂಗಳೂರು	ಬೆಂಗಳೂರು
ಗಾಯಿತ್ರಿಬಾಯಿ	೪೦	ಗೃಹಿಣಿ	ಬೆಂಗಳೂರು	''

ಹೆಸರು	ವಯಸ್ಸು	ವೃತ್ತಿ	ಊರು	ಜಿಲ್ಲೆ
ಗೋಪಾಲರಾವ್	೪೦	ಮಟನ್‌ವ್ಯಾಪಾರಿ	ಬೆಂಗಳೂರು	''
ಗಜೇಂದ್ರರಾವ್	೪೪	ನೌಕರರು	ಬೆಂಗಳೂರು	''
ಜಯಶ್ರೀಬಾಯಿ	೪೨	ಗೃಹಿಣಿ	ಬೆಂಗಳೂರು	''
ಗೌರಿಬಾಯಿ	೩೮	ಗೃಹಿಣಿ	ಬೆಂಗಳೂರು	''
ಹೇಮಲತಾ	೩೭	ಗೃಹಿಣಿ	ಬೆಂಗಳೂರು	''
ಕೃಷ್ಣೋಜಿರಾವ್	೬೮	ಮಟನ್‌ವ್ಯಾಪಾರಿ	ಬೆಂಗಳೂರು	''
ಸೋನಕರ್‌ಶಾಸ್ತ್ರೀ	೬೫	ಮಾಜಿ ಎಂ.ಪಿ. ಲೋಕಸಭೆ ಸದಸ್ಯರು	ವಾರಣಾಸಿ	ವಾರಣಾಸಿ
ದಿಯೋನಾಥ ಸೋನ್‌ಕರ್	೩೨	ನೌಕರರು	ಕಲ್ಕತ್ತಾ	ಕಲ್ಕತ್ತಾ
ಶೇಖರ್ ಚೌಧರಿ	೪೨	ಮಾಜಿ ಎಂ.ಎಲ್.ಎ.	ಜಬ್ಬಲಪುರ	ಮಧ್ಯಪ್ರದೇಶ
ಮಾಮ್‌ಚಂದ ರಿವಾಡಿಯಾ	೬೫	ಅಖಿಲ ಭಾರತ ಖಾಟಿಕ್ ಸಮಾಜದ ಉಪಾಧ್ಯಕ್ಷರು	ದೆಹಲಿ	ದೆಹಲಿ

ನಾಮಕರಣ.





ಈರಪ್ಪ ದೇವರ ಪೂಜೆ.



ಮದುಮಗನಿಗೆ ಅರಿಶಿಣ ಹಚ್ಚುತ್ತಿರು.



ಹಂದ್ರದ ನಿಕ್ಕತೆ.

ಹಾಲುಗಂಬಕ್ಕೆ ಪೂಜೆ.





ಪೂಜಾ ಸಂದರ್ಭ-
ದಲ್ಲಿ ಅಳಿಯ -
ಮಗಳನ್ನು
ಹಸೆಯಲ್ಲಿ
ಕೂರಿಸುತ್ತಿರು
ವುದು.



ದೇವರ
ಜಗುಲಿ

ಹುಡಗಿ ಎರೆಯುತ್ತಿರುವುದು.



ಹಂದ್ರದಲ್ಲಿ ಬಾಸಿಂಗ ಕಟ್ಟುವುದು.



ಮದುಮಗನ ಮೆರವಣಿಗೆ.





ಬಳೆಶಾಸ್ತ್ರ.



ಬಾಸಿಂಗ ಕಟ್ಟುತ್ತಿರುವುದು.

ಮದುಮಗಳು ಮದುಮಗನಿಗೆ ಕಂಕಣ ಕಟ್ಟುತ್ತಿರುವುದು





ಉಂಗುರ
ಹುಡುಕುವ
ಸ್ಪರ್ಧೆ.

ಕನ್ಯಾದಾನ.





ಅರುಂಧತಿ ನಕ್ಷತ್ರ ದರ್ಶನ.

ಕುರಿಯ ಹೊಟ್ಟೆಯನ್ನು ಸ್ವಚ್ಛಗೊಳಿಸುತ್ತಿರುವುದು.





ಕರುಳು. ಪಚ್ಚೆ
ಸ್ವಚ್ಛಗೊಳಿಸು
ತ್ತಿರುವುದು.

ಕೋಳಿ ವ್ಯಾಪಾರ





ಬಲಿ. ಕಾಲು
ಹಾಗೂ ಕತ್ತು
ಅಚ್ಚುಕಟ್ಟು
ಕತ್ತರಿಸು
ತ್ತಿರುವುದು.

ಮಾರಾಟಕ್ಕೆ ಸಿದ್ಧವಾಗಿರುವ ಹಂದಿಯ ದೇಹದ ಭಾಗಗಳು.





ಶಾಟ್ ಸಮುದಾಯದ ಹಂದಿಯ ಸಾಕಣಿ.